ನವ್ಯೋತ್ತರ ಮಹಿಳಾ ಕಥಾ ಸಾಹಿತ್ಯದಲ್ಲಿ ಸಮಾನತೆಯ ಪರಿಕಲ್ಪನೆ

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್. ಡಿ. ಪದವಿಗಾಗಿ

ಸಲ್ಲಿಸಿದ ಅಧ್ಯಯನ ಪ್ರಬಂಧ

:ಸಂಶೋಧಕರು:

ಮಮತ. ಬಿ

KRSM - 00147

:ಮಾರ್ಗದರ್ಶಕರು:

ಡಾ. ಲಿಂಗರಾಜಯ್ಯ

ಮುಖ್ಯಸ್ಥರು, ಕನ್ನಡ ವಿಭಾಗ

ವಿವೇಕಾನಂದ ಪ್ರಥಮ ದರ್ಜೆ ಕಾಲೇಜು

ರಾಜಾಜಿನಗರ 2ನೇ ಹಂತ, ಬೆಂಗಳೂರು – 560 055

ಮಾನ್ಯತಾ ಕೇಂದ್ರ:

ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

ಕರ್ನಾಟಕ ಸಂಘ (ರಿ), ಮಂಡ್ಯ

2015

ನವ್ಯೋತ್ತರ ಮಹಿಳಾ ಕಥಾ ಸಾಹಿತ್ಯದಲ್ಲಿ ಸಮಾನತೆಯ ಪರಿಕಲ್ಪನೆ

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್. ಡಿ. ಪದವಿಗಾಗಿ
ಸಲ್ಲಿಸಿದ ಅಧ್ಯಯನ ಪ್ರಬಂಧ

:ಸಂಶೋಧಕರು:

ಮಮತ. ಬಿ

KRSM - 00147

:ಮಾರ್ಗದರ್ಶಕರು:

ಡಾ. ಲಿಂಗರಾಜಯ್ಯ

ಮುಖ್ಯಸ್ಥರು, ಕನ್ನಡ ವಿಭಾಗ
ವಿವೇಕಾನಂದ ಪ್ರಥಮ ದರ್ಜೆ ಕಾಲೇಜು
ರಾಜಾಜಿನಗರ 2ನೇ ಹಂತ, ಬೆಂಗಳೂರು – 560 055

ಮಾನ್ಯತಾ ಕೇಂದ್ರ:

ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

ಕರ್ನಾಟಕ ಸಂಘ (ರಿ), ಮಂಡ್ಯ.

2015

ಸಂಶೋಧಕರ ಪ್ರಮಾಣ ಪತ್ರ

ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ. ಪದವಿಗಾಗಿ ಸಿದ್ಧಪಡಿಸಿರುವ **ನವ್ಯೋತ್ತರ ಮಹಿಳಾ ಕಥಾಸಾಹಿತ್ಯದಲ್ಲಿ ಸಮಾನತೆಯ ಪರಿಕಲ್ಪನೆ** ಎಂಬ ಸಂಶೋಧನಾ ಮಹಾಪ್ರಬಂಧವನ್ನು ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ, ಕರ್ನಾಟಕ ಸಂಘ, ಮಂಡ್ಯ, ಈ ಸಂಸ್ಥೆಯ ಮೂಲಕ ವಿವೇಕಾನಂದ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕರು ಹಾಗೂ ಎಂ.ಎಲ್. ಶ್ರೀಕಂಠೇಶಗೌಡ ಕೇಂದ್ರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿರುವ ಡಾ. ಲಿಂಗರಾಜಯ್ಯ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ.

ಈ ಮಹಾಪ್ರಬಂಧ ನನ್ನ ಸ್ವಂತ ಸಂಶೋಧನೆಯಾಗಿದೆ. ಇದನ್ನು ಸಂಪೂರ್ಣವಾಗಿ ಆಗಲಿ ಅಥವಾ ಭಾಗಶಃ ಆಗಲಿ ಯಾವುದೇ ವಿಶ್ವವಿದ್ಯಾಲಯದ ಪದವಿ ಅಥವಾ ಡಿಪ್ಲೋಮಾಗೆ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Mamatha·B

ಸ್ಥಳ: ಮಂಡ್ಯ ಮಮತ.ಬಿ.

ದಿನಾಂಕ: 17–12–2015 KRSM-00147

ಮಾರ್ಗದರ್ಶಕರ ಪ್ರಮಾಣ ಪತ್ರ

ಶ್ರೀಮತಿ ಮಮತ. ಬಿ. ಇವರು ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ, ಕರ್ನಾಟಕ ಸಂಘ, ಮಂಡ್ಯ, ಈ ಸಂಸ್ಥೆಯ ಮೂಲಕ **'ನವ್ಯೋತ್ತರ ಮಹಿಳಾ ಕಥಾಸಾಹಿತ್ಯದಲ್ಲಿ ಸಮಾನತೆಯ ಪರಿಕಲ್ಪನೆ'** ಎಂಬ ವಿಷಯವನ್ನು ಕುರಿತು ನನ್ನ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ, ಈ ಮಹಾ ಪ್ರಬಂಧವನ್ನು ಸಿದ್ಧಪಡಿಸಿದ್ದಾರೆ.

ಈ ಮಹಾಪ್ರಬಂಧವನ್ನು ಇಡಿಯಾಗಿ ಅಥವಾ ಬಿಡಿಯಾಗಿ ಈ ಮೊದಲು ಇವರು ಯಾವುದೇ ಪದವಿ ಅಥವಾ ಡಿಪ್ಲೋಮಾ ಪದವಿಗಾಗಿ ಬಳಸಿಕೊಂಡಿಲ್ಲ ಎಂದು ದೃಢೀಕರಿಸುತ್ತೇನೆ ಹಾಗೂ ಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಲು ನಾನು ಸಮ್ಮತಿಸಿದ್ದೇನೆ.

ಸ್ಥಳ: ಮಂಡ್ಯ

ದಿನಾಂಕ: 17-12-2015

ಮಾರ್ಗದರ್ಶಕರು

ಡಾ॥ ಲಿಂಗರಾಜಯ್ಯ

Dr. Lingarajaiah
Associate Professor & HOD
Department of Kannada
Vivekananda Degree College
Rajajinagar, Bangalore - 560 055

ಪರಿವಿಡಿ

ಪು. ಸಂ.

ಅಧ್ಯಾಯ 1: ಅಧ್ಯಯನದ ಉದ್ದೇಶ, ವೈಧಾನಿಕತೆ, ವ್ಯಾಪ್ತಿ, ಮಹತ್ವ 1–11

1.1 ಅಧ್ಯಯನದ ಉದ್ದೇಶ

1.2 ಅಧ್ಯಯನದ ವೈಧಾನಿಕತೆ

1.3 ಅಧ್ಯಯನದ ವ್ಯಾಪ್ತಿ

1.4 ಅಧ್ಯಯನದ ಮಹತ್ವ

1.5 ಅಧ್ಯಯನಗಳ ಸಮೀಕ್ಷೆ

ಅಧ್ಯಾಯ 2: ನವ್ಯೋತ್ತರ ಲೇಖಕಿಯರು: ಪ್ರೇರಣೆ ಮತ್ತು ಪ್ರಭಾವಗಳು 12–19

2.1 ಮಾರ್ಕ್ಸ್‌ವಾದ

2.2 ಗಾಂಧೀವಾದ

2.3 ಲೋಹಿಯಾ ವಿಚಾರಧಾರೆ

2.4 ಅಂಬೇಡ್ಕರ್ ವಾದ

2.5 ಮಹಿಳಾ ಚಳುವಳಿಗಳು

2.6 ಭಕ್ತಿಪಂಥ ಮತ್ತು ವಚನ ಚಳುವಳಿ

2.7 ಬೂಸಾ ಸಾಹಿತ್ಯ ಪ್ರಕರಣ

2.8 ನವೋದಯ, ಪ್ರಗತಿಶೀಲ ಮತ್ತು ನವ್ಯದ ನಿಲುವುಗಳ ಪ್ರಭಾವ

2.9 ಬಂಡಾಯ ಸಾಹಿತ್ಯ ಚಳುವಳಿ

2.10 ಸ್ತ್ರೀವಾದ

ಅಧ್ಯಾಯ 3: ಸಮಾನತೆಯ ಪರಿಕಲ್ಪನೆ ಒಂದು ವಿಶ್ಲೇಷಣೆ 20–42

3.1: ಅಸಮಾನತೆ: ಹುಟ್ಟು, ಕಾರಣ ಮತ್ತು ಸ್ವರೂಪ

3.2: ಸ್ತ್ರೀವಾದಿ ನೆಲೆಯಲ್ಲಿ ಸಮಾನತೆ

3.3: ಸ್ತ್ರೀವಾದದ ವ್ಯಾಖ್ಯೆ ಮತ್ತು ಧ್ಯೇಯ

3.4: ಸ್ತ್ರೀವಾದಕ್ಕೆ ಕಾರಣಗಳು

3.5: ಸ್ತ್ರೀವಾದಿ ನೆಲೆಯಲ್ಲಿ ಅಸಮಾನತೆ ಮತ್ತು ಸಮಾನತೆ

ಪು. ಸಂ.

ಅಧ್ಯಾಯ 4: ಕನ್ನಡ ಮಹಿಳಾ ಕಥಾಸಾಹಿತ್ಯ: ಒಲವು – ನಿಲುವು 43–119

4.1: ಸಾಮಾಜಿಕ ನೆಲೆ

4.2: ಕೌಟುಂಬಿಕ ನೆಲೆ

4.3: ಪೌರಾಣಿಕ ಪಾತ್ರಗಳ ನೆಲೆ

4.4: ಸ್ತ್ರೀ ಅಸ್ತಿತ್ವದ ನೆಲೆ

ಅಧ್ಯಾಯ 5: ಮಹಿಳಾ ಕಥಾ ಸಾಹಿತ್ಯದಲ್ಲಿ ಸಮಾನತೆ–ಅಸಮಾನತೆಯ ಅಭಿವ್ಯಕ್ತಿ 120–170

5.1: ಸಾಮಾಜಿಕ ನೆಲೆಯಲ್ಲಿ ಅಸಮಾನತೆ

5.2: ಕೌಟುಂಬಿಕ ನೆಲೆಯಲ್ಲಿ ಅಸಮಾನತೆ

5.3: ಆರ್ಥಿಕ ನೆಲೆಯಲ್ಲಿ ಅಸಮಾನತೆ

ಅಧ್ಯಾಯ 6: ಮುಸ್ಲಿಂ ಲೇಖಕಿಯರ ಕಥೆಗಳಲ್ಲಿ ಸಮಾನತೆ–ಅಸಮಾನತೆಯ ಚಿತ್ರಣ 171–208

6.1: ಧಾರ್ಮಿಕ ನೆಲೆಯಲ್ಲಿ ಅಸಮಾನತೆ

6.2: ಸಾಮಾಜಿಕ ನೆಲೆಯಲ್ಲಿ ಅಸಮಾನತೆ

6.3: ಕೌಟುಂಬಿಕ ನೆಲೆಯಲ್ಲಿ ಅಸಮಾನತೆ

ಅಧ್ಯಾಯ 7: ಅಧ್ಯಯನದ ಫಲಿತಗಳು 209–225

ಪರಾಮರ್ಶನ ಗ್ರಂಥಗಳು 226–233

ಅಧ್ಯಾಯ 1

ಅಧ್ಯಾಯ 1

ಅಧ್ಯಯನದ ಉದ್ದೇಶ, ವೈಧಾನಿಕತೆ, ವ್ಯಾಪ್ತಿ, ಮಹತ್ವ

1.1. ಅಧ್ಯಯನದ ಉದ್ದೇಶ

ಸಾಹಿತ್ಯವು ಸಮಾಜದಲ್ಲಿರುವ ಜನರ ಜೀವನ, ಅವರ ನಡುವಿನ ಸಂಬಂಧ, ವ್ಯಕ್ತಿಗಳ ಸ್ಥಾನ, ಪಾತ್ರ, ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಸ್ಥಿತಿ-ಗತಿಗಳನ್ನು ಅಭಿವ್ಯಕ್ತಿಸುವ ಒಂದು ಸಾಧನ. ಸಾಮಾನ್ಯವಾಗಿ ಮೇಲಿನ ಅಂಶಗಳು ಸಾಹಿತ್ಯ ರಚನೆಯಲ್ಲಿ ಸಾಮಗ್ರಿಗಳಾಗಿ ಬಳಕೆಯಾಗಿರುತ್ತವೆ. ಸಾಹಿತ್ಯಕಾರರು ತಮ್ಮ ಕೃತಿಗಳಲ್ಲಿ ಸಮಾಜದಲ್ಲಿರುವ ವಿಚಾರಗಳನ್ನು ಚಿತ್ರಿಸಿರುವುದು ತಿಳಿದ ಸಂಗತಿ. ಧಾರ್ಮಿಕ, ಆರ್ಥಿಕ, ರಾಜಕೀಯ, ಸಾಮಾಜಿಕ ಸ್ಥಿತಿ, ಸ್ತ್ರೀ-ಪುರುಷರ ಜೀವನ, ಬಡವ-ಬಲ್ಲಿದ, ಮೇಲು-ಕೀಳು ಮುಂತಾದ ಹಲವಾರು ವಿಷಯ ಅಥವಾ ವಸ್ತುಗಳನ್ನು ಲೇಖಕರು ಸಾಹಿತ್ಯ ಪ್ರಕಾರಗಳಾದ ಕಥೆ, ಕಾವ್ಯ, ನಾಟಕ, ಕಾದಂಬರಿಗಳಲ್ಲಿ ತಮ್ಮ ದೃಷ್ಟಿಕೋನ ಮತ್ತು ಸಮಾಜದ ದೃಷ್ಟಿಕೋನದಿಂದ ಚಿತ್ರಿಸಿರುವುದನ್ನು ಕಾಣಬಹುದು. ಸಾಹಿತ್ಯದಲ್ಲಿ ಚಿತ್ರಿತವಾಗಿರುವ ಹಲವಾರು ಅಂಶಗಳಲ್ಲಿ 'ಸಮಾನತೆ' ಕೂಡ ಒಂದು. 'ಸಮಾನತೆ' ಎಂದರೆ ಎಲ್ಲರನ್ನೂ, ಎಲ್ಲವನ್ನೂ ಒಂದೇ ಭಾವದಿಂದ ಕಾಣುವುದು ಮತ್ತು ಎಲ್ಲವೂ ಸರಿಸಮವಾಗಿರುವುದು ಎಂದು ಅರ್ಥೈಸುತ್ತದೆ. 'ಸಮಾನತೆ' ಎಂಬ ಪರಿಕಲ್ಪನೆಯನ್ನು ಧರ್ಮ-ಧರ್ಮಗಳ ನಡುವೆ, ಜಾತಿ-ಜಾತಿಗಳ ನಡುವೆ, ಭೂಪ್ರದೇಶಗಳ ನಡುವೆ, ಸ್ತ್ರೀ-ಪುರುಷರ ಮಧ್ಯೆ, ವರ್ಗಗಳ ಮಧ್ಯೆ ಇರುವ ಅಂತರವನ್ನು ಗಮನಿಸಿ ವ್ಯಾಖ್ಯಾನಿಸಬಹುದು. ಸಮಾಜದಲ್ಲಿ ಸ್ತ್ರೀ-ಪುರುಷರ ನಡುವೆ, ವಿವಿಧ ಗುಂಪುಗಳ ಮಧ್ಯೆ ಸಮಾನತೆ ಇಲ್ಲದಿರುವುದು ಕಂಡುಬರುತ್ತದೆ. ವಾಸ್ತವದಲ್ಲಿ ಸಮಾಜದಲ್ಲಿ ಸ್ತ್ರೀ-ಪುರುಷರ ನಡುವೆ ಅಸಮಾನತೆ ಹಾಸುಹೊಕ್ಕಾಗಿದ್ದು, ಜೀವನದ ಎಲ್ಲ ಸ್ತರಗಳಲ್ಲೂ ಲಿಂಗ ತಾರತಮ್ಯತೆ ಕಾಣುತ್ತದೆ. ಆದ್ದರಿಂದ ಈ ಅಧ್ಯಯನದಲ್ಲಿ ಸಾಹಿತ್ಯದಲ್ಲಿ ಅಭಿವ್ಯಕ್ತಿಯಾಗಿರುವ ಸ್ತ್ರೀ-ಪುರುಷರ ನಡುವಿನ ಸಮಾನತೆ ಮತ್ತು ಅಸಮಾನತೆಯ ಚಿತ್ರಣವನ್ನು ಪರಿಗಣಿಸಲಾಗಿದೆ.

ಯಾವುದೇ ಒಂದು ಸಮಾಜವು ಸ್ತ್ರೀ-ಪುರುಷ ಇಬ್ಬರನ್ನೂ ಒಳಗೊಂಡಿದೆ. ಸಮಾಜದ ಅಭಿವೃದ್ಧಿಗೆ ಈ ಇಬ್ಬರ ಕೊಡುಗೆಯೂ ಅತ್ಯವಶ್ಯಕ. ಕುಟುಂಬಗಳ ಬೆಳವಣಿಗೆ, ಸಾಮಾಜಿಕ, ಆರ್ಥಿಕ, ರಾಜಕೀಯ ಅಭಿವೃದ್ಧಿಗೆ ಸ್ತ್ರೀ-ಪುರುಷರಿಬ್ಬರೂ ಕಾರಣರಾಗುತ್ತಾರೆ. ಮಾನವನ ಜೀವನ ಕಲ್ಯಾಣಮಯವಾಗಿರಬೇಕಾದರೆ ಮಹಿಳೆ ಮತ್ತು ಪುರುಷರ ಪರಸ್ಪರ ಸಹಕಾರ, ದುಡಿಮೆ ಅಗತ್ಯವಾಗಿದೆ. ಇದರ ಜೊತೆಗೆ ಸ್ತ್ರೀ-ಪುರುಷರಿಬ್ಬರ ಸ್ಥಾನಮಾನ, ಅಸ್ತಿತ್ವ, ಅಧಿಕಾರ, ಹಕ್ಕುಗಳು

ಸಮಾನ ನೆಲೆಯಲ್ಲಿರಬೇಕಾಗುತ್ತದೆ. ಮಹಿಳೆಯರ ಸ್ಥಾನಮಾನ, ಅಸ್ತಿತ್ವವನ್ನು ನಿರ್ಧರಿಸುವ ಹಲವಾರು ಅಂಶಗಳನ್ನು ಸಮಾಜದಲ್ಲಿ ಕಾಣಬಹುದು. ಸಿಮೊನ್ ದ ಬೋವಾ ವ್ಯಕ್ತಪಡಿಸಿದಂತೆ "ಲೋಕದಲ್ಲಿ ಹೆಣ್ಣಿನ ಅಸ್ತಿತ್ವವನ್ನು ನಿರ್ಧರಿಸುವ ಅಂಶಗಳಲ್ಲಿ ಆಕೆಯ ದೇಹವೂ ಒಂದು ಮುಖ್ಯ ನೆಲೆಯಾಗಿದೆ. ಆದರೆ, ಹೆಣ್ಣನ್ನು ನಿರ್ವಚಿಸಲು ಆಕೆಯ ದೇಹವಷ್ಟೇ ಸಾಲದು, ಸಾಮಾಜಿಕ ಚಟುವಟಿಕೆಗಳ ನಡುವೆ ಪ್ರಜ್ಞಾವಂತ ವ್ಯಕ್ತಿತ್ವ ರೂಪುಗೊಳ್ಳುವ ವಾಸ್ತವಕ್ಕಿಂತ ಬೇರೆಯಾದುದು ಇನ್ನೊಂದಿಲ್ಲ" (ಶ್ರೀಮತಿ ಎಚ್.ಎಸ್. 2007: ಪುಟ 41). ಅಂದರೆ, ಮಹಿಳೆಯ ಸ್ಥಾನಮಾನ, ಅಸ್ತಿತ್ವವನ್ನು ಆಕೆಯ ದೈಹಿಕ ಅಂಶಗಳ ಜೊತೆ ಸಾಮಾಜಿಕ, ಸ್ಥಿತಿಗತಿಗಳೂ ನಿರ್ಧರಿಸುತ್ತವೆ. ಆದರೆ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಪುರುಷರು ಎಲ್ಲ ವಿಷಯ, ಕ್ಷೇತ್ರ, ಕೈಗಾರಿಕೆಗಳಲ್ಲೂ ಮೇಲುಗೈ ಪಡೆದು ಸ್ತ್ರೀಯನ್ನು ಕೆಳಹಂತಕ್ಕೆ ದೂಡಿದ್ದಾರೆ. ಕುಟುಂಬದಿಂದ ಹಿಡಿದು ಸಮಾಜದ ಎಲ್ಲ ಸ್ತರಗಳಲ್ಲೂ ಮಹಿಳೆ ಪುರುಷನ ಅಧೀನದಲ್ಲೇ ಇರುವುದು ಕಂಡುಬರುತ್ತದೆ. ಇತ್ತೀಚಿನ ದಿನಗಳ ಕೆಲವು ಬೆಳವಣಿಗೆಗಳನ್ನು ಬಿಟ್ಟು, ಸಮಾಜದಲ್ಲಿ ಮಹಿಳೆಯರ ಪರಿಸ್ಥಿತಿಯನ್ನು ಗಮನಿಸಿದರೆ ಅವರು ಸಾಮಾಜಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಪುರುಷನಿಂದ ತುಳಿತಕ್ಕೊಳಗಾಗಿ ಬಹಳ ಹಿಂದುಳಿದಿರುವುದು ತಿಳಿಯುತ್ತದೆ. ಹೆಚ್ಚಿನ ಸಂದರ್ಭಗಳಲ್ಲಿ ಮಹಿಳೆ ಪರಾವಲಂಬಿಯೂ, ನಿರಾಶ್ರಿತಳೂ, ಅಧಿಕಾರ–ಅವಕಾಶ ವಂಚಿತಳೂ, ಗುಲಾಮಳೂ, ಅಧೀನಳೂ ಆಗಿದ್ದು ಪುರುಷನ ಕೈಗೊಂಬೆಯಾಗಿ ತನ್ನ ವ್ಯಕ್ತಿತ್ವವನ್ನೇ ಕಳೆದುಕೊಂಡು ಜೀವಿಸುತ್ತಿರುವುದು ಕಾಣುತ್ತದೆ. ಈ ಎಲ್ಲ ಅಂಶಗಳು ಸ್ತ್ರೀ–ಪುರುಷರ ಮಧ್ಯೆ ಇರುವ ಅಸಮಾನತೆಯನ್ನು ತೋರಿಸುತ್ತವೆ. ಇಂತಹ ಅಸಮಾನತೆಯ ಪರಿಸ್ಥಿತಿಯಲ್ಲಿ ಕುಟುಂಬ–ಸಮಾಜದ ಅಭಿವೃದ್ಧಿಗೆ ಮಹಿಳೆ ಎಷ್ಟೇ ಕೊಡುಗೆ ನೀಡಿದರೂ ಅದು ಪರಿಗಣನೆಗೆ ಬರುವುದಿಲ್ಲ. ಈ ಅಸಮಾನತೆಯನ್ನು ತೊಡೆದು ಸ್ತ್ರೀ–ಪುರುಷರ ನಡುವೆ ಸಮಾನತೆಯನ್ನು ಸಾಧಿಸುವುದು ಇಂದಿನ ಅಗತ್ಯ ಕಾರ್ಯವಾಗಿದೆ. ಆದ್ದರಿಂದ ಸ್ತ್ರೀ–ಪುರುಷರ ನಡುವಿನ ಸಮಾನತೆ–ಅಸಮಾನತೆಯ ಪರಿಸ್ಥಿತಿಯನ್ನು ವಿಶ್ಲೇಷಿಸಿ, ಅರ್ಥೈಸುವುದು ಅವಶ್ಯಕವಾಗಿದೆ. ಈ ಹಿನ್ನೆಲೆಯಲ್ಲಿ ಕನ್ನಡ ಮಹಿಳಾ ಕಥಾಸಾಹಿತ್ಯದಲ್ಲಿ ವ್ಯಕ್ತವಾಗಿರುವ ಸ್ತ್ರೀ–ಪುರುಷರ ನಡುವಿನ ಸಮಾನತೆ–ಅಸಮಾನತೆಯ ಚಿತ್ರಣವನ್ನು ವಿಶ್ಲೇಷಿಸುವುದು ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ಸಾಹಿತಿಗಳು ಸಮಾಜದಲ್ಲಿ ಕಂಡುಬರುವ ಹಲವಾರು ವಿಷಯಗಳನ್ನು, ಅಂದರೆ ಸಾಮಾಜಿಕ, ಕೌಟುಂಬಿಕ ಮುಂತಾದ ವಸ್ತುಗಳನ್ನು ಆಧಾರವಾಗಿಟ್ಟುಕೊಂಡು ಸಾಹಿತ್ಯವನ್ನು ರಚಿಸಿದ್ದಾರೆ. ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಸ್ತ್ರೀ–ಪುರುಷರ ನಡುವಿನ ಸಮಾನತೆಯೂ ಒಂದು

ವಸ್ತುವಾಗಿ ಚಿತ್ರಿತವಾಗಿದೆ. ಮಹಿಳೆಯರ ಸ್ಥಾನಮಾನ, ಸ್ಥಿತಿಗತಿ, ಸ್ವಾತಂತ್ರ್ಯ, ಸಮಾನತೆ ಮುಂತಾದ ವಿಷಯಗಳನ್ನು ಒಳಗೊಂಡು ಸಾಹಿತ್ಯವು ರೂಪುಗೊಂಡಿದೆ. ಸ್ತ್ರೀ-ಪುರುಷರ ಮಧ್ಯೆ ಇರುವ ಸಮಾನತೆ-ಅಸಮಾನತೆಯ ಚಿತ್ರಣವು ಮಹಿಳಾ ಸಾಹಿತ್ಯದಲ್ಲಿ ಯಾವ ರೀತಿ ಚಿತ್ರಿತವಾಗಿದೆ ಎಂಬುದನ್ನು ವಿಶ್ಲೇಷಿಸುವುದು ಅಗತ್ಯವಾಗಿದೆ. ಮಹಿಳಾ ಸಾಹಿತ್ಯ ಎಂದರೆ ಮಹಿಳೆಯರಿಂದ ರಚಿತವಾದದ್ದು ಎಂಬುದು ಸಾಮಾನ್ಯವಾದ ವಿವರಣೆ. ಆದರೆ ಸಂಧ್ಯಾರೆಡ್ಡಿಯವರ ಪ್ರಕಾರ "ಇದಿಷ್ಟರಿಂದ ಮಹಿಳಾ ಸಾಹಿತ್ಯದ ಸ್ವರೂಪವನ್ನು ಸ್ಪಷ್ಟವಾಗಿ ತಿಳಿಸಿದಂತಾಗುವುದಿಲ್ಲ. ಮಹಿಳೆಯರಿಂದ ರಚಿತವಾದ ಸಾಹಿತ್ಯ, ಮಹಿಳೆಯರನ್ನು ಕೇಂದ್ರವಾಗುಳ್ಳ ಸಾಹಿತ್ಯ, ಮಹಿಳಾವಾದಿಯಾದ ಸಾಹಿತ್ಯ ಹೀಗೆ ಇದರಲ್ಲಿ ಮೂರು ನೆಲೆಗಳಿವೆ. ಈ ಮೂರು ನೆಲೆಗಳನ್ನೊಳಗೊಂಡ ಸಾಹಿತ್ಯ ಮಾತ್ರವೇ ಮಹಿಳಾ ಸಾಹಿತ್ಯ ಎಂಬ ಶೀರ್ಷಿಕೆಗೆ ಅರ್ಹ" (ಶ್ರೀಮತಿ ಎಚ್.ಎಸ್., 2006: ಪುಟ 378) ಅಂದರೆ ಮಹಿಳೆಯರಿಗೆ ಸಂಬಂಧಿಸಿದ ವಿವಿಧ ವಿಷಯಗಳನ್ನು ಕುರಿತು ಪುರುಷರಿಂದಾಗಲೀ, ಮಹಿಳೆಯರಿಂದಾಗಲೀ ರಚಿತವಾದದ್ದು ಮಹಿಳಾ ಸಾಹಿತ್ಯವಾಗುತ್ತದೆ. ಮಹಿಳಾ ಸಾಹಿತ್ಯದ ಸ್ವರೂಪ, ವಿಸ್ತಾರವನ್ನು ತೋರಿಸುವ ಈ ವ್ಯಾಖ್ಯೆಯನ್ನು ಒಪ್ಪಬಹುದಾದರೂ ಯಾವುದೇ ಒಂದು ವಿಷಯ, ಸಂಗತಿ, ಘಟನೆ ಅಥವಾ ಸ್ಥಿತಿಯ ಅಭಿವ್ಯಕ್ತಿಯ ದೃಷ್ಟಿಕೋನಗಳು ಆ ಸಾಹಿತಿಯ ಅನುಭವ, ವೀಕ್ಷಣೆ ಮತ್ತು ಗ್ರಹಿಕೆಯನ್ನು ಆಧರಿಸಿರುವುದು ಸಾಮಾನ್ಯ. ಹೀಗಿರುವಾಗ ಮಹಿಳೆಯರ ಜೀವನಸ್ಥಿತಿ, ಸ್ಥಾನ-ಮಾನ, ಅವರು ಅನುಭವಿಸುತ್ತಿರುವ ಲಿಂಗತಾರತಮ್ಯದ ನೀತಿ, ಶೋಷಣೆ, ಅನ್ಯಾಯಗಳ ಗ್ರಹಿಕೆ ಮತ್ತು ಅಭಿವ್ಯಕ್ತಿ ಮಹಿಳೆಯರ ದೃಷ್ಟಿಕೋನದಲ್ಲಿ ವ್ಯಕ್ತವಾಗುವುದು ಪುರುಷರ ದೃಷ್ಟಿಕೋನದಲ್ಲಿ ಚಿತ್ರಿತವಾಗಿರುವುದಕ್ಕಿಂತ ಭಿನ್ನವಾಗಿದ್ದು, ನೈಜತೆಗೆ ಮತ್ತು ವಾಸ್ತವಕ್ಕೆ ಹೆಚ್ಚು ಸಮೀಪವಿರುತ್ತದೆ.

ಶ್ರೀಮತಿ ಎಚ್.ಎಸ್. ಹೇಳುವಂತೆ "ಒಟ್ಟಾರೆ ಸಾಹಿತ್ಯ ಸೃಷ್ಟಿಯೇ ಪುರುಷ ಚಿಂತನೆಯ ಪ್ರತೀಕವಾಗಿದೆ" (2003ಅ: ಪುಟ 40) ಆದ್ದರಿಂದ ಪುರುಷರಿಂದ ರಚಿತವಾದ ಸಾಹಿತ್ಯದಲ್ಲಿ ಸ್ತ್ರೀ-ಶೋಷಣೆ, ಅಸಮಾನತೆಯ ಪ್ರತೀಕಗಳೇ ಇರುತ್ತವೆ. ಇದರ ಜೊತೆಗೆ ಸಾಹಿತ್ಯ ರಚನೆಯಲ್ಲಿ ಬಳಕೆಯಾಗುವ ಅನುಭವಗಳು ಸ್ತ್ರೀ-ಪುರುಷರಿಬ್ಬರಿಗೂ ಒಂದೇ ರೀತಿ ಆಗಿರುವುದಿಲ್ಲವಾದ್ದರಿಂದ ಅವುಗಳ ಅಭಿವ್ಯಕ್ತಿ ಕೂಡ ಸಮಾನ ರೀತಿಯಲ್ಲಿರುವುದಿಲ್ಲ. ಬಿ.ಎನ್. ಸುಮಿತ್ರಾಬಾಯಿ ಪ್ರಕಾರ "ಶ್ರೇಣೀಕೃತ ವ್ಯವಸ್ಥೆಯಲ್ಲಿ ಪುರುಷನ ಶ್ರೇಷ್ಠತೆ, ಪುರುಷನ ಪರಮಾಧಿಕಾರದ ಮೂಲಕ, ಸೃಷ್ಟಿಯಾಗುವ ಎಲ್ಲ ಬಗೆಯ ವಿಚಾರಧಾರೆಗಳು, ಜ್ಞಾನ ಪ್ರಕಾರಗಳು, ಕಲೆ, ಸಾಹಿತ್ಯಗಳಂತಹ ಸಾಂಸ್ಕೃತಿಕ ಅಭಿವ್ಯಕ್ತಿಗಳೂ ಪುರುಷ ಕೇಂದ್ರಿತ ದೃಷ್ಟಿಕೋನದಿಂದಲೇ ರೂಪುಗೊಂಡಿದ್ದು ಅದನ್ನೆ

ಎತ್ತಿ ಹಿಡಿದಿರುತ್ತವೆ" (1999: ಪುಟ 3). ಇದಕ್ಕೆ ಪೂರಕವಾಗಿ ಫ್ರಾನ್ಸ್‌ನ ಹೆಲನ್ ಸೀಕ್ಸೂ ಎಂಬುವವರು ಸಾಹಿತ್ಯ ವಿಮರ್ಶೆಯ ಕ್ಷೇತ್ರದಲ್ಲಿ ಹೆಚ್ಚು ಸಂಖ್ಯೆಯ ಮಹಿಳೆಯರು ಏಕೆ ಇಲ್ಲ, ಇದ್ದರೂ ಪುರುಷರಿಗೆ ಸಮಾನರಾಗಿ ಬೆಳೆದು ನಿಲ್ಲಲು ಅವರಿಗೆ ಏಕೆ ಸಾಧ್ಯವಾಗುತ್ತಿಲ್ಲ ಎಂಬ ಪ್ರಶ್ನೆಗಳಿಗೆ ಉತ್ತರಿಸಿರುವುದನ್ನು ಗಮನಿಸೋಣ. ಅವರು ಹೇಳುವಂತೆ "ಸಾಹಿತ್ಯ ಸೃಷ್ಟಿಯು ಹೆಚ್ಚಾಗಿ ಮನೋಲೋಕಕ್ಕೆ ಸಂಬಂಧಿಸಿದ್ದಾದರೂ ಬೌದ್ಧಿಕ ಸಾಮರ್ಥ್ಯದ ಪಾತ್ರವು ಅದರಲ್ಲಿ ಸಾಕಷ್ಟಿದೆ. ಅತಿ ಮುಖ್ಯವಾದ ಇನ್ನೊಂದು ಸಂಗತಿಯೆಂದರೆ ಜ್ಞಾನ ಶಿಸ್ತುಗಳ ಸಂಕಥನಗಳು ನಡೆಯುವುದೇ ಪುರುಷ ಸೃಷ್ಟಿಯ ಭಾಷೆ ಎಂಬ ಮಾಧ್ಯಮದಲ್ಲಿ. ಇನ್ನು ವಿಮರ್ಶೆ ಎಂಬ ಚಟುವಟಿಕೆಯಂತೂ ಪ್ರಧಾನವಾಗಿ ಬೌದ್ಧಿಕ ವಲಯದ್ದೇ. ಪುರುಷ ಚಿಂತನೆಯನ್ನೆ ಆಧರಿಸಿ ರೂಪ ತಳೆದ ಶಿಕ್ಷಣದಲ್ಲಿ "ಬೌದ್ಧಿಕತೆ" ಎಂಬುದರ ವ್ಯಾಖ್ಯಾನ ಪುರುಷ ಬುದ್ಧಿಮತ್ತೆಯನ್ನಷ್ಟೇ ಮಾಪನವಾಗಿ ಬಳಸುತ್ತದೆನ್ನುವುದು ಸಹಜ" (ಉಲ್ಲೇಖ: ಶ್ರೀಮತಿ ಎಚ್.ಎಸ್. 2003ಅ: ಪುಟ 123). ಈ ಹೇಳಿಕೆಗಳನ್ನು ಗಮನಿಸಿದರೆ ಪುರುಷನಿಂದ ರಚಿತವಾದ ಭಾಷೆಯ ಮಾಧ್ಯಮದಲ್ಲಿ ಅವನು ಅಭಿವ್ಯಕ್ತಿಸುವ ವಿಷಯಗಳು ಅವನವಾಗಿರುತ್ತವೆಯೇ ಹೊರತು, ಅವು ಮಹಿಳೆಯರ ಮನೋಭಾವ, ಅವರ ಅಗತ್ಯಗಳು, ಅವರ ವ್ಯಕ್ತಿತ್ವ ಮುಂತಾದ ವಿಷಯಗಳನ್ನು ವ್ಯಕ್ತಪಡಿಸಲು ಸಾಧ್ಯವಿಲ್ಲ. ಸ್ಥಾನಮಾನ, ಅನುಭವ, ದೃಷ್ಟಿಕೋನ ಇವುಗಳ ಆಧಾರದಲ್ಲಿ ಮಹಿಳೆಯರ ಸ್ಥಿತಿಗತಿ, ಬೇಕು-ಬೇಡಗಳನ್ನು ಅವರೇ ವ್ಯಕ್ತಪಡಿಸುವುದಕ್ಕೂ, ಪುರುಷರು ವ್ಯಕ್ತಪಡಿಸುವುದಕ್ಕೂ ಬಹಳ ವ್ಯತ್ಯಾಸವಿರುತ್ತದೆ. ಈ ಸಂದರ್ಭದಲ್ಲಿ ಕುಂ. ವೀರಭದ್ರಪ್ಪನವರು ವ್ಯಕ್ತಪಡಿಸುವ ಅಭಿಪ್ರಾಯ "ಸ್ತ್ರೀಯೇ ಸಾಹಿತ್ಯದ ಪ್ರಮುಖ ಹಾಗೂ ಜನಪ್ರಿಯ ಪ್ರಕಾರಗಳಾದ ಕಾವ್ಯ ಮತ್ತು ಕಥೆಯ ಹುಟ್ಟು ಬೆಳವಣಿಗೆಗೆ ಕಾರಣಳಾಗಿರುವವಳು. ಕಾವ್ಯ ಮತ್ತು ಕಥೆ ಈ ಎರಡೂ ಆಕೆಯ ಹಕ್ಕು. ಇವೆರಡು ಸಾಧನಗಳ ಮೂಲಕ ತನ್ನ ಸುಖ ದುಃಖಗಳನ್ನು ತೋಡಿಕೊಳ್ಳಬಲ್ಲಳು; ಇಡೀ ಪ್ರಪಂಚವನ್ನು ಮೂರು ಸಾಲುಗಳಲ್ಲಿ ಸೆರೆ ಹಿಡಿಯಬಲ್ಲಳು" (ಶಶಿಕಲಾ ವೀರಯ್ಯಸ್ವಾಮಿ, 1995, ಪುಟ 131) ಮಹಿಳೆಯರಿಂದ ರಚಿತವಾದ ಸಾಹಿತ್ಯದ ಮಹತ್ವವನ್ನು ತೋರಿಸುತ್ತದೆ. ಸಾಹಿತ್ಯದ ಮುಖ್ಯ ಪ್ರಕಾರವಾದ ಕಥೆಯ ಹುಟ್ಟಿಗೆ ಹೆಣ್ಣೇ ಕಾರಣಳಾಗಿರುವುದರಿಂದ ಅವಳು ಅಭಿವ್ಯಕ್ತಿಸುವ ಅಂಶಗಳು ಗಮನಾರ್ಹವಾಗುತ್ತವೆ.

ಮಹಿಳಾ ಸಾಹಿತ್ಯವನ್ನು ಪರಿಗಣಿಸಲು ಮತ್ತೊಂದು ಕಾರಣವೆಂದರೆ ಇತ್ತೀಚಿನ ದಶಕಗಳಲ್ಲಿ ಹೆಚ್ಚು ಹೆಚ್ಚು ಮಹಿಳೆಯರು ಸಾಹಿತ್ಯ ಕೃತಿ ರಚನೆಗಳಲ್ಲಿ ತೊಡಗಿದ್ದು ಸ್ತ್ರೀಯರ ಜೀವನದ ವಿವಿಧ ಸ್ತರಗಳನ್ನು ಮತ್ತು ಅವಳ ವ್ಯಕ್ತಿತ್ವದ ವಿವಿಧ ಆಯಾಮಗಳನ್ನು

ಕಟ್ಟಿಕೊಡುತ್ತಿದ್ದಾರೆ. ಈ ಬೆಳವಣಿಗೆಗೆ ಮುಖ್ಯ ಕಾರಣ, ಶೈಲಾ.ಯು. ವಿವರಿಸುವಂತೆ "ವೇಗವಾಗಿ ಬೆಳವಣಿಗೆ ಹೊಂದುತ್ತಿರುವ ಮಾಹಿತಿ ತಂತ್ರಜ್ಞಾನದ ಮೂಲಕ ಜಗತ್ತಿನ ಎಲ್ಲ ವಿದ್ಯಮಾನಗಳು ಅವರನ್ನು ತಲುಪುವಂತಾದುದು ಇದಕ್ಕೆ ಬಹು ಮುಖ್ಯ ಕಾರಣವಾಗಿದೆ. ಇದರಿಂದ ಜಗತ್ತಿನೆಲ್ಲೆಡೆಯ ಮಹಿಳೆಯರೂ ಒಂದಲ್ಲ ಒಂದು ರೀತಿ ನೋವುಣ್ಣುತ್ತಿದ್ದಾರೆ, ತಾವೆಲ್ಲ ಸಮಾನ ದುಃಖಿಗಳು ಎಂಬುದನ್ನು ಅರಿಯುವ ಸಹೋದರಿತ್ವ ಕಲ್ಪನೆಯು ಮುಖ್ಯವಾಗಿದೆ" (2012: ಪುಟ 28). ಈ ಅಂಶಗಳು ಮಹಿಳೆಯರು ರಚಿಸಿರುವ ಸಾಹಿತ್ಯ ಕೃತಿಗಳಲ್ಲಿ ಅವರು ವ್ಯಕ್ತಪಡಿಸಿರುವ ಅವರ ಸ್ಥಾನಮಾನ, ಅಸ್ತಿತ್ವ, ಅವರ ಮೇಲಿನ ದೌರ್ಜನ್ಯ, ಅಸಮಾನತೆ ಮುಂತಾದ ವಿಷಯಗಳನ್ನು ಅಧ್ಯಯನ ಮಾಡಲು ಪ್ರೇರೇಪಿಸುತ್ತವೆ. ಈ ಹಿನ್ನೆಲೆಯಲ್ಲಿ ಮಹಿಳೆಯರಿಂದ ರಚಿತವಾದ ಕಥಾಸಾಹಿತ್ಯದಲ್ಲಿ ವ್ಯಕ್ತವಾಗಿರುವ ಸ್ತ್ರೀ–ಪುರುಷರ ನಡುವಿನ ಸಮಾನತೆ–ಅಸಮಾನತೆಯ ಚಿತ್ರಣವನ್ನು ವಿಶ್ಲೇಷಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

1.2. ಅಧ್ಯಯನದ ವೈಧಾನಿಕತೆ

ಮೇಲೆ ತಿಳಿಸಿದ ವಸ್ತುಸ್ಥಿತಿಗಳ ಆಧಾರದಲ್ಲಿ ಈ ಅಧ್ಯಯನವು ಕನ್ನಡ ಮಹಿಳಾ ಸಾಹಿತ್ಯಕಾರರು ರಚಿಸಿರುವ ಕೃತಿಗಳಲ್ಲಿ ಸ್ತ್ರೀ–ಪುರುಷರ ನಡುವಿನ ಸಮಾನತೆ–ಅಸಮಾನತೆ ಯಾವ ರೀತಿ ಅಭಿವ್ಯಕ್ತಿಯಾಗಿದೆ ಎಂಬುದನ್ನು ತಿಳಿಯಲು ಪ್ರಯತ್ನಿಸಿದೆ. ವಿವಿಧ ಲೇಖಕಿಯರು ಆಯಾ ಕಾಲಘಟ್ಟಕ್ಕೆ ಅನುಗುಣವಾಗಿ ಅವರ ಅನುಭವ, ತಿಳುವಳಿಕೆಗಳಿಗೆ ದೊರೆತ ಮಹಿಳಾ ಜೀವನ ಸಂಬಂಧಿ ಚಿತ್ರಣಗಳನ್ನು ಕಟ್ಟಿದ್ದಾರೆ. ಆಧುನಿಕ ಕನ್ನಡ ಮಹಿಳಾ ಸಾಹಿತ್ಯದ ಆದ್ಯ ಲೇಖಕಿಯರಾದ ತಿರುಮಲಾಂಬ, ರಾಜವಾಡೆ ಮುಂತಾದವರು ಚಿತ್ರಿಸಿದ ಮಹಿಳೆಯರ ಕುರಿತ ವಿಷಯಗಳಿಗೂ ನಂತರದ ವರ್ಷಗಳಲ್ಲಿ ಬಂದ ಲೇಖಕಿಯರು ವ್ಯಕ್ತಪಡಿಸಿರುವ ಮಹಿಳಾ ಚಿತ್ರಣಗಳಿಗೂ ವ್ಯತ್ಯಾಸವಿದೆ. ಈ ಬದಲಾವಣೆಯನ್ನು ಗುರುತಿಸಲು ಕಥಾವಸ್ತುವಿನಲ್ಲಿರುವ ಒಲವು–ನಿಲುವುಗಳ ವಿಶ್ಲೇಷಣೆಯನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ. ಸಮಾನತೆ–ಅಸಮಾನತೆ ಚಿತ್ರಣವನ್ನು ತಿಳಿಯಲು ನವ್ಯೋತ್ತರ ಮಹಿಳಾ ಕಥಾ ಸಾಹಿತ್ಯದಲ್ಲಿ ರಚಿತವಾಗಿರುವ ಪ್ರಾತಿನಿಧಿಕ ಲೇಖಕಿಯರ ಆಯ್ದ ಕೃತಿಗಳನ್ನು ಪರಿಗಣಿಸಲಾಗಿದೆ. ಇತ್ತೀಚಿನ ದಶಕಗಳಲ್ಲಿ ಹಲವಾರು ಮಹಿಳೆಯರು ಸ್ತ್ರೀಯರ ಜೀವನ, ಸ್ಥಾನಮಾನ, ಹಕ್ಕು–ಬಾಧ್ಯತೆಗಳನ್ನು ಕುರಿತು ಬರೆಯುತ್ತಿದ್ದಾರೆ, ಇವರಲ್ಲಿ ಮುಸ್ಲಿಂ ಲೇಖಕಿಯರೂ ಸೇರಿದ್ದಾರೆ. ಸಾಮಾಜಿಕ ಸಂಬಂಧಗಳು, ಧಾರ್ಮಿಕ ರೀತಿನೀತಿಗಳು, ಜೀವನ ರೀತಿಗಳು ಧರ್ಮದ ಆಧಾರದಲ್ಲಿ ಬೆಳೆದಿರುತ್ತವೆ. ಈ

ಅಂಶವನ್ನು ಪರಿಗಣಿಸಿ ಮುಸ್ಲಿಂ ಲೇಖಕಿಯರು ರಚಿಸಿರುವ ಪ್ರಾತಿನಿಧಿಕ ಕಥೆಗಳನ್ನು ಆಯ್ದುಕೊಂಡು ಅವರು ಚಿತ್ರಿಸಿರುವ ಸಮಾನತೆ-ಅಸಮಾನತೆಯನ್ನು ವಿಶ್ಲೇಷಿಸಲಾಗಿದೆ.

ಈ ಅಧ್ಯಯನದ ಮುಖ್ಯ ಉದ್ದೇಶಗಳಾದ ಮಹಿಳಾ ಸಾಹಿತ್ಯದ ಕಥಾವಸ್ತುವಿನಲ್ಲಿ ವ್ಯಕ್ತವಾಗಿರುವ ಒಲವು-ನಿಲುವು ಮತ್ತು ಸ್ತ್ರೀ-ಪುರುಷರ ನಡುವಿನ ಸಮಾನತೆ-ಅಸಮಾನತೆಯನ್ನು ಅಧ್ಯಯನ ಮಾಡಲು ವಿಶ್ಲೇಷಣಾತ್ಮಕ ವಿಧಾನವನ್ನು ಅನುಸರಿಸಲಾಗಿದೆ. ಪ್ರಾತಿನಿಧಿಕ ಲೇಖಕಿಯರ ಆಯ್ದ ಕಥೆಗಳನ್ನು ಅವುಗಳ ತಾತ್ವಿಕ ನೆಲೆಯ ಆಧಾರದ ಮೇಲೆ ವಿವಿಧ ನೆಲೆಗಳಲ್ಲಿ ವಿಂಗಡಿಸಿಕೊಳ್ಳಲಾಗಿದೆ. ಲೇಖಕಿಯರು ಸ್ತ್ರೀಯರ ಜೀವನದ ವಿವಿಧ ಆಯಾಮಗಳನ್ನು ಚಿತ್ರಿಸಿರುವುದರಿಂದ ಅವರ ಎಲ್ಲ ಕಥೆಗಳನ್ನು ಒಂದೇ ನೆಲೆಯಲ್ಲಿ ಅಧ್ಯಯನ ಮಾಡುವುದು ಸಾಧ್ಯವಾಗುವುದಿಲ್ಲ. ಈ ಕಾರಣದಿಂದ ಕಥೆಗಳನ್ನು ವಿವಿಧ ನೆಲೆಗಳಲ್ಲಿ ವಿಶ್ಲೇಷಿಸುವುದು ಅಧ್ಯಯನಕ್ಕೆ ಬೇಕಾದ ಚೌಕಟ್ಟನ್ನು ಒದಗಿಸುತ್ತದೆ. ಈ ವಿಂಗಡಣೆಯ ವಿವರಗಳನ್ನು ಆಯಾಯ ಅಧ್ಯಾಯಗಳಲ್ಲಿ ನೀಡಲಾಗಿದೆ.

ಅಧ್ಯಯನ ವಿಧಾನಕ್ಕೆ ಸಂಬಂಧಿಸಿದಂತೆ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಈ ಅಧ್ಯಯನಕ್ಕೆ ಬೇಕಾದ ಮೂಲ ಸಾಮಗ್ರಿಯನ್ನು ಲೇಖಕಿಯರ ಕಥೆಗಳಿಂದಲೇ ಪರಿಗಣಿಸಲಾಗಿದೆ. ಕಥೆಗಾರ್ತಿಯರು, ತಾವು ಚಿತ್ರಿಸಿರುವ ಪಾತ್ರಗಳ ಮೂಲಕ, ಅವರು ಹೇಳುವ ಮಾತು, ನಡೆಸುವ ಸಂಭಾಷಣೆಗಳ ಮೂಲಕ, ಕಥೆಯಲ್ಲಿ ಬರುವ ಸನ್ನಿವೇಶ, ಘಟನೆಗಳ ಮೂಲಕ ಒಲವು-ನಿಲುವುಗಳನ್ನು ಸಮಾನತೆ-ಅಸಮಾನತೆಯನ್ನು ವ್ಯಕ್ತಪಡಿಸಿದ್ದಾರೆ. ಈ ಮಾತು, ಸಂಗತಿ, ಸನ್ನಿವೇಶಗಳು ವಾಸ್ತವ ಸ್ಥಿತಿಯನ್ನು ತೋರಿಸುವುದರ ಜೊತೆಗೆ ಲೇಖಕಿಯರ ಮೂಲ ಧ್ಯೇಯೋದ್ದೇಶ ಮತ್ತು ಆಶಯಗಳನ್ನು ತಿಳಿಸುತ್ತವೆ. ಈ ಕಾರಣಗಳಿಂದ ಕಥೆಯಲ್ಲಿ ದೊರೆಯುವ ಮಾತು-ಸಂಭಾಷಣೆ, ಘಟನಾವಳಿಗಳನ್ನೆ ಮೂಲ ಸಾಮಗ್ರಿಗಳಾಗಿ ಆಯ್ದುಕೊಂಡು ವಿಶ್ಲೇಷಿಸಲಾಗಿದೆ. ಈ ವಿಧಾನವು ಅಧ್ಯಯನಕ್ಕೆ ಬೇಕಾದ ವಿವಿಧ ದೃಷ್ಟಿಕೋನಗಳು, ಆಯಾಮಗಳು ಮತ್ತು ಒಳದೃಷ್ಟಿಗಳನ್ನು ಒದಗಿಸಿ ಸಮಗ್ರ ಅಧ್ಯಯನಕ್ಕೆ ಸಹಾಯಕವಾಗುತ್ತದೆ.

1.3. ಅಧ್ಯಯನದ ವ್ಯಾಪ್ತಿ

ಈ ಅಧ್ಯಯನದ ವ್ಯಾಪ್ತಿಗೆ ಕನ್ನಡದ ನವ್ಯೋತ್ತರ ಮಹಿಳಾ ಕಥಾ ಸಾಹಿತ್ಯವನ್ನು ಮುಖ್ಯವಾಗಿ ಪರಿಗಣಿಸಲಾಗಿದೆ. ಕನ್ನಡ ಮಹಿಳಾ ಸಾಹಿತ್ಯದ ಎಲ್ಲ ಕಾಲಘಟ್ಟಗಳ ಮಹಿಳಾ ಸಾಹಿತ್ಯವನ್ನು ಅಧ್ಯಯನ ಮಾಡುವುದು ಒಂದು ಬೃಹತ್ಕಾರ್ಯವಾಗಿರುವುದರಿಂದ, ಈ

ಪ್ರಬಂಧದ ವ್ಯಾಪ್ತಿಯನ್ನು ನವ್ಯೋತ್ತರ ಕಾಲಘಟ್ಟದ ಮಹಿಳಾ ಸಾಹಿತ್ಯಕ್ಕೆ ಸೀಮಿತಗೊಳಿಸಿಕೊಳ್ಳಲಾಗಿದೆ. ಇಲ್ಲಿ ಬಹು ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ನವ್ಯೋತ್ತರಕ್ಕೂ ಹಿಂದಿನ ಕಾಲಘಟ್ಟದ ಲೇಖಕಿಯರೂ ಕೂಡ ತಮ್ಮ ಕೃತಿಗಳಲ್ಲಿ ಸ್ತ್ರೀ-ಪುರುಷರ ನಡುವಿನ ಸಮಾನತೆ-ಅಸಮಾನತೆಯ ಚಿತ್ರಣವನ್ನು ಕಟ್ಟಿದ್ದಾರೆ. ಈ ಅಂಶದಿಂದ ನವ್ಯೋತ್ತರಕ್ಕೂ ಹಿಂದಿನ ಕಾಲಘಟ್ಟದ ಮಹಿಳಾ ಲೇಖಕಿಯರ ಕೃತಿಗಳನ್ನು ಅಧ್ಯಯನದ ವ್ಯಾಪ್ತಿಗೆ ತರುವುದು ಉಚಿತವೆನಿಸುತ್ತದೆ. ಆದ್ದರಿಂದ, ಅಧ್ಯಯನದ ಉದ್ದೇಶಕ್ಕೆ ಪೂರಕವಾಗಿ ನವ್ಯೋತ್ತರ ಮಹಿಳಾ ಸಾಹಿತ್ಯದ ಜೊತೆಗೆ ಹಿಂದಿನ ಕಾಲಘಟ್ಟದ ಪ್ರಾತಿನಿಧಿಕ ಲೇಖಕಿಯರ ಆಯ್ದ ಕಥೆಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಅಧ್ಯಯನದ ವ್ಯಾಪ್ತಿಗೆ ಸಂಬಂಧಿಸಿದಂತೆ ಮತ್ತೊಂದು ಅಂಶವೆಂದರೆ ಕಥಾ ಸಾಹಿತ್ಯ ಸಾಮಾನ್ಯವಾಗಿ ಕಥೆಗಳನ್ನು ಸೂಚಿಸುತ್ತದೆ. ಈ ಅಧ್ಯಯನದಲ್ಲಿ ಕಥೆಗಳನ್ನು ಮುಖ್ಯವಾಗಿ ಗಮನಿಸಲಾಗಿದೆ. ಮಹಿಳಾ ಲೇಖಕಿಯರು ಕಥೆಗಳಲ್ಲದೆ, ಕಾದಂಬರಿಗಳಲ್ಲೂ ಸಮಾನತೆ-ಅಸಮಾನತೆಯನ್ನು ಚಿತ್ರಿಸಿದ್ದಾರೆ. ಆದ್ದರಿಂದ ಅಧ್ಯಯನದ ಉದ್ದೇಶ ಮತ್ತು ಅಗತ್ಯತೆಗಳಿಗನುಸಾರವಾಗಿ ಮಹಿಳೆಯರಿಂದ ರಚಿತವಾದ ಕಥೆ ಮತ್ತು ಕೆಲವು ಕಾದಂಬರಿಗಳನ್ನು ಅಧ್ಯಯನದ ವ್ಯಾಪ್ತಿಗೆ ತರಲಾಗಿದೆ.

1.4. ಅಧ್ಯಯನದ ಮಹತ್ವ

ಈ ಅಧ್ಯಯನದ ಮುಖ್ಯ ಉದ್ದೇಶ ಕನ್ನಡ ಮಹಿಳಾ ಸಾಹಿತ್ಯದಲ್ಲಿ ಅಭಿವ್ಯಕ್ತಿಸಿರುವ ಸ್ತ್ರೀ-ಪುರುಷರ ನಡುವೆ ಇರುವ ಸಮಾನತೆ-ಅಸಮಾನತೆಯನ್ನು ವಿಶ್ಲೇಷಿಸುವುದಾಗಿದೆ. ಲೇಖಕಿಯರು ತಮ್ಮ ಅನುಭವಕ್ಕೆ ಬಂದ, ತಿಳಿದ ಸಂಗತಿಗಳನ್ನಾಧರಿಸಿ ಲಿಂಗ ತಾರತಮ್ಯತೆಯನ್ನು ಚಿತ್ರಿಸಿರುವುದು ಜೀವನದ ನಿಜಸ್ಥಿತಿಯನ್ನು ತಿಳಿಸುತ್ತದೆ. ಈ ಅಧ್ಯಯನದಲ್ಲಿ ಮಹಿಳೆಯರಿಂದಲೇ ರಚಿತವಾದ ಕಥೆ-ಕಾದಂಬರಿಗಳಲ್ಲಿ ವ್ಯಕ್ತವಾಗಿರುವ ಸಮಾನತೆ-ಅಸಮಾನತೆಯ ವಿಶ್ಲೇಷಣೆಯನ್ನು ಮಾಡಿರುವುದು ಮಹಿಳೆಯರು ಸಮಾಜದಲ್ಲಿ ಅನುಭವಿಸುತ್ತಿರುವ ತಾರತಮ್ಯತೆಯ ನೋವು, ದುಃಖ, ದೌರ್ಜನ್ಯಗಳನ್ನು ನಿಜಸ್ಥಿತಿಯಲ್ಲಿ ತಿಳಿಯಲು ಸಹಾಯವಾಗುತ್ತದೆ. ಈ ಕಾರಣದಿಂದ ಪ್ರಸ್ತುತ ಅಧ್ಯಯನ ಮಹತ್ವ ಪಡೆದುಕೊಳ್ಳುತ್ತದೆ. ಇದರ ಜೊತೆಗೆ ಅಧ್ಯಯನ ವಿಧಾನವಾಗಿ ಕಥೆಯಲ್ಲೆ ಬರುವ ಮಾತು, ಸಂಭಾಷಣೆ, ಘಟನೆಗಳನ್ನು ಮೂಲ ಸಾಮಗ್ರಿಗಳಾಗಿ ವಿಶ್ಲೇಷಣೆಗೆ ಬಳಸಿ, ಲೇಖಕಿಯರ ಆಶಯಗಳೊಂದಿಗೆ ಚರ್ಚಿಸಿರುವುದು ಸ್ತ್ರೀಯರ ಜೀವನದ ನೈಜ ಚಿತ್ರಣಗಳನ್ನು ಮತ್ತು ಸ್ತ್ರೀಯರು ಸಮಾಜದಲ್ಲಿ ಬಯಸುವ ಸಮಾನ ಸ್ಥಾನಮಾನ, ಅಸ್ತಿತ್ವ,

ಸ್ವಾತಂತ್ರ್ಯಗಳ ಸ್ವರೂಪವನ್ನು ತಿಳಿಸುತ್ತದೆ. ಈ ಹಿನ್ನೆಲೆಯಲ್ಲಿಯೂ ಪ್ರಸ್ತುತ ಅಧ್ಯಯನದ ಮಹತ್ವವಿದೆ.

1.5. ಅಧ್ಯಯನಗಳ ಸಮೀಕ್ಷೆ

ಕನ್ನಡ ಸಾಹಿತ್ಯದಲ್ಲಿ ಮಹಿಳಾ ಬರವಣಿಗೆ ಇತ್ತೀಚಿನ ದಶಕಗಳಲ್ಲಿ ಗಣನೀಯ ಪ್ರಮಾಣದಲ್ಲಿ ಬೆಳೆದಿದೆ. ಮಹಿಳಾ ಲೇಖಕಿಯರು ಸಮಾಜದಲ್ಲಿ ಸ್ತ್ರೀಯರು ಅನುಭವಿಸುವ ದೌರ್ಜನ್ಯ, ಶೋಷಣೆ, ಅಸಮಾನತೆ, ಅನ್ಯಾಯವನ್ನು ತಮ್ಮ ಕಥೆಗಳಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ. ಮಹಿಳಾ ಸಾಹಿತ್ಯ ಅಭಿವ್ಯಕ್ತಿಸಿರುವ ಅಂಶಗಳನ್ನು ಕುರಿತು ಕೆಲವು ಅಧ್ಯಯನಗಳು ಬಂದಿವೆ. ಇಲ್ಲಿ ಕೆಲವು ಅಧ್ಯಯನಗಳ ಸಮೀಕ್ಷೆಯನ್ನು ನೀಡಲಾಗಿದೆ.

ಗೀತಾ ಪ್ರಸಾದ್‌ರವರ (2009) 'ಸ್ವಾತಂತ್ರ್ಯಪೂರ್ವ ಮಹಿಳಾ ಸಾಹಿತ್ಯ: ಸ್ವರೂಪ ಮತ್ತು ತಾತ್ವಿಕತೆ' ಎಂಬ ಸಂಶೋಧನಾ ಪ್ರಬಂಧವು ತಿರುಮಲಾಂಬಾ, ಆರ್.ಕಲ್ಯಾಣಮ್ಮ ಗಿರಿಬಾಲೆ, ಶ್ಯಾಮಲಾ ಬೆಳಗಾಂವಕರ್, ಕೊಡಗಿನ ಗೌರಮ್ಮ, ಬೆಳಗೆರೆ ಜಾನಕಮ್ಮ ಇವರ ಸಾಹಿತ್ಯ ಮತ್ತು ಸಾಹಿತ್ಯೇತರ ಬರವಣಿಗೆಗಳಲ್ಲಿ ಸಾಮಾಜಿಕ, ಸಾಂಸ್ಕೃತಿಕ ಒಳನೋಟಗಳನ್ನು ಸ್ತ್ರೀಪರ ಕಾಳಜಿಗಳನ್ನು ವಿಶ್ಲೇಷಿಸಿದೆ. ಈ ಕೃತಿಯಲ್ಲಿ ಕುಟುಂಬ, ವಿವಾಹ, ಬಾಲ್ಯವಿವಾಹ, ಬಾಲವೈಧವ್ಯ, ವಿಧವಾ ವಿವಾಹ, ಅಂತರ್‌ಜಾತಿ, ಅಂತರಧರ್ಮೀಯ ವಿವಾಹ, ವಿವಾಹ ವಿಚ್ಛೇದನ, ಜಾತಿ, ಧರ್ಮ, ಶಿಕ್ಷಣ, ಮಠ-ಮಂದಿರಗಳು ಮುಂತಾದ ವಿಷಯಗಳ ಮೇಲೆ ಸಮಕಾಲೀನ ಸಮಾಜದ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಸಂಗತಿಗಳಿಗೆ ಲೇಖಕಿಯರು ಅವರ ಜೀವನದ ಅನುಭವದ ಸಂಗತಿಯನ್ನು ಕೇಂದ್ರವಾಗಿರಿಸಿಕೊಂಡು ಇತರ ಸಂಗತಿಗಳಿಗೆ ಸ್ಪಂದಿಸಿರುವುದನ್ನು ಗುರುತಿಸಲಾಗಿದೆ.

ಮೋಹನ್ ಕುಂಟಾರ್‌ರವರ (1992) 'ಕನ್ನಡ ಸಣ್ಣಕಥೆಗಳ ಅಧ್ಯಯನ' (1970-80) ಕೃತಿಯು ನವ್ಯೋತ್ತರ ಕನ್ನಡ ಸಣ್ಣಕಥೆಗಳ ಮುಖ್ಯ ಆಶಯಗಳನ್ನು ವಿಶ್ಲೇಷಣೆಗೆ ಗುರಿ ಮಾಡಿದೆ. ಕನ್ನಡದಲ್ಲಿ ನವ್ಯಸಣ್ಣಕಥೆಗಳ ಸ್ವಗತದ ಬರವಣಿಗೆಯ ಮಾದರಿಯಿಂದ ಸಮಾಜಮುಖಿಯಾದ ಸಂವಾದದೆಡೆಗೆ ಸಣ್ಣಕಥೆಗಳು ಹೊರಳಿಕೊಂಡಿರುವುದನ್ನು ಗುರುತಿಸಲಾಗಿದೆ.

ಕರೀಗೌಡ ಬೀಚನಹಳ್ಳಿಯವರ (1991) 'ಆಧುನಿಕ ಕನ್ನಡ ನವ್ಯಕಥೆಗಳ ಅಧ್ಯಯನ' (ವ್ಯಷ್ಟಿ ಸಮಷ್ಟಿ) ಆಧುನಿಕ ಕನ್ನಡ ನವ್ಯಕಥೆಗಳನ್ನು ಚಾರಿತ್ರಿಕ ಮತ್ತು ಸಾಂಸ್ಕೃತಿಕ ದೃಷ್ಟಿಕೋನಗಳಿಂದ ಕನ್ನಡ ನವ್ಯಕಥೆಗಳ ಬೆಳವಣಿಗೆ, ಧೋರಣೆ, ವೈಚಾರಿಕತೆ, ಸಾಮಾಜಿಕತೆ,

ಕಲಾತ್ಮಕತೆ, ನವ್ಯತೆ, ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಪ್ರಯೋಗಶೀಲತೆಗಳನ್ನು ಸಮೀಕ್ಷೆ ಮಾಡಿದೆ. ಈ ಅಧ್ಯಯನವು ನವ್ಯ ಕಾಲಘಟ್ಟದ ಲೇಖಕ ಮತ್ತು ಲೇಖಕಿಯರ ಪ್ರಾತಿನಿಧಿಕ ಕಥೆಗಳನ್ನು ಪರಿಗಣಿಸಿ, ಕಥೆಗಳ ಮೂಲಭೂತ ತಾತ್ವಿಕ ಚಿಂತನೆಗಳನ್ನು ಗುರುತಿಸಿ ಅವುಗಳ ಸ್ವರೂಪದಲ್ಲಿ ಆಗಿರುವ ಸಾಂಸ್ಕೃತಿಕ, ಸಾಹಿತ್ಯಕ ನಿರಂತರ ಬದಲಾವಣೆಗಳನ್ನು ಅಧ್ಯಯನ ಮಾಡಿದೆ.

ಸಬೀಹಾ ಭೂಮಿಗೌಡರ (2012) 'ಮಹಿಳೆ: ಸಾಹಿತ್ಯ, ಸಾಂಸ್ಕೃತಿಕ ಆವರಣ ಮತ್ತು ಪರ್ಯಾಯದ ಹುಡುಕಾಟ' ಅಧ್ಯಯನವು ಇತ್ತೀಚಿನ ದಶಕದ ಮಹಿಳಾ ಸಾಹಿತ್ಯ ಪರ್ಯಾಯದ ಹುಡುಕಾಟದಲ್ಲಿದೆ ಎಂದು ತೋರಿಸುತ್ತದೆ. ಈ ಅಧ್ಯಯನ ಪರ್ಯಾಯದ ಹುಡುಕಾಟಗಳನ್ನು ವಿವಿಧ ನೆಲೆಗಳಲ್ಲಿ ಅಂದರೆ – ಪುರಾಣದ ಭಂಜನೆ ಮತ್ತು ಪುರಾಣದ ಮರುನಿರ್ಮಾಣದ ನೆಲೆ, ಸ್ವವಿಮರ್ಶೆ ಮತ್ತು ಸಮುದಾಯದ ವಿಮರ್ಶೆಯ ನೆಲೆ ಶೋಷಣೆಯಿಂದ ತಪ್ಪಿಸಿಕೊಂಡು ಬದುಕಲು ಸಮುದಾಯದೊಳಗೇ ಇರುವ ಬಿಲಗಳ ಅನ್ವೇಷಣೆ ಮತ್ತು ಅನಾವರಣದ ನೆಲೆ ಮುಂತಾದವುಗಳನ್ನು ಗುರುತಿಸುತ್ತದೆ.

ಶೈಲಾ.ಯು. (2012) ಅವರು 'ಮಹಿಳಾ ಕಥೆಗಳಲ್ಲಿ ಪ್ರತಿರೋಧದ ನೆಲೆಗಳು' ಅಧ್ಯಯನದಲ್ಲಿ ದಮನಿತ ಸಮುದಾಯವಾದ ಮಹಿಳೆಯರ ಪ್ರತಿರೋಧವನ್ನು ಮಹಿಳಾ ಸಾಹಿತ್ಯ ಗ್ರಹಿಸಿರುವುದನ್ನು ತೋರಿಸಿದ್ದಾರೆ. ಇಲ್ಲಿ ಪರಿಗಣಿಸಿರುವ ಕಥೆಗಳಲ್ಲಿ ಮಹಿಳೆಯರ ಭಾವನೆಗಳ ಮೇಲಾದ ಆಘಾತಕ್ಕೆ ಪ್ರತಿರೋಧ ವ್ಯಕ್ತವಾಗಿರುವುದು ಮತ್ತು ಕುಟುಂಬ ಹಾಗೂ ಇತರೆಡೆಗಳ ಸಂಬಂಧದಲ್ಲಿ ಕಾಣಿಸಿಕೊಳ್ಳುವ ಬಿರುಕುಗಳಲ್ಲಿ ಪ್ರತಿರೋಧದ ಸೆಲೆ ಕಂಡುಬರುವುದನ್ನು ಗುರುತಿಸಿದ್ದಾರೆ. ಪ್ರತಿರೋಧವು ಮಾನಸಿಕ ನೆಲೆಯಲ್ಲಿ ಸಂಘಟನಾತ್ಮಕ ನೆಲೆಯಲ್ಲಿ, ಕುಟುಂಬ, ವೃತ್ತಿ ಇತ್ಯಾದಿ ಸಂದರ್ಭಗಳಲ್ಲಿ ವ್ಯಕ್ತವಾಗಿರುವುದು ಕಂಡುಬರುತ್ತದೆ.

ಜಿ.ಎಸ್. ಆಮೂರರು (2012) 'ಕನ್ನಡ ಕಥನ ಸಾಹಿತ್ಯ: ಸಣ್ಣಕಥೆ' ಅಧ್ಯಯನದಲ್ಲಿ ಸಣ್ಣಕಥೆಗಳ ವಿಮರ್ಶೆಯನ್ನು ಮಾಡುತ್ತಾ ಸಣ್ಣಕಥೆಗಳ ಒಂದು ಪರಂಪರೆಯನ್ನು ಸೃಷ್ಟಿಸುವ ಮತ್ತು ಮಹತ್ವದ ಕತೆಗಾರರ ಸಾಧನೆಯ ಒಂದು ಸಮಗ್ರನೋಟವನ್ನು ದೊರಕಿಸುವ ಹಾಗೂ ಕತೆಗಳನ್ನು ವ್ಯಾಖ್ಯಾನಿಸುವ ಪ್ರಯತ್ನ ಮಾಡಿದ್ದಾರೆ. ಕನ್ನಡದ ಪ್ರಾರಂಭದ ಕತೆಗಾರರಿಂದ ಹಿಡಿದು ಇತ್ತೀಚಿನ ದಿನಗಳವರೆಗಿನ ಕತೆಗಾರರನ್ನು ಒಳಗೊಂಡಿರುವ ಈ ಅಧ್ಯಯನದಲ್ಲಿ 'ಮಹಿಳೆ ಮತ್ತು ಸಣ್ಣಕತೆ' ಎಂಬ ಲೇಖನವಿದೆ. ಕನ್ನಡ ಮಹಿಳಾ ಸಾಹಿತ್ಯಕ್ಕೂ ಒಂದು ಪರಂಪರೆ ಇದೆ ಎಂದು ಹೇಳಿರುವ ಆಮೂರರು ಈ ಪರಂಪರೆಯನ್ನು ನಾಲ್ಕು ಪೀಳಿಗೆಗಳಲ್ಲಿ ಗುರುತಿಸುತ್ತಾರೆ.

ಕೆ. ಷರೀಫಾ (2011) ಅವರು 'ಮುಸ್ಲಿಂ ಮಹಿಳಾ ಸಂವೇದನೆ' ಅಧ್ಯಯನದಲ್ಲಿ ಮುಸ್ಲಿಂ ಲೇಖಕರು ಮತ್ತು ಲೇಖಕಿಯರು ಕಥೆ, ಕಾದಂಬರಿಗಳಲ್ಲಿ ದಾಖಲಿಸಿರುವ ಮಹಿಳಾ ಸಂವೇದನೆಗಳನ್ನು ಅಧ್ಯಯನ ಮಾಡಿದ್ದಾರೆ. ಮುಸ್ಲಿಂ ಮಹಿಳೆಯರ ದಮನಿತ ಸ್ಥಿತಿಯನ್ನು ಧರ್ಮದ ಕಕ್ಷೆಯಲ್ಲಿ ವಿಶ್ಲೇಷಿಸಿ ಮಹಿಳಾ ಸಂವೇದನೆಗಳನ್ನು ಚರ್ಚಿಸಿದ್ದಾರೆ. ಈ ಕಥೆ, ಕಾದಂಬರಿಗಳಲ್ಲಿ ಬರುವ ಮುಸ್ಲಿಂ ಸಮುದಾಯದ ಮಹಿಳೆಯರ ದಮನ, ಪ್ರತಿಭಟನೆ ಮತ್ತು ಪರ್ಯಾಯಗಳ ಹುಡುಕಾಟದ ವಿಧಾನಗಳನ್ನು ಗುರ್ತಿಸಿದ್ದಾರೆ.

ವತ್ಸಲ ಎನ್. (2010) ಅವರ 'ಮಹಿಳಾ ಸಾಹಿತ್ಯದ ಹಿನ್ನೆಲೆಯಲ್ಲಿ ಸೃಜನಶೀಲತೆಯ ಪ್ರಶ್ನೆಗಳು' ಅಧ್ಯಯನವು ಮಹಿಳಾ ಲೇಖಕರ ಕೃತಿಗಳಲ್ಲಿ ಮಹಿಳೆಯರ ಬದುಕು, ಅವರ ಮನಸ್ಸು ಮತ್ತು ಹೆಣ್ಣಿನ ಸೃಜನಶೀಲ ಶಕ್ತಿ ಅಭಿವ್ಯಕ್ತಿಯಾಗಿರುವುದನ್ನು ಚಿತ್ರಿಸಲು ಪ್ರಯತ್ನಿಸುತ್ತದೆ. ಮಹಿಳಾ ಸಾಹಿತ್ಯದಲ್ಲಿ ಮಹಿಳಾ ಸೃಜನಶೀಲತೆ ಎದುರಿಸಿರುವ ಸವಾಲುಗಳು ಮತ್ತು ಸೃಜನಶೀಲತೆ ವ್ಯಕ್ತಗೊಂಡಿರುವುದನ್ನು ಗಮನಿಸಿದ್ದಾರೆ. ಮಹಿಳೆಯರ ಅಸ್ತಿತ್ವದ ಎಲ್ಲ ಕ್ಷೇತ್ರ ಅಥವಾ ನೆಲೆಗಳನ್ನು ಸಾಮಾಜಿಕ ಸಂದರ್ಭಗಳು ನಿಯಂತ್ರಿಸುತ್ತಿದ್ದು ಸಾಹಿತ್ಯ ಸೃಜನಶೀಲತೆಗೆ ಅಡ್ಡಿಯಾಗಿರುವುದನ್ನು ಈ ಅಧ್ಯಯನ ಗುರುತಿಸುತ್ತದೆ.

ಗಾಯತ್ರಿ ಎನ್.ರವರ (1997) 'ಆಧುನಿಕ ಕನ್ನಡ ಸಾಹಿತ್ಯದ ಮೂರು ಪ್ರಮುಖ ಚಳುವಳಿಗಳಲ್ಲಿ ಸ್ತ್ರೀವಸ್ತು ನಿರ್ವಹಣೆ' ಅಧ್ಯಯನವು ಸಾಹಿತ್ಯ ಕೃತಿಗಳಲ್ಲಿ ಅಭಿವ್ಯಕ್ತಿಯಾಗಿರುವ ಲಿಂಗಾಧಾರಿತ ಅಸಮಾನತೆ ಮತ್ತು ಅಸಮಾನ ಸಂಬಂಧದ ನೈಜ ಸ್ವರೂಪವನ್ನು ಅರಿಯುವ ಪ್ರಯತ್ನ ಮಾಡುತ್ತದೆ. ಪುರುಷ ಸಾಹಿತ್ಯವು ಸ್ತ್ರೀಯ ಅನುಭವ ಮತ್ತು ಚಿಂತನೆಯನ್ನು ಕಂಡ ರೀತಿ ಮತ್ತು ಅದನ್ನು ಪುನರ್ ಮೌಲ್ಯೀಕರಣ ಮಾಡುವ ನೆಲೆಯಲ್ಲಿ ನೋಡುವ ಪ್ರಯತ್ನವನ್ನು ಮಾಡುತ್ತದೆ. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಹೆಣ್ಣಿನ ಗ್ರಹಿಕೆಯ ಒಂದು ಸ್ಥೂಲ ವಿಶ್ಲೇಷಣೆಯನ್ನು ನವೋದಯ, ಪ್ರಗತಿಶೀಲ ಮತ್ತು ನವ್ಯ ಚಳುವಳಿಗಳ ತಾತ್ವಿಕ ಚಿಂತನೆಯ ಹಿನ್ನೆಲೆಯಲ್ಲಿ ಈ ಅಧ್ಯಯನ ಮಾಡಲಾಗಿದೆ.

ಸುಜಾತ ಟಿ.ಎಂ.ರವರ (2010) 'ವೈದೇಹಿಯವರ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು' ಅಧ್ಯಯನ ವೈದೇಹಿಯವರ ಬರವಣಿಗೆಯ ಆಸಕ್ತಿ ಮತ್ತು ಮಾದರಿಗಳನ್ನು ಸಾಹಿತ್ಯಲೋಕಕ್ಕೆ ತಿಳಿಸುವ ಪ್ರಯತ್ನ ಮಾಡುತ್ತದೆ. ವೈದೇಹಿಯವರ ಸಾಹಿತ್ಯದಲ್ಲಿ – ಕತೆ, ಕಾವ್ಯ, ಕಾದಂಬರಿ, ನಾಟಕ, ಬಿಡಿಲೇಖನಗಳಲ್ಲಿ ಬಳಸಿರುವ ವಸ್ತು, ಭಾಷೆ, ತಂತ್ರಗಳ ಬಗ್ಗೆ ಚರ್ಚಿಸಲಾಗಿದೆ. ಇವರ

ಕಥೆಗಳಲ್ಲಿ ವ್ಯಕ್ತವಾಗಿರುವ ಸಾಮಾಜಿಕ ಪ್ರಜ್ಞೆ, ಸಾಮಾಜಿಕ ಸ್ಥಿತ್ಯಂತರ, ಸಂವೇದನೆಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

ಸಾವಿತ್ರಮ್ಮನವರ (2010) 'ಇತ್ತೀಚಿನ ಕನ್ನಡದ ಕಥೆಗಾರ್ತಿಯರು - ಒಂದು ಅಧ್ಯಯನ' ಸ್ತ್ರೀಯರನ್ನು ಕುರಿತು ಮಹಿಳೆಯರು ರಚಿಸಿರುವ ಕಥೆಗಳಲ್ಲಿ ಅನಾವರಣಗೊಂಡಿರುವ ಸ್ತ್ರೀಯರ ಸುಪ್ತ ಮನಸ್ಸು, ಜಾಗೃತತೆ ಮತ್ತು ಇವುಗಳ ದಿಕ್ಕಿನಲ್ಲಿ ಲೇಖಕಿಯರ ಆಲೋಚನೆಗಳನ್ನು ತೌಲನಿಕವಾಗಿ ವಿವೇಚಿಸಿದೆ. ಕನ್ನಡ ಕಥಾ ಸಾಹಿತ್ಯದಲ್ಲಿ 1970ರಿಂದ 2000ರವರೆಗೆ ಬಂದ ಕಥೆಗಾರ್ತಿಯರಲ್ಲಿರುವ ಭಿನ್ನ ನೆಲೆ, ಅದು ವ್ಯಕ್ತವಾಗಿರುವ ರೀತಿ, ಮತ್ತು ಒಂದು ಹೆಣ್ಣನ್ನು ಮತ್ತೊಂದು ಹೆಣ್ಣು ಕಾಣುವ ರೀತಿಯನ್ನು ಅಧ್ಯಯನ ಮಾಡಿದ್ದಾರೆ. ಸ್ತ್ರೀಯರ ಶೋಷಣೆಗೆ ಕಾರಣವಾದ ಸಾಮಾಜಿಕ, ಧಾರ್ಮಿಕ ಮೌಲ್ಯಗಳನ್ನು ಪ್ರಶ್ನಿಸುವ ಮನೋಭಾವವನ್ನು ಇತ್ತೀಚಿನ ಕಥೆಗಾರ್ತಿಯರು ಗುರ್ತಿಸಿರುವುದನ್ನು ಚಿತ್ರಿಸಿದ್ದಾರೆ.

ಮೇಲೆ ನೀಡಿದ ಅಧ್ಯಯನಗಳ ಸಮೀಕ್ಷೆ ಮಹಿಳಾ ಕಥಾ ಸಾಹಿತ್ಯದಲ್ಲಿ ಅಭಿವ್ಯಕ್ತಿಯಾಗಿರುವ ಮಹಿಳೆಯರ ಕುರಿತ ವಸ್ತು ವಿಷಯ, ಅವುಗಳ ನೆಲೆ, ಸಾಮಾಜಿಕ,ಸಾಂಧರ್ಭಿಕ ಕಾರಣಗಳು ಮುಂತಾದ ಕೆಲವು ಅಂಶಗಳನ್ನು ಕುರಿತು ನಡೆದಿರುವ ಅಧ್ಯಯನಗಳನ್ನು ತೋರಿಸುತ್ತದೆ. ಈ ಅಧ್ಯಯನಗಳು ಸಾಮಾನ್ಯವಾಗಿ ಕತೃಕೇಂದ್ರಿತ, ಕೃತಿ ಕೇಂದ್ರಿತವಾಗಿರುವುದು ಕಂಡುಬರುತ್ತದೆ. ಕನ್ನಡ ಮಹಿಳಾ ಸಾಹಿತ್ಯವನ್ನು ಕುರಿತು ಕೆಲವು ಅಧ್ಯಯನಗಳು ನಡೆದಿದ್ದರೂ ಸ್ತ್ರೀ-ಪುರುಷರ ನಡುವಿನ ಸಮಾನತೆ-ಅಸಮಾನತೆಯನ್ನು ಮಹಿಳಾ ಸಾಹಿತ್ಯ ಚಿತ್ರಿಸಿರುವುದನ್ನು ಪರಿಗಣಿಸಿರುವ ಅಧ್ಯಯನಗಳು ಕಂಡುಬರುವುದಿಲ್ಲ. ಕೆಲವು ಲೇಖನಗಳಲ್ಲಿ ಪ್ರಾಸಂಗಿಕವಾಗಿ ಚರ್ಚಿಸಿರುವುದನ್ನು ಬಿಟ್ಟರೆ ಸ್ತ್ರೀ-ಪುರುಷರ ಸಮಾನತೆ-ಅಸಮಾನತೆಯನ್ನು ಕುರಿತಂತೆ ಮಹಿಳಾ ಸಾಹಿತ್ಯದ ಸಮಗ್ರ ಅಧ್ಯಯನಗಳು ನಡೆದಿಲ್ಲ. ಪ್ರಸ್ತುತ ಅಧ್ಯಯನವು ನವ್ಯೋತ್ತರ ಮಹಿಳಾ ಕಥಾಸಾಹಿತ್ಯದಲ್ಲಿ ಅಭಿವ್ಯಕ್ತಿಗೊಂಡಿರುವ ಸ್ತ್ರೀ-ಪುರುಷರ ನಡುವಿನ ಸಮಾನತೆ-ಅಸಮಾನತೆಯ ಚಿತ್ರಣವನ್ನು ಸಮಗ್ರವಾಗಿ ವಿಶ್ಲೇಷಿಸುವ ನಿಟ್ಟಿನಲ್ಲಿ ಪ್ರಯತ್ನಿಸುತ್ತದೆ.

ಅಧ್ಯಾಯ 2

ಅಧ್ಯಾಯ 2

ನವ್ಯೋತ್ತರ ಲೇಖಕಿಯರು: ಪ್ರೇರಣೆ ಮತ್ತು ಪ್ರಭಾವಗಳು

ನವ್ಯೋತ್ತರವೆನ್ನುವುದು ಒಂದು ಸಾಹಿತ್ಯ ಪಂಥ ಅಲ್ಲ. ಅದು ಕಾಲದ ದೃಷ್ಟಿಯಿಂದ ಮಾಡಿಕೊಂಡ ಒಂದು ಸಾಹಿತ್ಯ ಚರಿತ್ರೆಯ ವರ್ಗೀಕರಣ. ನವ್ಯದ ತರುವಾಯದ ದಿನಗಳಲ್ಲಿ ಬಂದ ಸಾಹಿತ್ಯ ಎಂಬ ಸ್ಥೂಲವಾದ ವ್ಯಾಖ್ಯೆಯನ್ನು ಇದರಲ್ಲಿ ಮಾಡಲಾಗಿದೆ. ಸಾಮಾನ್ಯವಾಗಿ ಸಾಹಿತ್ಯ ಚರಿತ್ರೆಕಾರರೆಲ್ಲರೂ ನವ್ಯದ ನಂತರ ಬಂದ ಸಾಹಿತ್ಯ ಎನ್ನುವ ಅರ್ಥದಲ್ಲಿಯೇ ಇದನ್ನು ಬಳಸುತ್ತ ಬಂದಿದ್ದಾರೆ. ಅಂದರೆ ಇಲ್ಲಿ ಮುಖ್ಯವಾಗಿ ಕಾಣಿಸಿಕೊಳ್ಳುವ ಪಂಥಗಳು ದಲಿತ ಮತ್ತು ಬಂಡಾಯ. ಇವುಗಳಲ್ಲಿ ಸ್ತ್ರೀವಾದಿ ಬರವಣಿಗೆಗಳು, ಮುಸ್ಲಿಂ ಸಂವೇದನೆಯ ಬರಹಗಳು ಸಹ ಒಳಗೊಳ್ಳುತ್ತವೆ. ಅಂದರೆ ನವ್ಯ ಸಾಹಿತ್ಯದ ನಂತರ ಬಂದ ನವ್ಯೋತ್ತರ ಸಾಹಿತ್ಯದ ಆಶಯಗಳಲ್ಲಿ ಜನಮುಖಿಯಾಗುವ ಮತ್ತು ಪ್ರಗತಿಪರವಾಗುವ ನಿಲುವುಗಳಿರುವುದನ್ನು ಕಾಣಬಹುದು. ಈ ಅರ್ಥದಲ್ಲಿ ನವ್ಯೋತ್ತರ ಸಾಹಿತ್ಯ ಎನ್ನುವುದು ಅದುವರೆಗಿನ ಸಾಹಿತ್ಯ ಪಂಥಕ್ಕಿಂತ; ನವೋದಯ, ಪ್ರಗತಿಶೀಲ, ನವ್ಯ – ಬೇರೆಯೇ ಆದ ಆಶಯಗಳನ್ನು ಹೊಂದಿರುವುದನ್ನು ಕಾಣಬಹುದು. ಇದಕ್ಕೆ ಕಾರಣಗಳನ್ನು ಸಮಕಾಲೀನ ಸಾಮಾಜಿಕ, ರಾಜಕೀಯ ನೆಲೆಗಳಲ್ಲಿ ಗುರುತಿಸಲು ಸಾಧ್ಯವಿದೆ. ಕರ್ನಾಟಕವು ರಾಜಕೀಯವಾಗಿ ಹಿಂದೆಂದೂ ಕಾಣದಂತಹ ಹೊಸ ತಿರುವೊಂದನ್ನು ಪಡೆದುದು ಇವುಗಳಲ್ಲಿ ಮುಖ್ಯವಾಗಿ ಗಮನ ಸೆಳೆಯುತ್ತದೆ. ಹಾಗೆಯೇ ಸಾಮಾಜಿಕವಾದ ಚಳುವಳಿಗಳು, ಸಂಘಟನೆಗಳು, ಜಾತಿ ಸಮುದಾಯದ ಹೋರಾಟಗಳು, ರಾಜಕೀಯ ಪಕ್ಷಗಳು ಹುಟ್ಟುಹಾಕಿದ ಜಾಗೃತಿಗಳು ಹೀಗೆ ಒಂದಲ್ಲ ಒಂದು ರೀತಿಯಲ್ಲಿ ಕರ್ನಾಟಕವು ಹೊಸ ದಾರಿಯನ್ನು ತುಳಿಯುವಲ್ಲಿ ಮುಂದಾಗಿತ್ತು. ಈ ಸಂದರ್ಭದಲ್ಲಿ ಕನ್ನಡನಾಡಿನ ಲೇಖಕರು ಕನ್ನಡದ ಅಭಿವ್ಯಕ್ತಿಯಲ್ಲಿ ಹೊಸ ಹುಡುಕಾಟವನ್ನು ಶೋಧಿಸುವ ಪ್ರಯತ್ನ ಮಾಡಿದರು. ಪರಿಣಾಮವಾಗಿ ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಹೊಸ ತಿರುವು ಕಾಣಿಸಿಕೊಳ್ಳಲು ಸಾಧ್ಯವಾಯಿತು. ಕಳೆದ ಶತಮಾನದ ಮೊದಲ ಏಳು ದಶಕಗಳಲ್ಲಿ ಜರುಗಿದ ಸಾಹಿತ್ಯಕ ಮತ್ತು ರಾಜಕೀಯ ಚಳುವಳಿಗಳು 1970ರ ಆರಂಭದ ವೇಳೆಗೆ ದಲಿತರಲ್ಲಿ, ಅಲ್ಪಸಂಖ್ಯಾತರಲ್ಲಿ, ಹಿಂದುಳಿದ ವರ್ಗಗಳಲ್ಲಿ ಜಾಗೃತಿ ಮೂಡಿಸಿದವು. ಈ ಬೆಳವಣಿಗೆಗಳು ವಿದ್ಯಾಭ್ಯಾಸ ಪಡೆದ ಮಹಿಳೆಯರಲ್ಲೂ ತಿಳುವಳಿಕೆ ಮೂಡಿಸಿ ಸ್ತ್ರೀಯರ ಸ್ಥಾನಮಾನ, ಅಸ್ತಿತ್ವ ಕುರಿತಾದ ಕಥೆಗಳು ಕಾಣಿಸಿಕೊಳ್ಳಲು ಪ್ರೇರಣೆ ನೀಡಿದವು.

ಸಾಹಿತ್ಯದ ಸ್ವರೂಪವನ್ನು ನಿರ್ಧರಿಸುವಾಗ ಪ್ರಚಲಿತದಲ್ಲಿರುವ ವಿಚಾರಗಳು, ಧೋರಣೆಗಳು ನಿರ್ಧಾರಕಗಳಾಗುತ್ತವೆ. ಸಮಾಜದಲ್ಲಿ ಬಂದ ನೂತನ ಆವಿಷ್ಕಾರ, ಹೊಸ ವಿಷಯ, ವಿಚಾರಗಳು, ಸಿದ್ಧಾಂತಗಳು, ಘಟನೆಗಳು ಸಾಹಿತಿಗಳ ಮೇಲೆ ಪ್ರಭಾವ ಬೀರುವುದು ಸಾಮಾನ್ಯ. ಆದ್ದರಿಂದ ಮೋಹನ ಕುಂಟಾರ್ ವ್ಯಕ್ತಪಡಿಸುವಂತೆ ಒಂದು ಕಾಲಘಟ್ಟದ ಸಾಹಿತ್ಯವನ್ನು ಅಭ್ಯಾಸ ಮಾಡುವಲ್ಲಿ ಆ ಸಾಹಿತ್ಯದ ಹುಟ್ಟಿಗೆ ಪೂರಕವಾದ ಹಾಗೂ ಪ್ರೇರಕವಾದ ಸಂದರ್ಭಗಳನ್ನು ಗಮನಿಸುವುದು ಸೂಕ್ತ (2011: ಪುಟ 100). ಈ ಹಿನ್ನೆಲೆಯಲ್ಲಿ ನವ್ಯೋತ್ತರ ಮಹಿಳಾ ಸಾಹಿತಿಗಳಿಗೆ ಪ್ರೇರಣೆ, ಪ್ರಭಾವ ಬೀರಿರುವ ಅಂಶಗಳನ್ನು ಇಲ್ಲಿ ಚರ್ಚಿಸಲಾಗಿದೆ.

2.1. ಮಾರ್ಕ್ಸ್‌ವಾದ

ಆಧುನಿಕ ಯುಗದೊಂದಿಗೆ ಪ್ರಾರಂಭವಾದ ಕೈಗಾರಿಕೀಕರಣ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಗಳಲ್ಲಿ, ಸ್ಥಿತಿಗತಿಗಳಲ್ಲಿ ಮಹತ್ತರವಾದ ಬದಲಾವಣೆ ತಂದು ಬಂಡವಾಳಶಾಹಿ ಮತ್ತು ದುಡಿಯುವ ಅಥವಾ ಶ್ರಮಿಕ ವರ್ಗಗಳನ್ನು ಸೃಷ್ಟಿಮಾಡಿತು. ಈ ಎರಡು ವರ್ಗಗಳ ನಡುವಿನ ಸಂಪನ್ಮೂಲಗಳ ಅಸಮಾನದ ಹಂಚಿಕೆ ಶ್ರಮಿಕರನ್ನು ಶೋಷಣೆಗೆ ಈಡುಮಾಡಿತು. ಇಂತಹ ಅಸಮಾನತೆ, ಶೋಷಣೆಯಿಂದ ಪಾರಾಗಲು ಕಾರ್ಲ್‌ಮಾರ್ಕ್ಸ್ ಹೊಸ ಚಿಂತನಾ ಕ್ರಮವನ್ನು ಸೃಷ್ಟಿಸಿದ. ಕಾರ್ಲ್‌ಮಾರ್ಕ್ಸ್‌ನ ವರ್ಗ ಸಂಘರ್ಷ, ಸಾಮಾಜಿಕ ನ್ಯಾಯ, ಪರಿಕಲ್ಪನೆಗಳು ಸಮಾಜದಲ್ಲಿ ಸ್ತ್ರೀ–ಪುರುಷ ಸ್ಥಾನ ಪಾತ್ರ, ಅವರ ನಡುವಿನ ತಾರತಮ್ಯ ನೀತಿಗಳನ್ನು ಅರಿಯುವಲ್ಲಿ ಕಾರಣವಾಗಿವೆ. ಶಿಕ್ಷಣ ಪಡೆದ ಮಹಿಳೆಯರು ಕಾರ್ಲ್‌ಮಾರ್ಕ್ಸ್‌ನ ವಿಚಾರಧಾರೆಯ ಹಿನ್ನೆಲೆಯಲ್ಲಿ ಹೆಣ್ಣಿನ ಪರಿಸ್ಥಿತಿಯನ್ನು ಅರಿಯಲು ಪ್ರಯತ್ನಿಸಿದುದು ನವ್ಯೋತ್ತರ ಮಹಿಳಾ ಸಾಹಿತ್ಯದ ಮೇಲೆ ಪ್ರಭಾವ ಬೀರಿದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದುದೆಂದರೆ ಕಾರ್ಲ್‌ಮಾರ್ಕ್ಸ್‌ನ ವಿಚಾರಗಳನ್ನು ಸ್ತ್ರೀ ಬದುಕಿಗೂ ಅನ್ವಯಿಸಿ, ಹೆಣ್ಣಿನ ಆರ್ಥಿಕ ಅಸಮಾನತೆಯನ್ನು ಚಿತ್ರಿಸಿದ್ದು ಮಹಿಳೆಯರು ತಮ್ಮ ಅವಲಂಬಿ ಮತ್ತು ಅಧೀನ ಪರಿಸ್ಥಿತಿಯನ್ನು ತಿಳಿಯಲು ಕಾರಣವಾಗಿರುವುದು ಕಂಡುಬರುತ್ತದೆ. ಯಜಮಾನ–ಅಧೀನ ಚಿಂತನೆಗಳು ಮಹಿಳೆಗೆ ಅವಳ ಪುರುಷಾಧೀನ ಪರಿಸ್ಥಿತಿಯನ್ನು ತಿಳಿಸುತ್ತವೆ. ಸಮಾಜದಲ್ಲಿ ಮಹಿಳೆಯ ಪರಿಸ್ಥಿತಿಯನ್ನು ಶ್ರಮಿಕ ವರ್ಗಕ್ಕೆ ಸಮೀಕರಿಸಿದ ನವ್ಯೋತ್ತರ ಮಹಿಳಾ ಸಾಹಿತಿಗಳು ಮಾರ್ಕ್ಸ್‌ವಾದದಿಂದ ಪ್ರಭಾವಿತರಾಗಿರುವುದು ತಿಳಿಯುತ್ತದೆ.

2.2. ಗಾಂಧೀವಾದ

ಆಧುನಿಕ ಭಾರತದ ಚಿಂತನೆಗಳು ಅಂದರೆ ಸಮಾನತೆ, ಸಹಬಾಳ್ವೆ, ಸರ್ವೋದಯ, ಅಹಿಂಸೆ ಮುಂತಾದ ವಿಚಾರಗಳ ಪ್ರಭಾವ ಮೂಡಿಸಿದವರಲ್ಲಿ ಗಾಂಧೀಜಿಯವರೂ ಪ್ರಮುಖರು. ಗಾಂಧೀಜಿ ದೇಶದ ಸ್ವಾತಂತ್ರ್ಯಕ್ಕೆ ಹೋರಾಡುತ್ತಲೇ, ಸ್ತ್ರೀವಿಮೋಚನೆಗಾಗಿ ಪ್ರಯತ್ನಿಸಿದರು. ಮಹಿಳೆಯ ಜೀವನ ಸಮಾಜದಲ್ಲಿ ಅಸಮಾನತೆಯಿಂದ ಕೂಡಿದೆ, ಅವಳು ಶೋಷಣೆಗೊಳಗಾಗಿದ್ದಾಳೆ ಮತ್ತು ಕ್ರೌರ್ಯದ ಬದುಕಿಗೆ ಈಡಾಗಿದ್ದಾಳೆ ಎಂದು ಗುರುತಿಸಿ ಸ್ತ್ರೀ-ಸಬಲತೆ, ಸಮಾನತೆ ಮತ್ತು ಅಭಿವೃದ್ಧಿಯನ್ನು ಪ್ರಚುರಪಡಿಸಿದರು. ಮಹಿಳೆಯರನ್ನು ಸಂಘಟಿಸಿ ಅವರು ಸ್ವಾತಂತ್ರ್ಯ ಮತ್ತು ಹಕ್ಕುಗಳನ್ನು ಪಡೆಯಲು ಶ್ರಮಿಸಿದರು. ಮಹಿಳೆಯ ಯೋಗಕ್ಷೇಮವನ್ನು ಸರ್ವೋದಯ ತತ್ವದ ಹಿನ್ನೆಲೆಯಲ್ಲಿ ನೋಡಿ ಎಲ್ಲರ ಅಭ್ಯುದಯವಾಗಬೇಕೆಂದು ಕರೆನೀಡಿದರು. ಹೆಣ್ಣು ಎಂದು ಪುರುಷನ ಅಡಿಯಾಳಾಗದೇ ತಮ್ಮ ಸ್ವಾತಂತ್ರ್ಯ ಸ್ಥಾಪಿಸಿಕೊಳ್ಳಬೇಕು ಎಂದು ಕರೆ ನೀಡಿದರು. ಸಾಮಾಜಿಕ ರೀತಿ-ನೀತಿಗಳಿಗೆ ಬಲಿಯಾಗಿ ಹೆಣ್ಣಿನ ಜೀವನ ಹಾಳಾಗಬಾರದೆಂದು ಬಯಸಿದ್ದ ಗಾಂಧೀಜಿಯವರ ಸ್ತ್ರೀಪರ ವಿಚಾರಧಾರೆಗಳು ನವ್ಯೋತ್ತರ ಕಾಲಘಟ್ಟದ ಲೇಖಕಿಯರನ್ನು ಪ್ರಭಾವಿಸಿವೆ.

2.3. ಲೋಹಿಯಾ ವಿಚಾರಧಾರೆ

ಆಧುನಿಕ ಭಾರತದ ಸಮಾಜವಾದಿ ಚಿಂತಕರಲ್ಲೊಬ್ಬರಾದ ಲೋಹಿಯಾರವರ ವಿಚಾರಧಾರೆಗಳು ನವ್ಯೋತ್ತರ ಮಹಿಳಾ ಲೇಖಕಿಯರ ಮೇಲೆ ಪ್ರಭಾವ ಬೀರಿರುವುದು ಕಂಡುಬರುತ್ತದೆ. ಗಾಂಧೀವಾದದಿಂದ ಪ್ರೇರಿತರಾಗಿದ್ದ ಲೋಹಿಯಾರವರು ಸಮಾಜದಲ್ಲಿರುವ ಅನೇಕ ಅಸಮಾನ ನೀತಿಗಳನ್ನು ತೊಡೆದುಹಾಕಲು ಪ್ರಯತ್ನಿಸಿದರು. ಜಾತಿ ನಿರ್ಮೂಲನೆ, ಸ್ತ್ರೀ-ಪುರುಷರ ನಡುವಿನ ಅಸಮಾನತೆ, ವಿಧವಾ ಸಮಸ್ಯೆ, ಅವಿವಾಹಿತ ಮಹಿಳೆಯರ ಸಮಸ್ಯೆಗಳು ಮತ್ತು ವ್ಯಕ್ತಿ ಸ್ವಾತಂತ್ರ್ಯದ ಪರವಾದ ಹೋರಾಟಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ಶ್ರಮಿಸಿದರು. ಲೋಹಿಯಾರವರ ಚಿಂತನೆಗಳು ಸಮಾಜವಾದದ ತತ್ವಗಳನ್ನಾಧರಿಸಿ ಎಲ್ಲರೂ ಸಮಾನರು ಎಂಬ ಸಂದೇಶವನ್ನು ಸಾರುತ್ತವೆ. ಲೋಹಿಯಾರವರ ಪ್ರಕಾರ ಸ್ತ್ರೀ-ಪುರುಷರಿಬ್ಬರೂ ಸಮಾನರು, ಸ್ತ್ರೀಯನ್ನು ಪುರುಷನು ತನ್ನ ಅಧೀನದಲ್ಲಿಟ್ಟುಕೊಳ್ಳದೆ ಅವಳನ್ನು ಸ್ವತಂತ್ರವಾಗಿ ಬಿಡಬೇಕು. "ಹೆಣ್ಣಿನ ಮೇಲೆ ಹೇರಲಾಗಿರುವ ನಿರ್ಬಂಧಗಳ ಮೂಲ ಸಮಾಜದಲ್ಲಿನ ಅನ್ಯಾಯಗಳಲ್ಲಿದೆ. ಹೆಣ್ಣು ಎಲ್ಲಿಯವರೆಗೆ ಸ್ವತಂತ್ರ್ಯಳಾಗುವುದಿಲ್ಲವೋ ಅಲ್ಲಿಯತನಕ ಗಂಡೂ

ಸ್ವತಂತ್ರನಾಗಬಾರದು" (ಮೋಹನ್ ಕುಂಟಾರ್ 2011: ಪುಟ 103) ಎಂದು ಲೋಹಿಯಾ ವಾದಿಸುತ್ತಾರೆ. ಇಂತಹ ವಿಚಾರಧಾರೆಗಳು ನವ್ಯೋತ್ತರ ಲೇಖಕಿಯರ ಮೇಲೆ ಪ್ರಭಾವಬೀರಿವೆ.

2.4. ಅಂಬೇಡ್ಕರ್ ವಾದ

ಆಧುನಿಕ ಭಾರತದ ಸಾಮಾಜಿಕ, ರಾಜಕೀಯ, ಆರ್ಥಿಕ ಬದಲಾವಣೆಗಳಲ್ಲಿ ಸಂವಿಧಾನಶಿಲ್ಪಿ ಅಂಬೇಡ್ಕರ್‌ರವರ ಚಿಂತನೆಗಳು ಗಾಢವಾದ ಪರಿಣಾಮ ಬೀರಿರುವುದು ಕಂಡುಬರುತ್ತದೆ. ಅಂಬೇಡ್ಕರರ ಜಾತಿಪದ್ಧತಿಯ, ಅಸ್ಪೃಶ್ಯತೆಯ ವಿರುದ್ಧದ ವಿಚಾರಗಳು, ಸಮಾಜದಲ್ಲಿ ಸಂಪ್ರದಾಯಗಳ ಹೆಸರಲ್ಲಿ ಆಗಿರುವ ಅನ್ಯಾಯಗಳ ವಿರುದ್ಧದ ಹೋರಾಟಗಳು ನವ್ಯೋತ್ತರ ಸಾಹಿತ್ಯದ ಮೇಲೆ ಪ್ರಭಾವ ಬೀರಿವೆ. ಭಾರತೀಯ ಸಮಾಜದ ಮೇಲ್ವರ್ಗ ಕೆಳವರ್ಗವನ್ನು ಸಾಮಾಜಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ ತಮ್ಮ ಅಧೀನದಲ್ಲಿಟ್ಟುಕೊಂಡು ಗುಲಾಮರನ್ನಾಗಿ ಮಾಡಿ ಅಸಮಾನತೆಯನ್ನು ಮೆರೆದ ರೀತಿಯನ್ನು ಅಂಬೇಡ್ಕರರ ವಿಚಾರಗಳು ತಿಳಿಸುತ್ತವೆ. ಈ ಬಂಧನದಿಂದ ಕೆಳವರ್ಗದ ಜನರ ಬಿಡುಗಡೆಗೆ ಶ್ರಮಿಸಿದ ಅಂಬೇಡ್ಕರರು ಕಾನೂನಾತ್ಮಕವಾಗಿ ಕೆಳವರ್ಗದ ಜನರನ್ನು ರಕ್ಷಿಸಲು ಮತ್ತು ಸಶಕ್ತರನ್ನಾಗಿಸಲು ಪ್ರಯತ್ನಿಸಿದರು. ಇವರ ಈ ಪ್ರಯತ್ನಗಳು ಮತ್ತು ವಿಚಾರಧಾರೆಗಳು ಕನ್ನಡ ನವ್ಯೋತ್ತರ ಸಾಹಿತ್ಯದ ಮೇಲೆ ತಮ್ಮ ಛಾಪನ್ನು ಒತ್ತಿ ದಲಿತ ಸಾಹಿತ್ಯ ಪಂಥದ ಹುಟ್ಟಿಗೆ ಕಾರಣವಾಯಿತು. ಇದೇ ರೀತಿ ಅಂಬೇಡ್ಕರ್‌ರವರ ಸ್ತ್ರೀಯರನ್ನು ಕುರಿತ ಚಿಂತನೆಗಳು ಮಹಿಳಾ ಸಾಹಿತ್ಯವನ್ನು ಪ್ರೇರೇಪಿಸಿರುವುದನ್ನು ಕಾಣಬಹುದು. ಭಾರತೀಯ ಸಮಾಜದಲ್ಲಿ ಸ್ತ್ರೀ–ಪುರುಷರು ಸಮಾನ ಸ್ಥಾನಮಾನ ಹೊಂದಿಲ್ಲ. ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀ ಅಧೀನವಾಗಿ ಗುಲಾಮಳ ಸ್ಥಾನದಲ್ಲಿದ್ದಾಳೆ; ಇಂತಹ ಅಸಮಾನತೆಯನ್ನು ತೊಡೆದು ಸ್ತ್ರೀ–ಪುರುಷರಿಬ್ಬರ ನಡುವೆಯೂ ಸಮಾನತೆ ಇರಬೇಕು ಎಂಬುದು ಅಂಬೇಡ್ಕರ್‌ರವರ ವಾದವಾಗಿತ್ತು. ಮಹಿಳೆಯು ಎಲ್ಲ ವರ್ಗ, ಜಾತಿಗಳಲ್ಲೂ ಶೋಷಣೆ, ಅಸಮಾನತೆಗೆ ಒಳಗಾಗಿರುವುದನ್ನು ತೋರಿಸಿದ ಅಂಬೇಡ್ಕರರು ಸ್ತ್ರೀಯರ ಹಿತವನ್ನು ಕಾಪಾಡುವ, ಅವರನ್ನು ಅಸಮಾನತೆಯಿಂದ ಮೇಲೆತ್ತಲು ಅನುಕೂಲವಾಗುವ ಸಂವಿಧಾನಾತ್ಮಕ ಕಾನೂನುಗಳನ್ನು ರಚಿಸಿದರು. ಈ ಕಾನೂನುಗಳು ಸಂಪ್ರದಾಯ ಆಚರಣೆಗಳ ಹೆಸರಿನಲ್ಲಿ ಸ್ತ್ರೀಯ ಮೇಲೆ ನಡೆಯುತ್ತಿದ್ದ ಶೋಷಣೆ, ಅನ್ಯಾಯಗಳನ್ನು ತಡೆಯುವ ಕೆಲಸ ಮಾಡಿದವು. ಅಂಬೇಡ್ಕರರ ವಿಚಾರಧಾರೆಗಳು ಮತ್ತು ಪ್ರಯತ್ನಗಳು ಸ್ತ್ರೀಯರನ್ನು ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಮೇಲೆತ್ತಲು ಸಹಾಯ ಮಾಡಿದವು. ಇಂತಹ ವಿಚಾರಧಾರೆಗಳಿಂದ ಪ್ರೇರಣೆಗೊಂಡ ನವ್ಯೋತ್ತರ ಮಹಿಳಾ ಲೇಖಕಿಯರು

ತಮ್ಮ ಸಾಹಿತ್ಯ ರಚನೆಯಲ್ಲಿ ಪುರುಷ ಪ್ರಧಾನ ಸಮಾಜ ಮಹಿಳೆಯನ್ನು ಜಾತಿ, ಸಂಪ್ರದಾಯ, ಆಚರಣೆ, ನಂಬಿಕೆಗಳ ಅಡಿಯಲ್ಲಿ ಸಿಲುಕಿಸಿ ಗುಲಾಮಳ ರೀತಿ ನಡೆಸಿಕೊಂಡಿರುವುದನ್ನು ಚಿತ್ರಿಸಿರುವುದು ಕಾಣುತ್ತದೆ.

2.5. ಮಹಿಳಾ ಚಳುವಳಿಗಳು

ಪಿತೃಪ್ರಧಾನ ಸಮಾಜದಲ್ಲಿ ಮಹಿಳೆಯರು ಅನುಭವಿಸುತ್ತಿದ್ದ ಶೋಷಣೆ, ದಾಸ್ಯ ಅಸಮಾನತೆಗಳನ್ನು ತೊಡೆದು ಸ್ತ್ರೀಯನ್ನು ಪುರುಷನಿಗೆ ಸಮಾನ ಸ್ಥಾನಮಾನದಲ್ಲಿ ನಿಲ್ಲಿಸಲು ಪ್ರಪಂಚದಾದ್ಯಂತ ಹಲವಾರು ಹೋರಾಟ, ಚಳುವಳಿಗಳು ನಡೆದಿವೆ. ಅಮೇರಿಕಾ, ಇಂಗ್ಲೆಂಡ್, ಫ್ರಾನ್ಸ್, ಮುಂತಾದ ಪಾಶ್ಚಿಮಾತ್ಯ ದೇಶಗಳಲ್ಲಿ ನಡೆದ ಸ್ತ್ರೀಪರ ಚಿಂತನೆಗಳು, ಹೋರಾಟಗಳು ಭಾರತದ ಮಹಿಳಾ ಚಿಂತಕಿಯರು ಮತ್ತು ಸಾಹಿತಿಗಳ ಮೇಲೆ ಪ್ರಭಾವಬೀರಿವೆ. ಸ್ತ್ರೀಯರ ಹಕ್ಕುಗಳನ್ನು ಪ್ರತಿಪಾದಿಸಿದ ಮೇರಿ ವುಲ್‌ಸ್ಟನ್ ಕ್ರಾಫ್ಟ್, ಸ್ತ್ರೀ ಸ್ವಾಂತಂತ್ರ್ಯಕ್ಕಾಗಿ ವಾದಮಾಡಿದ ವರ್ಜೀನಿಯಾ ವುಲ್ಫ್, ಮಹಿಳೆಯರ ಮೇಲಿನ ದೌರ್ಜನ್ಯ, ಶೋಷಣೆ, ಅಸಮಾನತೆಗಳನ್ನು ತಾತ್ವಿಕ ನೆಲೆಯಲ್ಲಿ ಚರ್ಚಿಸಿ ಸ್ತ್ರೀ ಹೋರಾಟಕ್ಕೆ ಕೊಡುಗೆ ನೀಡಿದ ಸಿಮೋನ್ ದ ಬೋವಾ, ಮಹಿಳೆಯರು ಎದುರಿಸುತ್ತಿರುವ ತೊಂದರೆಗಳನ್ನು, ಅಸಮಾನತೆಗಳನ್ನು ಚಿತ್ರಿಸಿದ ಬೆಟ್ಟಿ ಫ್ರೀಡನ್, ಮಹಿಳಾ ಚಳುವಳಿಯ ರೂವಾರಿ ಕ್ಲಾರಾ ಜೆಟ್‌ಕಿನ್ ಮುಂತಾದವರ ಬರಹ, ಚಿಂತನೆಗಳು ಸಮಾಜದಲ್ಲಿ ಮಹಿಳೆಯರಿಗಾಗುತ್ತಿರುವ ಅನ್ಯಾಯ, ಶೋಷಣೆಗಳ ಅರಿವು ಮೂಡಿಸಿ ಸ್ತ್ರೀ ವಿಮೋಚನೆಗಾಗಿ ಪ್ರಯತ್ನಿಸಿದರು. 1908 ಮಾರ್ಚ್ 8ನ್ನು ಮಹಿಳಾ ದಿನಾಚರಣೆಯನ್ನಾಗಿ ಘೋಷಿಸಿದ್ದು, ಸ್ತ್ರೀಯರ ಹಕ್ಕು ಅಧಿಕಾರಗಳನ್ನು ಗುರುತಿಸಿದ್ದು, 1975ರಿಂದ 85ರ ದಶಕವನ್ನು ಮಹಿಳಾ ದಶಕವೆಂದು ಘೋಷಿಸಿದ್ದು ಇವೆಲ್ಲವುಗಳೂ ಮಹಿಳಾ ಸಾಹಿತ್ಯದ ಚಿಂತನೆ ಬರವಣಿಗೆಯಲ್ಲಿ ತಮ್ಮ ಪ್ರಭಾವ ಬೀರಿವೆ. ಭಾರತದ ಸಂಪ್ರದಾಯ, ಆಚರಣೆ, ಮೂಢನಂಬಿಕೆಗಳ ಬಾಹುಗಳಿಂದ ಬಿಡುಗಡೆಗೊಳಿಸಲು ರಾಜಾರಾಮ್ ಮೋಹನ್‌ರಾಯ್, ಜ್ಯೋತಿಬಾಫುಲೆ ಮುಂತಾದವರು ನಡೆಸಿದ ಹೋರಾಟಗಳು, ಮಹಿಳೆಯರ ಸಾಮಾಜಿಕ, ರಾಜಕೀಯ ಸ್ಥಾನಮಾನ ದೊರಕಿಸಲು ರುಕ್ಮಾಬಾಯಿ, ಪಂಡಿತ ರಮಾಬಾಯಿ, ಅನಿಬೆಸೆಂಟ್ ಮುಂತಾದವರು ಮಾಡಿದ ಚಳುವಳಿ, ಹೋರಾಟಗಳು ಸ್ತ್ರೀಯರ ಸ್ಥಾನಮಾನವನ್ನು ಹೆಚ್ಚಿಸುವಲ್ಲಿ ಸಫಲವಾದವು. ಈ ಚಳುವಳಿಗಳು ಮಹಿಳೆಯರಿಗೆ ತಮ್ಮ ಹೋರಾಟದ ಹಾದಿ, ಧ್ಯೇಯ, ಸಮಸ್ಯೆಯ ಸ್ವರೂಪಗಳನ್ನು ತಿಳಿಯಲು ಅವಕಾಶ ಮಾಡಿಕೊಟ್ಟವು. ಇಂತಹ ಮಹಿಳಾ ಚಳುವಳಿಗಳ ಪ್ರಭಾವವೂ ಕೂಡ ನವ್ಯೋತ್ತರ ಮಹಿಳಾ ಸಾಹಿತ್ಯವನ್ನು ಪ್ರೇರೇಪಿಸಿದೆ. ಕುಟುಂಬ, ಸಮಾಜ, ರಾಜಕೀಯದಲ್ಲಿ ಮತ್ತು

ಆರ್ಥಿಕವಾಗಿ ತನ್ನ ದುಸ್ಥಿತಿಯನ್ನು ಕಂಡು ಎಚ್ಚೆತ್ತ ಮಹಿಳೆ ಈ ಅಂಶಗಳನ್ನು ಸಾಹಿತ್ಯದ ಮೂಲಕ ಹೊರಹೊಮ್ಮಿಸಿರುವುದು ಮಹಿಳಾ ಚಳುವಳಿಯ ಪ್ರಭಾವವನ್ನು ತೋರಿಸುತ್ತದೆ.

2.6. ಭಕ್ತಿಪಂಥ ಮತ್ತು ವಚನ ಚಳುವಳಿ

ಭಕ್ತಿ ಪಂಥವು ಮಾನವರ ಅಭ್ಯುದಯ, ಸಮಾನತೆ, ಪರಸ್ಪರ ಪ್ರೀತಿ, ಸಹಬಾಳ್ವೆಗಳನ್ನು ಕುರಿತು ಸಾರಿತು. ಈ ಧೋರಣೆಗಳ ಪ್ರಭಾವದಿಂದ ಹೆಣ್ಣುಮಕ್ಕಳಿಗೆ ವಿದ್ಯೆ ಮತ್ತು ಸಾಮಾಜಿಕ ಅವಕಾಶಗಳು ದೊರೆತವು. ವಚನಕಾರರ ವಚನಗಳು ಸ್ತ್ರೀ ಸ್ಥಾನಮಾನ, ಸ್ತ್ರೀ ಸ್ವಾತಂತ್ರ್ಯಗಳ ಪರವಾಗಿ ವಾದಿಸಿದವು. ಅಕ್ಕಮಹಾದೇವಿ ಹೆಣ್ಣಿಗೆ ಸಂಸಾರ ಬಂಧನವಾಗಬಾರದು ಅವಳೂ ಸ್ವಾತಂತ್ರ್ಯ ಸಮಾನತೆಯನ್ನು ಪಡೆಯಬೇಕು ಎಂದು ಸಾರಿದಳು. ಈ ಎಲ್ಲ ಚಳುವಳಿಗಳ ಧೋರಣೆಗಳು ನವ್ಯೋತ್ತರ ಕಾಲದ ಲೇಖಕಿಯರ ಮೇಲೆ ಪ್ರಭಾವ ಬೀರಿವೆ. ಇಂತಹ ಪ್ರೇರಣೆಗಳಿಂದ ಜಾಗೃತರಾದ ಲೇಖಕಿಯರು ಹೆಣ್ಣಿನ ಸ್ಥಾನಮಾನ, ಪಿತೃಪ್ರಧಾನ ವ್ಯವಸ್ಥೆಯ ಮೌಲ್ಯಗಳು ಹೆಣ್ಣನ್ನು ಅಧೀನತೆಗೆ ಒಳಗುಮಾಡಿರುವುದನ್ನು ಚರ್ಚಿಸಿ ಸ್ತ್ರೀಯರಿಗೂ ಪುರುಷನಂತೆ ಬದುಕು, ಸಮಾನತೆ ಇರಬೇಕು ಎಂಬುದನ್ನು ಕಥೆಗಳಲ್ಲಿ ಚಿತ್ರಿಸಿದರು.

2.7. ಬೂಸಾ ಸಾಹಿತ್ಯ ಪ್ರಕರಣ

ಬಸವಲಿಂಗಪ್ಪನವರು ಕನ್ನಡದಲ್ಲಿ ಹೆಚ್ಚಿನ ಸಾಹಿತ್ಯ ಧರ್ಮ, ಮತಗಳನ್ನು ಕುರಿತದ್ದೆ ಆಗಿರುವುದರಿಂದ ಇಂತಹ ಸಾಹಿತ್ಯವನ್ನು ಬೂಸಾ ಸಾಹಿತ್ಯ ಎಂದು ಕರೆದರು. ಈ ಹೇಳಿಕೆ ದಲಿತೇತರ ಸಾಹಿತಿಗಳಿಗೆ ಕೋಪವನ್ನುಂಟುಮಾಡಿದರೆ, ದಲಿತರಲ್ಲಿ ಸಂಘಟನೆಗೆ ಪ್ರೇರಕವಾಯಿತು. ಮಹಿಳೆಯರನ್ನು ಕುರಿತಂತೆ ಪುರುಷ ಸಾಹಿತ್ಯ ತಳೆದಿದ್ದ ನಿಲುವು, ಸ್ತ್ರೀಯನ್ನು ಅಧೀನವಾಗಿ, ಅವಲಂಬಿತವಾಗಿ ಚಿತ್ರಿಸಿದ ರೀತಿಗಳನ್ನು ಕುರಿತ ಚರ್ಚೆಗಳು ಈ ಬೂಸಾ ಸಾಹಿತ್ಯ ಪ್ರಕರಣದಿಂದ ಮೊನಚು ಪಡೆದುಕೊಂಡಿದ್ದು ನವ್ಯೋತ್ತರ ಮಹಿಳಾ ಸಾಹಿತ್ಯ ಪ್ರಭಾವಗೊಂಡಿರುವುದನ್ನು ಸೂಚಿಸುತ್ತದೆ.

2.8. ನವೋದಯ, ಪ್ರಗತಿಶೀಲ ಮತ್ತು ನವ್ಯದ ನಿಲುವುಗಳ ಪ್ರಭಾವ

ಕನ್ನಡ ಸಾಹಿತ್ಯದ ನವೋದಯ, ಪ್ರಗತಿಶೀಲ, ನವ್ಯ ಪಂಥಗಳ ನಿಲುವುಗಳು ನವ್ಯೋತ್ತರ ಮಹಿಳಾ ಸಾಹಿತ್ಯದ ಮೇಲೆ ಪ್ರಭಾವ ಬೀರಿರುವುದು ಕಂಡುಬರುತ್ತದೆ. ಬ್ರಿಟಿಷ್ ವಸಾಹತುಶಾಹಿ, ಆಡಳಿತ, ಶಿಕ್ಷಣಗಳಿಂದ ನವೋದಯ ಸಾಹಿತ್ಯ ಪ್ರೇರಣೆಗೊಂಡಿತು. ಮಾನವತಾವಾದದ ಆಶಯವನ್ನಿಟ್ಟುಕೊಂಡ ಸಾಹಿತ್ಯ ಮೂಡಿತು. ಸಾಮಾಜಿಕ ಸುಧಾರಣಾ ಚಳುವಳಿಗಳಿಂದ

ಪ್ರೇರಣೆಗೊಂಡು ಸಾಂಪ್ರದಾಯಿಕ ವ್ಯವಸ್ಥೆಯ ಆಚರಣೆ ನಂಬಿಕೆಗಳನ್ನು ಪ್ರಶ್ನಿಸುವ ಮನೋಭಾವ ಮತ್ತು ಸ್ತ್ರೀಪರ ಕಾಳಜಿಗಳು ಸಾಹಿತ್ಯದಲ್ಲಿ ಕಂಡುಬಂದವು. ಇದರ ಜೊತೆಗೆ ಇಂಗ್ಲೀಷ್ ಸಾಹಿತ್ಯದ ಪ್ರಭಾವವೂ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಸಾಮಾಜಿಕ ಚಿಂತನೆಗಳ ರೂಪದಲ್ಲಿ ಕಾಣಿಸಿತು. ಮಹಿಳೆಯರನ್ನು ಕುರಿತ ಸಾಂಪ್ರದಾಯಿಕ ಮೌಲ್ಯಗಳನ್ನು ಪ್ರಶ್ನಿಸುವ ಪ್ರಯತ್ನಗಳು ಸಾಹಿತ್ಯದಲ್ಲಿ ಕಂಡುಬಂದವು. ಸ್ತ್ರೀಶಿಕ್ಷಣ, ಹೆಣ್ಣನ್ನು ಕುರಿತ ಧರ್ಮಗಳ ಪರಂಪರಾಗತ ನಂಬಿಕೆ, ಸಾಮಾಜಿಕ ಮೌಢ್ಯ, ಅಸಮಾನತೆ ಮುಂತಾದವುಗಳ ಚರ್ಚೆ ಸಾಹಿತ್ಯದಲ್ಲಿ ಪ್ರಾರಂಭವಾಯಿತು. ಸ್ತ್ರೀಯರನ್ನು ಕುರಿತ ಈ ಅಂಶಗಳು ನವ್ಯೋತ್ತರ ಲೇಖಕಿಯರ ಮೇಲೆ ಪ್ರಭಾವ ಬೀರಿದೆ. ನವ್ಯ ಸಾಹಿತ್ಯದಲ್ಲಿ ಅಸ್ತಿತ್ವದ ಹುಡುಕಾಟ ನಡೆದರೂ ಹೆಣ್ಣಿನ ಅಸ್ತಿತ್ವದ ಪ್ರಶ್ನೆ ಅಷ್ಟೇನೂ ಮುಖ್ಯವಾಗಿ ಕಾಣುವುದಿಲ್ಲ. ಆಧುನಿಕ ಕನ್ನಡ ಸಾಹಿತ್ಯದ ಪ್ರಗತಿಶೀಲ ಪಂಥದಲ್ಲಿ ಸಮಾಜದ ಕೆಳವರ್ಗದ ಜನರ ಜೀವನ ಸ್ಥಿತಿ, ಸ್ತ್ರೀಯರ ಬದುಕಿನ ಚಿತ್ರಣಗಳನ್ನು ಸಾಹಿತಿಗಳು ಕಟ್ಟಿದರು. ಸಮಾಜದಲ್ಲಿರುವ ಜಾತಿ, ವರ್ಗ, ಲಿಂಗಾಧಾರಿತ ಅಸಮಾನತೆಯನ್ನು ಸಾಹಿತ್ಯದ ಮುಖೇನ ಪ್ರತಿಬಿಂಬಿಸಲಾಯಿತು. ಪ್ರಗತಿಶೀಲ ಪಂಥದ ಈ ವಿಚಾರಗಳೂ ಕೂಡ ನವ್ಯೋತ್ತರ ಮಹಿಳಾ ಸಾಹಿತಿಗಳ ಮೇಲೆ ಪ್ರಭಾವ ಬೀರಿವೆ.

2.9. ಬಂಡಾಯ ಸಾಹಿತ್ಯ ಚಳುವಳಿ

1979ರ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ದಲಿತ ಸಾಹಿತ್ಯ ಗೋಷ್ಠಿಯ ಮನವಿಯನ್ನು ತಿರಸ್ಕರಿಸಿದುದರ ಪರಿಣಾಮವಾಗಿ ಬಂಡಾಯ ಸಾಹಿತ್ಯ ಹುಟ್ಟಿಕೊಂಡಿತು. ಜನರ ನೋವು ನಿವಾರಿಸುವ ಅಸಮಾನತೆ, ಅನಕ್ಷರತೆ ತೊರೆಯುವ ಸಾಹಿತ್ಯ ಬೇಕು ಎಂಬ ಧೋರಣೆಯೊಂದಿಗೆ ಬೆಳೆದ ಸಾಹಿತ್ಯ ಚಳುವಳಿ ಬಂಡಾಯ ಸಾಹಿತ್ಯ. ಈ ಬಂಡಾಯ ಸಾಹಿತ್ಯದ ಧ್ಯೇಯ ಧೋರಣೆಗಳು ನವ್ಯೋತ್ತರ ಮಹಿಳಾ ಲೇಖಕಿಯರನ್ನು ಪ್ರೇರೇಪಿಸಿವೆ. ಮಹಿಳಾ ಸಾಹಿತ್ಯವನ್ನು ಪರಿಗಣಿಸದೇ ಇದ್ದ ಪುರುಷ ಸಾಹಿತಿಗಳ ವಿರುದ್ಧ, ಕೇವಲ ಪುರುಷಕೇಂದ್ರಿತ ಮತ್ತು ಸ್ತ್ರೀ ಅಧೀನತೆ, ಸಿದ್ಧ ಸೂತ್ರಗಳನ್ನು ಪ್ರಚುರಪಡಿಸುವ ಸಾಹಿತ್ಯದ ವಿರುದ್ಧ ದನಿ ಎತ್ತಿದ ಮಹಿಳಾ ಸಾಹಿತಿಗಳು ಬಂಡಾಯ ಸಾಹಿತ್ಯದಿಂದ ಪ್ರಭಾವಿತರಾಗಿರುವುದು ಕಂಡುಬರುತ್ತದೆ. ನವ್ಯೋತ್ತರ ಮಹಿಳಾ ಸಾಹಿತ್ಯದಲ್ಲಿ ಸ್ತ್ರೀಯರು ತಮ್ಮ ಹಕ್ಕೊತ್ತಾಯಗಳನ್ನು ಮಂಡಿಸುವ, ಸ್ಥಾನಮಾನ ಪಡೆಯಲು ಪ್ರಯತ್ನಿಸುವ, ಅವಳ ದುಃಖ ದುಮ್ಮಾನ, ಸಮಸ್ಯೆಗಳನ್ನು, ಸಮಸ್ಯೆಗಳ ಮೂಲವನ್ನು ತಿಳಿಯುವ ಮತ್ತು ಸಮಾನತೆ, ಸ್ವಾತಂತ್ರ್ಯಕ್ಕಾಗಿ ಪ್ರತಿಭಟಿಸುವ ಅಂಶಗಳು ಕಂಡುಬಂದವು. ಈ ಅಂಶಗಳು ಬಂಡಾಯ ಸಾಹಿತ್ಯ ಚಳುವಳಿಯ ಪ್ರಭಾವವೆಂದೇ ತಿಳಿಯಬಹುದು.

2.10. ಸ್ತ್ರೀವಾದ

ಸ್ತ್ರೀಯನ್ನು ಪುರುಷ ಪ್ರಧಾನ ಸಮಾಜದ ಸಂಕೋಲೆಯೊಳಗಿಂದ ಬಿಡುಗಡೆಗೊಳಿಸಿ, ಅವಳ ಸ್ಥಾನಮಾನ, ಸ್ವಾತಂತ್ರ್ಯ, ಸಮಾನತೆಗಳು ಪುರುಷನಿಗೆ ಸಮನಾಗಿ ಇರಬೇಕು ಮತ್ತು ಸ್ತ್ರೀಯರ ಹಕ್ಕುಗಳು ಅವರಿಗೆ ದೊರೆಯಬೇಕು ಎಂದು ನಡೆಯುತ್ತಿರುವ ಹೋರಾಟವನ್ನು ಸ್ತ್ರೀವಾದ ಎನ್ನಬಹುದು. ಪಾಶ್ಚಿಮಾತ್ಯ ದೇಶಗಳಲ್ಲಿ ನಡೆದ ಸ್ತ್ರೀಪರ ಚಿಂತನೆ ಮತ್ತು ಹೋರಾಟಗಳ ಫಲವಾಗಿ ಮೂಡಿದ ಸ್ತ್ರೀವಾದ ನವ್ಯೋತ್ತರ ಮಹಿಳಾ ಲೇಖಕಿಯರ ಮೇಲೆ ಪ್ರಭಾವ ಬೀರಿದೆ. ಸ್ತ್ರೀವಾದದಿಂದ ಉತ್ತೇಜನಗೊಂಡ ಮಹಿಳಾ ಸಾಹಿತಿಗಳು ಮಹಿಳೆಯರಿಗೆ ಸ್ವಾತಂತ್ರ್ಯ, ಸಮಾನ ಹಕ್ಕು, ಅವಕಾಶಗಳನ್ನು ಸಾಹಿತ್ಯದ ಮೂಲಕ ಹೊರಹೊಮ್ಮಿಸಿರುವುದು ಕಾಣುತ್ತದೆ.

ಮೇಲೆ ನೋಡಿದ ವಿವಿಧ ಚಿಂತನೆಗಳು, ವಿಚಾರಧಾರೆಗಳು, ಚಳುವಳಿಗಳು, ಹೋರಾಟಗಳು, ಘಟನೆಗಳು ನವ್ಯೋತ್ತರ ಕನ್ನಡ ಮಹಿಳಾ ಲೇಖಕಿಯರ ಮೇಲೆ ಪ್ರಭಾವ ಬೀರಿರುವುದು ಮತ್ತು ಪ್ರೇರಕಗಳಾಗಿರುವುದು ಕಂಡುಬರುತ್ತದೆ. ಜಾಗೃತಗೊಂಡ ಹೆಣ್ಣು ತನಗೇನು ಬೇಕು, ತನ್ನ ಸ್ವಾತಂತ್ರ್ಯ, ಸಮಾನತೆ, ಹಕ್ಕುಗಳು ಏನು ಎಂಬುದನ್ನು ಕಥಾ ಸಾಹಿತ್ಯದ ಮೂಲಕ ವ್ಯಕ್ತಪಡಿಸಿದ್ದು ನವ್ಯೋತ್ತರ ಕಾಲಘಟ್ಟದಲ್ಲಿಯೇ. ಅಲ್ಲಿಯವರೆಗೂ ಪುರುಷ ರೂಪಿಸಿದ ಮಾದರಿಗಳ ಇತಿಮಿತಿಯಲ್ಲೇ ನರಳುತ್ತಿದ್ದ ಸ್ತ್ರೀಪಾತ್ರಗಳು ಅವರ ಅಭಿಪ್ರಾಯ, ಆಸೆ, ಆಕಾಂಕ್ಷೆಗಳನ್ನು, ಬೇಕು–ಬೇಡಗಳನ್ನು ಅಭಿವ್ಯಕ್ತಿಸಲು ಪ್ರಾರಂಭಿಸಿದವು. ಈ ಬೆಳವಣಿಗೆಗೆ ಮೇಲೆ ಚರ್ಚಿಸಿದ ಎಲ್ಲ ಚಿಂತನೆ, ವಿಚಾರಧಾರೆಗಳು ಪ್ರಭಾವವನ್ನು ಬೀರಿರುವುದು ಕಂಡುಬರುತ್ತದೆ.

ಅಧ್ಯಾಯ 3

ಅಧ್ಯಾಯ – 3

ಸಮಾನತೆಯ ಪರಿಕಲ್ಪನೆ ಒಂದು ವಿಶ್ಲೇಷಣೆ

ಈ ಅಧ್ಯಾಯದಲ್ಲಿ ಸಮಾನತೆಯ ಪರಿಕಲ್ಪನೆ ಮತ್ತು ಸ್ತ್ರೀವಾದಿ ನೆಲೆಯಲ್ಲಿ ಸಮಾನತೆಯ ಅಂಶಗಳನ್ನು ವಿಶ್ಲೇಷಿಸಲಾಗಿದೆ. ಈ ಅಧ್ಯಯನದ ಮುಖ್ಯ ಧ್ಯೇಯ ಮಹಿಳಾ ಸಾಹಿತ್ಯದಲ್ಲಿ ಸಮಾನತೆಯ ವಿಷಯ ವ್ಯಕ್ತವಾಗಿರುವುದರಿಂದ ಸ್ತ್ರೀ–ಪುರುಷರ ನಡುವಿನ 'ಸಮಾನತೆ'ಯ ಪರಿಕಲ್ಪನೆಯನ್ನು ವಿಶ್ಲೇಷಿಸುವುದು ಅವಶ್ಯಕವಾಗುತ್ತದೆ. 'ಸಮಾನತೆ' ಪದವೇ ಸೂಚಿಸುವಂತೆ ಸಮಾನ ಎಂದರ್ಥ, ಅಂದರೆ ಎಲ್ಲರೂ, ಎಲ್ಲವೂ ಸಮಾನ. ಎಲ್ಲರೂ ಎಲ್ಲವೂ ಎನ್ನುವುದರಲ್ಲಿ ಸಕಲ ಮನುಷ್ಯರು ಸಮಾನರು ಎಂದಾಗುತ್ತದೆ. 'ಸಮಾನತೆ' ಪದ ಬಹಳ ಮಹತ್ವದ ಪರಿಕಲ್ಪನೆಯಾಗಿದೆ. ಸಮಾಜದಲ್ಲಿ ಮಾನವರ ನಡುವೆ ಇರುವ ಅಸಮಾನತೆ, ಮೇಲು–ಕೀಳು, ತಾರತಮ್ಯ, ಶೋಷಣೆಗಳು ಸಮಾನತೆಯ ಮಹತ್ವ ಮತ್ತು ಅಗತ್ಯವನ್ನು ಹೆಚ್ಚಿಸಿವೆ. ಸಮಾಜದಲ್ಲಿ ಸಮಾನತೆಯ ವಿಷಯ ಹುಟ್ಟಿದೆ, ಚರ್ಚಿಸಲ್ಪಡುತ್ತಿದೆ ಎಂದರೆ ಅಸಮಾನತೆ ಪ್ರಚಲಿತದಲ್ಲಿರುವುದು ತಿಳಿಯುತ್ತದೆ. ಪ್ರಕೃತಿಯಲ್ಲಿ ಸಹಜವಾಗಿ, ಸಮಾನವಾಗಿ ಹುಟ್ಟಿದರೂ, ಗಂಡು–ಹೆಣ್ಣಿನ ನಡುವೆ ತಾರತಮ್ಯ ಮೇಲು–ಕೀಳು ಎನ್ನುವ ಬೇಧ ಆಳವಾಗಿ ಬೇರೂರಿದ್ದು, ಲಿಂಗ ತಾರತಮ್ಯ ಬೆಳೆದು ಮಹಿಳೆ ಶೋಷಣೆ ಮತ್ತು ದೌರ್ಜನ್ಯಕ್ಕೆ ಒಳಗಾಗಿದ್ದಾಳೆ. ಸಮಾಜದಲ್ಲಿ ಹೆಣ್ಣು ನಾಲ್ಕು ಗೋಡೆಗಳ ಮಧ್ಯಕ್ಕೆ ಸೀಮಿತವಾಗಿ ಜೀವನದ ಎಲ್ಲ ಸ್ತರಗಳಲ್ಲೂ ಸ್ತ್ರೀ–ಪುರುಷರ ನಡುವೆ 'ಅಸಮಾನತೆ'ಯ ಗೋಡೆ ಬೃಹದಾಕಾರವಾಗಿ ಎದ್ದಿದೆ. ಈ ಹಿನ್ನೆಲೆಯಲ್ಲಿ ಮಹಿಳಾ ಸಾಹಿತ್ಯ ಮತ್ತು ಮಹಿಳಾ ಚಿಂತಕರು ಚಿತ್ರಿಸಿರುವ ಸ್ತ್ರೀ–ಪುರುಷರ ನಡುವಿನ ಸಮಾನತೆ ಮತ್ತು ಅಸಮಾನತೆಯ ಪರಿಕಲ್ಪನೆ, ಅಸಮಾನತೆಯ ಹುಟ್ಟು, ಕಾರಣ, ಸ್ವರೂಪ ಮತ್ತು ಸ್ತ್ರೀವಾದಿ ಹಿನ್ನೆಲೆಯಲ್ಲಿ ಸಮಾನತೆಯನ್ನು ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

'ಸಮಾನತೆ' ಪದವು ಸಾಮಾನ್ಯವಾಗಿ ಸಮಾಜದಲ್ಲಿ ಎಲ್ಲ ವ್ಯಕ್ತಿಗಳು ಒಂದೇ ಎಂದು ತಿಳಿಸುತ್ತದೆ. ಈ ಅಧ್ಯಯನದಲ್ಲಿ 'ಸಮಾನತೆ' ಪರಿಕಲ್ಪನೆಯನ್ನು ಸ್ತ್ರೀ ಮತ್ತು ಪುರುಷರ ನಡುವಿನ ಸಮಾನತೆಯನ್ನು ಅರಿಯುವ ದೃಷ್ಟಿಕೋನದಲ್ಲಿ ಬಳಸಲಾಗಿದೆ. ಸ್ತ್ರೀ–ಪುರುಷರ ನಡುವಿನ ಸಮಾನತೆ ಕೌಟುಂಬಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಅವರಿಬ್ಬರ ನಡುವಿನ ಸ್ಥಾನಮಾನ, ಅಧಿಕಾರ, ಹಕ್ಕು, ಕರ್ತವ್ಯಗಳನ್ನು ಸೂಚಿಸುತ್ತದೆ. ಈ ಎಲ್ಲ ಅಂಶಗಳಲ್ಲೂ ಪುರುಷರು ಮತ್ತು ಮಹಿಳೆಯರು ಒಂದೇ ನೆಲೆಯಲ್ಲಿ, ಒಂದೇ ತರನಾದ ಅಧಿಕಾರ, ಅಂತಸ್ತು ಮತ್ತು ಹಕ್ಕುಗಳನ್ನು ಅನುಭವಿಸಿದಾಗ 'ಸಮಾನತೆ'ಯನ್ನು ಕಾಣಬಹುದು. ಇದಕ್ಕೆ ಪೂರಕವಾಗಿ

ಜೆರಾಲ್ಡಿನ್ ಫೋರ್ಬ್ಸ್‌ರವರ "ಯಾವುದೇ ಒಂದು ವ್ಯಕ್ತಿಯನ್ನು ಗುರುತಿಸುವಾಗ, ಯಾವುದೇ ಐತಿಹಾಸಿಕ, ಸಾಮಾಜಿಕ ಅಥವಾ ಸಾಂಸ್ಕೃತಿಕ ಸಂದರ್ಭಗಳಲ್ಲಿ, ಅಧಿಕಾರಶಕ್ತಿ ಹಾಗೂ ಲಿಂಗ ವ್ಯವಸ್ಥೆಯ ಆಯಾಮಗಳಲ್ಲಿ ಆ ವ್ಯಕ್ತಿಯ ಸಂಬಂಧಗಳನ್ನು ಸಮಾನವಾಗಿ ಗುರುತಿಸಲಾಗುತ್ತದೆ" (ಶ್ರೀಮತಿ ಎಚ್.ಎಸ್. 2001: ಪುಟ 12) ಮಾತುಗಳನ್ನು ಗಮನಿಸಬಹುದು. ಹಾಗಾದರೆ ಸ್ತ್ರೀ-ಪುರುಷರ ನಡುವಿನ ಸಮಾನತೆ ಎಂದರೇನು? ಸ್ತ್ರೀ-ಪುರುಷರ ಸಮಾನತೆ ಎಂದರೆ ಸ್ತ್ರೀ-ಪುರುಷರಿಬ್ಬರೂ ಎಲ್ಲ ದೈನಂದಿನ ಮತ್ತು ವ್ಯಾವಹಾರಿಕ ನಿರ್ಣಯಗಳನ್ನು ಕೈಗೊಳ್ಳುವಲ್ಲಿ, ಸಂಪತ್ತಿನ ವಿಷಯದಲ್ಲಿ ಸಮಾನರು ಮತ್ತು ಸಮಾನ ಅವಕಾಶ ಪಡೆದವರು ಎಂದು ತಿಳಿಯಬಹುದು. ಶತಮಾನಗಳಿಂದ ಪುರುಷನ ದೌರ್ಜನ್ಯಕ್ಕೆ ಮತ್ತು ತುಳಿತಕ್ಕೆ ಒಳಗಾಗಿರುವ ಮಹಿಳೆಗೆ ಮೇಲೆ ತಿಳಿಸಿದ ಎಲ್ಲ ಅಂಶಗಳಲ್ಲೂ ಸಮಾನ ಅವಕಾಶ ಮತ್ತು ಸ್ಥಾನ ದೊರಕಬೇಕು.

'ಸಮಾನತೆ'ಯ ಪರಿಕಲ್ಪನೆಯನ್ನು ಮಹಿಳಾ ಸಾಹಿತ್ಯ ವಿವಿಧ ದೃಷ್ಟಿಕೋನಗಳಿಂದ ಚಿತ್ರಿಸುತ್ತದೆ. ಅನಾದಿ ಕಾಲದಿಂದಲೂ ಮಹಿಳೆ ಸಮಾನತೆಯಿಂದ ವಂಚಿಸಲ್ಪಟ್ಟಿರುವುದು ಗಂಭೀರ ವಿಷಯವಾಗಿದೆ. ಸಮಾಜದ ರಚನೆಯಲ್ಲಿ ನಿರ್ಲಕ್ಷ್ಯಕ್ಕೊಳಗಾಗಿ ಮೂಲೆಗುಂಪಾಗಿರುವ ಮಹಿಳೆಯ ಪಾತ್ರದ ಮಹತ್ವವನ್ನು ತಿಳಿಸುತ್ತಾ ಮನುಷ್ಯ-ಮನುಷ್ಯರ ನಡುವಿನ ಸಮಾನತೆಯನ್ನು ಬಯಸುವುದು ಮಹಿಳಾ ಸಾಹಿತ್ಯದ ಧ್ಯೇಯಗಳಲ್ಲೊಂದಾಗಿದೆ. ಸ್ತ್ರೀ-ಪುರುಷರ ಸಮಾನತೆಯನ್ನು ಪ್ರತಿಪಾದಿಸುವ ಸ್ತ್ರೀವಾದ ಸಮಾಜದಲ್ಲಿ ಪುರುಷನ ಬಲಿಷ್ಠ ಗುಣಗಳು ಹೆಣ್ಣಿನ ಮೃದುಗುಣಗಳಿಗಿಂತ ಮಹತ್ವದ್ದು ಎಂಬ ತಪ್ಪು ತಿಳುವಳಿಕೆಗಳನ್ನು ಹೋಗಲಾಡಿಸುವುದರ ಜೊತೆಗೆ ಮಹಿಳೆಯರ ವಿಮೋಚನೆ ಮತ್ತು ಸಮಾನತೆಗೆ ಒತ್ತಾಯಿಸುತ್ತದೆ. (ಮಂಗಳಾ ಪ್ರಿಯದರ್ಶಿನಿ, 2007). ಈ ನಿಟ್ಟಿನಲ್ಲಿ ಸಮಾನತೆ ಎಂದರೆ 'ಲಿಂಗವನ್ನು ಪರಿಗಣಿಸದೇ ವ್ಯವಹರಿಸುವ ಸ್ವಾತಂತ್ರ್ಯ ಮತ್ತು ಲಿಂಗದ ಕಾರಣದಿಂದಾಗಿಯೇ ವ್ಯವಸ್ಥಿತವಾಗಿ ಮಹಿಳೆಯರನ್ನು ಅಧೀನ ಸ್ಥಿತಿಯಲ್ಲಿಯೇ ಉಳಿಯುವಂತೆ ಮಾಡಿರುವ ಸ್ಥಿತಿಯಿಂದ ಮುಕ್ತಿಯನ್ನು ಪಡೆಯುವುದಾಗಿದೆ

3.1. ಅಸಮಾನತೆ: ಹುಟ್ಟು, ಕಾರಣ ಮತ್ತು ಸ್ವರೂಪ

ಇಂದು ಗಂಡು ಮತ್ತು ಹೆಣ್ಣಿನ ನಡುವಿನ ಸಮಾನತೆ ಮತ್ತು ಅಸಮಾನತೆಯ ವಿಷಯಗಳು ಬಹಳವಾಗಿ ಚರ್ಚಿತವಾಗುತ್ತಿವೆ. ಸ್ತ್ರೀಯನ್ನು ಎರಡನೆ ದರ್ಜೆಯ ಪ್ರಜೆಯಾಗಿ ಅಥವಾ ಕೆಳಮಟ್ಟದ ವ್ಯಕ್ತಿಯಾಗಿ ಚಿತ್ರಿಸಿ, ಅವಳನ್ನು ಶೋಷಿಸಿರುವುದು ಮತ್ತು ಶೋಷಿಸುತ್ತಿರುವುದನ್ನು ಈಗಲೂ ಕಾಣಬಹುದಾಗಿದೆ. ಇಂತಹ ಶೋಷಣೆ ಅಥವಾ

ಅಸಮಾನತೆಯ ಹುಟ್ಟು, ಕಾರಣಗಳು ಮತ್ತು ಅದರ ಸ್ವರೂಪವನ್ನು ಇಲ್ಲಿ ಚರ್ಚಿಸಲಾಗಿದೆ. ಅನಾದಿಕಾಲದಿಂದಲೂ ಮಹಿಳೆ ಪುರುಷನಿಗಿಂತ ಕೀಳು, ಪುರುಷನ ಅಧೀನ ಎಂಬ ಅಭಿಪ್ರಾಯಗಳು ಬೆಳೆದು ಬಂದಿವೆ. ಮಹಿಳೆಯನ್ನು ಆಸ್ತಿ ಅಥವಾ ವಸ್ತು ಎಂಬಂತೆ ತಿಳಿದು, ಅವಳನ್ನು ಎರಡನೆಯ ಪ್ರಜೆಯಾಗಿ ಮಾಡಿ, ಅಮಾನವೀಯತೆ ಮತ್ತು ಹಿಂಸೆಯನ್ನು ಅವಳ ಮೇಲೆ ಹೇರಲಾಗಿದೆ. ಇಂತಹ ಅಸಮಾನತೆ ಹುಟ್ಟಿದ್ದಾದರೂ ಹೇಗೆ? ಅಸಮಾನತೆಯ ಹುಟ್ಟನ್ನು ಶ್ರೀಮತಿ ಎಚ್.ಎಸ್. ರವರು ವ್ಯಕ್ತಪಡಿಸಿದಂತೆ "ಜಾತಿ, ವರ್ಣ, ವರ್ಗ ಈ ಮುಂತಾದ ನೆಲೆಗಳಲ್ಲಿ ಸಮಾನತೆಯನ್ನು ಗುರುತಿಸಲಾಗಿದೆ. ಈ ಅಸಮಾನತೆಗಳ ಪೈಕಿ ಸ್ತ್ರೀ-ಪುರುಷ ನೆಲೆಯ ಅಸಮಾನತೆಯ ಸಮಸ್ಯೆಯನ್ನು ಪರಿಗಣಿಸಿ ಗಂಭೀರವಾದ ಆಲೋಚನೆಗಳು ಆರಂಭಗೊಂಡಿದ್ದೇ ಈಚಿನ ದಶಕಗಳಲ್ಲಷ್ಟೇ. ಅಸಮಾನತೆಯು ಆರಂಭಗೊಳ್ಳುವುದೇ ಒಬ್ಬರನ್ನು ತಮ್ಮ ನಿಯಂತ್ರಣದಲ್ಲಿರಿಸಿಕೊಳ್ಳಲು ಇನ್ನೊಬ್ಬರು ಮಾಡುವ ಪ್ರಯತ್ನದಿಂದಾಗಿ" (ವಿವಿಧ ಲೇಖಕರು, 2006ಅ: ಪುಟ 24). ಈ ಹಿನ್ನೆಲೆಯನ್ನು ಗಮನಿಸಿದರೆ, ಪ್ರತಿಯೊಂದು ಸಾಮಾಜಿಕ ವ್ಯವಸ್ಥೆಯೂ, ತನ್ನ ಏಳಿಗೆಗಾಗಿ ಸಮಾಜದ ಜವಾಬ್ದಾರಿಗಳನ್ನು ತನ್ನ ಸದಸ್ಯರ ಮೇಲೆ, ಅವರ ಲಿಂಗ, ವಯಸ್ಸು ಮತ್ತು ಸಾಮರ್ಥ್ಯಗಳನ್ನು ಆಧರಿಸಿ ಹಂಚಿರುತ್ತದೆ. ಈ ವಿತರಣೆಯು ಕಾಲ, ಧರ್ಮ ಮುಂತಾದವುಗಳನ್ನು ಆಧರಿಸಿ ಬದಲಾಗಿರುತ್ತದೆ ಮತ್ತು ಬದಲಾಗುತ್ತಿರುತ್ತದೆ. ಇಂತಹ ವ್ಯವಸ್ಥೆಯಲ್ಲಿ ಸ್ತ್ರೀ-ಪುರುಷರ ನಡುವೆ ಮಾನಸಿಕ ವ್ಯತ್ಯಾಸವುಂಟಾಗಿ ಅವರಿಬ್ಬರೂ ಭಿನ್ನ ಎಂಬ ಅಭಿಪ್ರಾಯ ಬೆಳೆದಿರಬಹುದು. ಇದೇ ರೀತಿ ವೃತ್ತಿಗಳನ್ನಾಧರಿಸಿ ನೋಡುವುದಾದರೆ ಗಂಡು ಮತ್ತು ಹೆಣ್ಣು ನಿರ್ವಹಿಸುವ ಕೆಲಸ ಕಾರ್ಯಗಳು ವಿಭಜಿತಗೊಂಡು ಭಿನ್ನವಾಗಿರುವುದನ್ನು ಕಾಣಬಹುದು. ಆದರೆ ಈ ವೃತ್ತಿ ವಿಭಜನೆ ವ್ಯಕ್ತಿಯ ಶಕ್ತಿ ಸಾಮರ್ಥ್ಯವನ್ನು ಆಧರಿಸಿಲ್ಲ. ಏಕೆಂದರೆ ಆದಿಕಾಲದಲ್ಲಿ ಹೆಣ್ಣೇ ತನ್ನ ಗುಂಪಿನ ಎಲ್ಲ ಸದಸ್ಯರ ಅಗತ್ಯಗಳನ್ನು ಪೂರೈಸುತ್ತಾ ಆ ತಂಡದ ನಾಯಕಿಯಾಗಿ ಪ್ರಮುಖ ಪಾತ್ರ ನಿರ್ವಹಿಸುತ್ತಿರುತ್ತಾಳೆ. ಕಾಲಾನಂತರ ವ್ಯವಸಾಯ ಮತ್ತು ಪಶುಸಂಗೋಪನೆ ಮುಂತಾದ ನಾಗರೀಕತೆಗಳು ಬೆಳೆದಂತೆ ಸ್ತ್ರೀ ಮತ್ತು ಪುರುಷರ ಪಾತ್ರದಲ್ಲಿ ಗಣನೀಯ ಬದಲಾವಣೆಗಳಾಗಿವೆ. ಈ ಬದಲಾವಣೆಗಳು ಸ್ತ್ರೀ-ಪುರುಷರ ನಡುವಿನ ಅಸಮಾನತೆಗೆ ನಾಂದಿಯಾಡಿವೆ. ಮಾನವ ಬೇಟೆಯನ್ನೇ ಅವಲಂಬಿಸಿ ಜೀವಿಸುತ್ತಿದ್ದ ಸಮಯದಲ್ಲಿ ಹೆಣ್ಣೇ ನಾಯಕಿಯಾಗಿ ತನ್ನ ಗುಂಪನ್ನು ಮುನ್ನಡೆಸುತ್ತಿದ್ದಳು. ಆದರೆ ವ್ಯವಸಾಯ ಮತ್ತು ಪಶುಸಂಗೋಪನೆಯ ಬೆಳವಣಿಗೆಯೊಂದಿಗೆ ಮಾನವ ಒಂದು ಕಡೆ ವಾಸ್ತವ್ಯ ಹೂಡಿ ಕುಟುಂಬ ಪದ್ಧತಿ ಪ್ರಾರಂಭವಾದಂತೆ ಸ್ತ್ರೀ-ಪುರುಷರ ನಡುವಿನ ಕೆಲಸ ಕಾರ್ಯಗಳು ಮತ್ತು ಜವಾಬ್ದಾರಿಗಳು ಹಂಚಿಕೆಯಾದವು. ಇವುಗಳಲ್ಲಿ ಸ್ತ್ರೀಯರು ಮನೆಯಲ್ಲೇ ಉಳಿದು ಮನೆಯ

ನಿರ್ವಹಣೆ, ಮಕ್ಕಳ ಲಾಲನೆ–ಪಾಲನೆ ಮುಂತಾದ ಕಾರ್ಯಗಳಿಗೆ ಸೀಮಿತವಾಗಿ, ಗಂಡಸರು ಮನೆಯ ಹೊರಗೆ ದುಡಿಯುವ ಮತ್ತು ಗಳಿಸುವ ಕಾರ್ಯದಲ್ಲಿ ತೊಡಗಿದರು. ದುಡಿಯುವ ಮತ್ತು ಗಳಿಸುವ ಪರಿಕಲ್ಪನೆ ಗಂಡು ಹೆಣ್ಣಿನ ನಡುವಿನ ಭಿನ್ನತೆಯನ್ನು ಹೆಚ್ಚು ಮಾಡಿತು. ಮನೆಯಲ್ಲೆ ಉಳಿದು, ಗಳಿಸದಿರುವ ಸ್ತ್ರೀ ಕೆಳಹಂತಕ್ಕೆ ನೂಕಲ್ಪಟ್ಟಳು. ಇದು ಅಸಮಾನತೆಯ ಮೊದಲಾಗಿದೆ.

ಗಂಡಸಿನ ಪ್ರಾಬಲ್ಯ ಹೆಚ್ಚುತ್ತಾ ಮಹಿಳೆಯ ಸ್ಥಿತಿ ಅಧೋಗತಿಗೆ ಇಳಿದು ಅವಳು ಗಂಡಸಿನ ಮೇಲೆ ಪೂರ್ಣಾವಲಂಬಿಯಾಗುವಂತೆ ಮಾಡಿದೆ. ಇದಕ್ಕೆ ಪೂರಕವಾಗಿ ಹೆಣ್ಣಿಗೆ ನಿಸರ್ಗ ಸಹಜವಾಗಿರುವ ಮೈನೆರೆಯುವುದು, ಗರ್ಭಧರಿಸುವುದು, ಹೆರಿಗೆ, ಸ್ತನ್ಯಪಾನ, ಮುಟ್ಟು ನಿಲ್ಲುವುದು ಹೆಣ್ಣನ್ನು ಗಂಡಿನಿಂದ ಭಿನ್ನವಾಗಿರುವಂತೆ ಮಾಡಿದೆ. ಈ ಭಿನ್ನತೆಯನ್ನು ಹೆಣ್ಣಿನ ದೌರ್ಬಲ್ಯವೆಂದು ಪರಿಗಣಿಸಿದ ಪುರುಷ ಹೆಣ್ಣು ಹೆಚ್ಚು ಅವಲಂಬಿಯಾಗುವಂತೆ ಮಾಡಿದೆ. ಈ ಅವಲಂಬನೆ ಅಸಮಾನತೆಯನ್ನು ಹೆಚ್ಚಿಸುತ್ತಾ ಹೋಗಿದೆ. ಇದರ ಜೊತೆಗೆ ನಾಗರೀಕತೆ ಬೆಳೆದಂತೆ ಗುಂಪು, ಜನಾಂಗಗಳು ಬೆಳೆದು, ಜಾತಿ–ಕುಲಗಳು ಬೆಳೆದಿವೆ. ಈ ಎಲ್ಲ ಬೆಳವಣಿಗೆಗಳು ಸಮಾಜದಲ್ಲಿ ಅಸಮಾನತೆಯನ್ನು ಹುಟ್ಟು ಹಾಕಿವೆ. ಪುರುಷ ಪ್ರಧಾನ ವ್ಯವಸ್ಥೆ ಬಲವಾಗಿ ಬೆಳೆಯುತ್ತಾ ಹೋದಂತೆ ಸ್ತ್ರೀಯನ್ನು ಕನಿಷ್ಠವಾಗಿ ಕಾಣುತ್ತಾ ಅವಳನ್ನು ಗಂಡಸಿಗೆ ಅಧೀನಳನ್ನಾಗಿ ಮಾಡಿ ನಿಕೃಷ್ಟಗೊಳಿಸಲಾಗಿದೆ. ಚರಿತ್ರೆಯನ್ನು ಬರೆದ ಪುರುಷ ತಮಗೆ ಅನುಕೂಲವಾಗುವಂತೆ ಹೆಣ್ಣಿಗೆ ವಿನಯ, ಸಹನೆ, ದೇವರು, ಮಾತೆ ಎಂಬ ಸ್ಥಾನ ಕಲ್ಪಿಸಿ ತನ್ನ ಅಧೀನಳನ್ನಾಗಿಸಿಕೊಂಡಿದ್ದಾನೆ. ಅಲೆಮಾರಿ ಹಂತದ ಮಾನವ ಪ್ರಕೃತಿಯ ಮೇಲೆ ನಿಯಂತ್ರಣವನ್ನು ಹೊಂದುತ್ತಾ ಬಂದಂತೆ ಮಾನವ ಸಮಾಜದಲ್ಲಿ ಅಸ್ತಿತ್ವದ ಹೋರಾಟವೇ ಮುಖ್ಯವಾಗಿ ಜೈವಿಕ ಮತ್ತು ಆರ್ಥಿಕ ಸಂದರ್ಭಗಳು ಸ್ತ್ರೀ–ಪುರುಷರನ್ನು ಶ್ರೇಷ್ಠ–ಕನಿಷ್ಠರೆಂದು ನಿರ್ಧರಿಸಿವೆ. ಅಂದೇ ಹೆಣ್ಣು ಅಸಮಾನತೆ ಎಂಬ ಅಂಗವಿಕಲತೆಗೆ ಸಿಲುಕಿದ್ದು, ನಂತರ ಪಿತೃಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣಿನ ಶೋಷಣೆ ಅಧಿಕವಾಯಿತು. ಒಂದುಕಡೆ ನೆಲೆನಿಂತ ಮಾನವ ಪರಿಸರದ ಮೇಲೆ ನಿಯಂತ್ರಣವನ್ನು (ಒಡೆತನವನ್ನು) ಸಾಧಿಸಿದ. ಈ ವಿಷಯದಲ್ಲಿ ಗಂಡಿಗೆ ಸ್ತ್ರೀಯೂ ಆಸ್ತಿಯಾಗಿ ಬಿಟ್ಟಳು.

ಸ್ತ್ರೀಯನ್ನು ಅಧೀನದಲ್ಲಿಡಲು ಪುರುಷ ಸಮಾಜ ಸ್ತ್ರೀಯರಿಗೆ ಇಂತಹದ್ದೇ ಗುಣಗಳಿರಬೇಕು ಎಂಬುದನ್ನು ರಚಿಸಿದೆ. ಈ ಗುಣಗಳು ಹೆಣ್ಣನ್ನು ಪುರುಷನ ಅನುಯಾಯಿಯಾಗಿ, ಸ್ವತಂತ್ರ ವ್ಯಕ್ತಿತ್ವ, ವೈಚಾರಿಕತೆಯಿಲ್ಲದ, ಕೇವಲ ಗಂಡಿನ ಸೇವೆ ಮಾಡುವ ಗುಲಾಮಳ ರೀತಿ ಬೆಳೆಸುತ್ತವೆ. ಈ ಬೆಳವಣಿಗೆಗಳು ಹುಟ್ಟುತ್ತಾ ಸಮನಾಗಿ ಹುಟ್ಟಿದರೂ

ಸ್ತ್ರೀಯನ್ನು ಪುರುಷಾಧೀನವಾಗಿ ಬೆಳೆಸುವ ಲಿಂಗತಾರತಮ್ಯ ವ್ಯವಸ್ಥೆ ಬೆಳೆಸಿ ಗಟ್ಟಿಗೊಳಿಸಿದವು. ಈ ಲಿಂಗ ತಾರತಮ್ಯತೆ ಹೆಣ್ಣಿನ ಜೀವನದ ಎಲ್ಲಾ ಸ್ಥರಗಳನ್ನು ಆಕ್ರಮಿಸಿ, ಅವಳನ್ನು ಪುರುಷಾಧೀನಳಾಗಿ ಮಾಡಿದೆ. ಈ ಅಧೀನತೆಯನ್ನು ಸಾಮಾಜಿಕ, ಧಾರ್ಮಿಕ, ಆರ್ಥಿಕ, ರಾಜಕೀಯ ನೀತಿ–ನಿಯಮಗಳ ಮುಖಾಂತರ ಹೇರಲಾಗಿದೆ.

ಸ್ತ್ರೀಯರಿಗೆ ತಾಯಿ, ಹೆಂಡತಿ, ಮಗಳು, ಮಹಾತಾಯಿ, ಕನ್ಯಾಕುಮಾರಿ ಎಂಬ ಗೌರವ ಗುಣಗಳನ್ನು ನೀಡಿದೆ ಸಮಾಜ, ಆದರೆ ಆ ಗುಣಗಳನ್ನು ಸಹಜವಾಗಿ ಬಳಸದೆ ಪುರುಷನಿಗೆ ಅನುಕೂಲವಾಗುವಂತೆ ಬಳಸಲಾಗಿದೆ. ಅಂದರೆ, ಪುರುಷ ದೃಷ್ಟಿಕೋನದಲ್ಲಿ ಲಿಂಗಭೇದ ಎಂಬುದು ಆಕಸ್ಮಿಕವಾಗಿ ಸಂಭವಿಸಿದ್ದು. ಇಲ್ಲಿ ಹೆಣ್ಣಿನ ಪಾತ್ರ ಶೂನ್ಯ ಎಂದು ತಿಳಿಯುತ್ತದೆ. ಅವಳಿಗೆ ಯಾವುದೇ ನಾಮಗುಣಗಳನ್ನು ಹೇರಿದರೂ ಅವಳು ಪುರುಷನಿಗೆ ಸಮಾನಳಲ್ಲ.

ಸಮಾಜದಲ್ಲಿ ಸ್ತ್ರೀ–ಪುರುಷರ ನಡುವಿನ ಅಸಮಾನತೆಯನ್ನು ವಿವಿಧ ರೀತಿಯಲ್ಲಿ ಕಾಣಬಹುದು. ಧರ್ಮಶಾಸ್ತ್ರ, ತತ್ವಶಾಸ್ತ್ರಗಳು ಹೆಣ್ಣನ್ನು ಮಾನವನ ಸೃಷ್ಟಿಯಾದಂದಿನಿಂದಲೇ ಪುರುಷಾಧೀನ ಎಂದು ಹೇಳುತ್ತವೆ. ಇದೇ ರೀತಿ ಮುಸ್ಲಿಂ ಧರ್ಮದಲ್ಲಿ "ದೇವರು ಗಂಡಸರಿಗೆ ನೀಡಿರುವ ಗುಣಗಳ ಪ್ರಮಾಣಗಳ ದೃಷ್ಟಿಯಿಂದ ಹೆಣ್ಣು ಅಧಮಳು. ಅಲ್ಲದೆ ಈ ಗಂಡಸರು ಹೆಣ್ಣನ್ನು ಹಣ ತೆತ್ತು ಕೊಂಡುಕೊಳ್ಳುವುದಾಗಿ ಅವರೇ ಉತ್ತಮರು" ಎನ್ನುತ್ತದೆ ಖುರಾನ್. "ಉತ್ತಮ–ಅಧಮರ ಕಲ್ಪನೆಯೇ ಅಸಮಾನತೆಯನ್ನು ತೋರಿಸುತ್ತದೆ" (ಶ್ರೀಮತಿ ಎಚ್. ಎಸ್., 2007: ಪುಟ 95). ಕ್ರೈಸ್ತ ಧರ್ಮದ ಸಂತ ಪಾಲ್ "ಕ್ರಿಸ್ತನು ಚರ್ಚಿನ ನಾಯಕ ಹೇಗೋ ಹಾಗೆ ಹೆಂಡತಿಗೆ ಗಂಡ ನಾಯಕ. ಚರ್ಚು ಕ್ರಿಸ್ತನಿಗೆ ಅಧೀನ. ಹಾಗೆಯೇ ಹೆಂಡತಿ ಗಂಡನಿಗೆ ಎಲ್ಲಾ ರೀತಿಯಲ್ಲೂ ಅಧೀನಳಾಗಿರಬೇಕು" (ಶ್ರೀಮತಿ ಎಚ್.ಎಸ್., 2007: ಪುಟ 111) ಎಂದು ಹೇಳುತ್ತಾನೆ. ಇಂತಹ ಧರ್ಮನೀತಿಗಳು ಹೆಣ್ಣನ್ನು ಗಂಡಿನ ಅಧೀನಳನ್ನಾಗಿ ಮಾಡಿ ಅಸಮಾನತೆಯನ್ನು ಸೃಷ್ಟಿಸಿವೆ. ಇದೇ ರೀತಿ ತತ್ವಶಾಸ್ತ್ರಗಳು ಕೂಡ ಪುರುಷನ ಹಿರಿಮೆಯನ್ನೆ ಸಾಧಿಸಿರುವುದು ಕಂಡುಬರುತ್ತದೆ.

ಅಸಮಾನತೆಯ ಹುಟ್ಟಿಗೆ ಕಾರಣವನ್ನು ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಚಾರಿತ್ರಿಕವಾಗಿ ಹುಡುಕಿದರೆ ಪ್ಲೇಟೋವಿನ 'The Ideal State' ಅಥವಾ 'ಆದರ್ಶ ರಾಜ್ಯ'ದಲ್ಲಿ ಕಾಣುವುದಿಲ್ಲ. ಪ್ಲೇಟೋ ವ್ಯಕ್ತಿಗೆ ಖಾಸಗಿ ಆಸ್ತಿಯ ಒಡೆತನದ ಹಕ್ಕನ್ನು ಕೊಡದೆ ನಿರ್ಬಂಧಿತ ವೈವಾಹಿಕ ಜೀವನವನ್ನು ಪ್ರಸ್ತಾಪಿಸಿ ಆರ್ಥಿಕ ಸಮಾನತೆಯನ್ನು

ಪ್ರತಿಪಾದಿಸಿದ್ದಾನೆ. ಆದರೆ ಸಾಕ್ರೆಟೀಸ್ ಖಾಸಗಿ ಆಸ್ತಿಯ ಒಡೆತನದ ಹಕ್ಕನ್ನು ಪ್ರತಿಪಾದಿಸಿ, ಸ್ವಂತ ಆಸ್ತಿಯಿಂದ ವ್ಯಕ್ತಿ ಹೆಚ್ಚು ಕ್ರಿಯಾಶೀಲನಾಗುತ್ತಾನೆ ಎಂದು ತಿಳಿಸಿದ್ದಾನೆ. ಇಂತಹ ಪ್ರತಿಪಾದನೆಗಳು ಮುಂದೆ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಅಸಮಾನತೆಗೆ ಕಾರಣವಾಗಿವೆ.

ಪೈಥಾಗೋರಸ್‌ನು "ಶ್ರೇಷ್ಠ ತತ್ವವೊಂದಿದೆ, ಅದು ವ್ಯವಸ್ಥೆಯನ್ನು, ಬೆಳಕನ್ನು ಮತ್ತು ಗಂಡಸನ್ನು ಸೃಷ್ಟಿಸಿದೆ. ಅಧಮ ತತ್ವವೊಂದಿದೆ ಅದು ಅವ್ಯವಸ್ಥೆಯನ್ನು, ಕತ್ತಲನ್ನು ಮತ್ತು ಹೆಣ್ಣನ್ನು ಸೃಷ್ಟಿಸಿದೆ' ಎನ್ನುತ್ತಾನೆ. ಮನು 'ಹೆಂಗಸು ಕೆಡುಕಿನ ಮೂಲವೆಂದೂ, ಅವಳನ್ನು ಗುಲಾಮಳನ್ನಾಗಿ ಇರಿಸಬೇಕು' ಎಂದು ಹೇಳಿದರೆ, ಲೆವಿಟಿಕಸ್ 'ಅಧಿಪತಿಗಳು ಹೊಂದಿರುವ ದುಡಿಯುವ ಪ್ರಾಣಿಗಳಂತೆ ಹೆಣ್ಣು' ಎಂದು ಹೇಳುತ್ತಾನೆ. ಸೋಲೋನ್‌ನ ಕಟ್ಟಳೆಗಳು ಮಹಿಳೆಗೆ ಎಲ್ಲಾ ಹಕ್ಕುಗಳನ್ನು ತಿರಸ್ಕರಿಸಿದರೆ, ರೋಮನ್ ಕಟ್ಟುಪಾಡುಗಳು ಹೆಣ್ಣಿಗೆ ಮಂದಬುದ್ಧಿಯೆಂದು" (ಶ್ರೀಮತಿ ಎಚ್.ಎಸ್., 2007: ಪುಟ 91) ಹೇಳಿ ಅವಳು ಸದಾ ಆಶ್ರಿತಳಾಗಿರಬೇಕೆಂದು ಪ್ರತಿಪಾದಿಸಿದವು. ಈ ಪ್ರತಿಪಾದನೆಗಳು ಮುಂದೆ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಅಸಮಾನತೆಗೆ ಕಾರಣವಾಗುವುದರ ಜೊತೆಗೆ ಸ್ತ್ರೀಯ ವ್ಯಕ್ತಿತ್ವ ಮತ್ತು ಪಾತ್ರವನ್ನು ಕಿರಿದುಗೊಳಿಸಿ ಸ್ತ್ರೀ–ಪುರುಷರ ಮಧ್ಯೆ ಅಸಮಾನತೆಯನ್ನು ಹುಟ್ಟು ಹಾಕಿದವು. "ಈ ಪ್ರಪಂಚದಲ್ಲಿ ಮಾನವ ಕುಲವು ಸೃಷ್ಟಿಗೊಂಡ ಆರಂಭ ಬಿಂದುವಿನಲ್ಲಿ ಪುರುಷನ ಜನನವಾಯಿತೆಂದೂ, ಎಷ್ಟೋ ಕಾಲದ ನಂತರದಲ್ಲಿ ಅವನ ಒಂದು ಆಟಿಕೆಯಾಗಿ ಸೇವಾಸಾಧನವಾಗಿ ಹೆಣ್ಣಿನ ಜನನವಾಯಿತೆಂದು ಕಲ್ಪಿಸುವ ತತ್ವಶಾಸ್ತ್ರದ ಚಿಂತನೆಗಳು ಕೂಡ ಗಂಡು–ಹೆಣ್ಣಿನ ಅಸಮಾನತೆಯನ್ನು ಚಿತ್ರಿಸಿವೆ" (ಶ್ರೀಮತಿ ಎಚ್.ಎಸ್. 2003ಅ: ಪುಟ 71) ಈ ಮಾತುಗಳೂ ಕೂಡ ಪುರುಷರಿಂದ ರಚಿತವಾದ ತತ್ವಶಾಸ್ತ್ರಗಳು ಹೆಣ್ಣನ್ನು ಸೇವಕಿಯ ಜೀವನಕ್ಕೆ ಮೀಸಲಿರಿಸಿರುವುದನ್ನು ತೋರಿಸುತ್ತವೆ. ಅಂದರೆ ಸಮಾಜದಲ್ಲಿ ಧರ್ಮಗಳು ಸಾರ್ವತ್ರಿಕ ಮನುಷ್ಯನ ಕಲ್ಪನೆಯನ್ನು ಹೊಂದಿವೆ ಎಂದು ಒಪ್ಪಲಾಗುವುದಿಲ್ಲ. ಏಕೆಂದರೆ ಅದು ಪ್ರಧಾನಧಾರೆ ಪುರುಷನಿಗೆ ಮಾತ್ರ ಸೀಮಿತವಾಗಿದ್ದು ಸ್ತ್ರೀಯರನ್ನು ದ್ವಿತೀಯ ದರ್ಜೆಯ ವ್ಯಕ್ತಿಯಾಗಿ ಪರಿವರ್ತಿಸಿದೆ.

ಸಮಾಜದಲ್ಲಿ ಮನುಷ್ಯ ಬೆಳೆದಂತೆಲ್ಲ ಅವನ ಸುತ್ತಮುತ್ತಲಿನ ಸನ್ನಿವೇಶ, ಪರಿಸರವೂ ಸ್ತ್ರೀ–ಪುರುಷರ ನಡುವಿನ ತಾರತಮ್ಯತೆಯನ್ನು ಹೆಚ್ಚಿಸುತ್ತದೆ, "ಅಂದರೆ ಸಮಾಜವು ನಾಗರೀಕತೆ, ಸಂಸ್ಕೃತಿಯ ಹೆಸರಿನಲ್ಲಿ ಹಲವು ಕಟ್ಟುಪಾಡುಗಳ ವಿಧಿ–ನಿಷೇಧಗಳ ಮೂಲಕ ಮನುಷ್ಯರ ಸಹಜ ಗುಣವನ್ನು ಹತ್ತಿಕ್ಕುತ್ತದೆ" (ಸಬಿಹಾ ಭೂಮಿಗೌಡ, 2012: ಪುಟ 27). ಇದೇ ಬೆಳವಣಿಗೆಯೇ ಸ್ತ್ರೀಯರನ್ನು ಪುರುಷಾಧೀನರನ್ನಾಗಿ ಮಾಡಿ ಅವಳ ವ್ಯಕ್ತಿತ್ವವನ್ನು ಹತ್ತಿಕ್ಕಿ ಗುಲಾಮಳನ್ನಾಗಿ

ಮಾಡಿದೆ ಹಾಗೂ ಹುಟ್ಟುತ್ತಾ ಸಮನಾಗಿ ಹುಟ್ಟಿದರೂ ಬೆಳೆದ ಪರಿಸರ ಹೆಣ್ಣನ್ನು ಅಸಮಾನತೆಗೆ ದೂಡಿರುವುದು ಕಂಡುಬರುತ್ತದೆ.

ಹೆಣ್ಣು ಕುಟುಂಬ ಮತ್ತು ಸಮಾಜದಲ್ಲಿ ಹಲವಾರು ಜವಾಬ್ದಾರಿ, ಕೆಲಸ ಕಾರ್ಯಗಳನ್ನು ನಿಭಾಯಿಸುತ್ತಾಳೆ. ಕುಟುಂಬದಲ್ಲಿ ಮಗಳಾಗಿ, ಹೆಂಡತಿಯಾಗಿ, ತಾಯಿಯಾಗಿ ವಿವಿಧ ಪಾತ್ರಗಳನ್ನು ನಿಭಾಯಿಸುವ ಹೆಣ್ಣು, ಸಮಾಜದಲ್ಲಿ ಸಾಮಾಜಿಕ, ಧಾರ್ಮಿಕ, ಆರ್ಥಿಕ, ರಾಜಕೀಯ ಚಟುವಟಿಕೆಗಳಲ್ಲೂ ಭಾಗಿಯಾಗುತ್ತಾಳೆ. ಆದರೆ ಅವಳ ಈ ವಿಭಿನ್ನ ಪಾತ್ರ, ಜವಾಬ್ದಾರಿಗಳ ನಿರ್ವಹಣೆಯೂ ಪುರುಷ ಪ್ರಧಾನ ಸಮಾಜದಲ್ಲಿ ಪರಿಗಣನೆಗೆ ಬರುವುದಿಲ್ಲ. ಕುಟುಂಬದಲ್ಲಿ ಅವಳು ಮಾಡುವ ಕೆಲಸಗಳು ಅವಳ ವ್ಯಕ್ತಿತ್ವ, ಸ್ಥಾನಮಾನವನ್ನು ಎತ್ತಿಹಿಡಿಯದೆ, ಅವಳನ್ನು ಕೇವಲ ಸೇವಕಿಯ ಸ್ಥಾನದಲ್ಲೇ ಸಮಾಜ ನೋಡುವುದು ಕಾಣುತ್ತದೆ. ಗಾಯತ್ರಿ ನಾವಡ ಅವರ ಪ್ರಕಾರ "ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಕೇಂದ್ರವಾಗಿ ನಿಂತ ಗಂಡು ತನ್ನನ್ನು ಪರಿಪೂರ್ಣ 'ನಾನು' ಎಂದು ನಿರ್ವಚಿಸಿಕೊಂಡು ಹೆಣ್ಣು 'ಅನ್ಯ'ವಾಗಿ ಪರಿಭಾವಿಸಿದ. ಹೀಗೆ ಅನ್ಯ-ಅನುಬಂಧವಾಗಿ ಸೇರಲ್ಪಟ್ಟ ಹೆಣ್ಣಿನ ಭಿನ್ನತೆಯನ್ನು ಬೇಧವಾಗಿ ಗ್ರಹಿಸಲಾಯಿತು. ಗಂಡು ಹುಟ್ಟಿನೊಂದಿಗೆ ಅಸ್ತಿತ್ವವನ್ನು ಪಡೆದುಕೊಂಡರೆ, ಜೈವಿಕ ಹಾಗೂ ಸಾಮಾಜಿಕ ಸ್ಥಿತ್ಯಂತರಗಳಿಗೆ ಎದುರಾಗುವ ಹೆಣ್ಣಿಗೆ ಹುಡುಕಾಟವೇ ದೊಡ್ಡ ಹೋರಾಟ. ಗಂಡು ಅರ್ಥೈಸಿದ ಹೆಣ್ಣಿನ ಅಸ್ತಿತ್ವ, ವ್ಯಕ್ತಿತ್ವ, 'ಕುಟುಂಬಿನಿ', 'ಜಗನ್ಮಾತೆ', 'ವೇಶ್ಯೆ', ಮಾದರಿಯವು. ಈ ಮಾದರಿಗಳಿಗೆ ಒಗ್ಗುವಂತೆ ಹೆಣ್ಣಿನ ಗುಣ ಸ್ವಭಾವ, ವ್ಯಕ್ತಿತ್ವವನ್ನು ವೈಭವೀಕರಿಸಲಾಯಿತು, ಇಲ್ಲವೇ ಪತಿತಗೊಳಿಸಲಾಯಿತು" (ಗಾಯತ್ರಿ ನಾವಡ 1999: ಪುಟ 156). ಅಂದರೆ ಹೆಣ್ಣನ್ನು ಪುರುಷ ಸಮಾಜ ಅನ್ಯಳಾಗಿಯೇ ನೋಡಿ ಅವಳ ವ್ಯಕ್ತಿತ್ವ ಮತ್ತು ಅಸ್ತಿತ್ವವನ್ನೇ ಇಲ್ಲವಾಗಿಸಿತು. ಇದು ಮಹಿಳೆಯ ಕುಟುಂಬದಲ್ಲಿನ ಕೆಲಸ ಕಾರ್ಯಗಳು ಗೌಣವಾಗಿ ಪರಿಗಣನೆಗೆ ತೆಗೆದುಕೊಳ್ಳಲಾರದಂತಹ ಸ್ಥಿತಿಯನ್ನು ನಿರ್ಮಾಣ ಮಾಡಿದೆ ಮತ್ತು ಈ ಮೂಲಕ ಲಿಂಗಾಧಾರಿತ ಅಸಮಾನತೆಯನ್ನು ಹುಟ್ಟುಹಾಕಿದೆ. ಇಂತಹ ಲಿಂಗಾಧಾರಿತ ಅಸಮಾನತೆಯಿಂದ ಸ್ತ್ರೀ ಸಮಾಜವು ನೋವು, ಅನ್ಯಾಯಗಳನ್ನು ಅನುಭವಿಸಿ ತನ್ನ ಅಸ್ತಿತ್ವವನ್ನೆ ಕಳೆದುಕೊಂಡಿದೆ. ಈ ನಿಟ್ಟಿನಲ್ಲಿ ವಿಜಯಾ ದಬ್ಬೆಯವರು "ಪ್ರಾಣಾಂತಿಕವಾದ, ಉಲ್ಭಣಿಸಿದ ಹಲವು ರೋಗಗಳು ಈ ಸಮಾಜದ ಪ್ರಾಣವನ್ನು ಒಟ್ಟಿಗೆ ಹಿಂಡುತ್ತಿವೆ. ಇಂಥ ರೋಗಗಳಲ್ಲಿ ಒಂದು ಲಿಂಗಾಧಾರಿತ ಅಸಮಾನತೆ. ಈ ಅಸಮಾನತೆಯಿಂದ ಮಹಿಳೆಯ ಜೀವ, ದೇಹ, ಬೌದ್ಧಿಕತೆ, ಭಾವುಕತೆಗಳಿಗೆ ಯಾವ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮೌಲ್ಯವನ್ನಾಗಲೀ

ಕೊಡದೆ ಅವರ ವ್ಯಕ್ತಿತ್ವವನ್ನು ಹತ್ತಿಕ್ಕಲಾಯಿತು" (ಶಶಿಕಲಾ ವೀರಯ್ಯಸ್ವಾಮಿ, 1995: ಪುಟ 155) ಎಂದು ಅಭಿಪ್ರಾಯ ಪಡುತ್ತಾರೆ.

ಹೆಣ್ಣನ್ನು ರೂಪಿಸಿದ ಪುರುಷ ಸಮಾಜ ಮಹಿಳೆಯೆಂದರೆ ವಶಪಡಿಸಿಕೊಳ್ಳಬಹುದಾದ ಹೊನ್ನು ಮಣ್ಣಿನ ಹಾಗೆ ಆಸ್ತಿ ಎಂದು ತಿಳಿದು, ಪುರುಷನು ಹೆಣ್ಣನ್ನು ಆಳಬೇಕು ಎಂದು ಬಯಸಿತು. ವಶಪಡಿಸಿಕೊಂಡ ಹೆಣ್ಣನ್ನು ಆಳಬೇಕಾದ್ದರಿಂದ ವಿಜಯಲಕ್ಷ್ಮಿ ಕೆ.ಎಂ. ರವರು ಹೇಳಿದಂತೆ "ಆರ್ಥಿಕವಾಗಿ, ಶೈಕ್ಷಣಿಕವಾಗಿ ಪ್ರಬಲತೆಯಲ್ಲಿದ್ದ ಪುರುಷರು, ಅವರ ಕ್ಷೇಮಕ್ಕಾಗಿ ಮತ್ತು ಅವರ ಹಿತಕ್ಕಾಗಿ ಪುರುಷನನ್ನು ಹಾಗೆಯೇ ರೂಪಿಸುತ್ತಾ ಬಂದರು" (2005: ಪುಟ 122). ಇದು ಪ್ರಬಲ ಪುರುಷ ಸಮಾಜ ಹೆಣ್ಣನ್ನು ಅಧೀನಳನ್ನಾಗಿ ಮಾಡಿಕೊಂಡ ಪ್ರಕ್ರಿಯೆಯನ್ನು ತೋರಿಸುತ್ತದೆ. ಇಂತಹ ಪ್ರಕ್ರಿಯೆಗಳೇ ಸ್ತ್ರೀ–ಪುರುಷರ ನಡುವಿನ ಅಸಮಾನತೆಯನ್ನು ಬೆಳೆಸಿವೆ.

ಮಹಿಳೆಯ ಅಸ್ತಿತ್ವವನ್ನು ಕಳೆದು ಪುರುಷಾಧೀನವಾಗಿಸಿದ ಪುರುಷ ಸಮಾಜ ಅವಳ ವ್ಯಕ್ತಿತ್ವ ಮತ್ತು ಸ್ವಾತಂತ್ರ್ಯವನ್ನು ಇಲ್ಲವಾಗಿಸಿತು. ಸಮಾಜದಲ್ಲಿ ತನ್ನದೇ ಆದ ವ್ಯಕ್ತಿತ್ವವನ್ನು ಕಳೆದುಕೊಂಡ ಮಹಿಳೆ ಪುರುಷನ ಕೈಗೊಂಬೆಯಾದಳು. ಗಂಡಸರು ತಮ್ಮ ಎಲ್ಲ ಕೆಲಸ ಕಾರ್ಯಗಳಿಗೂ ಹೆಣ್ಣಿನ ನೆರವನ್ನು ಪಡೆಯುತ್ತಾ ವಿದ್ಯೆ, ಜ್ಞಾನ, ಕಸುಬು, ಜೀವನದಲ್ಲಿ ಅಭಿವೃದ್ಧಿ ಹೊಂದಿದರೆ ಮಹಿಳೆ ಅವನ ಸಹಾಯಕಳಾಗಿ ನಿಂತು ತನ್ನ ವ್ಯಕ್ತಿತ್ವವನ್ನೇ ಮರೆತು ಗುಲಾಮಗಿರಿಗೆ ಸಿಲುಕಿದಳು. ಈ ಪರಿಸ್ಥಿತಿಯಲ್ಲಿ ಮಹಿಳೆ ಮಲ್ಲಿಕಾ ಘಂಟಿಯವರು ಹೇಳಿದ ಹಾಗೆ "ಗುಲಾಮಗಿರಿಯ ಪೂರ್ವದಲ್ಲಿಯೇ ಗುಲಾಮಿ ನೊಗ ಹೊತ್ತುಕೊಂಡ ಮಹಿಳೆ ಬರೀ ಸ್ತ್ರೀಯಾದಳು, ಹೆರುವ ಯಂತ್ರವಾದಳು. ಖಾಸಗಿ ಆಸ್ತಿಯ ಉಗಮದೊಂದಿಗೆ ಮಹಿಳೆಗೆ ನೈತಿಕ ನೆಲೆಯಲ್ಲಿ ಶೀಲ ಪಾತಿವ್ರತ್ಯದಂತಹ ಮೌಲ್ಯಗಳ ಬೇಲಿ ಹಾಕಿ ಒಳಗೆ ಇಡಲಾಯಿತು. ಹೀಗೆ ಖಾಸಗಿ ಆಸ್ತಿಯ ಪರಿಕಲ್ಪನೆಯಲ್ಲಿ ಸ್ತ್ರೀಯ ಶೀಲರಕ್ಷಣೆ, ಪಾವಿತ್ರಗಳು ಬಹು ಮುಖ್ಯ ಸಂಗತಿಗಳಾಗುತ್ತಲೇ ಹೆಣ್ಣಿನ ಲೈಂಗಿಕ ಸ್ವಾತಂತ್ರ್ಯ, ಮಾತೃತ್ವದ ಹಕ್ಕಿನ ಮೇಲೆ ಪುರುಷನ 'ಯಜಮಾನ' ಮುದ್ರಿಕೆ ಬಿದ್ದಿತು" (ಶಶಿಕಲಾ ವೀರಯ್ಯಸ್ವಾಮಿ, 1995: ಪುಟ 108). ಇದು ಎಲ್ಲ ರೀತಿಯಲ್ಲೂ ಹೆಣ್ಣಿನ ಅಸ್ತಿತ್ವ ವ್ಯಕ್ತಿತ್ವ ಮತ್ತು ಸ್ವಾತಂತ್ರ್ಯವನ್ನು ಹತ್ತಿಕ್ಕಿ ಅಸಮಾನತೆಯನ್ನುಂಟುಮಾಡಿದುದನ್ನು ತೋರಿಸುತ್ತದೆ.

ಚಾರಿತ್ರಿಕವಾಗಿ ಪುರುಷನ ಅಧೀನಳೂ, ಗುಲಾಮಳೂ ಆದ ಹೆಣ್ಣು ಸಹಜವಾಗಿ ತನ್ನ ವ್ಯಕ್ತಿ ಸ್ವಾತಂತ್ರ್ಯವನ್ನು ಕಳೆದುಕೊಂಡಳು. ಶಿವಾನಂದ ಎಸ್. ವಿರಕ್ತಮಠರವರ "ಮಹಿಳೆಯರ

ಬದುಕು ಹೀಗೆ ಪುರುಷ ಕೇಂದ್ರಿತ ಸಮಾಜ ವ್ಯವಸ್ಥೆಯ ಅಧೀನ ನೆಲೆಯಲ್ಲಿ ಕಲ್ಪಿಸಿದಾಗ ಸಹಜವಾಗಿಯೇ ಮಹಿಳಾ ಜೈವಿಕ ಸ್ವಾತಂತ್ರ್ಯವು ಕಳೆದುಹೋಯಿತು. ತಾತ್ವಿಕವಾಗಿ ಸ್ತ್ರೀ-ಪುರುಷ ಮಾನವ ವರ್ಗವೆಲ್ಲವೂ ಜೈವಿಕ ಸ್ವಾತಂತ್ರ್ಯದ ಸ್ಥಿತಿಯನ್ನು ನೈಸರ್ಗಿಕವಾಗಿ ಹೊಂದಿದ್ದರೂ ಸಾಮಾಜಿಕ ನೆಲೆಯಲ್ಲಿ ಸ್ತ್ರೀ ಸ್ವಾತಂತ್ರ್ಯವನ್ನು ಕಸಿದುಕೊಳ್ಳಲಾಯಿತು" (2010: ಪುಟ 28) ಎಂಬ ಅಭಿಪ್ರಾಯ ಮೇಲಿನ ಹೇಳಿಕೆಯನ್ನು ಪುಷ್ಟೀಕರಿಸುತ್ತದೆ. ಪ್ರಾಕೃತಿಕವಾಗಿ ಸ್ತ್ರೀ-ಪುರುಷರಿಬ್ಬರೂ ಸಮಾನರಾದರೂ ಸಾಮಾಜಿಕವಾಗಿ ಅವರಿಬ್ಬರ ಮಧ್ಯೆ ಏರ್ಪಟ್ಟ ಅಸಮಾನತೆ ಕಾಣುತ್ತದೆ. ಈ ಅಸಮಾನತೆ ಹೆಣ್ಣಿನ ಆರ್ಥಿಕ ಶಕ್ತಿಯನ್ನು ಕಿತ್ತುಕೊಂಡು ಆರ್ಥಿಕವಾಗಿ ಅವಳು ಪುರುಷಾವಲಂಬಿಯಾಗುವಂತೆ ಮಾಡಿದೆ. ಹೆಣ್ಣು ಹೀಗೆ ಆರ್ಥಿಕವಾಗಿ ಅಸಮಾನತೆಯನ್ನು ಅನುಭವಿಸಲು ಮುಖ್ಯ ಕಾರಣ ಅವಳ ದುಡಿತ, ಗಳಿಕೆಗಳು ಹಣಕಾಸಿನ ಮೌಲ್ಯದ ವ್ಯಾಪ್ತಿಗೆ ಸೇರಿಲ್ಲದಿರುವುದು. ಮಹಿಳೆ ಮನೆಯಲ್ಲಿ ಅಥವಾ ಕುಟುಂಬದಲ್ಲಿ ನಿರ್ವಹಿಸುವ ಕೆಲಸ, ಜವಾಬ್ದಾರಿ, ಆರ್ಥಿಕ ಚಟುವಟಿಕೆಗಳನ್ನು ಪುರುಷ ಸಮಾಜ ಉತ್ಪಾದನೆ ಮತ್ತು ಮೌಲ್ವೀಕರಣ ವ್ಯವಸ್ಥೆಯಿಂದ ಆಚೆಗಿಟ್ಟಿದೆ. ರೂಪ ಹಾಸನ ಅವರ ಅಭಿಪ್ರಾಯದಲ್ಲಿ "ವೇತನರಹಿತವಾದ ಸೇವೆಯೇ ಮೊದಲಿಗೆ ದುಡಿಯುವ ಮಹಿಳೆಯ ಹಕ್ಕುಗಳ ಮೇಲಾಗುತ್ತಿರುವಂತಹ ಬಹು ದೊಡ್ಡ ವಜ್ರಾಘಾತ.. ಸ್ತ್ರೀಯರ ಮತ್ತು ಪುರುಷರ ಕೆಲಸಗಳು ಭಿನ್ನವಾಗಿರುವುದರಿಂದ ಸ್ತ್ರೀಯರ ಕೆಲಸ ಎಷ್ಟೇ ಕಠಿಣತಮವಾಗಿದ್ದಾಗಲೂ ಅದು ಪುರುಷರ ಶ್ರಮಕ್ಕಿಂತಾ ಕಡಿಮೆಯೆಂದು ಕೆಲವೊಮ್ಮೆ ಪರಿಗಣನೆಗೇ ಬಾರದೆ ಹೋಗುತ್ತದೆ. ಅವಳ ಶ್ರಮಕ್ಕೆ ಆರ್ಥಿಕ ಮೌಲ್ಯ, ಉತ್ಪಾದನಾ ಸಾಮರ್ಥ್ಯ ಇಲ್ಲದಿರುವುದೇ ಇದಕ್ಕೆ ಮುಖ್ಯ ಕಾರಣ" (2014: ಪುಟ 75). ಅಂದರೆ ಮಹಿಳೆಯ ದುಡಿತಕ್ಕೆ ಬೆಲೆ ಇಲ್ಲದಿರುವುದು ಅವರ ಆರ್ಥಿಕ ಸ್ಥಾನಮಾನವನ್ನು ಕಸಿದುಕೊಂಡಿದೆ ಎಂದು ತಿಳಿಯುತ್ತದೆ. ಆರ್ಥಿಕವಾಗಿ ಪುರುಷಾವಲಂಬಿಯಾದ ಮಹಿಳೆ ಪುರುಷನ ಶೋಷಣೆಗೆ ಗುರಿಯಾಗುತ್ತಾಳೆ ಮತ್ತು ಆರ್ಥಿಕವಾಗಿ ದುರ್ಬಲಳಾಗುತ್ತಾಳೆ. ಏಂಗೆಲ್ಸ್ "ಪಿತೃಪ್ರಧಾನ ವ್ಯವಸ್ಥೆ ಬಡ ಹಾಗೂ ದುರ್ಬಲರಾದ ಹೆಣ್ಣುಮಕ್ಕಳನ್ನು ಶೋಷಿಸಲು ಮುಂದಾಗುತ್ತದೆ. ಮಾತೃಪ್ರಧಾನವಾಗಿದ್ದ ಸಾಮಾಜಿಕ ವ್ಯವಸ್ಥೆ ಪಿತೃಪ್ರಾಧಾನ್ಯತೆಯನ್ನು ಪಡೆದುಕೊಂಡಾಗಲೇ ಮಹಿಳೆ ಹೆಚ್ಚು ಹೆಚ್ಚು ಪರಾವಲಂಬಿಯಾಗತೊಡಗಿದಳು. ಉತ್ಪಾದನಾ ವ್ಯವಸ್ಥೆಗೆ ಅವನೇ ವಾರಸುದಾರನಾಗಿ ಅವಳನ್ನು ಅದರಾಚೆ ಇರಿಸಿದ. ತನ್ನ ವಲಯದೊಳಗಿರದ ಉತ್ಪಾದನಾ ವ್ಯವಸ್ಥೆಯೇ ಅವಳ ದುಡಿಮೆಯನ್ನು ಶೋಷಿಸುವ ಮೂಲವಾಯಿತು" (ಮಂಗಳಾ ಪ್ರಿಯದರ್ಶಿನಿ ಡಿ. 2007: ಪುಟ 68) ಎಂದು ಹೇಳಿರುವುದು ಪುರುಷ ಸಮಾಜ ಉತ್ಪಾದನೆಯನ್ನೇ ಪರಿಗಣಿಸಿದೆ ಕುಟುಂಬ ಮತ್ತು ಸಮಾಜಕ್ಕೆ ಅವಳ ಆರ್ಥಿಕ ಕೊಡುಗೆಯನ್ನೇ ಪರಿಗಣಿಸದಿರುವುದನ್ನು ತೋರಿಸುತ್ತದೆ. ಈ ಎಲ್ಲ

ಬೆಳವಣಿಗೆಗಳೂ ಅಂದರೆ ಸಮಾಜ ನಿರ್ಮಿತ ಹೆಣ್ಣಿನ ಗುಣಗಳು, ಕುಟುಂಬ, ಸಮಾಜದಲ್ಲಿ ಅವಳ ಅಸ್ತಿತ್ವ ವ್ಯಕ್ತಿತ್ವ ಇಲ್ಲದಿರುವುದು ಮತ್ತು ಅವಳ ವ್ಯಕ್ತಿ ಸ್ವಾತಂತ್ರ್ಯ, ಆರ್ಥಿಕ ಸ್ವಾತಂತ್ರ್ಯವನ್ನು ಸಮಾಜ ವ್ಯವಸ್ಥಿತವಾಗಿ ಕಿತ್ತುಕೊಂಡಿರುವುದು ಮಹಿಳೆಗೆ ಸಮಾಜದಲ್ಲಿ ಸ್ಥಾನಮಾನ ಇಲ್ಲದಂತೆ ಮಾಡಿ ತನ್ನ ಎಲ್ಲ ದೈನಂದಿನ ವ್ಯವಹಾರಗಳಿಗೂ ಪುರುಷಾವಲಂಬಿಯಾಗುವಂತೆ ಮಾಡಿರುವುದು ಸ್ತ್ರೀ–ಪುರುಷರ ನಡುವಿನ ಅಸಮಾನತೆಯ ಹುಟ್ಟು, ಕಾರಣ ಮತ್ತು ಸ್ವರೂಪವನ್ನು ತೋರಿಸುತ್ತದೆ.

ಸಮಾಜದಲ್ಲಿರುವ ಸ್ತ್ರೀ–ಪುರುಷರ ನಡುವಿನ ಅಸಮಾನತೆಯನ್ನು ಸ್ತ್ರೀ ಶೋಷಣೆ, ಅನ್ಯಾಯ ಮುಂತಾದವುಗಳನ್ನು ಖಂಡಿಸಿ, ಸಮಾನತೆಯು ಎಲ್ಲರಿಗೂ ದೊರಕಬೇಕು ಎಂದು ಹಲವಾರು ಚಿಂತಕರು ಪ್ರತಿಪಾದಿಸಿದ್ದಾರೆ. ಏಂಗೆಲ್ಸ್ ಸಮಾಜದಲ್ಲಿ ಪಿತೃಪ್ರಧಾನ ವ್ಯವಸ್ಥೆಯು ಮಾತೃಪ್ರಧಾನ ವ್ಯವಸ್ಥೆಯನ್ನು ಅದುಮಿ ಮೇಲೆ ಬಂದದ್ದೇ ಹೆಣ್ಣಿನ ಬಾಳು ಅಧೀನವಾಗಲು ಕಾರಣವಾಯ್ತು ಎಂದು ಹೇಳುತ್ತಾನೆ (ಶ್ರೀಮತಿ ಎಚ್.ಎಸ್. 2003ಅ: ಪುಟ 68). ಅಂದರೆ ಪಿತೃ ಪ್ರಧಾನ ವ್ಯವಸ್ಥೆ ವ್ಯವಸ್ಥಿತವಾಗಿ ಹೆಣ್ಣನ್ನು ತನ್ನ ಅಧೀನಳನ್ನಾಗಿ ಮಾಡಿಕೊಂಡು ಗಂಡು ಮೇಲು ಹೆಣ್ಣು ಕೀಳು ಎಂಬ ಅಭಿಪ್ರಾಯವನ್ನು ಬೆಳೆಸಿದೆ.

ಸಮಾಜದ ಈ ಅಭಿಪ್ರಾಯ ನಿವಾರಣೆಯಾಗಿ ಪುರುಷ ಮತ್ತು ಸ್ತ್ರೀ ಇಬ್ಬರೂ ಸಹ ಜೀವಿಗಳಾಗಬೇಕು. ಆದರೆ "ಪುರುಷ ಚರಿತ್ರೆಯ ವಿವಿಧ ಹಂತಗಳಲ್ಲಿ ಸ್ತ್ರೀಯನ್ನು ತಾಯಿ ಎಂದೋ. ಭೂಮಿಯೆಂದೋ, ದೇವತೆಯೆಂದೋ ದೂರವಾಗಿಸಿದ್ದಾನೆಯೇ ಹೊರತು ಸಹಜೀವಿಯಾಗಿ ಕಾಣಲಿಲ್ಲ. ಕಂಡಿದ್ದರೆ ಸ್ತ್ರೀ–ಪುರುಷ ಸಮಾನತೆ–ಅಸಮಾನತೆಯ ಚರ್ಚೆ ಇರುತ್ತಿರಲಿಲ್ಲ" (ಶ್ರೀಮತಿ ಎಚ್.ಎಸ್. 2003ಅ: ಪುಟ 68) ಎನ್ನುವ ಶ್ರೀಮತಿಯವರ ವಾದ ಮೇಲಿನ ಮಾತನ್ನು ಸಮರ್ಥಿಸುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಹೆಣ್ಣನ್ನು ದೇವತೆಯೆಂದು ದೂರವಿರಿಸದೆ, ಸಹೋದರಿಯಾಗಿ, ಸಹಜೀವಿಯಾಗಿ ಗುರುತಿಸಿ, ಸಮಾನ ಸ್ಥಾನಮಾನಗಳನ್ನು ಕೊಡಬೇಕಾದದ್ದು.

ಜೆ.ಎಸ್. ಮಿಲ್ ಮಹಿಳೆಯರಿಗೆ ಸಮಾನತೆಯನ್ನು ನೀಡಬೇಕೆಂದು ಹೇಳುತ್ತಾನೆ. ಅವನ ಗ್ರಂಥವಾದ 'ದಿ ಸಬ್ಜೆಕ್ಷನ್ ಆಫ್ ವುಮೆನ್' ನಲ್ಲಿ "ವ್ಯಕ್ತಿ ಸ್ವಾತಂತ್ರ್ಯ ಎಂದರೆ ವ್ಯಕ್ತಿಯ ಆಯ್ಕೆಯ ಹಕ್ಕು. ವ್ಯಕ್ತಿಯ ಮೇಲೆ ಬಲಪ್ರಯೋಗ ಮಾಡುವುದು ಅವನ/ಅವಳ ಸ್ವ–ಅಭಿವೃದ್ಧಿಗೆ ಹಾನಿಕಾರಕ. ವಿಚಾರವಾದಿ ಮಹಿಳೆಯರಲ್ಲಿ ಸ್ವಾತಂತ್ರ್ಯವು ಮೊದಲ ಆಯ್ಕೆಯಾಗಬೇಕು, ಹೇಗೆ ಯಾವುದೇ ದೇಶವು ಸಂಪತ್ತಿಗಾಗಿ ತನ್ನ ಸ್ವಾತಂತ್ರ್ಯವನ್ನು ಬಿಟ್ಟು ಕೊಡುವುದಿಲ್ಲವೋ ಹಾಗೇ

ಯಾವುದೇ ವ್ಯಕ್ತಿಯು ಯಾವುದಕ್ಕೂ ತನ್ನ ಸ್ವಾತಂತ್ರ್ಯವನ್ನು ಬಿಟ್ಟುಕೊಡುವುದಿಲ್ಲ ಎಂದು ಹೇಳಿ ಸ್ವಾತಂತ್ರ್ಯ ತತ್ವದ ಆಧಾರದ ಮೇಲೆ ಸ್ತ್ರೀ ಸಮಾನತೆಯನ್ನು ಎತ್ತಿ ಹಿಡಿದ" (ಶೈಲಜ ಹಿರೇಮಠ, 2009: ಪುಟ 105). ಜೆ.ಎಸ್. ಮಿಲ್‌ನ ವ್ಯಾಖ್ಯೆಯನ್ನು ಗಮನಿಸಿದರೆ ಮನುಷ್ಯನಿಗೆ ಸಮಾಜದಲ್ಲಿ ವ್ಯಕ್ತಿ ಸ್ವಾತಂತ್ರ್ಯ ಬಹಳ ಮುಖ್ಯ ಅದನ್ನು ಯಾವುದೇ ಕಾರಣಕ್ಕೂ ಬಿಟ್ಟುಕೊಡಬಾರದು ಎಂದು ತಿಳಿಯುತ್ತದೆ. ಏಕೆಂದರೆ ಮಾನವನ ಅಭಿವೃದ್ಧಿಗೆ ವ್ಯಕ್ತಿ ಸ್ವಾತಂತ್ರ್ಯ ಮೂಲವಾಗುತ್ತದೆ. ಆದರೆ ಪುರುಷ ಪ್ರಧಾನ ಸಮಾಜ ಹೆಣ್ಣಿನ ವ್ಯಕ್ತಿ ಸ್ವಾತಂತ್ರ್ಯವನ್ನೇ ಕಿತ್ತುಕೊಂಡು ಗಂಡಿನ ಗುಲಾಮಳಾಗಿರುವುದು ವಾಸ್ತವದ ಸಂಗತಿಯಾಗಿದೆ.

ಸ್ತ್ರೀವಾದದ ಮೊದಲ ಸ್ತ್ರೀ ಮೇರಿವುಲ್ ಸ್ಟನ್‌ಕ್ರಾಫ್ಟ್, ಸ್ತ್ರೀಯರ ಹಕ್ಕುಗಳನ್ನು ಸಮರ್ಥಿಸುತ್ತಾ (The vindication of the Rights of women) ಸಮಾಜದಲ್ಲಿ ಸ್ತ್ರೀ–ಪುರುಷರಿಬ್ಬರೂ ಸಮಾನರು 'ಗಂಡಸನ್ನು ನನ್ನ ಸಹಭಾಗಿಯೆಂದು ಪ್ರೀತಿಸುತ್ತೇನೆ. ಆದರೆ ಅವನ ಭರ್ಜಿಯ ತಿವಿತವನ್ನು ನನ್ನ ಬಳಿ ಬರಲು ಬಿಡುವುದಿಲ್ಲ' ಎಂದು ವಾದಿಸುತ್ತಾಳೆ. ಹಾಗೆಯೇ ವರ್ಜೀನಿಯಾ ವುಲ್ಫ್ (Woman and Writing) "ಲಿಂಗಭೇದವೆಂಬುದು ಸಮಾಜ ರೂಪಿಸಿರುವ ಸಾಂಸ್ಕೃತಿಕ ಅಂಶ, ಇದನ್ನು ಪ್ರಶ್ನಿಸಬಹುದು, ಬದಲಿಸಬಹುದು ಎಂದು ತಿಳಿಸಿ, ಮಹಿಳೆಯರೆಂದರೆ ಪುರುಷರ ಕನ್ನಡಿಗಳಾಗಿ ಅಂದರೆ ಪುರುಷರು ಬಯಸುವಂತೆ ಪ್ರತಿಫಲಿಸುವ ಕನ್ನಡಿಗಳಾಗಬಾರದು ಹಾಗೆ ಆದಲ್ಲಿ ಮಹಿಳೆಯರು ತಮಗೆ ತಾವೇ ಪುರುಷರ ಬಲಿಪಶುಗಳಾಗುತ್ತಾರೆ ಎಂದು ಹೇಳುತ್ತಾಳೆ" (ಉಲ್ಲೇಖ: ಹಾಲತಿ ಸೋಮಶೇಖರ್, 2007: ಪುಟ 118).

ಅಂಬೇಡ್ಕರ್‌ರವರು ಮನುಷ್ಯ ಸಮಾನತೆಯನ್ನು ಹೇಳುತ್ತಾರೆ. ಹುಟ್ಟುತ್ತಲೇ ಯಾರು ಅಧೀನರಾಗಿ, ಕೀಳಾಗಿ ಹುಟ್ಟುವುದಿಲ್ಲ, ಸಮಾಜ ಅದನ್ನು ಸೃಷ್ಟಿಸುತ್ತದೆ ಎಂದು ಹೇಳಿ ಕಾನೂನಾತ್ಮಕವಾಗಿ ಎಲ್ಲರೂ ಸಮಾನರು ಎಂಬ ತತ್ವವನ್ನು ಎತ್ತಿ ಹಿಡಿಯುತ್ತಾರೆ. ಕಾನೂನಾತ್ಮಕವಾಗಿ ಸ್ತ್ರೀ ಸಮಾನತೆಯನ್ನು ಸ್ಥಾಪಿಸಿದವರು ಅಂಬೇಡ್ಕರ್. ಮನುಷ್ಯನ ಹಕ್ಕುಗಳ ಲಿಂಗ ತಾರತಮ್ಯದ ನೆಲೆಯಲ್ಲಿ ಇರಬಾರದು ಎಂದು ತಿಳಿಸಿ ಸ್ತ್ರೀ ಪುರುಷರಿಗೆ ಸಮಾನ ಹಕ್ಕುಗಳಿರಬೇಕೆಂದು ವಾದಿಸಿ ಅದನ್ನು ಸಂವಿಧಾನಾತ್ಮಕ ರೂಪದಲ್ಲಿ ಕೊಟ್ಟವರು. ಸ್ತ್ರೀ ಪುರುಷರ ನಡುವಿನ ಸಮಾನತೆಯ ಬಗ್ಗೆ ಅಂಬೇಡ್ಕರ್‌ರವರ ನಿಲುವನ್ನು ಅವರ ಅಧ್ಯಕ್ಷತೆಯಲ್ಲಿ ರಚಿಸಲಾದ ಶಾಸನಗಳಿಂದ ತಿಳಿಯಬಹುದು. ದೇಶದ ಪ್ರತಿಯೊಬ್ಬ ಪ್ರಜೆಯೂ ಕಾನೂನಿನ ಮುಂದೆ ಸಮಾನ; ಸರ್ಕಾರ ಯಾವುದೇ ಪ್ರಜೆಯ ವಿರುದ್ಧ ಲಿಂಗ ತಾರತಮ್ಯ ಮಾಡುವಂತಿಲ್ಲ; ಲಿಂಗ ಭೇದ

ನಿಷೇಧ; ಸರ್ಕಾರದ ಯಾವುದೇ ಉದ್ಯೋಗದಲ್ಲಿ ಸ್ತ್ರೀ-ಪುರುಷರಿಗೆ ಸಮಾನ ಅವಕಾಶ; ಸ್ತ್ರೀ ಪುರುಷರಿಗೆ ಸಮಾನ ಜೀವನಾವಕಾಶ; ಸಮಾನ ವೇತನ; ಹೀಗೆ ಮೂಲಭೂತ ಹಕ್ಕುಗಳಾದ ಸ್ವಾತಂತ್ರ್ಯ, ಸಮಾನತೆಗಳು ಸ್ತ್ರೀ-ಪುರುಷರಿಬ್ಬರಿಗೂ ಸಮಾನ ಎಂದು ಶಾಸನಾತ್ಮಕವಾಗಿ ಸ್ಥಾಪಿಸಿದ್ದಾರೆ. ಹಿಂದೂ ಸಮಾಜದಲ್ಲಿರುವ ಜಾತಿ ಪದ್ಧತಿಯನ್ನು ವಿಶ್ಲೇಷಿಸುತ್ತಾ ಜಾತಿ ಸಂಕೋಲೆಗಳಲ್ಲಿ ಬಂಧಿಯಾಗಿರುವ ಸ್ತ್ರೀ ಸಮಾನತೆ ಮತ್ತು ಸ್ವಾತಂತ್ರ್ಯವನ್ನು ಕಳೆದುಕೊಂಡಿದ್ದಾಳೆಂದು ತಿಳಿಸುತ್ತಾರೆ.

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮುಂಚೂಣಿಯಲ್ಲಿದ್ದು ಸ್ವಾತಂತ್ರ್ಯ ದೊರಕಿಸಿಕೊಟ್ಟ ಮಹಾತ್ಮ ಗಾಂಧೀಜಿಯರವರು ಸ್ತ್ರೀ ಸ್ವಾತಂತ್ರ್ಯ ಮತ್ತು ಸಮಾನತೆಗೆ ಪ್ರಯತ್ನಪಟ್ಟರು. ಮಹಿಳೆಗೆ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಹಕ್ಕುಗಳಿರಬೇಕೆಂದು ತಿಳಿಸಿದರು. ಗಾಂಧೀಜಿಯವರ ಪ್ರಕಾರ ಸಾಮಾಜಿಕ ನೀತಿ-ನಿಯಮಗಳು ಒಬ್ಬರಿಂದ ಇನ್ನೊಬ್ಬರ ಮೇಲೆ ಹೇರಲ್ಪಡಬಾರದು, ಬದಲಿಗೆ ಪರಸ್ಪರ ಸಮಾಲೋಚನೆ ಮತ್ತು ಸಹಕಾರದಿಂದ ರೂಪಿತವಾಗಬೇಕು. ಇದಕ್ಕಾಗಿ ಧರ್ಮ, ಶಾಸ್ತ್ರಗ್ರಂಥಗಳನ್ನು ಪುನರ್‌ಪರಿಶೀಲಿಸಬೇಕು. ಗಂಡಿನಂತೆ ಹೆಣ್ಣು ಕೂಡ ತಾನು ಮದುವೆಯಾಗುವ ಪುರುಷನನ್ನು ಆಯ್ಕೆ ಮಾಡಿಕೊಳ್ಳಬೇಕು, ಹಾಗೂ ಸಮಾನತೆ ಮತ್ತು ಸ್ವಾತಂತ್ರ್ಯವನ್ನು ಅನುಭವಿಸಬೇಕು. ಗಾಂಧೀಜಿಯವರು ಮಹಿಳೆಯರಿಗೆ ಆರ್ಥಿಕ ಸ್ವಾವಲಂಬನೆ ಬಹಳ ಮುಖ್ಯ ಎಂದು ತಿಳಿಸಿದರು. ಅಲ್ಲದೆ ಸ್ತ್ರೀ ಸಬಲೆ ಎಂದು ಹೇಳಿ ಮಹಿಳೆಯರೂ ಪುರುಷರಷ್ಟೇ ಸಮಾನರು ಎಂದು ಸಾರಿದರು. ಶತ-ಶತಮಾನಗಳ ಅನ್ಯಾಯವನ್ನು, ಅಸಮಾನತೆಯನ್ನು ಜಾತಿಯ ಪ್ರತ್ಯೇಕತೆ, ಸ್ತ್ರೀಯರ ಪ್ರತ್ಯೇಕತೆಯನ್ನು ಶತಚ್ಛಿದ್ರಗೊಳಿಸಿ ಬಲಿಹಾಕುವುದಕ್ಕಿಂತ ಪವಿತ್ರ ಕಾರ್ಯ ಬೇರೊಂದಿಲ್ಲ ಎಂದು ಲೋಹಿಯಾ ಸಾರಿದರು.

ರಾಮ ಮನೋಹರ ಲೋಹಿಯಾರವರು ಭಾರತ ಕಂಡ ಮುಖ್ಯ ಸಮಾಜವಾದದ ಚಿಂತಕರಲ್ಲೊಬ್ಬರು ಮತ್ತು ಸ್ತ್ರೀ ವಿಮೋಚನೆಗೆ ಬಹುವಾಗಿ ಶ್ರಮಿಸಿ ಹಲವು ಕಾರ್ಯಗಳನ್ನು ಕೈಗೊಂಡವರು. ಲೋಹಿಯಾರವರ ಪ್ರಕಾರ ಮಾನವ ಚೇತನದ ಅಧೋಗತಿಗೆ ಮೂಲ ಕಾರಣವಾಗಿರುವುದು ಜಾತಿಯ ಮತ್ತು ಲಿಂಗದ ಆಧಾರದ ಮೇಲೆ ಪ್ರತ್ಯೇಕತೆಯನ್ನು ಸಮಾಜದಲ್ಲಿ ಸೃಷ್ಟಿಸಿರುವುದು. ಇವುಗಳು ಅನ್ಯಾಯವನ್ನು ಅಸಮಾನತೆಯನ್ನು ಉಂಟುಮಾಡಿವೆ ಮತ್ತು ಮನುಷ್ಯನ ಕ್ರಿಯಾಶೀಲತೆಯನ್ನು ನಾಶಗೊಳಿಸಿ ಸಮಾಜದ ಅಭಿವೃದ್ಧಿಗೆ ಗಂಡಾಂತರಕಾರಿಗಳಾಗಿವೆ. ಸ್ತ್ರೀ ಶೋಷಣೆಯ ವಿಮೋಚನೆಗೆ ಉದ್ಯೋಗ ಮತ್ತು ಅಂತರಜಾತಿ ವಿವಾಹಗಳು ಸಾಧನಗಳಾಗುತ್ತವೆ ಹಾಗೂ ಅಸಮಾನತೆಯನ್ನು ನಿವಾರಿಸುತ್ತವೆ ಎಂದು

ಹೇಳಿದ್ದಾರೆ. ಸ್ತ್ರೀ-ಪುರುಷ ಅಸಮಾನತೆ ನೈಸರ್ಗಿಕವಲ್ಲ ಅದು ಮನುಷ್ಯ ನಿರ್ಮಿತ. ಸಾಂಸ್ಕೃತಿಕ ಮತ್ತು ಪುರುಷ ಪ್ರಧಾನ ಸಮಾಜ ಮಹಿಳೆಯರ ಮೇಲೆ ಹೇರಿರುವ ಈ ಅಸಮಾನತೆ, ಶೋಷಣೆಗಳು ಬಗೆಹರಿಯಬೇಕು. ಯಾರ್ಯಾರು ಈ ವ್ಯವಸ್ಥೆಯನ್ನು ನಿರ್ಮಿಸಿದ್ದಾರೋ ಅವರೇ ಇದನ್ನು ಬದಲಾಯಿಸಬೇಕು. ಮಹಿಳೆಯರೂ ಸಹ ಈ ಬದಲಾವಣೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸಮಾನತೆಯಿಂದ ಕೂಡಿದ ಸಮಾಜ ರಚನೆಯಾಗಬೇಕು. "ಗಂಡು ಹೆಣ್ಣಿನ ನಡುವೆ ಸಮಾನತೆ ಎಂದರೆ ಗಳಿಸುವುದು-ಖರ್ಚು ಮಾಡುವುದು, ಹಣಕಾಸಿನ ವಿಷಯದಲ್ಲಿ, ಸಂಪತ್ತಿನಲ್ಲಿ, ಆಸ್ತಿಯಲ್ಲಿ, ದೈನಂದಿನ ವ್ಯವಹಾರದಲ್ಲಿ, ಮನೆಯ ಕೆಲಸ ಕಾರ್ಯಗಳಲ್ಲಿ, ಕುಟುಂಬ ನಿರ್ವಹಣೆಯಲ್ಲಿ ವ್ಯಾಪಾರದ ತೀರ್ಮಾನಗಳಲ್ಲಿ ತರ್ಕಿಸುವ, ವಿಮರ್ಶಿಸುವ ನಿರ್ಧಾರ ತೆಗೆದುಕೊಳ್ಳುವ ವಿಚಾರಗಳಲ್ಲಿ ಇಬ್ಬರೂ ಸಮಾನವಾಗಿರಬೇಕು" (ಉಲ್ಲೇಖ: ಹಾಲತಿ ಸೋಮಶೇಖರ್, 2007: ಪುಟ 276). ಈ ಸಂಗತಿಗಳಲ್ಲಿ ಪಕ್ಷಪಾತ, ಮೇಲು-ಕೀಳು ಉಂಟಾದರೆ ಗಂಡು-ಹೆಣ್ಣಿನ ಸಮಾನತೆಯನ್ನು ಅದುಮಿ ಅಸಮಾನತೆ ಮೇಲೇರುತ್ತದೆ. ನಿಜವಾದ ಸಮಾನತೆ ಸಾಧಿಸಬೇಕಾದರೆ ಸ್ತ್ರೀಯರಿಗೆ ಹೆಚ್ಚಿನ ಹಕ್ಕುಗಳು ದೊರೆಯಬೇಕು. ಜೊತೆಗೆ ಆರ್ಥಿಕ ಅಸಮಾನತೆ ಮತ್ತು ಜಾತಿಯ ಅಸಮಾನತೆ ನಿವಾರಣೆಯಾಗಬೇಕು ಎಂದು ಲೋಹಿಯಾ ವಾದಿಸುತ್ತಾರೆ. ವಿವಿಧ ವಿದ್ವಾಂಸರ ಚಿಂತನೆಗಳನ್ನು ಗಮನಿಸಿದರೆ ಸಮಾಜದಲ್ಲಿ ಸ್ತ್ರೀ-ಪುರುಷರ ನಡುವೆ ಅಸಮಾನತೆಯಿರುವುದು ತಿಳಿದುಬರುತ್ತದೆ ಮತ್ತು ಈ ಅಸಮಾನತೆಯನ್ನು ಹೋಗಲಾಡಿಸಿ ಸಮಾನತೆಯನ್ನು ಸಾಧಿಸಬೇಕಾಗಿರುವುದು ಅವಶ್ಯಕವೆಂದು ತಿಳಿಯುತ್ತದೆ. ಇಂತಹ ಸಮಾನತೆಗೆ, ವ್ಯಕ್ತಿ ಸ್ವಾತಂತ್ರ್ಯ, ಆರ್ಥಿಕ ಸ್ವಾತಂತ್ರ್ಯ, ಸಮಾನ ಸ್ಥಾನಮಾನಗಳು ಹೆಣ್ಣಿಗೆ ದೊರೆಯುವಂತಾಗಬೇಕು ಎಂದು ತಿಳಿಸುತ್ತಾರೆ.

3.2. ಸ್ತ್ರೀವಾದಿ ನೆಲೆಯಲ್ಲಿ ಸಮಾನತೆ

ಯಾವುದೇ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ತ್ರೀ-ಪುರುಷರ ಸ್ಥಾನಮಾನಗಳ ನಡುವೆ ಅಂತರ, ಮೇಲು-ಕೀಳು ಮುಂತಾದ ಅಸಮಾನ ಅಂಶಗಳನ್ನು ಗುರುತಿಸಬಹುದು. ಈ ತಾರತಮ್ಯಕ್ಕೆ ಬಹುಮಟ್ಟಿಗೆ ಜೀವನದಲ್ಲಿ ಸ್ತ್ರೀ-ಪುರುಷರು ನಿರ್ವಹಿಸುವ ಕೆಲಸ, ಕಾರ್ಯ, ಜವಾಬ್ದಾರಿಗಳು ಕಾರಣವಾಗಿರುವುದರ ಜೊತೆಗೆ ಗಂಡು ಹೆಣ್ಣಿನ ನಡುವಿನ ನೈಸರ್ಗಿಕ ಭಿನ್ನತೆಗಳೂ ಈ ಅಂತರವನ್ನು ಹೆಚ್ಚಿಸಿವೆ. ಈ ಎಲ್ಲಾ ಕಾರಣಗಳು ಹೆಣ್ಣಿನ ಬದುಕಿಗೆ ಅನ್ಯಾಯ ಮತ್ತು ಶೋಷಣೆಯನ್ನು ಒಡ್ಡಿ ಶತಮಾನಗಳಿಂದ ಸ್ತ್ರೀ-ಪುರುಷರ ಮಧ್ಯೆ ಅಗಾಧವಾದ ಅಸಮಾನತೆಯನ್ನು ಸೃಷ್ಟಿಸಿವೆ. ಇಂತಹ ಶೋಷಣೆ ಮತ್ತು ಅನ್ಯಾಯಗಳನ್ನು ತೊಡೆದು ಹೆಣ್ಣಿನ

ಸ್ಥಾನಮಾನಗಳನ್ನು ದೊರಕಿಸಿಕೊಡುವ, ಅವಳಿಗೆ ಸಮಾನ ಹಕ್ಕು ಬಾಧ್ಯತೆಗಳನ್ನು ಒದಗಿಸುವ ಪ್ರಯತ್ನಗಳು ಇತ್ತೀಚಿನ ದಶಕಗಳಲ್ಲಿ ಬೆಳೆಯುತ್ತಿವೆ. ಈ ಹಿನ್ನೆಲೆಯಲ್ಲಿ ಮಹಿಳೆಯರ ಜೀವನದ ಸ್ಥಿತಿಗತಿಗಳನ್ನು ಅರಿತು, ಅವರ ಸಮಸ್ಯೆಗಳಿಗೆ ಪರಿಹಾರಗಳನ್ನು ಹುಡುಕುವ ವಿಚಾರಗಳು, ಚಿಂತನೆಗಳು, ಪ್ರಯತ್ನಗಳನ್ನು 'ಸ್ತ್ರೀವಾದ' ಎಂದು ಗುರುತಿಸಲಾಗಿದೆ.

ಮಹಿಳೆಯರು ತಮ್ಮ ಮೇಲೆ ನಡೆಯುತ್ತಿರುವ ಅಸಮಾನತೆ, ದೌರ್ಜನ್ಯ, ಶೋಷಣೆ ಮುಂತಾದವುಗಳನ್ನು ವಿರೋಧಿಸಿ ಅವುಗಳ ವಿರುದ್ಧ ಹೋರಾಟ ಪ್ರಾರಂಭಿಸಿದಂದಿನಿಂದ ಸ್ತ್ರೀವಾದ ಪ್ರಾರಂಭವಾಗಿದೆ ಎಂದು ಹೇಳಬಹುದು. ಆದರೆ ಸ್ತ್ರೀವಾದವು ಎಲ್ಲಾ ಕಾಲಗಳಿಗೂ, ಪ್ರದೇಶಗಳಿಗೂ ಮತ್ತು ಸನ್ನಿವೇಶಗಳಿಗೂ ಏಕಪ್ರಕಾರವಾಗಿರುವಂತಹುದಲ್ಲ, ಏಕೆಂದರೆ ಸ್ತ್ರೀಯರ ಮೇಲಿನ ಶೋಷಣೆ, ಅಸಮಾನತೆ ಮುಂತಾದವುಗಳು ಸಂದರ್ಭ, ಪ್ರದೇಶ ಮತ್ತು ಕಾಲಮಾನದೊಂದಿಗೆ ಬೇರೆ–ಬೇರೆಯವಾಗಿರುತ್ತವೆ. ಆದರೆ ಯಾವುದೇ ಒಂದು ಸಮಾಜದಲ್ಲಿ ಹೆಣ್ಣು–ಗಂಡಿನ ದೃಷ್ಟಿಕೋನ ಮತ್ತು ಅನುಭವಗಳ ನಡುವೆ ವಿಪರೀತ ಅಂತರವಿರುವುದಿಲ್ಲ ಎಂದು ಸ್ತ್ರೀವಾದ ತಿಳಿಸುತ್ತದೆ. ಇದು ಕೇವಲ ವ್ಯತ್ಯಾಸಗಳನ್ನು ಸೂಚಿಸಲು ಮೀಸಲಾಗದೆ ಸ್ತ್ರೀ–ಪುರುಷರ ನಡುವೆ ವಿಭಜನೆಯ ರೇಖೆ ಹಾಕಿ, ಅಸಮಾನತೆಯನ್ನು ಹುಟ್ಟು ಹಾಕಿ ಒಂದು ವರ್ಗ ಮತ್ತೊಂದು ವರ್ಗವನ್ನು ಶೋಷಿಸಲು ದಾರಿ ಮಾಡಿಕೊಟ್ಟಿದೆ. ಈ ಬೆಳವಣಿಗೆಯನ್ನು ಸ್ತ್ರೀವಾದ ವಿರೋಧಿಸಿ, ಸಮಾನತೆಯನ್ನು ಬೆಳೆಸಲು ಪ್ರಯತ್ನಿಸುತ್ತದೆ.

3.3. ಸ್ತ್ರೀವಾದದ ವ್ಯಾಖ್ಯೆ ಮತ್ತು ಧ್ಯೇಯ

ಸ್ತ್ರೀವಾದವು ಕೇವಲ ಮಹಿಳೆಯನ್ನು ಕುರಿತ ಅಧ್ಯಯನವಾಗಿರದೆ ಅವಳ ದೈನಂದಿನ ಬದುಕಿನಲ್ಲಿ ನಡೆಯುತ್ತಿರುವ ಶೋಷಣೆ, ಅಸಮಾನತೆ, ಅನ್ಯಾಯ ಮುಂತಾದವುಗಳನ್ನು ಅರ್ಥಮಾಡಿಕೊಂಡು ಅವಳ ಬದುಕನ್ನು ಸುಧಾರಿಸಲು ನಡೆಸುತ್ತಿರುವ ಪ್ರಯತ್ನವಾಗಿದೆ. ಸಮಾಜವು ಮಹಿಳೆಯನ್ನು ವ್ಯಕ್ತಿಯನ್ನಾಗಿ ಕಾಣದೆ, ಕೇವಲ ಸಂತಾನೋತ್ಪತ್ತಿಗಾಗಿ ಮತ್ತು ಪುರುಷನ ಸೇವೆಗಾಗಿ ಇರುವವಳು ಎಂದು ಪರಿಗಣಿಸಿರುವುದನ್ನು ಮತ್ತು ಆಕೆಯನ್ನು ನಾಲ್ಕು ಗೋಡೆಗಳ ಮಧ್ಯೆ ಬಂಧಿಸಿರುವುದನ್ನು ಸ್ತ್ರೀವಾದಿ ಚಿಂತಕರು ಪ್ರಶ್ನಿಸುತ್ತಾರೆ. ಸ್ತ್ರೀವಾದವು ಮಹಿಳೆಯರು ಪುರುಷರಿಗೆ ಹೇಳುವ ಬುದ್ಧಿವಾದ ಅಥವಾ ಪುರುಷರ ವಿರುದ್ಧ ವ್ಯಕ್ತಪಡಿಸುವ ಪ್ರತಿರೋಧವಲ್ಲ. ಸಮಾಜದಲ್ಲಿ ಬೆಳೆದು ಬಂದಿರುವ ಅನಾರೋಗ್ಯಕರ ಸ್ತ್ರೀ–ವಿರೋಧಿ ನೀತಿ ನಿಯಮಾವಳಿಗಳನ್ನು, ಭಾವನೆಗಳನ್ನು ವಿಶ್ಲೇಷಿಸಿ, ಅವನ್ನು ಸಮಾನತೆಯ ಚೌಕಟ್ಟಿಗೆ ತಂದು ಸ್ತ್ರೀ–ಪುರುಷರಿಬ್ಬರಿಗೂ ಅರ್ಥವಾಗುವಂತೆ ಪುನರ್ ರೂಪಿಸುವ ಒಂದು ಸಾಮಾಜಿಕ

ಚಿಂತನೆಯಾಗಿದೆ. ಸ್ತ್ರೀ-ಪುರುಷರ ಸಂಬಂಧಗಳಲ್ಲಿರುವ ತಾರತಮ್ಯವನ್ನು ಹೋಗಲಾಡಿಸಿ, ಒಂದು ಸ್ನೇಹಪೂರ್ಣ ವಾತಾವರಣ ನಿರ್ಮಾಣ ಮಾಡುವ ಪ್ರಯತ್ನವಾಗಿದೆ. ಮುಂದುವರೆದು ಹೇಳುವುದಾದರೆ ಸ್ತ್ರೀವಾದಿ ಚಿಂತನೆಯು ಸಾಮಾಜಿಕ ಸ್ವಾಸ್ಥ್ಯವನ್ನು ಕುರಿತದ್ದಾಗಿದೆ. ಅಂದರೆ ಒಬ್ಬರ ನೋವು, ಹಿಂಸೆ, ಅವಮಾನಗಳು ಇನ್ನೊಬ್ಬರ ಸುಖ, ಸಂತೋಷ, ಪ್ರತಿಷ್ಠೆಗಳಿಗೆ ಆಧಾರಗಳಾಗಬೇಕೆಂಬ ನೀತಿಯನ್ನು ವಿರೋಧಿಸುತ್ತದೆ. ಈ ಹಿನ್ನೆಲೆಯಲ್ಲಿ ಸ್ತ್ರೀವಾದಿ ಚಿಂತನೆಯನ್ನು "ಕುಟುಂಬದ ಒಳಗಾಗಲೀ, ಹೊರಗಾಗಲೀ, ಸಮಾಜವು ಹೆಣ್ಣಿನ ಮೇಲೆ ನಡೆಸುವ ದಬ್ಬಾಳಿಕೆ ಹಾಗೂ ಶೋಷಣೆಯ ಸ್ವರೂಪವನ್ನು ಅರ್ಥಮಾಡಿಕೊಂಡು ಅಂತಹ ಪರಿಸ್ಥಿತಿಯ ನಿವಾರಣೆಗಾಗಿ ಪ್ರಜ್ಞಾಪೂರ್ವಕವಾಗಿ ನಡೆಸುವ ಚಿಂತನೆ ಹಾಗೂ ಅದಕ್ಕನುಗುಣವಾದ ಚಟುವಟಿಕೆಗಳು ಎಂದು ನಿರ್ವಚಿಸಿಕೊಳ್ಳಬಹುದಾಗಿದೆ" (ಶ್ರೀಮತಿ ಎಚ್.ಎಸ್. 2003ಅ: ಪುಟ 13).

ಕಮಲಾಭಾಸಿನ್ ಮತ್ತು ಸಯ್ಯದ್ ಜಾನ್ [ಕಮಲಾಭಾಸಿನ್ ಮತ್ತು ಸಯ್ಯದ್ ಜಾನ್ (1989) 'ಸ್ತ್ರೀವಾದ-ದಕ್ಷಿಣ ಏಷ್ಯಾದಲ್ಲಿ ಅದರ ಪ್ರಸ್ತುತತೆ (ಅನುವಾದ. ವೆಂ. ವನಜ ಮತ್ತು ಎಚ್. ಆರ್. ರಾಜೇಶ್ವರಿ)] – ಎಂಬ ಪುಸ್ತಕದಲ್ಲಿ ಸ್ತ್ರೀವಾದ ಎಂದರೆ "ಸಮಾಜದಲ್ಲಿ, ಉದ್ಯೋಗದಲ್ಲಿ ಮತ್ತು ಕುಟುಂಬಗಳಲ್ಲಿ ಮಹಿಳೆಯರ ತುಳಿತ ಮತ್ತು ಶೋಷಣೆಯ ಬಗ್ಗೆ ಅರಿವು ಮೂಡಿಸಿ ಈ ಪರಿಸ್ಥಿತಿಯನ್ನು ಬದಲಾಯಿಸುವುದಕ್ಕಾಗಿ ಪುರುಷರು ಮತ್ತು ಮಹಿಳೆಯರು ಸೇರಿ ನಡೆಸುವ ಪ್ರಜ್ಞಾಪೂರ್ವಕ ಕ್ರಿಯೆ" (ವಿಜಯಲಕ್ಷ್ಮಿ ಕೆ.ಎಂ. 2005: ಪುಟ 4) ಎಂದು ವ್ಯಾಖ್ಯಾನಿಸುತ್ತಾರೆ. ಸ್ತ್ರೀವಾದವು ಪುರುಷ ಸಮಾಜದಿಂದ ನಿರೀಕ್ಷಿಸುವ ಅಂಶಗಳನ್ನು ಗಾಯಿತ್ರಿ ಎನ್. ರವರು ಈ ರೀತಿ ತಿಳಿಸುತ್ತಾರೆ – "ಸ್ತ್ರೀವಾದ ಎನ್ನುವುದು ಬೌದ್ಧಿಕ ಕಸರತ್ತು ಏನಲ್ಲ. ಸ್ವಾಭಿಮಾನಿಯಾದ ಹೆಣ್ಣೊಬ್ಬಳು ತನ್ನ ಘನತೆ ಗೌರವದ ಬಗ್ಗೆ ಜಾಗೃತಳಾಗಿ ತನ್ನ ಸುತ್ತಣ ಪರಿಸರದಿಂದಲೂ ಅಂತಹುದೇ ಪ್ರತಿಕ್ರಿಯೆಯನ್ನು ಬಯಸುವಂತಹುದಾಗಿದೆ. ಪ್ರಜ್ಞಾವಂತ ಪುರುಷರು ಸ್ತ್ರೀಯರಿಗೆ ತಕ್ಕ ಘನತೆ ಗೌರವಗಳಿಂದ ಅವರನ್ನು ಕಾಣುವುದು ಸ್ತ್ರೀವಾದವಾಗಿದೆ" (ವಿವಿಧ ಲೇಖಕರು 2006ಅ: ಪುಟ 13). ಇಂತಹ ಸ್ತ್ರೀವಾದಕ್ಕೆ ಶತ-ಶತಮಾನಗಳಿಂದ ರಚಿತವಾಗಿ ಬಂದಿರುವ ಪುರುಷ ಪ್ರಧಾನ ಮೌಲ್ಯ ವ್ಯವಸ್ಥೆಗಳು ಹೆಣ್ಣನ್ನು ನಿರ್ಲಕ್ಷಿಸಿರುವುದನ್ನು ಖಂಡಿಸಿ ಅವಳಿಗೆ ವಿಮೋಚನೆಯನ್ನೊದಗಿಸಿ ಸ್ತ್ರೀ-ಪುರುಷರ ನಡುವೆ ಸಮಾನತೆಯನ್ನು ಸೃಷ್ಟಿಸುವುದೇ ಮುಖ್ಯ ಧ್ಯೇಯವಾಗಿದೆ. ಆದರೆ ಸ್ತ್ರೀವಾದಿಗಳ ಪ್ರಕಾರ ಸ್ತ್ರೀ-ಪುರುಷರ ನಡುವೆ ಲಿಂಗಾಧಾರಿತ ಶ್ರಮವಿಭಜನೆ ಎಲ್ಲಿಯವರೆಗೆ ಇರುತ್ತದೋ ಅಲ್ಲಿಯವರೆಗೆ ಲಿಂಗ ಸಮಾನತೆ

ಸಾಧ್ಯವಾಗುವುದಿಲ್ಲ. ಎಲ್ಲಿಯವರೆಗೆ ಲಿಂಗ ಸಮಾನತೆ ಸಾಧ್ಯವಾಗುವುದಿಲ್ಲವೋ ಅಲ್ಲಿಯವರೆಗೆ ಅವಳ ವಿಮೋಚನೆ ಕೂಡ ಸಾಧ್ಯವಾಗುವುದಿಲ್ಲ (ಮಂಗಳಾ ಪ್ರಿಯದರ್ಶಿನಿ, 2007). ಈ ವಿಮೋಚನೆಯನ್ನು ಪಡೆಯಲು ಸ್ತ್ರೀವಾದವು ಚಿಕಿತ್ಸಕನ ರೀತಿ ಸಾಮಾಜಿಕ ಅವಗುಣಗಳನ್ನು ನಿವಾರಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಎಲ್.ಜಿ. ಮೀರಾರವರು "ಸ್ತ್ರೀವಾದವು ಸ್ತ್ರೀ-ಪುರುಷರಿಬ್ಬರನ್ನು ಕಾಡುವ ಲಿಂಗಭೇದದ ಕಾಯಿಲೆಯನ್ನು ಓಡಿಸುವ ಚಿಕಿತ್ಸಕ ಪ್ರಜ್ಞೆಯಾಗಿದ್ದು, ಸಾಮಾಜಿಕ ಜವಾಬ್ದಾರಿ ಇರುವ ಸಿದ್ಧಾಂತವಾಗಿದೆ ಮತ್ತು ಮಾನವರನ್ನು ಲಿಂಗಭೇದ ಶೋಷಣೆಯಿಂದ ಮುಕ್ತಿಗೊಳಿಸುವುದು ಅದರ ಧ್ಯೇಯವಾಗಿದೆ" (ಶೈಲಜ ಹಿರೇಮಠ 2009: ಪುಟ 92) ಮತ್ತು ವಿಜಯಲಕ್ಷ್ಮಿ ಕೆ.ಎಂ. ರವರ "ಸ್ತ್ರೀವಾದದ ಮುಖ್ಯ ಗುರಿ ಸ್ತ್ರೀಯರ ಪ್ರಗತಿ ಮತ್ತು ಸಮಾನತೆಯನ್ನು ಸಾಧಿಸುವುದು, ನಂತರ ಅವುಗಳನ್ನು ಸಾಮೂಹಿಕವಾದ, ಸಾಮಾಜಿಕವಾದ ಗುರಿಗಳೊಂದಿಗೆ ಬೆಸೆಯುವುದು ಮುಖ್ಯವಾಗಿ ಮನುಷ್ಯ-ಮನುಷ್ಯರ ನಡುವಿನ ಸಮಾನತೆಯನ್ನು ಬೆಳೆಸುವುದಾಗಿದೆ" (2005: ಪುಟ 5) ಎಂಬ ಹೇಳಿಕೆಗಳನ್ನು ಗಮನಿಸಬಹುದು.

ಈ ಎಲ್ಲಾ ವ್ಯಾಖ್ಯೆಗಳನ್ನು ಗಮನಿಸಿದರೆ ಸ್ತ್ರೀ-ಪುರುಷರಿಬ್ಬರಲ್ಲೂ ದ್ವಿಲಿಂಗ ದೃಷ್ಟಿಕೋನ ಅಗತ್ಯವಾಗಿ ಇರಬೇಕೆಂದು ಸ್ತ್ರೀವಾದಿಗಳು ಬಯಸುತ್ತಾರೆ. ಪುರುಷರು ಸ್ತ್ರೀಯರನ್ನು, ಸ್ತ್ರೀಯರು ಪುರುಷರನ್ನು ಸಮಾನವಾಗಿ ಕಂಡು ವ್ಯಕ್ತಿತ್ವಕ್ಕೆ ಧಕ್ಕೆ ಬಾರದಂತೆ ನಡೆಯಬೇಕು ಹಾಗೂ ಪುರುಷ ಪ್ರಧಾನ ವ್ಯವಸ್ಥೆ ಹೆಣ್ಣಿನ ಸ್ಥಾನಮಾನವನ್ನು ಪರಿಗಣಿಸಿ ಸಾಮಾಜಿಕವಾಗಿ ಅವಳನ್ನು ಸಮಾನವಾಗಿ ಕಾಣಬೇಕೆಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಇಲ್ಲಿಯವರೆಗೂ ಸ್ತ್ರೀಯರು ಸಮಾಜ ರಚನಾ ಕಾರ್ಯಗಳಲ್ಲಿ ನಿರ್ಲಕ್ಷ್ಯಕ್ಕೊಳಗಾಗಿ ಮೂಲೆಗುಂಪಾಗಿರುವುದನ್ನು ತೋರಿಸಿ ಮನುಷ್ಯ-ಮನುಷ್ಯರ ನಡುವೆ ಸಮಾನತೆ ಇರಬೇಕೆಂದು ತಿಳಿಸುತ್ತಾರೆ. ಒಟ್ಟಿನಲ್ಲಿ ಸ್ತ್ರೀವಾದವು ಮನುಷ್ಯರನ್ನು ಲಿಂಗಭೇಧ ನೀತಿಯಿಂದ ಬಿಡುಗಡೆಗೊಳಿಸಿ, ಅವರ ಪ್ರಗತಿಗೆ ಅವಕಾಶ ಮಾಡಿಕೊಟ್ಟು, ಸ್ತ್ರೀ-ಪುರುಷರ ನಡುವೆ ಸಮಾನತೆಯನ್ನು ಬೆಳೆಸುವ ಪಾತ್ರವನ್ನು ವಹಿಸುತ್ತದೆ.

3.4. ಸ್ತ್ರೀವಾದಕ್ಕೆ ಕಾರಣಗಳು

ಮೇಲಿನ ಹಿನ್ನೆಲೆಯನ್ನು ಗಮನಿಸಿದಾಗ ಪ್ರಧಾನ ಸಂಸ್ಕೃತಿಯು ಸ್ತ್ರೀಯನ್ನು ಅಧೀನ ಸ್ಥಿತಿಯಲ್ಲೇ ನೋಡುತ್ತಾ ಬಂದಿರುವುದು ತಿಳಿಯುತ್ತದೆ. ಅದು ಸಮಾಜದಲ್ಲಿ ಹೆಣ್ಣನ್ನು ಸ್ವತಂತ್ರ್ಯ ಜೀವಿಯಾಗಿ ಕಾಣದೆ ಪುರುಷನ ಏಳಿಗೆಗಾಗಿ ಮಾತ್ರ ಇರುವವಳು ಎಂದು ಬಿಂಬಿಸಿದೆ. ಪ್ರಧಾನಧಾರೆಯವರು ಸ್ತ್ರೀಯನ್ನು ಸದಾ ಅಂಕೆಯಲ್ಲಿರಿಸಿಕೊಂಡು ಬೆಳೆಸಿದ ಸಮಾಜವನ್ನು ಟೀಕೆ,

ವಿಮರ್ಶೆ ಮತ್ತು ಬರವಣಿಗೆಯ ಹೋರಾಟಗಳ ಮೂಲಕ ಅಸಮಾನತೆಗಳನ್ನು ತೊಡೆದು ಹಾಕಲೆಂದು ಸ್ತ್ರೀವಾದ ಹುಟ್ಟಿಕೊಂಡಿದೆ. ಸ್ತ್ರೀಯರ ಮೇಲೆ ನಡೆಯುತ್ತಿದ್ದ ದೌರ್ಜನ್ಯ, ಶೋಷಣೆ, ಅನ್ಯಾಯ, ಅಸಮಾನತೆಗಳನ್ನು ತೊಡೆದು ಆಕೆಯ ವ್ಯಕ್ತಿತ್ವ ಅರಿಯಲು ಅವಳಿಗೆ ಸ್ವಾತಂತ್ರ್ಯ ಮತ್ತು ಸಮಾನತೆ ಬೇಕು ಎಂಬ ಅಭಿಪ್ರಾಯ ಅಥವಾ ಚಿಂತನೆ ಸ್ತ್ರೀವಾದ ಹುಟ್ಟಲು ಮುಖ್ಯ ಕಾರಣವಾಗಿದೆ. ಸ್ತ್ರೀವಾದದ ಹರಿಕಾರಳಾದ ಮೇರಿ ವುಲ್ಫ್‌ಸ್ಟನ್‌ಕ್ರಾಫ್ಟ್ ತನ್ನ 'ದಿ ವಿಂಡಿಕೇಶನ್ ಆಫ್ ದಿ ರೈಟ್ಸ್ ಆಫ್ ವುಮೆನ್' (The Vindication of the Rights of Women) ಎಂಬ ಕೃತಿಯಲ್ಲಿ ಹೇಳುವ "ಮಹಿಳೆಯನ್ನು ದೇವರು ಪುರುಷನ ಮನರಂಜನೆಗೆಂದು, ಆತನ ಕಾಮ ತೃಪ್ತಿಗೆಂದು ಸೃಷ್ಟಿಸಿಲ್ಲ, ಆಕೆಗೂ ತನ್ನದೇ ಆದ ವ್ಯಕ್ತಿತ್ವವಿದೆ. ಗೊತ್ತು ಗುರಿಗಳಿವೆ" (ವಿವಿಧ ಲೇಖಕರು 2006ಅ: ಪುಟ 3) ಈ ಮಾತುಗಳು ಹೆಣ್ಣಿಗೂ ಸ್ಥಾನಮಾನ, ವ್ಯಕ್ತಿತ್ವಗಳಿವೆ, ಹೆಣ್ಣು ಕೂಡ ಸಮಾಜದಲ್ಲಿ ಪುರುಷನಿಗೆ ಸಮಾನಳು, ಅಧೀನಳಲ್ಲ ಎಂಬುದನ್ನು ತೋರಿಸುತ್ತದೆ.

ಸ್ತ್ರೀವಾದ ಸ್ತ್ರೀಯರಿಗೆ ಮಾನವತ್ವವನ್ನು ದೊರಕಿಸಿ ಕೊಡುವ ದಿಕ್ಕಿನಲ್ಲಿ ಚಿಂತಿಸುತ್ತದೆ. ಇದನ್ನು ಗಮನಿಸಿದರೆ ಸ್ತ್ರೀವಾದವು ಸ್ತ್ರೀಯನ್ನು ಪುರುಷರಿಂದ ಬಿಡುಗಡೆಗೊಳಿಸುವುದಾಗಲೀ ಅಥವಾ ಪುರುಷನನ್ನು ದ್ವೇಷಿಸುವುದಾಗಲೀ ಆಗಿರದೆ, ಸ್ತ್ರೀ–ಪುರುಷರಿಬ್ಬರೂ ಸಮಾನವಾಗಿ ಬದುಕುವುದನ್ನು ಪ್ರತಿಪಾದಿಸುವುದಾಗಿದೆ. ಈ ರೀತಿಯ ಸಮಾನತೆ ಬಂದರೆ ಸ್ತ್ರೀಯ ವಿಮೋಚನೆಯಾಗುತ್ತದೆ ಎಂದು ಸ್ತ್ರೀವಾದ ತಿಳಿಸುತ್ತದೆ. ಸ್ತ್ರೀವಾದವು ಒಂದು ಅಧ್ಯಯನ ವಿಷಯವಾಗಿರದೆ, ಅದು ಮಹಿಳೆ ತನ್ನ ನಿತ್ಯ ಬದುಕಿನಲ್ಲಿ ನಡೆಯುತ್ತಿರುವುದನ್ನು ಅರ್ಥಮಾಡಿಕೊಳ್ಳುವುದರ ಜೊತೆಗೆ ಸಂಸ್ಕೃತಿಯನ್ನು ಪ್ರಶ್ನಿಸಿ ಸುಧಾರಿಸುವ ಹೋರಾಟವಾಗಿದೆ. ಸ್ತ್ರೀವಾದದಲ್ಲಿ ಗಮನಿಸಬೇಕಾದ ಅಂಶವೆಂದರೆ ಗಂಡು–ಹೆಣ್ಣಿನ ನಡುವಿನ ದೈಹಿಕ ವ್ಯತ್ಯಾಸ ಚರ್ಚೆಯ ವಿಷಯವಾಗಿಲ್ಲ, ಬದಲಿಗೆ ಸ್ತ್ರೀ–ಪುರುಷ ಸಂಬಂಧ ಸಾಮಾಜಿಕವಾಗಿ, ಚಾರಿತ್ರಿಕವಾಗಿ, ಸಾಂಸ್ಕೃತಿಕವಾಗಿ ಬಂದಿರುವ ಭಿನ್ನತೆಯನ್ನು ಸ್ತ್ರೀವಾದ ಪ್ರಶ್ನಿಸುತ್ತದೆ. ಜೂಲಿಯೆಟ್ ಮಿಚೆಲ್ ಹೇಳಿರುವಂತೆ "ಗಂಡು–ಹೆಣ್ಣಿನ ನಡುವಿನ ದೈಹಿಕ ವ್ಯತ್ಯಾಸಗಳು ಸಾಮಾಜಿಕ ಜೀವನವನ್ನು ನಿರ್ಣಯಿಸಿವೆ ಎನ್ನುವುದು ಮತೀಯ ಸಂಕಲ್ಪ, ಬದಲಾಗಿ ಸ್ತ್ರೀ–ಪುರುಷರ ಸಾಮಾಜಿಕ ಸಂಬಂಧಗಳಲ್ಲಿ ವೈರುಧ್ಯವಿದೆ. ಆದರೆ ಈ ವೈರುಧ್ಯ ಸಹಜವಾದುದಾಗಿರದೆ ಚಾರಿತ್ರಿಕವಾಗಿ ರೂಪುಗೊಂಡಿದೆ ಎಂದು ಸ್ತ್ರೀವಾದ ತಿಳಿಸುತ್ತದೆ" (ತೇಜಸ್ವಿನಿ ನಿರಂಜನ, ಸೀಮಂತಿನಿ ನಿರಂಜನ, 1994: ಪುಟ 18). ಮೇಲೆ ಚರ್ಚಿಸಿದಂತೆ ಸ್ತ್ರೀವಾದವು ಮಹಿಳೆಯರ ಸ್ಥಿತಿಗತಿಗಳನ್ನು ಅಧ್ಯಯನ ಮಾಡಿ, ಅವಳನ್ನು ಪುರುಷ ಪ್ರಧಾನ ಸಮಾಜದ ಶೋಷಣೆ, ಅನ್ಯಾಯಗಳಿಂದ ಮುಕ್ತಿಗೊಳಿಸುವ

ಕಾರಣಗಳನ್ನು ಹೊಂದಿದೆ. ಸ್ತ್ರೀಯನ್ನು ಸಮಾಜದ ಒಬ್ಬ ವ್ಯಕ್ತಿಯನ್ನಾಗಿ ಪರಿಗಣಿಸಿ ಅವಳಿಗೆ ಸಿಗಬೇಕಾದ ಸ್ವಾತಂತ್ರ್ಯ ಸಮಾನತೆಯನ್ನು ಸೃಷ್ಟಿಸುವ ಧ್ಯೇಯವನ್ನು ಇಟ್ಟುಕೊಂಡಿದೆ. ಈ ಹಿನ್ನೆಲೆಯಲ್ಲಿ ಸ್ತ್ರೀವಾದವು ವ್ಯಕ್ತಪಡಿಸಿರುವಂತೆ ಸ್ತ್ರೀ–ಪುರುಷರ ನಡುವಿನ ಸಮಾನತೆ ಮತ್ತು ಅಸಮಾನತೆಯ ಅಂಶಗಳನ್ನು ಚರ್ಚಿಸೋಣ.

3.5. ಸ್ತ್ರೀವಾದಿ ನೆಲೆಯಲ್ಲಿ ಸಮಾನತೆ ಮತ್ತು ಅಸಮಾನತೆ

ಮಹಿಳಾ ಸಾಹಿತ್ಯವು ಸ್ತ್ರೀವಾದಿ ಹಿನ್ನೆಲೆಯಲ್ಲಿ ಸಮಾಜದಲ್ಲಿ ಬಳಕೆಯಲ್ಲಿರುವ ರೀತಿ–ನೀತಿಗಳಿಂದ, ಹೆಣ್ಣಿನ ಮೇಲೆ ನಡೆಯುತ್ತಿರುವ ಅಸಮಾನತೆಯನ್ನು ತೋರಿಸುತ್ತದೆ. ಶ್ರೀಮತಿ ಎಚ್.ಎಸ್. ರವರು ಹೇಳುವಂತೆ ಪುರುಷ ಪ್ರಧಾನ ಬೌದ್ಧಿಕ ಪ್ರಪಂಚದಲ್ಲಿ ಮಹಿಳೆಯರ ಅಸ್ತಿತ್ವ ದಾಖಲಾಗಿ ಮಹಿಳೆಯರು ಸಾಹಿತ್ಯ ರಚನೆಯ ಮೂಲಕ ಸ್ತ್ರೀ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಪ್ರಾರಂಭಿಸಿ, ಅಸಮಾನತೆ, ಅನ್ಯಾಯಗಳನ್ನು ಪ್ರತಿಭಟಿಸಿದ್ದು ಚಾರಿತ್ರಿಕ ಘಟನೆಯಾಗಿದೆ (ಶ್ರೀಮತಿ ಎಚ್.ಎಸ್. 2006: ಪುಟ 8). ಈ ಹಿನ್ನೆಲೆಯಲ್ಲಿ ಸ್ತ್ರೀವಾದಿ ಸಾಹಿತ್ಯವು ಪಾಶ್ಚಾತ್ಯ ದೇಶಗಳಲ್ಲಿ ಬಂಡವಾಳಶಾಹಿ ಸಮಾಜದ ವಿರುದ್ಧ ಶುರುವಾಯಿತಾದರೂ, ಮುಂದಿನ ದಿನಗಳಲ್ಲಿ ಅದು ಸ್ತ್ರೀಯರ ಸಾಮಾಜಿಕ, ಸಾಂಸ್ಕೃತಿಕ ಸ್ಥಾನಮಾನಗಳು ಅನ್ಯಾಯ, ಶೋಷಣೆಯ ವಿರುದ್ಧ ಚಿಂತಿಸುವ ಪ್ರಮುಖ ಚಳುವಳಿಯಾಗಿ ಬೆಳೆಯಿತು. ಈ ಹಿನ್ನೆಲೆಯಲ್ಲಿ ಕೋಪನ್‌ಹೇಗನ್‌ನಲ್ಲಿ 1910ರಲ್ಲಿ ನಡೆದ ಅಂತರಾಷ್ಟ್ರೀಯ ಸಮಾಜವಾದಿ ಮಹಿಳಾ ಕಾಂಗ್ರೆಸ್‌ನ್ನು ಉದ್ದೇಶಿಸಿ ಮಾತನಾಡಿದ ಕ್ಲಾರಾ ಮಾರ್ಚ್ 8 ನ್ನು 'ಅಂತರಾಷ್ಟ್ರೀಯ ಮಹಿಳಾ ದಿನ' ಎಂದು ಘೋಷಿಸಿ, ಜಗತ್ತಿನಾದ್ಯಂತ ಮಹಿಳೆಯರು ಸಮಾನ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಹಕ್ಕುಗಳಿಗಾಗಿ ಹೋರಾಡುವ ಉದ್ದೇಶಕ್ಕಾಗಿ ಬಳಸಬೇಕೆಂದು ತಿಳಿಸಿದರು. ಹೀಗೆ ಬೆಳೆದ ಮಹಿಳೆಯರ ಕುರಿತ ಅಧ್ಯಯನಗಳ ಮುಖ್ಯ ವಿಷಯ ಸ್ತ್ರೀ–ಪುರುಷರ ನಡುವಿನ ಅಸಮಾನತೆ. ಲಿಂಗಾಧಾರಿತ ಅಸಮಾನತೆ ಹುಟ್ಟು ಹಾಕಿದ ಗಂಡು ಹೆಣ್ಣಿನ ನಡುವಿನ ಕೆಲಸ ಕಾರ್ಯಗಳ ವಿಭಜನೆ, ಲಿಂಗಭೇದ ಮುಂತಾದವುಗಳನ್ನು ಸ್ತ್ರೀ ಸಾಹಿತ್ಯ ಚರ್ಚಿಸುತ್ತದೆ. ಈ ನಿಟ್ಟಿನಲ್ಲಿ ಸ್ತ್ರೀವಾದವು ಲಿಂಗ ಅಸಮಾನತೆಯನ್ನು ದಾಟಿ ಸಮಾನತೆಯನ್ನು ಸ್ಥಾಪಿಸುವುದಾಗಿದೆ.

ಸ್ತ್ರೀವಾದಿ ಹಿನ್ನೆಲೆಯಲ್ಲಿ ಸಮಾಜದಲ್ಲಿ ಪ್ರಚಲಿತದಲ್ಲಿರುವ ಸ್ತ್ರೀ–ಪುರುಷ ನಡುವಿನ ಅಸಮಾನತೆಯನ್ನು ಈ ಕೆಳಕಂಡಂತೆ ನೋಡಬಹುದು. ಪುರುಷ ಪ್ರಧಾನ ಸಮಾಜವು ಹೆಣ್ಣಿಗೆ ಅವಳ ಹುಟ್ಟಿನಿಂದಲೇ ತಾರತಮ್ಯ ತೋರಿ, ಶೋಷಿಸುತ್ತಾ ಬಂದಿವೆ. ಸ್ತ್ರೀ–ಪುರುಷರ ನಡುವಿನ ಈ ಅಸಮಾನತೆ ಸಮಾಜದ ಎಲ್ಲ ವರ್ಗಗಳಲ್ಲೂ ಅಂದರೆ ಕೆಳವರ್ಗ, ಮೇಲ್ವರ್ಗ, ಶ್ರೀಮಂತ–

ಬಡವರ ನಡುವೆ ಕಂಡುಬರುತ್ತದೆ. ವಿವಿಧ ಆಚರಣೆಗಳು, ಮೂಢನಂಬಿಕೆಗಳು, ಸಂಪ್ರದಾಯಗಳು ಮತ್ತು ಮುಖ್ಯವಾಗಿ ಧರ್ಮದ ಚೌಕಟ್ಟಿನಲ್ಲಿ ಸ್ತ್ರೀಯನ್ನು ಬಂಧಿಯನ್ನಾಗಿ ಮಾಡಲಾಗಿದೆ. ಆರ್ಥಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ ಯಾವುದೇ ಸೌಲಭ್ಯ, ಸವಲತ್ತು, ಅವಕಾಶಗಳನ್ನು ನೀಡದೆ ಎಲ್ಲವನ್ನು ಪುರುಷರಿಗೆ ಕೇಂದ್ರೀಕರಿಸಿ ಸ್ತ್ರೀಯರಿಗೆ ಅಸಮಾನತೆಯನ್ನುಂಟು ಮಾಡಲಾಗಿದೆ.

ಚಾರಿತ್ರಿಕವಾಗಿ ಗಮನಿಸುವುದಾದರೆ ಹೆಣ್ಣಿಗೆ ಮಾತೃಪ್ರಧಾನ ವ್ಯವಸ್ಥೆಯಲ್ಲಿ ಬಹಳ ಪ್ರಾಮುಖ್ಯತೆ ನೀಡಲಾಗಿತ್ತು ಮತ್ತು ಕುಟುಂಬ ಜೀವನ ಅವಳ ಮುಖಾಂತರವೇ ನಡೆಯುತ್ತಿತ್ತು. ಈ ಸಂದರ್ಭದಲ್ಲಿ ಪ್ರಧಾನ–ಅಧೀನ ಅಂಶಗಳು ಇರಲಿಲ್ಲ. ಆದರೆ ಕಾಲಕ್ರಮೇಣ ಪಿತೃಪ್ರಧಾನ ವ್ಯವಸ್ಥೆಯು ಬೆಳೆಯುತ್ತಾ ಮಾತೃಪ್ರಧಾನ ವ್ಯವಸ್ಥೆಯನ್ನು ಬದಲಾಯಿಸುತ್ತಾ ಬಂದಂತೆ ಪ್ರಧಾನ ಅಧೀನ ವರ್ಗಗಳು ಹುಟ್ಟಿದವು. ಇದಕ್ಕೆ ಕಾರಣ ಪ್ರಕೃತಿಯ ಮೇಲೆ ಹಿಡಿತ ಸಾಧಿಸಿದಂತೆ, ಪುರುಷ ಹೆಣ್ಣನ್ನು ಕೂಡ ಪ್ರಕೃತಿಗೆ ಹೋಲಿಸಿ ಅವಳ ಮೇಲೆ ಹಿಡಿತ ಸಾಧಿಸಿ ತನ್ನ ಅಧೀನದಲ್ಲಿರಿಸಿ, ಇದೇ ವಲಯದಲ್ಲಿ ಬಂಧಿಸಿದ ಉದಾಹರಣೆಗೆ ಭಾರತದಲ್ಲಿ ಆರ್ಯರ ಬೆಳವಣಿಗೆಯನ್ನು ಗಮನಿಸಬಹುದು. ಆರ್ಯರು ಕ್ರಿ.ಪೂ. 1000ದ ವೇಳೆಗೆ ಬಂದು ತಮ್ಮ ಪ್ರಾಬಲ್ಯವನ್ನು ಹೆಚ್ಚಿಸುತ್ತಾ ಹೋದಂತೆ ದ್ರಾವಿಡರೊಡನೆ ಘರ್ಷಣೆಗಳಾಗುತ್ತಿದ್ದವು. ಆರ್ಯ ಸಂಸ್ಕೃತಿಯ ಪ್ರಬಲತೆ ಬೆಳೆದಂತೆ ಸ್ಥಳೀಯ ಮಾತೃಪ್ರಧಾನ ವ್ಯವಸ್ಥೆ ಅವನತಿ ಹೊಂದುತ್ತಾ ಹೋಯಿತು ಮತ್ತು ಆರ್ಯ ಪ್ರಭಾವವಾದ ಲಿಂಗ ಅಸಮಾನತೆ ಸಮಾಜದಲ್ಲಿ ಕಾಣಿಸಿಕೊಂಡಿತು. ಈ ಲಿಂಗ ಅಸಮಾನತೆ ಇಂದಿಗೂ ವಿವಿಧ ಆಯಾಮಗಳಲ್ಲಿ ಬದಲಾಗದಷ್ಟು ಸ್ವರೂಪ ತಾಳಿದೆ. ಇಂದು ಕೂಡ ಮಹಿಳೆ ಕುಟುಂಬದ ಒಳಗೆ ಮತ್ತು ಹೊರಗೆ ಶೋಷಣೆಗೆ ಒಳಗಾಗುತ್ತಿದ್ದಾಳೆ. ಇದರ ಜೊತೆಗೆ 'ಜ್ಞಾನ'ವನ್ನು ಕೇವಲ ಮೇಲ್ಜಾತಿ ಪುರುಷರ ಆಸ್ತಿಯಾಗಿಸಿದ್ದು ಕೂಡ ಆರ್ಯ ಸಂಸ್ಕೃತಿಯೇ. ಈ ಎಲ್ಲದರಿಂದ ಸ್ತ್ರೀ ಪುರುಷರ ನಡುವೆ ಅಸಮಾನತೆ ಉಂಟಾಗಿ ಸ್ತ್ರೀ ಶೋಷಣೆ ಹೆಚ್ಚಾಯಿತು. ವಿದ್ಯೆ, ಬರವಣಿಗೆಗಳು ಬೆಳೆದಂತೆ ಪುರಾಣಗಳನ್ನು ಬರೆಯುತ್ತಾ ಪಿತೃಪ್ರಧಾನ ವ್ಯವಸ್ಥೆ ಬಲಗೊಳ್ಳುವಂತೆ ಮಾಡಿ, ಸ್ತ್ರೀಯನ್ನು ಕುರಿತಂತೆ ಅಧೀನ ಪಾತ್ರಗಳನ್ನು ಕಲ್ಪಿಸಿ ಅಥವಾ ಸೃಷ್ಟಿಸಿ ಪರಾಧೀನತೆ ಪೋಷಿಸಿದರು. ಪುರುಷ ಪ್ರಾಧಾನ್ಯತೆಯನ್ನು ಅರಿಯಲು ರಾಮಾಯಣದಲ್ಲಿ ಬರುವ ಸೀತೆಯ ಪಾತ್ರವನ್ನು ಸೂಚ್ಯವಾಗಿ ಇಲ್ಲಿ ಗಮನಿಸಬಹುದು. ಸೀತೆಯು ತನ್ನ ಪತಿ ರಾಮನ ಆಸಕ್ತಿ ಮತ್ತು ಆಸೆಗಳನ್ನು ಪಾಲಿಸುವುದರಲ್ಲೇ ಜೀವನದ ಸಾರ್ಥಕತೆಯನ್ನು ಕಾಣುತ್ತಾಳೆ. ರಾಮ ಒಬ್ಬ ಸಾಮಾನ್ಯ ಪ್ರಜೆಯ ಮಾತು ಕೇಳಿ ತನ್ನನ್ನು ಅಗ್ನಿ ಪರೀಕ್ಷೆಗೆ ಗುರಿ ಮಾಡಿ

ಕಾಡಿಗಟ್ಟಿದಾಗಲೂ ಸೀತೆ ರಾಮನ ವಿರುದ್ಧ ಪ್ರಶ್ನಿಸುವುದಿಲ್ಲ, ಬದಲಿಗೆ ಸ್ತ್ರೀಗೆ ಶೀಲ ಮತ್ತು ಪಾತಿವ್ರತ್ಯದಂತಹ ಗುಣಗಳೇ ಪರಮಶ್ರೇಷ್ಠವೆಂದು ನಂಬುತ್ತಾಳೆ. ಇದು ನಮ್ಮ ಪುರಾಣಗಳು ಮತ್ತು ಸಮಾಜದಲ್ಲಿ ಸ್ತ್ರೀಯನ್ನು ಪರಾಧೀನಳನ್ನಾಗಿ ಚಿತ್ರಿಸಿರುವುದನ್ನು ನಿದರ್ಶಿಸುತ್ತದೆ.

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು ಗಂಡಿನ ಆಸ್ತಿಯಾಗಿ ಉಳಿದಳು. ತಂದೆಯ ಆಸರೆಯಲ್ಲಿ ಅಥವಾ ಗಂಡನ ಆಸರೆಯಲ್ಲಿಯೇ ಹೆಣ್ಣು ಬದುಕಬೇಕಾದ ಪರಿಸ್ಥಿತಿಯನ್ನು ನಿರ್ಮಾಣ ಮಾಡಲಾಯಿತು. ಈ ಅಸಮಾನ ವ್ಯವಸ್ಥೆಯಲ್ಲಿ ಗಂಡಸಿನ ಸ್ಥಾನಮಾನಕ್ಕೆ ತುಲನೆ ಮಾಡಿದರೆ ಹೆಣ್ಣಿಗೆ ಯಾವ ಬೆಲೆಯೂ ಇಲ್ಲದೆ ಕೇವಲ ಗುಲಾಮಳ ಪರಿಸ್ಥಿತಿಯಲ್ಲಷ್ಟೇ ಬದುಕಬಹುದು. ಯಾವಾಗಲೂ ಸ್ತ್ರೀಯನ್ನು ಪುರುಷನ ಅಧೀನತೆಯಲ್ಲಿ ಕಾಣಲು ದೈಹಿಕ ಶಕ್ತಿಯ ವ್ಯತ್ಯಾಸವೇ ಕಾರಣವಾಗಿದೆ ಎನ್ನಬಹುದು. ಏಕೆಂದರೆ ಹೆಚ್ಚು ದೈಹಿಕ ಶಕ್ತಿ ಬೇಕಾಗಿರುವ ಕೆಲಸ ಕಾರ್ಯಗಳನ್ನು ಪುರುಷರೇ ನಿರ್ವಹಿಸುತ್ತಾ ಬಂದಿರುವುದು ಮತ್ತು ಹೆಣ್ಣನ್ನು ಈ ಕಾರ್ಯಗಳಿಂದ ದೂರ ಇಟ್ಟಿರುವುದನ್ನು ಗಮನಿಸಿದರೆ ಈ ಅಂಶ ತಿಳಿಯುತ್ತದೆ. ಆದರೆ ಎಲ್ಲ ಸಮಯದಲ್ಲೂ ದೈಹಿಕ ಶಕ್ತಿಯೇ ಪ್ರಧಾನವಾಗಿರದೆ ಬದಲಾಗುತ್ತಿರುತ್ತದೆ.

ಸಮಾಜದಲ್ಲಿ ಗಂಡು-ಹೆಣ್ಣು ಎಂಬ ಅಸಮಾನತೆ ಅದರ ಅರ್ಥಕಲ್ಪನೆಯಲ್ಲೇ ಇರುವುದನ್ನು ಕಾಣಬಹುದು. ಪ್ರಾಕೃತಿಕವಾಗಿ ಗಮನಿಸಿದರೆ ಹೆಣ್ಣು ಹುಟ್ಟುತ್ತಾ ಹೆಣ್ಣಾಗಿ ಹುಟ್ಟುವುದಿಲ್ಲ, ಆದರೆ ಸಮಾಜ ಅವಳನ್ನು ಹೆಣ್ಣಾಗಿ ನಿರ್ಮಿಸುತ್ತೆ. ಸಿಮೋನ್ ದಿ ಬೋವಾ ತಮ್ಮ 'ದಿ ಸೆಕೆಂಡ್ ಸೆಕ್ಸ್'ನಲ್ಲಿ ತಿಳಿಸಿರುವಂತೆ "ಸ್ತ್ರೀಯು ಮೂಲತಃ ರೂಪಿಸಲ್ಪಟ್ಟವಳು. ಹೆಣ್ಣು ನಿರ್ಧಿಷ್ಟ ಪ್ರಕ್ರಿಯೆಗಳಿಂದ ಆಗುತ್ತಾಳೆಯೇ ವಿನಃ ಯಾರೂ ಹೆಣ್ಣಾಗಿ ಹುಟ್ಟುವುದಿಲ್ಲ. ಇದರ ಜೊತೆಗೆ ಸಮಾಜ ಸ್ತ್ರೀಗೆಂದೇ ನಿಗದಿಗೊಳಿಸಿರುವ ಗುಣಗಳು ಅವಳ ಸಹಜ ಗುಣಗಳಲ್ಲ, ಬದಲಿಗೆ ನಮ್ಮ ಸಮಾಜ ಮತ್ತು ಸಂಸ್ಕೃತಿ ಬೆಳೆಸಿದ ಪರಾಧೀನತೆಯ ಗುಣಗಳಾಗಿವೆ. ಹೆಣ್ಣಿನ ಮನಸ್ಸು ಗಂಡಸಿನ ಮನಸ್ಸಿಗಿಂತ ವಿಭಿನ್ನವಾಗಿರುತ್ತದೆ ಎಂದು ತಿಳಿದ ಪುರುಷ ಸಮಾಜ, ಹೆಣ್ಣಿನ ಮನಸ್ಸು ಸುಕೋಮಲ ಅಥವಾ ಮೃದು ಎಂದು ತಿಳಿಸಿ ಕುಟುಂಬದೊಳಗಡೆ ಇದ್ದು ಮಗುವನ್ನು ಹೆರುವ, ಲಾಲನೆ-ಪಾಲನೆ ಮಾಡುವ, ಮನೆಯ ಒಳಗಿನ ಕೆಲಸಕಾರ್ಯಗಳನ್ನು ನಿರ್ವಹಿಸುವುದೇ ಸ್ತ್ರೀಯ ಸಹಜ ಗುಣವೆಂದು ಬಿಂಬಿಸಿ, ಬೆಳೆಸಿದೆ. ಈ ಎಲ್ಲದಕ್ಕೂ ಮೂಲವಾಗಿ ಆಕೆಯನ್ನು ಪೂಜನೀಯಳನ್ನಾಗಿ ಮಾಡಿ, ಏನನ್ನೂ ಪ್ರಶ್ನಿಸದೆ, ವಿರೋಧಿಸದೆ ಇರುವ ರೀತಿಯಲ್ಲಿ ಬಂಧಿಸಿ ಗಂಡು-ಹೆಣ್ಣಿನ ನಡುವೆ ಅಸಮಾನತೆಯನ್ನು ಸೃಷ್ಟಿಸಿದೆ" (ಶ್ರೀಮತಿ ಎಚ್.ಎಸ್. 2007: ಪುಟ 5) ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಿನ ಸ್ಥಾನವನ್ನು ವುಲ್ ಸ್ಟೋನ್ ಕ್ರಾಪ್ಟ್ ತನ್ನ ಕೃತಿ

The Vindication of the Rights of Women ನಲ್ಲಿ ಈ ರೀತಿ ವಿಶ್ಲೇಷಿಸುತ್ತಾಳೆ "ಕಾಲ್ಪನಿಕವಾದ ಮಹಿಳೆಗೆ ಅತ್ಯಂತ ಮಹತ್ವದ ಸ್ಥಾನವಿದೆ. ಆದರೆ ವಾಸ್ತವಿಕವಾಗಿ ಅವಳು ಸಂಪೂರ್ಣವಾಗಿ ಕಡೆಗಣಿಸಲ್ಪಟ್ಟಿದ್ದಾಳೆ. ಕಾವ್ಯದಲ್ಲಿ ಮೊದಲಿಂದ ತುದಿಯವರೆಗೂ ಅವಳೇ ವ್ಯಾಪಿಸಿರುತ್ತಾಳೆ. ಆದರೆ ಚರಿತ್ರೆಯಿಂದ ಮಾತ್ರ ಗೈರು ಹಾಜರಾಗುತ್ತಾಳೆ. ಕಾಲ್ಪನಿಕ ಬರಹಗಳಲ್ಲಿ ಆಕೆ ರಾಜ ಮಹಾರಾಜರನ್ನು ವಿಜಯಿಗಳನ್ನು ಆಳುತ್ತಿರುತ್ತಾಳೆ. ನಿಜ ಜೀವನದಲ್ಲಿ ತನ್ನ ತಂದೆ ತಾಯಿಗಳ ಬಲವಂತಕ್ಕೆ ಅವಳ ಬೆರಳಿಗೆ ಉಂಗುರ ತೊಡಿಸಿದ ಯಾವುದೇ ಹುಡುಗನ ಆಳಾಗಿದ್ದಾಳೆ. ಸಾಹಿತ್ಯದಲ್ಲಿ ಕೆಲವು ಅತ್ಯಂತ ಸ್ಫೂರ್ತಿದಾಯಕ ಶಬ್ಧಗಳನ್ನು, ಗಾಢಚಿಂತನೆಗಳನ್ನು ಮಾಡುವ ಆಕೆ ನಿಜ ಜೀವನದಲ್ಲಿ ಓದಲಾರದ, ಮಾತುಬಾರದ ಮೂಢೆಯಾಗಿದ್ದಾಳೆ, ಕೇವಲ ತನ್ನ ಗಂಡನ ಆಸ್ತಿಯಾಗಿದ್ದಾಳೆ" (ತೇಜಸ್ವಿನಿ ನಿರಂಜನ, ಸೀಮಂತಿನಿ ನಿರಂಜನ 1994: ಪುಟ 41). ಆದರೆ ಇಲ್ಲಿ ಗಮನಿಸಬೇಕಾದ ವಿಷಯವೆಂದರೆ ಕುಟುಂಬದೊಳಗಿನ ಎಲ್ಲ ಕೆಲಸ ಕಾರ್ಯಗಳೂ ಸ್ತ್ರೀಯ ಕಾರ್ಯಗಳೇ ಆದರೂ ಅವಳ ಶ್ರಮ ಅಥವಾ ಮಾಡಿದ ಕೆಲಸವನ್ನು ಪರಿಗಣನೆಗೆ ತೆಗೆದುಕೊಳ್ಳದೆ ಇರುವುದು ಮತ್ತು ನಿರ್ಲಕ್ಷಿಸಿರುವುದು. ಮಲ್ಲಿಕಾ ಘಂಟಿಯವರು ಹೇಳುವಂತೆ "ಭಾರತೀಯ ಸಮಾಜದಲ್ಲಿ ಕುಟುಂಬ ಬಲಿಷ್ಠವಾದ ಘಟಕ. ಈ ಘಟಕ ಎಲ್ಲಿಯವರೆಗೂ ಲಿಂಗ ತಾರತಮ್ಯದ ಮೇಲೆ ನಿಂತಿರುತ್ತದೆಯೋ ಅಲ್ಲಿಯವರೆಗೂ ಮಹಿಳೆ ಇದರ ಶೋಷಣೆ, ದಬ್ಬಾಳಿಕೆಗೆ ಒಳಗಾಗಬೇಕಾಗುತ್ತದೆ. ಕುಟುಂಬ ಸಮಾಜಗಳೆಂಬ ಘಟಕಗಳಲ್ಲಿ ಮಹಿಳೆಗೆ ಸಮಾನ ಅವಕಾಶ ಮತ್ತು ಸ್ಥಾನ, ಅಧಿಕಾರವನ್ನು ಹೊಂದಿದಾಗ ವ್ಯಕ್ತಿಗತ ನೆಲೆಯಲ್ಲಿ ಮಹಿಳೆ ಬಲಿಷ್ಠಳಾಗಲು ಸಾಧ್ಯವಾಗುತ್ತದೆ" (ಸಬಿಹಾ ಭೂಮಿಗೌಡ, ಮಲ್ಲಿಕಾ ಘಂಟಿ 2006: ಪುಟ 27). ಈ ಹೇಳಿಕೆಯನ್ನು ಗಮನಿಸಿದರೆ ನಮ್ಮ ಕುಟುಂಬ, ಸಮಾಜ ವ್ಯವಸ್ಥೆಯು ಅಸಮಾನತೆಯಿಂದ ಕೂಡಿದೆ ಇದನ್ನು ಹೋಗಲಾಡಿಸುವುದು ಅವಶ್ಯ ಮತ್ತು ಇದಕ್ಕೆ ಲಿಂಗ ತಾರತಮ್ಯ ನಿವಾರಣೆಯಾಗಬೇಕು ಎಂದು ತಿಳಿಯುತ್ತದೆ. ಈ ಸಮಾಜ ಮಹಿಳೆಯು ತಾನು ಮಾಡುವ ಕೆಲಸ ಕಾರ್ಯಗಳಿಗೆ ಪ್ರತಿಫಲವನ್ನು ಕೇಳದೇ ಇರುವ ಗುಣವನ್ನು ಬೆಳೆಸಿ, ಅಂತಹ ಸಂದರ್ಭಗಳನ್ನು ಸೃಷ್ಟಿಮಾಡಿ ಆರ್ಥಿಕ ಅಸಮಾನತೆಯನ್ನು ಮೆರೆದಿದೆ. ಕೂಲಂಕುಶವಾಗಿ ನೋಡಿದರೆ ಆರ್ಥಿಕ ಅಸಮಾನತೆ ಇತರೆ ಎಲ್ಲ ಅಸಮಾನತೆಗಳಿಗೂ ಎಡೆಮಾಡಿಕೊಡುತ್ತದೆ.

ಮೇಲೆ ಚರ್ಚಿಸಿದ ಸ್ತ್ರೀವಾದಿ ಹಿನ್ನೆಲೆಯ ಅಂಶಗಳನ್ನು ಗಮನಿಸಿದರೆ ಗಂಡು-ಹೆಣ್ಣಿನ ನಡುವೆ ಸಾಮಾಜಿಕ ಅಸಮಾನತೆ ಆಳವಾಗಿ ತಳವೂರಿರುವುದು ಸ್ಪಷ್ಟವಾಗುತ್ತದೆ, ಹುಟ್ಟಿನಿಂದ ಗಂಡು ಹೆಣ್ಣು ಬೇರಾಗಿರದಿದ್ದರೂ ಸಮಾಜ ಹೆಣ್ಣಿಗೆ ನಿರ್ದಿಷ್ಟ ಗುಣ ಕಾರ್ಯಗಳನ್ನು ಗೊತ್ತು

ಮಾಡಿ ಹೆಣ್ಣನ್ನು ಗಂಡಿನ ಸ್ವಾಮ್ಯಕ್ಕೆ ಒಳಪಡುವಂತೆ ಮಾಡಿದೆ. ಸ್ತ್ರೀಯ ಬದುಕಿನ ವ್ಯಾಪ್ತಿಯನ್ನು ಸೀಮಿತಗೊಳಿಸಿ ಕೆಲವು ಗುಣಗಳನ್ನು ಅವಳ ಮೇಲೆ ಹೇರಿ ನಿರ್ಬಂಧಗಳನ್ನು ಹಾಕಿದ್ದು ಅಸಮಾನತೆಗೆ ಕಾರಣವಾಗಿದೆ. ಗಮನಿಸಬೇಕಾದ ಅಂಶವೆಂದರೆ ಈ ರೀತಿಯ ಗುಣಗಳ ಹೇರಿಕೆಯನ್ನು ಗಂಡು ಹೆಣ್ಣಿನ ಬಾಲ್ಯಾವಸ್ಥೆಯ ಶಿಕ್ಷಣ ಪಡೆಯುವ ಸಮಯದಿಂದಲೇ ಗುರುತಿಸಬಹುದು. ವಿಜಯಾ ದಬ್ಬೆಯವರು ಹೇಳುವಂತೆ "ಗಂಡು ಮತ್ತು ಹೆಣ್ಣಿಗೆ ನಿರ್ದಿಷ್ಟ ಚಟುವಟಿಕೆಗಳೆಂದು ಮಾಡಿ ಅವರ ವ್ಯಕ್ತಿತ್ವ ವಿಕಸನವನ್ನು ಸಹಜವಾಗಿ ಬೆಳೆಯಲು ಬಿಡದೆ ಸ್ವಾಮ್ಯಕ್ಕೆ ಒಳಪಡುವಂತೆ ಮಾಡಲಾಗುತ್ತದೆ. ಇದೂ ಕೂಡ ಅಸಮಾನತೆಗೆ ಕಾರಣವಾಗಿದೆ" (ವಿವಿಧ ಲೇಖಕರು 2006: ಪುಟ 3).

ಸಮಾಜದಲ್ಲಿ ಲಿಂಗತಾರತಮ್ಯತೆಯಿಂದ ಉಂಟಾಗಿರುವ ಸ್ತ್ರೀ-ಪುರುಷರ ಮಧ್ಯೆಯ ಅಸಮಾನತೆ ಮನುಷ್ಯ-ಮನುಷ್ಯರ ನಡುವಿನ ಸಂಬಂಧವನ್ನು ಕೆಡಿಸಿದೆ. ಎಲ್ಲಾ ವ್ಯಕ್ತಿಗಳು ಸ್ವತಂತ್ರವಾಗಿ ಹುಟ್ಟುತ್ತಾರೆ, ಆದರೆ ಪುರುಷ ಪ್ರಧಾನ ಸಮಾಜ ಹೆಣ್ಣನ್ನು ಅಧೀನವಾಗಿ ಬೆಳೆಯುವಂತೆ ಮಾಡಿದೆ. ಅವಳ ಜೀವನ ನಾಲ್ಕು ಗೋಡೆಗಳ ಮಧ್ಯೆ ಸೀಮಿತಗೊಳ್ಳುವುದರ ಜೊತೆಗೆ ಅನ್ಯಾಯ, ಶೋಷಣೆ ಮತ್ತು ಅಸಮಾನತೆಗೆ ಒಳಗಾಗಿದ್ದಾಳೆ. ಇವೆಲ್ಲವುಗಳನ್ನು ತೊಡೆದು ಸ್ತ್ರೀಯನ್ನು ಒಬ್ಬ ವ್ಯಕ್ತಿಯನ್ನಾಗಿ ಕಂಡು ಅವಳಿಗೂ ಸಮಾನ ಅವಕಾಶ ಸೌಲಭ್ಯಗಳನ್ನು ದೊರಕಿಸಲು ನಡೆಯುತ್ತಿರುವ ವಿವಿಧ ರೀತಿಯ ಹೋರಾಟಗಳೇ ಸ್ತ್ರೀವಾದ, ಮಹಿಳಾ ಚಳುವಳಿ ಮುಂತಾದವುಗಳು. ಎಲ್ಲಾ ವ್ಯಕ್ತಿಗಳು ಸಮಾನರು ಎಂಬ ಮಾನವ ಹಕ್ಕುಗಳನ್ನು ಕಾನೂನಿನಡಿಯಲ್ಲಿಯೇ ತಂದು ಸಮಾಜದಲ್ಲಿ ಬದಲಾವಣೆ ತರಲು ಸ್ತ್ರೀವಾದ ಪ್ರಯತ್ನಿಸಿದೆ. ಇದರ ಉದ್ದೇಶ ಪುರುಷನನ್ನು ತ್ಯಜಿಸುವುದು ಎಂದರ್ಥವಲ್ಲ. ಬದಲಿಗೆ ಆತ ಒಡ್ಡಿದ ಮೌಢ್ಯಗಳನ್ನು ಹೋಗಲಾಡಿಸಿ, ಮಹಿಳೆಯೂ ಪುರುಷನಷ್ಟೇ ಸಮಾನಳು ಎಂದು ತೋರಿಸುವುದಾಗಿದೆ.

ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಯಲ್ಲಿನ ಅಸಮಾನತೆಯನ್ನು ತೊಡೆದು ಹಾಕುವುದು ಇಂದಿನ ಅಗತ್ಯವಾಗಿದೆ. ಸಮಾಜದಲ್ಲಿ ಸ್ತ್ರೀ ಸಮಾನತೆಯ ಚಿಂತನೆ ಮತ್ತು ಸ್ತ್ರೀ-ಶಕ್ತಿಯ ಅರಿವನ್ನುಂಟು ಮಾಡುವ ಕಾರ್ಯ ಆಗಬೇಕಿದೆ. ಮಹಿಳೆಯರನ್ನು ಪುರುಷ ಸಮಾಜ ನಡೆಸಿಕೊಂಡಿರುವ ರೀತಿಯನ್ನು ಮಾನವ ಹಕ್ಕುಗಳ ಹಿನ್ನೆಲೆಯಲ್ಲಿ ಮತ್ತು ಸಾಮಾಜಿಕ, ಸಾಂಸ್ಕೃತಿಕ ಚೌಕಟ್ಟಿನಲ್ಲಿ ಹೆಣ್ಣಿಗೆ ಆಗಿರುವ ಅನ್ಯಾಯ ಅಸಮಾನತೆಗಳನ್ನು ಸಮಕಾಲೀನ ಆಲೋಚನೆಯೊಂದಿಗೆ ಚರ್ಚಿಸಬೇಕಾಗಿದೆ. ದಿನ ದಿನಕ್ಕೂ ಮಹಿಳೆಯರಿಗೆ ಸಂಬಂಧಿಸಿದ

ಸಾಮಾಜಿಕ ಸಮಸ್ಯೆಗಳು ಹೆಚ್ಚುತ್ತಿವೆ. ಈ ಸಮಸ್ಯೆಗಳನ್ನು ಪರಿಹರಿಸಲು ಸ್ತ್ರೀ-ಪುರುಷರಲ್ಲಿ ಸಮಾನತೆಯ ಹಕ್ಕು, ಸ್ವಾತಂತ್ರ್ಯದ ಹಕ್ಕು, ಆರ್ಥಿಕ ಹಕ್ಕುಗಳು ಅವಶ್ಯಕವಾಗಿವೆ. ಈ ಎಲ್ಲಾ ಹಕ್ಕುಗಳ ಆಶಯ ಸಮಾಜದಲ್ಲಿರುವ ಧರ್ಮ, ಜಾತಿ ಮತ್ತು ಲಿಂಗಗಳ ಆಧಾರದ ಮೇಲೆ ಏರ್ಪಾಡಾಗಿರುವ ಅಸಮಾನತೆಯನ್ನು ನಿವಾರಿಸುವುದಾಗಿದೆ. ಸ್ತ್ರೀ-ಪುರುಷರ ನಡುವಿನ ಅಸಮಾನತೆ ಸಮಾಜದ ಸಹಜ ಅಭಿವೃದ್ಧಿಗೆ ಮಾರಕವಾಗಿರುವುದರಿಂದ ಅಸಮಾನತೆಯನ್ನು ತೊಡೆದು ಸಮಾನತೆಯಿಂದ ಕೂಡಿದ ಸಮಾಜವನ್ನು ಕಟ್ಟುವುದು ಇಂದಿನ ಅವಶ್ಯಕತೆಯಾಗಿದೆ. ಯಾವುದೇ ಒಂದು ಸಮಾಜ ಅಭಿವೃದ್ಧಿಯಾಗಬೇಕಾದಲ್ಲಿ ಸ್ತ್ರೀ-ಪುರುಷರು ಎಲ್ಲರೂ ಭಾಗವಹಿಸಬೇಕೇ ಹೊರತು ಸ್ತ್ರೀಯನ್ನು ಕಡೆಗಣಿಸಬಾರದು. ಸಮಾನತೆಯು ಕಾನೂನುಬದ್ಧವಾಗಿ, ಸಂವಿಧಾನಬದ್ಧವಾಗಿ ಬಂದಿದೆಯಾದರೂ ಪರಿಪೂರ್ಣವಾದ ಅರ್ಥದಲ್ಲಿ ಸಮಾಜದಲ್ಲಿ ಅಸ್ತಿತ್ವಕ್ಕೆ ಬಂದಿಲ್ಲ. ತಮ್ಮ ತಮ್ಮ ಪಾತ್ರ ನಿರ್ವಹಿಸಲು ಸ್ತ್ರೀ-ಪುರುಷರಿಬ್ಬರಿಗೂ ಸಮಾನತೆಯು ಅಗತ್ಯವಾಗಿದೆ. ಇಂದಿನ ದಿನಗಳಲ್ಲಿ ಸ್ತ್ರೀಗೆ ಶಿಕ್ಷಣ ದೊರಕುತ್ತಿರುವುದರಿಂದ ಅವಳು ಪುರುಷರಿಗೆ ಸಮಾನವಾಗಿ ಕೆಲವು ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವುದು ಸ್ತ್ರೀ-ಅಸಮಾನತೆಯ ನಿವಾರಣೆಯಲ್ಲಿ ಬಹು ಮುಖ್ಯ ಬೆಳವಣಿಗೆಯಾಗಿದೆ. ಆದರೆ ಈ ಕ್ಷೇತ್ರಗಳಲ್ಲಿ ನಡೆಯುತ್ತಿರುವ ಸ್ತ್ರೀ ಶೋಷಣೆ ದೌರ್ಜನ್ಯಗಳು ಮಹಿಳೆಯನ್ನು ಪುರುಷರು ಸಮಾನವಾಗಿ ಕಾಣುತ್ತಿಲ್ಲದಿರುವ ಗಂಭೀರ ಪರಿಸ್ಥಿತಿಯನ್ನು ತೋರಿಸುತ್ತದೆ. ಸಮಾನ ಉದ್ಯೋಗ, ವೇತನ ದೊರಕಿದರೆ ಸಾಲದು, ಶೋಷಣೆ, ಅನ್ಯಾಯಗಳಿಲ್ಲದ ಜೀವನ ಸ್ತ್ರೀಯದಾಗಬೇಕು, ಆಗ ಮಾತ್ರ ಸಮಾಜದಲ್ಲಿ ಸಮಾನತೆ ಸಾಧಿಸಲು ಸಾಧ್ಯವಾಗುತ್ತದೆ.

ಅಧ್ಯಾಯ 4

ಅಧ್ಯಾಯ 4

ಕನ್ನಡ ಮಹಿಳಾ ಕಥಾಸಾಹಿತ್ಯ: ಒಲವು – ನಿಲುವು

ಸಾಹಿತ್ಯವು ಸಮಾಜ ಮತ್ತು ಜನಜೀವನದ ಕನ್ನಡಿ ಇದ್ದ ಹಾಗೆ. ಸಾಹಿತ್ಯಕಾರರಿಗೆ ಮನುಷ್ಯನ ಜೀವನ, ಅವನ ಸುತ್ತ-ಮುತ್ತಲಿನ ಪರಿಸರದಲ್ಲಿರುವ ಸಂಗತಿಗಳು, ನಡೆಯುವ ಘಟನೆಗಳು ಸಾಹಿತ್ಯ ರಚನೆಗೆ ವಸ್ತುಗಳಾಗುತ್ತವೆ ಮತ್ತು ಈ ಕಥಾವಸ್ತುಗಳು ಕಾಲದಿಂದ ಕಾಲಕ್ಕೆ ಬದಲಾಗುತ್ತಿರುತ್ತವೆ. ಈ ಹಿನ್ನೆಲೆಯಲ್ಲಿ ಮಹಿಳಾ ಸಾಹಿತ್ಯಕಾರರು ರಚಿಸಿರುವ ಕಥಾಸಾಹಿತ್ಯದಲ್ಲಿ ಅಭಿವ್ಯಕ್ತಿಯಾಗಿರುವ ಕಥಾವಸ್ತುವನ್ನು ತಿಳಿಯುವುದು ಅವಶ್ಯಕವಾಗುತ್ತದೆ. ಏಕೆಂದರೆ ಮಹಿಳಾ ಸಾಹಿತ್ಯವು ಸಮಾಜದಲ್ಲಿ ಮಹಿಳೆಯರಿಗಿರುವ ಸ್ಥಾನಮಾನ, ಹಕ್ಕುಗಳು, ಸ್ವಾತಂತ್ರ್ಯ, ಅವರ ಮೇಲಿನ ಅಸಮಾನತೆ, ಶೋಷಣೆ, ದೌರ್ಜನ್ಯ, ಸಮಸ್ಯೆಗಳು ಮುಂತಾದ ವಿಷಯಗಳನ್ನು ಅಭಿವ್ಯಕ್ತಿಸುತ್ತದೆ. ಅಂದರೆ ಮಹಿಳೆಯರು ಅನುಭವಿಸುತ್ತಿರುವ ಸಮಸ್ಯೆಗಳು, ಪುರುಷ ಪ್ರಧಾನ ಸಮಾಜ ಅವಳನ್ನು ಸಮಾನತೆಯಿಂದ ವಂಚಿಸಿರುವುದು, ಅವಳ ಮೇಲಿನ ದೌರ್ಜನ್ಯ, ಶೋಷಣೆ ಮುಂತಾದ ಸಂಗತಿಗಳ ಮೇಲೆ ಹೆಚ್ಚಾಗಿ ಕೇಂದ್ರೀಕರಿಸಿದೆ. ಆದರೆ ಈ ಗಮನ ಕಾಲದಿಂದ ಕಾಲಕ್ಕೆ ಮತ್ತು ಲೇಖಕಿಯಿಂದ ಲೇಖಕಿಗೆ ಬದಲಾಗುತ್ತಿರುತ್ತದೆ. ಆದ್ದರಿಂದ ಮಹಿಳಾ ಕಥಾ ಸಾಹಿತ್ಯದ ಕಥಾವಸ್ತುವಿನಲ್ಲಿರುವ ಭಿನ್ನತೆಯನ್ನೂ, ಕಥಾವಸ್ತುವಿನಲ್ಲಿರುವ ಒಲವು-ನಿಲುವುಗಳ ವಿಶ್ಲೇಷಣೆಯನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ. ಒಲವು-ನಿಲುವುಗಳ ಅಧ್ಯಯನ ಮಹಿಳೆಯರ ಸಮಸ್ಯೆ, ಸ್ಥಾನಮಾನ ಕುರಿತಂತೆ ಮಹಿಳಾ ಲೇಖಕಿಯರ ದೃಷ್ಟಿಕೋನವನ್ನು ತಿಳಿಸುತ್ತದೆ. ಜೊತೆಗೆ ಆ ಸಮಸ್ಯೆಗಳ ವಿಭಿನ್ನ ಆಯಾಮಗಳನ್ನು ಸಹ ತೋರಿಸುತ್ತದೆ. ಮಹಿಳಾ ಸಾಹಿತ್ಯದ ದೃಷ್ಟಿಕೋನ ಮತ್ತು ಆಯಾಮಗಳನ್ನು ಅಧ್ಯಯನ ಮಾಡುವುದು ಸ್ತ್ರೀ-ಪುರುಷರ ನಡುವಿನ ಸಮಾನತೆ-ಅಸಮಾನತೆಯನ್ನು ಅರ್ಥೈಸಿಕೊಳ್ಳಲು ಅನುಕೂಲವಾಗುತ್ತದೆ. ಈ ಅಂಶಗಳ ಆಧಾರದ ಮೇಲೆ ಮಹಿಳಾ ಸಾಹಿತ್ಯದ ಕಥಾವಸ್ತುವಿನ ವಿಶ್ಲೇಷಣೆ ಮಾಡುವುದು ಅವಶ್ಯವೆನಿಸುತ್ತದೆ.

ಕನ್ನಡ ಮಹಿಳಾ ಸಾಹಿತ್ಯ ಸಮಾಜದಲ್ಲಿ ಸ್ತ್ರೀಯರ ಜೀವನದ ಸ್ಥಿತಿ-ಗತಿ, ಸ್ಥಾನಮಾನ, ಹಕ್ಕುಭಾಧ್ಯತೆಗಳು, ಸ್ವಾತಂತ್ರ್ಯ, ಸಮಾನತೆ ಮುಂತಾದ ವಿಷಯಗಳನ್ನು ಕುರಿತು ಬರೆಯುತ್ತಿರುವುದು ಇತ್ತೀಚೆಗಷ್ಟೆ. ಅಂದರೆ ಪ್ರಮುಖವಾಗಿ 20ನೇ ಶತಮಾನದ ಆದಿಭಾಗದಿಂದಷ್ಟೆ ಮಹಿಳೆಯರ ಸಮಸ್ಯೆಗಳನ್ನು ಪ್ರತಿನಿಧಿಸುವ ಅಥವಾ ಪ್ರಕಟಪಡಿಸುವ ಸಾಹಿತ್ಯ ಮಹಿಳೆಯರಿಂದ ರಚನೆಯಾಗುವುದಕ್ಕೆ ಪ್ರಾರಂಭವಾಯಿತು. ಈ ಸಾಹಿತ್ಯ ರಚನೆಗಳಲ್ಲಿ ಮುಖ್ಯವಾಗಿ ಸ್ತ್ರೀಯರ

ಜೀವನ ಪರಿಸ್ಥಿತಿ, ದೌರ್ಜನ್ಯ, ಶೋಷಣೆ, ಅಸಮಾನತೆ, ಅವರ ಬೇಕು ಬೇಡ ಮುಂತಾದ ವಿಷಯಗಳು ಅಭಿವ್ಯಕ್ತಿಯಾಗಿವೆ. ಮಹಿಳಾ ಸಾಹಿತ್ಯದಲ್ಲಿ ಅಭಿವ್ಯಕ್ತಿಯಾಗಿರುವ ಸ್ತ್ರೀಯರ ಕುರಿತ ವಿವಿಧ ಕಥಾವಸ್ತುಗಳನ್ನು ತಿಳಿಯುವುದು ಮಹಿಳಾ ಸಾಹಿತ್ಯದ ಬೆಳವಣಿಗೆಯನ್ನು ಅರ್ಥೈಸಿಕೊಳ್ಳಲು ಸಹಾಯವಾಗುತ್ತದೆ. ಮಹಿಳಾ ಕಥಾ ಸಾಹಿತ್ಯದ ಕಥಾವಸ್ತು ಮತ್ತು ಅದರ ಬಳಕೆಯ ಬೆಳವಣಿಗೆಯನ್ನು ವಿಶ್ಲೇಷಿಸುವುದರಿಂದ ಮಹಿಳಾ ಸಾಹಿತ್ಯ ಕಾಲದಿಂದ ಕಾಲಕ್ಕೆ ಬದಲಾಗುತ್ತಿರುವ ರೀತಿಯು ತಿಳಿಯುತ್ತದೆ. ಕಥಾವಸ್ತುವಿನ ಬಳಕೆ ಮತ್ತು ಬದಲಾವಣೆಯನ್ನು ತಾತ್ವಿಕ ನೆಲೆಯಲ್ಲಿ ವಿಶ್ಲೇಷಿಸುವುದು ಹೆಚ್ಚು ಸೂಕ್ತವಾಗುತ್ತದೆ. ಸಾಹಿತ್ಯ ಬದುಕಿನ ಚಿತ್ರಣವೇ ಆಗಿರುವುದರಿಂದ ವಿಜಯಾ ದಬ್ಬೆಯವರು ಹೇಳಿದಂತೆ "ಬದುಕಿನ ಸ್ವರೂಪ, ಹಿನ್ನೆಲೆ, ಸಂಬಂಧಗಳ ಗ್ರಹಿಸುವಿಕೆಯು ಸಾಮಾಜಿಕ, ಸಾಂಸ್ಕೃತಿಕ ಸಂರಚನೆಯಲ್ಲಿನ ನಮ್ಮ ಬದುಕಿನ ನೆಲೆ, ವೈಯಕ್ತಿಕತೆ ಮತ್ತು ಆ ವೈಯಕ್ತಿಕತೆಯ ಭಾಗವೇ ಆದ ತಾತ್ವಿಕ ಒಳನೋಟಗಳನ್ನು ಆಧರಿಸುತ್ತದೆ" (ವಿವಿಧ ಲೇಖಕರು, 2006: ಪುಟ 41)ಆದುದರಿಂದ ಸ್ತ್ರೀಯರ ಬದುಕಿನ ಚಿತ್ರಣವನ್ನು ಅವರ ಬದುಕಿನ ಹಿನ್ನೆಲೆ, ವೈಯಕ್ತಿಕ ಜೀವನದ ರೂಪರೇಶೆಗಳನ್ನು ತಿಳಿಯಬೇಕಾಗುತ್ತದೆ ಮತ್ತು ಇವುಗಳ ವೈಯಕ್ತಿಕ ಜೀವನದ ತಾತ್ವಿಕತೆಯ ಆಧಾರದ ಮೇಲೆ ನಿಂತಿರುವುದರಿಂದ ಸಾಹಿತ್ಯದಲ್ಲಿ ವ್ಯಕ್ತವಾಗಿರುವ ಕಥಾವಸ್ತುಗಳೂ ಕೂಡ ತಾತ್ವಿಕತೆಯನ್ನಾಧರಿಸಿದವಾಗಿರುತ್ತವೆ. ಈ ಹಿನ್ನೆಲೆಯಲ್ಲಿ ತಾತ್ವಿಕ ನೆಲೆಯಲ್ಲಿ ಕಥಾವಸ್ತುವನ್ನು ಅಧ್ಯಯನ ಮಾಡುವುದು ಸಮಂಜಸವಾಗಿದೆ.

ಕನ್ನಡ ಮಹಿಳಾ ಸಾಹಿತ್ಯಕ್ಕೆ ವಿದ್ವಾಂಸರು ವಿವಿಧ ನೆಲೆಗಟ್ಟುಗಳನ್ನು ಕೊಟ್ಟಿದ್ದಾರೆ. ಆ ನೆಲೆಗಳನ್ನು ಇಲ್ಲಿ ತಿಳಿಯುವುದು ಕಥಾವಸ್ತುವಿನ ಅಧ್ಯಯನದ ದೃಷ್ಟಿಯಿಂದ ಉಪಯುಕ್ತವಾಗುತ್ತದೆ. ಈ ನಿಟ್ಟಿನಲ್ಲಿ ಆಮೂರರು ಮಹಿಳಾ ಕಥಾ ಸಾಹಿತ್ಯಕ್ಕೆ ಒಂದು ಪರಂಪರೆಯಿದೆ ಎಂದು ಹೇಳಿ, ಆ ಪರಂಪರೆಯನ್ನು ನಾಲ್ಕು ಪೀಳಿಗೆಗಳಲ್ಲಿ ಗುರುತಿಸುತ್ತಾರೆ (1999: ಪುಟ 10). ಮೊದಲನೇ ಪೀಳಿಗೆಯ ಮಹಿಳಾ ಸಾಹಿತ್ಯದಲ್ಲಿ ಮುಖ್ಯ ಪ್ರಶ್ನೆ ಸಾಮಾಜಿಕ ಸ್ವರೂಪದ್ದಾಗಿದ್ದು ಸ್ತ್ರೀಯನ್ನು ಪುರುಷನ ಸಂಬಂಧದಲ್ಲಿ ಪತ್ನಿ, ವಿಧವೆ, ವೇಶ್ಯೆಯಾಗಿ ಗುರುತಿಸುತ್ತಾರೆ. ಹೆಣ್ಣನ್ನು ಒಬ್ಬ ವ್ಯಕ್ತಿಯಾಗಿ ಪರಿಗಣಿಸುವುದಿಲ್ಲ; ಎರಡನೇ ಪೀಳಿಗೆಯ ಮಹಿಳಾ ಸಾಹಿತ್ಯದಲ್ಲಿ ಸ್ತ್ರೀಯರಿಗೆ ಅವರ ಅಸ್ಮಿತೆಯ ಅರಿವು ಜಾಗೃತವಾಗಿ ವ್ಯವಸ್ಥೆಯ ವಿರುದ್ಧ ದನಿ ಎತ್ತುವುದು, ಪ್ರತಿಭಟನೆಯನ್ನು ಕೃತಿಗಿಳಿಸುವುದು ಕಂಡುಬರುತ್ತದಾದರೂ ಕ್ರಾಂತಿಕಾರಕ ಬದಲಾವಣೆಗಳು ಕಾಣುವುದಿಲ್ಲ; ಮೂರನೇ ಪೀಳಿಗೆಯ ಮಹಿಳಾ ಸಾಹಿತ್ಯ ಸ್ವಾತಂತ್ರ್ಯೋತ್ತರದ್ದಾಗಿದ್ದು ಬಲವಾದ ತಾತ್ವಿಕ ಆಸ್ಥೆಗಳ ಬೆಳವಣಿಗೆಯೊಂದಿಗೆ ಬದುಕಿನ

ಸಂಕೀರ್ಣತೆಯನ್ನು ಚಿತ್ರಿಸುತ್ತದೆ ಮತ್ತು ನಾಲ್ಕನೆಯ ಪೀಳಿಗೆಯ ಮಹಿಳಾ ಸಾಹಿತ್ಯ 1970ರ ನಂತರದ್ದಾಗಿದ್ದು ಜಾಗತಿಕ ಸ್ವರೂಪದ ಸ್ತ್ರೀ ಚಳುವಳಿಗಳಿಂದ ಪ್ರಭಾವಿತವಾಗಿದೆ. ಹೀಗೆ ಆಮೂರರು ಮಹಿಳಾ ಕಥಾ ಸಾಹಿತ್ಯದಲ್ಲಿ ಆದ ಕಥಾವಸ್ತುವಿನ ಬದಲಾವಣೆಯನ್ನು ತಲೆಮಾರುಗಳ ಆಧಾರದಲ್ಲಿ ತೋರಿಸುತ್ತಾರೆ. ಇದಕ್ಕೆ ಸ್ವಲ್ಪ ಭಿನ್ನವಾಗಿ ನಾಗರಾಜ್ ಡಿ.ಆರ್. ರವರು ಸ್ತ್ರೀವಾದಿ ಸಾಹಿತ್ಯವನ್ನು ಸಾಂಸ್ಕೃತಿಕ ರಚನೆಗಳು ಹೊಮ್ಮಿಸುವ ಮೌಲ್ಯಗಳ ವರ್ಗೀಕರಣದ ಆಧಾರದ ಮೇಲೆ ಮೂರು ರಚನೆಗಳನ್ನು ಗುರುತಿಸುತ್ತಾರೆ. 1. ಪುರುಷ ಸ್ಥಿರೀಕರಣದ ರಚನೆಗಳು; 2. ಪುರುಷ–ಸ್ತ್ರೀ–ಸಮಸ್ಯಾತ್ಮಕ ರಚನೆಗಳು; 3. ಸ್ತ್ರೀ ಸಮೃದ್ಧತೆಯ ರಚನೆಗಳು (1996: ಪುಟ 136).

ಪುರುಷ ಸ್ಥಿರೀಕರಣದ ರಚನೆಗಳಲ್ಲಿ ಪುರುಷರ ಬಗೆಗೆ ಯಾವುದೇ ರೀತಿಯ ಅನುಮಾನ, ಆತ್ಮದ ಶೋಧನೆಗಳ ಅಗತ್ಯವೇ ಇಲ್ಲದೆ, ಪುರುಷನನ್ನು ಸ್ಥಿರವಾಗಿಸುವ ಎಂದರೆ ಭೌತಿಕ ಜಗತ್ತು, ಸ್ತ್ರೀಯ ವ್ಯಕ್ತಿತ್ವ, ಆಧ್ಯಾತ್ಮಿಕ ವಲಯ ಎಲ್ಲದರಲ್ಲೂ ಹೆಂಗಸಿನ ನಿರಾಕರಣೆ ಅಥವಾ ದಮನ ಅಥವಾ ಗೈರುಹಾಜರಿಗಳು ಪ್ರಧಾನವಾಗಿ ಕಂಡುಬರುತ್ತವೆ. ಪುರುಷ–ಸ್ತ್ರೀ ಸಮಸ್ಯಾತ್ಮಕ ರಚನೆಗಳಲ್ಲಿ ಪುರುಷ–ಸ್ತ್ರೀ ಸಂಘರ್ಷದ ಪ್ರಶ್ನೆಯನ್ನು ಮೂಲಭೂತವಾದ ರೀತಿಯಲ್ಲಿ ಸಮಸ್ಯಾತ್ಮಕಗೊಳಿಸಲಾಗಿದ್ದು, ಸ್ತ್ರೀತನ ಮತ್ತು ಸ್ತ್ರೀ ಹಕ್ಕಿನ ಸಮಸ್ಯೆ ಮೂಲವಾಗಿದ್ದು, ಗಂಡು–ಹೆಣ್ಣುಗಳು ಅಧಿಕಾರ ಸಮಾನ ಅವಕಾಶಕ್ಕಾಗಿ ಸಂಘರ್ಷಿಸುವುದು ಕಂಡುಬರುತ್ತದೆ. ಸ್ತ್ರೀ ಸಮೃದ್ಧತೆಯ ರಚನೆಗಳಲ್ಲಿ ಸ್ತ್ರೀಶಕ್ತಿಯ ಅಂತಃವಿಸ್ತಾರದ ಅತ್ಯಂತಿಕ ವಿಜೃಂಭಣೆಯನ್ನು ತೋರಿಸಿ, ಹೆಣ್ಣನ್ನು ಜೈವಿಕ ಶಕ್ತಿಯಾಗಿ ಚಿತ್ರಿಸಲಾಗಿದೆ. ಭಾರತೀಯ ಸಂಸ್ಕೃತಿಗಳ ವಿವಿಧ ವಲಯಗಳಲ್ಲಿ ಇದು ಹರಿದಿದ್ದು ವೇದದಲ್ಲಿನ ಅದಿತಿಯಿಂದ ಆದಿವಾಸಿಗಳ ಹೆಣ್ಣು ದೈವದ ತನಕ ಇದೆ, ಎಂದು ನಾಗರಾಜ್‌ರವರು ವಿವರಿಸುತ್ತಾರೆ. ಈ ವರ್ಗೀಕರಣವನ್ನು ಗಮನಿಸಿದರೆ ಆಧುನಿಕ ಮಹಿಳಾ ಸಾಹಿತ್ಯ ಬಹುತೇಕವಾಗಿ ಎರಡನೇ ಅಂದರೆ ಪುರುಷ–ಸ್ತ್ರೀ ಸಮಸ್ಯಾತ್ಮಕ ರಚನೆಗಳಲ್ಲಿ ಕಂಡುಬರುತ್ತದೆ. ಇದೇ ಅಭಿಪ್ರಾಯವನ್ನು ಆಮೂರರು ಕೂಡ ವ್ಯಕ್ತಪಡಿಸುತ್ತಾರೆ.

ಕನ್ನಡ ಮಹಿಳಾ ಸಾಹಿತ್ಯಕ್ಕೆ ಸಂಬಂಧಿಸಿದ ಈ ಮೇಲಿನ ವಿಂಗಡಣೆಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಅಳವಡಿಸಿಕೊಂಡಿಲ್ಲ. ಇದಕ್ಕೆ ಮುಖ್ಯ ಕಾರಣ ಪ್ರಸ್ತುತ ಅಧ್ಯಯನ ನವ್ಯೋತ್ತರ ಮಹಿಳಾ ಕಥಾ ಸಾಹಿತ್ಯವನ್ನು ಮಾತ್ರ ಮುಖ್ಯವಾಗಿ ತನ್ನ ವ್ಯಾಪ್ತಿಯಲ್ಲಿ ಪರಿಗಣಿಸಿರುವುದು. ಆದರೆ ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಮೇಲಿನ ವಿಂಗಡಣೆಗಳು ಸಾಹಿತ್ಯದಲ್ಲಿ ವ್ಯಕ್ತವಾಗಿರುವ ಸ್ತ್ರೀತನ, ಸ್ತ್ರೀ ವ್ಯಕ್ತಿತ್ವ, ಅವಳ ಅಸ್ತಿತ್ವ, ಹಕ್ಕು ಮುಂತಾದ ವಿಷಯಗಳು ಸಾಮಾಜಿಕ,

ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ಧಾರ್ಮಿಕ ನೆಲೆಗಳಲ್ಲಿರುವುದನ್ನು ತೋರಿಸುತ್ತವೆ. ಈ ಆಧಾರದ ಮೇಲೆ ಪ್ರಸ್ತುತ ಅಧ್ಯಯನದ ಕಥಾವಸ್ತುವಿನ ಒಲವು-ನಿಲುವುಗಳ ವಿಶ್ಲೇಷಣೆಯನ್ನು ಮುಖ್ಯವಾಗಿ ನಾಲ್ಕು ನೆಲೆಗಳಲ್ಲಿ ಮಾಡಲಾಗಿದೆ, ಅವುಗಳೆಂದರೆ;

1. ಸಾಮಾಜಿಕ ನೆಲೆಯಲ್ಲಿ ಕಥಾವಸ್ತು
2. ಕೌಟುಂಬಿಕ ನೆಲೆಯಲ್ಲಿ ಕಥಾವಸ್ತು
3. ಪೌರಣಿಕ ನೆಲೆಯಲ್ಲಿ ಕಥಾವಸ್ತು
4. ಸ್ತ್ರೀ ಅಸ್ತಿತ್ವದ ನೆಲೆಯಲ್ಲಿ ಕಥಾವಸ್ತು

ಈ ವಿಂಗಡಣೆಯು ಅಧ್ಯಯನದಲ್ಲಿ ಸಾಂಧರ್ಭಿಕವಾಗಿದ್ದು ಮೇಲೆ ಚರ್ಚಿಸಿದ ತಾತ್ವಿಕ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಲಾಗಿದೆ. ಇದಕ್ಕೆ ಪೂರಕವಾಗಿ ಸಬಿಹಾ ಭೂಮಿಗೌಡ (2012) ಅವರ 'ದಶಕದ ಮಹಿಳಾ ಸಾಹಿತ್ಯದಲ್ಲಿ ಪ್ರತಿರೋಧದ ನೆಲೆಗಳು' ಕೃತಿಯಲ್ಲಿ ಶೈಲಾ ಯು. ಅವರು ಇತ್ತೀಚಿನ ಮಹಿಳಾ ಸಾಹಿತ್ಯದಲ್ಲಿನ ಸ್ತ್ರೀ ಸಂವೇದನೆಗಳನ್ನು ಮಹಿಳೆ ಮತ್ತು ಕುಟುಂಬ, ಸಮಾಜ, ನೈತಿಕತೆ, ಧರ್ಮ, ಹೆಣ್ಣು-ಗಂಡಿನ ಸಂಬಂಧ, ಹೆಣ್ಣಿನ ಲೋಕದೃಷ್ಟಿ ಮತ್ತು ಆಧುನಿಕತೆ-ಅಭಿವೃದ್ಧಿಯ ನೆಲೆಗಳಲ್ಲಿ ಗುರುತಿಸಿರುವುದನ್ನು ಗಮನಿಸಬಹುದು. ಈ ಅಧ್ಯಾಯದಲ್ಲಿ ಮಹಿಳಾ ಸಾಹಿತ್ಯದಲ್ಲಿನ ಕಥಾವಸ್ತುವಿನ ಒಲವು-ನಿಲುವುಗಳನ್ನು ಅರಿಯಲು ನವ್ಯೋತ್ತರ ಮಹಿಳಾ ಕಥಾ ಸಾಹಿತ್ಯವನ್ನು ಮುಖ್ಯವಾಗಿ ಪರಿಗಣಿಸಿದ್ದರೂ, ನವ್ಯೋತ್ತರಕ್ಕೂ ಹಿಂದಿನ ಕಾಲಘಟ್ಟದ ಕೆಲವು ಮಹಿಳಾ ಲೇಖಕಿಯರ ಕೃತಿಗಳನ್ನು ಪರಿಗಣಿಸಲಾಗಿದೆ. ಇದಕ್ಕೆ ಕಾರಣ ಕಾಲ, ಸಾಂಸ್ಕೃತಿಕ ಮತ್ತು ಸಾಮಾಜಿಕ ಹಿನ್ನೆಲೆಗಳಲ್ಲಿ ಕಥಾವಸ್ತುವಿನಲ್ಲಿ ಆದ ಬದಲಾವಣೆ ಮತ್ತು ಬೆಳವಣಿಗೆಯನ್ನು ವಿಶ್ಲೇಷಿಸುವುದಾಗಿದೆ. ಈ ಉದ್ದೇಶಕ್ಕಾಗಿ ಪ್ರಾತಿನಿಧಿಕ ಲೇಖಕಿಯರ ಆಯ್ದ ಕೃತಿಗಳನ್ನು, ಅಂದರೆ ಕಥೆ ಅಥವಾ ಕಾದಂಬರಿಗಳನ್ನು ಪರಿಗಣಿಸಲಾಗಿದೆ. ಈ ವಿಶ್ಲೇಷಣೆಯಲ್ಲಿ ಕಥೆ ಕಾದಂಬರಿಗಳಲ್ಲಿ ಬರುವ ಪಾತ್ರ, ಸಂಭಾಷಣೆಗಳು ಮತ್ತು ಸನ್ನಿವೇಶಗಳ ಆಧಾರದ ಮೇಲೆ ಕಥಾವಸ್ತುವನ್ನು ತಿಳಿಯಲಾಗಿದೆ. ಇದಕ್ಕೆ ಕಾರಣ ಲೇಖಕಿಯರು ಪ್ರತಿಯೊಂದು ಕಥೆಯಲ್ಲಿಯೂ ಬೇರೆ ಬೇರೆ ಕಥಾವಸ್ತುವನ್ನು ಪ್ರಯೋಗಿಸಿ ಮಹಿಳೆಯರ ಸ್ಥಿತಿಗತಿ ಅರಿಯಲು ಪ್ರಯತ್ನಿಸಿರುವುದು ತಿಳಿಯುತ್ತದೆ. ಉದಾಹರಣೆಗೆ ಸರಸ್ವತಿಬಾಯಿ ರಾಜವಾಡೆಯವರ ಪ್ರತೀಕಾರ ಕಥೆಯಲ್ಲಿ ಬಾಲ್ಯವಿವಾಹ, ವರದಕ್ಷಿಣೆಯಿಂದ ಹೆಣ್ಣಿನ ಮೇಲೆ ನಡೆಯುವ ಅನ್ಯಾಯ; ಶ್ಯಾಮಲಾ ಬೆಳಗಾಂವಕರರವರ ಕರುಳ ಕತ್ತರಿಯಲ್ಲಿ ಪುರುಷರಿಂದಲ್ಲದೆ ತಂದೆ ತಾಯಂದಿರ ಸ್ವಾರ್ಥಕ್ಕೆ ಬಲಿಯಾಗುವ ಹೆಣ್ಣಿನ ಚಿತ್ರಣ; ಅನುಪಮಾ ನಿರಂಜನರವರ ಆ ಮೂರು ಮನೆಗಳು ಕಥೆಯಲ್ಲಿ

ವಿವಿಧ ವರ್ಗಗಳ ಮಹಿಳೆಯರು ಅನುಭವಿಸುವ ದೌರ್ಜನ್ಯ, ನೋವುಗಳು; ವೈದೇಹಿಯವರ ಅಕ್ಕು ಕಥೆಯಲ್ಲಿ ಗಂಡನಿಂದ ತ್ಯಜಿಸಲ್ಪಟ್ಟ ಹೆಣ್ಣೊಬ್ಬಳು ಅನುಭವಿಸುವ ಮಾನಸಿಕ ಯಾತನೆ; ಗೀತಾ ನಾಗಭೂಷಣರವರ ಡಾಲು ಕಥೆಯಲ್ಲಿ ತನ್ನ ವ್ಯಕ್ತಿತ್ವ ಕಾಪಾಡಿಕೊಳ್ಳಲು ಹೆಣ್ಣೊಬ್ಬಳು ನಡೆಸುವ ಹೋರಾಟ; ಸಾವಿತ್ರಮ್ಮನವರ ಪಾತು ಕಥೆಯಲ್ಲಿ ಮೂಢನಂಬಿಕೆಗಳಿಂದ ಹಾಳಾಗುವ ಹೆಣ್ಣಿನ ಬಾಳಿನ ಚಿತ್ರಣ; ನೇಮಿಚಂದ್ರರವರ ತ್ರಿಕೋನದಾಚೆಗೆ ಕಥೆಯಲ್ಲಿ ಹೆಣ್ಣಿನಿಂದಲೇ ಹೆಣ್ಣಿನ ಮೇಲೆ ಆಗುವ ಮೋಸ, ವಂಚನೆಗಳು; ಸಾರಾ ಅಬೂಬಕ್ಕರ್ ಮತ್ತು ಬಾನು ಮುಷ್ತಾಕ್‌ರವರ ಕಥೆಗಳಲ್ಲಿ ಮುಸ್ಲಿಂ ಸಮಾಜದ ಹೆಣ್ಣುಗಳು ಅನುಭವಿಸುತ್ತಿರುವ ದೌರ್ಜನ್ಯದ ಚಿತ್ರಣ; ಹೀಗೆ ವಿವಿಧ ಕಥಾವಸ್ತುಗಳು ಕಥೆಗಳಲ್ಲಿ ಬಳಕೆಯಾಗಿ ಹೆಣ್ಣಿನ ಜೀವನದ ಚಿತ್ರಣವನ್ನು ತಿಳಿಸುತ್ತವೆ. ಮೇಲೆ ಚರ್ಚಿಸಿದ ಅಂಶಗಳ ಹಿನ್ನೆಲೆ ಮತ್ತು ವಿಧಾನದಲ್ಲಿ ಮಹಿಳಾ ಸಾಹಿತ್ಯದ ಕಥಾವಸ್ತುವನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

4.1. ಸಾಮಾಜಿಕ ನೆಲೆಯಲ್ಲಿ ಕಥಾವಸ್ತು

ಮಹಿಳಾ ಸಾಹಿತಿಗಳು ತಮ್ಮ ಸಮಕಾಲೀನ ಸಮಾಜದಲ್ಲಿ ಸುತ್ತಮುತ್ತಲೂ ನಡೆಯುತ್ತಿದ್ದ ವಿವಿಧ ಸಾಮಾಜಿಕ ವಿಷಯಗಳನ್ನು ಕಥಾವಸ್ತುವಾಗಿ ಚಿತ್ರಿಸಿ ಅಂದಿನ ಸ್ತ್ರೀಯರ ಜೀವನ ಪರಿಸ್ಥಿತಿಯನ್ನು ಕಥಾವಸ್ತು, ಸನ್ನಿವೇಶಗಳ ಮೂಲಕ ತೋರಿಸಿದ್ದಾರೆ. ಮಹಿಳಾ ಕಥಾಸಾಹಿತ್ಯದಲ್ಲಿ ವ್ಯಕ್ತವಾಗಿರುವ ಸಾಮಾಜಿಕ ವಿಷಯ, ಸಮಸ್ಯೆ ಮತ್ತು ಪರಿಸ್ಥಿತಿಗಳನ್ನು ಸಾಮಾಜಿಕ ನೆಲೆಗಟ್ಟಿನಲ್ಲಿ ತಿಳಿಯುವುದು ಸೂಕ್ತವಾದುದರಿಂದ ಇಲ್ಲಿ ಪ್ರಾತಿನಿಧಿಕ ಲೇಖಕಿಯರ ಆಯ್ದ ಕೃತಿಗಳ ಕಥಾವಸ್ತುವನ್ನು ಇಲ್ಲಿ ಚರ್ಚಿಸಲಾಗಿದೆ. ಈ ವಿಭಾಗದಲ್ಲಿ ಪ್ರಾತಿನಿಧಿಕವಾಗಿ ತಿರುಮಲಾಂಬ ಅವರ 'ಸುಶೀಲೆ' (ಕಾದಂಬರಿ), ಸರಸ್ವತಿಬಾಯಿ ರಾಜವಾಡೆಯವರ 'ಪ್ರತೀಕಾರ', 'ಅವಳ ಉದ್ಧಾರ', ಎಚ್.ವಿ. ಸಾವಿತ್ರಮ್ಮನವರ 'ಲಕ್ಷ್ಮೀ', 'ಮರುಮದುವೆ', 'ಪಾತುಕತೆ,' ಶ್ಯಾಮಲಾ ಬೆಳಗಾಂವಕರ್‌ರವರ 'ಕರುಳ ಕತ್ತರಿ'; ಅನುಪಮಾ ನಿರಂಜನರವರ 'ಮೂಲಾ ನಕ್ಷತ್ರದ ಹುಡುಗಿ', ಬಿ.ಟಿ. ಲಲಿತಾ ನಾಯಕ್‌ರವರ 'ಮರುಮದುವೆ', ಗೀತಾ ನಾಗಭೂಷಣರವರ 'ಹಿಂಸೆ', ಸಾರಾ ಅಬೂಬಕ್ಕರ್‌ರವರ 'ಹಳೇ ಬೇರು ಹೊಸ ಚಿಗುರು', 'ಅಂಕುರ' ಬಾನುಮುಷ್ತಾಕ್‌ರವರ 'ಸಫೀರಾ', ಸಬೀಹಾ ಭೂಮಿಗೌಡರ 'ಸೆರಗಿನ ಕೆಂಡ' ಕಥೆಗಳನ್ನು ಪ್ರಾತಿನಿಧಿಕವಾಗಿ ಆಯ್ದುಕೊಂಡು ಈ ಕಥೆಗಳಲ್ಲಿ ವ್ಯಕ್ತವಾಗಿರುವ ಕಥಾವಸ್ತುವನ್ನು ಸಾಮಾಜಿಕ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

ಮಹಿಳೆಯರ ಸಾಹಿತ್ಯ ರಚನೆ ಮತ್ತು ಅವರ ಸಾಮರ್ಥ್ಯಗಳನ್ನು ಪ್ರಶ್ನಿಸುತ್ತಿದ್ದ ಕಾಲದಲ್ಲಿ ಸಾಹಿತ್ಯ ಕೃತಿಗಳನ್ನು ರಚಿಸಿದ ತಿರುಮಲಾಂಬಾರವರು ಆಧುನಿಕ ಕನ್ನಡ ಮಹಿಳಾ ಸಾಹಿತ್ಯದ ಆದ್ಯ ಲೇಖಕಿಯಾಗಿದ್ದಾರೆ. ಸ್ತ್ರೀಯರಿಗೆ ವಿದ್ಯಾಭ್ಯಾಸವೇ ಮರೀಚಿಕೆಯಾಗಿದ್ದ ಕಾಲದಲ್ಲಿ ತಿರುಮಲಾಂಬಾ ಅವರು ಮಹಿಳೆಯರ ಸಮಸ್ಯೆಗಳನ್ನು ಕುರಿತು ಕೃತಿಗಳನ್ನು ರಚಿಸಿದರು. ಅವರ ಲೇಖನಗಳು ಮಹಿಳಾ ಸಾಹಿತ್ಯಕ್ಕೆ ಒಂದು ಸ್ವರೂಪವನ್ನು ತಂದುಕೊಟ್ಟವು. ಎಲ್. ಜಿ. ಮೀರಾ ಅಭಿಪ್ರಾಯದಲ್ಲಿ "ಸಾಹಿತ್ಯದ ವಸ್ತು, ಸಂವೇದನೆ, ಶೈಲಿ ಮತ್ತು ಪ್ರಕಾರಗಳ ದೃಷ್ಟಿಯಿಂದ ಮಹಿಳಾ ಸಾಹಿತ್ಯಕ್ಕೆ ಪ್ರಾರಂಭದಲ್ಲಿ ಅಗತ್ಯವಾಗಿದ್ದ ಗುರುತು ಮತ್ತು ಆತ್ಮವಿಶ್ವಾಸವನ್ನು ನೀಡಿದ ಲೇಖಕಿ ತಿರುಮಲಾಂಬಾ ಅವರು" (ಶ್ರೀಮತಿ ಎಚ್.ಎಸ್. 2006: ಪುಟ 249). ಅಂದಿನ ಸಾಮಾಜಿಕ ಚಿತ್ರಣವನ್ನು ಮಹಿಳೆಯರ ಅವಶ್ಯಕತೆಗಳನ್ನು ಮತ್ತು ಸಮಸ್ಯೆಗಳನ್ನು ತಿರುಮಲಾಂಬಾ ಚಿತ್ರಿಸಿದ್ದಾರೆ. ಟಿ. ಸುನಂದಮ್ಮ ಅವರು ಹೇಳಿದಂತೆ "ತಿರುಮಲಾಂಬಾರ ಬರಹದಲ್ಲಿ ಅಂದಿನ ಸಮಾಜದ ವಿಧವೆಯ ಸಮಸ್ಯೆ, ಮಹಿಳೆಯ ಹಕ್ಕು ಬಾಧ್ಯತೆ ಇತ್ಯಾದಿ ಜ್ವಲಂತ ಪ್ರಶ್ನೆಗಳು ಅವರ ಪಾತ್ರಗಳಲ್ಲಿ ಪ್ರತಿಧ್ವನಿಸಿವೆ" (ಶಶಿಕಲಾ ವೀರಯ್ಯಸ್ವಾಮಿ, 1995: ಪುಟ 26). ಈ ಹಿನ್ನೆಲೆಯಲ್ಲಿ ತಿರುಮಲಾಂಬ ಅವರ 'ಸುಶೀಲೆ' ಕಾದಂಬರಿಯನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಆಧುನಿಕ ಕನ್ನಡ ಮಹಿಳಾ ಸಾಹಿತ್ಯದ ಆದ್ಯ ಲೇಖಕರಾದ ತಿರುಮಲಾಂಬ ಅವರು 'ಸುಶೀಲೆ' ಕೃತಿಯಲ್ಲಿ ಸ್ತ್ರೀಯರಿಗೆ ವಿದ್ಯೆಯ ಅವಶ್ಯಕತೆ, ವಿದ್ಯಾಭ್ಯಾಸದಿಂದ ಮಹಿಳೆಯರಿಗೆ, ಸಮಾಜಕ್ಕೆ ಮತ್ತು ದೇಶದ ಅಭಿವೃದ್ಧಿಗೆ ಆಗುವ ಅನುಕೂಲಗಳ ಕಥಾವಸ್ತುವನ್ನು ಚಿತ್ರಿಸಿದ್ದಾರೆ. ಈ ಕೃತಿಯಲ್ಲಿ ಹೆಣ್ಣಾದವಳಿಗೆ ಪತಿಯೇ ಪರದೈವವೆಂದು ಚಿತ್ರಿಸಿ, ಅದರ ಪಾಲನೆಗೆ ವಿದ್ಯೆ ಹೇಗೆ ಸಹಾಯ ಮಾಡುತ್ತದೆಂದು ತೋರಿಸಿದರೂ ಕಥೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಹೆಣ್ಣಿಗೆ ವಿದ್ಯೆಯ ಅವಶ್ಯಕತೆಯಿರುವುದನ್ನು ತಿರುಮಲಾಂಬ ಅವರು ಪಾತ್ರ ಮತ್ತು ಸನ್ನಿವೇಶಗಳ ಮೂಲಕ ತೋರಿಸಿದ್ದಾರೆ. ಈ ಕಥೆಯ ನಾಯಕಿ ಸುಶೀಲೆ ವಿದ್ಯಾವಂತಳಾಗಿದ್ದು ಸ್ತ್ರೀಯಾದವಳು ವಿದ್ಯೆ ಕಲಿತು ಹೇಗೆ ಬಾಳಬೇಕೆಂಬುದನ್ನು ಇತರ ಪಾತ್ರಗಳೊಂದಿಗಿನ ಅವಳ ಸಂಭಾಷಣೆಗಳಲ್ಲಿ ಕಂಡುಬರುತ್ತದೆ. ಗಿರಿಯಮ್ಮನೊಡನೆ ಮಾತನಾಡುವಾಗ ಸುಶೀಲೆ ಬೇರೆಯವರ ಮನೆಗೆ ಹೋಗಿ ಅವರ ಕೆಲಸ ಕಾರ್ಯಗಳನ್ನು ಹಾಳುಮಾಡಿ ಸಮಯ ವ್ಯರ್ಥಮಾಡುವುದು ಸರಿಯಲ್ಲ. ಬದಲಾಗಿ ಆ ಸಮಯವನ್ನು ಓದು ಮತ್ತು ವ್ಯಕ್ತಿತ್ವ ವಿಕಸನ ಕೆಲಸಗಳಿಗೆ ಬಳಸುವುದು ಸೂಕ್ತ ಎಂದು ಹೇಳುತ್ತಾಳೆ. ಇದು ತಿರುಮಲಾಂಬ ಅವರು ವ್ಯಕ್ತಿಗಳು ಮುಖ್ಯವಾಗಿ ಸ್ತ್ರೀಯರು ವೃಥಾ ಕಾಲಹರಣ ಮಾಡದೆ ವಿದ್ಯೆ, ತಿಳುವಳಿಕೆಗಳ ಕಡೆ ಗಮನ ಕೊಡಬೇಕೆಂದು ಹೇಳಿರುವುದನ್ನು

ತೋರಿಸುತ್ತದೆ. ಸುಶೀಲೆ ಪಾತಿವ್ರತ್ಯ ಧರ್ಮಕ್ಕೆ ಪ್ರಾಮುಖ್ಯತೆ ಕೊಟ್ಟು ಹೆಣ್ಣಾದವಳು ಹಾಗೇ ನಡೆಯಬೇಕೆಂದು ತಿಳಿಸುತ್ತಾಳೆ. ಆದರೆ ತಿರುಮಲಾಂಬ ಅವರು ಸುಶೀಲೆಯ ಮೂಲಕ ಹೇಳಿಸುವ "ಹೆಂಗಸು ಎಂದಿನವರೆಗೆ ತನ್ನ ಸತೀತ್ವವನ್ನು ರಕ್ಷಿಸಿಕೊಂಡಿರುವಳೋ ಅಂದಿನವರೆಗೆ ಅವಳು ಅಬಲೆ. ಆದರೆ ನಿನ್ನಂತಹವರ ವಿಚಾರದಲ್ಲಿ ಅವಳು ಅತಿಬಲೆಯೇ! ಸುಳ್ಳಲ್ಲ. ಅವಳು ತನ್ನ ಪಾತಿವ್ರತ್ಯವನ್ನು ಕಡೆಗಣಿಸಿದಳಾದರೆ ಆಗ ಅವಳಂತಹ ನೀಚ ವಸ್ತುವೊಂದೂ ಇರುವುದಿಲ್ಲ" (1929: ಪುಟ 15) ಎಂಬ ಈ ಮಾತುಗಳಲ್ಲಿ ಹೆಣ್ಣು ದುರ್ಬಲೆಯಲ್ಲ ಎಂದು ತೋರಿಸುತ್ತಾರೆ. ಪುರುಷನು ಹೆಣ್ಣನ್ನು ಗೌರವಿಸದೆ ಕೇವಲ ಲೈಂಗಿಕ ದೃಷ್ಟಿಯಿಂದ ನೋಡಿದರೆ ಹೆಣ್ಣು ಅತಿಬಲೆಯಾಗಿ ಅಂದರೆ ಶಕ್ತಿ ಮತ್ತು ಧೈರ್ಯದಿಂದ ಅದನ್ನು ಎದುರಿಸುತ್ತಾಳೆ ಎಂಬ ಅಭಿಪ್ರಾಯ ಬರುತ್ತದೆ. ಸುಶೀಲೆಯ ಇಂತಹ ಧೈರ್ಯದ ಮಾತುಗಳಿಗೆ ಅವಳ ವಿದ್ಯಾಭ್ಯಾಸ ತಂದುಕೊಟ್ಟಿರುವ ಆತ್ಮವಿಶ್ವಾಸವನ್ನು ಪರಿಗಣಿಸಬೇಕಾಗುತ್ತದೆ.

ತಡರಾತ್ರಿ ಮನೆಗೆ ಬಂದ ಸುಶೀಲೆಯ ಗಂಡ ಅವಳನ್ನು ಬಯ್ಯುತ್ತಾ ಇಡೀ ಸ್ತ್ರೀಕುಲವನ್ನೇ ಸುಳ್ಳು ಹೇಳುವವರು ಎಂದು ನಿಂದಿಸುವಾಗ ಸುಶೀಲೆ ಹೇಳುವ "ಸ್ತ್ರೀಯರಲ್ಲಿ ಯಾರಾದರೂ ಕೆಲವರು ಸುಳ್ಳನ್ನು ಹೇಳಬಹುದು, ಆದ ಮಾತ್ರಕ್ಕೆ ಸ್ತ್ರೀ ಜಾತಿಗೇ ಕಳಂಕವನ್ನು ಹೊರಿಸುವುದು ಸರಿಯಲ್ಲ!" (ತಿರುಮಲಾಂಬ, 1929: ಪುಟ 19) ಮಾತುಗಳು ಪುರುಷರು ಎಲ್ಲ ಸ್ತ್ರೀಯರನ್ನು ಒಂದೇ ರೀತಿ ನೋಡುತ್ತಾರೆ ಎಂಬುದನ್ನು ತೋರಿಸುತ್ತದೆ. ಇದು ತಿರುಮಲಾಂಬ ಅವರು ಪುರುಷರ ದ್ವಿಮುಖ ನೀತಿಯನ್ನು ಗ್ರಹಿಸಿರುವುದನ್ನು ಸೂಚಿಸುವಂತಿದೆ. ಹೇಗೆಂದರೆ, ಮಹಿಳೆಯರಲ್ಲಿ ಕೆಲವರು ಸುಳ್ಳು ಹೇಳುವಂತೆ ಪುರುಷರಲ್ಲಿಯೂ ಸುಳ್ಳು ಹೇಳುವವರಿದ್ದಾರೆ. ಆದರೆ ಸ್ತ್ರೀಯರನ್ನು ಸುಳ್ಳು ಹೇಳುವ ಜಾತಿ ಎಂದು ಹೇಳಿದ ರೀತಿ ಪುರುಷ ಜಾತಿಗೆ ಹೇಳುವುದಿಲ್ಲ. ಇದು ಮೇಲಿನ ಅಭಿಪ್ರಾಯವನ್ನು ತೋರಿಸುತ್ತದೆ.

ಪುರುಷನಿಂದ ಮಹಿಳೆಯ ಮೇಲೆ ನಡೆಯುವ ದೌರ್ಜನ್ಯ, ಹಿಂಸೆ, ದಂಡನೆಗಳು ಅವನ ಮೃಗೀಯ ವರ್ತನೆಯನ್ನು ತೋರಿಸುತ್ತವೆ ಎಂಬುದನ್ನು ತಿರುಮಲಾಂಬ ಅವರು ಹೇಳುವ "ತನ್ನ ಸತಿಯ ನೈಜ ಮನೋಭಾವವನ್ನು ಚೆನ್ನಾಗಿ ತಿಳಿದೂ, ಸುಗುಣಮತಿಯೆಂಬ ಅನುಭವವುಂಟಾಗಿದ್ದರೂ ಅಂತಹ ನಾರೀಮಣಿಯನ್ನು ಸಂತೈಸದೆ ಚಿಂತೆಗೀಡುಮಾಡುವಾತನು ನಿಜವಾಗಿಯೂ ಕ್ಷುದ್ರ ಜೀವಿಗಳಾದ ನಾಯಿನರಿಗಳಿಗೂ ಕಡೆಯಾದ ಲೋಕಕಂಟಕನೆನಿಸುವನಲ್ಲದೆ ಮಾನವನೆನಿಸುವನೇ? ಅಂತಹವನಿಂದ ದೇಶವು ಅಭಿವೃದ್ಧಿಗೆ ಬರುವುದೆಂಬ ಆಶೆ ಎಳ್ಳಷ್ಟಾದರೂ ಬರುವುದೇ?" (ತಿರುಮಲಾಂಬ, 1929: ಪುಟ 21) ಮಾತುಗಳು ಪುಷ್ಟೀಕರಿಸುತ್ತವೆ. ಸ್ತ್ರೀಯನ್ನು

ಹಿಂಸಿಸುವ ಪುರುಷರು ಮನುಷ್ಯರೇ ಅಲ್ಲ ಮತ್ತು ಅಂತಹವರಿಂದ ದೇಶದ ಅಭಿವೃದ್ಧಿಯಾಗುವುದಿಲ್ಲ ಎಂದು ಹೇಳುವುದು ತಿರುಮಲಾಂಬ ಅವರ ಚಿಂತನೆಯ ವೈಶಾಲ್ಯತೆಯನ್ನು ತೋರಿಸುತ್ತದೆ.

ತಿರುಮಲಾಂಬ ಅವರು ಹೆಣ್ಣಿಗೆ ವಿದ್ಯೆಯ ಮಹತ್ವವನ್ನು ಮತ್ತು ದೇಶದ ಅಭಿವೃದ್ಧಿಗೆ ಅವಳಿಂದ ಆಗುವ ಅನುಕೂಲಗಳನ್ನು ಸೂಚ್ಯವಾಗಿ ತಿಳಿಸಿದರೂ, ಹೆಂಡತಿಯಾದವಳು ಪತಿಯ ದಾಸಿಯೇ ಎಂಬ ಅಭಿಪ್ರಾಯವನ್ನು ತೋರಿಸಿದಂತೆ ಕಾಣುತ್ತದೆ. ಸುಶೀಲೆ ಮತ್ತು ಚಪಲೆಯರು ಮಾತನಾಡುವಾಗ ಸುಶೀಲೆ ಹೇಳುವ "ನನ್ನ ಸ್ವಾಮಿ ನನ್ನ ವಶವಾಗಿರಬೇಕೆಂದಾಗಲೀ, ನನ್ನ ಆಜ್ಞಾನುಸಾರ ನಡೆಯಬೇಕೆಂದಾಗಲೀ ನಾನೆಂದೂ ಮನಸ್ಸಿನಲ್ಲಿಯೂ ಭಾವಿಸಲೊಲ್ಲೆನು. ಆ ನನ್ನ ಸ್ವಾಮಿಯ ಶ್ರೇಯೋಭಿವೃದ್ಧಿಯೊಂದೇ ನನ್ನ ನಿರಂತರದ ಪ್ರಾರ್ಥನೆಯಾಗಿದೆ. ಸ್ವಾಮಿಯಲ್ಲಿ ನನಗೆ ಎಂದೆಂದಿಗೂ ಈ ದೈನ್ಯ ದಾಸ್ಯವೃತ್ತಿಯೇ ಸ್ಥಿರವಾಗಿರಲಿ! ಅವರ ದಯೆಯೊಂದೇ ನನಗೆ ಸಾಕು" (ತಿರುಮಲಾಂಬ, 1929: ಪುಟ 36) ನುಡಿಗಳು ಮೇಲಿನ ಅಭಿಪ್ರಾಯವನ್ನು ತಿಳಿಸುತ್ತವೆ.

ವಿದ್ಯೆ ಹೆಣ್ಣಿಗೆ ತನ್ನ ಕರ್ತವ್ಯ ಮತ್ತು ಸ್ವಾತಂತ್ರ್ಯದ ಅರಿವನ್ನು ಮೂಡಿಸುತ್ತವೆ ಎಂಬುದನ್ನು ತಿರುಮಲಾಂಬ ಅವರು ಸುಶೀಲೆಯ ಮಾತುಗಳ ಮೂಲಕ ಪ್ರಕಟಿಸುತ್ತಾರೆ. ತನ್ನ ಸ್ನೇಹಿತರು ಹೇಳಿದ ಸುಳ್ಳು ವಿಷಯಗಳನ್ನು ನಂಬಿದ ವಿನೋದ ಸುಶೀಲೆಯನ್ನು ಕೊಲೆ ಮಾಡಲು ಬಂದಾಗ ಅವಳು "ದುಷ್ಟರ ಅಪಲಾಪದಿಂದ ಕೆರಳಿ, ನನ್ನಲ್ಲಿ ಮಾಡುತ್ತಿರುವ ಈ ಘೋರಕೃತ್ಯಕ್ಕೆ ಅನುತಾಪವು ತಪ್ಪದು, ಲಾಲಿಸಿರಿ, ವಿಚಾರ ಮಾಡಿ ನೋಡಿರಿ! ಇದನ್ನು ನಾನು ಮರಣದ ಭಯದಿಂದಾಗಲೀ, ಸ್ವಪ್ರತಿಷ್ಠೆಯಿಂದಾಗಲೀ ಹೇಳಿದುದೆಂದು ತಿಳಿಯಬೇಡಿರಿ. ಇದು ನನ್ನ ಕರ್ತವ್ಯವೆಂದು ತಿಳಿದೇ ಹೇಳಿರುವೆನು. ನಾನು ತಮ್ಮ ಸಹಧರ್ಮಿಣಿಯೆಂದೂ, ಹಿತೈಷಿಯೆಂದೂ ತಿಳಿದು ಇಷ್ಟು ಸ್ವಾತಂತ್ರ್ಯವನ್ನು ವಹಿಸಿದೆನು" (ತಿರುಮಲಾಂಬ, 1929: ಪುಟ 44) ಮಾತುಗಳು ವಿದ್ಯೆ ಕಲಿತ ಸುಶೀಲೆಯ ಕರ್ತವ್ಯ ಪ್ರಜ್ಞೆ, ಅವಳ ಸ್ವಾತಂತ್ರ್ಯದ ಅರಿವು ಮತ್ತು ಸಮಯಪ್ರಜ್ಞೆಯನ್ನು ತೋರಿಸುತ್ತದೆ.

ಮಹಿಳೆಯರಿಗೆ ವಿದ್ಯೆಯನ್ನು ಕೊಡುವುದರಿಂದ ದೇಶ, ಸಮಾಜಕ್ಕೆ ಒಳಿತಾಗುತ್ತದೆ ಎಂದು ತಿರುಮಲಾಂಬ ಅವರು ಈ ರೀತಿ ಹೇಳುತ್ತಾರೆ "ಸ್ತ್ರೀ ವಿದ್ಯಾಭ್ಯಾಸವು ದೇಶಕ್ಕೆ ಹಾನಿಯನ್ನುಂಟು ಮಾಡುವುದೇನು? ಎಂದಿಗೂ ಇಲ್ಲ. ಅವಿದ್ಯಾವತಿಯರಾದ ಗಿರಿಯಮ್ಮನಂಥವರ ಅಹಂಕಾರವಲ್ಲದೆ, ಸುಶೀಲೆಯಂಥವರ ವಿದ್ಯಾಭ್ಯಾಸವೆಂದೂ ಹಾನಿಯನ್ನುಂಟು ಮಾಡಲೊಲ್ಲದು. ಸನ್ಮಾರ್ಗದಲ್ಲಿ ಸುಶಿಕ್ಷಾರೂಪದಲ್ಲಿ ಹೊಂದುವ ವಿದ್ಯಾಧನವು ದೇಶವನ್ನು ಅತ್ಯುತ್ತಮ ಸ್ಥಿತಿಗೆ

ತರಬಲ್ಲುದೆಂಬುದರಲ್ಲಿ ಏನೂ ಸಂಶಯವಿಲ್ಲ" (ತಿರುಮಲಾಂಬ, 1929: ಪುಟ 65). ಈ ಕೃತಿಯಲ್ಲಿ ತಿರುಮಲಾಂಬ ಅವರು ಮಹಿಳೆಯರಿಗೆ ವಿದ್ಯೆಯ ಅನಿವಾರ್ಯತೆಯನ್ನು ತೋರಿಸುತ್ತಾ ಅವರಿಗೆ ಮಹಿಳೆಯರ ಜೀವನ ಕುರಿತು ಹಾಗೂ ಸಮಾಜ ಮತ್ತು ದೇಶೋಭಿವೃದ್ಧಿಯ ಬಗ್ಗೆ ಇದ್ದ ಕಳಕಳಿಯನ್ನು ಪ್ರಕಟಿಸುತ್ತಾರೆ. ಮಹಿಳೆಯರಿಗೆ ವಿದ್ಯೆ ಪಡೆಯಲು ಅವಕಾಶಗಳೇ ಇಲ್ಲದ ಸಂಧರ್ಭದಲ್ಲಿ ವಿದ್ಯೆಯ ಮಹತ್ವ, ಉಪಯೋಗ ಮತ್ತು ಬಳಸುವ ಬಗೆಗಳನ್ನು ತೋರಿಸಿದ ಕೀರ್ತಿ ತಿರುಮಲಾಂಬ ಅವರಿಗೆ ಸಲ್ಲಬೇಕಾಗುತ್ತದೆ.

ಬಾಲ್ಯವಿವಾಹ, ವರದಕ್ಷಿಣೆ, ಹೆಣ್ಣಿಗೆ ಆಗುತ್ತಿರುವ ಅನ್ಯಾಯ, ಮೋಸ ಹೇಗೆ ಅವಳ ಬದುಕನ್ನು ದುರಂತ ಅಂತ್ಯಕ್ಕೆ ಕೊಂಡೊಯ್ಯುತ್ತವೆ ಎಂಬುದನ್ನು ಸರಸ್ವತಿಬಾಯಿ ರಾಜವಾಡೆಯವರ 'ಪ್ರತೀಕಾರ' ಕಥೆ ಚಿತ್ರಿಸುತ್ತದೆ. ಅದರ ಜೊತೆಗೆ ವಿವಾಹವಾಗದ ಬಾಲಿಕೆಯನ್ನು ಸಮಾಜ ನಿಂದಿಸುವ, ಅಪಹಾಸ್ಯ, ಅವಮಾನ ಮಾಡುವ, ಹೆಸರು ಕೆಡಿಸಲು ಪ್ರಯತ್ನಿಸುವ ಚಿತ್ರಣವನ್ನು ಕೊಡುತ್ತಾ ಗಂಡು ಮತ್ತು ಹೆಣ್ಣು ಇಬ್ಬರೂ ಮತ್ತೊಂದು ಹೆಣ್ಣಿನ ಜೀವನವನ್ನು ದುಡ್ಡಿನ ಆಸೆಗೋಸ್ಕರ (ವರದಕ್ಷಿಣೆಗೋಸ್ಕರ) ಹಾಳು ಮಾಡುವ ಕಥಾವಸ್ತುವನ್ನು ಈ ಕಥೆಯಲ್ಲಿ ಬಿಂಬಿಸಿದ್ದಾರೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಈ ಕಥೆ 1931ರಲ್ಲಿ ಪ್ರಕಾಶಿತವಾಗಿದ್ದು ರಾಜವಾಡೆಯವರು ಅಂದಿನ ಪರಿಸ್ಥಿತಿಯನ್ನು ಕಥೆಯಲ್ಲಿ ತಂದಿರುವ ಸಂಭವವಿರುತ್ತದೆ. ಈ ಕಥೆಯ ವತ್ಸಲಾ ಒಬ್ಬ ಅನಾಥ ಹುಡುಗಿ. ತಂಗಿಯ ಮಗಳಾದ ವತ್ಸಲೆಯನ್ನು ತನ್ನ ಮಗಳಂತೆಯೇ ಸಾಕಿದ ಮಾವ ಗೌರಿಚರಣ, ಇಲ್ಲದಿದ್ದರೆ ಆ ಮಗು ಅನಾಥವಾಗಿ ಬೀದಿಗೆ ಬೀಳಬೇಕಾಗಿತ್ತು. ಏಕೆಂದರೆ ಲೇಖಕಿ ತಿಳಿಸುವಂತೆ ಹೆಣ್ಣು ಮಗುವಿನ ಜವಾಬ್ದಾರಿ ತೆಗೆದುಕೊಳ್ಳಲು ಸಮಾಜದಲ್ಲಿ ಯಾರೂ ಮುಂದೆ ಬರುವುದಿಲ್ಲ. ಇದಕ್ಕೆ ಕಾರಣ ಆ ಹೆಣ್ಣನ್ನು ಬೆಳೆಸಿ ಮದುವೆಮಾಡಿ ಅವಳಿಗೆ ಒಂದು ಮನೆಯ ಆಸರೆಯನ್ನು ದೊರಕಿಸಿಕೊಡುವುದು ಬಹಳ ಕಠಿಣ ಸವಾಲಿನ ಕೆಲಸ. ಈ ಹಿನ್ನೆಲೆಯಲ್ಲಿ ವತ್ಸಲಾಳ ಜವಾಬ್ದಾರಿ ಹೊರಲು ಯಾರು ತಯಾರಿರುವುದಿಲ್ಲ. ಇದು ಸಮಾಜದಲ್ಲಿ ಹೆಣ್ಣಿಗೆ ಸ್ಥಾನಮಾನವಿಲ್ಲದಿರುವುದನ್ನು ತೋರಿಸುತ್ತದೆ. ವತ್ಸಲೆಗೆ ಹದಿನಾಲ್ಕು ವರ್ಷವಾದಾಗ ಸಮಾಜದ ರೀತ್ಯಾನುಸಾರ ವಿವಾಹ ಮಾಡಬೇಕಾಗಿದ್ದರೂ ಬಡತನದ ಕಾರಣದಿಂದ ಅದು ಸಾಧ್ಯವಾಗಿರಲಿಲ್ಲ. ಬಾಲ್ಯವಿವಾಹ ಪ್ರಚಲಿತದಲ್ಲಿದ್ದ ಆ ಕಾಲದಲ್ಲಿ ಹದಿನಾಲ್ಕು ವರ್ಷವಾದರೂ ವಿವಾಹವಾಗದೆ ಮನೆಯಲ್ಲಿದ್ದ ವತ್ಸಲೆಯಿಂದ ಊರಿಗೆ ಕೆಡುಕಾಗುತ್ತದೆ ಎಂದು ಭಾವಿಸಿದ ಜನ ವತ್ಸಲೆಯನ್ನು ಹೀನಾಯವಾಗಿ ಕಂಡು ನಿಂದನೆ

ಮಾಡುವುದು ಯಾವುದೇ ಕಾರಣದಿಂದ ಮದುವೆ ನಡೆಯದಿದ್ದರೂ ಅದರ ದೋಷ ಮತ್ತು ಪರಿಣಾಮಗಳನ್ನು ಹೆಣ್ಣಿನ ಹಣೆಗೆ ಕಟ್ಟುವ ಸಮಾಜದ ಕ್ರೂರ ರೀತಿಯನ್ನು ತೋರಿಸುತ್ತದೆ.

ಗೌರಿಚರಣನು ವತ್ಸಲೆ ಕನ್ಯಾವಸ್ಥೆ ಹೊಂದಿದಾಗ ಮದುವೆ ಮಾಡಲು ಪ್ರಯತ್ನಿಸಿದರೂ ವರದಕ್ಷಿಣೆ ಕೊಡಲು ಸಾಧ್ಯವಾಗದೆ ಹೋದಾಗ ಮದುವೆಯನ್ನು ಮುಂದೂಡಿ ಕೆಲವರು ಹೇಳಿದ ಹಾಗೆ 2 ಸಾವಿರ ರೂಪಾಯಿಯನ್ನು ದುಡಿದು ಕೂಡಿಡಲು ಪ್ರಯತ್ನಿಸುವುದು ವರದಕ್ಷಿಣೆ ಕೊಡದೆ ಮದುವೆ ಮಾಡುವುದು ಸಾಧ್ಯವಿಲ್ಲದಿದ್ದ ಅಂದಿನ ಕಠಿಣ ಪರಿಸ್ಥಿತಿಯನ್ನು ಇದು ವ್ಯಕ್ತಪಡಿಸುತ್ತದೆ. ಐದಾರು ವರ್ಷಗಳು ಕಳೆದ ಮೇಲೆ ಗೌರಿಚರಣ ವತ್ಸಲೆಯ ಮದುವೆಗೆ ಪ್ರಯತ್ನಿಸಿ, ಕೊನೆಗೆ ಊರಿನ ಜೋಡಿದಾರರನ್ನು ಕಂಡು ಯಾರಾದರೂ ವತ್ಸಲೆಯನ್ನು ವಿವಾಹವಾಗುವಂತೆ ಆಜ್ಞಾಪಿಸಬೇಕೆಂದು ಬೇಡಿಕೊಳ್ಳುತ್ತಾನೆ. ದುರಾಸೆಪೂರಿತ ಸಾಹುಕಾರ ಗೌರಿಚರಣನ ಹತಾಶ ಪರಿಸ್ಥಿತಿಯನ್ನು ದುರುಪಯೋಗಿಸಿಕೊಂಡು ಅವನ ಮಗನಿಗೆ ವತ್ಸಲೆಯನ್ನು ಮದುವೆ ಮಾಡಿ ವರದಕ್ಷಿಣೆ ಹಣವನ್ನು ತೆಗೆದುಕೊಂಡು ಅವಳನ್ನು ತವರು ಮನೆಯಲ್ಲೇ ಬಿಡುವ ಯೋಜನೆಯನ್ನು ಅವನ ಹೆಂಡತಿಯೊಡನೆ ಸೇರಿ ಮಾಡುತ್ತಾನೆ. ಹೇಗಾದರೂ ಪ್ರೌಢಾವಸ್ಥೆ ದಾಟಿದ್ದ ವತ್ಸಲೆಯನ್ನು ಮದುವೆ ಮಾಡಿ ತನ್ನ ಜವಾಬ್ದಾರಿಯನ್ನು ಪೂರೈಸಬೇಕೆಂದಿದ್ದ ಗೌರಿಚರಣ, ಜೋಡಿದಾರರು ಅವನ ಮಗನಿಗೆ ವತ್ಸಲೆಯನ್ನು ತಂದುಕೊಳ್ಳುವುದಾಗಿ ಹೇಳಿದಾಗ ಸಂತೋಷಗೊಳ್ಳುತ್ತಾನೆ. ಆದರೆ ಜೋಡಿದಾರರ ಸಂಚು ಅವನಿಗೆ ತಿಳಿಯುವುದಿಲ್ಲ. ಜೋಡಿದಾರರ ಕುಟುಂಬದ ಬಯಕೆಯಂತೆ ಹೆಚ್ಚಿನ ಜನರಿಲ್ಲದೆ, ಕೇವಲ ಕೆಲವು ಆಪ್ತರ ಸಮ್ಮುಖದಲ್ಲಿ ಮದುವೆ ನಡೆಯುತ್ತದೆ. ಮದುವೆಯ ನಂತರ ಗೌರಿಚರಣ ವರದಕ್ಷಿಣೆಯ ಹಣವನ್ನು ಜೋಡಿದಾರರಿಗೆ ಕೊಡುತ್ತಾನೆ. ವರದಕ್ಷಿಣೆ ಹಣ ತಲುಪಿದ ನಂತರ ಜೋಡಿದಾರರ ವರ್ತನೆ ಬದಲಾಗುತ್ತದೆ. ಅವರು ವತ್ಸಲೆಯನ್ನು ಕರೆದುಕೊಂಡು ಹೋಗಿ, ಶಾಸ್ತ್ರಗಳನ್ನು ಮುಗಿಸಿ ಕರೆದುಕೊಂಡು ಬರುವಂತೆ ತಿಳಿಸುತ್ತಾರೆ. ಶಾಸ್ತ್ರಗಳನ್ನು ನಂಬಿದ ಗೌರಿಚರಣ ವತ್ಸಲೆಯನ್ನು ತನ್ನ ಮನೆಗೆ ಕರೆದುಕೊಂಡು ಬರುತ್ತಾನೆ. ಆದರೆ ಈ ಬೆಳವಣಿಗೆಯಿಂದ ಆಘಾತಗೊಂಡ ವತ್ಸಲೆ ಮನೆಗೆ ಬಂದವಳೇ ಮಾನಸಿಕ ಸ್ಥಿಮಿತವನ್ನು ಕಳೆದುಕೊಳ್ಳುತ್ತಾಳೆ. ತನಗಾದ ಮೋಸ ಅವಳ ಅರಿವಿಗೆ ಬರುತ್ತದೆ. ಅವಳು ಹೇಳುವ "ವಂಚನೆ, ರಾಕ್ಷಸ ಪ್ರವೃತ್ತಿ, ನರಕ!" (ಸರಸ್ವತಿಬಾಯಿ ರಾಜವಾಡೆ, 2014: ಪುಟ 55) ಮಾತುಗಳು ಅವಳಿಗೆ ಪರಿಸ್ಥಿತಿಯ ಅರಿವಾಗಿರುವುದನ್ನು ತೋರಿಸುತ್ತದೆ. ಅಂದರೆ ವರದಕ್ಷಿಣೆಯ ಹಣಕ್ಕೋಸ್ಕರ ಸಮಾಜ ಒಂದು ಹೆಣ್ಣಿನ ಬಾಳನ್ನು ಹಾಳು ಮಾಡಿದ ಚಿತ್ರಣವನ್ನು ಇದು ತೋರಿಸುತ್ತದೆ.

ಆರು ತಿಂಗಳು ಕಳೆದ ನಂತರ ಗೌರಿಚರಣ ವತ್ಸಲೆಯನ್ನು ಜೋಡಿದಾರರ ಮನೆಗೆ ಬಿಡಲು ಬರುತ್ತಾನೆ. ಜೋಡಿದಾರ ಮತ್ತು ಅವನ ಹೆಂಡತಿ ವತ್ಸಲೆಯನ್ನು ಶಾಸ್ತ್ರೋಕ್ತವಾಗಿ ಶಾಂತಿ ಮಾಡಿಸಿ ಕರೆತರುವಂತೆ ಸೂಚಿಸುತ್ತಾರೆ. ಗೌರಿಚರಣನ ಬಳಿ ಹಣವಿಲ್ಲದಿರುವುದರಿಂದ ಶಾಸ್ತ್ರೋಕ್ತವಾಗಿ ಅವನು ವತ್ಸಲೆಯನ್ನು ಬಿಡಲಾರ. ಆಗ ತಮ್ಮ ಮಗನಿಗೆ ಬೇರೆ ಮದುವೆ ಮಾಡಬಹುದು ಎಂದು ಅವರು ಯೋಚಿಸಿರುತ್ತಾರೆ. ಹಾಗೆಯೇ ಜೋಡಿದಾರ ಕುಟುಂಬವೊಂದರಿಂದ ಹುಡುಗಿಯನ್ನು ನಿಶ್ಚಯಿಸಿರುತ್ತಾರೆ. ಆದ್ದರಿಂದ ವತ್ಸಲೆಯನ್ನು ಕರೆದುಕೊಂಡು ಹೋಗುವಂತೆ ಹೇಳುತ್ತಾರೆ. ಗೌರಿಚರಣ ಇದಕ್ಕೊಪ್ಪದೆ ನಿಮ್ಮ ಸೊತ್ತನ್ನು ನಿಮ್ಮಲ್ಲಿ ಬಿಟ್ಟಿದ್ದೇನೆ ಏನು ಬೇಕಾದರೂ ಮಾಡಿ ಎಂದು ಹೊರಡಲನುವಾಗುತ್ತಾನೆ. ಆದರೆ ಇದೆಲ್ಲವನ್ನು ಗಮನಿಸುತ್ತಿದ್ದ ವತ್ಸಲೆ ಕಿರುಚಿಕೊಂಡು ಕೆಳಗೆ ಬಿದ್ದು ಪ್ರಾಣ ಬಿಡುತ್ತಾಳೆ. ಇಲ್ಲಿ ನಿಜವಾಗಿಯೂ ವರದಕ್ಷಿಣೆ ಮತ್ತು ದುರಾಸೆಗೆ ಒಂದು ಹೆಣ್ಣಿನ ಕೊಲೆಯಾಗುತ್ತದೆ. ಈ ಕೊಲೆಗೆ ಸಮಾಜದ ರೀತಿ ನೀತಿಗಳೇ ಕಾರಣ ಎಂದು ಲೇಖಕಿ ರಾಜವಾಡೆಯವರು ತೋರಿಸಿದ್ದಾರೆ. ಈ ಕಥೆಯಲ್ಲಿ ಮದುವೆಯಾಗದೆ ಉಳಿದ ಒಂದು ಹೆಣ್ಣನ್ನು ಸಮಾಜ ಎಷ್ಟು ಕ್ರೂರವಾಗಿ ನಡೆಸಿಕೊಳ್ಳುತ್ತದೆ ಮತ್ತು ಮದುವೆ ಎಂಬ ನೆಪದಲ್ಲಿ ಹಣವನ್ನು ಸುಲಿದು ಹೆಣ್ಣಿನ ಬಾಳನ್ನು ಹೇಗೆ ನಾಶ ಮಾಡುತ್ತದೆ ಎಂಬ ಕಥಾವಸ್ತುವನ್ನು ಲೇಖಕಿಯವರು ತೋರಿಸಿದ್ದಾರೆ.

ಸರಸ್ವತಿಬಾಯಿ ರಾಜವಾಡೆಯವರ 'ಅವಳ ಉದ್ಧಾರ' ಕಥೆಯಲ್ಲಿ ಕುಟುಂಬ, ಆಶ್ರಮ, ಸಮಾಜ ಹೆಣ್ಣನ್ನು ಶೋಷಣೆಗೆ ತಳ್ಳುವ ಕಥಾವಸ್ತು ಇದೆ. ಈ ಕಥೆಯಲ್ಲಿ ವಿಧವೆಯೊಬ್ಬಳು ತನ್ನ ಭಾವನಿಂದಲೇ ಅತ್ಯಾಚಾರಕ್ಕೊಳಗಾಗಿ ಗರ್ಭಿಣಿಯಾಗಿ ಮನೆಯಿಂದ ಹೊರದೂಡಲ್ಪಡುತ್ತಾಳೆ. ಅನಾಥಳಾದ ಅವಳು ಒಂದು ಆಶ್ರಮದಲ್ಲಿ ಆಶ್ರಯ ಪಡೆದು, ಅಲ್ಲೇ ಮಗುವಿಗೂ ಜನ್ಮ ನೀಡುತ್ತಾಳೆ. ಸ್ವಲ್ಪ ಸಮಯದ ನಂತರ ಆ ಆಶ್ರಮದಲ್ಲಿ ಮಹಿಳೆಯರ ಉದ್ಧಾರದ ಹೆಸರಲ್ಲಿ ನಡೆಯುತ್ತಿರುವ ನಿಜವಾದ ಧ್ಯೇಯ ಕಂಡುಬರುತ್ತದೆ. 50 ವರ್ಷ ತುಂಬಿದ ಸಾಹುಕಾರನೊಬ್ಬ ಮದುವೆಯಾಗಲು ಹೆಣ್ಣನ್ನು ಹುಡುಕಿಕೊಂಡು ಬಂದ ಸಂದರ್ಭದಲ್ಲಿ ಆಶ್ರಮದ ಮೇನೇಜರ್ ಸಾಹುಕಾರನಿಗೆ ತಾವು ಇಷ್ಟ ಪಡುವ ಪ್ರಾಣಿಯನ್ನು ಆರಿಸಿಕೊಳ್ಳಬಹುದು, "ಬಾಲವಿಧವೆಯರು, ಪ್ರೌಢವಿಧವೆಯರು, ಮಕ್ಕಳ ತಾಯಂದಿರು, ಗರ್ಭವತಿಯರು ಇವರಲ್ಲಾರಾದರೂ ಸರಿಯೇ, ತಮ್ಮ ಕೋರಿಕೆಗೆ ಬಂದೊಡನೆ ತಮ್ಮ ಗೃಹಿಣಿಯೆಂದು ತಿಳಿಯಿರಿ" (ಆಮೂರ ಜಿ.ಎಸ್. 1999: ಪುಟ 16) ಎಂದು ಹೇಳುತ್ತಾನೆ. ಇದು ಆಶ್ರಮದವರು ಹೆಣ್ಣನ್ನು ಪ್ರಾಣಿಗೆ ಹೋಲಿಸಿರುವುದನ್ನು ತೋರಿಸುತ್ತದೆ. ಸಾಹುಕಾರ ಆ ವಿಧವೆಯನ್ನು ಇಷ್ಟಪಟ್ಟಾಗ 5 ಸಾವಿರ ರೂಪಾಯಿಗಳಿಗೆ

ಅವಳನ್ನು ಮಾರುತ್ತಾರೆ. ಇಲ್ಲಿ ಮದುವೆಯೆಂಬುವುದು ಕೇವಲ ನೆಪ ಮಾತ್ರವಾಗಿರುತ್ತದೆ. ವಾಸ್ತವದಲ್ಲಿ ಅನಾಥ ಹೆಣ್ಣುಗಳ ಮಾರಾಟವಾಗುತ್ತಿರುತ್ತದೆ. ಆಶ್ರಮವು ಹೆಣ್ಣುಮಕ್ಕಳಿಗೆ ಆಶ್ರಯ ನೀಡಿರುವುದು ಹಣವನ್ನು ಸಂಪಾದಿಸುವುದಕ್ಕೆ, ಹೆಣ್ಣಿಗೆ ಆಗಿರುವ ಅನ್ಯಾಯವನ್ನು ಶೋಷಣೆಯನ್ನು ತಡೆದು ಅವಳಿಗೆ ಸ್ವತಂತ್ರ ಜೀವನವನ್ನು ಕೊಡುವುದಕ್ಕಲ್ಲ, ಬದಲಾಗಿ ಅವಳನ್ನು ಇನ್ನೊಂದು ಶೋಷಣೆಯ ಕೂಪಕ್ಕೆ ನೂಕುವುದಕ್ಕೆ ಎಂಬುದನ್ನು ಸಾಹುಕಾರನಿಗೆ ಮಾರಿದ ಹೆಣ್ಣಿನ ಬದುಕಿನಿಂದ ತಿಳಿಯಬಹುದು.

ಈ ಕಥೆಯ ಹೆಣ್ಣುಮಗಳು 50 ವರ್ಷದ ಸಾಹುಕಾರನನ್ನು ಮದುವೆಯಾದ ಮೇಲೆ ಸುಮಾರು ದಿನ ಸಂಸಾರ ಚೆನ್ನಾಗಿರುತ್ತದೆ. ನಂತರದಲ್ಲಿ ಅವಳಿಗೆ ಮಕ್ಕಳಾಗದೆ ಇರುವುದನ್ನು ಗಮನಿಸಿದ ಸಾಹುಕಾರ ಕುಡಿದ ಅಮಲಿನಲ್ಲಿ ಅವಳನ್ನು ನಿಂದಿಸುತ್ತಾನೆ. ಇದನ್ನು ವಿರೋಧಿಸಿ ಅವಳು ನನಗೆ ಈಗಾಗಲೇ ಒಂದು ಗಂಡುಮಗು ಇದ್ದು ಅದು ಆಶ್ರಮದಲ್ಲಿ ಬೆಳೆಯುತ್ತಿದೆ ಮತ್ತು ನಿಮ್ಮಲ್ಲೆ ಏನೋ ದೋಷವಿದೆ ಎಂದು ತಿಳಿಸುತ್ತಾಳೆ. ಕುಪಿತಗೊಂಡ ಸಾಹುಕಾರ ಆಕೆಯನ್ನು ಮನೆಯಿಂದ ಹೊರಗಡೆ ಕಳುಹಿಸುತ್ತಾನೆ. ಅವಳು ಕೊನೆಗೆ ವೇಶ್ಯಾವಾಟಿಕೆಯ ಮನೆಯಲ್ಲಿ ಆಶ್ರಯ ಪಡೆಯುತ್ತಾಳೆ. ಈ ಕಥೆಯಲ್ಲಿ ನಡೆಯುವ ಘಟನೆಗಳ ಮುಖಾಂತರ ಪುರುಷ ಸಮಾಜ ಹೆಣ್ಣನ್ನು ಹೇಗೆ ಶೋಷಿಸುತ್ತಾ ಬಂದಿದೆ ಮತ್ತು ಅವಳ ಸ್ವಾತಂತ್ರ್ಯ, ಆಯ್ಕೆಗಳನ್ನು ಕಸಿದುಕೊಂಡು, ಅವಳ ಅಸ್ತಿತ್ವವನ್ನು ಪರಿಗಣಿಸದೆ, ಕೇವಲ ಪ್ರಾಣಿಯಂತೆ ಕಂಡು ಅವಳ ಉದ್ಧಾರದ ನೆಪದಲ್ಲಿ ಶೋಷಿಸುತ್ತಿರುವ ಕಥಾವಸ್ತುವನ್ನು ರಾಜವಾಡೆಯವರು ನೀಡಿದ್ದಾರೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಹೆಣ್ಣಿನ ಉದ್ಧಾರದ ಬಗ್ಗೆ ಕೆಲಸ ಮಾಡುತ್ತಿರುವುದು ಗಂಡಸರು. ಆದರೆ ಅವರ ಸ್ವಾರ್ಥಕ್ಕೋಸ್ಕರ ಹೆಣ್ಣಿನ ಜೀವನವನ್ನೇ ಬಲಿ ತೆಗೆದುಕೊಳ್ಳುತ್ತಿರುತ್ತಾರೆ. ಕಥಾವಸ್ತುವಿನ ಹಿನ್ನೆಲೆಯಲ್ಲಿ ನೋಡಿದಾಗ ಕಥಾ ಶೀರ್ಷಿಕೆ ವಾಸ್ತವವನ್ನು ವ್ಯಂಗ್ಯ ಮಾಡುತ್ತಿದೆ ಎಂದು ಹೇಳುವುದು ಉಚಿತವೆನಿಸುತ್ತದೆ. ಒಂದು ಬಾರಿ ಶೋಷಣೆಗೆ ಒಳಗಾದ ಹೆಣ್ಣು ಪದೇ ಪದೇ ಶೋಷಣೆಗೆ ಒಳಗಾಗುವ ವಿಷಾದವನ್ನು ಕಥೆ ತೋರಿಸುತ್ತದೆ. ಮೇಲಿನ ಕಥೆಗಳ ವಿಶ್ಲೇಷಣೆಯು ಸಬಿಹಾ ಭೂಮಿಗೌಡ ವ್ಯಕ್ತಪಡಿಸಿದಂತೆ "ರಾಜವಾಡೆಯವರ ಒಟ್ಟು ಚಿಂತನೆಗಳು ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ರಂಗಗಳಲ್ಲಿನ ಅಸಮಾನತೆ, ತಾರತಮ್ಯ ನೀತಿ, ಶೋಷಣೆಯನ್ನು ವಿರೋಧಿಸುವ ಸ್ಪಷ್ಟ ಕಾಳಜಿಯನ್ನು ಹೊಂದಿವೆ" (ಶ್ರೀಮತಿ ಎಚ್.ಎಸ್. 2006: ಪುಟ 430) ಎಂಬುದನ್ನು ಸಮರ್ಥಿಸುತ್ತದೆ.

ಎಚ್.ವಿ. ಸಾವಿತ್ರಮ್ಮನವರು 'ಲಕ್ಷ್ಮೀ' ಕಥೆಯಲ್ಲಿ ಬಡತನ, ಅಸಹಾಯಕತೆ ಮತ್ತು ಬೇರೆ ಆಶ್ರಯವಿಲ್ಲದೆ ಇದ್ದಾಗ ಹೆಣ್ಣು ಸ್ವಾವಲಂಬಿಯಾಗಿ, ಜೀವನ ಸಾಗಿಸುವುದನ್ನು ಚಿತ್ರಿಸುತ್ತಾ, ಪುರುಷರು ಒಬ್ಬ ಬಡ ಹೆಣ್ಣನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುವ ಹಾಗೂ ಸಮಾಜ ತಪ್ಪೆಲ್ಲವನ್ನೂ ಆ ಹೆಣ್ಣಿನ ಮೇಲೆ ಹೊರಿಸುವ ಕಥಾವಸ್ತುವನ್ನು ಚಿತ್ರಿಸಿದ್ದಾರೆ. ಈ ಕಥೆಯ ರಾಜಮ್ಮಳ ಗಂಡ ಮಗಳು ಲಕ್ಷ್ಮೀ ಒಂದು ವರ್ಷದವಳಿದ್ದಾಗ ತೀರಿಹೋಗಿರುತ್ತಾನೆ. ಬಡತನದಿಂದ ತಂದೆಯ ಮನೆ ಸೇರಿದರೆ ಅಲ್ಲಿ ಅಣ್ಣನ ಆಶ್ರಯ ದೊರೆಯುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಬೇರೆಯವರ ಮನೆ ಕೆಲಸ ಮಾಡಿ ಜೀವನ ಸಾಗಿಸಲು ರಾಜಮ್ಮ ಪ್ರಾರಂಭಿಸುತ್ತಾಳೆ. ಇದು ಅಸಹಾಯಕ ಪರಿಸ್ಥಿತಿಯಲ್ಲಿ ಧೈರ್ಯಗೆಡದೆ ಸ್ವಾವಲಂಬಿಯಾಗಿ ದುಡಿದು ಜೀವನ ನಡೆಸುವ ಹೆಣ್ಣಿನ ಚಿತ್ರಣವನ್ನು ಕೊಡುತ್ತದೆ. ರಾಜಮ್ಮ ಆರ್ಥಿಕವಾಗಿ ಸಬಲಳಾಗಲು ಪ್ರತಿದಿನ ಬೆಳಗ್ಗೆ ಇಡ್ಲಿ ಮಾರಿ, ನಂತರ ಬೇರೆಯವರ ಮನೆಯ ಕೆಲಸಗಳಿಗೆ ಹೋಗುವುದು ಮಹಿಳೆಯರೂ ಕೂಡ ಸಂದರ್ಭಗಳು ಬಂದರೆ ಆರ್ಥಿಕವಾಗಿ ಸಬಲರಾಗಲು ಸಾಧ್ಯವಾಗುತ್ತದೆ ಎಂಬುದನ್ನು ತೋರಿಸುತ್ತದೆ. ರಾಜಮ್ಮನ ಬದುಕು ಇತರ ಹೆಣ್ಣುಗಳಿಗೆ ಧೈರ್ಯ ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸುವಲ್ಲಿ ಪೂರಕವಾಗುತ್ತದೆ. ಆದರೆ ಅವಳ ಮಗಳು ಲಕ್ಷ್ಮೀಯ ಜೀವನ ಪುರುಷರ ಸ್ವಾರ್ಥ, ಕಾಮದಾಹಕ್ಕೆ ಬಲಿಯಾಗುವ ದಾರುಣ ಚಿತ್ರಣವನ್ನು ಕೊಡುತ್ತದೆ. ರಾಜಮ್ಮ ಬಾಡಿಗೆಗಿದ್ದ ಮನೆಯ ಯಜಮಾನಿ ಭಾಗ್ಯಮ್ಮನ ಮಗ ಶ್ಯಾಮಸುಂದರ ಲಕ್ಷ್ಮೀಯನ್ನು ಪ್ರೀತಿಸುವಂತೆ ನಟಿಸುತ್ತಾನೆ. ಅವನ ಕಪಟ ಪ್ರೀತಿಗೆ ಮರುಳಾಗಿ ಲಕ್ಷ್ಮೀ ವಿದ್ಯಾಭ್ಯಾಸವನ್ನು ಬಿಟ್ಟು ಶ್ಯಾಮಸುಂದರನೊಂದಿಗೆ ಊರು ಬಿಟ್ಟು ಹೋಗುತ್ತಾಳೆ. ಎರಡು ತಿಂಗಳ ನಂತರ ಊರಿಗೆ ಬಂದ ಶ್ಯಾಮಸುಂದರನಿಗೆ ಮದುವೆ ನಿಶ್ಚಯವಾಗುತ್ತದೆ. ಲಕ್ಷ್ಮೀಯನ್ನು ಕಾಮದಾಹಕ್ಕೆ ಉಪಯೋಗಿಸಿಕೊಂಡ ಶ್ಯಾಮಸುಂದರ ಸ್ವಾರ್ಥಕ್ಕೆ ಮತ್ತು ಕೇವಲ ಲೈಂಗಿಕ ಸುಖಕ್ಕೆ ಹೆಣ್ಣನ್ನು ಬಳಸುವ ಪುರುಷರ ಸ್ವಭಾವವನ್ನು ಪ್ರತಿಬಿಂಬಿಸುತ್ತಾನೆ. ಆದರೆ ಅವನನ್ನೇ ನಂಬಿ ಹೋದ ಲಕ್ಷ್ಮೀಯ ಬಾಳು ಹಾಳಾಗುತ್ತದೆ. ಈ ಕಥೆಯಲ್ಲಿ ಜೀವನದ ಕಷ್ಟಗಳನ್ನು ಎದುರಿಸುತ್ತ ಧೈರ್ಯವಾಗಿ, ಸ್ವಾವಲಂಬಿಯಾಗಿ ಬದುಕುವ ಮತ್ತು ಪುರುಷರ ಸ್ವಾರ್ಥಕ್ಕೆ ಬಲಿಯಾಗುವ ಹೆಣ್ಣುಗಳ ಕಥಾವಸ್ತು ಕಂಡುಬರುತ್ತದೆ.

ಎಚ್.ವಿ. ಸಾವಿತ್ರಮ್ಮನವರ 'ಮರುಮದುವೆ' ಕಥೆ ಆಧುನಿಕ ಸಮಾಜದಲ್ಲಿ ಪುರುಷ ಪ್ರಧಾನ ಧೋರಣೆಗಳು ಬದಲಾಗಿ ಪುರುಷನ ವರ್ತನೆಯಲ್ಲಿ ಮತ್ತು ಸ್ತ್ರೀಯರ ಮನೋಭಾವನೆಗಳಲ್ಲಿ ಆಗುತ್ತಿರುವ ಪರಿವರ್ತನೆಗಳನ್ನು ಕಟ್ಟುತ್ತದೆ. ಈ ಕಥೆಯ ಪ್ರಧಾನ ಪಾತ್ರ

ಭಾರತಿಗೆ ಹದಿನಾರನೇ ವಯಸ್ಸಿನಲ್ಲಿ ತನಗಿಂತ ಎರಡರಷ್ಟು ವಯಸ್ಸಾದ ಕೃಷ್ಣಪ್ಪ ಎಂಬುವನಿಗೆ ಎರಡನೇ ಹೆಂಡತಿಯಾಗಿ ಮದುವೆಯಾಗುತ್ತದೆ. ತನಗೆ ಇಷ್ಟವಿಲ್ಲದಿದ್ದರೂ ಮನೆಯ ಪರಿಸ್ಥಿತಿ, ಮಲತಾಯಿ ಚಿಕ್ಕಮ್ಮನ ಅನಾದರ, ದ್ವೇಷಗಳಿಂದ ತಪ್ಪಿಸಿಕೊಳ್ಳಲು ವಿದ್ಯಾಭ್ಯಾಸವನ್ನು ಮೊಟಕುಮಾಡಿ ಮದುವೆಯಾಗುತ್ತಾಳೆ. ಮದುವೆಯ ನಂತರ ಕೃಷ್ಣಪ್ಪನಿಗೆ ಚಿಕ್ಕವಯಸ್ಸಿನ ಹುಡುಗಿಯನ್ನು ವಿವಾಹವಾಗಿದ್ದು ಅಪರಾಧಿ ಭಾವನೆಯನ್ನು ತಂದಿರುತ್ತದೆ. ಪಾದ್ರಿಯೊಬ್ಬರು ಭಾರತಿಯನ್ನು ಕೃಷ್ಣಪ್ಪನಿಗೆ ಮಗಳೇ ಎಂದು ಪ್ರಶ್ನಿಸಿದಾಗ ಅವನಿಗೆ ತಾನು ಮಾಡಿದ್ದು ತಪ್ಪು ಎನಿಸುತ್ತದೆ. ಪುರುಷರಲ್ಲಿ ಕೆಲವರಲ್ಲಾದರೂ ಇಂತಹ ಬದಲಾವಣೆ ಆಗುತ್ತಿರುವುದನ್ನು ಸಾವಿತ್ರಮ್ಮನವರು ಕೃಷ್ಣಪ್ಪನ ಪಾತ್ರದಲ್ಲಿ ಹೊರಹೊಮ್ಮಿಸಿದ್ದಾರೆ.

ಭಾರತಿಗೆ ಆಗಿರುವ ಅಸಮಾಧಾನ, ಅವಳ ಇಚ್ಛೆಯನ್ನು ಗಮನಿಸಿದ ಕೃಷ್ಣಪ್ಪ ಅವಳು ಹಾಸ್ಟೆಲಿನಲ್ಲಿದ್ದು ವಿದ್ಯಾಭ್ಯಾಸವನ್ನು ಮುಂದುವರೆಸಲು ಅವಕಾಶ ಮಾಡಿಕೊಡುತ್ತಾನೆ. ಇದು ಹೆಂಡತಿ ಯಾವಾಗಲೂ ಗಂಡನ ಜೊತೆಯಲ್ಲೆ ಇರಬೇಕು, ಮದುವೆಯ ನಂತರ ಓದು ಬರಹ ನಿಲ್ಲಿಸಿ, ಉದ್ಯೋಗವನ್ನು ಬಿಟ್ಟು ಮನೆಗಷ್ಟೆ ಸೀಮಿತವಾದ ಜೀವನ ನಡೆಸಬೇಕು ಎಂಬ ನಿಲುವಿಗೆ ವಿರುದ್ಧವಾದ ನಡೆಯಾಗಿದ್ದು ಪುರುಷ ಸಮಾಜದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ತೋರಿಸುತ್ತದೆ.

ವಯಸ್ಸಾದ ಗಂಡನೊಡನೆ ಬಾಳಲಾಗದೆ ಅಸಂತೋಷದಿಂದ ಇದ್ದ ಭಾರತಿ ಕೆಲಸದ ಹುಡುಕಾಟದಲ್ಲಿದ್ದಾಗ ಮೈಸೂರಿನ ಮಿಷನ್ ಸ್ಕೂಲಿನಿಂದ ಕೆಲಸಕ್ಕೆ ಪತ್ರ ಬರುತ್ತದೆ. ಕೃಷ್ಣಪ್ಪನಿಗೆ ಈ ವಿಷಯ ತಿಳಿಸದೆ ಮೈಸೂರಿಗೆ ಹೋದ ಭಾರತಿ ಒಂದು ತಿಂಗಳಾದರೂ ವಾಪಸ್ಸು ಬರದೇ ಇದ್ದಾಗ ಕೃಷ್ಣಪ್ಪನಿಗೆ ತುಂಬಾ ಬೇಜಾರಾಗುತ್ತದೆ. ಮನೆಯಲ್ಲಿದ್ದ ಪತ್ರ ಕೃಷ್ಣಪ್ಪನ ಕೈ ಸೇರಿ ವಿಷಯ ತಿಳಿದಾಗ ಹೇಳಿದ್ದರೆ ನಾನೇ ಕಳುಹಿಸುತ್ತಿದ್ದೆ ಎಂದುಕೊಳ್ಳುತ್ತಾನೆ. ಆದರೆ ಭಾರತಿಯ ಬಗ್ಗೆ ದ್ವೇಷವನ್ನು ತಳೆಯುವುದಿಲ್ಲ. ಬದಲಿಗೆ ಭಾರತಿಗೆ ಬಿಡುಗಡೆ ಸಿಗಬೇಕಾದರೆ ತನ್ನ ಸಾವಿನಿಂದ ಮಾತ್ರ ಎಂದುಕೊಂಡರೂ, ಹಿಂದೂ ಸಮಾಜದಲ್ಲಿ ವಿಧವೆಗೆ ಇರುವ ಸ್ಥಾನಮಾನಗಳನ್ನು ಪರಿಗಣಿಸಿ ಆ ಯೋಚನೆಯನ್ನು ಬಿಡುತ್ತಾನೆ. ಕೆಲಸಕ್ಕೆ ಸೇರಿ ತನ್ನ ಜೀವನದ ದಿಕ್ಕನ್ನು ಪಡೆಯುವ ಪ್ರಯೋಗ ಮಾಡಬೇಕೆಂದುಕೊಂಡಿದ್ದ ಭಾರತಿ ತನ್ನ ಗಂಡ ಕೃಷ್ಣಪ್ಪನ ಮನೆಗೆ ಬರುತ್ತಾಳೆ. ಈಗ ನಿಜವಾದ ಮರುಮದುವೆ ಆಗುತ್ತದೆ ಎಂದು ತಿಳಿಯಬಹುದು. ಏಕೆಂದರೆ, ಪುರುಷನೋರ್ವ ತನ್ನ ಯೋಚನಾಲಹರಿಗಳನ್ನು, ಸ್ತ್ರೀದೃಷ್ಟಿಕೋನವನ್ನು ಬದಲಾಯಿಸಿಕೊಂಡು ಅವಳ ಆಸೆ ಆಕಾಂಕ್ಷೆಗಳಿಗೆ ಸ್ಪಂದಿಸಿ, ಜೀವನದಲ್ಲಿ ವ್ಯಕ್ತಿತ್ವ ರೂಪಿಸಿಕೊಳ್ಳಲು ಅವಕಾಶ ಮಾಡಿಕೊಡುವುದು

ಮತ್ತು ಹೆಣ್ಣೊಬ್ಬಳು ಬದಲಾದ ಭಾವನೆ, ನಡೆಗಳನ್ನು ಅರ್ಥ ಮಾಡಿಕೊಂಡು ಒಟ್ಟಾಗಿ ಬಾಳಲು ಬರುವುದು ಗಂಡು ಮತ್ತು ಹೆಣ್ಣು ಇಬ್ಬರೂ ಒಬ್ಬರನ್ನೊಬ್ಬರು ಅರಿತು, ಪರಸ್ಪರ ಗೌರವದಿಂದ ಬಾಳುವುದು ನಿಜವಾದ ಮದುವೆಯಾಗುತ್ತದೆ ಎಂಬ ಅಭಿಪ್ರಾಯವನ್ನು ಸಾವಿತ್ರಮ್ಮನವರು ಈ ಕಥೆಯಲ್ಲಿ ಪ್ರಕಟಿಸಿರುವುದು ತಿಳಿಯುತ್ತದೆ.

ಸಮಾಜದಲ್ಲಿ ಆಚರಣೆಯಲ್ಲಿರುವ ಮೂಢನಂಬಿಕೆಗಳಿಂದ ಹೆಣ್ಣಿನ ಬದುಕು ಕಟ್ಟುವ ಮುಂಚೆಯೇ ಅದರ ವ್ಯಾಪ್ತಿ ಸಂಕುಚಿತವಾಗುತ್ತದೆ ಅಲ್ಲದೆ ಆಸೆ ಆಕಾಂಕ್ಷೆಗಳನ್ನು ಬದಿಗಿಟ್ಟು ಕಂದಾಚಾರದ ಬದುಕಿಗೆ ಅರ್ಥವಿಲ್ಲದ ಸಂಪ್ರದಾಯದ ಆಚರಣೆಗಳಿಗೆ ಹೊಂದಿ ಸ್ವಂತ ಜೀವನವನ್ನು ತ್ಯಜಿಸಿ ಸಮಾಜ ನಿರ್ಮಿಸಿರುವ ಬೇಲಿಯೊಳಗೆ ಹೊಂದಾಣಿಕೆ ಮಾಡಿಕೊಳ್ಳುವುದನ್ನು ಹಾಗೂ ಹೆಣ್ಣು ಮತ್ತು ಪುರುಷರು ಮೂಢನಂಬಿಕೆ ಸಂಪ್ರದಾಯಗಳನ್ನು ಬಿಟ್ಟು ಹೊಸ ಜೀವನ ಪ್ರಾರಂಭಿಸುವಂತಹ ಬದಲಾವಣೆಯನ್ನು ಎಚ್.ವಿ. ಸಾವಿತ್ರಮ್ಮನವರು 'ಪಾತು ಕಥೆ'ಯಲ್ಲಿ ಕಟ್ಟಿದ್ದಾರೆ. ಈ ಕಥೆಯ ಪಾರ್ವತಿಗೆ 10ನೇ ವಯಸ್ಸಿನಲ್ಲಿ ಮದುವೆಯಾಗುತ್ತದೆ. ಆದರೆ ಮದುವೆಯಾದ 8–10 ದಿನಗಳಲ್ಲೇ ಗಂಡ ಅನಾರೋಗ್ಯದಿಂದ ಸಾವಿಗೀಡಾಗುತ್ತಾನೆ. ಮಗನ ಸಾವಿಗೆ ಪಾತುವಿನ ದುರಾದೃಷ್ಟ ಕಾರಣವಾಯಿತೆಂಬ ಮೂಢನಂಬಿಕೆಯಿಂದ ಸೀತಮ್ಮ ಪಾತುವನ್ನು ನಿಂದಿಸುತ್ತಾಳೆ. ಬಾಲವಿಧವೆಯಾದ ಪಾತುವಿನ ದುಃಖವನ್ನು ಅವಳತ್ತೆ ಸ್ವಂತ ವಿಧವೆಯಾದರೂ ಅರ್ಥಮಾಡಿಕೊಳ್ಳದೆ ಎಲ್ಲದಕ್ಕೂ ಅವಲಕ್ಷಣದ ಪಾತುವೇ ಕಾರಣವೆಂದು ಅಪವಾದಗಳನ್ನು ಸೃಷ್ಟಿಸುತ್ತಾಳೆ. ಇದು ಸಮಾಜದಲ್ಲಿ ಜನರು ಜೀವನದಲ್ಲಿ ನಡೆಯುವ ಕೆಟ್ಟ ಘಟನೆಗಳಿಗೆ ಸ್ತ್ರೀಯರನ್ನು ಕಾರಣವಾಗಿ ಪರಿಗಣಿಸುತ್ತಿದ್ದ ಸಂಪ್ರದಾಯವನ್ನು ತೋರಿಸುತ್ತದೆ. ಸೀತಮ್ಮನ ಕಟು ಮಾತುಗಳ ಪರಿಣಾಮ ಬಾಲಕಿ ಪಾತು 'ತಾನೇಕೆ ಹುಟ್ಟಿದೆನೋ' (ರವಿಕುಮಾರ್, ನ. ಎಲ್.ಜಿ. ಮೀರಾ 2012: ಪುಟ 466) ಎಂದು ಯೋಚಿಸುವ ಮಟ್ಟಕ್ಕೆ ಕೊಂಡೊಯ್ಯುತ್ತದೆ.

ಅವಳ ಮುಂದಿನ ಜೀವನವನ್ನರಿತ ತಂದೆ ಮಗಳಿಗೆ ವಿದ್ಯೆ ಕೊಡಿಸಲು ಮುಂದಾಗುತ್ತಾನೆ. ಸಂಪ್ರದಾಯಬದ್ಧ ಜೀವನಕ್ಕೆ ಹೊಂದಿಕೊಂಡ ಬಾಲವಿಧವೆ ಪಾತುವಿಗೆ ಸ್ವಾವಲಂಬಿಯಾಗಿ ಬದುಕಲು ಅವಶ್ಯಕವಾದ ವಿದ್ಯೆ ಕಲಿಯುವ ಅವಕಾಶ ದೊರೆತರೂ ಅವಳು ಬಳಸಿಕೊಳ್ಳುವುದಿಲ್ಲ. ಆದರೆ ಸ್ವಾವಲಂಬಿ ಜೀವನವನ್ನು ಅರಿಯದ ಪಾತು ಶಾಲೆಗೆ ಹೋಗದೆ, ತಮ್ಮನೇ ವಿದ್ಯೆ ಕಲಿತು ನನ್ನನ್ನು ನೋಡಿಕೊಳ್ಳುತ್ತಾನೆ ಎಂದು ಪರಾವಲಂಬಿ ಜೀವನಕ್ಕೆ ತಯಾರಾಗುತ್ತಾಳೆ. ಸಾವಿತ್ರಮ್ಮನವರು ಈ ಮೂಲಕ ಶತಮಾನಗಳಿಂದ ತುಳಿತಕ್ಕೊಳಗಾದ ಹೆಣ್ಣು ಅವಕಾಶಗಳು

ದೊರೆತರೂ ವಿದ್ಯೆ ಕಲಿತು ಸ್ವಾವಲಂಬಿಯಾಗಲು ತಯಾರಾಗಿಲ್ಲದಿರುವುದನ್ನು ತೋರಿಸುತ್ತಾರೆ. ಒಂದು ಹೆಣ್ಣು ಸ್ವತಂತ್ರ ಜೀವನ ನಡೆಸಬೇಕಾದರೆ ಅಥವಾ ಸ್ವತಂತ್ರ ಬದುಕನ್ನು ಕಟ್ಟಿಕೊಳ್ಳಬೇಕಾದರೆ ವಿದ್ಯೆ ಕಲಿಯಬೇಕು. ವಿದ್ಯೆ ಕಲಿಯುವ ಅವಕಾಶ ದೊರೆತಾಗ ಕಣ್ಣುಮುಚ್ಚಿ ಕುಳಿತು ತನ್ನ ಬದುಕು ಬೇರೆಯವರ ಮೇಲೆ ಅವಲಂಬಿತವಾದಾಗ ತಾನು ವಿದ್ಯೆ ಕಲಿಯಬೇಕಿತ್ತು ಎಂದು ಪಶ್ಚಾತ್ತಾಪ ಪಡಬೇಕಾಗುತ್ತದೆ. ತಾಯಿಯ ಜೊತೆ ಮಾತನಾಡುವಾಗ ಒಮ್ಮೆ ಪಾತು ವಿದ್ಯೆಯ ಅವಶ್ಯಕತೆಯನ್ನರಿತು 'ಅಮ್ಮ ನಾನು ಸ್ಕೂಲು ಬಿಡಬಾರದಾಗಿತ್ತು" (ರವಿಕುಮಾರ್, ನ. ಎಲ್.ಜಿ. ಮೀರಾ 2012: ಪುಟ 474) ಎಂದು ಹೇಳುವುದು ಆ ಪಶ್ಚಾತ್ತಾಪದ ದನಿಯೇ ಆಗಿರುತ್ತದೆ. ಇಲ್ಲಿ ಸಾವಿತ್ರಮ್ಮನವರು ಪಾತ್ರಗಳ ಮೂಲಕ ವಿದ್ಯೆಯ ಮಹತ್ವವನ್ನು ಪ್ರಕಟಿಸುತ್ತಾರೆ. ಯುವತಿಯಾದ ಪಾತು ತಾನು ವಿದ್ಯೆ ಕಲಿತಿದ್ದರೆ ಅವಲಂಬಿಯಾಗಿ ಬದುಕಬೇಕಾಗಿರಲಿಲ್ಲ ತನ್ನ ಸ್ವಂತ ಬದುಕನ್ನು ಕಟ್ಟಿಕೊಳ್ಳಬಹುದಾಗಿತ್ತು. ಚಂದುವಿಗೆ ವಿವಾಹವಾದ ಮೇಲೆ ಅವನನ್ನು ಅವಲಂಬಿಸುವುದು ಸಾಧ್ಯವಾಗಲಿಕ್ಕಿಲ್ಲ ಎಂಬ ಪಾತುವಿನ ಯೋಚನೆ ಹೆಣ್ಣಿನ ಪರಾವಲಂಬಿತನವನ್ನು ತೋರಿಸುತ್ತದೆ.

ಚಂದುವಿನ ಉನ್ನತ ವ್ಯಾಸಂಗಕ್ಕಾಗಿ ಪಾತುವಿನ ಕುಟುಂಬ ಬೆಂಗಳೂರಿಗೆ ವಲಸೆ ಬರುತ್ತದೆ. ಕಾಲೇಜಿನಲ್ಲಿ ಚಂದುವಿಗೆ ಗೋವಿಂದ ಎಂಬಾತನೊಂದಿಗೆ ಗೆಳೆತನವಾಗಿ, ಚಂದುವಿನ ಮನೆಗೆ ಗೋವಿಂದ ಬರುತ್ತಿರುತ್ತಾನೆ. ಚಂದು, ಗೋವಿಂದ ಮತ್ತು ಪಾತು ಇವರ ಮಾತುಗಳಲ್ಲಿ ಸಮಾಜದ ನ್ಯೂನತೆಗಳು ಚರ್ಚೆಯಾಗುತ್ತಿರುತ್ತವೆ. ಮುಖ್ಯವಾಗಿ ಗೋವಿಂದನ ವಾಕ್ಚಾತುರ್ಯ ಮತ್ತು ವಾದಗಳಿಂದ ತಾನೂ ಕೂಡ ಸಮಾಜದ ದೋಷದ ಫಲವಾಗಿ ಸುಖವಂಚಿತಳೆಂಬ ಅರಿವು ಪಾತುವಿಗೆ ಆಗುತ್ತದೆ, ಜೊತೆಗೆ ಎಲ್ಲ ಹಣೆಬರಹವೆಂಬ ಅಸಹಾಯಕ ಭಾವನೆ ಅವಳಿಂದ ದೂರಸರಿಯಲು ಪ್ರಾರಂಭಿಸುತ್ತದೆ. ಸಮಾಜ ಹಣೆಬರಹ, ವಿಧಿ ಎನ್ನುವ ಹಣೆಪಟ್ಟಿಯನ್ನು ಕಟ್ಟಿ ಹೆಣ್ಣಿನ ಬದುಕಿನ ಸಂತೋಷವನ್ನು ಕಸಿದುಕೊಂಡಿರುವುದು ಪಾತುವಿನ ಅರಿವಿಗೆ ಬರುತ್ತದೆ. ಸುಖ-ನೆಮ್ಮದಿಯ ಬದುಕನ್ನು ಪಡೆಯುವ ಮನಸ್ಸಿದ್ದರೂ ಕಟ್ಟುಕಟ್ಟಳೆಗಳಿಗೆ ಒಳಗಾದ ಪಾತು ನಿಧಾನವಾಗಿ ಜೀವನವನ್ನು ಕಣ್ತೆರೆದು ನೋಡುವುದನ್ನು ಕಲಿಯುತ್ತಾಳೆ. ಇದು ಅವಳಲ್ಲಿ ಆಗುತ್ತಿರುವ ಬದಲಾವಣೆಯನ್ನು ತೋರಿಸುತ್ತದೆ.

ವಿಧವೆಯಾದ ಹೆಣ್ಣು ಗಂಡ ಕಟ್ಟಿದ ಮೂರು ಗಂಟುಗಳಿಗೆ ಒಳಗಾಗಿ ತನ್ನ ಜೀವನವನ್ನೆಲ್ಲಾ ವಿಕಾರ ವೇಷ ಮತ್ತು ದುಃಖದಲ್ಲಿ ಕಳೆಯುವುದು ಸರಿಯಲ್ಲ ಎಂದು ಸಾವಿತ್ರಮ್ಮನವರು ಚಂದುವಿನ ಪಾತ್ರದ ಮೂಲಕ ತಿಳಿಸುತ್ತಾರೆ. "ಗಂಡ ಸತ್ತರೆ ವಿಕಾರ ವೇಷ

ಏಕೆ ಹಾಕಿಕೊಳ್ಳಬೇಕು? ಹೆಂಡತಿ ಸತ್ತರೆ ಗಂಡಸರು ಹಾಗೇ ಮಾಡುತ್ತಾರೆಯೇ?" (ರವಿಕುಮಾರ್, ನ. ಎಲ್.ಜಿ. ಮೀರಾ 2012: ಪುಟ 490) ಎಂದು ಚಂದು ಅಮ್ಮನಿಗೆ ಕೇಳಿದಾಗ 'ನೀನು ಹುಚ್ಚು ಹುಚ್ಚೇ ವಾದಿಸಬೇಡ ಚಂದೂ, ಹೆಂಡತಿ ಸತ್ತರೆ ಗಂಡಸರು ಬೇರೆ ಮದುವೆ ಮಾಡಿಕೊಳ್ಳುತ್ತಾರೆ, ಹೆಂಗಸು ಮಾಡಿಕೊಳ್ಳುವುದಕ್ಕಾಗುತ್ತದೆಯೇ? ಎಂದು ಅಮ್ಮ ಹೇಳುತ್ತಾಳೆ. ಈ ಮಾತುಗಳನ್ನು ಕೇಳುತ್ತಿದ್ದ ಪಾತು "ತಿರುಗಿ ಕೂದಲು ಕತ್ತರಿಸಲೇನಮ್ಮಾ?" (ರವಿಕುಮಾರ್, ನ. ಎಲ್.ಜಿ. ಮೀರಾ 2012: ಪುಟ 490) ಎಂದಾಗ ಅವಳನ್ನು "ಕೂದಲಿನಿಂದ ಏನಾಗುತ್ತೆ ಪಾತೂ? ಮನಸ್ಸು ಹಿಡಿತದಲ್ಲಿರಬೇಕು, ಈಗ ನಿನಗೆ ಜಗತ್ತಿನ ಸುಖ ದೇವರು ತಪ್ಪಿಸಿದ್ದಕ್ಕೆ ಏನೋ ಕಾರಣವಿರಬೇಕು, ತನಗೇ ಬೇಕಾದ ಹೂವೆಂದು ನಿನ್ನನ್ನು ಮೀಸಲಾಗಿಟ್ಟುಕೊಂಡಿರಬೇಕು, ಹಾಗೆಂದು ಸದಾ ಮನಸ್ಸು ಗಟ್ಟಿ ಮಾಡಿಕೋ. ಎಟುಕದ ಸುಖಕ್ಕೆ ಆಸೆಪಟ್ಟರೆ ನಿನಗೆ ಕಣ್ಣೀರು ಗತಿ" (ರವಿಕುಮಾರ್, ನ. ಎಲ್.ಜಿ. ಮೀರಾ 2012: ಪುಟ 490) ಎಂದು ಹೇಳುತ್ತಾಳೆ. ಆದರೆ ವಿಚಾರವಂತಿಕೆ ಬೆಳಸಿಕೊಳ್ಳುತ್ತಿದ್ದ ಪಾತು ಈ ಮಾತುಗಳನ್ನು ಒಪ್ಪದೆ "ಸಮಾಜದ ಕಟ್ಟಳೆಗಳು ಮಾನವ ನಿರ್ಮಿತ; ಅವುಗಳಿಗೆ ದೇವರ ಹೆಸರನ್ನೇಕಿಡಬೇಕು?" (ರವಿಕುಮಾರ್, ನ. ಎಲ್.ಜಿ. ಮೀರಾ 2012: ಪುಟ 490) ಎಂದು ಕೇಳುತ್ತಾಳೆ. ಇದು ಸಮಾಜ ಹೆಣ್ಣನ್ನು ಅಧೀನದಲ್ಲಿಟ್ಟುಕೊಳ್ಳಲು ದೇವರು ಮುಂತಾದ ಕಾರಣಗಳನ್ನು ನಿರ್ಮಿಸಿರುವುದನ್ನು ತೋರಿಸುತ್ತದೆ ಮತ್ತು ಹೆಣ್ಣಿನ ಚಿಂತನೆಯಲ್ಲಿ ಆಗುತ್ತಿರುವ ಬದಲಾವಣೆಯನ್ನು ತೋರಿಸುತ್ತದೆ.

ಸಮಾಜದ ಕಟ್ಟುಕಟ್ಟಳೆಗಳನ್ನು ಬದಿಗಿಟ್ಟು ಎಲ್ಲ ಹೆಣ್ಣುಗಳಂತೆ ವಿಧವೆಯರಿಗೂ ಬಾಳುವ ಅವಕಾಶವನ್ನು ನೀಡಬೇಕು. ಬಲವಂತವಾಗಿ ಅವಳ ಆಸೆ ಆಕಾಂಕ್ಷೆಗಳಿಗೆ, ವ್ಯಕ್ತಿತ್ವಕ್ಕೆ ಬೇಲಿ ಹಾಕಬಾರದೆಂಬ ಚಿಂತನೆ ಸಾವಿತ್ರಮ್ಮನವರ ಕಥೆಯಲ್ಲಿ ವ್ಯಕ್ತವಾಗಿದೆ. ವಿಧವೆಯಾದ ತಕ್ಷಣ ಸ್ವಂತ ಕನಸು, ಅಭಿವ್ಯಕ್ತಿ, ಇಚ್ಛೆಗಳಿಗೆ ಪರದೆ ಹಾಕಿ ಮುಚ್ಚಿಡಬೇಕು. ಮದುವೆಯಾಗಿ ಒಂದು ದಿನ ಗಂಡನ ಜೊತೆ ಸಂಸಾರ ಮಾಡದೆ ಕನ್ಯೆಯಾಗಿ ಉಳಿದರೂ ಕೂಡ ಹೆಣ್ಣು ವಿಧವೆ. ದಾರದ ಮೂರು ಗಂಟಿನ ಕಾರಣಕ್ಕೆ ಕೊನೆಯ ತನಕ ನೋವಿನ ನಂಟನ್ನು ಹೊರಬೇಕು. ವಿಧವೆಯನ್ನು ವಿವಾಹವಾಗಲು ಬಂದರೂ ಕೂಡ ಧೈರ್ಯವಾಗಿ ಮುನ್ನುಗ್ಗಿ ಮದುವೆಯಾಗಲು ಹೆಣ್ಣಿಗೆ ಮೂಢನಂಬಿಕೆಗಳು ಮತ್ತು ಸಮಾಜದ ಬೇಲಿಗಳಿಂದ ಹೊರಬರಲಾಗುತ್ತಿಲ್ಲ. ಇಲ್ಲಿ ಹೇಳುವ "ಪಾತೂ, ಹೆಂಗಸಿನ ಜನ್ಮ ಕೆಟ್ಟದ್ದು, ಜನರ ಬಾಯಿಗೆ ಬಿದ್ದರೆ ನಿನಗೆ ಉಳಿಗಾಲವಿಲ್ಲ" (ರವಿಕುಮಾರ್, ನ. ಎಲ್.ಜಿ. ಮೀರಾ 2012: ಪುಟ 496) ಮಾತುಗಳಲ್ಲಿ ಎಲ್ಲ ಘಟನೆಗಳಿಗೂ ಹೆಣ್ಣನ್ನೆ ಕಾರಣ ಮಾಡಿ ಅವಳ ಬದುಕನ್ನು ಹಾಳುಮಾಡುವುದು ತಿಳಿಯುತ್ತದೆ. ಈ ಮಾತುಗಳು

ಬರುವ ಸಂದರ್ಭವನ್ನು ಗಮನಿಸೋಣ. ಗೋವಿಂದ ಮತ್ತು ಪಾತು ಜೊತೆಯಾಗಿ ಮಾತನಾಡುವುದು, ಓಡಾಡುವುದನ್ನು ನೋಡಿದ ನೆರೆಹೊರೆಯವರು ತಪ್ಪು ಅರ್ಥ ಕಲ್ಪಿಸುತ್ತಿದ್ದುದನ್ನು ಸೀತಮ್ಮನಿಂದ ತಿಳಿದ ಪಾತುವಿನ ಅಮ್ಮ ಪಾತುವಿಗೆ ಗೋವಿಂದನೊಡನೆ ಮಾತನಾಡಬಾರದು ಎಂದು ಹೇಳುತ್ತಾಳೆ. ಇದು ಸಮಾಜ ಹೆಣ್ಣನ್ನು ಯಾವಾಗಲೂ ಬಂಧನದಲ್ಲಿರಿಸಲು ನಡೆಸುವ ಪ್ರಯತ್ನಗಳನ್ನು ತೋರಿಸುತ್ತದೆ. ವಿಧವೆ ಪಾತುವನ್ನು ಮದುವೆಯಾಗಲು ಗೋವಿಂದ ಅವಳ ಅಭಿಪ್ರಾಯವನ್ನು ಕೇಳುತ್ತಾನೆ. ಈ ಸಂದರ್ಭದಲ್ಲಿ ಪಾತು ಯೋಚಿಸುವ ರೀತಿ "ತನಗೂ ಮದುವೆಯಾಗದ ಹುಡುಗಿಗೂ ವ್ಯತ್ಯಾಸವೇನು? ಒಬ್ಬ ಮನುಷ್ಯ ಎಂಟುದಿನ ಕಟ್ಟಿದ ತಾಳಿ ತಾನೇ? ಕಟ್ಟಲೇ ಇಲ್ಲವೆಂದುಕೊಳ್ಳಕೂಡದೆ?" (ರವಿಕುಮಾರ್, ನ. ಎಲ್.ಜಿ. ಮೀರಾ 2012: ಪುಟ 497) ಅವಳಲ್ಲಿ ಆಗುತ್ತಿರುವ ಮನೋಬದಲಾವಣೆಯನ್ನು ಸೂಚಿಸುತ್ತದೆ. ಸಾವಿತ್ರಮ್ಮನವರ ಈ ಬರವಣಿಗೆ ಹೆಣ್ಣಿನ ಯೋಚನಾಲಹರಿ ಬದಲಾಗಿ ಅವಳು ಬಾಳಲ್ಲಿ ಬೆಳಕನ್ನು ಹುಡುಕಬೇಕು ಎಂಬುದನ್ನು ಸೂಚಿಸುತ್ತದೆ. ಈ ನಿಟ್ಟಿನಲ್ಲಿ ಮಂಗಳಾ ಪ್ರಿಯದರ್ಶಿನಿಯವರು ಹೇಳುವ "ಪಾತುಕಥೆ ಸಾವಿತ್ರಮ್ಮನವರ ಪ್ರಗತಿಪರ ಸುಧಾರಣಾ ಮನೋಭಾವದ ಸಂಕೇತವಾಗುತ್ತದೆ" (ಶ್ರೀಮತಿ ಎಚ್. ಎಸ್. 2006: ಪುಟ 319) ಅಭಿಪ್ರಾಯವನ್ನು ಗಮನಿಸಬಹುದು.

ಹೆಣ್ಣಿನಲ್ಲಿ ಆಗುತ್ತಿರುವ ಈ ಬದಲಾವಣೆಯ ಜೊತೆಗೆ ಪುರುಷ ಪಾತ್ರಗಳಲ್ಲೂ ಬದಲಾವಣೆ ತಂದಿರುವುದು ಸಾವಿತ್ರಮ್ಮನವರ ಕಥೆಯ ಮತ್ತೊಂದು ವೈಶಿಷ್ಟ್ಯ. ಗೋವಿಂದ ಮತ್ತು ಸುಬ್ರಹ್ಮಣ್ಯನ ಪಾತ್ರಗಳ ಮೂಲಕ ಹೆಣ್ಣಿನ ಬಾಳನ್ನು ಸುಧಾರಿಸುವಲ್ಲಿ ಪುರುಷರ ಪಾತ್ರವೂ ಅವಶ್ಯಕವಾಗಿದೆ ಎಂಬುದನ್ನು ತೋರಿಸಿದ್ದಾರೆ. ಸಮಾಜದಲ್ಲಿರುವ ಎಲ್ಲ ಆಚರಣೆಗಳನ್ನು, ಎಲ್ಲರನ್ನು ತಿದ್ದುವುದು ಕಷ್ಟ. ಆದರೆ ವಿಧವೆಗೆ ಬಾಳು ಕೊಡುವ ಕೆಲಸವನ್ನು ನಾನು ಮಾಡುತ್ತೇನೆ ಎಂದು ಗೋವಿಂದ ಮದುವೆಯಾಗಲು ತಯಾರಾಗುವುದು ಪುರುಷರಲ್ಲಿ ಆಗುತ್ತಿರುವ ಬದಲಾವಣೆಯನ್ನು ಸೂಚಿಸುತ್ತದೆ. ಆದರೆ ದುರದೃಷ್ಟವಶಾತ್ ಗೋವಿಂದ ಮೃತನಾಗುತ್ತಾನೆ. ಪಾತುವಿನ ಬಗ್ಗೆ ತಿಳಿದಿದ್ದ ಚಂದುವಿನ ಹೆಂಡತಿಯ ಅಣ್ಣ ಸುಬ್ರಹ್ಮಣ್ಯ ಅವಳನ್ನು ಮದುವೆಯಾಗುತ್ತಾನೆ. ಇಲ್ಲಿ ಗೋವಿಂದ ಮತ್ತು ಸುಬ್ರಹ್ಮಣ್ಯನ ಪಾತ್ರಗಳು ಬದಲಾವಣೆಯನ್ನು ತೋರಿಸುತ್ತವೆ. ಪಾತು ಕಥೆಯಲ್ಲಿ ಸಾವಿತ್ರಮ್ಮನವರು ಸಮಾಜ ತನ್ನ ಕಟ್ಟುಕಟ್ಟಳೆಗಳನ್ನು ಹೆಣ್ಣಿನ ಮೇಲೆ ಬಲವಂತವಾಗಿ ಹೇರದೆ, ಆಕೆಗೂ ಜೀವನ ನಡೆಸಲು ಅವಕಾಶ ಮಾಡಿಕೊಡಬೇಕು. ಜೊತೆಗೆ ಸ್ತ್ರೀ–ಪುರುಷರಿಬ್ಬರ ಯೋಚನಾ–ವಿಚಾರಗಳಲ್ಲಿ ಬದಲಾವಣೆಯಾಗಿ ಸಮಾನ ವ್ಯಕ್ತಿತ್ವ

ರೂಪಿಸಿಕೊಳ್ಳಲು ಪ್ರಯತ್ನಗಳು ನಡೆಯಬೇಕು ಎಂಬ ಆಶಯವನ್ನು ತೋರಿಸಿದ್ದಾರೆ. ಸಾವಿತ್ರಮ್ಮನವರ ಮೇಲಿನ ಕಥೆಗಳ ಕಥಾವಸ್ತುವನ್ನು ಗಮನಿಸಿದಾಗ ಪುರುಷನ ಅಂದರೆ ಗಂಡನಿಲ್ಲದ ಒಂಟಿ ಹೆಣ್ಣು ಜೀವನ ಕಟ್ಟಿಕೊಳ್ಳುವ, ಪುರುಷ ಮತ್ತು ಸ್ತ್ರೀ ಇಬ್ಬರಲ್ಲೂ ಕಂಡುಬರುತ್ತಿರುವ ಚಿಂತನೆಗಳ ಬದಲಾವಣೆಗಳು ಕಂಡುಬರುತ್ತವೆ.

ಸಮಾಜದಲ್ಲಿ ಹೆಣ್ಣಿನ ಮೇಲಿನ ಶೋಷಣೆ ಪುರುಷರಿಂದಷ್ಟೇ ಅಲ್ಲದೆ ಅವಳ ತಂದೆ ತಾಯಂದಿರಿಂದಲೂ ನಡೆಯುತ್ತದೆ ಎನ್ನುವ ಕಥಾವಸ್ತುವನ್ನು ಶ್ಯಾಮಲಾ ಬೆಳಗಾಂವಕರರವರು ತಮ್ಮ 'ಕರುಳ' ಕತ್ತರಿ ಕಥೆಯಲ್ಲಿ ಮೂಡಿಬಂದಿದೆ. ತಂದೆ ತಾಯಿಯರ ಸ್ವಾರ್ಥಕ್ಕೆ, ದುರಾಸೆಗೆ ಬೇಸತ್ತು ಬೇರೆ ಊರಿನಲ್ಲಿ ತನ್ನ ಸ್ವಂತ ಜೀವನವನ್ನು ರೂಪಿಸಿಕೊಂಡಿದ್ದ ಹೆಣ್ಣೊಂದು, ತಂದೆಯ ದುರಾಸೆಯ ಪ್ರೀತಿಯ ಮಾತಿಗೆ ಮರುಳಾಗಿ ಅವಳ ಜೀವನವನ್ನೇ ಬಲಿಕೊಟ್ಟ ಚಿತ್ರಣವನ್ನು ಕೊಡುತ್ತದೆ. ಕಥಾನಾಯಕಿ ಚಂದ್ರವ್ವನ ತಂದೆತಾಯಿಯರು ಸೋಮಾರಿಗಳಾಗಿದ್ದು ಸುಲಭವಾಗಿ ಹಣ ಗಳಿಸಬೇಕೆಂಬ ಉದ್ದೇಶದಿಂದ ತಮ್ಮ ಮೂರು ಹೆಣ್ಣು ಮಕ್ಕಳನ್ನು ವೇಶ್ಯಾವಾಟಿಕೆಗೆ ನೂಕುತ್ತಾರೆ. ಇದನ್ನು ಸಹಿಸದ ಒಬ್ಬ ಮಗಳು ಸತ್ತುಹೋಗುತ್ತಾಳೆ, ಮತ್ತೊಬ್ಬಳು ಮನೆ ಬಿಟ್ಟು ಹೋಗುತ್ತಾಳೆ. ಚಂದ್ರವ್ವ ಚಿಕ್ಕವಳಾದ್ದರಿಂದ ಕಷ್ಟಗಳನ್ನು ಸಹಿಸಿಕೊಂಡಿರುತ್ತಾಳೆ. ಆದರೆ ತೊಂದರೆಗಳು ಮಿತಿಮೀರಿದಾಗ ಆ ಊರನ್ನು ಬಿಟ್ಟು ಬೇರೆ ಊರಿನಲ್ಲಿ ಜೀವಿಸಲು ಪ್ರಾರಂಭಿಸುತ್ತಾಳೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಕಷ್ಟ ತೊಂದರೆಗಳಿಗೆ ಹೆದರದೆ, ಬೇರೆ ಊರಿಗೆ ಹೋಗಿ ಜೀವನ ರೂಪಿಸಿಕೊಳ್ಳುವ ಹೆಣ್ಣಿನ ಛಲ ಮತ್ತು ಧೈರ್ಯ. ಈ ಸಂದರ್ಭದಲ್ಲಿ ಚಂದ್ರವ್ವನಿಗೆ ಸಹಾಯ ಮಾಡುವವರು ಅವಳನ್ನು ಇಷ್ಟಪಟ್ಟಿದ್ದ ಸಾಹುಕಾರ ವೆಂಕಣ್ಣನಾಯಕ. ಬೇರೆ ಊರಿನಲ್ಲಿ ಸುಖವಾಗಿದ್ದ ಚಂದ್ರವ್ವ ಒಡವೆ, ಹಣವನ್ನು ಕೂಡಿಟ್ಟಿದ್ದಳು. ಇದನ್ನು ಹೇಗಾದರೂ ಪಡೆಯಬೇಕೆಂದು ಅವಳ ತಂದೆ ಗದಿಗೆಪ್ಪ ಚಂದ್ರವ್ವನನ್ನು ಮನೆಗೆ ಕರೆತರುತ್ತಾನೆ. ಮೊದಲೇ ಸಂಚುಹೂಡಿದ್ದ ಅವರು ಚಂದ್ರವ್ವನಿಗೆ ಊಟದಲ್ಲಿ ಧತ್ತೂರಿ ಕಾಯಿಯನ್ನು ಬೆರೆಸಿ ಕೊಡುತ್ತಾರೆ. ಮಾರನೇ ದಿನ ಅವಳಿಗೆ ಮತಿಭ್ರಮಣೆಯಾಗುತ್ತದೆ. ಇದೇ ಸಂದರ್ಭವನ್ನು ಬಳಸಿಕೊಂಡು ವೆಂಕಣ್ಣನಾಯಕನನ್ನು ಅವಳ ಒಡವೆ, ಹಣದೊಂದಿಗೆ ಕರೆಸಿಕೊಂಡು ಅವನ ಮೇಲೆ ಊರವರ ಮುಂದೆ ವ್ಯಾಜ್ಯ ಹೂಡಿ ನಾಯಕನನ್ನು ಆರು ತಿಂಗಳು ಜೈಲಿಗೆ ಕಳುಹಿಸುತ್ತಾರೆ. ಚಂದ್ರವ್ವ ಹುಚ್ಚಿಯಾಗಿ ಊರಲ್ಲಿ ತಿರುಗುತ್ತಾಳೆ. ಈ ಕಥೆಯಲ್ಲಿ ಶ್ಯಾಮಲಾ ಬೆಳಗಾಂವಕರರವರು ಮನುಷ್ಯ ತನ್ನ ಸ್ವಾರ್ಥಕ್ಕೋಸ್ಕರ ತಮ್ಮ ಮಕ್ಕಳ ಬದುಕನ್ನು ಹಾಳು ಮಾಡಿ ಅವರ ಜೀವನವನ್ನೇ ಬಲಿ ತೆಗೆದುಕೊಳ್ಳುವ ಕ್ರೂರತನವನ್ನು ತೋರಿಸಿದ್ದಾರೆ. ಚಂದ್ರವ್ವ ಒಂದು

ಹೆಣ್ಣಾಗಿ ತಂದೆತಾಯಿಗಳು ಕೊಡುವ ತೊಂದರೆಯಿಂದ ದೂರವಿದ್ದು ಅವಳ ಜೀವನ ರೂಪಿಸಿಕೊಂಡರೂ ಅವಳನ್ನು ಬದುಕಲು ಬಿಡದೆ ಸಂಪತ್ತಿನ ಮೋಹಕ್ಕೆ ಒಳಗಾದ ತಂದೆತಾಯಿಯರು ಅವಳ ಬದುಕನ್ನು ಹಾಳು ಮಾಡುತ್ತಾರೆ. ಇದು ಸಮಾಜ ತನ್ನ ಸ್ವಂತ ಜೀವನವನ್ನು ರೂಪಿಸಿಕೊಂಡ ಹೆಣ್ಣಿನ ಜೀವನವನ್ನು ಹಾಳು ಮಾಡುವ ಕಥಾವಸ್ತುವನ್ನು ತೋರಿಸುತ್ತದೆ.

ಸಮಾಜದಲ್ಲಿ ಪ್ರಚಲಿತದಲ್ಲಿರುವ ಪದ್ಧತಿಗಳು, ಮೂಢನಂಬಿಕೆಗಳು ಹೆಣ್ಣಿನ ಬಾಳನ್ನು ಹಾಳುಮಾಡುವ, ಬಾಳಿನ ನೆಮ್ಮದಿ, ಸಂತೋಷವನ್ನು ಕಸಿದು ಜಿಗುಪ್ಸೆ ಮತ್ತು ನಿರಾಶಾ ಬದುಕನ್ನು ಸೃಷ್ಟಿಸುವ ಕಥಾವಸ್ತುವನ್ನು ಅನುಪಮಾ ನಿರಂಜನರವರು 'ಮೂಲಾ ನಕ್ಷತ್ರದ ಹುಡುಗಿ' ಕಥೆಯಲ್ಲಿ ಚಿತ್ರಿಸಿದ್ದಾರೆ. ಕಥಾನಾಯಕಿ ಪದ್ದಿ ಮೂಲಾ ನಕ್ಷತ್ರದಲ್ಲಿ ಹುಟ್ಟಿರುವುದರಿಂದ ಅವಳ ಮದುವೆ ಕೂಡಿ ಬರುವುದಿಲ್ಲ. ನೋಡಲು ಬಂದವರೆಲ್ಲಾ ಜಾತಕ ಸರಿ ಇಲ್ಲ, ಮೂಲಾ ನಕ್ಷತ್ರದ ಹುಡುಗಿ ಎಂದು ಮದುವೆಗೆ ಒಪ್ಪದೆ ಹೋಗುತ್ತಾರೆ. ಮೂರು ವರ್ಷಗಳು ಇದೇ ರೀತಿ ಆದಾಗ ಪದ್ದಿಯ ತಂದೆ ತಾಯಿಗೆ ಚಿಂತೆ ಉಂಟಾಗುತ್ತದೆ. ನೆರೆಹೊರೆಯ ಹೆಂಗಸರೆಲ್ಲಾ ಇದೇ ಕಾರಣದಿಂದ ಪದ್ದಿಯ ಮನೆಯವರನ್ನು ಜರಿದು ಮಾತನಾಡುವುದು, ಅವಹೇಳನ ಮಾಡುವುದು, ನಿಂದಿಸುವುದನ್ನು ಮಾಡುತ್ತಾರೆ. ನೆರೆಹೊರೆಯವರು ಹೇಳುವ 'ಏನ್ರೀ ನಿಮ್ಮ ಮಗಳಿಗೆ ಮದುವೆ ಮಾಡೋಲ್ಲ ಅಂದುಕೊಂಡಿದ್ದೀರೋ", "ನೆರೆದು ಮೂರು ವರುಷಕ್ಕೆ ಬಂತು, ಇನ್ನೂ ತೌರಿನಲ್ಲಿ ಕೂರಿಸಿಕೊಂಡಿರೋದು ಅಂದರೆ! ತುಂಬಾ ಚೆನ್ನಾಗಿದೆ", "ಪದ್ದೀದು, ಮೂಲಾ ನಕ್ಷತ್ರ ಅಂತೇರೀ.. ಮೂಲಾ ನಕ್ಷತ್ರ" (ಅನುಪಮಾ ನಿರಂಜನ 1998: ಪುಟ 32) ಈ ಮಾತುಗಳು ಇತರರ ಮನಸ್ಸನ್ನು ಘಾಸಿಗೊಳಿಸಲು ಸಮಾಜ ಮೂಢನಂಬಿಕೆಗಳನ್ನು ಬಳಸುತ್ತಿದ್ದ ರೀತಿಯನ್ನು ತೋರಿಸುತ್ತದೆ. ಇಲ್ಲಿ ಪುರುಷರ ಪಾತ್ರವನ್ನೂ ಗಮನಿಸಬೇಕು. ಮೂಲಾನಕ್ಷತ್ರದಲ್ಲಿ ಹುಟ್ಟಿದ ಹುಡುಗಿಯನ್ನು ಮದುವೆಯಾಗಲು ಯಾವ ಗಂಡು ಒಪ್ಪದಿರುವುದು, ಮೂಢನಂಬಿಕೆಗಳಾಧಾರಿತ ತೀರ್ಮಾನಗಳು ಹೆಣ್ಣಿನ ಬಾಳನ್ನು ನೋವಿಗೆ ದೂಡುತ್ತಿದ್ದುದನ್ನು ತೋರಿಸುತ್ತದೆ. ಪದ್ದಿಯ ಮದುವೆ ನೆರವೇರದಿದ್ದುದು ಮತ್ತು ಜನರ ನಿಂದನೆ, ಅಪಹಾಸ್ಯಗಳಿಂದ ರೋಸಿಹೋದ ಪದ್ದಿಯ ತಾಯಿಗೆ ಮಗಳ ಮೇಲೆ ಕೋಪ, ಜಿಗುಪ್ಸೆ ಮತ್ತು ದ್ವೇಷ ಬೆಳೆಯಲಾರಂಭಿಸುತ್ತದೆ. ಪದ್ದಿಯು ಮೂಲಾನಕ್ಷತ್ರದಲ್ಲಿ ಹುಟ್ಟಿದ್ದು ಮತ್ತು ಅವಳು ಸುಂದರಳಾಗಿಲ್ಲದಿರುವುದು ಮಗಳ ತಪ್ಪು ಎಂದು ವಿನಾಕಾರಣ ಪದ್ದಿಯನ್ನು ಬಯ್ಯುವುದು, ಮೂದಲಿಸುವುದು, ಕಡೆಗಾಣಿಸುವುದನ್ನು ಮಾಡುತ್ತಾಳೆ. ತಾಯಿಯ ಸ್ವಭಾವದಲ್ಲಿನ ಈ

ಪರಿವರ್ತನೆ ಜನರ ಚುಚ್ಚು ನುಡಿಗಳ ಕಠೋರತೆಯ ಜೊತೆಗೆ ವೈಚಾರಿಕೆಯಿಲ್ಲದೆ ಪಾಲಿಸುವ ಪದ್ಧತಿಗಳ ಕೆಟ್ಟ ಪ್ರಭಾವವನ್ನು ತೋರಿಸುತ್ತದೆ. ಇದು ಅನುಪಮಾ ನಿರಂಜನರವರು ಹೆಣ್ಣಿನ ಬಾಳಿನ ಮೇಲೆ ಮೂಢನಂಬಿಕೆಗಳ ಪರಿಣಾಮವನ್ನು ಗ್ರಹಿಸಿ ಕಥಾವಸ್ತುವಾಗಿ ಬಳಸಿರುವುದನ್ನು ಬಿಂಬಿಸುತ್ತದೆ.

ಜೊತೆಗೆ ಅಂದಿನ ಸಮಾಜದಲ್ಲಿ ಗಂಡುಮಕ್ಕಳಿಗೆ ಕೊಡುತ್ತಿದ್ದ ಪ್ರಾಧಾನ್ಯತೆಯನ್ನು ಲೇಖಕರು ಗುರುತಿಸಿದ್ದಾರೆ. ಪದ್ದಿಯ ತಾಯಿ ಮಗನ ಮೇಲೆ ತೋರಿಸುತ್ತಿದ್ದ ಪ್ರೀತಿ, ಕಾಳಜಿ, ಅವನ ಭವಿಷ್ಯ ಕುರಿತು ಚಿಂತಿಸುತ್ತಿದ್ದುದು ಹಾಗೂ ಪದ್ದಿಯನ್ನು ಯಾವ ಮನೆಗಾದರೂ ಕೇವಲ ಮದುವೆ ಮಾಡಿ ಕಳುಹಿಸಿದರೆ ಸಾಕು ಎಂದು ಯೋಚಿಸುತ್ತಿದ್ದುದು, ಗಂಡು ಮತ್ತು ಹೆಣ್ಣುಮಕ್ಕಳ ಮಧ್ಯೆ ತೋರುತ್ತಿದ್ದ ತಾರತಮ್ಯತೆಯನ್ನು ತೋರುತ್ತದೆ. ಈ ತಾರತಮ್ಯತೆಯನ್ನು ಕಂಡು ಪದ್ದಿ ತನ್ನಲ್ಲೇ ಕೇಳಿಕೊಳ್ಳುವ "ಕಿಟ್ಟಿ ಬೇಕು, ನಾನು ಬೇಡ, ಯಾಕೆ ಹೀಗೆ? ನಾನು ಮಾಡಿದ ತಪ್ಪು ತಾನೆ ಏನು?" (ಅನುಪಮಾ ನಿರಂಜನ 1998: ಪುಟ 36) ಎಂಬ ಪ್ರಶ್ನೆ ಅನುಪಮಾ ನಿರಂಜನರವರು ಗಂಡು-ಹೆಣ್ಣಿನ ಮಧ್ಯೆ ಇರುವ ಅಸಮಾನತೆಯನ್ನು ಗುರುತಿಸಿರುವುದನ್ನು ವ್ಯಕ್ತಪಡಿಸುತ್ತದೆ.

ಕೊನೆಗೆ ಪದ್ದಿಗೆ ಮದುವೆ ಕೂಡಿಬರುತ್ತದೆ. ಐವತ್ತು ವರ್ಷಗಳು ದಾಟಿದ, ಮೊದಲನೆಯ ಹೆಂಡತಿ ತೀರಿಹೋದ ಶ್ರೀಮಂತ ವ್ಯಕ್ತಿಯೊಬ್ಬ ಅವಳನ್ನು ಮದುವೆಯಾಗಲು ಒಪ್ಪುತ್ತಾನೆ. ಈ ಸಂದರ್ಭದಲ್ಲಿ ಪದ್ದಿಯ ತಾಯಿ ಯಾರಾದರೂ ಸಾಕು ಪದ್ದಿಯ ಮದುವೆಯಾಗಲಿ ಎಂದು ಯೋಚಿಸುವುದರ ಜೊತೆಗೆ, ಆ ವ್ಯಕ್ತಿಯ ಸಹಾಯದಿಂದ ತನ್ನ ಮಗನಿಗೆ ಹೆಚ್ಚಿನ ವಿದ್ಯಾಭ್ಯಾಸ ಕೊಡಿಸಿ ಅವನ ಬಾಳನ್ನು ಚೆನ್ನಾಗಿ ಮಾಡಬಹುದು ಎಂದು ಯೋಚಿಸುವುದು ಗಂಡು-ಹೆಣ್ಣಿನ ಮಧ್ಯೆ ತಳೆಯುವ ವಿಭಿನ್ನ ನಿಲುವನ್ನು ವ್ಯಕ್ತಪಡಿಸುತ್ತದೆ. ಇಲ್ಲಿ ಬರುವ "ಕಿಟ್ಟಿ ಮುಂದೆ ಓದಿ ಅವನಿಗೆ ದೊಡ್ಡ ಕೆಲಸ ಸಿಕ್ಕಲಿ – ಎಂಬಾಸೆಗೆ ತಾಯಿ ಮಗಳ ಬಲಿ ಕೊಡ ಹೊರಟಿದ್ದಾಳೆ. ಮಗನ ಸುಖಕ್ಕಾಗಿ ಮಗಳ ಮಾರಾಟ!" (ಅನುಪಮಾ ನಿರಂಜನ 1998: ಪುಟ 38) ಹೇಳಿಕೆಯಲ್ಲಿ ಗಂಡಿನ ಸುಖಕ್ಕಾಗಿ ಹೆಣ್ಣಿನ ಬಾಳನ್ನು ಬಲಿಕೊಡುವ ಮನುಷ್ಯರ ಸ್ವಾರ್ಥ ಕಾಣುತ್ತದೆ. ಮದುವೆ ನೆರವೇರದೆ ಇದ್ದ ಸಂದರ್ಭದಲ್ಲಿ ಜನರ ನಿಂದನೆಯ ಮಾತುಗಳಿಂದ, ತಾಯಿಯ ಬೈಗುಳ, ಬಿರುನುಡಿಗಳಿಂದ ಅನುಭವಿಸಿದ ನೋವು, ಮಾನಸಿಕ ಹಿಂಸೆಗಳು ಮತ್ತು ತಾಯಿಯ ಸ್ವಾರ್ಥದಿಂದ ಬೇಸತ್ತ ಪದ್ದಿ ವಯಸ್ಸಾದ ಗಂಡಾದರೂ ಪರವಾಗಿಲ್ಲ ತನ್ನ ಮದುವೆಯಾಗಬೇಕೆಂದು ನಿಶ್ಚಯಿಸುತ್ತಾಳೆ. ಈ ಮದುವೆಯಿಂದ ತನ್ನ ಆಸೆ-ಆಕಾಂಕ್ಷೆಗಳೆಲ್ಲ

ಮಣ್ಣಾದರೂ ತಾನು ಶ್ರೀಮಂತೆಯಾಗಬಹುದು ಅದರ ಬಲದಿಂದ ಎಲ್ಲರನ್ನೂ ತುಳಿಯಬಹುದು ಮತ್ತು ಎಲ್ಲರೂ ತನ್ನ ಬಳಿ ಸಹಾಯಕ್ಕಾಗಿ ಕೈಚಾಚಿ ನಿಲ್ಲುತ್ತಾರೆ, ಆಗ ಇವರೆಲ್ಲರನ್ನು ಮೆಟ್ಟಿ ನಿಲ್ಲಬಹುದು ಎಂದು ಯೋಚಿಸುತ್ತಾಳೆ. ಈ ಬದಲಾವಣೆ ಜನರ ವರ್ತನೆಯಿಂದ ಹೆಣ್ಣಿನ ಮನಸ್ಸು ಹೇಗೆ ಘಾಸಿಕೊಳ್ಳುತ್ತದೆ ಮತ್ತು ಭಾವನೆ ಹಾಗೂ ವರ್ತನೆಗಳು ಹೇಗೆ ಕಠಿಣವಾಗುತ್ತವೆ ಎಂಬುದನ್ನು ತೋರಿಸುತ್ತದೆ.

ಪದ್ದಿಯ ಮದುವೆ ಶ್ರೀಮಂತನೊಂದಿಗೆ ಆದ ಮೇಲೆ ಅವಳನ್ನು ಮೂಲಾ ನಕ್ಷತ್ರದವಳೆಂದು ನಿಂದಿಸಿದ್ದವರೆಲ್ಲಾ ಹೊಗಳಲು ಪ್ರಾರಂಭಿಸಿದರು. ಇದು ಜನಗಳು ಐಶ್ವರ್ಯ, ಅಂತಸ್ತಿಗೆ ಬೆಲೆ ಕೊಡುವ ಮತ್ತು ಮಾನವ ಸಂಬಂಧ, ಭಾವನೆಗಳಿಗೆ ಯಾವ ಪರಿಗಣನೆಯನ್ನು ಕೊಡದ ವರ್ತನೆಯನ್ನು ತೋರಿಸುತ್ತದೆ. ತಾಯಿಯ ಬದಲಾದ ವರ್ತನೆ ಮತ್ತು ಅವಳ ಸ್ವಾರ್ಥದ ಆಲೋಚನಾ – ಕಾರ್ಯಗಳಿಂದ ಬೇಸತ್ತಿದ್ದ ಪದ್ದಿ ಮದುವೆಯ ನಂತರ ಗಂಡನ ಮನೆಗೆ ಹೋದವಳು ತವರಿಗೆ ಒಂದು ಬಾರಿಯೂ ಬರುವುದಿಲ್ಲ. ತವರಿನಿಂದ ಎಷ್ಟೇ ಕರೆಗಳೂ ಬಂದರೂ, ತಾಯಿ ಅನಾರೋಗ್ಯದಿಂದ ಬಳಲುತ್ತಿದ್ದರೂ ನೋಡಲು ಹೋಗುವುದಿಲ್ಲ. ಅಂದರೆ ಪದ್ದಿಯ ಮನಸ್ಸು ಅಷ್ಟು ಕಠಿಣವಾಗಿರುತ್ತದೆ. ಈ ಕಠಿಣತೆಗೆ ಅಥವಾ ಬದಲಾವಣೆಗೆ ಜನರ ವರ್ತನೆಯೇ ಕಾರಣ. ತನ್ನ ತಾಯಿ ಆ ರೀತಿ ವರ್ತಿಸಲೂ ಕೂಡ ಜನರ ಚುಚ್ಚುನುಡಿಗಳೇ ಕಾರಣ ಎಂದು ಪದ್ದಿ ತಿಳಿಯುತ್ತಾಳೆ. ಇದು ಹೆಣ್ಣು ತನ್ನ ಮೇಲೆ ಆಗುತ್ತಿರುವ ಅನ್ಯಾಯ ಮತ್ತು ಅದರ ಕಾರಣಗಳನ್ನು ಗುರುತಿಸುತ್ತಿರುವುದನ್ನು ವ್ಯಕ್ತಪಡಿಸುತ್ತದೆ.

ಈ ಕಥೆ ಹೆಣ್ಣನ್ನು ಮೂಢನಂಬಿಕೆಗಳ ಪರಿಧಿಗೆ ಒಳಪಡಿಸಿ ಶೋಷಿಸುತ್ತಿದ್ದುದನ್ನು ಚಿತ್ರಿಸಿದೆ. ತನ್ನದಲ್ಲದ ತಪ್ಪಿಗೆ ಸ್ತ್ರೀ ತನ್ನ ಜೀವನವನ್ನೇ ಬಲಿಕೊಡಬೇಕಾದ ಪರಿಸ್ಥಿತಿ ಸಂದರ್ಭ ಮತ್ತು ಸ್ವಾರ್ಥಗಳ ಹಿನ್ನೆಲೆಯಲ್ಲಿ ಹೇಗೆ ಉದ್ಭವವಾಗುತ್ತಿತ್ತು ಎಂಬುದನ್ನು ತೋರಿಸುತ್ತದೆ. ತಪ್ಪುಗಳನ್ನೆಲ್ಲಾ ಹೆಣ್ಣಿನ ಮೇಲೆ ಹೇರುವ ಈ ಸಮಾಜದ ರೀತಿಯಲ್ಲೇ ದೋಷವಿದೆ. ಈ ದೋಷವನ್ನು ಸರಿಪಡಿಸದಿದ್ದರೆ ಹೆಣ್ಣಿನ ಬದುಕಿಲ್ಲ ಎಂಬ ಸತ್ಯವನ್ನು ಅನುಪಮಾ ನಿರಂಜನ ವ್ಯಕ್ತಪಡಿಸುತ್ತಾರೆ. ಗಂಡುಮಗುವಿಗೆ ಬಾಳು ರೂಪಿಸಲು ಹೆಣ್ಣನ್ನು ಮದುವೆ ಮಾಡಿಕೊಡುವುದು ಸಮಾಜದ ದೃಷ್ಟಿಯಲ್ಲಿ ಮದುವೆಯಾಗುತ್ತದೆಯೇ ವಿನಃ ನಿಜವಾದ ಅರ್ಥದಲ್ಲಿ ಹೆಣ್ಣು ಮಾರಾಟವಾಗುತ್ತಿದ್ದಾಳೆ ಎಂಬುದನ್ನು ನಿರೂಪಿಸುತ್ತಾರೆ.

ಪುರುಷ ಪ್ರಧಾನ ಸಮಾಜದಲ್ಲಿ ಗಂಡು, ಹೆಣ್ಣು ಇಬ್ಬರೂ ಪುರುಷರಿಗೇ ಪುರುಷ ಸಂತಾನಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಟ್ಟು, ಹೆಣ್ಣನ್ನು ಕಡೆಗಣಿಸುವ, ಹುಟ್ಟುವ ಮಗು ಗಂಡಾಗಿರಬೇಕೆಂದು ಅಪೇಕ್ಷಿಸುವ ಮತ್ತು ಹಾಗಾಗದೆ ಇದ್ದಾಗ ಗಂಡಿಗೆ ಮರುಮದುವೆ ಮಾಡಿ ಗಂಡು ಸಂತಾನ ಪಡೆಯಲು ಪ್ರಯತ್ನಿಸುವ ಹಾಗೂ ಈ ಪ್ರಯತ್ನದಲ್ಲಿ ಹೆಣ್ಣಿನ ಭಾವನೆಗಳಿಗೆ ಯಾವುದೇ ಬೆಲೆಕೊಡದೆ ಇರುವ ಕಥಾವಸ್ತುವನ್ನು ಬಿ.ಟಿ. ಲಲಿತಾ ನಾಯಕ್‌ರವರು 'ಮರು ಮದುವೆ' ಕಥೆ ಬಿಂಬಿಸುತ್ತದೆ. ಮದುವೆಯಾದ ಮೂರು ವರುಷಗಳ ನಂತರ ಗೌರಿ ಗರ್ಭವತಿಯಾದಾಗ ಮನೆಯಲ್ಲಿ ಎಲ್ಲರೂ ಗಂಡು ಮಗು ಹುಟ್ಟುತ್ತದೆ ಎಂದು ಸಂತೋಷಿಸುತ್ತಾರೆ. ಆದರೆ ನಿರೀಕ್ಷೆ ಹುಸಿಯಾಗಿ ಗೌರಿಗೆ ಹೆಣ್ಣು ಮಗು ಹುಟ್ಟುತ್ತದೆ. ಮನೆಯವರಿಗೆ ಗಂಡು ಮಗು ಹುಟ್ಟಲಿಲ್ಲ ಎಂದು ಬೇಜಾರಾದರೂ ಮುಂದಿನ ಬಾರಿ ಗಂಡು ಮಗು ಹುಟ್ಟುತ್ತದೆ ಎಂಬ ಆಶಾಭಾವನೆಯಿಂದ ಸುಮ್ಮನಾಗುತ್ತಾರೆ. ಆದರೆ 9 ವರ್ಷಗಳಾದರೂ ಗೌರಿಗೆ ಮಕ್ಕಳಾಗದಿದ್ದಾಗ, ಅವಳ ಅತ್ತೆ-ಮಾವನಿಗೆ ತಮ್ಮ ವಂಶ ನಿಂತುಹೋಗುತ್ತದೆ ಎಂಬ ಚಿಂತೆ ಉಂಟಾಗುತ್ತದೆ. ಅವರಿಗೆ ಮುಖ್ಯವಾಗಿ ಒಂದು ಗಂಡುಮಗು ವಂಶೋದ್ಧಾರಕನಾಗಿ ಬೇಕಾಗಿರುತ್ತದೆ. ಗೌರಿಯಿಂದ ಅದು ಕೈಗೂಡುವುದಿಲ್ಲ ಎಂದು ತಿಳಿದು ಅವರು ಗೌರಿಯ ಗಂಡ ರಾಮಣ್ಣನಿಗೆ ಮರುಮದುವೆ ಮಾಡಲು ನಿಶ್ಚಯಿಸುತ್ತಾರೆ. ಇವರ ಈ ನಿರ್ಧಾರ ಸಮಾಜ ಗಂಡುಮಗುವಿಗೆ ಕೊಡುವ ಪ್ರಾಮುಖ್ಯತೆ ಮತ್ತು ಹೆಣ್ಣುಮಗುವಿನ ಇರುವನ್ನು ಪರಿಗಣಿಸದಿರುವ ನಿಲುವನ್ನು ಪ್ರಕಟಿಸುತ್ತದೆ.

ಈ ನಿರ್ಧಾರದಿಂದ ಗೌರಿಗೆ ಆಗುತ್ತಿರುವ ಅನ್ಯಾಯ, ಅವಳ ನೋವು, ಯಾರ ಗಣನೆಗೂ ಮುಖ್ಯವಾಗಿ ಅವಳ ಗಂಡನ ಗಣನೆಗೂ ಬರುವುದಿಲ್ಲ ಅಥವಾ ಬಂದರೂ ಅದನ್ನು ಪರಿಗಣಿಸುವುದಿಲ್ಲ. ಗಂಡು ಮಗು ಆಗದೆ ಇರುವುದಕ್ಕೆ ಹೆಣ್ಣೇ ಕಾರಣ ಅದಕ್ಕೆ ಪರಿಹಾರವಾಗಿ ಮತ್ತೊಂದು ಹೆಣ್ಣನ್ನು ತರಬೇಕೆಂಬ ಅವರ ನಿರ್ಧಾರ ಈ ಅಂಶವನ್ನು ಪುಷ್ಟೀಕರಿಸುತ್ತದೆ. ತನ್ನ ಗಂಡನಿಗೆ ಎರಡನೇ ಮದುವೆ ಮಾಡುವುದು ಇಷ್ಟವಿಲ್ಲದಿದ್ದರೂ ಗೌರಿ ಅದನ್ನು ಪ್ರಶ್ನಿಸುವುದಿಲ್ಲ, ಪ್ರತಿಭಟಿಸುವುದಿಲ್ಲ. ಇಲ್ಲಿ ಕಥಾ ಲೇಖಕಿ ಹೆಣ್ಣಿನ ಮನಸ್ಥಿತಿಯನ್ನು ಅರಿಯದ, ಸಮಾಜ ಸಿದ್ಧಪಡಿಸಿದ ಪುರುಷ ಕೇಂದ್ರಿತ ವ್ಯವಸ್ಥೆಯ ಒತ್ತಡಗಳು ಹೆಣ್ಣಿನ ಮೇಲೆ ಉಂಟುಮಾಡುವ ಅನ್ಯಾಯದ ನೋವುಗಳನ್ನು ಚಿತ್ರಿಸಿದ್ದಾರೆ. ರಾಮಣ್ಣನ ಮರುಮದುವೆ ತಯಾರಿ ನಡೆಯುತ್ತಿದ್ದಾಗ ಕಣ್ಣೀರು ಹಾಕುತ್ತಿರುವ ಗೌರಿಯನ್ನು ಕುರಿತು ಅವಳ ಅತ್ತೆ ಹೇಳುವ ಈ ಮಾತುಗಳು "ಗಂಡ ಶುಭಕಾರ್ಯಕ್ಕೆ ಕೈ ಹಚ್ಚಿದಾಗ ಹೆಂಡ್ತಿಯಾದವಳು ಹಿಂಗ್ ಕಣ್ಣೀರ್ ಹಾಕೋದಾ?! ಸಿವ

ನಿನಗೊಬ್ಬ ಮಗನ್ನ ಕೊಟ್ಟಿದ್ರೆ ಅವನ್ಯಾಕೆ ಮತ್ತೊಂದು ಹೆಣ್ಣಿಗೆ ತಾಳಿ ಕಟ್ತಿದ್ದ? ದೊಡ್ಡ ಮನಸ್ಸು ಮಾಡು. ನೀನ್ ಬ್ಯಾರೆ ಅಲ್ಲ, ನಿನಗೆ ತಂಗಿಯಾಗಿ ಬರೋಳು ಬ್ಯಾರೆ ಅಲ್ಲ...ಯಾರ್ ಹೊಟ್ಟೆಯಾಗ್ ಮಗ ಹುಟ್ಟಿದ್ರೂ ಅವನೇನ್ ಅವ್ವನ ಹೆಸರು ಹೇಳ್ಕೊಂಡ್ ತಿರುಗಾಡೋದಿಲ್ಲ, ಹೌದಲ್ಲೋ? ಏಟೋತ್ತಾಗ್ಲಿ ಅಪ್ಪ-ಅಜ್ಜನ ಹೆಸರ ಮ್ಯಾಲೆ ದೀಪ ಹಚ್ಚಬೇಕು.. ಇದೆಲ್ಲಾ ನಿನಗೆ ತಿಳಿದ ವಿಚಾರವೇ ಐತಿ. ನಾವು ಹೆಚ್ಚು ಹೇಳಕಿಲ್ಲ.. ನೀನೇ ಮುಂದ್ ನಿಂತು ನಿನ್ನ ಗಂಡನಿಗೆ ಲಗ್ನ ಮಾಡ್ಸಿ ಮಂತಾನ ಮುಂದುವರೆಲಿ ಅಂತ ದೇವರಿಗ್ ಬೇಡ್ಕೋಬೇಕು" (ಲಲಿತಾ ನಾಯಕ್ ಬಿ.ಟಿ. 1998: ಪುಟ 60) ಸಮಾಜದಲ್ಲಿ ಗಂಡಿನ ಹಿರಿಮೆಯನ್ನು ತೋರಿಸುವ ಮತ್ತು ಹೆಣ್ಣಿನ ಪಾತ್ರ, ಮಹತ್ವವನ್ನು ಕಡೆಗಣಿಸುವ ಚಿತ್ರಣವನ್ನು ಕೊಡುತ್ತವೆ.

ತನ್ನ ಗಂಡನ ಮರುಮದುವೆಗೆ ಅವನೊಂದಿಗೆ ಹೋಗುವಾಗ ನೋವಿನಿಂದ ಮೂಕಳಾಗಿದ್ದ ಗೌರಿ ಹುಲ್ಲುಗಾವಲಿನಲ್ಲಿ ಮೇಯುತ್ತಿದ್ದ ದನಕರುಗಳನ್ನು ನೋಡಿ ತಾನೂ ಕೂಡ ಒಂದು ಹಸುವಾಗಿದ್ದರೆ ಯಾವ ಚಿಂತೆ ಇಲ್ಲದೆ ಹಾಯಾಗಿರಬಹುದಿತ್ತು ಎಂದುಕೊಳ್ಳುತ್ತಾಳೆ. ಆದರೆ ಮರುಕ್ಷಣವೇ ಗಂಡುಮಗುವಾಗದ ತನ್ನನ್ನು 'ಗೊಡ್ಡುದನ' ಎಂದು ಗೋಳಾಡಿಸುತ್ತಿದ್ದರೇನೋ ಈ ಜನ ಎಂದು ಯೋಚಿಸಿ 'ಯಾವ ಜನ್ಮದಾಗ್ ಹುಟ್ಟಿದ್ರು ಹೆಣ್ಣು ಜಾತಿಗೆ ಸುಖವಿಲ್ಲ' (ಲಲಿತಾ ನಾಯಕ್ ಬಿ.ಟಿ. 1998: ಪುಟ 61) ಎಂದು ಭಾವಿಸುವಾಗ ಲಲಿತಾನಾಯಕ್‌ರವರು ಹೆಣ್ಣು ಈ ಪ್ರಪಂಚದಲ್ಲಿ ಯಾವ ಪ್ರಾಣಿ ವರ್ಗಕ್ಕೆ ಸೇರಿದ್ದರೂ ಸುಖವಿಲ್ಲ ಎಂಬುದನ್ನು ಮಾರ್ಮಿಕವಾಗಿ ಸೂಚಿಸುವುದು ಕಂಡುಬರುತ್ತದೆ. ಗಂಡುಮಗುವಿನ ಆಸೆಯಿಂದ ಮರು - ಮದುವೆಯಾಗಲು ಹೋಗಿದ್ದ ರಾಮಣ್ಣನಿಗೆ ನಿರಾಸೆ ಕಾದಿರುತ್ತದೆ. ರಾಮಣ್ಣ ಮದುವೆಯಾಗಬೇಕಿದ್ದ ಹುಡುಗಿ ಬೇರೆ ಯುವಕನ ಜೊತೆ ಮನೆಬಿಟ್ಟು ಹೋಗಿರುತ್ತಾಳೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಬಹುಶಃ ತನಗೆ ಮದುವೆಯಾಗುತ್ತಿರುವುದು ಎರಡನೇ ಹೆಂಡತಿಯಾಗಿ ಎಂಬ ವಿಷಯ ತಿಳಿದ ಹುಡುಗಿ ತಾನು ಮೆಚ್ಚಿದ ಹುಡುಗನೊಂದಿಗೆ ಹೋಗುವ ಪ್ರಸಂಗ. ಲಲಿತಾನಾಯಕ್‌ರವರು ಈ ಕಥೆಯ ಮೂಲಕ ಪುರುಷ ಸಂತಾನಾಪೇಕ್ಷೆಯಿಂದ ಸಮಾಜವು ಹೆಣ್ಣಿನ ಮೇಲೆ ನಡೆಸುವ ಅನ್ಯಾಯವನ್ನು ತೋರಿಸುತ್ತಾ ಮತ್ತೊಂದು ಹೆಣ್ಣು ತನಗಾಗುತ್ತಿದ್ದ ಅನ್ಯಾಯವನ್ನು ತಪ್ಪಿಸಿಕೊಂಡ ಕಥಾವಸ್ತುವನ್ನು ಚಿತ್ರಿಸಿರುವುದು ಕಾಣುತ್ತದೆ.

ಜಾತಿಗಳ ನಡುವಿನ ಅಸಮಾನತೆ ಮತ್ತು ಆಚರಣೆಗಳು ಕೆಳ ಜಾತಿಯ ಸ್ತ್ರೀ-ಪುರುಷರನ್ನು ಶೋಷಿಸುವ, ಅನ್ಯಾಯವನ್ನುಂಟುಮಾಡುವ, ಅವರ ಮೇಲೆ ದೌರ್ಜನ್ಯವೆಸಗುವ ರೀತಿ ಮತ್ತು ಆ ದೌರ್ಜನ್ಯದ ಪರಿಣಾಮ ಸ್ತ್ರೀಯ ಮೇಲೆ ಹೆಚ್ಚಾಗಿರುವ

ಕಥಾವಸ್ತುವನ್ನು ಗೀತಾ ನಾಗಭೂಷಣರವರು 'ಹಿಂಸೆ' ಕಥೆಯಲ್ಲಿ ಚಿತ್ರಿಸಿದ್ದಾರೆ. ಮಾನವೀಯತೆಗನುಸಾರವಾಗಿ ಸಹಾಯ ಮಾಡಿದರೂ ಅದಕ್ಕೆ ಜಾತಿಯ ಬಣ್ಣ ಬಳಿದು, ಮೇಲ್ಜಾತಿಯವನ ಕುಲಕೆಡಿಸಿದರೆಂದು ಕೆಳ ಜಾತಿಯ ದಂಪತಿಗಳ ಮೇಲೆ ಕ್ರೌರ್ಯವೆಸಗಿ, ದೈಹಿಕವಾಗಿ, ಮಾನಸಿಕವಾಗಿ ಹಿಂಸೆ ಮಾಡಿ ಅವರನ್ನು ಊರಿನಿಂದಲೇ ಹೊರಕ್ಕೆ ಕಳುಹಿಸುವ ಸಮಾಜದ ಕ್ರೌರ್ಯ ಮುಖ ಕಂಡುಬರುತ್ತದೆ. ಈ ಕಥೆಯಲ್ಲಿ ಲಕ್ಕಿ ಒಂದು ಮಧ್ಯಾಹ್ನ ನೀರು ತರಲು ಹೋದಾಗ ಬಾವಿಯ ಬಳಿಯ ಹೊಲದಲ್ಲಿ ಊರಿನ ಹಿರೇಗೌಡ ಮುದುಕ ಒದ್ದಾಡುತ್ತಿರುತ್ತಾನೆ. ಅಲ್ಲಿಗೆ ಹೋದ ಲಕ್ಕಿಗೆ ನೀರು ಕುಡಿಸುವಂತೆ ಸೂಚಿಸುತ್ತಾನೆ. ಅವಳು ಅಕ್ಕಪಕ್ಕ ಯಾರೂ ಇಲ್ಲದ್ದರಿಂದ ತಾನೇ ನೀರು ಕುಡಿಸುತ್ತಾಳೆ. ಇದು ಮನುಷ್ಯ ಸಹಜ ಕ್ರಿಯೆ. ಆ ವೇಳೆಗೆ ಅಲ್ಲಿಗೆ ಬಂದ ಕೆಲವರು ನಡೆದ ಸಂಗತಿಯನ್ನು ತಿರುಚಿ ಊರಿಗೆ ವಿಷಯ ತಿಳಿಸುತ್ತಾರೆ. ಲಕ್ಕಿ ನೀರು ಕುಡಿಸಿದ್ದರಿಂದ ಗೌಡನ ಜಾತಿ ಕೆಟ್ಟಿತೆಂದು ಊರವರು ಮಾತನಾಡುತ್ತಾರೆ. ಲಕ್ಕಿ ಮತ್ತು ಹಿರೇಗೌಡನ ಮಧ್ಯೆ ಸಂಬಂಧ ಕಲ್ಪಿಸಿ ಇಬ್ಬರಿಗೂ ಅವಮಾನ ಮಾಡುತ್ತಾರೆ. ಮುದುಕನ ಅಂತಿಮ ಕ್ರಿಯಾಕಾರ್ಯಗಳು ಮುಗಿದ ಮೇಲೆ ಗೌಡನ ಮಗ ಲಕ್ಕಿಯ ಗಂಡ ಭರಮ್ಯಾನನ್ನು ಕರೆಸಿ ವಿಪರೀತವಾಗಿ ಹೊಡೆಯುತ್ತಾನೆ. ಲಕ್ಕಿಗೂ ಹಿರೇಗೌಡನಿಗೂ ಏನು ಸಂಬಂಧ, ಕೆಳ ಜಾತಿಯ ಅವಳಿಗೆ ನೀರು ಕುಡಿಸುವ ಧೈರ್ಯ ಹೇಗೆ ಬಂತು, ಏನು ಸಂಚು ಮಾಡಿದ್ದೀಯಾ ಎಂದು ಕೇಳುತ್ತಾನೆ. ನಾಗೇಂದ್ರಪ್ಪ ಲಕ್ಕಿಯನ್ನು ಜರೆಯುವುದನ್ನು ಕಂಡು ಅವಳಂಥವಳಲ್ಲ ಎಂದು ವಾದಿಸುತ್ತಾನೆ. ಇದರಿಂದ ಕ್ರೋಧಗೊಂಡ ಗೌಡ ಅವನಿಗೆ ಬಾರುಕೋಲಿನಿಂದ ಹೊಡೆಸುತ್ತಾನೆ. ಕೊನೆಗೆ ತಪ್ಪು ಒಪ್ಪಿಕೊಂಡು ಕಾಲ ಕೆಳಗಿನಿಂದ ಹೋಗುವಂತೆ ಸೂಚಿಸುತ್ತಾನೆ. ಭರಮ್ಯಾ ಇದಕ್ಕೆ ಒಪ್ಪಿಕೊಳ್ಳುವುದಿಲ್ಲ. ಭರಮ್ಯಾನ ಈ ನಡೆ, ಸ್ವಾಭಿಮಾನ ಎಲ್ಲ ಮನುಷ್ಯನಲ್ಲೂ ಸಹಜವಾಗಿರುತ್ತವೆ, ಆದರೆ ಅದನ್ನು ಅರಿಯದ ಕೆಲವರು ಇತರರನ್ನು ದೌರ್ಜನ್ಯದಿಂದ ತುಳಿಯುತ್ತಾರೆ ಎಂದು ತಿಳಿಯುತ್ತದೆ. ಭರಮ್ಯಾ ಒಪ್ಪಿಕೊಳ್ಳದೇ ಹೋದಾಗ ಲಕ್ಕಿಯನ್ನು ಕರೆತಂದು ನಾಗೇಂದ್ರಪ್ಪ ಅವಳ ಮೇಲೆ ಅತ್ಯಾಚಾರವೆಸಗುತ್ತಾನೆ. ಕೆಲದಿನಗಳ ನಂತರ ಭರಮ್ಯಾ ಮತ್ತು ಲಕ್ಕಿಯನ್ನು ಅವರ ಜನಗಳ ಮುಖಾಂತರವೇ ಊರಿನಿಂದ ಹೊರಗೆ ಹಾಕಿಸುತ್ತಾರೆ. ಈ ಎಲ್ಲಾ ಘಟನೆಗಳು ಮೇಲ್ಜಾತಿಯವರು ಕೆಳಜಾತಿಯವರ ಮೇಲೆ ಎಸಗುವ ಅನ್ಯಾಯ, ಕ್ರೂರತೆ, ದೌರ್ಜನ್ಯಗಳನ್ನು ಚಿತ್ರಿಸುತ್ತದೆ. ಇದು ಮೇಲ್ಜಾತಿಯವರ ಅಮಾನವೀಯ ವರ್ತನೆಯನ್ನು ತೋರಿಸುತ್ತದೆ. ಜೊತೆಗೆ ಜಾತಿಗಳ ನಡುವಿನ ಅಸಮಾನತೆಯಿಂದ ಒಳ್ಳೆಯ ಕೆಲಸ ಮಾಡಿದರೂ ಅದರಿಂದ ಕೆಳಜಾತಿಯವರಿಗೆ ಆಗುವ ಅನ್ಯಾಯ, ಹಿಂಸೆ, ದೌರ್ಜನ್ಯಗಳನ್ನು ಚಿತ್ರಿಸುತ್ತದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದುದೆಂದರೆ

ಪುರುಷನಿಗೆ ದೈಹಿಕವಾಗಿ ನೀಡಿದ ಹಿಂಸೆಯಾದರೆ, ಮಹಿಳೆಗೆ ಅವಮಾನ ಮಾಡಿ ಅತ್ಯಾಚಾರವೆಸಗುವ ಹೀನಕೃತ್ಯ. ಅಂದರೆ ಸಮಾಜದಲ್ಲಿರುವ ಅಸಮಾನತೆ ಮತ್ತು ಅದರ ಪರಿಣಾಮಗಳು ಮಹಿಳೆಯ ಮೇಲೇ ಹೆಚ್ಚು ಘೋರ ಗಂಭೀರವಾಗಿದ್ದು ಅವಳ ಬಾಳನ್ನೇ ಕಸಿಯುವ ಮಟ್ಟಕ್ಕೆ ಹೋಗುವುದು ಕಂಡುಬರುತ್ತದೆ.

ಪ್ರಕೃತಿ ನಿಯಮದಲ್ಲಿ ಚಿಗುರು ಸ್ವಾಭಾವಿಕವಾಗಿ ತನಗೆ ಅನುಕೂಲವಾದ ಹಾಗೆ ಬೆಳೆಯುತ್ತದೆ. ಬೇರು ದೊರಕಿಸಿಕೊಟ್ಟ ಆಹಾರವನ್ನು ಉಪಯೋಗಿಸಿಕೊಂಡು ಕಟ್ಟುಪಾಡುಗಳಿಲ್ಲದೆ ಚಿಗುರು ಸೊಗಸಾಗಿ ಬೆಳೆಯುತ್ತದೆ. ಬೇರು ಹಳೆಯದಾದರೂ ಯಾವಾಗಲೂ ಚಿಗುರು ನವೀನವಾಗಿ ತನಗೆ ಇಷ್ಟ ಬಂದಂತೆ ಬೇರೆ ಬೇರೆ ಆಕಾರ ಪಡೆದುಕೊಳ್ಳುತ್ತದೆ. ಬೇರು ಹಳೆಯದಾದ ಮಾತ್ರಕ್ಕೆ ಅದರಲ್ಲಿ ಚಿಗುರುವ ಎಲೆ ಬಳ್ಳಿಗಳು ಹಳೆಯದಲ್ಲ; ಅವು ಒಂದೊಂದು ರೀತಿಯಲ್ಲಿ ಬೆಳೆಯುತ್ತವೆ. ಇದು ಪ್ರಕೃತಿಯ ನಿಯಮ. ಇದೇ ರೀತಿಯಲ್ಲಿಯೇ ಮನುಷ್ಯರ ನಡುವಿನ ಸಂಬಂಧಗಳೂ ಕೂಡ. ಕುಟುಂಬ ಮತ್ತು ಸಮಾಜದ ಹಿರಿಯರು ಮುಂದಿನ ಪೀಳಿಗೆಗೆ ಅಥವಾ ತಲೆಮಾರಿಗೆ ಬೇರುಗಳ ರೀತಿ ಅವಶ್ಯಕವಾದ ಮಾರ್ಗದರ್ಶನ, ನೆರವು, ರಕ್ಷಣೆ ಒದಗಿಸಿ, ಆ ಚಿಗುರುಗಳು ಜೀವನದಲ್ಲಿ ಸ್ವತಂತ್ರ ಮತ್ತು ಜವಾಬ್ದಾರಿಯುತ ವ್ಯಕ್ತಿಯಾಗಿ ಬೆಳೆಯಲು ಸಹಾಯ ಮಾಡಬೇಕು. ಆದರೆ ನಮ್ಮ ಸಮಾಜದಲ್ಲಿ ಹಿರಿಯರಾದವರು ಹಿಂದಿನ ತಲೆಮಾರುಗಳಿಂದ ಕಟ್ಟಿಕೊಂಡು ಬಂದಿರುವ ಕಟ್ಟು-ಕಟ್ಟಳೆಗಳನ್ನು, ಮೌಢ್ಯಾಧಾರಿತ ಪದ್ಧತಿಗಳನ್ನು ಹೊಸ ತಲೆಮಾರಿನ ಮೇಲೆ ಹೇರಿ ಅವರ ಸ್ವಾತಂತ್ರ್ಯಹರಣ ಮಾಡಿ ವ್ಯಕ್ತಿತ್ವ ವಿಕಸನವನ್ನೇ ನಿಲ್ಲಿಸುತ್ತಾರೆ. ಹಾಗಾಗದೆ ಆ ಚಿಗುರುಗಳ ಪರಿಪೂರ್ಣ ವ್ಯಕ್ತಿತ್ವ ವಿಕಸನವಾಗುವಂತೆ ಮಾಡಬೇಕು ಎಂಬ ಕಥಾವಸ್ತುವನ್ನು ಸಾರಾ ಅಬೂಬಕ್ಕರ್‌ರವರ 'ಹಳೇ ಬೇರು ಹೊಸ ಚಿಗುರು' ಕಥೆ ತಿಳಿಸುತ್ತದೆ.

ಈ ಕಥೆಯ ಯೂಸೂಫ್ ಸಾಬರು ಹಳೆಯ ತಲೆಮಾರಿನವರು. ಹೆಣ್ಣಿಗೆ ಹೆಚ್ಚು ವಿದ್ಯಾಭ್ಯಾಸ ಕೊಡಬಾರದು, ಸ್ವಾತಂತ್ರ್ಯ ನೀಡಬಾರದು, ಬುರ್ಖಾ ಧರಿಸದೆ ಹೊರಬರಬಾರದು, ಪರಪುರುಷನ ಜೊತೆ ಓಡಾಡಬಾರದು, ಹುಡುಗರ ರೀತಿ ವರ್ತಿಸಬಾರದು ಎಂಬ ಕಟ್ಟುಪಾಡುಗಳನ್ನು ಎಲ್ಲರೂ ಪಾಲಿಸಬೇಕು ಎಂದು ನಂಬಿದವರು. ಇವರ ಮಗ ಹುಸೈನಿ ತಂದೆಯ ಕಟ್ಟುಪಾಡುಗಳೊಂದಿಗೆ ಬೆಳೆದರೂ ಆಧುನಿಕ ಮನೋಭಾವವನ್ನು ಬೆಳೆಸಿಕೊಂಡು ಮಕ್ಕಳು ಮತ್ತು ಹೆಂಡತಿಗೆ ಸ್ವಾತಂತ್ರ್ಯ ಕೊಟ್ಟಿರುತ್ತಾನೆ. ಹೀಗಿರುವಾಗ ಮೊಮ್ಮಗಳು ಒಮ್ಮೆ ಸಂಪಿಗೆ ಮರ ಹತ್ತಿದ್ದಾಗ ಕೋಪಗೊಂಡು ಹೆಣ್ಣುಮಕ್ಕಳು ಹೀಗೆ ಮರ ಹತ್ತುವುದು ತರವಲ್ಲ ಎಂದು

ಸಾಬರು ಹೇಳಿರುತ್ತಾರೆ. ಅವರ ಬೀಗನಿಂದ ತಮ್ಮ ಮೊಮ್ಮಗಳು ದೂರದರ್ಶನದಲ್ಲಿ ಅಭಿನಯಿಸುತ್ತಿರುವ ವಿಷಯ ತಿಳಿದವರು ಅವಳಿಗೆ ಆದಷ್ಟು ಬೇಗ ಮದುವೆ ಮಾಡಲು ಬೊಂಬಾಯಿಯಲ್ಲಿರುವ ಮಗನ ಮನೆಗೆ ಬರುತ್ತಾರೆ. ಮಗ ಮತ್ತು ಮೊಮ್ಮಕ್ಕಳೊಂದಿಗೆ ನಡೆಯುವ ಮಾತುಕತೆಯಲ್ಲಿ ಅಜ್ಜನ ಹಳೆ ಸಂಪ್ರದಾಯಗಳು ಹೆಣ್ಣನ್ನು ಬಂಧನದೊಳಗಿರಿಸಿ, ಸ್ವಾತಂತ್ರ್ಯ ಕಸಿದುಕೊಂಡು ಅವಳ ವ್ಯಕ್ತಿತ್ವ ವಿಕಸನ ಮೊಟಕುಗೊಳಿಸುವ ಚಿತ್ರಣ ಮತ್ತು ಚಿಗುರಗಳ ನಡವಳಿಕೆ, ಯೋಚನೆಗಳು ಹೆಣ್ಣಿಗೆ ಸ್ವಾತಂತ್ರ್ಯ ನೀಡಿ, ಅವಳ ಬೆಳವಣಿಗೆಗೆ ಸಹಾಯವಾಗುವ ಪರಿಸ್ಥಿತಿಯನ್ನು ದೊರಕಿಸಿಕೊಟ್ಟಿರುವ ಚಿತ್ರಣ ವ್ಯಕ್ತವಾಗುತ್ತದೆ.

ದೂರದರ್ಶನದಲ್ಲಿ ಮೊಮ್ಮಗಳು ಅಭಿನಯಿಸಿದ 'ಬಿಡುಗಡೆ' ಧಾರವಾಹಿಯನ್ನು ನೋಡಿದ ಸಾಬರು ಮಗನ ಮೇಲೆ ಕೋಪಗೊಂಡು ಮಗಳನ್ನು ಪರಪುರುಷನೊಂದಿಗೆ ಅಭಿನಯಿಸಲು ಬಿಟ್ಟಿದ್ದು ತಪ್ಪು, ನಾಳೆ ಅವಳನ್ನು ಮದುವೆ ಮಾಡುವುದು ಕಷ್ಟವಾಗುತ್ತದೆ ಎಂದು ಹೇಳುತ್ತಾರೆ. ಮೊಮ್ಮಗಳಿಗೆ ಆದಷ್ಟು ಬೇಗ ಮದುವೆ ಮಾಡಲು ತಿಳಿಸಿ ತಾವು ವರ ನೋಡಿರುವ ವಿಷಯವನ್ನು ತಿಳಿಸುತ್ತಾ, ಅವಳನ್ನು ಕರೆದುಕೊಂಡು ಹೋಗಿ ನಿಕಾಹ್ ಮಾಡುವ ಯೋಚನೆಯನ್ನು ತಿಳಿಸುತ್ತಾರೆ. ಈ ರೀತಿ ಮೊಮ್ಮಗಳ ವರ್ತನೆಗೆ ಕಡಿವಾಣ ಹಾಕಬೇಕೆಂದು ಯೋಚಿಸಿದ ಸಾಬರು ಮದುವೆಯಾದ ಮೇಲೆ ಗಂಡ ಅವಳನ್ನು ಪಳಗಿಸುತ್ತಾನೆ ಎಂದು ಮಗನಿಗೆ ಹೇಳುತ್ತಾರೆ. ಊರಿನಲ್ಲಿ ಬುರ್ಖಾ ಹಾಕಿಕೊಂಡು ಓಡಾಡುತ್ತಿದ್ದ ಸೊಸೆ ಬೊಂಬಾಯಿಯಲ್ಲಿ ತೋಳುರಹಿತ ಕುಪ್ಪಸ ತೊಟ್ಟು, ತೆಳ್ಳನೆಯ ಸೀರೆಯುಟ್ಟು ಶೃಂಗಾರ ಮಾಡುವ ಅಂಗಡಿಯಿಟ್ಟುಕೊಂಡಿರುವುದು ಸಾಬರಿಗೆ ಅರಿಯಲಾರದ ವಸ್ತುಸ್ಥಿತಿಯಾಗಿದೆ. ಈ ಎಲ್ಲ ಯೋಚನೆಗಳು ಹಳೇಬೇರಿನ ಸಂಪ್ರದಾಯವಾದಿ ಮನೋಭಾವ ಮತ್ತು ಹೆಣ್ಣನ್ನು ಅಧೀನದಲ್ಲಿಟ್ಟುಕೊಳ್ಳಬೇಕೆಂದು ಬಯಸುವ ನಿರಂಕುಶ ವ್ಯಕ್ತಿತ್ವವನ್ನು ತೋರಿಸುತ್ತವೆ.

ಅವರ ಮಗ ಹುಸೈನ್ ಬೊಂಬಾಯಿಯಲ್ಲಿ ವಾಸವಾಗಿದ್ದು ನಗರ ಜೀವನ, ಜನಜೀವನ ಅರಿತು ಆಧುನಿಕ ಮನೋಭಾವದವನಾಗಿರುತ್ತಾನೆ. ಜೊತೆಗೆ ಮಕ್ಕಳಿಗೆ ಮತ್ತು ಸ್ತ್ರೀಯರಿಗೆ ಅವರದೇ ಜೀವನ ರೂಢಿಸಿಕೊಳ್ಳಲು ಬೇಕಾದ ಅವಕಾಶ ಮತ್ತು ಸ್ವತಂತ್ರಗಳನ್ನು ಕೊಡಬೇಕು ಎಂದು ನಂಬಿದವನಾಗಿರುತ್ತಾನೆ. ಹೆಂಡತಿ ಬ್ಯೂಟಿ ಪಾರ್ಲರ್ ಅಂಗಡಿ ಇಟ್ಟುಕೊಂಡು ಸ್ವತಂತ್ರವಾಗಿ ಸಮಾನವಾಗಿ ದುಡಿಯಲು ಅವಕಾಶ ಒದಗಿಸಿರುತ್ತಾನೆ. ಮಗಳಿಗೆ ಹೆಚ್ಚಿನ ವಿದ್ಯಾಭ್ಯಾಸ ಕೊಡಿಸುವುದಾಗಿ ತಿಳಿಸುತ್ತಾ, ವಿದ್ಯಾಭ್ಯಾಸ ಮುಗಿಯುವವರೆಗೂ ಮದುವೆ ಮಾಡುವುದಿಲ್ಲ ಎಂದು ಹೇಳುತ್ತಾನೆ.

ಅವನ ತಂದೆ ಮೊಮ್ಮಗಳಿಗೆ ಹುಡುಗನನ್ನು ನೋಡಿರುವುದಾಗಿ ತಿಳಿಸಿದಾಗ, ವರನನ್ನು ಆಯ್ದುಕೊಳ್ಳುವ ಅವಕಾಶವನ್ನು ಅವರಿಗೇ ನೀಡುವುದು ಒಳ್ಳೆಯದು ಎಂದು ಹೇಳಿ ಅವಳೇ ಹುಡುಗನನ್ನು ಹುಡುಕಿಕೊಂಡರೆ ಒಳ್ಳೆಯದು ಎಂದು ಹೇಳುತ್ತಾನೆ. ತಂದೆಯ ಸಲಹೆಗೆ ಹುಸೈನನು ಹೇಳುವ "... ಬೇರುಗಳಿನ್ನೂ ಹಳೆಯದಾಗಿ ಮಣ್ಣಿನಡಿಯಲ್ಲೇ ಇದ್ದರೂ ಚಿಗುರುಗಳು ಹೊಸದಾಗಿ ಚಿಗುರುತ್ತಾ ತನಗಿಷ್ಟ ಬಂದಂತೆ ಬೆಳೆಯುವುದು ಪ್ರಕೃತಿಯ ನಿಯಮ. ಆಹಾರದ ಸರಬರಾಜು ಮಾತ್ರ ಬೇರುಗಳ ಕೆಲಸ. ಚಿಗುರುಗಳಿಗೆ ಮಾರ್ಗದರ್ಶನ ನೀಡುವ ಪ್ರಯತ್ನವನ್ನು ಮಾಡಬಹುದು, ಆದರೆ ಚಿಗುರುಗಳ ಮೇಲೆ ಒತ್ತಡ ಹೇರಿದರೆ ಅವು ಕೆಲವೊಮ್ಮೆ ಮುರುಟಿಹೋಗುತ್ತವೆ" (ಸಾರಾ ಅಬೂಬಕ್ಕರ್ 2010: ಪುಟ 112) ಮಾತುಗಳಲ್ಲಿ ಚಿಗುರುಗಳು ಬೆಳೆಯಲು ಬೇಕಾದ ವಾತಾವರಣವನ್ನು ಕಲ್ಪಿಸುವುದು ಹಿರಿಯರ ಕರ್ತವ್ಯ; ಹಾಗೆಂದು ಅವರ ಮೇಲೆ ಹಿರಿಯರ ಅಭಿಪ್ರಾಯ, ಕಟ್ಟಳೆಗಳನ್ನು ಹೇರಿದರೆ ಆ ಚಿಗುರುಗಳ ಬೆಳವಣಿಗೆಯೇ ಕುಂಠಿತವಾಗುತ್ತದೆ ಎಂದು ತಿಳಿಯುತ್ತದೆ.

ಹುಸೈನ್ ಅವನ ಮಗಳನ್ನು ಅವಳ ಸ್ನೇಹಿತನೊಡನೆ ಹೊರಗೆ ಹೋಗಲು ಬಿಡುವುದೂ ಕೂಡ ಹೆಣ್ಣಿಗೆ ಅಥವಾ ಅವಳ ವ್ಯಕ್ತಿತ್ವಕ್ಕೆ ಕೊಡುವ ಸ್ವಾತಂತ್ರ್ಯವಾಗಿದೆ. ಅವರಿಬ್ಬರೂ ಒಬ್ಬರನ್ನೊಬ್ಬರು ಅರ್ಥಮಾಡಿಕೊಂಡು ಒಳ್ಳೆಯ ಸ್ನೇಹಿತರಾಗಿರುವುದರಿಂದ ಹೊರಗೆ ಸುತ್ತಾಡುವುದರಿಂದ ಏನೂ ತೊಂದರೆಯಿಲ್ಲ ಎಂದು ತಿಳಿಸುತ್ತಾನೆ. ಸಾಬರು ಆ ಹುಡುಗನ ಜಾತಿ ಯಾವುದು ಎಂದು ಕೇಳಿದಾಗ ಅವನು ಗಂಡು ಜಾತಿ ಎಂದು ಹುಸೈನ್ ಹೇಳುವುದು ಪ್ರಪಂಚದಲ್ಲಿ ಕೇವಲ ಎರಡೇ ಜಾತಿ ಇರುವುದು ಒಂದು ಗಂಡು ಜಾತಿ ಮತ್ತೊಂದು ಹೆಣ್ಣು ಜಾತಿ ಎಂಬ ಅಭಿಪ್ರಾಯವನ್ನು ಸೂಚಿಸುತ್ತದೆ.

ಹಿರಿಯ ತಲೆಮಾರಿನ ಅಜ್ಜ ಹೆಣ್ಣನ್ನು ಅಧೀನದಲ್ಲಿಯೇ ಇಡಬೇಕು ಎಂದು ಯೋಚಿಸಿದರೆ, ಅಜ್ಜನ ಮಗ ಹೆಣ್ಣು ಸಮಾನಳು ಅವಳಿಗೂ ಅವಳಿಷ್ಟದಂತೆ ಬದುಕಲು ಅವಕಾಶ ಮಾಡಿಕೊಡಬೇಕು ಎಂದು ಯೋಚಿಸುವುದು ಎರಡು ಭಿನ್ನ ನೆಲೆಗಳ ಮನಸ್ಸುಗಳಲ್ಲಿ ಹೆಣ್ಣನ್ನು ಚರ್ಚೆಗೆ ತಂದಿರುವುದು ತಿಳಿಯುತ್ತದೆ. ಈ ಕಥೆಯ ಮೂಲಕ ಸಾರಾ ಅಬೂಬಕ್ಕರ್‌ರವರು ಹಳೇ ಸಂಪ್ರದಾಯಕ್ಕೆ ಸಿಕ್ಕಿಕೊಂಡು ಚಿಗುರು ಬೆಳೆಯುವುದನ್ನು ಕುಂಠಿತಮಾಡುವುದು ಸರಿಯಲ್ಲ; ಕಟ್ಟು ಕಟ್ಟಳೆಗಳು ಮಾನವನ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಮೊಟಕುಮಾಡಿ ಅಧೀನ ಪರಿಸ್ಥಿತಿಗೆ ನೂಕಿ ವ್ಯಕ್ತಿತ್ವದ ಬೆಳವಣಿಗೆಯನ್ನು ಸಂಕುಚಿತಗೊಳಿಸುತ್ತವೆ. ಹಾಗಾಗದೆ ಬೇರು ಆಹಾರ

ದೊರಕಿಸಿಕೊಟ್ಟು ಸೂಕ್ತ ಮಾರ್ಗದರ್ಶನ ನೀಡಿ, ಚಿಗುರು ಸ್ವಾಭಾವಿಕವಾಗಿ, ಪ್ರಕೃತಿ ನಿಯಮಕ್ಕನುಸಾರವಾಗಿ ಬೆಳೆಯಲು ಬಿಡಬೇಕು ಎಂದು ತಿಳಿಸುತ್ತಾರೆ.

ಪುರುಷ ಧರ್ಮವನ್ನು ದುರ್ಬಳಕೆ ಮಾಡಿಕೊಂಡು ಹೆಣ್ಣನ್ನು ಶೋಷಿಸುವ ಅವಳನ್ನು ನಿರಾಶ್ರಿತಳೂ, ನಿರ್ಗತಿಕಳೂ ಆಗಿ ಮಾಡುವ ಮತ್ತು ಧರ್ಮದ ನೆಪದಲ್ಲಿ ಪುರುಷರ ದಮನ ನೀತಿ, ಅವಮಾನ, ಶೋಷಣೆಗಳಿಂದ ನೊಂದ ಹೆಣ್ಣೊಂದು 'ಧರ್ಮ' ಎಂದರೇನು ಎಂದು ತನ್ನಲ್ಲೇ ಪ್ರಶ್ನೆ ಮಾಡಿಕೊಳ್ಳುವ ಕಥಾವಸ್ತು ಸಾರಾ ಅವರ 'ಅಂಕುರ' ಕಥೆಯಲ್ಲಿ ಕಾಣುತ್ತದೆ. ಅಂಕುರ ಎಂದರೆ ಮೊಳಕೆ ಎಂದರ್ಥ. ಶೋಷಿತ ಹೆಣ್ಣಿನಲ್ಲಿ ಧರ್ಮ ಎಂದರೇನು ಎಂಬ ಪ್ರಶ್ನೆ ಹುಟ್ಟುವುದು ಮಹಿಳೆಯರ ಚಿಂತನೆಯಲ್ಲಿ ಆಗುತ್ತಿರುವ ಬದಲಾವಣೆಯ ಮುನ್ಸೂಚನೆಯಾಗುತ್ತದೆ. ಈ ಕಥೆಯಲ್ಲಿ ಶಕೀಲಾಳನ್ನು ಸಲೀಂನಿಗೆ ವಿವಾಹ ಮಾಡಿಕೊಟ್ಟಿರುತ್ತಾರೆ. ವಿವಾಹದ ಸಂದರ್ಭದಲ್ಲಿ ಇಪ್ಪತ್ತೈದು ಪವನಿನ ಚಿನ್ನದ ಒಡವೆಗಳನ್ನು ಕೊಡುವುದಾಗಿ ಹೇಳಿ ಅವಳ ತಂದೆ ಮದುವೆ ಮಾಡಿರುತ್ತಾರೆ. ಆದರೆ ಅದು ಸಾಧ್ಯವಾಗದ ಕಾರಣ ಹದಿನೈದು ಪವನಿನ ಒಡವೆ ಕೊಟ್ಟು ಮದುವೆ ಮಾಡಿ ಉಳಿದ ಒಡವೆಯನ್ನು ಅನುಕೂಲವಾದಾಗ ಕೊಡುವುದೆಂದು ಯೋಚಿಸಿರುತ್ತಾರೆ. ಮದುವೆಯ ನಂತರ ಶಕೀಲಳ ಅತ್ತೆ ಕಡಿಮೆ ಒಡವೆ ತಂದಿರುವುದನ್ನು ಗಮನಿಸಿ ಅವಳನ್ನು ಹೀಯಾಳಿಸುತ್ತ ಅವಮಾನಿಸುತ್ತಾಳೆ. ಮದುವೆಯಾದ ಏಳನೇ ದಿನಕ್ಕೆ ಗಂಡ ಅವಳನ್ನು ಬಿಟ್ಟು ದುಬೈಗೆ ಕೆಲಸಕ್ಕೆ ಹೋಗುತ್ತಾನೆ. ಈ ಸಂದರ್ಭದಲ್ಲಿ ಅವಳ ಗಂಡನ ಅಣ್ಣ ಕರೀಂ ಮತ್ತು ತಾಯಿ ಅವಳಿಗೆ ಹಿಂಸಿಸುತ್ತಾರೆ. ಅವಳನ್ನು ಮನೆಗೆ ಕರೆಯಲು ಬಂದ ತಂದೆಯನ್ನು ಅವಮಾನಿಸಿ ಕಳುಹಿಸುತ್ತಾರೆ. ಇದರಿಂದ ನೊಂದ ಶಕೀಲಳ ತಂದೆ ಸಾಲ ಮಾಡಿ ಉಳಿದ ಚಿನ್ನವನ್ನು ತಂದುಕೊಟ್ಟರೂ ಅವಳ ಅತ್ತೆಗೆ ಸಮಾಧಾನವಾಗದೆ ಗರ್ಭಿಣಿ ಶಕೀಲಳನ್ನು ತವರು ಮನೆಗೆ ಕಳುಹಿಸುವುದಿಲ್ಲ. ಇದು ಪುರುಷ ಮದುವೆಯಾಗಲು ಹೆಣ್ಣಿನ ತಂದೆ-ತಾಯಿಗಳು ಅವನಿಗೆ ಕೊಡಬೇಕಾದ ಹಣ ಅಥವಾ ವರದಕ್ಷಿಣೆ ಹಾಗೂ ಕೊಡದಿದ್ದರೆ ಹೆಣ್ಣು ಅನುಭವಿಸಬೇಕಾದ ಯಾತನೆಯನ್ನು ತೋರಿಸುತ್ತದೆ.

ಎರಡು ವರ್ಷದ ನಂತರ ಊರಿಗೆ ಬಂದ ಸಲೀಂ ಜಮೀನು ಕೊಳ್ಳಲು ಯೋಚಿಸುತ್ತಾನೆ. ಹಣ ಸಾಲದಾದಾಗ ಅವನ ಅಣ್ಣ ಕರೀಂ ಮದುವೆಯ ಸಂದರ್ಭದಲ್ಲಿ ವರದಕ್ಷಿಣೆಯನ್ನು ಪಡೆದಿಲ್ಲವಾದ್ದರಿಂದ ಈಗ ಮಾವನ ಬಳಿ ಹಣದ ಸಹಾಯ ಕೇಳು ಎಂದು ಸಲಹೆ ನೀಡುತ್ತಾನೆ. ಮದುವೆಯಾಗುವಾಗ ಚಿನ್ನದ ಒಡವೆಯನ್ನು ಪಡೆದುದನ್ನು ಮರೆತ ಸಲೀಂ ಮಾವನ ಬಳಿ ಹಣ ಕೇಳುತ್ತಾನೆ. ಆದರೆ ಶಕೀಲಳ ತಂದೆ ತನ್ನ ಅಸಹಾಯಕತೆಯನ್ನು ವ್ಯಕ್ತಪಡಿಸಿ

ಸಹಾಯ ಮಾಡಲಾಗುವುದಿಲ್ಲ ಎಂದು ತಿಳಿಸುತ್ತಾನೆ. ಇದರಿಂದ ಕ್ರೋಧಗೊಂಡ ಸಲೀಂ ಮಾವನ ಮನೆಯಿಂದ ಶಕೀಲಳನ್ನು ಕರೆದುಕೊಂಡು ಬಂದವನು ಇನ್ನು ಮುಂದೆ ಅಲ್ಲಿಗೆ ಹೋಗಬಾರದೆಂಬ ಕಟ್ಟಪ್ಪಣೆಯನ್ನು ಹಾಕುತ್ತಾನೆ. ಇದು ಗಂಡು ಹೆಣ್ಣಿನ ಮೇಲೆ ಹೇರುವ ನಿಯಂತ್ರಣಗಳನ್ನು, ಅವಳನ್ನು ಇತರರಿಂದ ಮುಖ್ಯವಾಗಿ ಹೆತ್ತವರಿಂದ ದೂರ ಮಾಡುವ ರೀತಿಯನ್ನು ಚಿತ್ರಿಸುತ್ತದೆ. ಅಂದರೆ, ಪುರುಷನ ಸ್ವಾರ್ಥ ಈಡೇರದಿದ್ದಾಗ ಹೆಣ್ಣನ್ನು ಅವಳ ಸಂಬಂಧಗಳನ್ನು ಮೂಲದಿಂದಲೇ ಕಡಿತಗೊಳಿಸಿ ತನ್ನ ಅಧಿಕಾರವನ್ನು ಹೇರುವ ಹಾಗೂ ಅಂಕೆಯಲ್ಲಿಟ್ಟುಕೊಳ್ಳುವ ಪುರುಷ ಸಮಾಜದ ವಿಧಾನವನ್ನು ತಿಳಿಸುತ್ತದೆ.

ಸಲೀಂ ದುಬೈಗೆ ವಾಪಸ್ ಹೋಗುವಾಗ ಶಕೀಲಾ ತನ್ನ ಮತ್ತು ಮಗುವಿನ ಖರ್ಚಿಗೆ ಹಣ ಬೇಕಾಗುವುದರಿಂದ ಸ್ವಲ್ಪ ಹಣ ಕಳುಹಿಸಲು ಕೇಳುತ್ತಾಳೆ. ಇದಕ್ಕೆ ಒಪ್ಪಿದ ಸಲೀಂ ಶಕೀಲಾಳಿಗೆ ಹಣ ಕಳುಹಿಸುತ್ತಾನೆ ಮತ್ತು ತನ್ನ ಅಣ್ಣ ಕರೀಂನಿಗೆ ಹಣ ಕಳುಹಿಸುವುದನ್ನು ನಿಲ್ಲಿಸುತ್ತಾನೆ. ತನಗೆ ಬರುತ್ತಿದ್ದ ಹಣ ನಿಂತಿದ್ದರಿಂದ ಕರೀಂ ಶಕೀಲಾಳ ಮೇಲೆ ಕೋಪಗೊಂಡು ಅವಳನ್ನು ಅವಮಾನಿಸುತ್ತಾನೆ ಮತ್ತು ತಾಯಿಗೆ ಅವಳ ಮೇಲೆ ಆರೋಪಗಳನ್ನು ಹೊರಿಸುತ್ತಾ, ತಾಯಿಯೂ ಶಕೀಲಾಳನ್ನು ನಿಂದಿಸಿ, ಹಿಂಸಿಸುವಂತೆ ಮಾಡುತ್ತಾನೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಹೆಂಡತಿಯೊಬ್ಬಳು ತನ್ನ ಗಂಡನಿಂದ ಹಣವನ್ನು ಪಡೆದಿದ್ದು ಮತ್ತು ಬರುತ್ತಿದ್ದ ಹಣ ನಿಂತ ಸಂಗತಿ ಪುರುಷನನ್ನು ಕೆರಳಿಸಿದ್ದು. ಸ್ತ್ರೀಯೊಬ್ಬಳಿಗೆ ಸ್ವಲ್ಪ ಮಟ್ಟಿನ ಆರ್ಥಿಕ ಸ್ವಾತಂತ್ರ್ಯ ಲಭಿಸಿದ್ದು ಮತ್ತು ತನ್ನ ಆದಾಯದ ಮೂಲ ನಿಂತದ್ದು ಪುರುಷನಿಗೆ ಸಹಿಸಲಸಾಧ್ಯವಾದ ಅಂಶವಾಗುತ್ತದೆ. ಈ ವರ್ತನೆ ಹೆಣ್ಣಿಗೆ ಆರ್ಥಿಕ ಸ್ವಾತಂತ್ರ್ಯ ಕಲ್ಪಿಸಲು ಪುರುಷರು ಸಿದ್ಧರಿಲ್ಲದ ನಿಲುವನ್ನು ತೋರಿಸುತ್ತದೆ. ಇದು ಸ್ತ್ರೀ–ಪುರುಷ ಸಮಾನತೆಗೆ ತೊಡಕಾಗಿ ನಿಲ್ಲುತ್ತದೆ.

ಕರೀಂನ ದುರ್ವರ್ತನೆ, ಶೋಷಣೆ ಶಕೀಲಾಳ ಮೇಲೆ ಮುಂದುವರೆದು ಅವಳ ನಡತೆಯ ಮೇಲೆ ಸಂಶಯ ಬರುವಂತೆ ಸಲೀಂನಿಗೆ ಪತ್ರಗಳನ್ನು ಬರೆದು, ಮನೆಯಿಂದ ಶಕೀಲಾಳನ್ನು ಆಚೆಗೆ ಕಳುಹಿಸುವ ಸವಾಲು ಹಾಕಿದ್ದ ಕರೀಂ ಅದಕ್ಕೆ ಬೇಕಾದ ಎಲ್ಲಾ ಮಸಲತ್ತುಗಳನ್ನು ಮಾಡುತ್ತಾನೆ. ವಿದ್ಯೆ ಬಾರದ ಶಕೀಲಾ ತನ್ನ ಗಂಡನ ಬರುವಿಕೆಗೆ ಕಾಯುತ್ತಿರುತ್ತಾಳೆ. ಆದರೆ ಅಣ್ಣನ ಮಾತುಗಳನ್ನು ನಂಬಿದ ಸಲೀಂ ಊರಿಗೆ ಬಂದವನು ಮನೆಗೆ ಬಾರದೆ ಶಕೀಲಾಳಿಗೆ ತಲಾಖ್ ಕಳುಹಿಸುತ್ತಾನೆ. ತಲಾಖ್‌ನ್ನು ತೆಗೆದುಕೊಂಡ ಕರೀಂ ಸ್ನೇಹಿತರೊಡಗೂಡಿ ಶಕೀಲಾಳನ್ನು ಬಲತ್ಕಾರವಾಗಿ ಎತ್ತಿಕೊಂಡು ಹೋಗಿ ಅವಳ ತಂದೆಯ ಮನೆಯಲ್ಲಿ ಹಾಕುತ್ತಾನೆ. ಮಕ್ಕಳು ತಂದೆಯ ಜವಾಬ್ದಾರಿ ಎಂದು ಹೇಳಿ ಅವಳಿಗೆ ಮಕ್ಕಳನ್ನೂ ಕೊಡುವುದಿಲ್ಲ. ಇದೆಲ್ಲವನ್ನೂ

ಗಮನಿಸಿದರೆ ಹೆಣ್ಣಿನ ಬಾಳು ಪುರುಷನ ಅಧೀನದಲ್ಲಿರುವುದು ತಿಳಿಯುತ್ತದೆ. ಯಾವ ಪುರುಷ ಬೇಕಾದರೂ ಹೆಣ್ಣಿನ ಬಾಳನ್ನು ಹಾಳುಮಾಡಬಹುದಾದ ಸಮಾಜದ ಪರಿಸ್ಥಿತಿ ಕಂಡುಬರುತ್ತದೆ. ಅಂದರೆ ಕುಟುಂಬದಲ್ಲಿಯೂ ಕೂಡ ಪುರುಷನ ಸ್ವಾರ್ಥ ಹೆಣ್ಣನ್ನು ಶೋಷಿಸುತ್ತದೆ. ಇನ್ನೊಂದು ಅಂಶವನ್ನು ಗಮನಿಸಿದರೆ ಶಕೀಲಾಳ ಗಂಡ ನಿಜವೇನೆಂದು ತಿಳಿಯದೆ, ಮನೆಯಲ್ಲಿ ಏನು ನಡೆದಿದೆ ಎಂದು ಯೋಚಿಸದೆ ಕೇವಲ ಅಣ್ಣನ ಮಾತಿನ ಮೇಲೆ ತನ್ನ ಹೆಂಡತಿಗೆ ತಲಾಖ್ ನೀಡುವುದು ಪುರುಷ ಹೆಣ್ಣಿಗೆ ಮಾಡುವ ಘೋರ ಅನ್ಯಾಯವಾಗುತ್ತದೆ. ಅತೀ ಸುಲಭವಾಗಿ ಧರ್ಮದ ಕಾನೂನನ್ನು ಸ್ವಾರ್ಥಕ್ಕೆ ಬಳಸಿಕೊಳ್ಳುವುದು ಧರ್ಮ ಪುರುಷರ ಪರವಾಗಿರುವ ಅಂಶವನ್ನು ತೋರಿಸುತ್ತದೆ.

ಧರ್ಮದ ಕಾನೂನಿನ ಪ್ರಕಾರ ತಲಾಖ್ ನೀಡಿದಾಗ ಮಕ್ಕಳು ತಂದೆಯ ಜೊತೆಯಲ್ಲೇ ಇರಬೇಕು ಎಂಬುದೂ ಕೂಡ ಪುರುಷಪರವೇ. ಅಂದರೆ ಮುಸ್ಲಿಂ ಕಾನೂನಿನಲ್ಲಿ ಸ್ತ್ರೀಯ ಜೀವಕ್ಕೆ, ಅವಳ ಕೆಲಸ ಕಾರ್ಯಗಳಿಗೆ, ಸಂಸಾರ, ಸಮಾಜದ ಕೊಡುಗೆಗಳಿಗೆ ಯಾವುದೇ ಬೆಲೆಯಿಲ್ಲದಿರುವುದು ತಿಳಿಯುತ್ತದೆ. ಹೆಣ್ಣು ಕೇವಲ ಗುಲಾಮಳಾಗಿ ಪುರುಷಾಧೀನವಾಗಿ ತನ್ನ ಜೀವನವನ್ನು ಕಳೆಯಬೇಕಾದ ಪರಿಸ್ಥಿತಿ ಅವಳ ವ್ಯಕ್ತಿತ್ವವನ್ನು ಸಮಾಜ ಪರಿಗಣಿಸದೇ ಇರುವುದನ್ನು ಸೂಚಿಸುತ್ತದೆ.

ಮದುವೆಯಾದಾಗಿನಿಂದ ಪುರುಷರ ಶೋಷಣೆ, ಹಿಂಸೆಯಲ್ಲಿ ಜೀವನ ಕಳೆದ ಶಕೀಲಾ ಧರ್ಮದ ಕಾನೂನಿನನ್ವಯ ಬಹು ಸುಲಭವಾಗಿ ಗಂಡನಿಂದ ಪರಿತ್ಯಕ್ತಳಾಗುತ್ತಾಳೆ ಮತ್ತು ಅದೇ ಕಾನೂನಿನನ್ವಯ ಮಕ್ಕಳನ್ನು ಕಳೆದುಕೊಳ್ಳುತ್ತಾಳೆ. ಹೀಗೆ ನೊಂದ ಶಕೀಲಾಳಲ್ಲಿ 'ಧರ್ಮ ಎಂದರೇನು?' (ಸಾರಾ ಅಬೂಬಕ್ಕರ್ 2010: ಪುಟ 198) ಎಂಬ ಪ್ರಶ್ನೆ ಮೊದಲ ಬಾರಿಗೆ ಏಳುತ್ತದೆ. ತನ್ನ ಜೀವನಕ್ಕೆ ಎರವಾದ ಈ ಧರ್ಮ ಯಾವುದು ಎಂದು ಅವಳು ಯೋಚಿಸುವುದು ಸಹಜವಾಗಿದೆ. ಧರ್ಮ ಎಂದರೆ ಪುರುಷನಿಗೊಂದು, ಸ್ತ್ರೀಗೊಂದು ಇರುತ್ತದೆಯೇ, ಮಕ್ಕಳನ್ನು ಹೆತ್ತು ಹೊತ್ತು ಸಾಕಿದ ತನಗೇ ಅವರ ಮೇಲೆ ಅಧಿಕಾರವಿಲ್ಲ ಎಂದರೆ, ಏನೂ ಮಾಡದ ಪುರುಷನಿಗೆ ಹೇಗೆ ಅಧಿಕಾರ ಬರುತ್ತದೆ ಎಂಬ ಪ್ರಶ್ನೆ ಸ್ತ್ರೀ ಜಾಗೃತಳಾಗುವ ಮುನ್ಸೂಚನೆಯನ್ನು ತೋರಿಸುತ್ತದೆ ಎಂದು ತಿಳಿಯಬಹುದು. ಆದರೆ ಈ ಜಾಗೃತಿ ಹೆಣ್ಣಿನ ಜೀವನ ಹಾಳಾಗುವ ಮೊದಲೇ ಮೂಡಿ ಪುರುಷ ಸರ್ವಾಧಿಕಾರವನ್ನು ಕಿತ್ತು ಹೆಣ್ಣಿನ ಬಾಳಿಗೂ ಅರ್ಥ ಮತ್ತು ಮೌಲ್ಯ ಬರುವ ಹಾಗೇ ಆಗಬೇಕು. ಹಾಗಾದಾಗ ಮಾತ್ರ ಹೆಣ್ಣಿಗೆ ಸ್ವಾತಂತ್ರ್ಯ ಮತ್ತು ಸಮಾನತೆ ಲಭ್ಯವಾಗುತ್ತದೆ ಎಂದು ಸಾರಾರವರು ಈ ಕಥೆಯಲ್ಲಿ ಚಿತ್ರಿಸಿರುವುದು ಕಂಡುಬರುತ್ತದೆ.

ವಿದ್ಯಾವಂತ ಯುವ ಪೀಳಿಗೆಯಲ್ಲಿ ಹೆಚ್ಚಾಗುತ್ತಿರುವ ಸ್ವಾರ್ಥ ಸಾಧನೆಗೋಸ್ಕರ ಇತರರಿಗೆ ಆಗುವ ತೊಂದರೆ ನೋವುಗಳನ್ನು ಲೆಕ್ಕಿಸದೆ, ಧರ್ಮ–ಕಾನೂನುಗಳನ್ನು ಕೂಡ ತಮ್ಮ ಅನುಕೂಲತೆಗೆ ತಕ್ಕಂತೆ ಉಪಯೋಗಿಸಿಕೊಳ್ಳಲು ಮುಂದಾಗುವ ಮನೋಭಾವವನ್ನು ಬಾನು ಮುಷ್ತಾಕ್‌ರವರು 'ಸಫೀರಾ' ಕಥೆ ತೋರಿಸುತ್ತದೆ. ಸಫೀರಾ ಮತ್ತು ಅಸ್ಲಂ ಪಾತ್ರಗಳ ಮುಖಾಂತರ ಸ್ವಾರ್ಥಸಾಧನೆಯನ್ನು ಹಾಗೂ ಸಾದಿಕ್ ಮತ್ತು ಶಾಹೀನ್ ಪಾತ್ರಗಳ ಮೂಲಕ ಇತರರ ಸ್ವಾರ್ಥದಿಂದ ಬೇರೆಯವರು ಅನುಭವಿಸುವ ತೊಂದರೆ, ನೋವುಗಳು ಕಂಡುಬರುತ್ತವೆ. ಅಸ್ಲಂನ ದುಡಿತದಿಂದ ಬರುವ ಆದಾಯ ಸಾಕಾಗುವುದಿಲ್ಲ, ಆದ್ದರಿಂದ ತಾನೂ ಕೆಲಸಕ್ಕೆ ಸೇರಿದರೆ ಬರುವ ಹೆಚ್ಚಿನ ಆದಾಯದಿಂದ ಅನುಕೂಲವಾಗುತ್ತದೆ ಎಂಬ ಸಫೀರಾಳ ಯೋಚನೆ ಇಂದಿನ ಹೆಣ್ಣುಮಕ್ಕಳು ಮನೆಯ ಹೊರಗಡೆ ದುಡಿಯಲು ಯೋಚಿಸುತ್ತಿರುವುದನ್ನು ತೋರಿಸುತ್ತದೆ ಹಾಗೂ ಹೆಣ್ಣು ಸಬಲಳಾಗುವ ದಿಕ್ಕನ್ನು ಸೂಚಿಸುತ್ತದೆ. ಆದರೆ ಅಸ್ಲಂ ಸಫೀರಾ ಕೆಲಸಕ್ಕೆ ಹೋಗುವುದು ತನಗೆ ಅವಮಾನ ಎಂದು ಭಾವಿಸಿ ಕೆಲಸಕ್ಕೆ ಹೋಗದಂತೆ ತಡೆಯುತ್ತಾನೆ ಮತ್ತು ಅವರಿಬ್ಬರಿಗೂ ಈ ವಿಷಯಕ್ಕೆ ಸಂಬಂಧಿಸಿದಂತೆ ಜಗಳವಾಗುತ್ತದೆ. ಈ ಸಂದರ್ಭದಲ್ಲಿ ಮೈ ಹುಷಾರಿಲ್ಲದ ಮಗನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದ ಸಾದಿಕ್‌ನನ್ನು ಬಲವಂತವಾಗಿ ಕರೆದುಕೊಂಡು ಹೋದ ಅಸ್ಲಂ ಹೆಂಡತಿಯೊಡನೆ ರಾಜಿಯಾಗುತ್ತಾನೆ. ಆದರೂ ಮರುದಿನ ಅವಳು ಕೆಲಸಕ್ಕೆ ಹೋಗುತ್ತಾಳೆ. ಇದರಿಂದ ಕ್ರೋಧಗೊಂಡ ಅಸ್ಲಂ ಸಫೀರಾಳಿಗೆ ಹೊಡೆಯುತ್ತಾನೆ. ವಿಷಯ ತಿಳಿದ ಅವಳಣ್ಣ ಅಸ್ಲಂನಿಗೆ ಹೊಡೆದು ಸಫೀರಾಳನ್ನು ಮನೆಗೆ ಕರೆದುಕೊಂಡು ಹೋಗುತ್ತಾನೆ. ಈ ಸಂದರ್ಭದಲ್ಲಿ ನಡೆಯುವ ಮಾತುಗಳು ಮನುಷ್ಯ ತನ್ನ ಸ್ವಾರ್ಥಕ್ಕಾಗಿ ಧರ್ಮ ಕಾನೂನುಗಳನ್ನು ಉಪಯೋಗಿಸಲು ಮುಂದಾಗುವುದನ್ನು ತೋರಿಸುತ್ತದೆ. ಸಫೀರಾಳ ಅಣ್ಣ ಕೆಲಸ ಗಳಿಸುವುದಕ್ಕೋಸ್ಕರ ಅಸ್ಲಂನಿಂದ ಸಫೀರಾಳಿಗೆ 'ತಲಾಕ್' ಕೊಡಿಸಿ ಅಥವಾ ಸಫೀರಾಳಿಂದಲೇ ಅಸ್ಲಂನಿಗೆ 'ಖುಲಾ' ಕೊಡಿಸಿ ಅವಳತ್ತೆಯ ಮಗನಿಗೆ ಮದುವೆ ಮಾಡಿಕೊಡಲು ತಯಾರಿ ನಡೆಸುತ್ತಾನೆ. ಆದರೆ ಸಫೀರಾಳ ತಂದೆ ಅವಳಿಗೆಂದೇ ಕಟ್ಟಿದ್ದ ಮನೆಯನ್ನು ಅವಳಿಗೆ ಕೊಡುವುದಾಗಿ ಹೇಳಿ ಅವರ ಸಂಸಾರವನ್ನು ಸರಿಮಾಡುವಂತೆ ಸಾದಿಕ್‌ನಿಗೆ ಕೇಳುತ್ತಾನೆ. ಸಾದಿಕ್ ಈ ವಿಷಯ ತಿಳಿಸಿದಾಗ ಅಸ್ಲಂ ಕೂಡ ಅಹಂನಿಂದ ಸಫೀರಾಳಿಗೆ ತಲಾಕ್ ಕೊಡುವ ಬೆದರಿಕೆಯನ್ನು ಹಾಕುತ್ತಾನೆ. ಆದರೆ ಅವಳತ್ತೆಯ ಮಗನೊಡನೆ ಮದುವೆಯ ವಿಷಯ ತಿಳಿದ ಮೇಲೆ ಚಿಂತಿಸುತ್ತಾನೆ.

ಶಾಹೀನ್, ಸಾದಿಕ್‌ನೊಡನೆ ಆಸ್ಪತ್ರೆಗೆ ಬಂದ ಸಫೀರಾಳನ್ನು ನೋಡಿದ ಅಸ್ಲಂ ಬಲವಂತವಾಗಿ ಸಫೀರಾಳನ್ನು ಕಾರಿನಲ್ಲಿ ಆಸ್ಪತ್ರೆಯಿಂದ ಕರೆದುಕೊಂಡು ಹೋಗುತ್ತಾನೆ. ಎಳೆದಾಟದಲ್ಲಿ ಆಯತಪ್ಪಿ ಬಿದ್ದ ಶಾಹೀನ್‌ಳ ಕೈ ಮೂಳೆ ಮುರಿಯುತ್ತದೆ. ಚಿಕಿತ್ಸೆ ಮಾಡಿಸಿಕೊಂಡು ಮನೆಗೆ ಬಂದ ಸಾದಿಕ್‌ನಿಗೆ ತೀವ್ರ ಅಸಮಾಧಾನವಾಗುತ್ತದೆ. ಬೇರೆಯವರ ವಿಷಯಕ್ಕೆ ಹೋಗಿ ತನ್ನ ಹೆಂಡತಿಯ ಕೈ ಮುರಿದದ್ದು ಅವನಿಗೆ ನೋವುಂಟುಮಾಡುತ್ತದೆ.

ಕೆಲವು ದಿನಗಳ ಬಳಿಕ ಸಾದಿಕ್‌ನ ಮನೆಗೆ ಬಂದ ಅಸ್ಲಂ ಮತ್ತು ಸಫೀರಾ ಸಂತೋಷವಾಗಿರುವುದನ್ನು ನೋಡುತ್ತಾರೆ. ಶಾಹೀನ್ ಮತ್ತು ಸಾದಿಕ್‌ನಿಗೆ ಆದ ತೊಂದರೆ ನೋವಿಗೆ ಕ್ಷಮೆಯಾಚಿಸುತ್ತಾರೆ. ಆದರೆ ಸಫೀರಾಳ ತಂದೆಯಿಂದ ಮನೆಯನ್ನು ರಿಜಿಸ್ಟ್ರೇಷನ್ ಮಾಡಿಸಿಕೊಡುವಂತೆ ಮತ್ತು ಶಾಹೀನ್‌ಳನ್ನು ಚಿಕಿತ್ಸೆ ಮಾಡಿದ ಡಾಕ್ಟರ್ ಪೋಲಿಸಿನವರಿಗೆ ನೀಡಿರುವ ವರದಿಯನ್ನು ಹಿಂಪಡೆಯುವಂತೆ ಕೇಳಿಕೊಳ್ಳುತ್ತಾರೆ. ಇವರ ಈ ವರ್ತನೆ ಕೂಡ ಮನುಷ್ಯನ ಸ್ವಾರ್ಥವನ್ನೇ ತೋರಿಸುತ್ತದೆ. ಬಾನು ಮುಷ್ತಾಕ್‌ರವರು ಈ ಕಥೆಯಲ್ಲಿ ಮನುಷ್ಯನ ಸ್ವಾರ್ಥಗುಣವನ್ನು ಮತ್ತು ಅವನು ತನ್ನ ಅನುಕೂಲಕ್ಕೆ ಯಾರನ್ನಾದರೂ ಹೇಗಾದರೂ ಬಳಸಿಕೊಳ್ಳುವ ವರ್ತನೆಯನ್ನು ಚಿತ್ರಿಸಿದ್ದಾರೆ.

ಆಧುನಿಕ ಸಮಾಜದಲ್ಲೂ ಮಹಿಳೆಯರ ಮೇಲೆ ಪುರುಷರ ದೌರ್ಜನ್ಯ ಅವ್ಯಾಹತವಾಗಿ ನಡೆಯುತ್ತಿದ್ದು ಸ್ತ್ರೀಯರ ಜೀವನ ಇಂದಿಗೂ ನೋವುಗಳಲ್ಲೇ ಇದೆ ಎಂದು ತೋರಿಸುತ್ತಾ, ಮಹಿಳೆಯರ ಚಿಂತನೆ ಮತ್ತು ಅಭಿಪ್ರಾಯ ವ್ಯಕ್ತಪಡಿಸುವ ರೀತಿಯಲ್ಲಿ ಆಗಿರುವ ಬದಲಾವಣೆಯನ್ನು ಕಥಾವಸ್ತುವಾಗಿ ಸಬಿಹಾ ಭೂಮಿಗೌಡ 'ಸೆರಗಿನ ಕೆಂಡ' ಕಥೆಯಲ್ಲಿ ಚಿತ್ರಿಸಿದ್ದಾರೆ. ಇಂದಿನ ಸಾಮಾಜಿಕ ವ್ಯವಸ್ಥೆ, ಆಡಳಿತ ಅಥವಾ ಅಧಿಕಾರಶಾಹಿ ವರ್ಗ ಸ್ತ್ರೀಯ ಉದ್ಧಾರದ ಹೆಸರಲ್ಲಿ ಅವರನ್ನು ಶೋಷಿಸುತ್ತಿರುವುದನ್ನು ತೋರಿಸಿದ್ದಾರೆ. ಈ ಕಥೆಯಲ್ಲಿ ಬರುವ ವಿವಿಧ ಪಾತ್ರಗಳು ಅವರ ಜೀವನದಲ್ಲಿ ಪುರುಷರಿಂದ ಘಟಿಸಿದ ದೌರ್ಜನ್ಯ, ಹಿಂಸೆ, ಅನ್ಯಾಯಗಳು ಹೇಗೆ ಅವರ ಬಾಳನ್ನು ಹಾಳುಮಾಡಿ ಕ್ರೌರ್ಯವನ್ನು ಮೆರೆದಿವೆ ಎಂಬುದನ್ನು ಪ್ರಕಟಿಸುತ್ತವೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಮಹಿಳೆಯರಿಗೆ ತಾವು ಅನುಭವಿಸುತ್ತಿರುವ ನೋವು, ಹಿಂಸೆಗಳನ್ನು ವ್ಯಕ್ತಪಡಿಸಲು ದೊರಕುವ ಮಹಿಳಾ ನ್ಯಾಯಾಲಯ ಎಂಬ ಸಾಮಾಜಿಕ ಸಂಸ್ಥೆ. ಲೇಖಕರು ಸಮಾಜದಲ್ಲಿ ಇಂತಹ ಸಂಸ್ಥೆಗಳು ದೊರಕಿದರೆ ಸ್ತ್ರೀಯರು ತಮ್ಮ ನೋವುಗಳನ್ನು ವ್ಯಕ್ತಪಡಿಸಲು ಒಂದು ವೇದಿಕೆ ದೊರಕುತ್ತದೆ ಹಾಗೂ ಸಾಧ್ಯವಾದಷ್ಟು ಸಹಾಯ ದೊರಕುತ್ತದೆ. ಪುರುಷರ ದೌರ್ಜನ್ಯ ಬಲಾತ್ಕಾರಗಳಿಂದ ಹೆಣ್ಣಿನ ಜೀವನ ಹಾಳಾಗಿ ಸಮಾಜದಲ್ಲಿ

ಅವಳಿಗೆ ಒಂದು ಸ್ಥಾನ ಇಲ್ಲದಂತಾಗಿರುವುದು ಮತ್ತು ಹುಟ್ಟಿದ ಮಕ್ಕಳಿಗೆ ಸರಕಾರದಿಂದ ದೊರಕುವ ಸೌಲಭ್ಯಗಳು ದೊರಕದೇ ಇರುವುದು ಕಂಡುಬರುತ್ತದೆ. ಇದಕ್ಕೆ ಮುಖ್ಯ ಕಾರಣ ಮಗುವಿಗೆ ತಂದೆಯ ಹೆಸರು ಕೊಡಲು ಸಾಧ್ಯವಾಗದೆ ಇರುವ ಪರಿಸ್ಥಿತಿ. ಸಂಪ್ರದಾಯಬದ್ಧವಾಗಿ ಅಥವಾ ಕಾನೂನಾತ್ಮಕವಾಗಿ ಮದುವೆಯಾದ ದಂಪತಿಗಳ ಮಕ್ಕಳಿಗಷ್ಟೇ ತಂದೆಯ ಹೆಸರು ಕೊಡಲು ಇರುವ ಸಾಮಾಜಿಕ ಅವಕಾಶ, ಪುರುಷರ ಬಲಾತ್ಕಾರದಿಂದ, ಅನ್ಯಾಯದಿಂದ ಜನಿಸಿದ ಮಗುವಿಗೆ ತಂದೆಯ ಹೆಸರು ಕೊಡಲು ಆಗದೇ ಇರುವ ಸಾಮಾಜಿಕ ಪರಿಸ್ಥಿತಿ ಇಂತಹ ಮಕ್ಕಳನ್ನು ಅವಕಾಶ ಮತ್ತು ಸೌಲಭ್ಯಗಳಿಂದ ವಂಚಿಸುವುದನ್ನು ಸಬೀಹಾ ಭೂಮಿಗೌಡ ಅವರು ತೋರಿಸಿದ್ದಾರೆ. ಮತ್ತೊಂದು ಮುಖ್ಯವಾದ ಅಂಶವೆಂದರೆ ಸಮಾಜದಲ್ಲಿ ಮಕ್ಕಳನ್ನು ಅವರ ತಂದೆಯ ಹೆಸರಿನಿಂದಲೇ ಗುರುತಿಸುವ ಪದ್ಧತಿ ಪುರುಷ ಪ್ರಧಾನ ಸಮಾಜದ ಹಿಡಿತವನ್ನು ಬಿಂಬಿಸುತ್ತದೆ.

ಸಾಮಾಜಿಕ ನೆಲೆಯ ಹಿನ್ನೆಲೆಯಲ್ಲಿ ವಿಶ್ಲೇಷಿಸಿದ ಮೇಲಿನ ಕಥೆಗಳಲ್ಲಿ ಮಹಿಳಾ ಸಾಹಿತಿಗಳು ಸಮಾಜದಲ್ಲಿ ಕಾಣುವ ವಿವಿಧ ವಿಷಯ, ಸನ್ನಿವೇಶಗಳನ್ನು ತಮ್ಮ ಕಥೆಗಳಲ್ಲಿ ಕಥಾವಸ್ತುವಾಗಿ ಬಳಸಿರುವುದು ಕಂಡುಬರುತ್ತದೆ. ಮಹಿಳೆಯರಿಗೆ ಶಿಕ್ಷಣವೇ ದೊರೆಯದಿದ್ದ 20ನೇ ಶತಮಾನದ ಆದಿಭಾಗದಲ್ಲಿ ಶಿಕ್ಷಣದ ಮಹತ್ವ, ಮೂಢನಂಬಿಕೆ, ವರದಕ್ಷಿಣೆ ಸಮಸ್ಯೆಗಳಿಂದ ಮಹಿಳೆಯರ ಮೇಲಾಗುತ್ತಿದ್ದ ಪರಿಣಾಮ, ಪುರುಷ ಮತ್ತು ಸ್ತ್ರೀ ಇಬ್ಬರ ಚಿಂತನೆಯಲ್ಲೂ ಕಂಡುಬರುತ್ತಿದ್ದ ಬದಲಾವಣೆಗಳು, ಧರ್ಮದ ಆಧಾರದ ಮೇಲೆ ಸ್ತ್ರೀಯರನ್ನು ಶೋಷಿಸುತ್ತಿದ್ದ ರೀತಿ ನೀತಿಗಳು, ಧರ್ಮವನ್ನು ಕುರಿತು ಮಹಿಳೆಯರಲ್ಲಿ ಏಳುತ್ತಿದ್ದ ಪ್ರಶ್ನೆಗಳು, ಮಹಿಳೆಯರ ಉದ್ಧಾರದ ಹೆಸರಿನಲ್ಲಿ ಆಗುತ್ತಿದ್ದ ಅನ್ಯಾಯ, ಮೋಸ, ಸ್ತ್ರೀ–ಪುರುಷರ ಸ್ವಾರ್ಥ, ಬದಲಾಗುತ್ತಿರುವ ಮನೋಭಾವಗಳು ಕಥಾವಸ್ತುವಿನಲ್ಲಿ ಆಗಿರುವ ಬದಲಾವಣೆಯನ್ನು ತೋರಿಸುತ್ತದೆ. ತಿರುಮಲಾಂಬಾರವರ ಕಥೆ ಮಹಿಳೆಯರಿಗೆ ವಿದ್ಯೆಯ ಮಹತ್ವವನ್ನು ತಿಳಿಸಿದರೆ, ಸರಸ್ವತಿಬಾಯಿ ರಾಜವಾಡೆ, ಅನುಪಮಾ ನಿರಂಜನ ಮತ್ತು ಸಾವಿತ್ರಮ್ಮ ಅವರ ಕಥೆಗಳು ವರದಕ್ಷಿಣೆ ಮತ್ತು ಮೂಢನಂಬಿಕೆಗಳಿಂದ ಹೆಣ್ಣು ಸಮಾಜದಲ್ಲಿ ಅನುಭವಿಸುವ ನೋವು, ಕ್ರೌರ್ಯ, ಹಿಂಸೆಗಳನ್ನು ಚಿತ್ರಿಸಿವೆ. ಸರಸ್ವತಿಬಾಯಿ ರಾಜವಾಡೆಯವರ ಕಥೆಗಳಲ್ಲಿ ಸಮಾಜವು ಹೆಣ್ಣಿನ ಉದ್ಧಾರದ ಹೆಸರಿನಲ್ಲಿ ಮಾಡುವ ಮೋಸ, ದೌರ್ಜನ್ಯಗಳು ತಿಳಿದುಬರುತ್ತವೆ. ಸಮಾಜದಲ್ಲಿ ಘಟಿಸುವ ಎಲ್ಲ ಘಟನೆಗಳಿಗೂ ಹೆಣ್ಣೇ ಕಾರಣ ಎಂದು ಹೇಳುವ ಸಮಾಜ ತಪ್ಪೆಲ್ಲವೂ ಹೆಣ್ಣಿನದೇ ಎಂದು ತೋರಿಸುವುದು ಹೆಣ್ಣಿಗೆ ಮಾಡುವ ಅನ್ಯಾಯವಾಗುತ್ತದೆ.

ಸಾವಿತ್ರಮ್ಮನವರ ಕಥೆಗಳು ಸ್ತ್ರೀ–ಪುರುಷರ ಮನೋಭಾವದಲ್ಲಾಗುತ್ತಿರುವ ಚಿಂತನಾ ಬದಲಾವಣೆಯನ್ನು ತೋರಿಸುತ್ತವೆ. ಬಿ.ಟಿ. ಲಲಿತಾ ನಾಯಕ್‌ರವರ ಕಥೆ ಪುರುಷ ಸಂತಾನ ಪ್ರೇಮಿ ಸಮಾಜ ಹೆಣ್ಣನ್ನು ಶೋಷಿಸುವುದನ್ನು, ಅವಳಿಗೆ ಅನ್ಯಾಯ ಮಾಡುವುದನ್ನು ತೋರಿಸುತ್ತದೆ. ತನಗೆ ಅನ್ಯಾಯವಾಗುತ್ತಿರುವುದನ್ನು ಅರಿತ ಇವರ ಹೆಣ್ಣು ಪಾತ್ರ ಮನೆಯಿಂದ ತನ್ನ ಸ್ನೇಹಿತನೊಡನೆ ಓಡಿಹೋಗುವುದು ಸಮಾಜದ ನೀತಿಯನ್ನು ಪ್ರತಿರೋಧಿಸಿದಂತಿದೆ. ಗೀತಾ ನಾಗಭೂಷಣರವರ ಕಥೆ ಸಮಾಜದಲ್ಲಿ ಜಾತಿಪದ್ಧತಿಯ ಪರಿಣಾಮದಿಂದ, ಒಳ್ಳೆಯದನ್ನು ಮಾಡಿದರೂ ಹೆಣ್ಣು ಘೋರ ಶೋಷಣೆ, ಅನ್ಯಾಯ ಎದುರಿಸಬೇಕಾಗುವುದು, ಯಾವುದೇ ಘಟನೆಯಾದರೂ ಅದರ ಕ್ರೂರ ಪರಿಣಾಮ ಮಾತ್ರ ಹೆಣ್ಣಿನ ಮೇಲೆ ಎಂದು ತಿಳಿದುಬರುತ್ತದೆ. ಸಮಾಜದಲ್ಲಿ ಹಿರಿಯರಾದವರು ಬೇರಿನ ರೀತಿ ಕೆಲಸ ಮಾಡಬೇಕೇ ಹೊರತು ಮೌಢ್ಯಾಧಾರಿತ ಪದ್ಧತಿಗಳನ್ನು ಹೆಣ್ಣಿನ ಮೇಲೆ ಹೇರುವುದು ಅವರ ವ್ಯಕ್ತಿತ್ವ ವಿಕಸನಕ್ಕೆ ಕೊಡುವ ದೊಡ್ಡ ಏಟು ಎಂದು ಸಾರಾ ಅವರು ತಿಳಿಸಿದರೆ, ಧರ್ಮವನ್ನು ದುರುಪಯೋಗ ಮಾಡಿಕೊಂಡು ಹೆಣ್ಣಿನ ಬಾಳನ್ನು ಹಾಳು ಮಾಡಿದ ರೀತಿ–ನೀತಿಗಳು ಮತ್ತು ಹೆಣ್ಣು ಧರ್ಮ ಎಂದರೇನು ಎಂದು ಪ್ರಶ್ನೆ ಕೇಳುವುದು ಹೆಣ್ಣಿನ ಮೇಲೆ ಸಮಾಜದಲ್ಲಿ ನಡೆಯುತ್ತಿರುವ ಶೋಷಣೆಯನ್ನು ಚಿತ್ರಿಸುತ್ತದೆ.

4.2: ಕೌಟುಂಬಿಕ ನೆಲೆಯಲ್ಲಿ ಕಥಾವಸ್ತು

ಸಮಾಜದೊಳಗಡೆ ಕುಟಂಬ ಪದ್ಧತಿಯು ಒಂದು ಭದ್ರ ವ್ಯವಸ್ಥೆಯಾಗಿ ಏರ್ಪಟ್ಟಿದೆ. ಇಂತಹ ಕುಟುಂಬ ವ್ಯವಸ್ಥೆಗೆ ಪುರುಷನೇ ಯಜಮಾನ. ಈ ಪುರುಷಾಧಿಪತ್ಯದ ನೆಲೆಯೊಳಗೆ ಹೆಣ್ಣು ಅನುಭವಿಸುವ ನೋವು, ಲಿಂಗತಾರತಮ್ಯದ ಪರಿಣಾಮ, ಅವಳ ಅಸಹಾಯಕತೆ, ಆಚರಣೆ, ಸಂಪ್ರದಾಯಗಳ ಹೆಸರಿನಲ್ಲಿ ಹೆಣ್ಣಿನ ಮೇಲೆ ನಡೆಯುತ್ತಿರುವ ಶೋಷಣೆ, ಅನ್ಯಾಯ, ದೌರ್ಜನ್ಯ ಮುಂತಾದ ವಸ್ತುಗಳನ್ನು ಲೇಖಕಿಯರು ಕಥಾವಸ್ತುವಾಗಿ ಬಳಸಿಕೊಂಡಿದ್ದಾರೆ. ಕೌಟುಂಬಿಕ ನೆಲೆಯಲ್ಲಿ ಕಥಾವಸ್ತುವಿನ ಬದಲಾವಣೆಯನ್ನು ವಿಶ್ಲೇಷಿಸಲು ಶ್ಯಾಮಲಾ ಬೆಳಗಾಂವಕರ್‌ರವರ ಕಂತಿಯ ದೇಶಾಂತರ', ಅನುಪಮಾ ನಿರಂಜನರವರ 'ಆ ಮೂರು ಮನೆಗಳು'; ತ್ರಿವೇಣಿಯವರ 'ಕೀಲುಗೊಂಬೆ'; ವೀಣಾ ಶಾಂತೇಶ್ವರರ 'ಹೆಣ'; ವೈದೇಹಿಯವರ 'ಅಕ್ಕು'; ಗೀತಾ ನಾಗಭೂಷಣರವರ 'ಅತಿಕ್ರಮಣ'; ನೇಮಿಚಂದ್ರರ 'ತ್ರಿಕೋನದಾಚೆಗೆ'; ಬಾನು ಮುಷ್ತಾಕ್‌ರವರ 'ಎದೆಯ ಹಣತೆ', 'ಸರಿದ ಕಾರ್ಮೋಡ' ಕಥೆಗಳನ್ನು ಪ್ರಾತಿನಿಧಿಕವಾಗಿ ಪರಿಗಣಿಸಲಾಗಿದೆ.

ಬಡತನ, ಹಸಿವು, ಗಂಡನ ಹಿಂಸೆ, ದೌರ್ಜನ್ಯಗಳನ್ನು ತಾಳಲಾರದೆ ಬೇಸತ್ತು ಹತಾಶಳಾಗಿ ಸಂಸಾರದಿಂದ ಹೊರನಡೆದು ತನ್ನ ಜೀವನವನ್ನು ರೂಪಿಸಿಕೊಳ್ಳುವ ಮಹಿಳೆಯೊಬ್ಬಳ ಕಥಾವಸ್ತುವನ್ನು ಶ್ಯಾಮಲಾ ಬೆಳಗಾಂವಕರ್‌ರವರ ಕಂತಿಯ ದೇಶಾಂತರ ಕಥೆ ಚಿತ್ರಿಸುತ್ತದೆ. ಕಥೆಯ ಮುಖ್ಯಪಾತ್ರವಾದ ಕಂತಿಯದು ಗಂಡ ಮತ್ತು ಎರಡು ಚಿಕ್ಕ ಮಕ್ಕಳಿರುವ ಅತೀ ಬಡಕುಟುಂಬ. ಗಂಡ ಕುಡುಕ ಮತ್ತು ಗಾಂಜಾ ವ್ಯಸನಿ. ಕಂತಿಯು ಊರಿನ ಸಾಹುಕಾರರ ಬಳಿ ಬೆಳಿಗ್ಗೆ ಸಾಲ ತೆಗೆದುಕೊಂಡು ವ್ಯಾಪಾರ ಮಾಡಿ ಅಸಲು ವಾಪಸ್ ಕೊಟ್ಟು ಉಳಿದ ಹಣದಲ್ಲಿ ಊಟ ಮತ್ತು ಇತರೆ ಅಗತ್ಯಗಳನ್ನು ಪೂರೈಸಿಕೊಳ್ಳಬೇಕಾದ ಪರಿಸ್ಥಿತಿಯಲ್ಲಿರುತ್ತಾಳೆ; ಆದರೆ ವ್ಯಾಪಾರದಿಂದ ಉಳಿಯುತ್ತಿದ್ದದ್ದು ಬಹಳ ಕಡಿಮೆ. ಜೊತೆಗೆ ಉಳಿದ ಹಣವೆಲ್ಲಾ ಗಂಡನ ಶೇಂದಿ ಖರ್ಚಿಗೆ ಹೋಗುತ್ತಿತ್ತು. ಹಣ ಕೊಡದಿದ್ದರೆ ಅವಳಿಗೆ ಹೊಡೆತ, ಬೈಗುಳ, ಹಿಂಸೆ; ಕೊಟ್ಟರೆ ಕುಡಿದಾದ ಮೇಲೆ ಹಿಂಸೆ, ರೊಟ್ಟಿ ಮಾಡದಿದ್ದರೂ ಹೊಡೆತ. ದುಡಿದ ಹಣವೆಲ್ಲಾ ಗಂಡನ ಕುಡಿತಕ್ಕೆ ಹೋದ ಮೇಲೆ ಹಲವಾರು ದಿನ ಕಂತಿ ಮತ್ತು ಮಕ್ಕಳಿಗೆ ಉಪವಾಸವೇ ಗತಿಯಾಗುತ್ತಿತ್ತು. ಹತಾಶಳಾದ ಕಂತಿ ಹಿಂಸೆ ಮತ್ತು ಹಸಿವುಗಳಿಂದ ಪಾರಾಗಲು ಮಕ್ಕಳೊಡನೆ ಗಂಡನ ಮನೆ ಬಿಟ್ಟು ಬೇರೆ ಊರಿಗೆ ಹೋಗಲು ನಿರ್ಧರಿಸುತ್ತಾಳೆ. ಇದು ಹತಾಶ ಪರಿಸ್ಥಿತಿಯಲ್ಲಿ ತನ್ನನ್ನು ತಾನು ಉಳಿಸಿಕೊಳ್ಳಲು ಹೆಣ್ಣು ಎಂತಹ ಕಠಿಣ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ ಎಂಬುದನ್ನು ತೋರಿಸುತ್ತದೆ ಮತ್ತು ಅಂತಹ ನಿರ್ಧಾರವನ್ನು ಶ್ಯಾಮಲಾ ಬೆಳಗಾಂವಕರ್‌ರವರು ಕಂತಿಯ ಪಾತ್ರದ ಮೂಲಕ ಮಾಡಿಸಿದ್ದಾರೆ. ಮನೆ ಬಿಟ್ಟು ಹೊರಟ ಕಂತಿ ರಾತ್ರಿಯೆಲ್ಲಾ ನಡೆದು ಸುಸ್ತಾಗಿ ಬೆಳಗಿನ ಜಾವ ಕುಳಿತು ಯೋಚಿಸುತ್ತಿದ್ದ ರೀತಿ ಬೆಳಗಾಂವಕರ್‌ರವರು ಯಾವುದೇ ನಿರ್ಧಾರ ಕೈಗೊಳ್ಳುವ ಸಮಯದಲ್ಲಿ ಹೆಣ್ಣು ಹೇಗೆ ಹಲವು ವಿಷಯಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು ಎಂಬುದನ್ನು ಈ ಮಾತುಗಳಲ್ಲಿ ವ್ಯಕ್ತಪಡಿಸುತ್ತಾರೆ. "ಇನ್ನು ಮುಂದೇನು ಮಾಡುವುದು?.. ಗಂಡ ಬೆನ್ನ ಹತ್ತಿ ಹುಡುಕುತ್ತ ಬರಬಹುದೇ? ಎಚ್ಚರವಾಗಿ ನೋಡಿ ಏನೆಂದಿರಬಹುದು? ಆತನನ್ನೂ ಆತನ ಮನೆಯನ್ನೂ ಬಿಟ್ಟು ಬಂದ ಬಳಿಕ ತನಗಾದ ಲಾಭವೇನು?.. ನಷ್ಟವೇನು?.. ಆತನಿಗಂತೂ ತಾನು ಮನೆ ಬಿಟ್ಟು ಬಂದುದಕ್ಕೆ ಬೆನ್ನು ಹತ್ತಿ ಲಾಭವಾದಂತೆಯೇ ಸರಿ. ತನಗೆ.. ತನಗೆ..? ನಷ್ಟವೆ..? ನಷ್ಟವಂತೂ ಏನೂ ಇಲ್ಲ. ಆದರೂ ಗಂಡನೆಂಬುದೊಂದು ಅಮೂಲ್ಯ ರತ್ನವಲ್ಲವೇ?.. ಅಲ್ಲವೇ? ಅಂದ ಮೇಲೆ ಆತ ತನಗೆ ಬೆಲೆಕೊಟ್ಟಿದ್ದರೆ.. ತಾನವನಿಗೆ ಮೊದಲೇ ಕೊಟ್ಟಿದ್ದಿಲ್ಲವೇ? ಮತ್ತೂ ಕೊಡುತ್ತಿದ್ದಿಲ್ಲವೇ? ಅಂದ ಮೇಲೆ ಅವನನ್ನು ಬಿಟ್ಟು ಬಂದುದಕ್ಕೆ ನಷ್ಟವೇನೂ ಇಲ್ಲದಿದ್ದರೂ ಲಾಭವೇನು? ಲಾಭವೇನಾದರೂ..?" ಎರಡೂ ತೊಡೆಗಳ ಮೇಲೆ ತಲೆಯಿಟ್ಟು ಮಲಗಿದ ಎರಡೂ ಮಕ್ಕಳ

ಕಡೆಗೆ ಕಣ್ಣು ಹೊರಳಿದವು.. "ಲಾಭ! ಹವಳ ಮುತ್ತಿನ ಲಾಭ!! ಇದಕ್ಕಿಂತ ಹೆಚ್ಚಿನದಿನ್ನೇನು ಲಾಭವಾಗಬೇಕು? ಆ ಯಮನ ಕೈಯಲ್ಲಿದ್ದರೆ ಇದೇ ರೀತಿ ಇನ್ನೆಷ್ಟು ದಿನ ಬಾಳುತ್ತಿದ್ದೆವೋ ಏನೋ.. ತನ್ನ ಕೈಯಲ್ಲಿ ಬಂದು ಮುಂದೇನು ಉಣ್ಣುವುವೋ ಏನೋ.. ಏನೇ ಆಗಲಿ ಈ ಮಕ್ಕಳಿಗಾಗಿ ತಾನು, ತನ್ನ ದುಡಿತ, ತನ್ನ ಜೀವನ." (ವಿಜಯಾ ದಬ್ಬೆ 1989: ಪುಟ 147) ಇಲ್ಲಿ ಕಂಡುಬರುವುದೇನೆಂದರೆ ದಾಂಪತ್ಯ ಜೀವನದಲ್ಲಿ ಹೆಣ್ಣು ಗಂಡು ಇಬ್ಬರೂ ಬಹಳ ಮುಖ್ಯ. ಗಂಡನಿಗೆ ಹೆಂಡತಿ, ಹಾಗೆಯೇ ಹೆಂಡತಿಗೆ ಗಂಡ ಇಬ್ಬರೂ ಒಬ್ಬರಿಗೊಬ್ಬರು ಅವಶ್ಯವಾಗಿ ಬೇಕಾದವರು. ಆದರೆ ಈ ಸಮಾಜದಲ್ಲಿ ಪರಿಸ್ಥಿತಿ ಹಾಗಿಲ್ಲ. ಹೆಣ್ಣು ಎಲ್ಲ ಹಿಂಸೆ, ದೌರ್ಜನ್ಯಗಳನ್ನು ಅನುಭವಿಸಬೇಕಾದ, ತೀರಾ ಹದಗೆಟ್ಟಾಗ ಹೆಣ್ಣಿಗೆ ಯಾವ ನೆಲೆಯೂ ಇಲ್ಲದೆ ಅನಾಥಳಾಗಿ ಹೊರಬರಬೇಕಾದ ಪರಿಸ್ಥಿತಿ. ಇಂತಹ ಸಂಧರ್ಭದಲ್ಲಿ ಹೆಣ್ಣು ತಾನು ತೆಗೆದುಕೊಳ್ಳುವ ನಿರ್ಧಾರದಿಂದ ಆಗುವ ಲಾಭ-ನಷ್ಟಗಳನ್ನು ಪರಿಗಣಿಸಬೇಕು. ಈ ಕಥೆಯಲ್ಲಿ ಶ್ಯಾಮಲಾರವರು ಕಂತಿಯ ಮುಖಾಂತರ ಗಂಡನನ್ನು ಬಿಟ್ಟು ಬಂದದ್ದು ತನಗೆ ಲಾಭವೇ ಆಯಿತು ಎಂದು ಹೇಳಿಸುವುದು, ಅವರು ಎಲ್ಲ ಮಹಿಳೆಯರು ಸಂಧರ್ಭಾನುಸಾರ ಇಂತಹ ವೈಯಕ್ತಿಕ ಅವಶ್ಯಕತೆಗಳ ಕಡೆಗೂ ಗಮನಕೊಟ್ಟು ತಮ್ಮ ಜೀವನವನ್ನು ತಾವು ರೂಪಿಸಿಕೊಳ್ಳಬೇಕು ಎಂದು ತಿಳಿಸುವುದು ಕಂಡುಬರುತ್ತದೆ.

ಮನೆಯಿಂದ ಹೊರಬಂದ ಹೆಣ್ಣಿಗೆ ಬದುಕಲು ಸಮಾಜ ಯಾವ ರೀತಿ ಅವಕಾಶಗಳನ್ನು ಒದಗಿಸಬೇಕೆಂದು ಶ್ಯಾಮಲಾ ಬೆಳಗಾಂವಕರ್‌ರವರು ಕಂತಿಯ ಮುಂದಿನ ಕಥೆಯಲ್ಲಿ ಚಿತ್ರಿಸಿದ್ದಾರೆ. ಊರು ಮತ್ತು ಮನೆ ಬಿಟ್ಟು ಅನಾಥಳಾಗಿ ಬಂದಿದ್ದ ಕಂತಿಯನ್ನು ಪರ ಊರಿನ ಗೌಡ ಮನೆಕೆಲಸಕ್ಕೆ ಸಹಾಯವಾಗಲೆಂದು ಇರಿಸಿಕೊಳ್ಳುತ್ತಾನೆ. ಇದು ಪರದೇಶಿಯಾಗಿ ಬಂದ ಹೆಣ್ಣಿಗೆ ನೆಲೆ ಕೊಡುವ ರೀತಿಯನ್ನು ತೋರಿಸುತ್ತದೆ. ಕಂತಿಯ ಬಿಡುವಿಲ್ಲದ ಕೆಲಸ ಮತ್ತು ದುಡಿತವನ್ನು ಗಮನಿಸಿದ ಗೌಡ ಅವಳಿಗೆ ಗೌರಮ್ಮ ಎಂದು ಕರೆಯುತ್ತಾರೆ.

ಗೌಡರ ಮನೆಯಲ್ಲಿ ಮಾದೇವ ಎಂಬ ವ್ಯಕ್ತಿ ಜೀತದಾಳಾಗಿರುತ್ತಾನೆ. ಅವನ ಹೆಂಡತಿ ಮೊದಲ ಹೆರಿಗೆಯಲ್ಲೇ ಮೃತಳಾಗಿರುತ್ತಾಳೆ. ಮಾದೇವ ಮತ್ತು ಕಂತಿ ಇಬ್ಬರೂ ತಮ್ಮ ಕೆಲಸಗಳಲ್ಲಿ ತೊಡಗಿಕೊಂಡರೂ ವಿಶ್ವಾಸದಿಂದ ಮಾತನಾಡುತ್ತಿರುತ್ತಾರೆ. ಇದೇ ಸಂಧರ್ಭದಲ್ಲಿ ಹೊಲದಲ್ಲಿ ಕೆಲಸ ಮಾಡುವಾಗ ಕುಡುಗೋಲಿನಿಂದ ಮಾದೇವನಿಗೆ ಆಳವಾದ ಗಾಯವಾಗುತ್ತದೆ. ಗಾಯ ವಾಸಿಯಾಗಲು ಒಂದು ತಿಂಗಳಾಗುತ್ತದೆ ಮತ್ತು ಈ ಸಮಯದಲ್ಲಿ ಗೌಡರ ಮಾತಿನಂತೆ ಗೌರಮ್ಮ ಮಾದೇವನ ಆರೈಕೆ ಮಾಡುತ್ತಾಳೆ. ಇವರಿಬ್ಬರ ಮಧ್ಯೆ ಬೆಳೆದ ಅನ್ಯೋನ್ಯತೆ ಮತ್ತು ವಿಶ್ವಾಸವನ್ನು

ಗಮನಿಸಿದ ಗೌಡರು ಅವರಿಗೆ ಮದುವೆ ಮಾಡಲು ಯೋಚಿಸುತ್ತಾರೆ. ಗೌಡತಿ ಗೌರಮ್ಮನ ಅಭಿಪ್ರಾಯ ಮತ್ತು ಸಮ್ಮತಿಯನ್ನು ಪಡೆದು ಅವರ ಮದುವೆಯನ್ನು ಮಾಡಲು ತಯಾರು ಮಾಡುತ್ತಾರೆ. ದೇವಿಯ ಜಾತ್ರೆಗೆಂದು ಗೌಡರ ಕುಟುಂಬ ಹೊರಡುತ್ತದೆ, ಜೊತೆಯಲ್ಲಿ ಗೌರಮ್ಮ ಮತ್ತು ಮಾದೇವ ಕೂಡ ಹೊರಡುತ್ತಾರೆ. ದಾರಿ ಮಧ್ಯೆ ಒಂದು ದೇವಸ್ಥಾನದ ಬಳಿ ಕಂತಿಯ ಗಂಡ ಅವಳನ್ನು ಹುಡುಕುತ್ತಾ ಅಲ್ಲಿಗೆ ಬಂದಿರುತ್ತಾನೆ. ಭಿಕ್ಷುಕನಾಗಿದ್ದ ಅವನನ್ನು ಪುಂಡು ಹುಡುಗರು ಹೀಯಾಳಿಸುತ್ತ, ಕಲ್ಲು ಹೊಡೆಯುತ್ತಿರುತ್ತಾರೆ. ಇದನ್ನು ಗಮನಿಸಿ ಅಲ್ಲಿಗೆ ಹೋದ ಕಂತಿಗೆ ಅವಳ ಗಂಡ ಸಿಗುತ್ತಾನೆ. ಕಂತಿಗೆ ತಾನು ಮಾಡಿದ ಅನ್ಯಾಯ ನೆನೆದು ದುಃಖಿಸುತ್ತಾನೆ. ಅಲ್ಲಿಗೆ ಬಂದ ಮಾದೇವನನ್ನು ಮತ್ತು ಕಂತಿಯನ್ನು ಕರೆದು ಅವರಿಬ್ಬರೂ ಮದುವೆ ಮಾಡಿಕೊಳ್ಳಬೇಕೆಂದು ತಿಳಿಸಿ ಸಾವನ್ನಪ್ಪುತ್ತಾನೆ. ಅಂತ್ಯ ಕಾರ್ಯಗಳೆಲ್ಲಾ ಮುಗಿದ ಮೇಲೆ ಅವರಿಬ್ಬರೂ ದೇವಸ್ಥಾನದಲ್ಲಿ ಮದುವೆಯಾಗುತ್ತಾರೆ.

ಕಥೆಯಲ್ಲಿ ಶ್ಯಾಮಲಾ ಅವರು ಹೆಣ್ಣು ಹಿಂಸೆ, ಅನ್ಯಾಯ, ದೌರ್ಜನ್ಯಗಳಿಂದ ಪಾರಾಗಲು ಧೈರ್ಯದಿಂದ ದೇಶಾಂತರ ಹೋಗಿ ತನ್ನ ಜೀವನವನ್ನು ಸರಿಪಡಿಸಿಕೊಳ್ಳುವ ಕಥಾವಸ್ತುವನ್ನು ಚಿತ್ರಿಸಿದ್ದಾರೆ. ಆದರೆ ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ದೇಶಾಂತರವೇ ಹೆಣ್ಣಿನ ಎಲ್ಲ ಸಮಸ್ಯೆಗಳಿಗೂ ಪರಿಹಾರ ದೊರಕಿಸುತ್ತದೆ ಎಂದು ಅರ್ಥೈಸುವಂತಿಲ್ಲ, ಬದಲಿಗೆ ಪರಿಸ್ಥಿತಿ ಮತ್ತು ಸಂದರ್ಭಗಳಿಗೆ ಅನುಗುಣವಾಗಿ ಪರಿಹಾರಗಳನ್ನು ಕಂಡುಕೊಳ್ಳಬೇಕು ಎಂಬುದು. ಇದರ ಜೊತೆಯಲ್ಲೇ ಸಮಾಜ ಹೇಗೆ ಹೆಣ್ಣಿಗೆ ಅವಳ ಜೀವನ ಕಟ್ಟಿಕೊಳ್ಳಲು ಸಹಾಯ ಮಾಡಬಹುದು ಎಂಬುದನ್ನು ಕಾಣಬಹುದು.

ಎಲ್ಲಾ ವರ್ಗಗಳ ಅಂದರೆ ಬಡವ ಶ್ರೀಮಂತ ಮಹಿಳೆಯರು ಅನುಭವಿಸುವ ವಿವಿಧ ರೀತಿಯ ದೌರ್ಜನ್ಯ, ಶೋಷಣೆಗಳನ್ನು ಕಥಾವಸ್ತುವನ್ನಾಗಿ ತೆಗೆದುಕೊಂಡು 'ಆ ಮೂರು ಮನೆಗಳು' ಕಥೆಯಲ್ಲಿ ಅನುಪಮಾ ನಿರಂಜನರವರು ಚಿತ್ರಿಸಿದ್ದಾರೆ. ಸ್ತ್ರೀಯರು ಬಡ ಕುಟುಂಬದಲ್ಲಿರಲಿ, ಶ್ರೀಮಂತ ಕುಟುಂಬದಲ್ಲಿರಲಿ ಅವರ ಮೇಲಿನ ದೌರ್ಜನ್ಯ, ಶೋಷಣೆಗಳು ನಡೆಯುತ್ತಲೇ ಇರುತ್ತವೆ, ಆದರೆ ಅದರ ಸ್ವರೂಪ ವಿವಿಧ ರೀತಿಯಲ್ಲಿರುತ್ತದೆ ಎಂದು ಅನುಪಮಾ ನಿರಂಜನರವರು 'ಆ ಮೂರು ಮನೆಗಳು' ಕಥೆಯಲ್ಲಿ ಚಿತ್ರಿಸಿದ್ದಾರೆ. ಮಧ್ಯಮ, ಶ್ರೀಮಂತ ಮತ್ತು ಬಡ ವರ್ಗದ ಕುಟುಂಬಗಳಲ್ಲಿನ ಮಹಿಳೆಯರು ಅನುಭವಿಸುವ ಭಿನ್ನ ರೀತಿಯ ಸಮಸ್ಯೆ ಮತ್ತು ಶೋಷಣೆಗಳನ್ನು ತೋರಿಸುತ್ತಾರೆ.

ಮಧ್ಯಮ ವರ್ಗದ ಕುಟುಂಬಕ್ಕೆ ಸೇರಿದ ಭಾಗ್ಯ ಮೊದಲು ತಂದೆ ತಾಯಿಯರಿಂದ ಹೆಣ್ಣು ಮಗು ಎಂಬ ಕಾರಣಕ್ಕೆ ಅನಾದರಕ್ಕೆ ಒಳಗಾಗಿ ಮದುವೆಯ ನಂತರ ಪತಿ ಗಂಗಾಧರಯ್ಯನಿಂದ ಶೋಷಣೆಗೆ ಒಳಗಾಗುತ್ತಾಳೆ. ಹೆಣ್ಣಾದ ಕಾರಣಕ್ಕೆ ಭಾಗ್ಯಳಿಗೆ ವಿದ್ಯೆ ದೊರಕಲಿಲ್ಲ, ನಾಗರೀಕತೆಯ ಅರಿವು ಬರಲಿಲ್ಲ. ಹೆಣ್ಣುಮಕ್ಕಳು ಪುರುಷನಿಗೆ ಅಧೀನವಾಗಿ ಬೆಳೆಯಬೇಕು, ಗಂಡನನ್ನು ದೇವರೆಂದು ತಿಳಿಯಬೇಕು ಎಂದು ಬಾಲ್ಯದಿಂದಲೇ ಮನೆಯವರು ಕಲಿಸಿ, ಸ್ತ್ರೀ ಗುಲಾಮಗಿರಿಗೆ ಒಳಗಾಗುವುದನ್ನು ಅನುಪಮಾ ನಿರಂಜನರವರು ತೋರಿಸುತ್ತಾರೆ. ಈ ಗುಲಾಮಗಿರಿಗೆ ಪುರುಷನಷ್ಟೇ ಸ್ತ್ರೀ ಕೂಡ ಕಾರಣಳು ಎಂಬುದೂ ಇಲ್ಲಿ ತಿಳಿಯುತ್ತದೆ.

ವರದಕ್ಷಿಣೆ ಪಡೆದು ಭಾಗ್ಯಮ್ಮಳನ್ನು ತನ್ನ ಮನೆಗೆ ಗಂಗಾಧರಯ್ಯ ಕರೆದುಕೊಂಡು ಬರುತ್ತಾನೆ. ಅವಳಿಗೆ ಗಂಡನ ಮನೆ ಸೆರೆಮನೆಯಾಗುತ್ತದೆ. ಯಾವಾಗಲೂ ಎಲ್ಲಾ ವಿಷಯಕ್ಕೂ ಸಿಡುಕುವ ಗಂಡ, ಬೆಳಗಿನಿಂದ ರಾತ್ರಿಯವರೆಗೆ ಮನೆಯ ಎಲ್ಲಾ ಕೆಲಸಗಳನ್ನು ಮಾಡಬೇಕಾದ ಪರಿಸ್ಥಿತಿಯಲ್ಲಿ ಗುಲಾಮಳಂತೆ ದುಡಿಯಬೇಕಾದ ಸ್ಥಿತಿಗೆ ಸಿಲುಕುತ್ತಾಳೆ. ತಾನು ಗಂಡ, ಮಕ್ಕಳು, ಮನೆಗೆ ದಾಸಿಯಾಗಿ ಬದುಕಬೇಕಾದ ಸ್ಥಿತಿಗೆ ನೊಂದುಕೊಳ್ಳುತ್ತಾಳೆ. ಓದಬೇಕೆಂಬ ಆಸೆಯಿದ್ದ ತನ್ನ ಮಗಳನ್ನು ಶಾಲೆ ಬಿಡಿಸಿ ಮದುವೆ ಮಾಡಿದ ಗಂಡನ ಮೇಲೆ ರೋಷ ಬರುತ್ತದೆ. ತಾಯಿ–ಮಗಳು ಮಾತನಾಡುವಾಗ ತಮ್ಮಿಂದ ಸಮಾಜಕ್ಕೆ ಏನೂ ಉಪಯೋಗವಿಲ್ಲ, ತಾವು ಭೂಮಿಗೆ ಭಾರ, ನಮ್ಮ ಎಲ್ಲ ಕೆಲಸ–ಸೇವೆಗಳು ನಗಣ್ಯ ಎಂದು ಯೋಚಿಸುತ್ತಾರೆ. ತಮ್ಮ ಈ ಸ್ಥಿತಿಗೆ ಗಂಗಾಧರಯ್ಯನೇ ಕಾರಣ ಎಂದೂ ಕ್ರೋಧಗೊಳ್ಳುತ್ತಾರೆ. ಭಾಗ್ಯಮ್ಮ ಮತ್ತು ಅವಳ ಮಗಳ ಮುಖಾಂತರ ಅನುಪಮಾ ನಿರಂಜನರವರು ಮಹಿಳೆ ತನ್ನ ಮೇಲೆ ಆಗುತ್ತಿರುವ ದೌರ್ಜನ್ಯ, ಅವರ ಗುಲಾಮಗಿರಿಯ ಸ್ಥಿತಿ, ಅವರ ಕೆಲಸ ಕಾರ್ಯಗಳು ಪರಿಗಣನೆಗೆ ಬರದಿರುವ ಸಂಗತಿಗಳನ್ನು ಗುರುತಿಸುತ್ತಿರುವ ಚಿತ್ರಣವನ್ನು ಕೊಡುತ್ತಾರೆ. ಆದರೆ ಈ ಪರಿಸ್ಥಿತಿಯಿಂದ ಹೊರ ಬರಲಾಗದೆ ಅದರಲ್ಲೇ ಸಿಲುಕಿ ಹಾಕಿಕೊಳ್ಳುವುದನ್ನು ತೋರಿಸುತ್ತಾರೆ. ಅನುಪಮಾ ನಿರಂಜನ ಹೇಳುವ "ಹೊಸ ಬಾಳಿಗಾಗಿ ಹಾತೊರೆಯುತ್ತಿದ್ದರೂ ಹಳೆಯ ಬಾಳನ್ನು ಎದುರಿಸಲಾರದೆ ಅದಕ್ಕೇ ಶರಣು ಹೊಕ್ಕಳು, ವಾತಾವರಣದ ಕೂಸಾದ ಭಾಗ್ಯಮ್ಮ" (ಅನುಪಮಾ ನಿರಂಜನ 1998: ಪುಟ 67) ಹೆಣ್ಣು ಹೇಗೆ ಪರಿಸ್ಥಿತಿಯ ಕೈಗೊಂಬೆಯಾಗಿದ್ದಾಳೆ ಎಂಬುದನ್ನು ವ್ಯಕ್ತಪಡಿಸುತ್ತದೆ ಮತ್ತು ಅವಳ ಹೊಸಬಾಳಿಗೆ ಸುತ್ತಲಿನ ವಾತಾವರಣ ಬದಲಾಗಬೇಕೆಂಬ ಅಭಿಪ್ರಾಯ ಬರುತ್ತದೆ.

ಮಧ್ಯಮ ವರ್ಗದ ಮಹಿಳೆಯರ ರೀತಿಯೇ ಶ್ರೀಮಂತ ಕುಟುಂಬಕ್ಕೆ ಸೇರಿದ ಸ್ತ್ರೀಯರೂ ಸಹ ಪುರುಷ ಸಮಾಜದ ದೌರ್ಜನ್ಯ, ಶೋಷಣೆಗಳನ್ನು ಅನುಭವಿಸುವ ಮತ್ತು ಆ

ಶೋಷಣೆಯಿಂದ ಹೊರಬರಲಾರದೆ ನಲುಗುವ ಪರಿಸ್ಥಿತಿಯನ್ನು ಸುಭದ್ರಾಳ ಪಾತ್ರದ ಮೂಲಕ ಅನುಪಮಾ ನಿರಂಜನರವರು ಚಿತ್ರಿಸಿದ್ದಾರೆ. ಸುಭದ್ರಾಳ ಮದುವೆಯ ತಯಾರಿಯಲ್ಲಿದ್ದ ಅವಳ ತಂದೆ ತಾಯಿಯರು ರೋಗಕ್ಕೆ ತುತ್ತಾಗಿ ಅಕಾಲಿಕ ಮರಣಕ್ಕೀಡಾಗುತ್ತಾರೆ. ಅನಾಥಳಾದ ಸುಭದ್ರಾ ಮತ್ತು ಅವಳ ತಮ್ಮ ವಿಶ್ವನನ್ನು ನೆಂಟರಿಷ್ಟರು ಯಾರೂ ಮನೆಯಲ್ಲಿರಿಸಿಕೊಳ್ಳುವುದಿಲ್ಲ. ಬದುಕು ರೂಪಿಸಿಕೊಳ್ಳಲು ಇಬ್ಬರೂ ಪಟ್ಟಣದ ದಾರಿ ಹಿಡಿಯುತ್ತಾರೆ. ಆದರೆ ಪಟ್ಟಣದಲ್ಲಿ ಎಲ್ಲಿಯೂ ಕೆಲಸ ಸಿಗುವುದಿಲ್ಲ. ಮನೆಗೆಲಸ ಮಾಡಲು ಪ್ರಯತ್ನಿಸಿದರೆ ಸುಭದ್ರಾ ವಯಸ್ಸಿಗೆ ಬಂದ ಹೆಣ್ಣಾದ ಕಾರಣ ಮನೆಗೆಲಸವೂ ಸಿಗುವುದಿಲ್ಲ. ನ್ಯಾಯವಾಗಿ ದುಡಿದು ಬದುಕಲು ಅವಕಾಶಗಳೇ ದೊರೆಯದಿದ್ದಾಗ ಹೆಣ್ಣಿನ ಮನಸ್ಥಿತಿ ಹೇಗಾಗುತ್ತದೆಂಬುದನ್ನು ಅನುಪಮಾ ನಿರಂಜನರವರು ಈ ರೀತಿ ಹೇಳಿದ್ದಾರೆ "ಆಗ ಸುಭದ್ರಾಗೆ ಏನಾದರೂ ಮಾಡಿ ಬದುಕಬೇಕೆನ್ನುವ ಛಲ ಬಂತು. ಹೇಗಾದರೂ ಸರಿ ಅಂತೂ ಬದುಕಬೇಕು, ತನ್ನನ್ನಿಷ್ಟು ಕೀಳಾಗಿ ಕಂಡ ಸಮಾಜದೆಡೆಗೆ ಕಠಾರಿ ಹಾಕಿ ಇರಿಯಬೇಕು ಎಂಬ ಮನೋಭಾವ ತಲೆಯೆತ್ತಿ ನಿಂತಿತು. ಇಡೀ ಮೂರು ದಿವಸ ಯೋಚಿಸಿ ಕೊನೆಗೆ ನಿರ್ಧಾರಕ್ಕೆ ಬಂದಳು, "ನನ್ನ ಸರ್ವಸ್ವ ಹೋದರೂ ಚಿಂತೆಯಿಲ್ಲ ವಿಶ್ವ ಚೆನ್ನಾಗಿ ಓದಿ ಬದುಕಬೇಕು" (ಅನುಪಮಾ ನಿರಂಜನ 1998: ಪುಟ 69). ತನ್ನ ಮಾನ, ಶೀಲ ಹೋದರೂ ಚಿಂತೆಯಿಲ್ಲ ಈ ಸಮಾಜದಲ್ಲಿ ತಮ್ಮನಾದರೂ ಚೆನ್ನಾಗಿ ಬದುಕಬೇಕು ಎಂದು ನಿರ್ಧರಿಸಿದ ಸುಭದ್ರಾ ವೇಶ್ಯಾವೃತ್ತಿಯಲ್ಲಿ ತೊಡಗುತ್ತಾಳೆ. ಇದು ಒಂಟಿ ಹೆಣ್ಣನ್ನು ಸಮಾಜ ಅಮಾನವೀಯತೆಯಿಂದ ನಡೆಸಿಕೊಳ್ಳುವುದನ್ನು ಮತ್ತು ಅವಳಿಗೆ ಸ್ವಾವಲಂಬಿಯಾಗಿ ಬದುಕಲು ಬಿಡದೆ ದುರಂತಮಯ ಜೀವನಕ್ಕೆ ದೂಕುವ ರೀತಿಯನ್ನು ಅನುಪಮಾ ನಿರಂಜನರವರು ಹಿಡಿದಿಟ್ಟಿರುವುದನ್ನು ಕಾಣಬಹುದು. ಸುಭದ್ರಾ ಹೇಳುವ "ಪ್ರಪಂಚದಲ್ಲೆಲ್ಲಾ ಇಂತಹ ಜನರೇನೆ? ಒಬ್ಬ ಹೆಂಗಸು ಮಾನವಾಗಿ ಬಾಳಲು ಅವಕಾಶ ಕೊಡದಂತಹ ಮನುಷ್ಯರೇನೇ?" (ಅನುಪಮಾ ನಿರಂಜನ 1998: ಪುಟ 68) ಎನ್ನುವ ಮಾತುಗಳು ಮೇಲಿನ ಅಂಶವನ್ನು ಸ್ಪಷ್ಟೀಕರಿಸುತ್ತವೆ.

ಬಡ ಕುಟುಂಬದ ಹೆಣ್ಣೊಬ್ಬಳ ಜೀವನ ಹೋರಾಟವನ್ನು ಚಿತ್ರಿಸುತ್ತಾ ಸಮಾಜದಲ್ಲಿರುವ ಅಸಮಾನತೆಯನ್ನು ಅವಳು ಕೇಳುವ ಪ್ರಶ್ನೆಗಳ ಮುಖಾಂತರ ಅನುಪಮಾ ನಿರಂಜನರವರು ತೋರಿಸುತ್ತಾರೆ. ಈ ಕಥೆಯಲ್ಲಿ ಬರುವ ಲಚುಮಿ ಧೈರ್ಯವಂತ ಮಹಿಳೆ. ಮನೆಯವರು ಅವಳ ಪ್ರೀತಿಯನ್ನು ಒಪ್ಪದೆ ಹೋದಾಗ ನಂಜನೊಡನೆ ಓಡಿ ಬಂದು ಪಟ್ಟಣದಲ್ಲಿ ಜೀವನ ಪ್ರಾರಂಭಿಸಿದವಳು. ಇಲ್ಲಿ ಅನುಪಮಾರವರು ಹೆಣ್ಣು ತನ್ನ ಆಸೆ ಮತ್ತು ಜೀವನದ ದಿಕ್ಕುಗಳನ್ನು ನಿರ್ಧರಿಸುವಲ್ಲಿ ತೋರುವ ಧೈರ್ಯ ಮತ್ತು ತೀರ್ಮಾನ ತೆಗೆದುಕೊಳ್ಳುವ ವಸ್ತುವನ್ನು ಕಟ್ಟಿದ್ದಾರೆ.

ಧೈರ್ಯದಿಂದ ಮುನ್ನುಗ್ಗಿದ ಲಚುಮಿ ಮತ್ತು ಅವಳ ಗಂಡ ನಂಜಯ್ಯನಿಗೆ ಒಂದು ಮಿಲ್ಲಿನಲ್ಲಿ ಕೆಲಸ ಸಿಗುತ್ತದೆ. ಆದರೆ ಅದರಲ್ಲಿ ಬರುವ ಆದಾಯ ಜೀವನಕ್ಕೆ ಸಾಕಾಗುವುದಿಲ್ಲ, ಜೊತೆಗೆ ಶೋಷಣೆ. ಐದು ಮಕ್ಕಳೊಂದಿಗಿನ ಸಂಸಾರವನ್ನು ಬಡತನದಲ್ಲಿಯೇ ಕಳೆಯುತ್ತಾರೆ. ಹೊಟ್ಟೆ ತುಂಬ ಊಟವಿಲ್ಲದೆ, ಧರಿಸಲು ಚೆನ್ನಾಗಿರುವ ಬಟ್ಟೆಯಿಲ್ಲದೆ ಅವರ ಮಕ್ಕಳು ಅನಾರೋಗ್ಯದಿಂದ ಬಳಲುತ್ತಿರುತ್ತವೆ. ಸಮಾಜದಲ್ಲಿರುವ ಶ್ರೀಮಂತರ ಮಕ್ಕಳನ್ನು ಕಂಡಾಗ 'ಲಚುಮಿ' ಕೇಳುವ "ತನ್ನ ಮಕ್ಕಳು ಮಾಡಿದ ಅನ್ಯಾಯವೇನು?" (ಅನುಪಮಾ ನಿರಂಜನ 1998: ಪುಟ 74) ಪ್ರಶ್ನೆ ಸಮಾಜದಲ್ಲಿರುವ ಅಸಮಾನತೆಯನ್ನು ಪ್ರಕಟಿಸುತ್ತದೆ.

ಕಥೆಯ ಕೊನೆಯಲ್ಲಿ ಹೇಳುವ "ಆ ಮೂರು ಮನೆಗಳ ಅಂತಸ್ತು, ಘನತೆ, ಗಾಂಭೀರ್ಯ ಎಲ್ಲಾ ಬೇರೆ ಬೇರೆ, ಆದರೆ ಆ ಜೀವಿಗಳ ಮನದ ಮಿಡಿತ? ಹೊಸತನಕ್ಕಾಗಿ ಕಾದು ಕುಳಿತ ಅವರ ಹೃದಯದ ಕಾವು? ಒಂದೇ! ಒಂದೇ!! ಆ ಮೂವರ ನೋವು ಆ ಮೂರು ಮಂದಿಯವೇ ಅಲ್ಲ. ಇಡೀ ಸ್ತ್ರೀ ಸಮಾಜದ ನೋವು ವೇದನೆಯ ಮೂರು ರೂಪ ಅವು. ಅನ್ಯಾಯ ದಬ್ಬಾಳಿಕೆಗಳನ್ನು ದೂರ ಸರಿಸಬೇಕೆಂದು ಹಾತೊರೆದರೂ ಹೆದರಿಕೆಯಿಂದ ಹಿಂಜರಿಯುವ ಭಾಗ್ಯಮ್ಮ, ಸಮಾಜದ ಕ್ರೂರ ಸವಾಲಿಗೆ ಉತ್ತರವಾಗಿ ಬದುಕಿ ಅಂಥ ಹೊಡೆತಗಳಲ್ಲೂ ತಲೆಯೆತ್ತಿ ನಿಲ್ಲಲಾಶಿಸುವ ಸುಭದ್ರ, ದಿನವೆಲ್ಲಾ ದುಡಿದರೂ ಹೊಟ್ಟೆ ತುಂಬುವ ಮಾರ್ಗ ಕಾಣದೆ ಮಾಲೀಕರ ಅನ್ಯಾಯ ಕಂಡು ರೋಸಿ ಮುಂಬರುವ ಹೊಸ ರಾಜ್ಯಕ್ಕಾಗಿ ಕಾದು ಕುಳಿತ ಲಚುಮಿ" (ಅನುಪಮಾ ನಿರಂಜನ 1998: ಪುಟ 75) ಮಾತುಗಳು ಅನುಪಮಾ ನಿರಂಜನರವರು ಸಮಾಜದಲ್ಲಿ ವಿವಿಧ ವರ್ಗದ ಮಹಿಳೆಯರು ಅನುಭವಿಸುತ್ತಿದ್ದ ವಿಭಿನ್ನ ರೀತಿಯ ಸಮಸ್ಯೆ, ಶೋಷಣೆಗಳನ್ನು, ಸ್ತ್ರೀ ಸಮಾಜದ ಮೇಲಾಗುತ್ತಿದ್ದ ಅನ್ಯಾಯವನ್ನು ಕಥಾವಸ್ತುವಾಗಿ ಚಿತ್ರಿಸಿರುವುದನ್ನು ಪ್ರಕಟಿಸುತ್ತದೆ.

ತ್ರಿವೇಣಿಯವರು ತಮ್ಮ ಕಥೆಗಳಲ್ಲಿ ಕುಟುಂಬ ಮತ್ತು ಸಮಾಜದಲ್ಲಿರುವ ಹೆಣ್ಣಿನ ಮೇಲಿನ ಶೋಷಣೆ, ದೌರ್ಜನ್ಯ, ಅಸಮಾನತೆ ಇವುಗಳನ್ನು ಕಂಡು ತಮ್ಮ 'ಕೀಲುಗೊಂಬೆ' ಕಾದಂಬರಿಯಲ್ಲಿ ಸೀತೆಯ ಪಾತ್ರದ ಮುಖಾಂತರ ಹೆಣ್ಣಿನ ಶೋಷಣೆ, ಅವಳ ಮೇಲಿನ ಲೈಂಗಿಕ ದೌರ್ಜನ್ಯ ಮತ್ತು ಅವಳನ್ನು ಗಂಡ ಗುಲಾಮನಂತೆ ನಡೆಸಿಕೊಳ್ಳುವುದನ್ನು ಚಿತ್ರಿಸಿ ಹೆಣ್ಣಿನ ಅಸಹಾಯಕ ಪರಿಸ್ಥಿತಿಯನ್ನು ತೋರಿಸಿದ್ದಾರೆ. ಗಂಡಿನ ದೌರ್ಜನ್ಯಕ್ಕೊಳಗಾದ ಸೀತೆಯು ಅದನ್ನು ಮುಕ್ತವಾಗಿ ಪ್ರತಿಭಟಿಸಲಾಗದೆ ಅಸಹಾಯಕಳಾಗಿ ಕೆಲವು ಬಾರಿ ಈ ಪರಿಸ್ಥಿತಿಗೆ ಕಾರಣರು ಯಾರು? ಎಂದು ತನ್ನನ್ನು ತಾನು ಪ್ರಶ್ನಿಸಿಕೊಳ್ಳುತ್ತಾಳೆ. ಆದರೆ ಕಾದಂಬರಿಯಲ್ಲಿ ಮಧುರವಾಣಿ

ಪಾತ್ರದ ಮೂಲಕ ಪ್ರತಿಭಟನೆಯನ್ನು ಚಿತ್ರಿಸುತ್ತಾರೆ. ಒಂದು ಬಾರಿ ಸೀತೆಯು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಮಧುರವಾಣಿ ಮತ್ತು ಇತರೆ ಹೆಂಗಸರ ನಡುವೆ ಮಾತುಕತೆ ಈ ಕೆಳಕಂಡಂತೆ ಸಾಗುತ್ತದೆ: ಮಧುರವಾಣಿಯ ಪ್ರತಿಭಟನೆಯ ಮಾತುಗಳನ್ನು ಕೇಳಿದ ರುಕ್ಮಿಣಮ್ಮ "ಗಂಡ ಎಂದರೆ ಏನೂಂತ ತಿಳಿದುಕೊಂಡಿದ್ದೀಯ, ಗಂಡ ಹೊಡೆಯಲಿ, ಬಡಿಯಲಿ ಸಂಸಾರದಲ್ಲಿ ಸಾಮರಸ್ಯವಿರದಿರಲಿ ಹೆಂಡತಿಯಾದವಳು ತಗ್ಗಿಬಗ್ಗಿ ಗಂಡನನ್ನು ನೆರಳಿನಂತೆ ಅನುಸರಿಸಿಕೊಂಡಿರಬೇಕಾದುದು ಧರ್ಮ" ಎಂದು ಹೇಳುತ್ತಾಳೆ. ಇದಕ್ಕೆ ಪ್ರತಿಯಾಗಿ ಮಧುರವಾಣಿಯು "ನೀವು ಯಾವುದನ್ನು ಧರ್ಮ ಎಂದು ಹೇಳುತ್ತೀರೊ ಅದನ್ನು ನಾನು ಹೇಡಿತನ ಎಂದು ಹೇಳ್ತೀನಿ. ಗಂಡನ ಮನೇಲಿ ಶಿಕ್ಷೆ ಅನುಭವಿಸಿಕೊಂಡು ಮೂಗೆತ್ತಿನಂತೆ ಬಾಳುವುದಕ್ಕಿಂತ, ಆ ಗಂಡನನ್ನು ತ್ಯಜಿಸಿ ಕೂಲಿ ಮಾಡೋದು ವಾಸಿ. ಎರಡು ತುತ್ತಿಗಾಗಿ ಹೆಂಗಸು ಅಭಿಮಾನ ತೊರೆದು ಗಂಡನ್ನು ಆಶ್ರಯಿಸಬೇಕೆ? ದೇವರು! ಗಂಡನ್ನು ದೇವರು ಎನ್ನಬೇಡಿ. ದೇವತ್ವಕ್ಕೇ ಅಪಮಾನ. ದೇವರು ಕರುಣಾಮಯಿ, ಭಕ್ತವತ್ಸಲ, ಹೆಣ್ಣು ಹುಟ್ಟಿತೂಂತ ಹೆಂಡತೀನ ಹಿಂಸೆ ಮಾಡೋನು, ಹೆಂಡತೀನ ಹಿಡಿದು ಚಚ್ಚೋನು ತನ್ನ ಮಕ್ಕಳಲ್ಲೂ ಆದರ ಇಲ್ಲದೆ ಇರೋ ಪ್ರಾಣೀನ ದೇವರೂಂತ ಹೇಗೆ ಹೇಳ್ತೀರಿ. ದೇವರು ಅಷ್ಟು ಅಗ್ಗವಾದ ವ್ಯಕ್ತಿಯಲ್ಲ. ಅವನನ್ನು ಅಗೌರವಿಸಬೇಡಿ" (ತ್ರಿವೇಣಿ 1993: ಪುಟ 134) ಎಂದು ಹೇಳುವುದು ತ್ರಿವೇಣಿಯವರು ದೌರ್ಜನ್ಯವೆಸಗುವ ಪುರುಷರ ವಿರುದ್ಧದ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ಕಾಣುತ್ತದೆ.

ಜೀವನದ ವಿವಿಧ ಹಂತಗಳಲ್ಲಿ ಹೆಣ್ಣು ಹೇಗೆ ತನ್ನ ಕರ್ತವ್ಯ ಅಥವಾ ಕ್ರಿಯಾಶಕ್ತಿಯನ್ನು ಕಳೆದುಕೊಂಡು ಪುರುಷ ನಿರ್ಮಿತ ಸಂಸಾರ ಬಂಧನದೊಳಗೆ ಸಿಲುಕಿ, ಆ ಬಂಧನದ ಚೌಕಟ್ಟಿನಲ್ಲಿ ಸಿಗುವ ಆನಂದವನ್ನೇ ಅರಸಿ, ಅದರಿಂದ ಆಚೆಗೆ ಬರಲಾರದೆ ಅದರಲ್ಲೇ ಮತ್ತೆ ಸಿಲುಕುವ ಕಥಾವಸ್ತುವನ್ನು ವೀಣಾ ಶಾಂತೇಶ್ವರರ 'ಹೆಣ' ಕಥೆ ಚಿತ್ರಿಸುತ್ತದೆ. ವಿದ್ಯಾರ್ಥಿ ಜೀವನದಲ್ಲಿ ಕವಿತೆಗಳನ್ನು ಬರೆಯುವ ಹವ್ಯಾಸವನ್ನಿಟ್ಟುಕೊಂಡಿದ್ದ ಕಥಾನಾಯಕಿ ಮದುವೆಯಾದ ಮೇಲೆ ಕವನ ಬರೆಯುವುದನ್ನು ನಿಲ್ಲಿಸಿರುತ್ತಾಳೆ. ಕಾರಣವೆಂದರೆ ಮದುವೆಯ ನಂತರ ಸಂಸಾರದ ಕೆಲಸಕಾರ್ಯಗಳಲ್ಲಿ ಮಗ್ನಳಾಗಿ ಕವನ ಬರೆಯುವ ಕ್ರಿಯಾಶಕ್ತಿಯನ್ನು ಕಳೆದುಕೊಳ್ಳುತ್ತಾಳೆ. ಆ ಕ್ರಿಯಾಶಕ್ತಿ ಅವಳಲ್ಲಿ ಈಗ ಜೀವಂತವಾಗಿಲ್ಲ ಹೆಣವಾಗಿದೆ ಎಂದು ಸಮೀಕರಿಸಿರುವುದು ಕಂಡುಬರುತ್ತದೆ. ಪತ್ರಿಕೆಯ ಸಂಪಾದಕರೊಬ್ಬರು ಕಥಾನಾಯಕಿಯನ್ನು ಕವನ ಬರೆದುಕೊಡಲು ಕೇಳಿದಾಗ ಅವಳಲ್ಲಿ ಹೆಣವಾಗಿದ್ದ ಕವಿತೆ ಬರೆಯುವ ಕ್ರಿಯಾಶಕ್ತಿ

ಜಾಗೃತಗೊಂಡು, ಅವಳು ಹೇಗೆ ತನ್ನಲ್ಲಿದ್ದ ಶಕ್ತಿಯನ್ನು ಮದುವೆಯ ನಂತರ ಕಳೆದುಕೊಂಡಿದ್ದಾಳೆ ಎಂದು ತೋರಿಸುತ್ತದೆ. ಅಂದರೆ ಹೆಣ್ಣು ವೈವಾಹಿಕ ಜೀವನದಲ್ಲಿ ಸಂಸಾರದ ವಿಷಯಗಳಲ್ಲಿ ತೊಡಗಿಕೊಂಡು ತನ್ನ ಶಕ್ತಿ ಸಾಮರ್ಥ್ಯಗಳನ್ನು, ಕನಸುಗಳನ್ನು ಮರೆಯುತ್ತಿದ್ದಾಳೆಂದು ತಿಳಿಯುತ್ತದೆ. ಈ ಕಥೆಯಲ್ಲಿ ಲೇಖಕಿಯರು ಎರಡು ರೀತಿಯ ಚಿತ್ರಣಗಳನ್ನು ಕೊಡುತ್ತಾರೆ. ಒಂದು, ವಿವಾಹದ ನಂತರ ತನ್ನೆಲ್ಲ ಕನಸು ಮತ್ತು ಇಷ್ಟಗಳನ್ನು ಸಾಯಿಸಿ ಪುರುಷ ನಿರ್ಮಿತ ಸಂಸಾರಕ್ಕೆ ಹೊಂದಿಕೊಳ್ಳುವುದು ಮತ್ತು ಎರಡು, ಈ ವ್ಯವಸ್ಥೆಯಲ್ಲಿ ದೊರಕುವ ಸುಖಸಂತೋಷಗಳಿಗೆ ಸೋತು ಹೆಣ್ಣು ತನ್ನ ಶಕ್ತಿಯನ್ನು ಮರೆತು ಅದರಿಂದ ಹೊರಬರದೆ ಇರುವುದು. ಇದರಿಂದ ತಿಳಿಯುವುದೇನೆಂದರೆ ಹೆಣ್ಣಿಗೆ ತನ್ನ ಬೇಕು ಬೇಡಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗದ ದ್ವಂದ್ವ ಮನಸ್ಥಿತಿಯಲ್ಲಿರುವ ಪರಿಸ್ಥಿತಿ. ಇಂತಹ ಪರಿಸ್ಥಿತಿಯಿಂದ ಹೊರಬಂದು ಹೆಣವಾಗಿರದೆ ಜೀವಿಸಬೇಕೆಂಬ ಧ್ಯೇಯವನ್ನು ಕಥಾವಸ್ತು ಪ್ರಚುರಪಡಿಸುತ್ತದೆ.

ಗಂಡನಿಲ್ಲದೆ, ಬದುಕಿಗೆ ಬೇರೆ ಆಧಾರವಿಲ್ಲದೆ, ತಂದೆಯ ಮನೆಯಲ್ಲೇ ಉಳಿದ ಹೆಣ್ಣೊಬ್ಬಳನ್ನು ಕುಟುಂಬ ಮತ್ತು ಸಮಾಜ ಕಾಣುವ ರೀತಿ ಮತ್ತು ತನ್ನ ಅಸಹಾಯಕತೆ ಹಾಗೂ ದುಃಖವನ್ನು ಮರೆಯಲು ಅವಳು ಮನೋಸ್ಥಿತಿಯನ್ನು ಬದಲಾಯಿಸಿಕೊಂಡು ತನ್ನ ಜೀವನವನ್ನೇ ಕಳೆದುಕೊಳ್ಳುವ ಕಥಾವಸ್ತುವನ್ನು ವೈದೇಹಿಯವರು 'ಅಕ್ಕು' ಕಥೆಯಲ್ಲಿ ಚಿತ್ರಿಸಿದ್ದಾರೆ. 'ಅಕ್ಕು' ಪದಕ್ಕೆ 'ಜೀರ್ಣವಾಗು' ಅಥವಾ 'ಲಯವಾಗು' ಎಂಬ ಅರ್ಥವನ್ನು ಕನ್ನಡ ಸಾಹಿತ್ಯ ಪರಿಷತ್ತಿನ 'ಸಂಕ್ಷಿಪ್ತ ಕನ್ನಡ ನಿಘಂಟು' (ಪರಿಷ್ಕೃತ) (2001) ಸೂಚಿಸುತ್ತದೆ. ವೈದೇಹಿಯವರು ತಮ್ಮ ಕಥೆಗೆ 'ಅಕ್ಕು' ಶೀರ್ಷಿಕೆಯನ್ನು ನೀಡಿ, ಪಾತ್ರಕ್ಕೂ ಅಕ್ಕು ಹೆಸರನ್ನೇ ಕೊಟ್ಟು ಅಸಹಾಯಕ ಹೆಣ್ಣಿನ ಜೀವನ ಪುರುಷ ಪ್ರಧಾನ ಸಮಾಜದಲ್ಲಿ ಲಯವಾಗುವ ರೀತಿಯನ್ನು ಚಿತ್ರಿಸಿ ಹೆಸರು ಅನ್ವರ್ಥವಾಗುವಂತೆ ತೋರಿಸಿದ್ದಾರೆ. ಕಥೆಯ ಮುಖ್ಯ ಪಾತ್ರ ಅಕ್ಕು ಮದುವೆಯಾಗುವಾಗ ಎಲ್ಲ ಹೆಣ್ಣಿನಂತೆ ಸಹಜವಾಗಿರುತ್ತಾಳೆ. ಆದರೆ ಅವಳ ಗಂಡ ಮೈಗಳ್ಳನೂ, ಬೇಜವಾಬ್ದಾರಿಯವನೂ ಮತ್ತು ಇತರೆ ಹೆಣ್ಣುಗಳನ್ನು ಬಯಸುವವನೂ ಆಗಿದ್ದು, ಜವಾಬ್ದಾರಿಯಿಂದ ನುಣುಚಿಕೊಳ್ಳಲು ಹೆಂಡತಿಯನ್ನು ಬಿಟ್ಟು ಯಾವುದೋ ಸ್ವಾಮೀಜಿಯ ಹಿಂದೆ ಹೋಗುತ್ತಾನೆ. ಜೀವನಕ್ಕಾಗಿ ಅಕ್ಕು ತಂದೆಯ ಮನೆಯನ್ನೇ ಆಶ್ರಯಿಸಿ ಅಲ್ಲಿ ಎಲ್ಲರ ತಾತ್ಸಾರಕ್ಕೆ ಒಳಗಾಗುತ್ತಾಳೆ. ಗಂಡ ಬಿಟ್ಟು ಹೋಗಿದ್ದು ಅವಳಲ್ಲಿ ಪುರುಷರ ಬಗ್ಗೆ ರೋಷ ಮತ್ತು ದ್ವೇಷವನ್ನು ಹುಟ್ಟಿಸುತ್ತದೆ. ಇದೆಲ್ಲ ಅವಳ ಮನಸ್ಸಿನ ಮೇಲೆ ಪರಿಣಾಮ ಬೀರಿ ಮನೋವಿಕಾರಕ್ಕೊಳಗಾಗುತ್ತಾಳೆ. ಯಾರ ನಿರ್ಬಂಧವಿಲ್ಲದೆ, ಯಾರಿಗೂ ಹೆದರದೆ ಬೀದಿ ಸುತ್ತುವುದು, ಹೇಗೆಂದರೆ ಹಾಗೆ ಇರುವುದನ್ನು ಬೆಳೆಸಿಕೊಳ್ಳುತ್ತಾಳೆ.

ವೈದೇಹಿಯವರು ಅಕ್ಕುವಿನ ಈ ಬದಲಾವಣೆಯ ಮುಖಾಂತರ ಪುರುಷನಿಂದ ಅನ್ಯಾಯಕ್ಕೊಳಗಾದ ಹೆಣ್ಣೊಬ್ಬಳು ಮನೋವಿಕಲ್ಪಕ್ಕೆ ಒಳಗಾಗಿ ಅವಳ ಜೀವನವೇ ನಿಸ್ಸಾರವಾಗುವ ರೀತಿಯನ್ನು ತೋರಿಸಿದ್ದಾರೆ.

ಸಮಾಜದಲ್ಲಿ ವ್ಯಕ್ತಿಯೊಬ್ಬನ ಬದುಕು ಯಾವುದೇ ಕಾರಣಗಳಿಂದಾದರೂ ಪರಾವಲಂಬಿಯಾಗಿ, ಗೊತ್ತುಗುರಿಯಿಲ್ಲದೆ ಛಿದ್ರವಾದಾಗ ಆ ವ್ಯಕ್ತಿಯ ಜೀವನವನ್ನೇ ಇತರರು ತಾತ್ಸಾರವಾಗಿ ಕಾಣುವ ಹಾಗೂ ಆ ವ್ಯಕ್ತಿಯ ಮೇಲೆ ದೌರ್ಜನ್ಯವೆಸಗುವ ರೀತಿಯನ್ನು ಲೇಖಕರು ಈ ಕಥೆಯಲ್ಲಿ ದೊಡ್ಡತ್ತೆ ಮತ್ತು ವಾಸು ಚಿಕ್ಕಪ್ಪಯ್ಯ ಪಾತ್ರಗಳ ಮುಖಾಂತರ ಚಿತ್ರಿಸಿದ್ದಾರೆ. ದೊಡ್ಡತ್ತೆ ಎಲ್ಲರಿಗೂ ಬುದ್ದಿ ಹೇಳುತ್ತ ರೀತಿ ನೀತಿಗಳನ್ನು ತಿಳಿಸುತ್ತ ಇರುವವರು, ಕೆಲವು ಸಂದರ್ಭಗಳಲ್ಲಿ ಸುತ್ತಮುತ್ತ ಯಾರಿದ್ದಾರೆ ಎಂಬುದನ್ನು ಮರೆತು ಅಕ್ಕುವಿನ ಬಗ್ಗೆ ಕೆಟ್ಟ ರೀತಿಯ ಹಾಸ್ಯ ಮಾಡುವುದು ಒಬ್ಬ ವ್ಯಕ್ತಿಯನ್ನು ಕೀಳಾಗಿ ಕಾಣುವುದನ್ನು ತೋರಿಸುತ್ತದೆ. ಇದೇ ರೀತಿ ವಾಸು ಚಿಕ್ಕಪ್ಪಯ್ಯ ಅವಕಾಶ ಸಿಕ್ಕಾಗಲೆಲ್ಲಾ ಅಕ್ಕುವನ್ನು ಹೊಡೆಯುವುದು, ಹಿಂಸಿಸುವುದು ಮಾಡುತ್ತಾನೆ. ಇದು ಅಸಹಾಯಕ ಹೆಣ್ಣಿನ ಮೇಲೆ ನಡೆಸುವ ಅಪಹಾಸ್ಯ, ಕ್ರೌರ್ಯ ಮತ್ತು ದೌರ್ಜನ್ಯವನ್ನು ತೋರಿಸುತ್ತದೆ. ಕಥೆಯ ಎಲ್ಲ ಪಾತ್ರಗಳು ಅಕ್ಕುವನ್ನು ನಿರ್ಲಕ್ಷ್ಯ ಮತ್ತು ತಾತ್ಸಾರದಿಂದ ನೋಡುತ್ತಾರೆಯೇ ವಿನಃ ಯಾರೂ ಅವಳ ಸಮಸ್ಯೆಯೇನು ಅದಕ್ಕೆ ಕಾರಣ ಮತ್ತು ಪರಿಹಾರವೇನು ಎಂದು ಯೋಚಿಸುವುದಿಲ್ಲ.

ಅಕ್ಕುವಿನ ತಂದೆ ಅಜ್ಜಯ್ಯ ಅವಳ ಗಂಡ ಸಂಕಪ್ಪನಿಗೆ "ಸಂಕಪ್ಪ ಆದದ್ ಆಯ್ತ್, ನಿನ್ನಿಂದ್ಲೇ ಆದ್ ಈ ಕರ್ಮನ್ನ ನೀನೇ ಅನುಭವಿಸ್ಕ, ಪೋಟ್ಬೋ ಪೋಂಕೋ ಅವ್ಳ್ ಇರಾದ್ ನಿನ್ನತ್ರ, ಎರಡು ದಿವಸ ಇದ್, ಕರ್ಕಂಡ್ ನಡೆ" (ಸುಬ್ಬಣ್ಣ ಕೆ.ವಿ. ನೆನಪಿನ 'ಮೊದಲ ಓದು' ಪುಸ್ತಕ ಮಾಲೆ 2006: ಪುಟ 12) ಎಂದು ಹೇಳುತ್ತಾರೆ. ಇಲ್ಲಿ ಅಕ್ಕುವಿನ ಸಮಸ್ಯೆಗೆ ಅವಳ ಗಂಡನೇ ಕಾರಣ, ಅವನೇ ಅದನ್ನು ಸರಿಪಡಿಸಬೇಕು ಎಂದು ತಿಳಿಯುತ್ತದೆ. ಆದರೆ ಊರು ಬಿಟ್ಟು ಹೋದ ಸಂಕಪ್ಪ ವಾಪಸ್ಸು ಬರುವವರೆಗೂ ಯಾರೂ ಅಕ್ಕುವಿನಲ್ಲಿ ಆಗುತ್ತಿರುವ ಮಾನಸಿಕ ಬದಲಾವಣೆಗಳನ್ನು ಗಮನಿಸಿ ಅದಕ್ಕೆ ಪರಿಹಾರ ಕಂಡುಹಿಡಿಯಲು ಪ್ರಯತ್ನಿಸದಿರುವುದು ಅಬಲೆ ಹೆಣ್ಣನ್ನು ಕುಟುಂಬ ಮತ್ತು ಸಮಾಜ ಹೇಗೆ ಕಡೆಗಣಿಸುತ್ತದೆ ಎಂಬುದನ್ನು ವ್ಯಕ್ತಪಡಿಸುತ್ತದೆ.

ಹೆಣ್ಣು ಸಹನಾಶೀಲೆ ಮತ್ತು ತನ್ನ ಗಂಡ ಹಾಗೂ ಸಂಸಾರದ ವಿಷಯ ಬಂದಾಗ ಎಂತಹ ಕಷ್ಟಗಳನ್ನಾದರೂ ಅನುಭವಿಸಿ ಸಂಸಾರವನ್ನು ಉಳಿಸಿಕೊಳ್ಳಲು ಪ್ರಯತ್ನಿಸುವವಳು. ಇದೇ ಕಾರಣದಿಂದ ಅವಳ ಮೇಲೆ ಅನ್ಯಾಯ, ಮೋಸಗಳು ನಡೆಯುತ್ತಿರುತ್ತವೆ. ಈ ಅನ್ಯಾಯ,

ಮೋಸಗಳು ಮಿತಿ ಮೀರಿ ಸ್ವಾಭಿಮಾನಕ್ಕೆ ಧಕ್ಕೆಯಾದಾಗ ಸಹನೆ ಮೀರಿ ಅವಳು ಸಿಡಿದೆದ್ದು ಪ್ರತಿಭಟಿಸುವ ಮತ್ತು ಅಂತಹ ಸಂಸಾರ ಬಂಧನವನ್ನು ತೊರೆಯುವ ಕಥಾವಸ್ತುವನ್ನು ಗೀತಾ ನಾಗಭೂಷಣರವರು 'ಅತಿಕ್ರಮಣ' ಕಥೆಯಲ್ಲಿ ತೋರಿಸಿದ್ದಾರೆ. ಈ ಕಥೆಯ ಶಾಣಮ್ಮ ಮತ್ತು ಕಮಲಿ ತಮಗಾದ ಅವಮಾನಕ್ಕೆ ವಿರುದ್ಧವಾಗಿ ನಿಲ್ಲುವ ಪಾತ್ರಗಳಾಗಿ ಮತ್ತು ಅವರ ಗಂಡ ಯಮನ್ಯಾ ಹೆಣ್ಣನ್ನು ಅವಮಾನಿಸಿ, ಶೋಷಿಸುವ ಪಾತ್ರವಾಗಿ ಕಾಣುತ್ತವೆ. ಈ ಹಿನ್ನೆಲೆಯಲ್ಲಿ ಅತಿಕ್ರಮಣ ಕಥೆಯನ್ನು ವಿಶ್ಲೇಷಿಸೋಣ. ಯಮನ್ಯಾ ಮೈಗಳ್ಳ, ಜವಾಬ್ದಾರಿಯಿಲ್ಲದ, ಸ್ತ್ರೀಲೋಲುಪನಾಗಿದ್ದು, ಕುಡಿತ, ಜೂಜು ಮುಂತಾದ ಕೆಟ್ಟ ಚಟಗಳನ್ನು ಬೆಳೆಸಿಕೊಂಡು ಹೆಂಡತಿಯರು ದುಡಿದಿದ್ದರಲ್ಲಿ ಹಣ ತೆಗೆದುಕೊಂಡು ಜೀವಿಸುತ್ತಿದ್ದ ಸ್ತ್ರೀಶೋಷಣಾ ಪುರುಷ. ಶಾಣಮ್ಮನಿಗೆ ಮದುವೆಯಾದ ಕೆಲವು ದಿನಗಳಲ್ಲಿಯೇ ಯಮನ್ಯಾನ ಮೈಗಳ್ಳತನ, ಬೇಜವಾಬ್ದಾರಿತನಗಳ ಪರಿಚಯವಾಗಿ ಅವಳೇ ದುಡಿದು ಸಂಸಾರ ನಡೆಸುತ್ತಾಳೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಗಂಡ ದುಡಿಮೆಯನ್ನು ಮಾಡದೆ ಸೋಮಾರಿಯಾಗಿ ಕಾಲಕಳೆದು ಬಂದರೂ 'ಅವನು ತನ್ನ ಗಂಡ', ಒಬ್ಬರು ದುಡಿದರೂ ಜೀವನ ಸಾಗಿಸಬಹುದು ಎಂದು ಚಿಂತಿಸುವ ಶಾಣಮ್ಮ ಸಂಸಾರದ ಭಾರವನ್ನು ಹೊರುವ ಹೆಣ್ಣಿನ ಸಹನಾಗುಣಕ್ಕೆ ಮಾದರಿಯಾಗುತ್ತಾಳೆ. ಆದರೆ ಯಮನ್ಯಾ ಶಾಣಮ್ಮನನ್ನು ಪ್ರೀತಿಯಿಂದ ನೋಡಿಕೊಳ್ಳದೆ ಬೇರೆ ಹೆಣ್ಣಿನೊಡನೆ ಸಂಬಂಧ ಬೆಳೆಸಿಕೊಳ್ಳುತ್ತಾನೆ. ಯಮನ್ಯಾ ಮತ್ತು ಕಮಲಿಯ ಸಂಬಂಧ ಊರಿಗೆ ಗೊತ್ತಾದಾಗ ಹಿರಿಯರು ನ್ಯಾಯ ಪಂಚಾಯ್ತಿ ಕರೆದು ಕಮಲಿಯನ್ನು ಯಮನ್ಯಾನೇ ಮದುವೆಯಾಗಬೇಕು ಮತ್ತು ಕಮಲಿಯ ಮೊದಲ ಗಂಡ ರಾಮಣ್ಣನಿಗೆ ಹಣ ಕೊಡಬೇಕೆಂದು ಸೂಚಿಸುತ್ತಾರೆ. ಯಮನ್ಯಾನ ಬಳಿ ಹಣವಿಲ್ಲದಿರುವುದನ್ನು ತಿಳಿದಿದ್ದ ಶಾಣಮ್ಮನೇ ದುಡ್ಡು ಕೊಟ್ಟು ಅವನನ್ನು ಬಿಡಿಸುತ್ತಾಳೆ. ಇಲ್ಲಿ ಹೆಣ್ಣು ತನ್ನ ಗಂಡನ ಗೌರವವನ್ನು ಕಾಪಾಡಲು ಮುಂದೆ ಬರುವುದನ್ನು ಪರಿಗಣಿಸಬೇಕು. ಶಾಣಮ್ಮನ ನಿಜ ಪ್ರೀತಿ, ಗಂಡನ ಮೇಲಿನ ಗೌರವಕ್ಕೆ ಅವನು ಮಾಡುವುದು ಮೋಸ. ಈ ಅನ್ಯಾಯ ಶಾಣಮ್ಮನ ಮನಸ್ಸಿನಲ್ಲಿ ಕೆಳಗಿನ ರೀತಿ ಕೊರೆಯುತ್ತಿರುತ್ತದೆ – "ಕುಲಸ್ತರ ಮುಂದೆ ಮರಗವ್ವನ ಗುಡಿಪಾಳಿಯಲ್ಲಿ ಹಾಕಿದ ಹಸಿರು ಹಂದರದಲ್ಲಿ ನಿಂತು ತನ್ನ ಕೊಳ್ಳಾಗ ತಾಳಿ ಕಟ್ಟಿ ಮದಿ ಆಗಿ ಹೆಣ್ತಿ ಅಂತ ಹಕ್ಕಿನಿಂದ ತನ್ನೂರಿಗೆ ಕರ್ಕೊಂಡು ಬಂದಿದ್ದ ಯಮನಪ್ಪ ತನಗ ನ್ಯಾಯದಿಂದಲಿ ಬಾಳಿಸಲಿಲ್ಲ, ತಾನು ಕೊಟ್ಟ ಖರೇ ಪಿರೀತಿಗೆ ಅವನು ಬರೇ ಪಿರೀತಿ ಕೊಡಲಿಲ್ಲ", "ಅಷ್ಟೆ ಯಾಕೆ, ತನಗ ಅಂವಾ ಧೋಕಾ ಮಾಡಿಬಿಟ್ಟ. ತನ್ನ ಮ್ಯಾಲ ಸಂವಿತಿಗೆ ತಂದು ಅನ್ಯಾಯ ಮಾಡಿಬಿಟ್ಟನು. ಈ ತನಗಂಡ ದಗಾಕೋರ ಆದನು. ಆ ಕಮಲಿ ಜೋಡಿ ಪಿರೀತಿ ಪಿರೇಮು ಅಂತ ನಾಟಕ ಆಡಿ ಆಕಿನ 'ಒಗತನ'ನೂ ಹರ್ದು ಬಿಟ್ಟನು. ಆಕಿ ಸಂಸಾರ ಅಂಬಾದು ಬರ್ಬಾದ ಮಾಡಿ ಆ ಗಂಡಾಹೆಣ್ತೀಗಿ ಅಗಲಿಸಿ ಪಾಪ ಕಟ್ಕೊಂಡನು.

ಈಕಾಡಿ ಕಟ್ಕೊಂಡು ಬಂದ ಹೆಣ್ತಿಗಿನೂ ಸುಕಾ ಕುಡ್ಲಿಲ್ಲ. ಇಬ್ಬರ ಜೋಡಿ ಮೋಜು ಮಸ್ತಿ ಮಾಡಿ ಬರೇ ನಮ್ಮಿಬ್ಬರ ಮೈ ಉಂಡನೇ ಹೋರ್ತು ಮನಸಗೊಳಿಗೆ ಮುರ್ದು ಬಿಟ್ಟಾನ. ನಮ್ಮ ಮನದಾಗೇನದಾ ಅಂಬಾದು ಒಂದಿನಾ ಅರ ನೋಡಲಿಲ್ಲ ಈ ಗಂಡ" (ಗೀತಾ ನಾಗಭೂಷಣ 2006: ಪುಟ 639). ಶಾಣಮ್ಮನ ಈ ಯೋಚನೆ ಅವಳ ಗಂಡ ಮಾಡಿದ ಮೋಸವನ್ನು ತೋರಿಸುವುದರ ಜೊತೆಗೆ, ಹೆಣ್ಣು ಕೂಡ ತನ್ನ ಗಂಡನಿಂದ ಕೆಲವು ಕರ್ತವ್ಯ ಮತ್ತು ನಿರೀಕ್ಷೆಗಳನ್ನು ಇರಿಸಿಕೊಂಡಿರುತ್ತಾಳೆ, ಆದರೆ ಪುರುಷ ಸಾಮಾನ್ಯವಾಗಿ ಈ ಕರ್ತವ್ಯ ಮತ್ತು ನಿರೀಕ್ಷೆಗಳನ್ನು ಪೂರೈಸದೆ ಕೇವಲ ತನ್ನ ಸ್ವಂತ ಸುಖ ಮತ್ತು ಆಸೆಗಳನ್ನು ಪೂರೈಸಿಕೊಂಡು ಹೆಣ್ಣನ್ನು ಕಡೆಗಾಣಿಸುತ್ತಾನೆ. ಇದು ಸ್ತ್ರೀಗೆ ಆಗುವ ಮೋಸ, ಅನ್ಯಾಯ ತೋರಿಸುತ್ತಾ, ಪುರುಷನು ಹೆಣ್ಣನ್ನು ಒಬ್ಬ ವ್ಯಕ್ತಿಯಾಗಿ ಪರಿಗಣಿಸದೆ, ತನ್ನ ಸುಖಕ್ಕಾಗಿ ಇರುವ ಗುಲಾಮಳು ಎಂದು ಭಾವಿಸಿರುವುದನ್ನು ಸೂಚಿಸುತ್ತದೆ.

ಇಬ್ಬರು ಹೆಂಡತಿಯರ ದುಡಿತದಲ್ಲಿ ಸುಖವಾಗಿದ್ದ ಯಮನ್ಯಾ ಇದ್ದಕ್ಕಿದ್ದ ಹಾಗೆ ಊರು ಬಿಟ್ಟು ಹೋದವನು ಜೋಗವ್ವನಾಗಿ ಇತರೆ ಜೋಗವ್ವರೊಂದಿಗೆ ಊರಿಗೆ ಹಿಂತಿರುಗುತ್ತಾನೆ. ದೇವಸ್ಥಾನದ ಮುಂದೆ ಮೈಮರೆತು ಕುಣಿದ ಯಮನ್ಯಾ ಸುಸ್ತಾಗಿ ಕೆಳಗೆ ಬೀಳುತ್ತಾನೆ. ಊರಿನವರು ಅವನ ಗುರುತು ಹಿಡಿದಾಗ, ಜೋಗವ್ವಗಳ ಮುಖಂಡ ಯಮನ್ಯಾ ಜೋಗವ್ವನಾಗಿ ಪರಿವರ್ತನೆಗೊಂಡ ರೀತಿಯನ್ನು ತಿಳಿಸುತ್ತಾನೆ. ಊರಿನವರು ನಂಬಿದರೂ ಯಮನ್ಯಾನ ಮೈಗಳ್ಳತನ, ಹೆಣ್ಣಿನ ಮೇಲಿದ್ದ ಬಯಕೆ ಮುಂತಾದವುಗಳನ್ನು ತಿಳಿದಿದ್ದ ಶಾಣಮ್ಮ ನಂಬುವುದಿಲ್ಲ. ಯಮನ್ಯಾನ ಕಳ್ಳಾಟ ನೋಡಿದ್ದ ಅವಳಿಗೆ "ಆ ದೇವಿ ಇವರಿಗೆಲ್ಲಾ ನನ್ನ ಹೆಸರ ಹೇಳ್ಕೊಂಡು ಭಿಕ್ಕಿ ಬೇಡ್ರಿ, ನನ್ನ ಹೆಸರಿನ ಮ್ಯಾಲ ಹಾದರಾ ಮಾಡ್ರಿ, ಮೀಸಿ ಬೋಳಿಸ್ಕೊಂಡು 'ಖೊಜ್ಜಾ' ಆಗಿ ತಾಳಿ ಕಟ್ಟಿದ ಹೆಂಡ್ರೀಗೆ ಬಿಟ್ಟು ದೇಶಾಂತ್ರ ಹೋಗ್ರಿ ಅಂತ ಅದ್ಯಾಂಗ ಹೇಳ್ತಾಳು? ಹೆಂಗಸ್ರಿಗಿ ಹಾದರ ಮಾಡ್ರಿ ಗಂಡಸ್ರೀಗಿ ಖೊಜ್ಜೆರಾಗ್ರಿ ಅಂತಂದು ದೇವಿಗೆ ಏನು ಸಾಧಸ್ಬೇಕಾಗ್ಯಾದ? ಇದೆಲ್ಲಾ ಈ ಯಮನ್ಯಾಂದು ಮತ್ತೊಂದು ಹೊಸ ಆಟಾನೋ ಏನೋ" (ಗೀತಾ ನಾಗಭೂಷಣ 2006: ಪುಟ 645) ಎಂಬ ಅನುಮಾನ ಅವಳಲ್ಲಿ ಹುಟ್ಟುತ್ತದೆ. ಹೆಂಡತಿಯರನ್ನು ನೋಡಲಾರದೆ ಮುಖ ಕೆಳಗೆ ಹಾಕಿದಾಗ ಶಾಣಮ್ಮನಿಗೆ ಅನುಮಾನ ನಿಜವಾಗುತ್ತದೆ. ಶಾಣಮ್ಮನ ಯೋಚನೆಯಲ್ಲಿ ಪುರುಷ ತನ್ನ ಅನುಕೂಲಕ್ಕೆ ಬೇಕಾದ ವೇಷ ಹಾಕುವುದು ಕಂಡುಬರುತ್ತದೆ, ಜೊತೆಗೆ ಈ ವೇಷಗಳಿಗೆ ದೇವರ ಹೆಸರಿಟ್ಟು ಮೋಸ ಮಾಡುವುದು ತಿಳಿಯುತ್ತದೆ.

ನಿಜವನ್ನರಿತ ಶಾಣಮ್ಮ ನೇರವಾಗಿ ಯಮನ್ಯಾನ ಕುರಿತು ನೀನು ಜೋಗವ್ವ ಆಗಿರುವುದು ಸುಳ್ಳು, ಆ ದೇವರಿಗೆ ನೀನು ಮೋಸ ಮಾಡುತ್ತಿದ್ದೀಯಾ ಎಂದು ಹೇಳುತ್ತಾಳೆ. ಇದನ್ನು ಕೇಳಿದ

ಪೂಜಾರಿ ಮತ್ತು ಇತರರು ಶಾಣಮ್ಮ ಹಾಗೂ ಕಮಲಿ ದೇವರ ಮಹಿಮೆಯನ್ನು ಸುಳ್ಳು ಎಂದು ಹೇಳುತ್ತಿದ್ದಾರೆ, ಅವರನ್ನು ಆಚೆಗೆ ಕಳುಹಿಸಿ ಎಂದು ಯಮನ್ಯಾ ಮತ್ತು ಇತರರನ್ನು ಪೂಜೆಗೆ ಬರುವಂತೆ ಹೇಳುತ್ತಾರೆ. ಕೋಪಗೊಂಡಿದ್ದ ಶಾಣಮ್ಮ ದೈವದವರನ್ನು ನಮ್ಮ ಗಂಡ 'ಹಿಜಡ್ಯಾ' ಆದರೆ ನಾವೇನಾಗಬೇಕು, ನಾವುಗಳು ಇವನ ಹೆಂಡತಿಯರೋ, ಅಥವಾ ಗಂಡಸತ್ತ ಮುಂಡೆಯರೋ ಅಥವಾ ಗಂಡ ಬಿಟ್ಟವರೋ ಏನು ಎಂಬುದನ್ನು ನೀವು ತೀರ್ಮಾನಿಸಿ ನಮಗೆ ನ್ಯಾಯ ಕೊಡಿ ಎಂದು ಕೇಳುತ್ತಾಳೆ. ಶಾಣಮ್ಮನ ಈ ಪ್ರಶ್ನೆಗಳಿಗೆ ದೈವದವರು ಮತ್ತು ಇತರರು ಮಾತನಾಡದಾಗುತ್ತಾರೆ. ದೇವರು ಬಂದಂತೆ ಯಮನ್ಯಾ ಶುರು ಮಾಡಿದಾಗ ಶಾಣಮ್ಮ ಅವನ ನಾಟಕವನ್ನು ನಿಲ್ಲಿಸುವಂತೆ ಗೌಡರಿಗೆ ಹೇಳುತ್ತಾಳೆ. ದೇವಿ ಅವನಿಗೆ ಖೊಜ್ಜಾ ಮಾಡಿಲ್ಲ, ಬದಲಿಗೆ ಅವನು ನಾಟಕವಾಡುತ್ತಿದ್ದಾನೆ. ಅವನು ಅದನ್ನು ಒಪ್ಪಿಕೊಳ್ಳುವಂತೆ ಹೇಳಿ, ಇಲ್ಲದಿದ್ದರೆ ಅವನು ಗಂಡಸ್ತನ ಕಳೆದುಕೊಂಡಿದ್ದಾನೋ ಇಲ್ಲವೋ ಎಂಬುದನ್ನು ಕಲಬುರ್ಗಿಯ ದವಾಖಾನ್ಯಾಗಿನ ಡಾಕ್ಟರರ ಬಳಿ ಪರೀಕ್ಷಿಸಿ ಸತ್ಯವನ್ನು ತಿಳಿಯೋಣ ಎನ್ನುತ್ತಾಳೆ. ಶಾಣಮ್ಮನ ಮಾತುಗಳು ಅವಳು ಸಹನೆ ಮೀರಿರುವುದನ್ನು, ಅವಳ ಗಂಡ ಮತ್ತು ಅಲ್ಲಿದ್ದ ಪುರುಷರು ಅವರಿಗೆ ಮಾಡಿದ ಅವಮಾನವನ್ನು ಖಂಡಿಸುತ್ತಾ ಅವಳ ಗಂಡನ ನೈಜ ಚಿತ್ರಣವನ್ನು ತೋರಿಸುವ ಅವಳ ತೀರ್ಮಾನವನ್ನು ತಿಳಿಸುತ್ತವೆ. ಗೀತಾ ನಾಗಭೂಷಣರವರು ಶಾಣಮ್ಮನ ಪಾತ್ರದ ಮುಖಾಂತರ ಪುರುಷರು ಹೆಣ್ಣಿಗೆ ಮಾಡುವ ಮೋಸ, ಅವಮಾನಗಳು ಮಿತಿ ಮೀರಿದಾಗ, ಹೆಣ್ಣು ಅದರ ವಿರುದ್ಧ ಹೋರಾಡಲು ಮುಂದಾಗುತ್ತಾಳೆ, ಹಾಗೂ ಸ್ವಾಭಿಮಾನಕ್ಕೆ ಧಕ್ಕೆಯಾದಾಗ ಅದನ್ನು ಪ್ರತಿಭಟಿಸಿ ಸಿಡಿದೇಳಲು ಹೆಣ್ಣು ತಯಾರಾಗಬೇಕು ಎಂಬ ಸಂದೇಶವನ್ನು ಕೊಡುತ್ತಾ, ಪುರುಷನ ದುರ್ನಡತೆ, ತಪ್ಪು ತೀರ್ಮಾನಗಳನ್ನು ಅತಿಕ್ರಮಿಸಿ ನಡೆದರೆ ಅವಳಿಗೂ ಸಮಾನತೆ ಸಿಗಬಹುದೆಂಬ ಸುಳಿವನ್ನು ನೀಡುತ್ತಾರೆ.

ಸಾಮಾನ್ಯವಾಗಿ ಹೆಣ್ಣಿನ ಮೇಲಿನ ಶೋಷಣೆ, ಅನ್ಯಾಯ, ಮೋಸಗಳು ಪುರುಷರಿಂದ ನಡೆಯುತ್ತವೆ, ಪುರುಷರೇ ಇದಕ್ಕೆ ಮುಖ್ಯ ಕಾರಣ ಎಂಬುದು ಬಹುಪಾಲು ಜನರ ಅಭಿಪ್ರಾಯ. ಆದರೆ ಹೆಣ್ಣಿಗೆ ಆಗುವ ಅನ್ಯಾಯಕ್ಕೆ, ಮೋಸಕ್ಕೆ ಗಂಡಸರಷ್ಟೆ ಮಹಿಳೆಯರೂ ಕೂಡ ಕಾರಣರಾಗುತ್ತಾರೆ; ಗಂಡಿನ ಸ್ವಾರ್ಥದಂತೆ ಹೆಣ್ಣಿನ ಸ್ವಾರ್ಥವೂ ಪ್ರಮುಖವಾದಾಗ ಮತ್ತೊಂದು ಹೆಣ್ಣಿಗೆ ಅನ್ಯಾಯವಾಗಿ ಆ ಮೂವರು ವ್ಯಕ್ತಿಗಳ ಕೌಟುಂಬಿಕ ಬಾಳು ಹಾಳಾಗುತ್ತದೆ ಎಂಬ ಕಥಾವಸ್ತುವನ್ನು ನೇಮಿಚಂದ್ರ ಅವರು "ತ್ರಿಕೋನದಾಚೆಗೆ" ಕಥೆಯಲ್ಲಿ ತೋರಿಸಿದ್ದಾರೆ. ಈ ಕಥೆಯಲ್ಲಿ ತುಷಾರ್ ಮತ್ತು ಲೀಲಾ ಮದುವೆಯಾಗಿ ನಾಲ್ಕು ಮಕ್ಕಳನ್ನು ಪಡೆದಿದ್ದು 20

ವರ್ಷಗಳ ಸಂಸಾರ ಮಾಡಿರುತ್ತಾರೆ. ಆದರೆ ತುಷಾರನಿಗೆ ಬೇರೆ ಹೆಣ್ಣುಗಳ ಜೊತೆ ಓಡಾಡುವ, ಅವರೊಡನೆ ಕಾಲ ಕಳೆಯುವ ಚಪಲ. ವಯಸ್ಸು 45 ಆಗಿದ್ದು ತುಂಬು ಸಂಸಾರ ಜೊತೆಗಿದ್ದರೂ ಬೇರೆ ಹೆಣ್ಣುಗಳನ್ನು ಇಂಪ್ರೆಸ್ ಮಾಡುವುದಕ್ಕೋಸ್ಕರ ಅವರನ್ನು ಹೋಟೆಲ್‌ಗಳಿಗೆ ಕರೆದುಕೊಂಡು ಹೋಗುವ, ಸಿನಿಮಾ, ಡಾನ್ಸ್‌ಗಳಿಗೆ ಆಮಂತ್ರಿಸುವ, ಹರಟೆ ಹೊಡೆಯುವ ಚಾಳಿಯನ್ನು ಬೆಳೆಸಿಕೊಂಡಿರುತ್ತಾನೆ.

ಕೆಲಸದ ನಿಮಿತ್ತ ಬಂದಿದ್ದ ವರ್ಷಾಳನ್ನು ಪರಿಚಯ ಮಾಡಿಕೊಂಡ ತುಷಾರ್ ಅವಳನ್ನು ಸ್ನೇಹದಿಂದ ಕಾಣುತ್ತಾನೆ. ಅವರಿಬ್ಬರ ಸ್ನೇಹ ಪ್ರೀತಿಯಾಗಿ ಮಾರ್ಪಡುತ್ತದೆ. ತುಷಾರ್ ವರ್ಷಾಳನ್ನು ಪ್ರೀತಿಸುತ್ತಿರುವುದಾಗಿ ತಿಳಿಸಿ ಅವಳೊಡನೆ ಬಾಳುತ್ತಾ ತನ್ನ ಜೀವನಕ್ಕೆ ಅರ್ಥ ಕಂಡುಕೊಳ್ಳಬೇಕೆಂದು ತಿಳಿಸುತ್ತಾನೆ. ಹೆಂಡತಿ ಲೀಲಾ ಅವನ ಯಾವುದೇ ಆಸಕ್ತಿ, ಆಸೆಗಳಿಗೆ ಸ್ಪಂದಿಸದೆ ಜೀವನ ಪೂರ್ತಿ ಖಾಲಿಯಾಗಿದೆ ಎಂದು ಹೇಳುತ್ತಾ ವರ್ಷಾಳ ಅನುಕಂಪಗಳಿಸುತ್ತಾ ಪ್ರೀತಿ ಸಂಪಾದಿಸಲು ಪ್ರಯತ್ನಿಸುತ್ತಾನೆ. ಅವನ ಮಾತು, ತೋರಿಸುತ್ತಿದ್ದ ಪ್ರೀತಿ, ಮಹತ್ವ ಅವನ ನಿಜ ಸ್ವರೂಪವನ್ನು ಮರೆಮಾಚಿ ವರ್ಷಾ ಅವನನ್ನು ಪ್ರೀತಿಸುವಂತೆ ಮಾಡುತ್ತದೆ. ಇಲ್ಲಿ ಗಮನಿಸಬೇಕಾದ ಅಂಶಗಳೆಂದರೆ ತುಷಾರ್ ಮತ್ತು ವರ್ಷಾ ಇಬ್ಬರೂ ಅವರ ಸ್ವಾರ್ಥ ಮತ್ತು ಬಯಕೆಗಳಿಗನುಸಾರವಾಗಿ ನಡೆಯುತ್ತಿರುವುದು ಮತ್ತು ಅದರಿಂದ ಲೀಲಾಳಿಗೆ ಆಗುತ್ತಿರುವ ಅನ್ಯಾಯ, ಮೋಸವನ್ನು ಪರಿಗಣಿಸದಿರುವುದು. ತುಷಾರ್ ಲೀಲಾಳ ಮೇಲೆ ತಪ್ಪುಗಳ ಪಟ್ಟಿಯನ್ನೇ ಹೊರಿಸುತ್ತಾ ಅವನ ಸ್ವಾರ್ಥಕ್ಕೋಸ್ಕರ ಸುಳ್ಳು ಹೇಳಿ ಲೀಲಾಳಿಗೆ ಮೋಸ ಮಾಡುತ್ತಾನೆ. ಇದು ಪುರುಷನೋರ್ವ ಹೆಣ್ಣಿಗೆ ಮೋಸ, ಅನ್ಯಾಯ ಮಾಡುವುದನ್ನು ತೋರಿಸುತ್ತದೆ.

ಇದೇ ರೀತಿ ವರ್ಷಾ ಕೂಡ ತನ್ನ ಸ್ವಾರ್ಥ ಮತ್ತು ಆಡಂಬರದ ಜೀವನಕ್ಕಾಗಿ ವಿವಾಹವಾಗಿದ್ದು ನಾಲ್ಕು ಮಕ್ಕಳಿರುವ ತುಷಾರನನ್ನು ಪ್ರೀತಿಸುತ್ತಾಳೆ. ಇದರಿಂದ ತುಷಾರನ ಹೆಂಡತಿ ಲೀಲಾಳಿಗೆ ಅನ್ಯಾಯ ಮತ್ತು ಮೋಸವಾಗುವುದು ಗಮನಕ್ಕೆ ಬಂದರೂ ಅದನ್ನು ಪರಿಗಣಿಸದೆ ಅವಳ ಆಸೆ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ತಯಾರಾಗುವುದು ಅವಳು ಇನ್ನೊಂದು ಹೆಣ್ಣಿಗೆ ಮಾಡುವ ಮೋಸವನ್ನು ತೋರಿಸುತ್ತದೆ. ಇಲ್ಲಿ ತುಷಾರ್ ಮತ್ತು ವರ್ಷಾ ಇಬ್ಬರೂ ವಿದ್ಯಾವಂತರು ಹಾಗೂ ಉತ್ತಮ ಕೆಲಸದಲ್ಲಿದ್ದು ಸಮಾಜದ ಉನ್ನತ ವರ್ಗದಲ್ಲಿರುವವರು. ಇವರುಗಳು ತಮ್ಮ ಸ್ವಾರ್ಥ ಸಾಧನೆಗೆ ಒಂದು ಹೆಣ್ಣಿನ ಬಾಳನ್ನು

ಹಾಳುಮಾಡಲು ಮುಂದಾಗುವುದು ಸಮಾಜದಲ್ಲಿ ನಡೆಯುವ, ನಡೆಯುತ್ತಿರುವ ವಿದ್ಯಮಾನಗಳ ನಿದರ್ಶನವಾಗುತ್ತದೆ.

ವರ್ಷಾಳಿಗೆ ತುಷಾರನ ನಿಜ ಸ್ವರೂಪ, ಗುಣ, ನಡತೆಗಳ ವಿಷಯ ಹಾಸ್ಟೆಲಿಗೆ ಬಂದ ಅವನ ಸಹೋದ್ಯೋಗಿಯೊಬ್ಬಳಿಂದ ತಿಳಿಯುತ್ತದೆ. ಇದರಿಂದ ಅವನ ಬಗ್ಗೆ ಅನುಮಾನ ಶುರುವಾಗುತ್ತದೆ. ಅವಳ ಗೆಳತಿ ಸುಧಾಳ ಸಲಹೆಯ ಮೇರೆಗೆ ತುಷಾರನ ಹೆಂಡತಿ ಲೀಲಾಳನ್ನು ಭೇಟಿಯಾಗುತ್ತಾಳೆ. ಈ ಸಂದರ್ಭದಲ್ಲಿ ಲೀಲಾ ಹೇಳುವ ಮಾತುಗಳು ಸ್ವಾರ್ಥದಿಂದ ಕೂಡಿದ ಒಂದು ಹೆಣ್ಣಿನ ಕೆಲಸಗಳು ಮತ್ತೊಂದು ಹೆಣ್ಣನ್ನು ಮೋಸಕ್ಕೊಳಪಡಿಸುವ ರೀತಿಯನ್ನು ತೋರಿಸುತ್ತದೆ. ಈ ಹಿನ್ನೆಲೆಯಲ್ಲಿ ನೇಮಿಚಂದ್ರರವರು ಲೀಲಾಳ ಮೂಲಕ ಹೇಳಿಸುವ ಮಾತುಗಳು "ಎಲ್ಲ ವಿವಾಹಗಳೂ ಬೇರ್ಪಡುವಷ್ಟು ಕಹಿಯಾಗೋಲ್ಲ, ಎಂಥ ಸಿಹಿ ಬದುಕಿನಲ್ಲೂ ಅಲ್ಪ ಪ್ರಮಾಣದ ಕಹಿ ಇದ್ದೇ ಇರುತ್ತೆ. ತೀರಾ ಸ್ಪುಟವಾದ ಕಾರಣಗಳಿದ್ದು ಹೊಂದುವುದು ಅಸಂಭವವಾದಾಗ ಅಗಲಿಕೆ ಸ್ವಾಗತಾರ್ಹ. ಆದ್ರೆ ಸಂಗಾತಿ ಬದಲಿಗೊಂದು ಸಂಗಾತಿ ದೊರೆತೊಡನೆ, ಸಂಬಂಧಗಳನ್ನು ಆಡಿ ಎಸೆದ ಆಟಿಗೆಯಂತೆ ಬದಲಿಸೋದು ಕೇವಲ ಬಾಲಿಶ"... "ಗಂಡನ್ನು ದೂಷಿಸಿ ಏನು ಪ್ರಯೋಜನ, ಸ್ವತಃ ಗಂಡು ಹೆಣ್ಣನ್ನು ಶೋಷಿಸಲು ಅವಕಾಶ ಮಾಡಿ ಕೊಡೋ ನಿಮ್ಮಂಥ ಹೆಣ್ಣುಗಳಿರುವಾಗ ಶೋಷಣೆಗೆಲ್ಲಿ ಅಂತ್ಯ". ಮುಂದುವರೆದು "ವರ್ಷಾ ಐವತ್ತರ ಗಂಡನ್ನು ಬಯಸೋ ಇಪ್ಪತ್ತರ ಹೆಣ್ಣು, ಗಂಡಿಗೆ ಶೋಷಣೆಯ ಅವಕಾಶ ಕಲ್ಪಿಸುತ್ತಿಲ್ಲವೇ? ಆಹಾ ಎಂಥ ಪ್ರತಿಭಾವಂತ ಪ್ರಬುದ್ಧ, ಮಹಿಳೆಯರು" (ನೇಮಿಚಂದ್ರ 2012: ಪುಟ 351) ಒಂದು ಹೆಣ್ಣಿಗೆ ಆಗುತ್ತಿರುವ ಮೋಸ ಗಂಡಿನಿಂದಷ್ಟೇ ಅಲ್ಲ ಹೆಣ್ಣು ಕೂಡ ಅಷ್ಟೇ ಕಾರಣಳಾಗಿದ್ದಾಳೆ ಎಂಬುದನ್ನು ತೋರಿಸುತ್ತದೆ. ಲೇಖಕಿ ಈ ಮಾತುಗಳಲ್ಲಿ ಗಂಡು–ಹೆಣ್ಣು ಇಬ್ಬರೂ ಎಷ್ಟೇ ಪ್ರಬುದ್ಧರಾದರೂ ಅವರ ಸ್ವಾರ್ಥ ಹೆಣ್ಣಿನ ಶೋಷಣೆಗೆ ಅವಕಾಶ ಮಾಡಿಕೊಡುತ್ತದೆ ಎಂದು ತಿಳಿಸುತ್ತಾರೆ. ಲೀಲಾ ಹೇಳುವ "ಹೆಣ್ಣು ಆದಷ್ಟು ಸ್ವತಂತ್ರವಾಗಿರಬೇಕು, ಕಾರಣ ಬದುಕಿಗೆ ಭದ್ರತೆ ಯಾವಾಗ ಕುಸಿಯುತ್ತೆ ಗೊತ್ತಿರೊಲ್ಲ" (ನೇಮಿಚಂದ್ರ 2012: ಪುಟ 351) ಮಾತುಗಳು ಹೆಣ್ಣಿಗೆ ಸ್ವತಂತ್ರ ಬದುಕು ಭದ್ರತೆಯ ಅವಶ್ಯಕತೆಯನ್ನು ತೋರಿಸುತ್ತದೆ.

ಸಮಾಜದಲ್ಲಿ ಹೆಣ್ಣಿಗೆ ಆಗುವ ಅನ್ಯಾಯ, ಮೋಸ, ದೌರ್ಜನ್ಯ ಗಂಡಿನಿಂದಲೇ ಎಂಬ ಸಹಜ ಅಭಿಪ್ರಾಯಕ್ಕೆ ಬದಲಾಗಿ ಗಂಡಿನಷ್ಟೇ ಹೆಣ್ಣು ಕೂಡ ಕಾರಣಳಾಗಬಲ್ಲಳು ಎಂಬುದನ್ನು ನೇಮಿಚಂದ್ರರವರು ತೋರಿಸಿದ್ದಾರೆ. ಬದಲಾಗುತ್ತಿರುವ ಸಮಾಜದಲ್ಲಿ ಸ್ತ್ರೀ–ಪುರುಷರಿಬ್ಬರೂ

ವಿದ್ಯಾವಂತರೂ, ಪ್ರಬುದ್ಧರೂ ಆದಂತೆ ಹೆಣ್ಣಿನ ಶೋಷಣೆ ಕಡಿಮೆಯಾಗಬೇಕು ಎಂಬ ಆಶಯವನ್ನು ಲೇಖಕಿ ತಿಳಿಸಿದ್ದಾರೆ.

ಹೆಣ್ಣು ಯಾವಾಗಲೂ ಪುರುಷನ ಅಧೀನದಲ್ಲಿಯೇ ಇರಬೇಕು. ಅವನಿಂದ ಎಷ್ಟೇ ಮೋಸ, ವಂಚನೆ, ದ್ರೋಹ, ಅವಮಾನ, ಆತ್ಮ ಮತ್ತು ವ್ಯಕ್ತಿತ್ವಕ್ಕೆ ಹಾನಿಯಾದರೂ ಹೆಣ್ಣಾದವಳು ಅವನ ನೆರಳಿನಲ್ಲಿ ಗುಲಾಮಳ ರೀತಿ ಜೀವಿಸದೆ ಬೇರೆ ದಾರಿಯಿಲ್ಲ. ಅವಳು ಸ್ವಾವಲಂಬಿಯಾಗಲು ಯಾವುದೇ ಅವಕಾಶಗಳಿಲ್ಲದಿರುವ ಮುಸ್ಲಿಂ ಸಮಾಜದ ಹೆಣ್ಣುಮಕ್ಕಳ ಕಥಾವಸ್ತುವನ್ನು ಬಾನು ಮುಷ್ತಾಕ್‌ರವರು 'ಎದೆಯ ಹಣತೆ' ಕಥೆಯಲ್ಲಿ ಚಿತ್ರಿಸಿದ್ದಾರೆ. ಹಣತೆ ಬೆಳಗಲು ಎಣ್ಣೆಯ ಅವಶ್ಯಕತೆ ಇದೆ. ಅದೇ ರೀತಿ ಎದೆಯ ಹಣತೆ ಬೆಳಗಲು ಪ್ರೀತಿ, ಸಾಂತ್ವನ, ನಂಬಿಕೆ, ಗೌರವ ಮುಂತಾದವುಗಳ ಅವಶ್ಯಕತೆ ಬೇಕಾಗಿರುತ್ತದೆ. ಆದರೆ ಸಮಾಜ ಇವು ಯಾವುದನ್ನೂ ಹೆಣ್ಣಿಗೆ ನೀಡದೆ ಅವಳನ್ನು ಕೇವಲ ಗಂಡಿನ ಗುಲಾಮಳಾಗಿ ಮಾಡಿ ಅವಳ ಆತ್ಮವನ್ನು ಕೊಂದು, ಎದೆಯ ಹಣತೆ ಬೆಳಗದೆ ಗಾಡಾಂಧಕಾರದಲ್ಲಿ ಹೆಣ್ಣು ಬಾಳಬೇಕಾದ ಪರಿಸ್ಥಿತಿಯನ್ನು ಬಾನು ಮುಷ್ತಾಕ್‌ರವರು ಈ ಕಥೆಯ ಮೆಹರುನ್‌ಳ ಪಾತ್ರದ ಮೂಲಕ ಕಟ್ಟಿದ್ದಾರೆ.

ಹೆಣ್ಣುಮಕ್ಕಳಿಗೆ ಮದುವೆ ಮಾಡಿ ಗಂಡನ ಮನೆಗೆ ಕಳುಹಿಸಿದರೆ ಸಾಕು ತಮ್ಮ ಜವಾಬ್ದಾರಿ ಮುಗಿಯಿತು, ಮುಂದೆ ಅವಳಿಗೂ ತವರು ಮನೆಗೂ ಯಾವುದೇ ಸಂಬಂಧ ಇಲ್ಲ ಎಂದು ತಿಳಿದ ತಂದೆ ತಾಯಿ ಮತ್ತು ಅಣ್ಣಂದಿರು ಎರಡನೇ ಬಿ.ಕಾಂ. ಪದವಿಯಲ್ಲಿ ಅಧ್ಯಯನ ಮಾಡುತ್ತಿದ್ದ ಮೆಹರುನ್‌ಳ ವಿದ್ಯಾಭ್ಯಾಸವನ್ನು ನಿಲ್ಲಿಸಿ ಇನಾಯತ್ ಎಂಬುವನೊಂದಿಗೆ ಮದುವೆ ಮಾಡುತ್ತಾರೆ. ಹದಿನಾರು ವರ್ಷಗಳ ದಾಂಪತ್ಯ ಜೀವನದಲ್ಲಿ ಅವಳಿಗೆ ಐದು ಮಕ್ಕಳಾಗಿ, ಮನೆಯ ಜವಾಬ್ದಾರಿ ಮತ್ತು ಕೆಲಸಗಳನ್ನು ನಿಭಾಯಿಸುವುದರಲ್ಲಿ ಮೆಹರುನ್‌ಳ ದೇಹ, ಮನಸ್ಸು ಸೊರಗಿ ಹೋಗಿರುತ್ತದೆ. ಈ ಸಮಯದಲ್ಲಿ ಇನಾಯತ್ ನರ್ಸ್ ಒಬ್ಬಳನ್ನು ಇಷ್ಟಪಟ್ಟು ಅವಳೊಡನೆ ಓಡಾಡುವುದು ಮತ್ತು ಅವಳೊಟ್ಟಿಗೆ ವಾಸಮಾಡುವುದನ್ನು ಮಾಡುತ್ತಿರುತ್ತಾನೆ. ಅವನ ಮೋಸ, ಕಪಟತನವನ್ನು ಪ್ರಶ್ನಿಸಿದ ಮೆಹರುನ್‌ಳನ್ನು ಅವಮಾನಿಸುತ್ತಾನೆ. ಇನಾಯತ್‌ನನ್ನು ಸರಿದಾರಿಗೆ ತರಲು ಅಣ್ಣಂದಿರ ಸಹಾಯ ಕೇಳಲು ಬಂದಾಗ ಅವರು ಮೆಹರುನ್ನಳದೇ ತಪ್ಪು, ಅವಳೇ ಹೊಂದಿಕೊಂಡು ನಡೆಯಬೇಕು ಎಂದು ಹೇಳುತ್ತಾರೆ. ಇದು ಪುರುಷ ಏನೇ ತಪ್ಪು ಮಾಡಿದರೂ ಹೆಣ್ಣಾದವಳು ಅದನ್ನು ಪ್ರಶ್ನಿಸುವಂತಿಲ್ಲ, ಬದಲಿಗೆ ಅವಳೇ ಗುಲಾಮಳ ರೀತಿ ಬದುಕಬೇಕು ಎಂಬ ಸಂಪ್ರದಾಯವನ್ನು ಪುಷ್ಟೀಕರಿಸುತ್ತದೆ. ಆದರೆ ಪದವಿಯವರೆಗೂ ವಿದ್ಯಾಭ್ಯಾಸ ಮಾಡಿ

ತಿಳುವಳಿಕೆಯಿದ್ದ ಮೆಹರುನ್ ಅವಳ ತವರು ಕುಟುಂಬದವರನ್ನು ಕೇಳುವ ಪ್ರಶ್ನೆಗಳು ವಿದ್ಯೆ ದೊರೆತರೆ ಮುಸ್ಲಿಂ ಹೆಣ್ಣುಗಳೂ ಕೂಡ ಸಂಪ್ರದಾಯವನ್ನು ಪ್ರಶ್ನಿಸಿ ಜೀವನ ಸರಿಪಡಿಸಿಕೊಳ್ಳಲು ಪ್ರಯತ್ನಿಸಬಹುದು ಎಂಬುದನ್ನು ಬಾನು ಮುಷ್ತಾಕ್‌ರವರು ಮೆಹರುನ್‌ಳ ಈ ಮಾತುಗಳ ಮುಖಾಂತರ ಪ್ರಕಟಿಸುತ್ತಾರೆ. "ಮದುವೆ ಬೇಡ ಅಂತ ನಿಮ್ಮೆಲ್ಲರ ಕಾಲ್ ಕಟ್ಕೊಂಡೆ; ಕೇಳಿದ್ರ? ಬುರ್ಕ ಹಾಕಿಕೊಂಡೇ ಕಾಲೇಜಿಗೆ ಹೋಗ್ತೀನಿ.. ಓದು ನಿಲ್ಲಿಸಬೇಡೀ ಅಂತ ಗೋಗರೆದೆ. ನನ್ನ ಮಾತು ಕೇಳಲಿಲ್ಲ ನೀವು. ನನ್ನ ಜೊತೆಯೋರು ಇನ್ನೂ ಮದುವೆಯಾಗಿಲ್ಲ, ನಾನು ಮುದುಕಿಯಾದೆ. ಸಾಲಾಗಿ ಐದು ಮಕ್ಕಳು ನನ್ನ ಮೇಲೆ ಹೊರೆಯಾಗಿ ಕೂತಿವೆ. ಅವರಪ್ಪ ಅಲೀತಿದ್ದಾರೆ.. ನನಗೆ ಜೀವನವಿಲ್ಲ, ಬದುಕಿಲ್ಲ. ಇಂಥ ಹರಾಮ್ ಕೆಲಸ ಮಾಡುತ್ತಿರೋ ಗಂಡ್ಸಿಗೆ ಹೀಗ್ಯಾಕ್ ಮಾಡಿದೀಯಾ ಅಂತ ಕೇಳೋಕೆ ಸಾಧ್ಯವಿಲ್ಲ ನಿಮ್ಗೆ?" (ಬಾನು ಮುಷ್ತಾಕ್ 2013: ಪುಟ 223) ಎಂದು ತಂದೆತಾಯಿ ತೆಗೆದುಕೊಂಡ ತೀರ್ಮಾನವನ್ನು ಪ್ರಶ್ನಿಸುತ್ತಾಳೆ, ಜೊತೆಗೆ ತನ್ನ ಗಂಡನಿಂದ ತನಗಾಗುತ್ತಿರುವ ಅನ್ಯಾಯವನ್ನು ಪ್ರಶ್ನಿಸುವಂತೆ ಕೇಳುತ್ತಾಳೆ. ಇದು ಹೆಣ್ಣೊಬ್ಬಳು ತನಗಾದ ಅನ್ಯಾಯವನ್ನು ವ್ಯಕ್ತಪಡಿಸುವುದನ್ನು ತೋರಿಸುತ್ತದೆ.

ಮೆಹರುನ್‌ಳ ತಾಯಿ ಸಾಕು ಮಾಡು ಎಂದು ಹೇಳಿದಾಗ "ಹೌದಮ್ಮ.. ನನಗೂ ಸಾಕಾಗಿದೆ. ಮೊದಮೊದಲು ಜನರು ಗುಸಗುಸ ಎಂದ್ರು.. ನಂತರ ಥಿಯೇಟರಿನಲ್ಲಿ, ಹೋಟೆಲುಗಳಲ್ಲಿ ಅವರನ್ನು ನೋಡಿದೋರು ಬಂದು ನನ್ನೆದುರಿಗೆ ಹೇಳಿದರು. ಆಮೇಲೆ ರಾಜಾರೋಷವಾಗಿ ಅವಳ ಮನೆಗೇ ಹೋಗೋಕೆ ಆರಂಭಿಸಿದರು. ಜನರೆಲ್ಲಾ ಸಾಕಷ್ಟು ಉಗಿದ ಮೇಲೆ ಬೆಂಗಳೂರಿಗೆ ಹೋಗಿ, ಸಾವಿರಾರು ರೂಪಾಯಿ ಚೆಲ್ಲಿ ಅವಳಿಗೆ ಟ್ರಾನ್ಸ್‌ಫರ್ ಮಾಡಿಸಿಕೊಂಡು ಬಂದಿದ್ದಾರೆ. ಈಗ ಎಂಟು ದಿನದಿಂದ ಅವಳ ಜೊತೆಯಲ್ಲೇ ಹಾಳಾಗಿ ಹೋಗಿದ್ದಾರೆ. ಎಷ್ಟು ದಿನಾಂತ ಸಹಿಸ್ಲಿ? ಹ್ಯಾಗೆ ಜೀವಿಸ್ಲಿ?" (ಬಾನು ಮುಷ್ತಾಕ್ 2013: ಪುಟ 223) ಎಂದು ತಾಯಿಯನ್ನೇ ಪ್ರಶ್ನಿಸಿ ಬಂದದ್ದನ್ನೆಲ್ಲಾ ಸಹಿಸಿಕೊಂಡು ಬಾಳಬೇಕೆಂಬ ಸಿದ್ಧಾಂತವನ್ನೇ ಅಲುಗಾಡಿಸುವ ರೀತಿ ಬಾನು ಮುಷ್ತಾಕ್‌ರವರು ತೋರಿಸಿದ್ದಾರೆ. ಅವಳ ತಾಯಿ ಪ್ರೀತಿ, ಸಹನೆಯಿಂದ ಅವನನ್ನು ಸರಿದಾರಿಗೆ ತರಲು ಪ್ರಯತ್ನಿಸಬೇಕೆಂದು ಹೇಳಿದಾಗ ಮೆಹರುನ್ನಳು ಸಂಪ್ರದಾಯವನ್ನೇ ಮುರಿದು ಗಂಡನನ್ನು ತ್ಯಜಿಸುವ ಧೈರ್ಯದ ಮಾತುಗಳನ್ನು ಈ ರೀತಿ ಆಡುತ್ತಾಳೆ, "ಅಮ್ಮಾ.. ಈ ಮಾತುಗಳು ಬೇರೆ, ಬದುಕು ಬೇರೆ. ನನಗೂ ಮನಸ್ಸು ಅನ್ನೋದಿಲ್ವೆ. ಭಾವನೆಗಳಿಲ್ವೆ.. ನನ್ನನ್ನು ತೊರೆದು ಯಾವಳ ಹಿಂದೆಯೋ ಅಲೆದ ಮನುಷ್ಯನನ್ನು ನಾನು ಗಂಡ ಅಂತ ಗೌರವಿಸೋಕ್ಕೆ ಸಾಧ್ಯವಿಲ್ಲ. ಅವನನ್ನು ನೋಡಿದರೆ ಸಾಕು ನನ್ನ ಮೈಯೆಲ್ಲ

ಉರಿಯುತ್ತೆ. ಇನ್ನು ಪ್ರೀತಿಸೋ ಮಾತು ದೂರವೇ ಉಳೀತು. ತಲಾಕ್ ಅವರು ಕೋಡೋದಲ್ಲ; ನಾನೇ ತಗೋತೀನಿ. ನಾನಿನ್ನ ಆ ಮನೆಗೆ ಹೋಗೋದಿಲ್ಲ" (ಬಾನು ಮುಷ್ತಾಕ್ 2013: ಪುಟ 223). ಈ ಮಾತುಗಳಲ್ಲಿ ಸಂಪ್ರದಾಯ ತೊರೆದು ಗಂಡನನ್ನು ತ್ಯಜಿಸಿ ಬಾಳುವ ಮನೋಭಾವವನ್ನು ಹೆಣ್ಣೊಬ್ಬಳು ವ್ಯಕ್ತಪಡಿಸುವ ಬದಲಾವಣೆ ತಿಳಿಯುತ್ತದೆ.

ತವರಿನಿಂದ ಬಂದ ಅಣ್ಣಂದಿರು ಇನಾಯತ್‌ನಿಗೆ ಯಾವ ಬುದ್ಧಿ, ತಿಳುವಳಿಕೆಯನ್ನು ಹೇಳದೆ, ಮೆಹರುನ್‌ಳಿಗೆ ತಾಳ್ಮೆಯಿಂದ ಎಲ್ಲ ಸರಿದೂಗಿಸಿಕೋ ಎಂದು ಬುದ್ಧಿ ಹೇಳುತ್ತಾರೆ. ಅವಳ ಅಣ್ಣಂದಿರ ಈ ವರ್ತನೆ ಪುರುಷನಾದವ ಏನು ಮಾಡಿದರೂ ಸರಿ, ಅವನನ್ನು ಕೇಳಬಾರದು, ಹೆಣ್ಣು ಪ್ರಶ್ನಿಸಬಾರದು ಎಂಬ ಧೋರಣೆಯನ್ನು ತೋರಿಸುತ್ತದೆ. ಆದರೆ ಇನಾಯತ್ ಮೆಹರುನ್‌ಳಿಗೆ ಮಾಡಿದ ಅವಮಾನ, ಮಾನಸಿಕ ಆಘಾತ ಯಾವುದನ್ನೂ ಲೆಕ್ಕಿಸದೆ, ಇನಾಯತ್‌ನ ಕಪಟ ವರ್ತನೆಯನ್ನೇ ಸಮರ್ಥಿಸಿ ಹೋಗುವುದು ಹೆಣ್ಣಿನ ಮನಸ್ಸು, ಘನತೆ, ವ್ಯಕ್ತಿತ್ವ ಮತ್ತು ತ್ಯಾಗಕ್ಕೆ ಯಾವುದೇ ಬೆಲೆಯಿಲ್ಲದಿರುವುದನ್ನು ತೋರಿಸುತ್ತದೆ. ಇಂತಹ ಧೋರಣೆ ಮತ್ತು ಆಚರಣೆಗಳೇ ಸ್ತ್ರೀಶೋಷಣೆ ಮತ್ತು ಅಸಮಾನತೆಗೆ ಕಾರಣವಾಗುತ್ತವೆ. ಹೆಣ್ಣಿನ ಎದೆಯ ಹಣತೆ ಉರಿದು ಸಂಸಾರಕ್ಕೆ ಬೆಳಕಾದರೂ ಈ ಹಣತೆಗೆ ಯಾವುದೇ ಬೆಲೆಯಿಲ್ಲದಿರುವುದು ಹೆಣ್ಣು ಅಸಮಾನತೆಯ ತಳದಲ್ಲಿರುವುದನ್ನು ತೋರಿಸುತ್ತದೆ.

ಅಣ್ಣಂದಿರ ಉದಾಸೀನತೆ, ತಿರಸ್ಕಾರ, ಸ್ವಾರ್ಥ ಮತ್ತು ಗಂಡನಿಂದ ಆದ ಅವಮಾನ, ಅನ್ಯಾಯಗಳಿಂದ ನೊಂದು ದಿಕ್ಕು ಕಾಣದಾದ ಮೆಹರುನ್‌ಳು ಆತ್ಮಹತ್ಯೆಗೆ ಸಿದ್ಧವಾಗುತ್ತಾಳೆ. ಆದರೆ ಮಕ್ಕಳು ಕೊನೆಯ ಕ್ಷಣದಲ್ಲಿ ಅವಳನ್ನು ವಾಸ್ತವಕ್ಕೆ ತರುತ್ತಾರೆ. ತಾನು ತಪ್ಪು ಮಾಡುತ್ತಿದ್ದುದನ್ನು ನೆನೆದು ಮಕ್ಕಳಿಗಾಗಿ ಬದುಕಲು ತೀರ್ಮಾನಿಸುತ್ತಾಳೆ. ಇಲ್ಲಿ ಕಂಡುಬರುವುದೇನೆಂದರೆ ತನಗಾದ ಅವಮಾನಗಳಿಂದ ಸಾಯಲು ಸಿದ್ಧವಾಗಿದ್ದ ಮೆಹರುನ್ ಮಕ್ಕಳಿಗಾಗಿ ಬದುಕಲು ಬಯಸುವುದು. ಅಂದರೆ ಹೆಣ್ಣಿಗೆ ಕೇವಲ ಪುರುಷನೊಂದಿಗೆ ಜೀವನವೇ ಮುಖ್ಯವಲ್ಲ ಅವನಿಲ್ಲದೆಯೂ ಜೀವಿಸಬಲ್ಲಳು ಎಂದು ಬಾನು ಮುಷ್ತಾಕ್‌ರವರು ಈ ಕಥೆಯಲ್ಲಿ ಹೇಳಿದ್ದಾರೆ.

ಕಾರ್ಮೋಡ ಸರಿದರೆ ಬಿರುಗಾಳಿಯಿಂದ ಕೂಡಿದ ಬಿರುಮಳೆ ಬಂದು ಜನಜೀವನ ಅಸ್ತವ್ಯಸ್ತವಾಗಿ ಅಪಾರ ಹಾನಿಯುಂಟಾಗುತ್ತದೆ. ಇದೇ ರೀತಿ ಮಾನವನ ಬದುಕಿನಲ್ಲಿ ಅಂಧಕಾರ, ಅಂಧಶ್ರದ್ಧೆ, ಅರ್ಥವಿಲ್ಲದ ಸಂಪ್ರದಾಯಗಳ ಆಚರಣೆ ಕೂಡ ಬಿರುಗಾಳಿಯನ್ನುಂಟು ಮಾಡಿ ಜೀವನವನ್ನು ಹಾಳು ಮಾಡುತ್ತದೆ. ಇಂತಹ ಕಾರ್ಮೋಡ ಸರಿದು ದೂರಾದರೆ ಮಾನವನ ಬಾಳು ಬೆಳಗುತ್ತದೆ ಎಂಬ ಕಥಾವಸ್ತುವನ್ನು ಆಯ್ದುಕೊಂಡು ಬಾನು ಮುಷ್ತಾಕ್‌ರವರು 'ಸರಿದ

ಕಾರ್ಮೋಡ' ಕಥೆಯಲ್ಲಿ ಚಿತ್ರಿಸಿದ್ದಾರೆ. ಈ ಕಥೆಯಲ್ಲಿ ಬರುವ ಜಬೀನ್‌ಳ ಗಂಡ ನವಾಬ್ ಏಳು ಜನ ಸಹೋದರರಲ್ಲಿ ಒಬ್ಬನಾಗಿರುತ್ತಾನೆ. ಅಡುಗೆ ಮಾಡಿ ಊಟ ಮಾಡುವುದು ಮತ್ತು ಬೇರೆ ಮನೆಗಳಲ್ಲಿ ವಾಸ ಮಾಡುವುದು ಬಿಟ್ಟರೆ ಇವರಲ್ಲಿ ಉಳಿದ ಎಲ್ಲಾ ವಿಷಯಗಳಿಗೂ ನವಾಬ್‌ನ ಹಿರಿಯಣ್ಣನ ಮಾತು, ತೀರ್ಮಾನ ಮತ್ತು ಅನುಮತಿಯೇ ಅಂತಿಮ. ಈ ಮನೆಯ ಹೆಣ್ಣುಗಳಿಗೆ ಮುಸ್ಲಿಂ ಸಂಪ್ರದಾಯದ ಪ್ರಕಾರ ಯಾವುದೇ ಸ್ವಾತಂತ್ರ್ಯ ಇರುವುದಿಲ್ಲ. ಮಹಿಳೆಯರು ಮನೆಯೊಳಗೆ ಇರಬೇಕು, ಬೇರೆ ಪುರುಷರನ್ನು ನೋಡಬಾರದು, ಬುರ್ಕಾ ಇಲ್ಲದೆ ಹೊರಗೆ ಹೋಗಬಾರದು ಎಂಬ ಕಟ್ಟಪ್ಪಣೆಯನ್ನು ಪಾಲಿಸಲೇಬೇಕು, ಇಲ್ಲವಾದಲ್ಲಿ ಹಿರಿಯಣ್ಣನಿಂದ ಮೂಳೆ ಮುರಿಯುವವರೆಗೂ ಹೊಡೆತ. ಇಂತಹ ಕುಟುಂಬದಲ್ಲಿ ನವಾಬ್ ಆಧುನಿಕ ಮನೋಭಾವದ ಕುರುಡು ಸಂಪ್ರದಾಯಗಳನ್ನು ಬಿಟ್ಟು ಹೆಣ್ಣು ಕೂಡ ತನ್ನ ಮನೋಭಿಲಾಷೆಗಳನ್ನು ಪೂರೈಸಿಕೊಳ್ಳಬೇಕು ಮತ್ತು ಇತರೆ ಜಾತಿಯ ಹೆಣ್ಣುಗಳ ರೀತಿ ಬುರ್ಕಾ ಇಲ್ಲದೆ ಓಡಾಡಬೇಕೆಂದು ಬಯಸುತ್ತಾನೆ. ಅವನ ಹಿರಿಯಣ್ಣನಿಗೆ ಅಂಜಿದರೂ ಮನೆಯಲ್ಲಿ ಕಿಟಕಿಗಳನ್ನಿಡಿಸಿ, ಕುರ್ಚಿ ಟೇಬಲ್‌ಗಳನ್ನು ತಂದು ಟೇಪ್‌ರೆಕಾರ್ಡರ್ ಹಾಕಿ ಬದಲಾವಣೆಯ ಗಾಳಿಯನ್ನು ಮನೆಯ ಅಂಗಳಕ್ಕೆ ತರುತ್ತಾನೆ. ಮಡದಿಗೆ ಹೊಸ ಸೀರೆ ತಂದು ಕೊಟ್ಟು ಅವಳ ಮನಸ್ಸಿಗೆ ಸಂತೋಷವಾಗುವಂತೆ ಮಾಡುತ್ತಾನೆ.

ಇದು ಬಾನು ಮುಷ್ತಾಕ್‌ರವರು ಮುಸ್ಲಿಂ ಯುವಕರಲ್ಲಿ ಆಗುತ್ತಿರುವ ಬದಲಾವಣೆಯನ್ನು ಗ್ರಹಿಸಿರುವುದನ್ನು ತೋರಿಸುತ್ತದೆ. ಅಂದರೆ ಮುಸ್ಲಿಂ ಯುವಕರಲ್ಲಿಯೂ ಸಹ ಆಧುನಿಕ ಮನೋಭಾವ ಬೆಳೆಯುತ್ತಿದ್ದು ಅದು ಹೆಣ್ಣಿನ ಮನಸ್ಥಿತಿಯನ್ನು ಅರಿತು ಅವಳ ಆಸೆ ಅಭಿಲಾಷೆಗಳನ್ನು ಪೂರೈಸಿ ಅವಳನ್ನು ಸಮಾನ ಜೀವಿಯಾಗಿ ಕಾಣುವ ದಿಕ್ಕಿನೆಡೆಗೆ ಸಾಗುವ ಕಿರಣವೊಂದನ್ನು ಬಾನು ಮುಷ್ತಾಕ್‌ರವರು ಚಿತ್ರಿಸಿದ್ದಾರೆ. ಆದರೆ ಸಂಪ್ರದಾಯವಾದಿ ಅಣ್ಣ, ತಮ್ಮನ ಆಧುನಿಕ ಜೀವನ, ಬದಲಾವಣೆಗೆ ಹೆಂಡತಿ ಜಬೀನಳೇ ಕಾರಣ ಎಂದು ಅವರಿಬ್ಬರನ್ನೂ ದ್ವೇಷಿಸುತ್ತಾನೆ. ನವಾಬನ ಅಣ್ಣ ತನ್ನ ಹೆಂಡತಿಯ ಅಸೂಯೆಯ ಮಾತುಗಳನ್ನು ಕೇಳಿ ಮತ್ತು ಅವನ ಇಚ್ಛೆಯಂತೆ ಬುರ್ಕಾ ತೊಡದೆ ಗಂಡನೊಡನೆ ರಸ್ತೆಯಲ್ಲಿ ನಡೆದು ಬರುತ್ತಿದ್ದ ಜಬೀನಳನ್ನು ನೋಡಿದವನು ನವಾಬನಿಗೆ ಹಿಗ್ಗಾಮುಗ್ಗಾ ಥಳಿಸುತ್ತಾನೆ. ಬಿಡಿಸಲು ಬಂದ ಜಬೀನಳನ್ನು ಬಲವಾಗಿ ತಳ್ಳಿ ಅವಳನ್ನು ಘಾಸಿಗೊಳಿಸುತ್ತಾನೆ. ಇದು ಹಿರಿಯರು ತಮ್ಮ ಸಂಪ್ರದಾಯವಾದೀ ಹಾಗೂ ಗುಲಾಮಿ ಪದ್ಧತಿಗೆ ಧಕ್ಕೆಯಾದಾಗ ನಡೆಸುವ ಹಿಂಸೆ ಮತ್ತು ದೌರ್ಜನ್ಯವನ್ನು ಸಂಕೇತಿಸುತ್ತದೆ.

ಜಬೀನಳ ಮೇಲೆ ಕೋಪವಿದ್ದ ನವಾಬನ ಅಣ್ಣ ಸೇಡು ತೀರಿಸಿಕೊಳ್ಳಲು ಮತ್ತು ಹೆಣ್ಣನ್ನು ಅಡಿಯಾಳಾಗಿಸಿ ಅವಳ ಮೇಲೆ ಅಧಿಕಾರ ಸ್ಥಾಪಿಸಲು ನವಾಬನಿಗೆ ಎರಡನೆ ಮದುವೆಗೆ ಸಿದ್ಧತೆ ಮಾಡುತ್ತಾನೆ. ಆದರೆ ಎರಡನೇ ಮದುವೆಯನ್ನು ಬಯಸದ ನವಾಬ್ ಮದುವೆಯ ದಿನ ಸ್ನೇಹಿತರೊಡಗೂಡಿ ಓಡಿ ಬಂದು ಜಬೀನಳನ್ನು ಸೇರುತ್ತಾನೆ. ಕಥೆಯಲ್ಲಿ ಬರುವ ಪ್ರಸಂಗಗಳಾದ ಮುಸ್ಲಿಂ ಗಂಡಸರೂ ಕೂಡ ಬದಲಾಗುತ್ತಿರುವ, ಜೊತೆಗೆ ಸ್ತ್ರೀಯರೂ ಕೂಡ ಕನಿಷ್ಠ ತಮ್ಮ ಗಂಡಂದಿರೊಡನಾದರೂ ತಮ್ಮ ಅಭಿಪ್ರಾಯ ವ್ಯಕ್ತಪಡಿಸುವ ಸ್ವಾತಂತ್ರ್ಯವನ್ನು ತೋರಿಸುತ್ತವೆ. ಬಾನು ಮುಷ್ತಾಕ್‌ರವರು ಮುಸ್ಲಿಂ ಯುವ ಪೀಳಿಗೆಯಲ್ಲಿ ಆಗುತ್ತಿರುವ ಬದಲಾವಣೆಯನ್ನು ಈ ಕಥೆಯಲ್ಲಿ ತೋರಿಸುತ್ತಾ ಅಂಧಕಾರ, ದೌರ್ಜನ್ಯ, ಕೆಟ್ಟ ಸಂಪ್ರದಾಯಗಳೆಂಬ ಕಾರ್ಮೋಡಗಳು ಸರಿದು ಎಲ್ಲರೂ ಸಮಾನವಾಗಿ ಬಾಳಲಿ ಎಂಬ ಧೋರಣೆಯನ್ನು ಪ್ರದರ್ಶಿಸುತ್ತಾರೆ.

ಸಮಾಜದ ಬಲಿಷ್ಠ ವ್ಯವಸ್ಥೆಯಾದ ಕುಟುಂಬದೊಳಗೆ ಹೆಣ್ಣಿನ ಮೇಲೆ ನಡೆಯುವ ಕ್ರೌರ್ಯ, ಅನ್ಯಾಯ, ಶೋಷಣೆಗಳನ್ನು ಅದರ ಜೊತೆಯಲ್ಲೆ ಪುರುಷರಲ್ಲಿ ಸ್ತ್ರೀಯರ ಕುರಿತು ಬದಲಾಗುತ್ತಿರುವ ಮನೋಭಾವವನ್ನು ಮೇಲಿನ ಕಥೆಗಳ ಕಥಾವಸ್ತುಗಳು ಚಿತ್ರಿಸುತ್ತವೆ. ಕಥೆಯಲ್ಲಿ ಗಂಡನಿಂದ ಶೋಷಣೆಗೊಳಗಾದ ಹೆಣ್ಣೊಬ್ಬಳು ಮನೆಯನ್ನು ತೊರೆದು ಮಕ್ಕಳೊಂದಿಗೆ ಹೊಸ ಜೀವನ ಕಟ್ಟಿಕೊಳ್ಳುವ ಕಥಾವಸ್ತು ಹೆಣ್ಣು ಸಂಧರ್ಭ ಬಂದರೆ ಏಕಾಂಗಿಯಾದರೂ ಶೋಷಣೆ ಮುಕ್ತ ಜೀವನವನ್ನು ಕಟ್ಟಿಕೊಳ್ಳಬೇಕು ಎಂದು ತೋರಿಸುತ್ತದೆ. ಸಮಾಜದ ವಿವಿಧ ವರ್ಗಗಳ ಅಂದರೆ ಬಡವ, ಮಧ್ಯಮ ಮತ್ತು ಶ್ರೀಮಂತ ಕುಟುಂಬಗಳ ಮಹಿಳೆಯರೂ ಕೂಡ ಕುಟುಂಬ ಮತ್ತು ಸಮಾಜದಲ್ಲಿ ನೋವು, ಅನ್ಯಾಯ, ಶೋಷಣೆಗಳನ್ನು ಎದುರಿಸಬೇಕು, ಇದರಲ್ಲಿ ಹೆಚ್ಚಿನ ವ್ಯತ್ಯಾಸವೇನೂ ಇಲ್ಲ ಎಂಬ ಅಂಶ ಕಂಡುಬರುತ್ತದೆ. ಮನೋ ವಿಶ್ಲೇಷಣಾತ್ಮಕ ಕಥೆಗಳನ್ನು ಬರೆದ ತ್ರಿವೇಣಿಯವರು ಕುಟುಂಬದೊಳಗಡೆ ಹೆಣ್ಣಿನ ಮೇಲೆ ನಡೆಯುವ ದೌರ್ಜನ್ಯಗಳನ್ನು ಪ್ರತಿಭಟಿಸಿ ತಮ್ಮ ಜೀವನ ಕಟ್ಟಿಕೊಳ್ಳಬೇಕು ಎಂಬುದನ್ನು ನಿರೂಪಿಸುತ್ತಾರೆ. ಹೆಣ್ಣು ಮದುವೆಯಾಗಿ ಕುಟುಂಬದೊಳಗೆ ಸೇರಿದರೆ ಅವಳ ವ್ಯಕ್ತಿತ್ವ, ಚಿಂತನೆ, ಕ್ರಿಯಾಶೀಲತೆಯೆಲ್ಲ ನಿಂತು ಅವಳೊಂದು ಜೀವಂತ ಹೆಣವಾಗುವುದನ್ನು ವೀಣಾ ಶಾಂತೇಶ್ವರರು ತೋರಿಸಿ ಹೆಣ್ಣಿನ ಜೀವನ ಆ ರೀತಿ ಆಗದೆ ಸಂಸಾರದೊಂದಿಗೆ ಅವಳ ಕ್ರಿಯಾಶೀಲತೆ–ವ್ಯಕ್ತಿತ್ವವೂ ಉಳಿಯಬೇಕು ಎಂಬುದನ್ನು ತೋರಿಸುತ್ತಾರೆ. ಸ್ತ್ರೀಲೋಲುಪನಾದ ಗಂಡನಿಂದ ಪರಿತ್ಯಕ್ತಳಾದ ಹೆಣ್ಣು ಕುಟುಂಬ ಮತ್ತು ಸಮಾಜದ ತಿರಸ್ಕಾರಕ್ಕೆ ಒಳಗಾಗಿ ಮಾನಸಿಕವಾಗಿ ಜರ್ಜರಿತಳಾಗಿ ತನ್ನ ಸುತ್ತ ಕೋಟೆ ಕಟ್ಟಿಕೊಂಡು ಅದರೊಳಗೆ ಒಂಟಿಯಾಗಿ ಜೀವಿಸುವ ಚಿತ್ರಣವನ್ನು ವೈದೇಹಿಯವರ ಕಥೆ

ಚಿತ್ರಿಸುತ್ತದೆ. ಗೀತಾ ನಾಗಭೂಷಣರವರು ಹೆಣ್ಣು ತನ್ನ ಮೇಲಿನ ದೌರ್ಜನ್ಯ, ಶೋಷಣೆ, ವ್ಯಕ್ತಿತ್ವ ಹಾನಿ ಘಟನೆಗಳು ನಡೆದಾಗ ಅವನ್ನು ಎದುರಿಸಿ ತಮ್ಮತನವನ್ನು ಪ್ರದರ್ಶಿಸುವ ಎದೆಗಾರಿಕೆಯನ್ನು ಪ್ರಕಟಿಸುತ್ತಾರೆ. ಹೆಣ್ಣಿನ ಶೋಷಣೆಗೆ ಪುರುಷನಷ್ಟೇ ಹೆಣ್ಣೂ ಕೂಡ ಕಾರಣಳು ಮತ್ತು ಪುರುಷನ ಮೋಸದಾಟಕ್ಕೆ ಹೆಣ್ಣು ಭಾಗಿಯಾಗುವುದರಿಂದ ಮತ್ತೊಂದು ಹೆಣ್ಣಿನ ಬಾಳು ಹಾಳಾಗುವುದು ಸಮಾಜದಲ್ಲಿ ನಡೆಯುತ್ತಿರುವ ಸಂಗತಿಗಳು ಎಂಬುದನ್ನು ನೇಮಿಚಂದ್ರ ತೋರಿಸಿದ್ದಾರೆ. ಹೆಣ್ಣಿಗೆ ಗಂಡನೇ ಅಂತಿಮ ಯಾವಾಗಲೂ ಅವನ ಅಧೀನದಲ್ಲೇ ಇರಬೇಕು, ಸ್ವಾವಲಂಬಿಯಾಗುವುದಕ್ಕೆ ಯಾವುದೇ ಅವಕಾಶಗಳಿಲ್ಲ ಎಂಬ ಮುಸ್ಲಿಂ ಕುಟುಂಬಗಳ ಚಿತ್ರಣವನ್ನು ಮತ್ತು ಅಂಧಕಾರ, ದೌರ್ಜನ್ಯ, ಕೆಟ್ಟ ಸಂಪ್ರದಾಯಗಳು ತೊಲಗಿ ಸ್ತ್ರೀ–ಪುರುಷರೆಲ್ಲರೂ ಸ್ವಾತಂತ್ರ್ಯ, ಸಮಾನತೆಯಿಂದ ಬಾಳಬೇಕು ಎಂಬ ಕಥಾವಸ್ತುವನ್ನು ಬಾನುಮುಷ್ತಾಕ್‌ರವರು ಚಿತ್ರಿಸಿದ್ದಾರೆ.

4.3. ಪೌರಾಣಿಕ ಪಾತ್ರಗಳ ನೆಲೆಯಲ್ಲಿ ಕಥಾವಸ್ತು

ಈ ಸಮಾಜದಲ್ಲಿ ಸ್ತ್ರೀ–ಪುರುಷರ ನಡುವಿನ ಅಸಮಾನತೆ ನಿಜ ಜೀವನದಲ್ಲಷ್ಟೇ ಅಲ್ಲದೆ, ಸ್ತ್ರೀ–ಪುರುಷರನ್ನು ರೂಪಿಸಲು ಸಮಾಜ ಬಳಸುವ ಪುರಾಣ ಪಾತ್ರಗಳಲ್ಲೂ ಸಹ ತುಂಬಿದೆ. ಪುರುಷ ಲೋಕ ಈ ಅಸಮಾನತೆಯನ್ನು ಸೃಷ್ಟಿಸಿ ಸ್ತ್ರೀ–ಮಾದರಿಗಳನ್ನು ರಚಿಸಿ ಸ್ತ್ರೀಯನ್ನು ಪುರುಷನ ಅಡಿಯಾಳಾಗಲು ತಯಾರು ಮಾಡುತ್ತದೆ. ಈ ಹಿನ್ನೆಲೆಯಲ್ಲಿ ಸ್ತ್ರೀ–ಪುರುಷರ ನಡುವಿನ ಅಸಮಾನತೆಯ ಕಥಾವಸ್ತುವನ್ನು ಪುರಾಣ ಪಾತ್ರಗಳ ನೆಲೆಯಲ್ಲಿ ಮಹಿಳಾ ಸಾಹಿತಿಗಳು ಚಿತ್ರಿಸಿರುವುದನ್ನು ವಿಶ್ಲೇಷಿಸಲಾಗಿದೆ. ಇಲ್ಲಿ ವೈದೇಹಿಯವರ 'ಶಕುಂತಲೆಯೊಂದಿಗೆ ಕಳೆದ ಅಪರಾಹ್ನ', ಎಂ.ಎಸ್. ವೇದಾ ಅವರ 'ಹೋಗಿ ಬರಲೆ ಭರತ ಮತ್ತು ಮರಳಿ ಬಾರದ ಶಾಕುಂತಲೆ' ಕಥೆಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ವೈದೇಹಿಯವರು ಪುರಾಣ ಕಥೆಗಳನ್ನು ಭಿನ್ನ ನೆಲೆಯಲ್ಲಿ ನೋಡುತ್ತಾ ಆ ಕಥೆಯಲ್ಲಿ ಗಂಡು ಮತ್ತು ಹೆಣ್ಣನ್ನು ಯಾವ ರೀತಿ ಲೋಕಕ್ಕೆ ತೋರಿಸುತ್ತಿದ್ದರು ಮತ್ತು ಎಲ್ಲ ಸಂಧರ್ಭಗಳಲ್ಲೂ ಹೆಣ್ಣಿಗೆ ತಪ್ಪಿನ ಹಣೆಪಟ್ಟಿ ಕಟ್ಟಿ ಪುರುಷನನ್ನು ಪ್ರಖರತೆಗೆ ಕೊಂಡೊಯ್ಯುತ್ತಿದ್ದರು ಎಂಬುದನ್ನು ಅವರ 'ಶಕುಂತಲೆಯೊಂದಿಗೆ ಕಳೆದ ಅಪರಾಹ್ನ' ಕಥೆಯಲ್ಲಿ ಚಿತ್ರಿಸಿದ್ದಾರೆ. ಜೊತೆಗೆ ಈ ಕಥೆಯಲ್ಲಿ ಶಕುಂತಲೆ ತನ್ನ ಜೀವನದಲ್ಲಿ ನಡೆದ ಘಟನೆಗಳನ್ನು ಅವಲೋಕಿಸುತ್ತಾ ಒಂದು ಹೆಣ್ಣಾಗಿ ತನ್ನ ವ್ಯಕ್ತಿತ್ವವನ್ನು ಗಟ್ಟಿಗೊಳಿಸಿಕೊಂಡು ಜೀವನದ ಕಷ್ಟಗಳಿಗೆ ಹೆದರದೆ ಒಬ್ಬಳೇ ಪೋಷಕಳಾಗಿ ಮಗುವನ್ನು ಬೆಳೆಸಿದ ರೀತಿಯನ್ನು ಸಮರ್ಥಿಸಿಕೊಳ್ಳುವುದನ್ನು ತೋರಿಸಿದ್ದಾರೆ. ಪುರುಷ ನಿರ್ಮಿತ ಪುರಾಣಗಳಲ್ಲಿ ಯಾವಾಗಲೂ ಹೆಣ್ಣೇ ದೋಷಿ ಎಂದು

ಚಿತ್ರಿಸಿರುವುದನ್ನು ವೈದೇಹಿಯವರು ಶಕುಂತಲೆಯ ಮುಖಾಂತರ "ಆತ ಬಂದದ್ದೇ ನನಗೆ ತಿಳಿಯಲಿಲ್ಲವೆಂಬಂತೆ ಕಥೆ ಸೃಷ್ಟಿಸಿದನಲ್ಲವೇ ಕವಿ? ಅವನನ್ನೇ ನಂಬಿತು ಲೋಕ. ಲೋಕಕ್ಕೆ ಸತ್ಯದ ತಂಪು ಬೇಡ. ಸುಳ್ಳಿನ ಪ್ರಖರತೆ ಬೇಕು. ಪ್ರೇಮದ ನಿಜ ಬೇಡ. ಸುಳ್ಳು ಬಿನ್ನಾಣ ಬೇಕು. ಕವಿಯೋ! ಕಾವ್ಯಮಯ ಸುಳ್ಳು ಹೇಳಿ ಜಗತ್ತನ್ನು ಮರುಳುಗೊಳಿಸುವ ಅಪ್ರತಿಮ. ಪ್ರಪಂಚ ಇವತ್ತು ಕಾಳಿದಾಸನನ್ನು ನಂಬುವಷ್ಟು ಶಕುಂತಲೆಯನ್ನು ನಂಬುತ್ತದೆಯೇ? ದುಷ್ಯಂತನ ವರ್ತನೆಗೆ ವ್ಯಾಖ್ಯಾನ ನೀಡಬಹುದು. ಶಕುಂತಲೆಯ ಹೃದಯಕ್ಕೆ?.. ಈ ಮನ ಲೌಕಿಕರ ವ್ಯಾಖ್ಯಾನಕ್ಕೆ ನಿಲುಕಲಾರದಂತಹುದು ಎಂದು ಹೇಳಿಕೊಳ್ಳುವುದು ನನಗೇ ಕ್ಷೇಮ" (ಸುಬ್ಬಣ್ಣ ಕೆ. ವಿ. ನೆನಪಿನ 'ಮೊದಲ ಓದು' ಪುಸ್ತಕ ಮಾಲೆ 2006: ಪುಟ 32) ಎಂದು ಹೇಳಿಸುತ್ತಾರೆ. ತನ್ನ ಮತ್ತು ದುಷ್ಯಂತನ ನಡುವೆ ಉಂಟಾದ ಪ್ರೀತಿಯ ಪರಿಣಾಮ ದುಷ್ಯಂತನ ವ್ಯಕ್ತಿತ್ವಗಳನ್ನು ಯೋಚಿಸುತ್ತಾ ಕುಳಿತಿರುವಾಗ ದೂರ್ವಾಸ ಋಷಿಗಳು ಬರುತ್ತಾರೆ. ಯೋಚನಾಮಗ್ನಳಾಗಿದ್ದ ಶಕುಂತಲೆ ಈ ಸಂದರ್ಭದಲ್ಲಿ ದೂರ್ವಾಸರು ಬಂದದ್ದನ್ನು ಗಮನಿಸಿದರೂ ಅವರನ್ನು ಉಪಚರಿಸುವುದಿಲ್ಲ. ಚಿಂತೆಯಲ್ಲಿ ಮುಳುಗಿದ್ದ ಶಕುಂತಲೆಯನ್ನು ಕಂಡು ದೂರ್ವಾಸರು ಚಿಂತೆಗೆ ಕಾರಣನಾದ ದುಷ್ಯಂತನ ಮೇಲೆ ಕ್ರೋಧಗೊಳ್ಳುತ್ತಾರೆ ಎಂದು ಶಕುಂತಲೆಯ ಮೂಲಕ ವೈದೇಹಿಯವರು ಹೇಳುತ್ತಾರೆ. ಆದರೆ ಪುರುಷ ಪ್ರಧಾನ ಸಮಾಜ ದುಷ್ಯಂತನನ್ನು ಹೊರಗಿಟ್ಟು ಶಕುಂತಲೆಯದೇ ತಪ್ಪು, ಆದ್ದರಿಂದ ದೂರ್ವಾಸರು ಶಾಪ ಕೊಟ್ಟರು ಎನ್ನುವ ರೀತಿ ಚಿತ್ರಿಸಿತು ಎಂದು ಹೇಳುತ್ತಾರೆ. ಕೋಪಗೊಂಡಿದ್ದ ದೂರ್ವಾಸರು ಶಕುಂತಲೆಯ ಮನವಿಯಿಂದ ದುಷ್ಯಂತನಿಗೆ ಶಾಪ ಕೊಡದೆ ತಾಳ್ಮೆ ತಂದುಕೊಂಡು ಅವಳಿಗೆ ಹರಸಿ "ಛೆ! ಆತ ಜಾಣ ಮರೆವಿನ ಮಲ್ಲ" (ಸುಬ್ಬಣ್ಣ ಕೆ. ವಿ. ನೆನಪಿನ 'ಮೊದಲ ಓದು' ಪುಸ್ತಕ ಮಾಲೆ 2006: ಪುಟ 33) ಎಂದು ಹೇಳುತ್ತಾರೆ. ದೂರ್ವಾಸರ ಈ ಮಾತು ಮನುಷ್ಯನ ಸಹಜ ಸ್ವಭಾವ ಅವನಿಗೆ ಬೇಡದ್ದನ್ನು ಮರೆಯುವುದನ್ನು ತೋರಿಸುತ್ತದೆ. ಆದರೆ ಇದಾವುದನ್ನೂ ಗಮನಿಸದೆ ಆಶ್ರಮವಾಸಿಗಳಲ್ಲಿ ಕೆಲವರು ಅವರವರದೇ ಕತೆ ಕಟ್ಟಿ ಸತ್ಯವನ್ನು ತಿರುಚಿದರು. ಇದೇ ರೀತಿ "ಕವಿ ಶಾಪ ಗೀಪ ಇತ್ಯಾದಿಗಳನ್ನೆಲ್ಲ ಅಡ್ಡ ಇಟ್ಟು ಪುರುಷರ ಲಂಪಟತ್ವ ಮುಚ್ಚಿಡಲು ಹವಣಿಸಿದ. ಎಲ್ಲ ಜಾಣ ಮರೆವಿನ ಮಲ್ಲರನ್ನೂ ತನ್ನ ತೆಕ್ಕೆಯೊಳಗೆ ಸುರಕ್ಷಿತವಾಗಿರಿಸುವ, ಪುರುಷ ಕಟ್ಟಿದ ವಿಸ್ಮರಣೆಯ ಕತೆ ರುಚಿಸಲೇಬೇಕು. ಕಾವ್ಯ ಮೀಯುವುದೇ ತನಗೆ ಬೇಕಾದ ಸುಖೋಷ್ಣ ಕಲ್ಪನೆಗಳಲ್ಲಿ" (ಸುಬ್ಬಣ್ಣ ಕೆ.ವಿ. ನೆನಪಿನ 'ಮೊದಲ ಓದು' ಪುಸ್ತಕ ಮಾಲೆ 2006: ಪುಟ 34) ಎಂದು ಹೇಳುವ ಶಕುಂತಲೆಯ ಮಾತುಗಳಲ್ಲಿ ವೈದೇಹಿಯವರು ನೋಡುವ ಭಿನ್ನ ಸ್ವರೂಪವನ್ನು, ಪುರುಷ ಹಿರಿಮೆಯನ್ನು ಎತ್ತಿ ಹಿಡಿದು ಅವನನ್ನು ಸುರಕ್ಷಿತವಾಗಿಸುವ, ಪುರುಷ ಸಮಾಜದ ಸ್ತ್ರೀವಿರೋಧಿ

ನಡೆಗಳನ್ನು ತೋರಿಸುತ್ತದೆ; ಹಾಗೂ ಪುರುಷರನ್ನು ಮೇಲಾಗಿ ಮತ್ತು ಸ್ತ್ರೀಯರನ್ನು ಕೀಳಾಗಿ ಕಂಡ ಸಮಾಜದ ನಡೆನುಡಿಗಳನ್ನು ಚಿತ್ರಿಸುತ್ತಾ, ಸ್ತ್ರೀ–ಪುರುಷರ ಮಧ್ಯೆ ಇದ್ದ ಅಸಮಾನತೆಯನ್ನು ಪ್ರಕಟಿಸುತ್ತಾರೆ.

ಪುರಾಣಗಳಲ್ಲಿ ಸ್ತ್ರೀ–ಪುರುಷರ ನಡುವಿನ ತಾರತಮ್ಯವನ್ನು ಗುರ್ತಿಸಿದ ವೈದೇಹಿಯವರ ಈ ಕಥೆ ಶಕುಂತಲೆಯ ಮೂಲಕವೇ ಹೆಣ್ಣು ಸ್ವಾಭಿಮಾನಿಯಾಗಿ, ಧೈರ್ಯದಿಂದ ಜಗತ್ತನ್ನು ಎದುರಿಸಿ ಜೀವನ ನಡೆಸುವ ರೀತಿಯನ್ನು ತೋರಿಸುತ್ತದೆ. ಶಕುಂತಲೆಯು ಗೌತಮಿ, ಶಾರ್ಜ್ಞರವರೊಡನೆ ಕಣ್ವರ ಆಶ್ರಮದಿಂದ ದುಷ್ಯಂತನನ್ನು ಕಾಣಲು ಆಸ್ಥಾನಕ್ಕೆ ಬರುತ್ತಾಳೆ. ಆದರೆ ದುಷ್ಯಂತ "ನಾನೀಕೆಯನ್ನು ಎಂದೂ ಕಂಡದ್ದೇ ಇಲ್ಲ" (ಸುಬ್ಬಣ್ಣ ಕೆ. ವಿ. ನೆನಪಿನ 'ಮೊದಲ ಓದು' ಪುಸ್ತಕ ಮಾಲೆ 2006: ಪುಟ 35) ಎನ್ನುತ್ತಾನೆ. ದುಷ್ಯಂತ ತನ್ನನ್ನು ಮರೆತಿರುವುದನ್ನು ಕಂಡು ಅವಾಕ್ಕಾಗುತ್ತಾಳೆ. ಕೋಪ, ಆವೇಶ, ದುಃಖ ಎಲ್ಲವನ್ನು ತಡೆದುಕೊಂಡು ಮಾತನಾಡಲಾರದಾಗುತ್ತಾಳೆ. ಜೊತೆಯಲ್ಲಿದ್ದ ಗೌತಮಿ ಉಂಗುರವನ್ನು ತೋರಿಸು ಎಂದಾಗ "ಉಂಗುರ ತೋರಿಸಿ ಪ್ರೇಮದಾನ ಪಡೆಯುವಷ್ಟು ಶೂನ್ಯಳೇ ನಾನು?" (ಸುಬ್ಬಣ್ಣ ಕೆ. ವಿ. ನೆನಪಿನ 'ಮೊದಲ ಓದು' ಪುಸ್ತಕ ಮಾಲೆ 2006: ಪುಟ 36) ಎಂದು ಹೇಳಿ ಉಂಗುರ ಕಳೆದುಹೋಗಿದೆ ಎಂದು ತಿಳಿಸಿ 'ಮರೆವಿನ ನಟನೆಗೆ ಉಂಗುರ ಎಂದಾದರೂ ಔಷಧಿಯಾಗಿರುವುದು ಇದೆಯೇ?' (ಸುಬ್ಬಣ್ಣ ಕೆ. ವಿ. ನೆನಪಿನ 'ಮೊದಲ ಓದು' ಪುಸ್ತಕ ಮಾಲೆ 2006: ಪುಟ 36) ಎಂದುಕೊಳ್ಳುತ್ತಾಳೆ. ವೈದೇಹಿಯವರು ಈ ಕಥೆಯಲ್ಲಿ ಶಕುಂತಲೆ ಒಂದು ಹೆಣ್ಣಾಗಿ ದುಷ್ಯಂತನ ವರ್ತನೆಯನ್ನು ಖಂಡಿಸದೆ, ಪ್ರಶ್ನಿಸದೆ, ಅವಮಾನಿಸದೆ, ತನ್ನ ವ್ಯಕ್ತಿತ್ವವನ್ನು ಗಟ್ಟಿಗೊಳಿಸಿಕೊಳ್ಳುವ ರೀತಿ ತೋರಿಸಿದ್ದಾರೆ. ನನ್ನನ್ನು ಮರೆತ ದುಷ್ಯಂತನಿಗೆ ಒಂದು ವಸ್ತು ತೋರಿಸಿ ಪ್ರೀತಿಯನ್ನು ಜ್ಞಾಪಿಸುವಷ್ಟು ಶೂನ್ಯ ಸ್ಥಾನಕ್ಕೆ ನಾನಿಳಿಯಲಾರೆ ಎಂದು ಯೋಚಿಸುವುದು ಹೆಣ್ಣು ತನ್ನನ್ನು ಗಂಡಿಗೆ ಸಮಾನ ನೆಲೆಯಲ್ಲಿ ನಿಲ್ಲಿಸುವ ಪ್ರಯತ್ನಕ್ಕೆ ಕುರುಹಾಗುತ್ತದೆ.

ದುಷ್ಯಂತನನ್ನು ಗಮನಿಸಿದ ಶಕುಂತಲೆ ಅಂದು ನೋಡಿದ ದುಷ್ಯಂತ ಮನುಷ್ಯ ಜೀವಿಯಾಗಿದ್ದ, ಆದರೆ ಇಂದಿನ ದುಷ್ಯಂತನಲ್ಲಿ ಮನುಷ್ಯನ ಲಕ್ಷಣಗಳೇ ಕಾಣುತ್ತಿಲ್ಲ ಎಂದು ಯೋಚಿಸುತ್ತಾಳೆ. ಇದು ಪುರುಷ ಮನುಷ್ಯತ್ವವನ್ನು ಕಳೆದುಕೊಳ್ಳುತ್ತಿರುವುದನ್ನು ಸೂಚಿಸುತ್ತದೆ. ಅರ್ಥೈಸಿದರೆ ಮನುಷ್ಯತ್ವವನ್ನು ಕಳೆದುಕೊಂಡ ಪುರುಷ ಹೇಗೆ ತಾನೆ ತನ್ನ ಸಹಜೀವಿ ಹೆಣ್ಣನ್ನು ಮನುಷ್ಯಳಾಗಿ ಕಂಡು ಸಮಾನತೆಯನ್ನು ಕೊಡುತ್ತಾನೆ ಎಂದು ಹೇಳಬಹುದು. ದುಷ್ಯಂತ ಗುರುತು ಹಿಡಿಯದಿದ್ದಾಗ ಶಕುಂತಲೆ ಅವನಿಂದ ದೂರವಿದ್ದು ನಾನು ಬದುಕನ್ನು ನಿರ್ವಹಿಸಬಲ್ಲೆ

ಎಂದು ಯೋಚಿಸಿ ಕಣ್ವರ ಆಶ್ರಮಕ್ಕೆ ಹೋಗದೆ ಕಾಡಿನ ಕಡೆ ನಡೆಯುವಾಗ "ಸ್ವತಂತ್ರ್ಯ, ಏಕಾಂತವಾಸಕ್ಕೆ ನಾಡಾದರೇನು, ಕಾಡಾದರೇನು, ಗಿರಿಯಾದರೇನು? ಒಮ್ಮೆ ಪೂರ್ಣ ಬಯಲಾದ ಬಳಿಕ ಹೊಟ್ಟೆಯಲ್ಲಿ ಜಗತ್ತನ್ನೇ ಧಿಕ್ಕರಿಸುವಂಥ ಸುಖ ಬೆಳೆಯುತ್ತಿತ್ತು. ಬದುಕಲು ಕಲಿತೆ, ವಿಮುಖತೆಯನ್ನಲ್ಲ, ಮಗುವನ್ನು ದಟ್ಟ ಕಾಡಿನಲ್ಲಿ ತ್ಯಜಿಸಿ ತಪ್ಪಿ ಓಡುವುದಲ್ಲ, ಭೂಮಿಯೇ ಬಾಯಿ ತೆರೆ ಎಂದು ಚೀರಾಡುವುದಲ್ಲ" (ಸುಬ್ಬಣ್ಣ ಕೆ. ವಿ. ನೆನಪಿನ 'ಮೊದಲ ಓದು' ಪುಸ್ತಕ ಮಾಲೆ 2006: ಪುಟ 36) ಎಂದು ಹೇಳುತ್ತಾಳೆ. ಇದು ಹೆಣ್ಣು ಆತ್ಮಸ್ಥೈರ್ಯ ಬೆಳೆಸಿಕೊಂಡು ಜೀವನವನ್ನು ಸ್ವತಂತ್ರವಾಗಿ ಎದುರಿಸಲು ನಿರ್ಧಾರ ಕೈಗೊಳ್ಳುವುದನ್ನು ತೋರಿಸುತ್ತದೆ.

ಶಕುಂತಲೆ ಕಾಡಿನಲ್ಲಿ ಮಗನೊಂದಿಗೆ ಸ್ವತಂತ್ರ ಜೀವನ ನಡೆಸುತ್ತಿದ್ದಾಗ, ಒಂದು ದಿನ ದುಷ್ಯಂತ ಬಂದು ಮಗನನ್ನು ಕರೆದುಕೊಂಡು 'ಬಾ' ಎಂದು ಹೇಳುತ್ತಾನೆ. ಆಗ ಶಕುಂತಲೆ "ನನಗಾತ ಅನಿವಾರ್ಯನೆಂದ ಮಾತ್ರಕ್ಕೆ ನಾನು ಆತನಿಗೆ ಅನಿವಾರ್ಯವಾಗಬೇಕಿಲ್ಲವೆಂಬ ಸತ್ಯದಂಚಿನಲ್ಲಿ ನಿಂತು ಚಿಂತಿಸಿದೆ. ಪರಸ್ಪರ ಅನಿವಾರ್ಯವಾಗುವವರೆಗೆ (ಅದು ಎಂದಿಗೂ ಸಾಧ್ಯವಿಲ್ಲದ ಮಾತಾಗಿರಬಹುದು. ಆದರೆ ಎಲ್ಲ ಚಿರಂತನ ನುಡಿಗಳಿಗೂ ಅಪವಾದಗಳಿರುತ್ತವೆ) ಕೂಡುವುದೂ ತಪ್ಪು ಎನಿಸಿತು" (ಸುಬ್ಬಣ್ಣ ಕೆ. ವಿ. ನೆನಪಿನ 'ಮೊದಲ ಓದು' ಪುಸ್ತಕ ಮಾಲೆ 2006: ಪುಟ 35) ಎಂದು ದುಷ್ಯಂತನೊಂದಿಗೆ ಹೋಗುವುದಿಲ್ಲ. ಇಂತಹ ಭಿನ್ನ ನೆಲೆಯಲ್ಲಿ ಶಕುಂತಲೆಯ ಚಿತ್ರಣವನ್ನು ವೈದೇಹಿಯವರು ಕಟ್ಟುವ ಮೂಲಕ ಶಕುಂತಲೆಯನ್ನು ದಿಟ್ಟ ಹೆಣ್ಣಾಗಿ, ಪುರುಷನಿಗೆ ಸಮನಾಗಿ ಚಿತ್ರಿಸಿ ಪುರಾಣಗಳಲ್ಲಿ ಅಡಗಿರುವ ಸ್ತ್ರೀ–ಪುರುಷರ ನಡುವಿನ ಅಸಮಾನತೆಯನ್ನು ತೋರಿಸಿದ್ದಾರೆ.

ವೇದಾರವರು ಪುರಾಣ ಕಥಾಪ್ರಸಂಗಗಳಲ್ಲಿ ಅವ್ಯಕ್ತವಾಗಿರುವ ಸ್ತ್ರೀಶೋಷಣೆ, ದೌರ್ಜನ್ಯಗಳನ್ನು ಚಿತ್ರಿಸುತ್ತಾ, ಈ ಕಥಾಪ್ರಸಂಗಗಳನ್ನು ಸಮಕಾಲೀನ ಪರಿಸ್ಥಿತಿಗೆ ತಂದು, ಆ ಸ್ತ್ರೀಪಾತ್ರಗಳ ಮುಖಾಂತರ ಹೆಣ್ಣಿನ ವ್ಯಕ್ತಿತ್ವವನ್ನು ಗಟ್ಟಿಗೊಳಿಸುತ್ತಾ, ಅವಳ ಸ್ವಾಭಿಮಾನ ಹೊರಹೊಮ್ಮುವುದನ್ನು 'ಹೋಗಿ ಬರಲೆ ಭರತ' ಮತ್ತು 'ಮರಳಿ ಬಾರದ ಶಾಕುಂತಲೆ' ಕಥೆಗಳಲ್ಲಿ ತೋರಿಸುತ್ತಾರೆ. ಕಣ್ವರ ಆಶ್ರಮದಲ್ಲಿದ್ದ ಶಕುಂತಲೆ ದುಷ್ಯಂತನ ಪ್ರೀತಿಯಲ್ಲಿ ಸಿಲುಕುತ್ತಾಳೆ ಮತ್ತು ಗರ್ಭಿಣಿಯಾಗುತ್ತಾಳೆ. ಅರಮನೆಗೆ ಕರೆಸಿಕೊಳ್ಳುತ್ತೇನೆ ಎಂದು ಹೇಳಿ ಹೋದ ದುಷ್ಯಂತ ಶಕುಂತಲೆಯನ್ನು ಮರೆಯುತ್ತಾನೆ. ಅವನ ನಿರೀಕ್ಷೆಯಲ್ಲಿದ್ದ ಶಕುಂತಲೆಯ ವ್ಯಕ್ತಿತ್ವ ಗಟ್ಟಿಗೊಳ್ಳುವ, ಅವಳ ಮಾನಸಿಕ ಸ್ಥೈರ್ಯ ಹೆಚ್ಚಾಗುವ, ಸ್ವತಂತ್ರ ಸ್ವಾಭಿಮಾನಿಯಾಗಿ ರೂಪುಗೊಳ್ಳುವ ಭಿನ್ನ ಕಥಾರೂಪವನ್ನು ವೇದಾರವರು ಕೊಡುತ್ತಾರೆ. ಲೇಖಕಿ ಹೇಳುವ 'ಕಣ್ವರ ಪ್ರೀತಿ, ಆಶ್ರಮದ

ಪರಿಸರಗಳಿಂದ ಶಕುಂತಲೆಯನ್ನು ಆವರಿಸಿದ್ದ ಕೋಮಲ, ಮುಗ್ಧತೆಯ ಪೊರೆಗಳು ಸಂಪೂರ್ಣವಾಗಿ ಕಳಚಿಕೊಳ್ಳತೊಡಗಿದ್ದವು. ಪ್ರೀತಿ ಪ್ರೇಮದ ಹೆಸರಿನಲ್ಲಿ ಆತನೊಂದಿಗೆ ನಡೆದ ಸಮಾಗಮ, ಬಲಾತ್ಕಾರದ ಅತ್ಯಾಚಾರ ಎನ್ನಿಸತೊಡಗಿ, ಆತನ ಕುಟಿಲತೆ, ಮೋಸ, ವಂಚನೆಗಳಿಗೆ ಮೈಯೊಡ್ಡಿ ನಿಂತ ಶಕುಂತಲೆಯ ಮೈಮನಗಳು ಶಿಲೆಯಂತೆ ಕಠಿಣವಾಗತೊಡಗಿದ್ದವು" (ವೇದಾ ಎಂ.ಎಸ್. 2010: ಪುಟ 293) ಮಾತುಗಳು ಪುರುಷರ ಮೋಸಕ್ಕೆ ಒಳಗಾದ ಹೆಣ್ಣಿನ ಮಾನಸಿಕ ಸ್ಥಿತಿ ಕಠಿಣವಾಗುವುದನ್ನು ಮತ್ತು ಆ ಪ್ರಸಂಗವನ್ನು ಅತ್ಯಾಚಾರಕ್ಕೆ ಹೋಲಿಸಿ ತನ್ನ ವಿರುದ್ಧ ನಡೆದ ದೌರ್ಜನ್ಯವನ್ನು ಅರಿಯುವ ಹೆಣ್ಣಿನ ಚಿತ್ರಣವನ್ನು ಕೊಡುತ್ತವೆ. ಗರ್ಭವತಿಯಾದ ಶಕುಂತಲೆಯನ್ನು ನೋಡಿಕೊಳ್ಳಲು ಹೋಗುತ್ತೇನೆಂದು ಅನುಮತಿ ಕೇಳಿದ ಮೇನಕೆಗೆ ಮಹೇಂದ್ರ ಅನುಮತಿಯನ್ನು ನಿರಾಕರಿಸುತ್ತಾನೆ. ಆದರೆ ಮೇನಕೆ "ನಿಮ್ಮ ಅಮೃತತ್ವಕ್ಕಿಂತ ನನ್ನ ಮಾತೃತ್ವ ನನಗೆ ಹಿರಿದೆನಿಸಿದೆ. ಉಚ್ಚಾಟನೆಯ ಬೆದರಿಕೆಗೆ ಬಗ್ಗುವವಳಲ್ಲ ನಾನು. ಆಶ್ರಯ ಬೇಡಿ ನಿಂತರೆ ನೀಡಲು ಕಣ್ವರಂಥವರು ಮಾನವರಲ್ಲಿ ನೂರು ಮಂದಿ ಇದ್ದಾರೆ" (ವೇದಾ ಎಂ.ಎಸ್. 2010: ಪುಟ 296) ಎಂದು ಹೇಳಿ ತಾನೇ ತೀರ್ಮಾನ ತೆಗೆದುಕೊಳ್ಳುತ್ತಾಳೆ. ಇದು ಹೆಣ್ಣು ಯಾವಾಗಲೂ ಗಂಡಿನ ಅಧೀನದಲ್ಲಿರದೆ ತನ್ನ ಸ್ವಂತ ಅಭಿಪ್ರಾಯಗಳಿಗೂ ಮನ್ನಣೆ ಕೊಟ್ಟು ನಡೆಯಬೇಕು ಮತ್ತು ಪುರುಷರೂ ಕೂಡ ಈ ನಡೆಗೆ ಹೊಂದಿಕೊಳ್ಳಬೇಕು ಎಂಬುದನ್ನು ಸೂಚಿಸುತ್ತದೆ.

ದುಷ್ಯಂತನಿಂದ ಮಾತು ಪಡೆದಿದ್ದ ಶಕುಂತಲೆ ತನ್ನ ಮಗ ಸರ್ವಧಮನನಿಗೆ ಯುವರಾಜ ಪಟ್ಟವನ್ನು ಕೇಳಲು ದುಷ್ಯಂತನ ಆಸ್ಥಾನಕ್ಕೆ ಬರುತ್ತಾಳೆ. ಈ ಸಂದರ್ಭದಲ್ಲಿ ನಡೆಯುವ ಅವರೀರ್ವರ ನಡುವಿನ ಸಂವಾದ ಶಕುಂತಲೆಯ ಪ್ರಬುದ್ಧತೆ, ಗಾಂಭೀರ್ಯ, ಧೃಡನಿಶ್ಚಯಗಳನ್ನು ವ್ಯಕ್ತಪಡಿಸುತ್ತದೆ ಮತ್ತು ದುಷ್ಯಂತನ ವರ್ತನೆ ಹೆಣ್ಣನ್ನು ಕೀಳಾಗಿ ನೋಡುವ ರೀತಿಯನ್ನು ತೋರಿಸುತ್ತದೆ. ಆಸ್ಥಾನದಲ್ಲಿ ಶಕುಂತಲೆಯ ಮಾತನ್ನು ನಂಬದೆ ದುಷ್ಯಂತ ನಾನು ಧರ್ಮಕ್ಕಾಗಲೀ, ಅರ್ಥಕ್ಕಾಗಲೀ, ಕಾಮಕ್ಕಾಗಲೀ ನಿನ್ನಲ್ಲಿ ಸಂಬಂಧ ಮಾಡಿದ ನೆನಪಿಲ್ಲ ಎಂದು ಹೇಳುತ್ತಾನೆ. ಆಗ ಶಕುಂತಲೆ ಹೇಳುವ ನುಡಿಗಳು "ಹೌದು ಧರ್ಮಾರ್ಥಕಾಮಗಳಂತಹ ಯಾವುದೇ ಪುರುಷಾರ್ಥಕ್ಕಾಗಿ ನೀನು ಸಂಬಂಧ ಬೆಳೆಸಲಿಲ್ಲ, ಒಂದೇ ಒಂದು ಘಳಿಗೆಯ ಸುಖಕ್ಕಾಗಿ ವಿಟನಂತೆ ಸಂಬಂಧ ಮಾಡಿದೆ ಎಂಬುದೂ ನನಗೆ ಅನಂತರ ತಿಳಿಯಿತು. ಜಗತ್ತಿನಲ್ಲಿ ವಿಕಾರವಾದುದೇ ಇಲ್ಲ ಎಂಬ ನಂಬಿಕೆಯಲ್ಲಿ ಬೆಳೆದ ನನಗೆ ಜಗತ್ತೇ ವಿಕಾರವಾಗುವಂತಾಯಿತು ನಿನ್ನ ದರ್ಶನದಿಂದ" (ವೇದಾ ಎಂ.ಎಸ್. 2010: ಪುಟ 300) ಹೆಣ್ಣಿನ ನಂಬಿಕೆಯನ್ನು

ಬುಡಮೇಲು ಮಾಡುವ ರೀತಿಯನ್ನು ತೋರಿಸುತ್ತವೆ. ಮುಂದುವರೆದು ಶಕುಂತಲೆ ಹೇಳುವ "ಪ್ರಾಮಾಣಿಕ ವ್ಯಕ್ತಿಯೊಂದಿಗೆ ಗುಲಾಮತನದಲ್ಲಿ ಬಾಳಲು ಇಚ್ಛಿಸುತ್ತೇನೆ ವಿನಾ ಅಪ್ರಾಮಾಣಿಕ ವ್ಯಕ್ತಿಯೊಂದಿಗೆ ಪಟ್ಟ ಮಹಿಷಿಯಾಗಲ್ಲ. ಆ ಆಸೆ ಇದ್ದರೆ ನಾನು ಈಗ ಬರುತ್ತಿರಲಿಲ್ಲ. ಭರತನ ಅಂಕುರ ಗರ್ಭದಲ್ಲಿ ಆದಾಗಲೇ ಬರುತ್ತಿದ್ದೆ. ಈಗ ನಿರ್ಧಾರವಾಗಬೇಕಾದುದು ನನ್ನ ನಿನ್ನ ನಡುವಣ ಸಂಬಂಧವಲ್ಲ, ನನ್ನ ಮಗ ಮತ್ತು ಈ ಸಿಂಹಾಸನದ ನಡುವಣ ಸಂಬಂಧ" (ವೇದಾ ಎಂ.ಎಸ್. 2010: ಪುಟ 300) ಮಾತಿನಲ್ಲಿ ಹೆಣ್ಣು ಗಂಡಿಗೆ ಅಡಿಯಾಳಾಗಿರಲು ಇಚ್ಛಿಸುವುದಿಲ್ಲ, ಅದರಲ್ಲೂ ಒಬ್ಬ ಅಪ್ರಾಮಾಣಿಕ, ಮೋಸಗಾರ ಪುರುಷನೊಂದಿಗೆ ಪದವಿಯನ್ನು ಪಡೆಯುವುದಕ್ಕಿಂತ ಪ್ರಾಮಾಣಿಕ ವ್ಯಕ್ತಿಯೊಂದಿಗೆ ಗುಲಾಮಳಾಗಿರುವುದು ಉತ್ತಮ ಎನ್ನುವ ವ್ಯಂಗ್ಯ ಕಾಣುತ್ತದೆ. ಈ ಸಂದರ್ಭದಲ್ಲಿ ದುಷ್ಯಂತ ಭರತನನ್ನು ಜಾರುಸಂತಾನವೆಂದು ಕರೆಯುತ್ತಾನೆ. ಹೆಣ್ಣನ್ನು ಕೀಳಾಗಿ ಕಂಡು ಅವಳ ವ್ಯಕ್ತಿತ್ವವನ್ನು ಪ್ರಶ್ನಿಸುವ ರೀತಿ ದುಷ್ಯಂತ ನಡೆದುಕೊಳ್ಳುತ್ತಾನೆ. ಇದು ಪುರುಷ ಮತ್ತು ಸ್ತ್ರೀಯರ ನಡುವಿರುವ ಅಸಮಾನತೆಯನ್ನು ಗುರ್ತಿಸುತ್ತದೆ.

ದುಷ್ಯಂತನ ಮಾತು ಕೇಳಿ ಭರತ ಕೋಪಗೊಳ್ಳುತ್ತಾನೆ, ಆದರೆ ಶಕುಂತಲೆ ಭರತನನ್ನು ಸಮಾಧಾನಗೊಳಿಸಿ ದುಷ್ಯಂತನಿಗೆ ಹೇಳುವ ಮಾತುಗಳು ಪ್ರಬುದ್ಧತೆಯುಳ್ಳ ಮತ್ತು ತನ್ನ ಹಕ್ಕುಗಳನ್ನು ಪ್ರತಿಪಾದಿಸುವ ಮಹಿಳೆಯೊಬ್ಬಳ ಧೈರ್ಯವನ್ನು ತೋರಿಸುತ್ತದೆ. "ನನ್ನ ಮಗ ಜಾರಸಂತಾನವಾಗಬಾರದೆಂದೇ ನಾನು ನಿನಗಾಗಿ ಈ ಎಂಟು ವರ್ಷಗಳ ಕಾಲ ನೀನು ಬರುತ್ತೀಯೆಂದು ಕಾದೆ. ನಿನಗೆ ನಿನ್ನ ಪಾಪದ ಅರಿವಾಗಲೇ ಇಲ್ಲ. ಕುಲಪುತ್ರನನ್ನು ಜಾರುಸಂತಾನವೆಂದು ನೀನೇ ಹೇಳಿದ ಮೇಲೆ ನಾನೇನು ಮಾಡಲಿ. ನನ್ನ ಅವಮಾನವನ್ನು ನಾನು ಸಹಿಸಿದೆ. ತನ್ನ ಅವಮಾನವನ್ನು ನನ್ನಂತೆಯೇ ನನ್ನ ಮಗನೂ ಸಹಿಸುತ್ತಾನೆಂಬ ಭರವಸೆ ನೀಡಲಾರೆ ನಾನು. ನಿನ್ನುದ್ದ ಬೆಳೆದ ಮಗ ಕಣ್ಣೆದುರಿಗೇ ನಿಂತಿರುವಾಗಲೂ ನಿನ್ನ ಮನಃಪರಿವರ್ತನೆಯಾಗಲಿಲ್ಲವಲ್ಲ. ನಿನ್ನೊಂದಿಗೆ ಸ್ವೈರಿಣಿಯಂತೆ ನಡೆದುಕೊಂಡ ಅನಾರ್ಯಕಾರ್ಯವನ್ನು ನಾನು ಭರತನಂತಹ ಮಗನನ್ನು ಹೆತ್ತ ಹೆಮ್ಮೆಯಲ್ಲಿ ಇಡೀ ಆಸ್ಥಾನದೆದುರು ನಿಂತು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತಿದ್ದೇನೆ. ಓರ್ವ ಗಂಡಸಾಗಿಯೂ ನಿನ್ನಲ್ಲಿ ಆ ಪ್ರಾಮಾಣಿಕತೆ, ಧೈರ್ಯ ಮೂಡಲೇ ಇಲ್ಲವಲ್ಲ. ಅದರಿಂದ ನನಗೇನೂ ಚಿಂತೆಯಿಲ್ಲ. ನನ್ನ ಮಗ ತನ್ನ ಹಕ್ಕನ್ನು ಪಡೆಯಬೇಕಾದ ರೀತಿಯಲ್ಲಿ ಪಡೆಯುತ್ತಾನೆ" (ವೇದಾ ಎಂ.ಎಸ್. 2010: ಪುಟ 301) ಎಂದು ಶಕುಂತಲೆ ಹೇಳುತ್ತಾಳೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಲೇಖಕಿ

ಶಕುಂತಲೆಯನ್ನು ತನ್ನ ಅಸ್ತಿತ್ವ, ಸ್ವಾಭಿಮಾನ ಮತ್ತು ಮಗನ ಹಕ್ಕುಗಳಿಗಾಗಿ, ಹೋರಾಡುವ ರೀತಿ ಮತ್ತು ಎಲ್ಲಿಯೂ ಶಕುಂತಲೆ ದುಷ್ಯಂತನಿಗಿಂತ ಕಡಿಮೆ ಇರದ ರೀತಿಯಲ್ಲಿ ಚಿತ್ರಿಸಿರುವುದು. ಶಕುಂತಲೆ ಹೇಳುವ "ನನ್ನ ನಿನ್ನ ಸಂಬಂಧವನ್ನು ಪ್ರಾಮಾಣೀಕರಿಸಲು ನಾನಿಲ್ಲಿ ಬಂದಿಲ್ಲ. ನೀನು ನುಡಿದ ಮಾತಿನ ನಡೆಗಾಗಿ ನಾನು ಬಂದಿದ್ದೇನೆ. ನನ್ನ ಮಗನಿಗೆ ಯುವರಾಜ್ಯಾಭಿಷೇಕದ ಅಧಿಕಾರ ಕೇಳಲು ನಾನು ಇಲ್ಲಿ ನಿಂತಿದ್ದೇನೆ" (ವೇದಾ ಎಂ.ಎಸ್. 2010: ಪುಟ 300) ಮಾತುಗಳು ದುಷ್ಯಂತನಿಗೆ ಸಮಾನವಾಗಿ ನಿಲ್ಲುವ ಮಹಿಳೆಯ ಚಿತ್ರಣವನ್ನು ಕೊಡುತ್ತದೆ. ಅವಳು ದುಷ್ಯಂತನಿಂದ ಸಹಾಯ ಬೇಡದೆ ತನ್ನ ಹಕ್ಕನ್ನು ಅಧಿಕಾರದಿಂದ ಕೇಳುವುದು ಮೇಲಿನ ಅಂಶವನ್ನು ಪ್ರತಿಪಾದಿಸುತ್ತದೆ.

ತನ್ನ ಅಧಿಕಾರ ಮತ್ತು ಹಕ್ಕನ್ನು ಪ್ರತಿಪಾದಿಸ ಹೊರಟ ಶಕುಂತಲೆ ಮತ್ತು ಭರತನನ್ನು ತಡೆದ ದುಷ್ಯಂತ ಭರತನಿಗೆ ಯುವರಾಜನ ಪಟ್ಟವನ್ನು ಕೊಡುತ್ತಾನೆ. ನಂತರ ಆಶ್ರಮಕ್ಕೆ ಹೊರಟ ಶಕುಂತಲೆಯನ್ನು ತಡೆಯಲು ಬಂದ ಭರತನಿಗೆ ಹೇಳುವ ಮಾತು "ಕಣ್ಣೀರೇಕೆ ಕಂದ, ನೀನು ಶಕುಂತಲೆಯ ಮಗ. ಪತಿಯೇ ಇಲ್ಲದೆ ಸಮಾಜದಲ್ಲಿ ಮಗನನ್ನು ಹೆತ್ತು ಧೈರ್ಯದಿಂದ ಬಾಳ್ವೆ ನಡೆಸಿದವಳಾಕೆ!" (ವೇದಾ ಎಂ.ಎಸ್. 2010: ಪುಟ 302) ಗಂಡನಿಂದ ಪರಿತ್ಯಕ್ತೆಯಾದ ಒಂಟಿ ಹೆಣ್ಣು ಧೈರ್ಯದಿಂದ ಜೀವನ ನಡೆಸಿ ಮಗನನ್ನು ಬೆಳೆಸಿ ಪುರುಷನಿಗೆ ಸಮಾನವಾಗಿ ನಿಂತ ಚಿತ್ರಣವನ್ನು ಕೊಡುತ್ತದೆ. ಈ ಕಥೆಯಲ್ಲಿ ಕಂಡುಬರುವುದೇನೆಂದರೆ ವೇದಾರವರು ಶಕುಂತಲೆಯನ್ನು ದುಷ್ಯಂತನಿಗೆ ಸಮಾನವಾಗಿ, ಸ್ವಾಭಿಮಾನದಿಂದ ನಿಂತು ತನ್ನ ಹಕ್ಕು ಮತ್ತು ಅಧಿಕಾರಗಳನ್ನು ಪಡೆಯುವ ಮಹಿಳೆಯಾಗಿ ಚಿತ್ರಿಸಿರುವುದರ ಜೊತೆಗೆ ಎಂತಹ ಸಂದರ್ಭಗಳೇ ಬಂದರೂ ಧೈರ್ಯಗುಂದದೇ ಹೊಸದಾರಿಗಳನ್ನು ಹುಡುಕಿ, ನಡೆದು ಜೀವನವನ್ನು ರೂಪಿಸಿಕೊಳ್ಳುವ ಮಹಿಳೆಯ ಚಿತ್ರಣ.

ಮೇಲಿನ ಅಂಶಗಳನ್ನು ವೇದಾರವರು "ಮರಳಿ ಬಾರದ ಶಾಕುಂತಲೆ" ಕಥೆಯಲ್ಲಿ ಸಮರ್ಥಿಸುತ್ತಾರೆ. ಪಟ್ಟಾಭಿಷೇಕದ ನಂತರ ಆಶ್ರಮಕ್ಕೆ ಮರಳಿದ ಶಕುಂತಲೆ ಮಗ ಭರತ ತನ್ನನ್ನು ರಾಜಮಾತೆಯಾಗಿ ಕರೆಸಿಕೊಳ್ಳುತ್ತಾನೆ ಎಂಬ ನಿರೀಕ್ಷೆಯಲ್ಲಿರುತ್ತಾಳೆ. ಆದರೆ ಭರತ ರಾಜಕಾರ್ಯದಲ್ಲಿ ಮರೆಯುತ್ತಾನೆ. ಹೆಂಡತಿ ಮಕ್ಕಳನ್ನು ದುರಹಂಕಾರದಿಂದ ಕಳೆದುಕೊಂಡು, ತನ್ನ ವಂಶ ನಿಂತುಹೋಗುತ್ತದೆಂಬ ನೋವಿನಿಂದ ಅನಾರೋಗ್ಯಕ್ಕೆ ತುತ್ತಾದ ಭರತನನ್ನು ನೋಡಿಕೊಂಡು ಬರಲು ಶಕುಂತಲೆಗೆ ಕಣ್ವರು ಹೇಳುವ ಸಂದರ್ಭದ ಕಥೆಯಲ್ಲಿ ಈ ಅಂಶ ತಿಳಿಯುತ್ತದೆ. ಕಣ್ವರು ಕೇಳುವ "ಈ ಗಂಡಸರು ಯಾಕೆ ಹೀಗೆ? ನನಗೆ ಅರ್ಥವೇ ಆಗುವುದಿಲ್ಲ"

(ವೇದಾ ಎಂ.ಎಸ್. 2010: ಪುಟ 303) ಪ್ರಶ್ನೆಗೆ ಶಕುಂತಲೆ ಹೇಳುವ "ಅರ್ಥವಾಗಲು ಏನಿದೆ ಅವರಲ್ಲಿ", "ನಿಂತ ಕಡೆ ಪುರುಷಾರ್ಥ ಸಾಧಿಸಲು ಮೂಗ ನೇರಕ್ಕೆ ಯೋಚಿಸುವ ಬುದ್ಧಿಯಷ್ಟೆ. 'ತಾವಷ್ಟೆ' ಎಂಬ ಅಹಂಕಾರ ಒಂದೇ. ಪ್ರಕೃತಿ, ಸಹಜೀವಿ, ಪ್ರಪಂಚದ ಇತರ ಯಾವುದೂ, ಏನೇನೂ ಮುಖ್ಯವಲ್ಲ. ಅಂದು ಅಪ್ಪ ಇಂದು ಮಗ" (ವೇದಾ ಎಂ.ಎಸ್. 2010: ಪುಟ 303) ಮಾತುಗಳು ಪುರುಷರೆಲ್ಲಾ ಒಂದೇ ಎಂಬ ಭಾವನೆಯನ್ನು ವ್ಯಕ್ತಪಡಿಸುತ್ತವೆ. ಇದರ ಜೊತೆಗೆ ಹೊಸದಾರಿ ಹಿಡಿದ ವ್ಯಕ್ತಿ ಎದುರಿಸಬೇಕಾದ ಕಷ್ಟಗಳನ್ನು ಕಣ್ವರ ಮುಖಾಂತರ ಹೇಳಿಸುವ "ನಿನ್ನ ಬಾಳಿನ ನಡೆಯ ಬಗೆಗೆ ದೂರ ನಿಂತು ನುಡಿಯುವುದು ಬಹಳ ಸುಲಭ. ನಿನ್ನ ಬದುಕಿನ ಪ್ರತಿ ಹೆಜ್ಜೆಯಲ್ಲಿಯೂ ನಿನ್ನೊಡನಿದ್ದು ನಿನ್ನ ಕಷ್ಟವರಿತಿದ್ದೇನೆ. ಹೊಸ ಹೆಜ್ಜೆ ಇಡಬಯಸುವ ಪ್ರತಿ ಪಾದಗಳ ನಡೆಯ ಕಷ್ಟವದು" (ವೇದಾ ಎಂ.ಎಸ್. 2010: ಪುಟ 305) ಮಾತುಗಳು ಕಥಾಲೇಖಕಿ ಶಕುಂತಲೆ ತುಳಿದ ಹೊಸದಾರಿಯನ್ನು ತೋರಿಸಿದ್ದಾರೆ ಮತ್ತು ಪುರುಷನಿಲ್ಲದೆ ಹೆಣ್ಣು ಕೂಡ ಜೀವನ ನಡೆಸಬಲ್ಲಳು ಎಂಬುದನ್ನು ಧೃಢೀಕರಿಸುತ್ತಾರೆ.

ಭರತನ ಮೂವರು ಮಡದಿಯರೂ ಒಂದೊಂದು ಗಂಡು ಮಗುವನ್ನು ಪಡೆದಾಗ ಆ ಮಕ್ಕಳು ತನ್ನಂತಿಲ್ಲವೆಂದು ಹೆಂಡತಿಯರ ಮೇಲೆ ಭರತ ಕೋಪಗೊಳ್ಳುತ್ತಾನೆ. ಇದರಿಂದ ಖಿನ್ನರಾದ ಆ ಮೂರು ಜನ ಶಕುಂತಲೆಗೆ ಈ ವಿಷಯ ತಿಳಿಸುತ್ತಾರೆ. ಆಗ ಶಕುಂತಲೆ ಮಗನಿಗೆ ಹೇಳುವ ಬುದ್ಧಿವಾದ ಇಡೀ ಪುರುಷತ್ವವನ್ನು ಪ್ರಶ್ನಿಸುವ ರೀತಿ ಇದೆ. "ನೀನು ಒಂದು ದಿನ ತಂದೆ ಯಾರೆಂದೇ ತಿಳಿಯದೆ ನಿಂತಿದ್ದೆ. ತುಂಬಿದ ಸಭೆಯಲ್ಲಿ ಅಂದು ಮಹಾರಾಜ ನಿನ್ನನ್ನು ಜಾರಸಂತಾನವೆಂದು ಕರೆದಾಗ ಹುಲಿಯಂತೆ ಅವನ ಮೇಲೆ ಹಾರಿಹೋಗಿದ್ದೆ ನೆನಪಿರಲಿ. ಹೆಣ್ಣುಮಕ್ಕಳನ್ನು ಅನುಮಾನಿಸಿ ಅಪಮಾನಿಸುವುದೇ ನಿಮ್ಮ ಹಣೆಬರಹವಾಯಿತಲ್ಲ, ಮತ್ತೆ ಮಹಾರಾಜ ಮಾಡಿದ ತಪ್ಪನ್ನೇ ಬೇರೊಂದು ರೂಪದಲ್ಲಿ ಮಾಡುತ್ತಿದ್ದೀಯಾ. ಶಕುಂತಲೆಯ ಮಗನಾಗಿಯಾದರೂ ಹೆಣ್ಣುಗಳ ಬಗೆಗೆ ನಿನ್ನ ನಡೆ ಬದಲಾಗಬೇಕಿತ್ತು. ಮಗು, ನಿನ್ನ ಮಾತುಗಳ ಹಿಂದಿನ ಅನುಮಾನ ಎಲ್ಲಿಗೆ ಎಳೆದುಕೊಂಡು ಹೋಗುತ್ತದೆ ಬಲ್ಲೆಯಾ? ಇಲ್ಲಿನ ಹೆಣ್ಣುಮಗಳು ಎದೆಯೊಡೆದು ಸಾಯುವಂತಹ ನೆಲೆಗದು ಒಯ್ಯುತ್ತದೆ. ಸಲ್ಲದು ಕಂದಾ ಈ ಅನುಮಾನ. ಈ ಮೊಗ್ಗುಗಳಲ್ಲಿ ನೋವ ತರಬೇಡಾ. ಇತಿಹಾಸದ ಪುನರಾವರ್ತನೆಯೇ ಬದುಕಾಗಲು ಬಿಡಬೇಡಾ. ಹೊಸದಾಗಿ ಬಾಳು. ತಾನು ಹೊಂದಿದ ಹೆಣ್ಣಲ್ಲಿ ಕೊನರಿದ ಕುಡಿಯನ್ನು ಇಲ್ಲಸಲ್ಲದ ಕಾರಣಗಳಿಗಾಗಿ ನನ್ನದಲ್ಲ, ನನ್ನಂತಿಲ್ಲ ಎಂದು ಹೇಳಿಬಿಡುವುದು ಖಂಡಿತಾ ಪೌರುಷದ ಲಕ್ಷಣ, ಸ್ತ್ರೀತ್ವದ ಅಪಮಾನ ಎರಡೂ ಅಲ್ಲ. ಕೊಂಚ ಆಳವಾಗಿ ಆಲೋಚಿಸಿ ನೋಡು, ಅದು ನಿಮ್ಮ

ಷಂಡತನದ ಪ್ರತೀಕವಾಗಿಬಿಡುತ್ತದೆ. ಹೌದಲ್ಲವೇ? ಶಕುಂತಲೆಯ ಮಗನಾಗಿ ಬೇರೆ ಸ್ವರೂಪದ ನೋವಿನ ನೆಲೆಗಳಲ್ಲಿ ನರಳುವ ಮತ್ತೆ ಮೂವರು ಶಕುಂತಲೆಯರನ್ನು ಸೃಷ್ಟಿಸ ಹೋಗಬೇಡಾ" (ವೇದಾ ಎಂ.ಎಸ್. 2010: ಪುಟ 308) ಈ ಮಾತುಗಳನ್ನು ಗಮನಿಸಿದರೆ ಹೆಣ್ಣನ್ನು ಶೋಷಿಸುವ, ಅವಮಾನಿಸುವ, ಅವರ ಮೇಲೆ ದೌರ್ಜನ್ಯ ಎಸಗುವ ಪುರುಷರ ವರ್ತನೆ ಪುರುಷತ್ವದ ಸಂಕೇತವಾಗದೆ, ಷಂಡತನದ ಪ್ರತೀಕವಾಗುತ್ತದೆ ಎಂದು ಲೇಖಕಿ ವೇದಾರವರು ಊಹಿಸಿದ್ದಾರೆ ಎನಿಸುತ್ತದೆ.

ಭರತನಿಂದ ಆಗುತ್ತಿದ್ದ ಅವಮಾನ ತಾಳಲಾರದೆ ಅವರ ಮೂವರು ಮಡದಿಯರೂ ಮಕ್ಕಳನ್ನು ಸಾಯಿಸುತ್ತಾರೆ. ಈ ಘಟನೆಯನ್ನು ಕೇಳಿದ ಶಕುಂತಲೆ ಈ ಹುಡುಗಿಯರು ಮಕ್ಕಳನ್ನು ಸಾಯಿಸುವ ಮೂಲಕ ತಮ್ಮತನವನ್ನು ಕಳೆದುಕೊಂಡರು. ಅವರು ನನ್ನ ಬಳಿ ಬಂದಿದ್ದರೆ ಅಪ್ಪನಿಲ್ಲದೆಯೂ ಮಕ್ಕಳನ್ನು ಸಾಕುವ ರೀತಿಯನ್ನು ಹೇಳಿಕೊಡುತ್ತಿದ್ದೆ ಎನ್ನುತ್ತಾಳೆ. ಅಂದರೆ ಗಂಡನಿಲ್ಲದೆಯೂ ಹೆಣ್ಣು ಜೀವನ ಮಾಡಲು ಕಲಿಯಬೇಕು. ಅವನ ದೌರ್ಜನ್ಯ ಅವಮಾನಗಳಿಗೆ ಹೆದರದೆ ಅವನಿಗೆ ಸಮನಾಗಿ ನಿಂತು ಜೀವಿಸಬೇಕು ಎಂದು ಶಕುಂತಲೆಯ ಮೂಲಕ ಲೇಖಕಿ ವೇದಾರವರು ಹೇಳಿಸುತ್ತಾರೆ. ಒಟ್ಟಾರೆ ಈ ಎರಡೂ ಕಥೆಗಳಲ್ಲಿ ವೇದಾರವರು ಹೆಣ್ಣು ಗಂಡಿಗೆ ಸಮಾನಳು, ಗಂಡನಿಲ್ಲದೆಯೂ ತಾನು ಬದುಕು ರೂಪಿಸಿಕೊಂಡು ಸ್ವಾಭಿಮಾನದಿಂದ ಬದುಕಬಹುದು ಮತ್ತು ತನ್ನ ಹಕ್ಕುಗಳನ್ನು ಪಡೆಯಬಹುದು ಎಂದು ತಿಳಿಸುತ್ತಾರೆ.

ಮೇಲಿನ ವಿಶ್ಲೇಷಣೆಯು ಮಹಿಳಾ ಸಾಹಿತಿಗಳು ಪುರಾಣ ಪಾತ್ರಗಳನ್ನು ವಿಭಿನ್ನ ನೆಲೆಯಲ್ಲಿ ಚಿತ್ರಿಸಿ ಹೆಣ್ಣಿನ ಸ್ಥಾನಮಾನಗಳನ್ನು ಸಮಾನತೆಯ ನೆಲೆಯಲ್ಲಿ ಚಿತ್ರಿಸಿರುವುದು ಕಂಡುಬರುತ್ತದೆ. ವೈದೇಹಿಯವರು ಪುರಾಣಗಳು ಪುರುಷ ಹಿರಿಮೆಯನ್ನು ಎತ್ತಿ ಹಿಡಿದು ಅವನನ್ನು ಸುರಕ್ಷಿತವಾಗಿಸುವ, ಸ್ತ್ರೀವಿರೋಧಿ ನಡೆಗಳನ್ನು ತೋರಿಸುತ್ತಾ, ಸ್ತ್ರೀ ವ್ಯಕ್ತಿತ್ವವನ್ನು ಕಡೆಗಾಣಿಸಿ, ಸ್ತ್ರೀ–ಪುರುಷರ ನಡುವಿನ ಅಸಮಾನತೆಯನ್ನು ಮೆರೆದಿರುವುದನ್ನು ತೋರಿಸಿದ್ದಾರೆ. ಆದರೆ ಇವರ ಕಥೆಯಲ್ಲಿ ಬರುವ ಪುರಾಣ ಪಾತ್ರಗಳು ಅಂತಹ ಅಸಮಾನತೆಯನ್ನು ಮೀರಿ ಸ್ತ್ರೀ ವ್ಯಕ್ತಿತ್ವವನ್ನು ಎತ್ತಿ ನಿಲ್ಲಿಸುವ, ಸಮಾನತೆ, ಸ್ವಾತಂತ್ರ್ಯವನ್ನು ಸಾರುವ ರೀತಿ ಚಿತ್ರಿತವಾಗಿರುವುದು ಅವರ ಕಥೆಯ ವಿಭಿನ್ನ ನೆಲೆಯನ್ನು ತೋರಿಸುತ್ತದೆ. ಎಂ.ಎಸ್. ವೇದಾರವರೂ ಸಹ ಪುರಾಣ ಗ್ರಂಥಗಳಲ್ಲಿ ಅವ್ಯಕ್ತವಾಗಿರುವ ಸ್ತ್ರೀ ಶೋಷಣೆ, ದೌರ್ಜನ್ಯಗಳನ್ನು ಚಿತ್ರಿಸುತ್ತಾ, ಆ ಪ್ರಸಂಗಗಳನ್ನು ಆಧುನಿಕ ಮನೋಭಾವದಲ್ಲಿ ತೋರಿಸಿ ಹೆಣ್ಣು ತನ್ನತನ ಕಳೆದುಕೊಳ್ಳದೆ, ಪುರುಷರಿಲ್ಲದೆಯೂ ಜೀವನ ಸಾಗಿಸಲು ತಯಾರಾಗಬೇಕು ಮತ್ತು ಪುರುಷನಿಗೆ ಸಮನಾಗಿ ನಿಂತು ತನ್ನ

ಸ್ವಾಭಿಮಾನಕ್ಕೆ ಧಕ್ಕೆಯಾಗದಂತೆ ಸ್ವಾವಲಂಬಿಯಾಗಿ ಬದುಕಿ ಹಕ್ಕುಗಳನ್ನು ಪಡೆಯಬೇಕು ಎಂದು ತಿಳಿಸುತ್ತಾರೆ.

4.4: ಸ್ತ್ರೀ ಅಸ್ತಿತ್ವದ ನೆಲೆಯಲ್ಲಿ ಕಥಾವಸ್ತು

ಸಮಾಜದಲ್ಲಾಗಲೀ, ಕುಟುಂಬದಲ್ಲಾಗಲೀ ಹೆಣ್ಣಿನ ಸ್ಥಾನ ಪರಿಗಣನೆಗೇ ಬರದಿರುವುದು ವಾಸ್ತವತೆ. ಅಂದರೆ ಹೆಣ್ಣಿನ ಅಸ್ತಿತ್ವ, ವ್ಯಕ್ತಿತ್ವ, ಸ್ಥಾನಮಾನವನ್ನು ಕಡೆಗಣಿಸಿ ಅವಳು ಯಾವಾಗಲೂ ಪುರುಷಾಧೀನವಾಗೇ ಇರುವಂತೆ ಈ ಸಮಾಜ ರೂಪಿಸಿದೆ. ಇದರ ಜೊತೆಗೆ ಶೀಲ, ಪಾತಿವ್ರತ್ಯಗಳಂತಹ ಗುಣಗಳನ್ನು ಹೆಣ್ಣಿನ ಮೇಲೆ ಹೇರಿ ಅವಳ ಜೀವನವನ್ನು ರಚಿಸಿದೆ. ಈ ರಚನೆಗಳು ಕೂಡ ಹೆಣ್ಣಿನ ಬಾಳಿಗೆ ಶೋಷಣೆ, ದೌರ್ಜನ್ಯಗಳನ್ನುಂಟು ಮಾಡಿ, ಅವಳ ಅಸ್ತಿತ್ವ ಮತ್ತು ಸ್ವಾಭಿಮಾನವನ್ನು ಹೊಸಕಿ ಹಾಕಿವೆ. ಈ ಹಿನ್ನೆಲೆಯಲ್ಲಿ ಸ್ತ್ರೀ ಅಸ್ತಿತ್ವ ಮತ್ತು ಅವಳ ಸ್ವಾಭಿಮಾನ ಕುರಿತಾದ ಕಥೆಗಳನ್ನು ವಿಶ್ಲೇಷಿಸುವುದು ಅವಶ್ಯಕವಾಗುತ್ತದೆ. ಸ್ತ್ರೀ ಅಸ್ತಿತ್ವದ ನೆಲೆಯಲ್ಲಿ ಕಥಾವಸ್ತುವನ್ನು ತಿಳಿಯಲು ತ್ರಿವೇಣಿಯವರ 'ಕೊನೆಯ ನಿರ್ಧಾರ', ವೀಣಾ ಶಾಂತೇಶ್ವರರ 'ಮುಳ್ಳುಗಳು', 'ಅತಿಥಿ', ಗೀತಾ ನಾಗಭೂಷಣರವರ 'ಢಾಲು', 'ಬದುಕು ನುಂಗುವ ಮಂದಿ', ನೇಮಿಚಂದ್ರರ 'ಕಪ್ಪು ಮೋಡ, ಬೆಳ್ಳಿ ಅಂಚು', 'ಕೆಂಪು ಕಲಕಿದ ನೀರು', ಎಂ.ಎಸ್. ವೇದಾರವರ 'ಅನುಕ್ತ', 'ಮಳೆಯ ಒಂದು ರಾತ್ರಿಯಲ್ಲಿ' ಕಥೆಗಳನ್ನು ಪ್ರಾತಿನಿಧಿಕವಾಗಿ ವಿಶ್ಲೇಷಣೆ ಮಾಡಲಾಗಿದೆ.

ತ್ರಿವೇಣಿಯವರು ತಮ್ಮ ಕೊನೆಯ ನಿರ್ಧಾರ ಕಥೆಯಲ್ಲಿ ಸ್ವಾಭಿಮಾನಿಯಾದ ಹೆಣ್ಣೊಬ್ಬಳು ಗಂಡನ ಅನುಮಾನವನ್ನು ಧಿಕ್ಕರಿಸಿ ಸ್ವಾವಲಂಬಿಯಾಗಿ, ಪುರುಷನಿಗೆ ಸಮಾನವಾಗಿ ಬದುಕುವ ಚಿತ್ರಣವನ್ನು ಚಿತ್ರಿಸಿದ್ದಾರೆ. ಕಥಾನಾಯಕಿ ಲಲಿತಳ ಗಂಡ ವೆಂಕಟೇಶಮೂರ್ತಿ ಮದುವೆಯಾದ ಮೊದಲ ವರ್ಷದಲ್ಲೇ ಬೇರೆಯವರ ಮಾತು ಕೇಳಿ ಅವಳನ್ನು ಅನುಮಾನಿಸುತ್ತಾನೆ. ಆದರೆ, ಲಲಿತಳು ತನ್ನಲ್ಲಿ ವಿಶ್ವಾಸ ಮತ್ತು ನಂಬಿಕೆಯಿದ್ದರೆ ಇರುತ್ತೇನೆಂದಾಗ, ನಂಬಿಕೆ ಕಳೆದುಕೊಂಡಿದ್ದ ವೆಂಕಟೇಶಮೂರ್ತಿ ಅವಳನ್ನು ತವರು ಮನೆಗೆ ಕಳುಹಿಸುತ್ತಾನೆ. ಇಲ್ಲಿ ತ್ರಿವೇಣಿಯವರು, ಪುರುಷ ಕೇವಲ ಹೇಳಿಕೆ ಮಾತಿನಿಂದ ಹೆಣ್ಣನ್ನು ಅನುಮಾನಿಸಿ ತವರಿಗೆ ಕಳುಹಿಸುವ ಮೂಲಕ ಅವಳ ಮೇಲೆ ದೌರ್ಜನ್ಯವೆಸಗುವುದನ್ನು ಚಿತ್ರಿಸಿದ್ದಾರೆ. ಇದನ್ನು ಸವಾಲಾಗಿ ಸ್ವೀಕರಿಸಿದ ಸ್ವಾಭಿಮಾನಿ ಲಲಿತ ಓದುವುದನ್ನು ಮುಂದುವರೆಸಿ ಶಾಲಾ ಶಿಕ್ಷಕಿಯಾಗುತ್ತಾಳೆ. ಈ ಮಧ್ಯೆ ವೆಂಕಟೇಶಮೂರ್ತಿಯ ಎರಡನೇ ಹೆಂಡತಿ ಮರಣ ಹೊಂದುತ್ತಾಳೆ. ತನ್ನ ಐದು ಮಕ್ಕಳು ಮತ್ತು ಸಂಸಾರವನ್ನು ನೋಡಿಕೊಳ್ಳಲು ಒಂದು ಹೆಣ್ಣು ಬೇಕಾದ್ದರಿಂದ ವೆಂಕಟೇಶಮೂರ್ತಿ ಲಲಿತಳನ್ನು ಇಪ್ಪತ್ತು ವರ್ಷಗಳ ಬಳಿಕ ಬಂದು ಕರೆಯುತ್ತಾನೆ. ನಿಜಾಂಶವನ್ನು ತಿಳಿಸದೆ ಅಹಂನಲ್ಲಿ ಅವಳನ್ನು

ಕ್ಷಮಿಸಿದ್ದೇನೆ ಮನೆಗೆ ಬಾ ಎಂದು ಹೇಳುತ್ತಾನೆ. ತಾನು ಏನೂ ತಪ್ಪು ಮಾಡಿಲ್ಲದಾಗ ನನ್ನನ್ನು ಕ್ಷಮಿಸುವ ಅಗತ್ಯವಿಲ್ಲವೆಂದು ಸಮರ್ಥಿಸಿಕೊಂಡ ಲಲಿತ ಗಂಡನ ಒತ್ತಾಯಕ್ಕೆ ಮಣಿದು ಮತ್ತು ವಯಸ್ಸಾದ ಕಾಲಕ್ಕೆ ತನಗೂ ಸಂಗಾತಿ ಬೇಕಾಗುತ್ತದೆಂದು ತಿಳಿದು ಹೋಗಲು ಒಪ್ಪುತ್ತಾಳೆ. ಆದರೆ ವೆಂಕಟೇಶಮೂರ್ತಿ ಅವಳನ್ನು ಕರೆಯುತ್ತಿರುವುದು ಅವನ ಐದು ಮಕ್ಕಳನ್ನು, ಸಂಸಾರವನ್ನು ನೋಡಿಕೊಳ್ಳುವುದರ ಜೊತೆಗೆ ತನಗೆ ಸಂಗಾತಿಯಾಗಿರಬೇಕೆಂಬ ಸ್ವಾರ್ಥದಿಂದಲೇ ಹೊರತು ಅವಳ ಮೇಲಿನ ಪ್ರೀತಿಯಿಂದಲ್ಲ ಎಂದು ಲಲಿತಳಿಗೆ ತಿಳಿಯುತ್ತದೆ. ಆಗ ಲಲಿತ ಕೋಪದಿಂದ ತಾನು ಬರುವುದಿಲ್ಲವೆಂದು ತಿಳಿಸಿ ವೆಂಕಟೇಶಮೂರ್ತಿಯನ್ನು ಮನೆಯಿಂದ ಹೊರಗೆ ಹೋಗುವಂತೆ ತನ್ನ ಕೊನೆಯ ನಿರ್ಧಾರವನ್ನು ಹೇಳುತ್ತಾಳೆ. ಈ ಕಥೆಯಲ್ಲಿ ತ್ರಿವೇಣಿಯವರು ಹೆಣ್ಣಿನ ಸ್ವಾಭಿಮಾನ, ಧೈರ್ಯ, ಧೃಢನಿರ್ಧಾರ ಇವುಗಳನ್ನು ಕಥಾವಸ್ತುವಾಗಿ ತೆಗೆದುಕೊಂಡು ಹೆಣ್ಣೊಬ್ಬಳು ಸ್ವಾಭಿಮಾನಿಯಾಗಿ, ಗಂಡನ ಅನುಮಾನ, ದೌರ್ಜನ್ಯಗಳನ್ನು ಧಿಕ್ಕರಿಸಿ, ಪುರುಷನ (ಗಂಡನ) ಅವಲಂಬನೆಯಿಲ್ಲದೆ, ವಿದ್ಯಾವಂತಳಾಗಿ ಕೆಲಸಕ್ಕೆ ಸೇರಿ ಪುರುಷರಿಗೆ ಸಮನಾಗಿ ಬದುಕುವ ಮತ್ತು ಪುರುಷ ಸ್ವಾರ್ಥವನ್ನು ಒಪ್ಪದೆ ಒಂಟಿಯಾಗಿ ಜೀವಿಸುವ ನಿರ್ಧಾರ ತೆಗೆದುಕೊಳ್ಳುವುದನ್ನು ತಿಳಿಸಿದ್ದಾರೆ.

ವೀಣಾ ಶಾಂತೇಶ್ವರರು ತಮ್ಮ 'ಮುಳ್ಳುಗಳು' ಕಥೆಯಲ್ಲಿ ಪುರುಷರು ಮಹಿಳೆಯರನ್ನು ನೋಡುವ, ಪರಿಭಾವಿಸುವ ಮತ್ತು ಸೀಮಿತಗೊಳಿಸುವ ದೃಷ್ಟಿಕೋನಗಳನ್ನು ಕಥಾವಸ್ತುವನ್ನಾಗಿ ಆಯ್ದುಕೊಂಡು, ಪುರುಷರ ನೋಟ ಮತ್ತು ಪರಿಭಾವನೆಗಳೇ ಸ್ತ್ರೀಯರನ್ನು ಸದಾ ಚುಚ್ಚುವ 'ಮುಳ್ಳುಗಳು' ಎಂದು ಚಿತ್ರಿಸುತ್ತಾರೆ. ಕಥಾನಾಯಕಿ ಶಾಂತಿ, ಎಲ್ಲಾ ಗಂಡಸರೂ ಹೆಣ್ಣನ್ನು ಕೇವಲ ಲೈಂಗಿಕ ದೃಷ್ಟಿಯಲ್ಲಿ ಇಲ್ಲವೇ ಸೇವಕಿಯ ರೂಪದಲ್ಲಿ ಮಾತ್ರ ನೋಡುತ್ತಿರುತ್ತಾರೆ ಎಂದು ತಿಳಿದು ಅದರ ವಿರುದ್ಧ ಸಿಡಿಮಿಡಿಗೊಳ್ಳುತ್ತಿರುತ್ತಾಳೆ. ಈ ರೀತಿಯ ನಡತೆಯನ್ನು ಕಂಡು ತನ್ನಲ್ಲೇ ಹಲವಾರು ಪ್ರಶ್ನೆಗಳನ್ನು ಕೇಳುತ್ತಿರುತ್ತಾಳೆ, ಆದರೆ ಈ ಯಾವುದನ್ನೂ ಪ್ರತಿಭಟಿಸುವುದಿಲ್ಲ. ಈ ಕಥೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ ವೀಣಾರವರು ಮನೆಯ ಹೊರಗಡೆ ಕೆಲಸ ಮಾಡುವ ಮಹಿಳೆಯರು ಅನುಭವಿಸುವ ಮಾನಸಿಕ ತುಮುಲಗಳು ಮತ್ತು ತಮ್ಮನ್ನು ಪುರುಷ ಪ್ರಪಂಚ ಗಮನಿಸುತ್ತಿರುವ ರೀತಿಗಳನ್ನು ತೋರಿಸಿದ್ದಾರೆ.

ವಿದ್ಯಾವಂತೆಯಾದ ಹೆಣ್ಣೊಬ್ಬಳು ಒಂಟಿಯಾಗಿದ್ದು ಯಾವುದೇ ಗಂಡಸಿನ ಹಂಗಿಲ್ಲದೆ ಜೀವನ ಸಾಗಿಸಬೇಕೆಂಬ ಹಂಬಲವನ್ನಿಟ್ಟುಕೊಂಡು ಮದುವೆಯಾಗದೆ ಜೀವಿಸುವಾಗ ಯಾವ ರೀತಿಯ ಮಾನಸಿಕ ಗೊಂದಲಗಳನ್ನು ಅನುಭವಿಸುತ್ತಾಳೆ, ಅವಳು ಸಮಾಜದಲ್ಲಿರುವ ಇತರ

ವ್ಯಕ್ತಿಗಳನ್ನು ನೋಡುವ ರೀತಿ ಮತ್ತು ಸಮಾಜದ ಇತರ ವ್ಯಕ್ತಿಗಳು ಅವಳನ್ನು ನೋಡುವ ರೀತಿಯನ್ನು ವೀಣಾ ಶಾಂತೇಶ್ವರರು 'ಅತಿಥಿ' ಕಥೆಯ ಕಥಾವಸ್ತುವನ್ನಾಗಿ ಆಯ್ದುಕೊಂಡಿದ್ದಾರೆ. ಈ ಕಥೆಯಲ್ಲಿ ಬರುವ ಪ್ರೊ. ಲೀಲಾಬಾಯಿ ನಾಯಕ್ ಪುರುಷ ಪ್ರಧಾನ ಸಮಾಜದ ರೀತಿಗಳನ್ನು ಧಿಕ್ಕರಿಸಿ ಮದುವೆಯಾಗದೆ ಒಂಟಿ ಜೀವನ ನಡೆಸುತ್ತಿರುತ್ತಾರೆ. ಪುರುಷರೆಲ್ಲರೂ ಹೆಂಗಸರ ಮುಗ್ಧತೆಯ ದುರುಪಯೋಗ ಮಾಡಿಕೊಳ್ಳುವ ಮತ್ತು ಹೆಣ್ಣನ್ನು ತಮ್ಮ ಅನುಕೂಲಗಳಿಗೆ ಬಳಸಿಕೊಳ್ಳುವವರು ಎಂದು ನಂಬಿ ಎಲ್ಲಾ ಪುರುಷರನ್ನು ದ್ವೇಷಿಸುತ್ತಿರುತ್ತಾರೆ ಮತ್ತು ಹಾಸ್ಟೆಲಿನ ಇತರೆ ಹುಡುಗಿಯರೂ ಅದೇ ರೀತಿ ಗಂಡಸನ್ನು ದ್ವೇಷಿಸುತ್ತಾ ಅವರಿಂದ ದೂರ ಇರಬೇಕು ಎಂದು ಬಯಸುತ್ತಾರೆ. ಇಂತಹ ಮಹಿಳೆಯೊಬ್ಬಳು ಅನುಭವಿಸುವ ಮಾನಸಿಕ ಗೊಂದಲಗಳು, ಅಸಹಾಯಕತೆ, ಜೀವನದ ಬೇಕು-ಬೇಡಗಳ ಬಗ್ಗೆ ಬೆಳೆಯುವ ದ್ವಂದ್ವ ನಿಲುವು ಇವುಗಳನ್ನು 'ಅತಿಥಿ' ಕಥೆಯಲ್ಲಿ ಕಥಾವಸ್ತುವಾಗಿ ಲೇಖಕಿಯರು ಬಳಸಿಕೊಂಡಿರುವುದು ಕಂಡುಬರುತ್ತದೆ.

ಗೀತಾ ನಾಗಭೂಷಣರವರ 'ಢಾಲು' ಕಥೆ ಗಂಡನ ಅನುಪಸ್ಥಿತಿಯಲ್ಲಿ ಒಂಟಿ ಹೆಣ್ಣೊಬ್ಬಳು ಸಮಾಜದಲ್ಲಿ ಇತರ ಗಂಡಸರ ಕಾಮುಕ ದೃಷ್ಟಿಯಿಂದ ಅನುಭವಿಸುವ ನೋವು, ಯಾತನೆ, ಅವಮಾನಗಳನ್ನು ಮತ್ತು ಈ ಸಮಸ್ಯೆಗಳಿಂದ ಪಾರಾಗಲು ಅವಳು ಕಂಡುಕೊಳ್ಳುವ ಮಾರ್ಗದ ಕಥಾವಸ್ತುವನ್ನು ಬಿಂಬಿಸುತ್ತದೆ. ಮಾಗಿಯ ಗಂಡ ಕರಿಯ ತನ್ನ ಸಾಹುಕಾರ ಮಾಡಿದ ಕೊಲೆಯನ್ನು ತನ್ನ ಮೇಲೆ ಹಾಕಿಕೊಂಡು ಜೈಲಿಗೆ ಹೋಗುತ್ತಾನೆ. ಕರಿಯ ಜೈಲಿನಲ್ಲಿದ್ದ ಸಂದರ್ಭದಲ್ಲಿ ಸಾಹುಕಾರ ಪರಮೇಶಪ್ಪ, ಕೇರಿಯಲ್ಲಿನ ಇತರ ಗಂಡಸರು ಮಾಗಿಯೊಡನೆ ಸರಸವಾಡುತ್ತಾ ಕಾಮುಕದೃಷ್ಟಿಯಿಂದ ನೋಡುತ್ತಿರುತ್ತಾರೆ ಮತ್ತು ಈ ಉದ್ದೇಶ ಅವಳಿಗೆ ತಿಳಿಯುವ ರೀತಿ ನಡೆಯುತ್ತಿರುತ್ತಾರೆ. ಇಂತಹ ಗಂಡಸರಿಂದ ತಪ್ಪಿಸಿಕೊಳ್ಳಲು ಮಾಗಿ ಅದೇ ಊರಿನ ದುರ್ಗಪ್ಪನ ಮೈಮೇಲೆ ದೇವರು ಬರುತ್ತಿದ್ದ ಪ್ರಸಂಗವನ್ನು ಉಪಯೋಗಿಸಿಕೊಳ್ಳುತ್ತಾಳೆ. ಊರಿನ ಜನ ದೇವರು, ಶಾಪ ಮುಂತಾದವುಗಳಿಗೆ ಹೆದರುತ್ತಾರೆ ಎಂದು ತಿಳಿದ ಮಾಗಿ ಊರಿನ ದೇವತೆ ಮರಗವ್ವ ತನ್ನ ಮೈಮೇಲೆ ಬಂದಂತೆ ನಟಿಸುತ್ತಾಳೆ ಮತ್ತು ತನ್ನ ಸವಾರಿಯಾದ ಮಾಗಿಯನ್ನು ಯಾರಾದರೂ ಕೆಟ್ಟ ದೃಷ್ಟಿಯಿಂದ ನೋಡಿದರೆ ಅವಮಾನ ಮಾಡಿದರೆ ತಾನು ಸೇಡು ತೀರಿಸಿಕೊಳ್ಳುವುದಾಗಿ ಎಲ್ಲರಿಗೂ ಹೇಳುತ್ತಾಳೆ. ಮರಗವ್ವ ದೇವತೆಗೆ ಹೆದರಿದ ಜನ, ಮುಖ್ಯವಾಗಿ ಗಂಡಸರು, ಮಾಗಿಯ ತಂಟೆಗೆ ಬರುವುದನ್ನು ನಿಲ್ಲಿಸುತ್ತಾರೆ. ಈ ಕಥೆಯಲ್ಲಿ ಗಮನಿಸಬೇಕಾದ ಅಂಶವೆಂದರೆ ಗೀತಾ ನಾಗಭೂಷಣರವರು ಸಮಾಜದಲ್ಲಿ ಪ್ರಚಲಿತದಲ್ಲಿದ್ದ

ಒಂದು ಪದ್ಧತಿಯನ್ನು ಗುರಾಣಿಯಾಗಿ ಬಳಸಿಕೊಂಡು ತನ್ನತನ, ತನ್ನ ಮಾನ ಮತ್ತು ವ್ಯಕ್ತಿತ್ವವನ್ನು ಉಳಿಸಿಕೊಳ್ಳುವ ಒಂದು ಹೆಣ್ಣಿನ ಕಥಾವಸ್ತುವನ್ನು ಬಳಸಿಕೊಂಡಿರುವುದು. ಈ ಹಿನ್ನೆಲೆಯಲ್ಲಿ 'ಢಾಲು' ಎಂದರೆ 'ಗುರಾಣಿ' ಎಂಬ ಅರ್ಥ ಅನ್ವರ್ಥವಾಗುತ್ತದೆ. ಲೇಖಕಿಯ ಪ್ರಕಾರ ಹೆಣ್ಣು ತನ್ನ ವ್ಯಕ್ತಿತ್ವವನ್ನು ಕಾಪಾಡಿಕೊಳ್ಳಲು, ಶೋಷಣೆ, ಅನ್ಯಾಯ ಮುಂತಾದವುಗಳಿಂದ ರಕ್ಷಣೆ ಪಡೆಯಲು ಸಮಾಜದಲ್ಲಿ ದೊರೆಯುವ ಅವಕಾಶಗಳನ್ನು ಉಪಯೋಗಿಸಿಕೊಳ್ಳಬೇಕು ಎಂದು ಗ್ರಹಿಸಬಹುದು.

ಗೀತಾ ನಾಗಭೂಷಣ ಅವರು 'ಬದುಕು ನುಂಗುವ ಮಂದಿ' ಕಥೆಯಲ್ಲಿ ಅನಾಥಳಾದ ಹೆಣ್ಣೊಬ್ಬಳು ತನ್ನ ಬದುಕನ್ನು ಕಟ್ಟಿಕೊಳ್ಳುವ ಪ್ರಯತ್ನದಲ್ಲಿ ಯಶಸ್ವಿಯಾಗುತ್ತಿರುವಾಗ ಅದನ್ನು ಸಹಿಸದೆ ಪುರುಷರು ತಮ್ಮ ಕಾಮದಾಹಕ್ಕಾಗಿ ಅವಳನ್ನು ಬಲಾತ್ಕರಿಸಿ, ಆ ಹೆಣ್ಣು ಬದುಕು ಕಟ್ಟಿಕೊಳ್ಳುವ ಮೊದಲೇ ಬದುಕನ್ನು ನುಂಗಿದ ಅಥವಾ ಮುಕ್ತಾಯಗೊಳಿಸಿದ ಕಥಾವಸ್ತುವನ್ನು ಚಿತ್ರಿಸಿದ್ದಾರೆ. ಈ ಕಥೆಯ ಪಾತ್ರ ಕಜರಿ ಆರನೇ ವಯಸ್ಸಿನಲ್ಲಿ ಅನಾಥಳಾಗಿ ತನ್ನ ಮುತ್ಯಾನ ಆರೈಕೆಯಲ್ಲಿ ಬೆಳೆಯುತ್ತಾಳೆ. ಅಂಗವಿಕಲನಾಗಿದ್ದ ಮುತ್ಯಾ ಭಿಕ್ಷೆ ಬೇಡಿ ಜೀವಿಸುತ್ತಿರುತ್ತಾನೆ ಮತ್ತು ಕಜರಿಗೂ ಭಿಕ್ಷೆ ಬೇಡುವುದನ್ನು ಕಲಿಸಿ ರೈಲ್ವೇ ಫ್ಲಾಟ್‌ಫಾರಂನ ಮೇಲೆ ಜೀವನ ನಡೆಸುತ್ತಿರುತ್ತಾರೆ. ಹರೆಯಕ್ಕೆ ಬಂದಿದ್ದ ಕಜರಿ ಒಂದು ಬಾರಿ ಭಿಕ್ಷೆ ಬೇಡುವಾಗ ಮನೆಯೊಡತಿಯೊಬ್ಬಳು ದುಡಿದು ತಿನ್ನದೆ ಭಿಕ್ಷೆ ಬೇಡುತ್ತೀರಲ್ಲ ಎಂದು ರೇಗುತ್ತಾ ಓಡಿಸುತ್ತಾಳೆ. ಈ ಮಾತುಗಳು ಕಜರಿಗೆ ಸಲಹೆಯಾಗಿ ಕಂಡು, ವಿಚಾರ ಮಾಡುತ್ತಾ "ಥೂ.. ಇದೂ ಕೈಲಾಗದವ್ರ ಕೆಲ್ಸಾ, ಭಿಕ್ಷೆ ಬೇಡಾದು ಇನ್ನ ಬಿಡ್ಬೇಕು, ಏನಾದ್ರು ಧಂಧಾ ಮಾಡ್ಬೇಕು, ಆ ಹಾರ್‍ರ ಮುದುಕಿ ಹೇಳಿದ್ದು ಖರೇ" (ಗೀತಾ ನಾಗಭೂಷಣ 2006: ಪುಟ 4) ಎಂಬ ನಿರ್ಧಾರ ತೆಗೆದುಕೊಳ್ಳುತ್ತಾಳೆ. ಈ ನಿರ್ಧಾರ ಕಜರಿ ಹೊಸ ಬದುಕನ್ನು ಕಟ್ಟಿಕೊಳ್ಳುವತ್ತ ತಿರುಗಿಸುತ್ತದೆ. ಆದರೆ ಕಜರಿಯ ಹೊಸ ಬದುಕು ಅಷ್ಟು ಸುಲಭವಾಗಿ ಪ್ರಾರಂಭವಾಗುವುದಿಲ್ಲ. ಏಕೆಂದರೆ ಸಮಾಜ ಪ್ರತಿಯೊಬ್ಬ ವ್ಯಕ್ತಿಯನ್ನೂ ನೋಡುವ ರೀತಿಯೇ ಬೇರೆ. ಭಿಕ್ಷೆ ಬೇಡಿ ಜೀವಿಸುತ್ತಿರುವ ಕಜರಿಯನ್ನು ಯಾರೂ ನಂಬುವುದಿಲ್ಲ. ಮನೆಗಳ ಮುಂದೆ ಹೋಗಿ ನನಗೆ ಯಾವುದಾದರೂ ಕೆಲ್ಸ ಕೊಡ್ರಿ ದುಡಿದು ಬದುಕುತ್ತೇನೆ ಎಂದು ಗೋಗರೆದರೂ ಯಾರೂ ಅವಳಿಗೆ ಕೆಲಸ ಕೊಡುವುದಿಲ್ಲ. ಅವಳ ವೇಷವನ್ನು ನೋಡಿದ ಜನರು ಅವಳು ಕಳ್ಳತನ ಮಾಡಬಹುದೆಂದು ಯೋಚಿಸಿದರೇ ವಿನಃ ಅವಳಿಗೆ ಒಂದು ಕೆಲಸ ಕೊಡಲಿಲ್ಲ. ಮೂರು ದಿನಗಳ ನಂತರ ದಾರಿಯಲ್ಲಿ ನಡೆದು ಹೋಗುವಾಗ ಚಿಂದಿ ಆಯುವ ಹುಡುಗಿಯರೊಡನೆ ತಾನು ಚಿಂದಿ ಆಯ್ದು ಮಾರಿ ಅದರಿಂದ ಬರುವ ಹಣದಿಂದ

ಬದುಕಬಹುದೆನ್ನುವ ಅವಳ ಯೋಚನೆ ಕೂಡ ಕೈಗೂಡಲಿಲ್ಲ. ಏಕೆಂದರೆ ಆ ಹುಡುಗಿಯರ ಪ್ರಕಾರ ಚಿಂದಿ ಆಯುವವರ ಯೂನಿಯನ್ ಕಜರಿಗೆ ಅವಕಾಶ ಕೊಡುವುದಿಲ್ಲ. ಹಾಗೇನಾದರೂ ಬಂದರೆ ಒದೆ ತಿನ್ನಬೇಕಾಗುತ್ತದೆ. ಈ ಎರಡೂ ಘಟನೆಗಳೂ ಸ್ವಂತ ದುಡಿದು ತಿನ್ನಬೇಕೆನ್ನುವವರ ಆಶಾಭಂಗವಾಗುವುದನ್ನು ಮತ್ತು ಸಮಾಜ ಅವಕಾಶ ಕಲ್ಪಿಸದಿರುವುದನ್ನು ತೋರಿಸುತ್ತದೆ. ಜೊತೆಗೆ ಕಜರಿ ಹೆಣ್ಣಾದ ಕಾರಣ ಅವಕಾಶಗಳ ಕೊರತೆ ಹೆಚ್ಚಾಗಿ ಕಾಣುತ್ತದೆ. ಕೆಲಸವಿಲ್ಲದೆ, ಭಿಕ್ಷೆ ಬೇಡದೆ, ಮೂರು ದಿವಸಗಳಿಂದ ಉಪವಾಸವಿದ್ದ ಕಜರಿಗೆ, ವಚ್ಚ್ಯಾ ಹೂ ಮಾರುವಂತೆ ಸಲಹೆ ನೀಡುತ್ತಾನೆ ಜೊತೆಗೆ ತನ್ನ ಬಳಿ ಇರುವ ಐವತ್ತು ರೂಪಾಯಿ ಸಾಲವಾಗಿ ತೆಗೆದುಕೊಂಡು ವ್ಯಾಪಾರ ಆರಂಭಿಸುವಂತೆ ಸೂಚಿಸುತ್ತಾನೆ. ಈ ಸಲಹೆಯನ್ನು ಸ್ವೀಕರಿಸಿದ ಕಜರಿ ಹೂವಿನ ವ್ಯಾಪಾರ ಪ್ರಾರಂಭಿಸುತ್ತಾಳೆ. ವ್ಯಾಪಾರ ಕುದುರಿ ಪ್ರತಿನಿತ್ಯ ಲಾಭ ಪಡೆಯುವತ್ತ ಗಮನಹರಿಸುತ್ತಾಳೆ ಮತ್ತು ವಚ್ಚ್ಯಾನ ಸಾಲವನ್ನು ಹಿಂತಿರುಗಿಸುತ್ತಾಳೆ. ತನ್ನ ಆರ್ಥಿಕ ಪರಿಸ್ಥಿತಿ ಸ್ವಲ್ಪ ಸುಧಾರಿಸಿದ ನಂತರ ಬಾಡಿಗೆಗೆ ಸಣ್ಣ ಗುಡಿಸಲನ್ನು ಪಡೆಯುತ್ತಾಳೆ. ಇದು ರೈಲ್ವೆ ಫ್ಲಾಟ್‌ಫಾರಂನಿಂದ, ಬಾಡಿಗೆಯದಾದರೂ, ತನ್ನದೇ ಆದ ಗುಡಿಸಲಿಗೆ ವರ್ಗಾವಣೆಯಾಗುವುದನ್ನು ತೋರಿಸುತ್ತದೆ. ಜೊತೆಗೆ ಭಿಕ್ಷೆ ಬೇಡುತ್ತಿದ್ದ ಹುಡುಗಿಯೊಬ್ಬಳು ಹೇಗೆ ಬದುಕು ರೂಪಿಸಿಕೊಳ್ಳತೊಡಗಿದಳು ಎಂಬುದನ್ನು ಚಿತ್ರಿಸುತ್ತದೆ. ಹರೆಯಕ್ಕೆ ಬಂದ ಕಜರಿಯನ್ನು ವಿವಾಹವಾಗಲು ಫ್ಲಾಟ್‌ಫಾರಂನ ಕಾಮ್ಲಾ, ವಚ್ಚ್ಯಾ, ಶಂಕರ್ಲಾ ಮುಂತಾದ ಹುಡುಗರು ಮುಂದೆ ಬಂದರೂ, ಅವರಾರನ್ನೂ ಒಪ್ಪದೆ, ಸ್ವಂತ ದುಡಿದು ಬದುಕುವ ಮರ್ಯಾದಸ್ಥ (ಇಜ್ಜತದ) ಹುಡುಗನನ್ನು ಮದುವೆಯಾಗುವುದಾಗಿ ಹೇಳುತ್ತಾಳೆ. ಕಜರಿಯ ಈ ಚಿಂತನೆ ಬದುಕನ್ನು ರೂಪಿಸಿಕೊಳ್ಳಲು ಒಂದು ಹೆಣ್ಣು ತೆಗೆದುಕೊಳ್ಳುವ ನಿರ್ಧಾರಗಳನ್ನು ತೋರಿಸುತ್ತದೆ. ಇದೇ ನಿರ್ಧಾರದಲ್ಲಿದ್ದ ಕಜರಿ ಕೋತಿ ಆಡಿಸಿಕೊಂಡು ಬದುಕುತ್ತಿರುವ ರುಕ್ಕ್ಯಾ ಎಂಬಾತನನ್ನು ಪ್ರೀತಿಸುತ್ತಾಳೆ. ಅವರಿಬ್ಬರೂ ಮದುವೆಯಾಗುವುದಾಗಿ ಸುತ್ತಲಿನವರಿಗೆ ತಿಳಿಸುತ್ತಾರೆ. ಆದರೆ ಇದನ್ನು ಸಹಿಸದೆ, ಅವಳನ್ನು ಮೋಹಿಸಿದ್ದ ಪುರುಷರು ಕಜರಿಯ ಮದುವೆಯ ಹಿಂದಿನ ರಾತ್ರಿ ಅವಳ ಮೇಲೆ ಬಲಾತ್ಕಾರ ಮಾಡುತ್ತಾರೆ. ಈ ದೌರ್ಜನ್ಯಕ್ಕೆ ನಲುಗಿದ ಕಜರಿ ಮರುದಿನ ಸಾವನ್ನಪ್ಪುತ್ತಾಳೆ. ಈ ಕಥೆಯಲ್ಲಿ ಕಂಡುಬರುವ ಅಂಶವೆಂದರೆ ಸಮಾಜ ತನ್ನ ಕಾಲ ಮೇಲೆ ತಾನು ನಿಂತು ದುಡಿದು ತನ್ನ ಬದುಕನ್ನು ರೂಪಿಸಿಕೊಳ್ಳಲು ಪ್ರಯತ್ನಿಸುವ ಹೆಣ್ಣಿಗೆ ಅವಕಾಶ ಕೊಡದೆ ಅವಳ ಬದುಕನ್ನೇ ನುಂಗಿ ಹಾಕುವ ಸಂಗತಿ.

ನೇಮಿಚಂದ್ರರವರು ತಮ್ಮ ಕಥೆ 'ಕಪ್ಪು ಮೋಡ, ಬೆಳ್ಳಿ ಅಂಚು'ವಿನಲ್ಲಿ ಹೆಣ್ಣೊಬ್ಬಳು ಪುರುಷನಿಗೆ ಸಮನಾಗಿ ಅವನ ಅವಲಂಬನೆಯಿಲ್ಲದೆ ಬದುಕನ್ನು ಕಟ್ಟಿಕೊಳ್ಳುವ ಚಿತ್ರಣವನ್ನು ನೀಡುತ್ತಾರೆ. ಈ ಕಥೆಯಲ್ಲಿ ಮದುವೆಯಾದ ಹತ್ತು ವರ್ಷಗಳ ನಂತರ ರವಿ ತನ್ನ ಹೆಂಡತಿ ಮಧುಳನ್ನು ಬಿಟ್ಟುಬಿಡುತ್ತಾನೆ. ಅಲ್ಲಿಯವರೆಗೂ ಗಂಡನ ಮೇಲೆ ಮಾನಸಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಅವಲಂಬಿತಳಾಗಿದ್ದ ಮಧು ಧಿಡೀರನೆ ತನ್ನ ಮಗಳೊಂದಿಗೆ ಏಕಾಂಗಿಯಾಗುತ್ತಾಳೆ. ಮನೆ ಬಿಟ್ಟು ಹೊರಗಿನ ಪ್ರಪಂಚ ನೋಡಿರದ, ಹೊರಗಿನ ಯಾವ ಕೆಲಸವನ್ನೂ ಮಾಡಿರದ, ಎಲ್ಲಾ ಕೆಲಸ ಕಾರ್ಯಗಳಿಗೆ, ನಿರ್ಧಾರಗಳಿಗೆ ಗಂಡನ ಮೇಲೆ ಅವಲಂಬಿತಳಾಗಿದ್ದವಳು, ವಿಚ್ಛೇದನದ ನಂತರದ ತನ್ನ ಸ್ವಂತ ಬದುಕನ್ನು ನಡೆಸುವ, ಬದುಕಿನ ನಿರ್ಧಾರಗಳನ್ನು ತೆಗೆದುಕೊಳ್ಳುವ ಪರಿಸ್ಥಿತಿಯನ್ನು ಎದುರಿಸುತ್ತಾಳೆ. ಮಧು ತನ್ನ ಗೆಳತಿ ಶೀಲಾಳ ಸಹಾಯದಿಂದ ಮತ್ತು ತನ್ನ ಮನೋಇಚ್ಛೆಯಿಂದ ಡ್ರೆಸ್ ಡಿಸೈನರ್ ಉದ್ಯಮ ಪ್ರಾರಂಭಿಸಿ ಅದರಲ್ಲಿ ಯಶಸ್ವಿಯಾಗುತ್ತಾಳೆ. ಈ ಕಥೆಯಲ್ಲಿ ನೇಮಿಚಂದ್ರರವರು ಬದುಕಿನ ವಾಸ್ತವ ಚಿತ್ರಣವನ್ನು ತೋರಿಸಿ ಹೆಣ್ಣಾದವಳು ತನ್ನ ಅವಲಂಬನೆ, ಅಸಹಾಯಕತೆಗಳಿಂದ ಹೊರಬಂದು ಹೇಗೆ ಜೀವನ ನಡೆಸಬಹುದು ಎಂದು ತೋರಿಸುತ್ತಾರೆ. ಲೇಖಕಿಯು ಶೀಲಾಳ ಪಾತ್ರದ ಮೂಲಕ ಹೇಳುವ "ಬದುಕಲು ನೆಪ ಹುಡುಕಬೇಡ.. ನಿನಗಾಗಿ, ನಿನ್ನ ಬದುಕಿಗಾಗಿ, ಈ ಜೀವನದ ಸೋಲುಗಳನ್ನೆಲ್ಲಾ ಸವಾಲುಗಳನ್ನಾಗಿ ಉತ್ತರಿಸುವ ಛಲಕ್ಕಾಗಿ, ಪಂಥಾಹ್ವಾನಕ್ಕಾಗಿ ಬದುಕು.... ನೀನು ನಿಲ್ಲಬಲ್ಲೆ ನಿನ್ನ ಪಾದಗಳ ಮೇಲೆ." (ನೇಮಿಚಂದ್ರ 2012: ಪುಟ 226); ಅವರಿವರ ಸಹಾನುಭೂತಿಯನ್ನು ಗುಡ್ಡೆ ಹಾಕಿಕೊಂಡು ನೀನು ಗದ್ದುಗೆ ಏರೋಕಾಗಲ್ಲ" (ನೇಮಿಚಂದ್ರ 2012: ಪುಟ 228); "ಬದುಕಿಗೆ ತಯಾರಾಗುವ ಯೋಚನೆಯೇ ನಿನಗೆ ಬಂದಿರಲಿಲ್ಲವಾ" (ನೇಮಿಚಂದ್ರ 2012: ಪುಟ 231) ಮಾತುಗಳು ಹೆಣ್ಣು ತನ್ನ ಬದುಕನ್ನು ಬದುಕಬೇಕು ಜೀವನದ ಸೋಲು ಸವಾಲುಗಳನ್ನು ಎದುರಿಸಬೇಕು, ಇತರರ ಸಹಾನುಭೂತಿಯನ್ನು ಬಿಟ್ಟು ತನ್ನ ಬದುಕಿಗೆ ತಯಾರಾಗಿರಬೇಕು ಎಂಬ ವಾಸ್ತವತೆಯನ್ನು ಚಿತ್ರಿಸುತ್ತವೆ. ಇದೇ ರೀತಿ ಮಧು ಪಾತ್ರದ ಮೂಲಕ ಹೆಣ್ಣು ಅವಲಂಬಿತ ಜೀವನಕ್ಕೆ ಹೊಂದಿಕೊಂಡಿರುವ ಬಗ್ಗೆ ಹೇಳುವ ಕೆಳಗಿನ ನುಡಿಗಳು – "ನಾವು ಜಡತ್ವವನ್ನು ಅವಳಿಯಾಗಿ ಪಡೆದು ಬಂದವರು, ಅವಶ್ಯಕತೆ ಇಲ್ಲದೆ ಏನನ್ನೂ ಕಲಿಯಲು, ಒಂದಿಚೂ ಬೆಳೆಯಲು ಸಿದ್ಧವಿಲ್ಲದವರು.. ಆದರೆ ತನ್ನ ಬೆರಳ ತುದಿಯ ಪ್ರತಿಭೆಯನ್ನು ಉಳಿಸಿಕೊಳ್ಳಬಹುದಿತ್ತು. ಕಲಿತ ವಿದ್ಯೆಯನ್ನು ಬಳಸಿಕೊಳ್ಳಬಹುದಿತ್ತು. ಸ್ವಂತ ದುಡಿಮೆಯ ಸವಿರುಚಿಯನ್ನು ಒಂದಿಷ್ಟು ಸವಿಯಬಹುದಿತ್ತು. ಅಂಥ ಯಾವ ಪ್ರಯತ್ನವನ್ನು ಮಾಡಲಿಲ್ಲ, ಈ ಒಂದು ದಶಕದಲ್ಲಿ. ಎಂಥಾ ಹುಚ್ಚು ಜನ ನಾವು, ಬದುಕು ಅಂಚಿಗೆ

ನೂಕುವವರೆಗೂ ನಿಂತಿರುತ್ತೇವೆ. ಕೊನೆಗೆ ಈ ತುದಿಯನ್ನು ಹಿಡಿದು ಜೋತಾಡುತ್ತೇವೆ, ಬೀಳಬಹುದಾದ ಪ್ರಪಾತಕ್ಕೆ ಹೆದರಿ ತಲ್ಲಣಿಸಿ" (ನೇಮಿಚಂದ್ರ 2012: ಪುಟ 231) "ಒಂದು ಜೀವನ ಕ್ರಮಕ್ಕೆ ಒಗ್ಗಿದ ದೇಹ – ಮನಸ್ಸು ಬದಲಾವಣೆಗೆ ಎಷ್ಟೊಂದು ಪ್ರತಿಭಟಿಸುತ್ತವೆ" (ನೇಮಿಚಂದ್ರ 2012: ಪುಟ 237), ಸ್ತ್ರೀಯರು ತಮ್ಮ ಜ್ಞಾನ, ಪ್ರತಿಭೆಗಳನ್ನು ಬಳಸದೆ ಜಡತ್ವಕ್ಕೊಳಗಾಗಿ ಪುರುಷರ ಅವಲಂಬನೆಗೆ ಒಳಗಾಗುತ್ತಾರೆ, ಈ ಅವಲಂಬನೆಯನ್ನು ತೊಡೆದು ಸ್ವಾವಲಂಬಿಯಾಗಿ ಬದುಕುವುದನ್ನು ಕಲಿಯಬೇಕು ಎಂದು ತೋರಿಸುತ್ತವೆ. ಕಥಾಲೇಖಕಿ ನೇಮಿಚಂದ್ರರವರು ಈ ಕಥೆಯಲ್ಲಿ ಸ್ತ್ರೀಯರು ತಮ್ಮ ಬದುಕನ್ನು ಕಟ್ಟಿಕೊಳ್ಳಬೇಕು, ಪುರುಷರಿಗೆ ಸಮನಾಗಿ ಜೀವನದ ಕೆಲಸಕಾರ್ಯ, ನಿರ್ಧಾರಗಳನ್ನು ತೆಗೆದುಕೊಳ್ಳುವ ಜೀವನವನ್ನು ನಡೆಸಬೇಕು ಎಂದು ತಿಳಿಸುತ್ತಾರೆ.

ಆಧುನಿಕ ಮಹಿಳೆಯರ ಚಿಂತನೆಯಲ್ಲಿ ಆಗುತ್ತಿರುವ ಬದಲಾವಣೆಯನ್ನು ಕಥಾವಸ್ತುವಾಗಿ ನೇಮಿಚಂದ್ರ ಅವರು 'ಕೆಂಪು ಕಲಕಿದ ನೀರು' ಕಥೆಯಲ್ಲಿ ಚಿತ್ರಿಸಿದ್ದಾರೆ. ಸಾಮಾನ್ಯವಾಗಿ ಮಹಿಳೆಯರು ತಮ್ಮ ಮೇಲೆ ಪುರುಷರಿಂದ ಲೈಂಗಿಕ ದೌರ್ಜನ್ಯಗಳು ನಡೆದಾಗ ಅದನ್ನು ಎದುರಿಸದೆ ಸಮಾಜದ ವಾಹಿನಿಯಿಂದ ಹಿಂದೆ ಸರಿದು ಮೂಲೆ ಗುಂಪಾಗುತ್ತಿದ್ದುದು ಸಾಮಾನ್ಯವಾದ ಸಂಗತಿ. ದೌರ್ಜನ್ಯಕ್ಕೊಳಗಾದ ಮಹಿಳೆ ಮಾನಸಿಕವಾಗಿ ಜರ್ಜರಿತವಾಗಿ ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತಿದ್ದರು ಮತ್ತು ಸಮಾಜದಲ್ಲಿ ಅವಳ ತಪ್ಪಿಲ್ಲದಿದ್ದರೂ ದೌರ್ಜನ್ಯದ ಘೋರ ಪರಿಣಾಮಗಳನ್ನು ಅನುಭವಿಸಬೇಕಾಗಿತ್ತು. ಇಂತಹ ಪ್ರಚಲಿತ ಸಂಗತಿಗೆ ವಿರುದ್ಧವಾಗಿ ವಿದ್ಯಾವಂತ ಮಹಿಳೆಯೊಬ್ಬಳು ತನ್ನ ಮೇಲಾದ ಬಲಾತ್ಕಾರವನ್ನು ತನ್ನದಲ್ಲದ ತಪ್ಪಿನಿಂದ ಆದ ಘಟನೆಗೆ ನಾನೇಕೆ ಬೆಲೆ ಕೊಡಬೇಕು ಎಂದು ವಿಚಾರಧಾರೆಯನ್ನೇ ಬದಲಿಸಿ ಆ ಘಟನೆಯನ್ನು ಮೀರಿ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುತ್ತಾಳೆ. ಇದು ಹೆಣ್ಣು ವಾಸ್ತವತೆಯನ್ನು ಅರಿತು ತನ್ನ ಜೀವನ ನಡೆಸಲು ಅನುವು ಮಾಡಿಕೊಡುವ ಆಶಯವಾಗುತ್ತದೆ. ಈ ಕಥೆಯಲ್ಲಿ ಬರುವ ಶೀಲ ಇಂಜಿನಿಯರಿಂಗ್‌ನಲ್ಲಿ ಎಂ.ಇ. ಮುಗಿದ ಮೇಲೆ ಕುರುಕ್ಷೇತ್ರದ ಇಂಜಿನಿಯರಿಂಗ್ ಕಾಲೇಜಿನಲ್ಲಿ ಅಧ್ಯಾಪಕಿಯಾಗಿ ಕೆಲಸಕ್ಕೆ ಸೇರುತ್ತಾಳೆ. ದಿಟ್ಟೆಯೂ, ಸ್ವತಂತ್ರ ವ್ಯಕ್ತಿತ್ವವುಳ್ಳವಳೂ ಆದ ಶೀಲ ಒಂದು ರಾತ್ರಿ ಸ್ನೇಹಿತನೊಂದಿಗೆ ಸುತ್ತಾಡಿಕೊಂಡು ಬರಲು ಹೋಗಿದ್ದಾಗ ಪುಂಡರು ಅವಳನ್ನು ಬಲಾತ್ಕರಿಸುತ್ತಾರೆ. ಇದು ಪುರುಷರು ಹೆಣ್ಣಿನ ಮೇಲೆ ನಡೆಸುವ ಲೈಂಗಿಕ ದೌರ್ಜನ್ಯವಾಗುತ್ತದೆ. ಈ ಪರಿಸ್ಥಿತಿಯಲ್ಲಿ ಸಾಮಾನ್ಯ ಹೆಣ್ಣು ಧೃತಿಗೆಟ್ಟು ಸಮಾಜದಿಂದ ತನ್ನನ್ನು ತಾನೇ ಬಹಿಷ್ಕೃತಗೊಳಿಸಿಕೊಳ್ಳುತ್ತಿದ್ದಳು ಅಥವಾ ವಿಷಯ ಹರಡಿದ ಮೇಲೆ ಸಮಾಜವೇ ಹೀನಾಯವಾಗಿ

ನಿಂದಿಸಿ ಬಹಿಷ್ಕೃತಗೊಳಿಸುತ್ತಿತ್ತು. ಆದರೆ ಈ ಕಥೆಯ ಶೀಲ ತನ್ನ ಮೇಲೆ ನಡೆದ ಆಕ್ರಮಣವನ್ನು ಆಕಸ್ಮಿಕ ಎಂದು ಭಾವಿಸಿ ಈ ಘಟನೆಯಲ್ಲಿ ತನ್ನ ತಪ್ಪು ಏನೂ ಇಲ್ಲ ಎಂದು ಯೋಚಿಸಿ, ಮಾನಸಿಕವಾಗಿ ಸ್ವಲ್ಪ ಸ್ಥೈರ್ಯ ಕಳೆದುಕೊಂಡರೂ ಧೃತಿಗೆಡದೆ ದೈನಂದಿನ ಜೀವನ ಸಾಗಿಸುತ್ತಾಳೆ.

ಲೇಖಕಿ ನೇಮಿಚಂದ್ರ ಅವರು ಶೀಲಳ ಪಾತ್ರದ ಮೂಲಕ ಹೆಣ್ಣು ತನ್ನ ಮೇಲೆ ನಡೆಯುವ ದೌರ್ಜನ್ಯಗಳನ್ನು ನೋಡುವ ದೃಷ್ಟಿಕೋನವನ್ನು ಬದಲಾಯಿಸಿಕೊಳ್ಳಬೇಕು ಎಂದು ಬಯಸಿದ ಹಾಗಿದೆ. ಕಥಾನಾಯಕಿ ಶೀಲಳ ಮೂಲಕ ಹೇಳಿಸುವ ಕೆಳಗಿನ ಮಾತುಗಳು ಮೇಲಿನ ಹೇಳಿಕೆಯನ್ನು ಸ್ಪಷ್ಟೀಕರಿಸುತ್ತವೆ– “ಕುರುಕ್ಷೇತ್ರ ನಿಜಕ್ಕೂ ರಣರಂಗವಾಯ್ತು. ಎಲ್ಲ ಕಡೆ ಪಿಸುಮಾತು, ವ್ಯಂಗ್ಯ ನೋಟ, ನಾನು ಅಸ್ಪೃಶ್ಯಳೆಂಬಂತೆ ವರ್ತನೆ, ಸಾಲದ್ದಕ್ಕೆ ಬೋರ್ಡ್ ಮೇಲೆ ಶೀಲ – ಶೀಲ = 0 ಎಂದು ಹೊಲಸಾಗಿ ಬರೆದ ಪುಂಡ ವಿದ್ಯಾರ್ಥಿಗಳು. ಎಲ್ಲ ತೊರೆದು ಓಡಿಹೋಗಬೇಕೆಂದು ಕೊಂಡೆ. ನನ್ನ ದಿಟ್ಟ ವ್ಯಕ್ತಿತ್ವಕ್ಕೆ ಅದು ಹೊಂದಲಿಲ್ಲ. ಸಮಸ್ಯೆ ಇರುವಲ್ಲಿ ನಿಂತು ಹೋರಾಡಬೇಕು, ನಿರ್ಧರಿಸಿದೆ. ನನ್ನ ಗಾಯಗಳ ಹೆಗ್ಗುರುತು ಹಾಸ್ಟೆಲ್ ಹುಡುಗಿಯರ ನಿರಂತರ ಪ್ರಶ್ನೆ, ತಯಾರಿಸಿಟ್ಟ ಸುಳ್ಳು ಸರಪಳಿ ದುರ್ಬಲ, ಕುಹಕ ನೋಟ, ಹುಸಿ ಅನುಕಂಪ, ಕ್ಯಾಂಪಸ್ ತುಂಬ. ನಾ ಏನು ಮಾಡಬೇಕಿತ್ತು ಆಶು? ನಾ ಎಲ್ಲ ಹೇಳಿ ಅತ್ತಿದ್ದರೆ ತಗ್ಗು ಸ್ವರದ ಸಡಿಲ ಮಾತುಗಳು ಗೊಗ್ಗುರಾಗುತ್ತಿದ್ದವು, ನಾನು ಆತ್ಮಹತ್ಯೆ ಮಾಡಿಕೊಳ್ಳಬೇಕಿತ್ತು. ಆಗಷ್ಟೇ ಅನುಕಂಪ, ಸತ್ತದ್ದಕ್ಕೆಲ್ಲ ಒಂದು ಬೆಲೆ. ಬದುಕಿಗೆ, ಉಸಿರಿಗೆ, ಗೌರವವಿಲ್ಲ, ಸಾವಿಗೊಂದು ಮಹತ್ತರ ಸ್ಥಾನ. ಆದರೆ ನಾ ಸಾಯುವಷ್ಟು ಮೂರ್ಖಳಲ್ಲ”. “ಇನ್ನು ಕೋರ್ಟಿಗೆ? ಏನು ಉಪಯೋಗ? ಎಲ್ಲ ದುರ್ಬಲ ಕಾನೂನುಗಳು. ಒಮ್ಮೆ ಆದ ಘಟನೆ ನೂರು ಬಾರಿ ಹೇಳಿಸಿ ಮತ್ತೆ ನೂರು ಬಾರಿ ಮಾನಭಂಗ ಅಷ್ಟೆ. ಕಾನೂನನ್ನ ಕೈಗೆ ತೆಗೆದುಕೊಂಡು ಒಬ್ಬೊಬ್ಬರಿಗೂ ಬುದ್ಧಿ ಕಲಿಸೋಣ ಎನ್ನಲು ಆ ಮೂರು ಧಾಂಡಿಗರು ಯಾರು ಎಂದು ಗೊತ್ತಿಲ್ಲ, ಇಂಥ ಪರಿಸ್ಥಿತೀಲಿ ಮೌನವೊಂದೇ ಮಾರ್ಗವಾಯಿತು. ಅದು ನಡೆಯಬಾರದಿತ್ತು, ನಡೆಯಿತು. ಆದರೆ ನನ್ನದೇನೋ ಕಳೆದುಹೋದಂತೆ ಅನಿಸಿಲ್ಲ. ಆಗಬಾರದಿತ್ತು, ಆದದ್ದರಲ್ಲಿ ನನ್ನ ಅಪರಾಧವಿಲ್ಲ. ಹೇಳು ಆಶು ಫುಟ್‌ಪಾತ್‌ನಲ್ಲೇ ಹೋಗ್ತಾ ಇರ್ತೀಯಾ, ಕಾರೋ, ಲಾರಿಯೋ ಹಾದು ಕೈಯೋ ಕಾಲೋ ಮುರಿದರೆ ಅದರಲ್ಲಿ ನಿನ್ನ ಪಾತ್ರ ಎಷ್ಟು? ನನ್ನ ಪರಿಸ್ಥಿತಿನೂ ಅಷ್ಟೇ ಆಗಿತ್ತು. ಆದರೆ ಒಂದು ಕಾಲು ಮುರಿದರೆ ಅವ ಅಸ್ಪೃಶ್ಯನಾಗೋಲ್ಲ. ಈ ಶೀಲ ಅನ್ನೋ ಅಬ್‌ಸ್ಟ್ರಾಕ್ಟ್ ಥಿಂಗ್‌ಗೆ ಎಂಥಾ ಡಿಫಿನಿಷನ್! ನಮ್ಮ ಪಾತ್ರವೇ ಇಲ್ಲದೆ, ನಮ್ಮ ಅಪ್ಪಣೆಯೇ ಇಲ್ಲದೆ ಕಳೆದುಹೋಗಬಹುದಾದರೆ ಅದಕ್ಕೇಕೆ ಅಷ್ಟು ಪ್ರಾಮುಖ್ಯತೆ? ಘಟನೆ ಕಹಿ. ಆದರೆ ಅದರ ಗುಂಗಿನಲ್ಲಿ ಬದುಕು ಕಳೆದುಕೊಳ್ಳಲು

ನಾನು ಸಿದ್ಧವಿಲ್ಲ, ನಾನು ವಾಸ್ತವವಾದಿ" (ನೇಮಿಚಂದ್ರ 2012: ಪುಟ 365). ಶೀಲಳ ಈ ಮಾತುಗಳ ಮೂಲಕ ನೇಮಿಚಂದ್ರ ಅವರು ದೌರ್ಜನ್ಯಕ್ಕೊಳಗಾದ ಹೆಣ್ಣೊಬ್ಬಳು ತನ್ನ ಸುತ್ತಲಿನ ಸಮಾಜದ ನಿಂದನೆ, ಅವಮಾನಗಳನ್ನು ಸಹಿಸಲಾಗದೆ ಜೀವ ಕಳೆದುಕೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಈ ಸಮಾಜ ಬಲಿಪಶುವಾದ ಮಹಿಳೆಯ ಸಾವಿಗೆ ಬೆಲೆ ಕಟ್ಟುತ್ತದೆ, ಅವಳ ಉಸಿರಿಗೆ, ಅವಳ ಜೀವಕ್ಕೆ ಬೆಲೆ ಕೊಡುವುದಿಲ್ಲ. ಇದು ಹೆಣ್ಣನ್ನು ನಿಕೃಷ್ಟವಾಗಿ ಕಾಣುವ ಸಮಾಜದ ರೀತಿಯನ್ನು ತೋರಿಸುತ್ತದೆ. ಆದರೆ ಇಂತಹ ನಿಂದನೆ, ಅಪಮಾನಗಳನ್ನು ಎದುರಿಸಿ ತನ್ನ ಬದುಕನ್ನು ಕಟ್ಟಿಕೊಳ್ಳಬೇಕು, ವಾಸ್ತವವಾಗಿ ಚಿಂತಿಸಿ, ತನ್ನದಲ್ಲದ ತಪ್ಪಿನಿಂದ ಆದ ಘಟನೆಗೆ ಮಹತ್ವ ಕೊಡಬಾರದು. ಜೊತೆಗೆ ಬಲಾತ್ಕಾರ ಮಾಡಿದವರು ಬೇರೆಯವರು ಅದರಲ್ಲಿ ಹೆಣ್ಣಿನ ಪಾತ್ರವೇನೂ ಇಲ್ಲ. ಆದರೂ ಶೀಲ ಕಳೆದುಕೊಂಡಳೆಂಬ ಕಳಂಕ ಅವಳಿಗೆ. ಬೇರೆಯವರಿಂದ ತಮ್ಮ ಅಪ್ಪಣೆ, ಪಾತ್ರವೇ ಇಲ್ಲದೆ ಕಳೆದುಹೋಗಬಹುದಾದ ನಿರ್ವಿಕಾರ ಭಾವನೆಗೆ 'ಶೀಲ' ಎಂಬ ಅರ್ಥವನ್ನು ಕೊಟ್ಟು, ಅದನ್ನೇ ಹೆಣ್ಣಿನ ಬಾಳಿಗೆ ಮುಖ್ಯವೆಂದು ಪ್ರತಿಪಾದಿಸಿರುವ ಈ ಸಮಾಜ ಹೆಣ್ಣಿನ ಜೀವಕ್ಕೆ ಅಸ್ತಿತ್ವಕ್ಕೆ ಪ್ರಾಮುಖ್ಯತೆ ನೀಡಿಲ್ಲ. ತನ್ನ ಅಪ್ಪಣೆ, ಪಾತ್ರ ಏನೂ ಇಲ್ಲದೆ ಕಳೆದುಹೋದ ನಿರ್ವಿಕಾರ ಭಾವನೆಗೆ ಮಹತ್ವ ಕೊಡದೆ ಹೆಣ್ಣು ತನ್ನ ಜೀವನವನ್ನು ಕಟ್ಟಿಕೊಳ್ಳಬೇಕು ಅಸ್ತಿತ್ವವನ್ನು ಉಳಿಸಿಕೊಳ್ಳಬೇಕು ಎಂದು ತಿಳಿಸುವುದು ಕಂಡುಬರುತ್ತದೆ.

ಎಂ.ಎಸ್. ವೇದಾರವರು ಇಂದಿನ ಮಹಿಳೆಯರಲ್ಲಿ ಕಂಡುಬರುತ್ತಿರುವ ಬದಲಾದ ಯೋಚನಾಲಹರಿ, ಧೃಡ ಮನೋಭಾವ, ಸ್ವಂತ ವ್ಯಕ್ತಿತ್ವ ಬೆಳೆಸಿಕೊಳ್ಳುವ ಮತ್ತು ಅದನ್ನು ಉಳಿಸಿಕೊಳ್ಳುವ ನಿರ್ಧಾರ, ಪ್ರಯತ್ನಗಳ ಕಥಾವಸ್ತುವನ್ನು 'ಅನುಕ್ತ' ಕಥೆಯಲ್ಲಿ ಹೊರಹೊಮ್ಮಿಸಿದ್ದಾರೆ. ತನ್ನತನವನ್ನು ಉಳಿಸಿಕೊಳ್ಳಲು, ವ್ಯಕ್ತಿತ್ವವನ್ನು ಕಾಪಾಡಿಕೊಳ್ಳಲು, ಸ್ವತಂತ್ರವಾಗಿ ಬದುಕು ನಡೆಸಲು ಧೈರ್ಯ ತಾಳುವ ತನ್ನತನಕ್ಕೆ ಧಕ್ಕೆಯಾದಾಗ ಧಕ್ಕೆ ಮಾಡಿದಾತ ತನ್ನ ಗಂಡನಾದರೂ ಅವನನ್ನು ಬಿಟ್ಟು ಸ್ವತಂತ್ರ ಜೀವನ ನಡೆಸಲು ಮುಂದಾಗುವ ದಿಟ್ಟ ಮಹಿಳೆಯ ಚಿತ್ರಣವನ್ನು ಮಂಜುವಿನ ಪಾತ್ರದ ಮುಖಾಂತರ ತೋರಿಸಿದ್ದಾರೆ. ಮಂಜುವಿಗೆ ಅವಳಣ್ಣ ಶಶಿಯ ಶ್ರೀಮಂತ ಸ್ನೇಹಿತ ಮಹೇಂದ್ರನೊಂದಿಗೆ ಮದುವೆಯಾಗುತ್ತದೆ. ಜೊತೆಗೆ ಶಶಿಗೂ ಮಂಜುವಿನ ಸ್ನೇಹಿತೆ ತಾರಾಳೊಂದಿಗೆ ಮದುವೆಯಾಗುತ್ತದೆ. ಮದುವೆಯ ಸಂಭ್ರಮ ಮುಗಿಯುವುದರೊಳಗೆ ಶಶಿ ಸ್ಕೂಟರ್ ಅಪಘಾತದಲ್ಲಿ ಸಾವಿಗೀಡುತ್ತಾನೆ. ತನ್ನ ಪ್ರತಿ ಬೇಡಿಕೆಗಳಿಗೂ ಶಶಿಯನ್ನೇ ಅವಲಂಬಿಸಿದ್ದ ಮಂಜು ಮಾನಸಿಕವಾಗಿ ಕುಗ್ಗಿ ಹೋಗುತ್ತಾಳೆ. ಆದರೆ ಶಶಿಯ ಸಾವಿನಿಂದ ಆಗಿರುವ ದುಃಖ ತನ್ನ ನೋವಿಗಿಂತ ತಾರಾ ಅನುಭವಿಸುತ್ತಿರುವ ದುಃಖವೇ

ಹೆಚ್ಚು ಎಂಬ ಅರಿವು ಮಂಜುವಿಗೆ ಬರುತ್ತದೆ. ಶಶಿಯ ತಾಯಿ ಯಾವಾಗಲೂ ತಾರಾ ಮದುವೆಯಾಗಿ ಬಂದಿದ್ದರಿಂದಲೇ ಹೀಗಾಯಿತು ಎಂದು ಮೂದಲಿಸುವುದು ಮತ್ತು ಒಂಟಿತನದಿಂದ ತಾರಾ ನಲುಗಿಹೋಗುತ್ತಿರುತ್ತಾಳೆ. ಇಲ್ಲಿ ಎಂ.ಎಸ್. ವೇದಾರವರು ಕುಟುಂಬದಲ್ಲಿ ಏನೇ ಕೆಟ್ಟದ್ದು ಆದರೆ ಅದಕ್ಕೆ ಸ್ತ್ರೀಯೇ ಕಾರಣ ಎಂದು ತಿಳಿಯುವ ಜನಗಳನ್ನು, ಅವರ ಮೂಢ ನಂಬಿಕೆಯನ್ನು ಮತ್ತು ಅದರಿಂದ ಮಹಿಳೆಗೆ ಆಗುವ ನೋವನ್ನು ಚಿತ್ರಿಸಿರುವುದು ಕಾಣುತ್ತದೆ.

ತಾರಾಳ ಪರಿಸ್ಥಿತಿಯನ್ನು ಅರಿತ ಮಂಜು ಹೇಗಾದರೂ ಸಹಾಯಮಾಡಿ ಅವಳ ಬದುಕನ್ನು ಸರಿಪಡಿಸಬೇಕೆಂದು ತೀರ್ಮಾನಿಸಿ ತಾರಾಳನ್ನು ತಮ್ಮೊಂದಿಗೆ ಕರೆದುಕೊಂಡು ಹೋಗಲು ಮಹೇಂದ್ರನನ್ನು ಒಪ್ಪಿಸುತ್ತಾಳೆ. ಆದರೆ ಮಂಜು ಮನೆಯಲ್ಲಿರದ ಸಂದರ್ಭದಲ್ಲಿ ತಾರಾಳ ಅಸಹಾಯಕತೆಯನ್ನು ಮಹೇಂದ್ರ ದುರುಪಯೋಗ ಮಾಡಿಕೊಳ್ಳುತ್ತಾನೆ. ಇದನ್ನು ತಿಳಿದ ಮಂಜು ಬಹಳ ನೋವನ್ನನುಭವಿಸಿ ಕೋಪಗೊಳ್ಳುತ್ತಾಳೆ. ತನ್ನನ್ನು ಸಂಪೂರ್ಣವಾಗಿ ಮಹೇಂದ್ರನಿಗೆ ಒಪ್ಪಿಸಿದರೂ ಅವನು ಇನ್ನೊಂದು ಹೆಣ್ಣನ್ನು ಬಯಸಿದ್ದು ತನಗೆ ಮಾಡಿದ ದ್ರೋಹ ಎಂದು ತಿಳಿಯುತ್ತಾಳೆ. ಈ ದ್ರೋಹಕ್ಕೆ ಶಿಕ್ಷೆ ಮತ್ತು ತನ್ನತನವನ್ನು ಉಳಿಸಿಕೊಳ್ಳಲು ಮಂಜು, ತಾರಾ ಮತ್ತು ಮಹೇಂದ್ರರ ಮದುವೆ ಮಾಡಿಸುತ್ತಾಳೆ. ಇಲ್ಲಿ ಕಂಡುಬರುವುದೇನೆಂದರೆ ಆಧುನಿಕ ಹೆಣ್ಣು ತನ್ನತನವನ್ನು ಉಳಿಸಿಕೊಳ್ಳಲು ನಡೆಸುತ್ತಿರುವ ಪ್ರಯತ್ನಗಳ ಚಿತ್ರಣ. ವಿದ್ಯಾವಂತ ಹೆಣ್ಣು, ತನ್ನ ಸುತ್ತಮುತ್ತಲಿನ ಪರಿಸರವನ್ನು ಅರಿತ ಹೆಣ್ಣು ತನಗೆ ಅನ್ಯಾಯ, ದ್ರೋಹವಾಗುತ್ತಿದ್ದಾಗ ಅಸಹಾಯಕಳಾಗಿ ದೌರ್ಜನ್ಯವನ್ನು ಅನುಭವಿಸದೆ, ಆ ದ್ರೋಹವನ್ನು ಸರಿಪಡಿಸಿ ತನ್ನತನವನ್ನು ಅಂದರೆ ಹೆಣ್ಣಿನ ಸ್ವಗೌರವವನ್ನು ಉಳಿಸಕೊಳ್ಳಲು ಅವಳ ಗಂಡನನ್ನೂ ಬಿಟ್ಟು ಕೊಡುವ ಮಟ್ಟಕ್ಕೆ ತಲುಪಿದ್ದಾಳೆ. ಇದು ಹೆಣ್ಣಿನ ಮನೋಸ್ಥೈರ್ಯ, ಚಿಂತನೆ, ಧೈರ್ಯ ಇವುಗಳಲ್ಲಿ ಆಗುತ್ತಿರುವ ಬದಲಾವಣೆಯನ್ನು ತೋರಿಸುತ್ತದೆ. ಇದರ ಜೊತೆಯಲ್ಲೆ ಬದಲಾಗುತ್ತಿರುವ ಹೆಣ್ಣನ್ನು ಅರ್ಥಮಾಡಿಕೊಳ್ಳುವ ಗಂಡಸರು ಸಿಗುತ್ತಾರೆ ಎಂಬ ಆಶಾಭಾವನೆಯನ್ನು ವ್ಯಕ್ತಪಡಿಸಿ, ಅಂತಹ ಗಂಡು ಮಂಜುವಿಗೆ ದೊರಕುವುದು ಬದಲಾಗುತ್ತಿರುವ ಸ್ತ್ರೀ ಪುರುಷರ ನಿಲುವನ್ನು ಸೂಚಿಸುತ್ತದೆ. ಇದು ಎಂ.ಎಸ್. ವೇದಾರವರು ಸಮಾಜವನ್ನು ಗ್ರಹಿಸುತ್ತಿರುವ ರೀತಿಯನ್ನು ಮತ್ತು ಅವರ ಕಥಾವಸ್ತು ಆಯ್ಕೆಯ ವಿಶೇಷತೆಯನ್ನು ತೋರಿಸುತ್ತದೆ.

ಎಂ.ಎಸ್. ವೇದಾರವರು 'ಮಳೆಯ ಒಂದು ರಾತ್ರಿಯಲ್ಲಿ' ಕಥೆಯಲ್ಲಿ, ಚಿಕ್ಕ ವಯಸ್ಸಿನಲ್ಲೇ ಮದುವೆಯಾದ ಹೆಣ್ಣೊಬ್ಬಳು ಗಂಡನ ಮನೆಯ ದೈಹಿಕ, ಮಾನಸಿಕ ಶೋಷಣೆ ಮತ್ತು ಹಿಂಸೆಗಳ

ವಿರುದ್ಧ ತಿರುಗಿ ಬಿದ್ದು ತನ್ನ ಜೀವನವನ್ನು ರೂಪಿಸಿಕೊಳ್ಳಲು ಹೊರಡುವ ಕಥಾವಸ್ತುವನ್ನು ಹೊಂದಿದೆ. ಈ ಕಥೆಯಲ್ಲಿ ಲೇಖಕಿ ಬದಲಾಗುತ್ತಿರುವ ತನ್ನೊಳಗೆ ತನ್ನ ಬೇಕು ಬೇಡಗಳನ್ನು ಕುರಿತು ಚಿಂತಿಸುತ್ತಿರುವ ಹೆಣ್ಣುಗಳ ಚಿತ್ರಣವನ್ನು ಕೊಡುತ್ತಾರೆ. ಕಥೆಯಲ್ಲಿ ಬರುವ ಚಿತ್ರಾಗೆ ಪಿ.ಯು.ಸಿ. ಮುಗಿಯುತ್ತಿದ್ದಂತೆಯೇ ಹೇಮಂತನೊಂದಿಗೆ ಮದುವೆಯಾಗುತ್ತದೆ. ಚಿತ್ರಾ ಸುಂದರವಾಗಿದ್ದರಿಂದ ಮತ್ತು ಅವಳ ತಂದೆ ಕೊಡುತ್ತಿದ್ದ ವರದಕ್ಷಿಣೆಯಿಂದ ಹೇಮಂತ್ ಅವಳನ್ನು ಮದುವೆ ಮಾಡಿಕೊಳ್ಳುತ್ತಾನೆ. ಮದುವೆಯಾದ ಮೊದಲೆರಡು ವರ್ಷ ಜೀವನ ಚೆನ್ನಾಗಿರುತ್ತದೆ. ಆದರೆ ಈ ಸಮಯದಲ್ಲಿ ಚಿತ್ರಾ ಗಂಡನ ಮಾತಿಗೆ ಓಗೊಟ್ಟು ಮೂರ್ನಾಲ್ಕು ಬಾರಿ ಗರ್ಭಪಾತಕ್ಕೊಳಗಾಗುತ್ತಾಳೆ. ಪದೇ ಪದೇ ಗರ್ಭಪಾತವಾದ್ದರಿಂದ ಅವಳ ಕಾಲುಗಳು ಸ್ವಾಧೀನ ಕಳೆದುಕೊಂಡು ಕುಂಟಿಯಾಗುತ್ತಾಳೆ. ಇಲ್ಲಿ ಗಂಡಸು ಹೇಗೆ ತನಗೆ ಬೇಕಾದಂತೆ ಹೆಣ್ಣನ್ನು ಬಳಸಿಕೊಂಡು ಅವಳ ದೈಹಿಕ ನ್ಯೂನತೆಗೆ ಕಾರಣವಾಗುತ್ತಾನೆ ಎಂದು ಲೇಖಕರು ತೋರಿಸಿದ್ದಾರೆ. ಕಾಲು ಕಳೆದುಕೊಂಡ ಚಿತ್ರಾಳನ್ನು ಮನೆಯವರು ಮೂದಲಿಸುತ್ತಾ ಮಾನಸಿಕವಾಗಿ ಹಿಂಸಿಸುತ್ತಾರೆ, ಜೊತೆಗೆ ಕುಂಟಿಯಾದ ಹೆಂಡತಿಯನ್ನು ಸಭೆ ಸಮಾರಂಭಗಳಿಗೆ ಕರೆದುಕೊಂಡು ಹೋಗಲು ಆಗುವುದಿಲ್ಲವೆಂದು ಎರಡನೇ ಮದುವೆಯಾಗಲು ಹೇಮಂತ್ ನಿಶ್ಚಯಿಸುತ್ತಾನೆ. ಇದಕ್ಕೆ ಅಡ್ಡ ಬಂದರೆ ಚಿತ್ರಾಳನ್ನು ಕೊಲ್ಲುವುದಾಗಿಯೂ ತಿಳಿಸುತ್ತಾರೆ.

ಇದರಿಂದ ಬೇಸತ್ತ ಚಿತ್ರಾ ತನ್ನ ಜೀವನ ತಾನೇ ರೂಪಿಸಿಕೊಳ್ಳಲು ಬಯಸುತ್ತಾಳೆ. ವಿಚ್ಛೇದನ ಪಡೆಯಲು ಸಲಹೆ ನೀಡಿದ ತಂದೆ, ಅವಳಿಗೆ ಟೈಪಿಂಗ್ ಮಿಷಿನ್ ಕೊಡಿಸುವುದಾಗಿ ತಿಳಿಸುತ್ತಾರೆ. ಈ ಸಲಹೆಯಿಂದ ಧೈರ್ಯ ಪಡೆದ ಚಿತ್ರಾ ಗಂಡನನ್ನು ಧಿಕ್ಕರಿಸಿ, ಅವನ ಮನೆ ಬಿಟ್ಟು ತನ್ನ ಜೀವನ ರೂಪಿಸಿಕೊಳ್ಳಲು ಹೊರಡುತ್ತಾಳೆ. ಈ ಕಥೆಯಲ್ಲಿ ತಿಳಿದುಬರುವ ಅಂಶವೆಂದರೆ ಹೆಣ್ಣಿಗೂ ವಿದ್ಯೆ, ದುಡಿಯಲು ಅವಕಾಶ, ಸಮಾನ ಸ್ಥಾನ ದೊರಕಿದರೆ ಅವಳು ಕೂಡ ಯಾರ ಶೋಷಣೆ, ಹಿಂಸೆಗೆ ಒಳಗಾಗದೆ ಜೀವಿಸಬಹುದು. ಏಕೆಂದರೆ, ವಿದ್ಯೆಯಿಲ್ಲದೆ, ಗಂಡನ ಹಿಂಸೆ, ಮೂದಲಿಕೆಗಳಿಂದ ಅಸಹಾಯಕಳಾಗಿದ್ದ ಹೆಣ್ಣೊಬ್ಬಳು ತಂದೆ ತೋರಿದ ಬದುಕುವ ದಾರಿಯ ಅವಕಾಶ ಮತ್ತು ಆರ್ಥಿಕ ಸ್ವಾವಲಂಬನೆಯ ಮಾರ್ಗದ ಸುಳಿವಿನಿಂದಲೇ ಧೈರ್ಯಪಡೆದು ಶೋಷಿಸುವ ಗಂಡನನ್ನು ಎದುರಿಸುವ ಧೈರ್ಯ ಮಾಡುತ್ತಾಳೆ. ಇದರಿಂದ ತಿಳಿಯುವುದೇನೆಂದರೆ ಹೆಣ್ಣಿಗೂ ಸಮಾನ ಅವಕಾಶ, ವಿದ್ಯೆ ಮತ್ತು ಆರ್ಥಿಕ ಸ್ವಾವಲಂಬನೆ ದೊರೆತರೆ ಹೆಣ್ಣು ಕೂಡ ಸಮಾನತೆಯಿಂದ ಮತ್ತು ಶೋಷಣೆಯಿಲ್ಲದೆ ಬದುಕಬಹುದಾದ ವಿಷಯ ಇಲ್ಲಿ ತಿಳಿದು ಬರುತ್ತದೆ.

ಸಮಾಜದಲ್ಲಿ ಮಹಿಳೆಯರ ಅಸ್ತಿತ್ವದ ಕಥಾವಸ್ತುವನ್ನು ಕುರಿತ ಕಥೆಗಳ ವಿಶ್ಲೇಷಣೆಯಲ್ಲಿ ಲೇಖಕಿಯರು ವಿಭಿನ್ನ ಹಿನ್ನೆಲೆಯಲ್ಲಿ ಕೃತಿಗಳನ್ನು ರಚಿಸಿರುವುದು ಕಂಡುಬರುತ್ತದೆ. ತನ್ನನ್ನು ಸಂಶಯಿಸಿ ಅವಮಾನಿಸಿದ ಗಂಡನಿಂದ ಹೊರಬಂದ ಹೆಣ್ಣು ಸ್ವಂತ ಜೀವನ ಕಟ್ಟಿಕೊಳ್ಳುವ ಮತ್ತು ಪುರುಷನ ಸ್ವಾರ್ಥಕ್ಕೆ ಒಳಗಾಗದೆ ಅವನನ್ನು ತಿರಸ್ಕರಿಸಿದ ಹೆಣ್ಣಿನ ಕಥೆಯನ್ನು ತ್ರಿವೇಣಿಯವರು ಕೊಡುತ್ತಾರೆ. ಪುರುಷರ ನೋಟಗಳೇ ಹೆಣ್ಣನ್ನು ಚುಚ್ಚುವ ಮುಳ್ಳುಗಳು, ಮುಖ್ಯವಾಗಿ ಮನೆಯಿಂದ ಹೊರಗಡೆ ದುಡಿಯುವ ಹೆಣ್ಣು ಮಕ್ಕಳು ಅನುಭವಿಸಬೇಕಾದ ಈ ಸನ್ನಿವೇಶವನ್ನು ವೀಣಾ ಶಾಂತೇಶ್ವರರ ಕಥಾ ವಸ್ತು ಹೊಂದಿದೆ. ತನ್ನ ಜೀವನಕ್ಕೆ ಪುರುಷನ ಅವಶ್ಯಕತೆಯಿಲ್ಲ ಎಂದು ಅವರ ಹಂಗಿಲ್ಲದೆ ಜೀವಿಸಲು ಹೊರಟ ಹೆಣ್ಣೊಬ್ಬಳ ಮಾನಸಿಕ ತುಮುಲಗಳು, ದ್ವಂದ್ವಗಳು ಹೇಗೆ ಅವಳನ್ನು ಇಕ್ಕಟ್ಟಿಗೆ ಸಿಲುಕಿಸುತ್ತವೆ ಎಂಬ ಕಥಾವಸ್ತುವೂ ಇಲ್ಲಿ ಚಿತ್ರಿತವಾಗಿದೆ. ಸಮಾಜದಲ್ಲಿ ಒಂಟಿಯಾಗಿರುವ ಹೆಣ್ಣಿನ ಪರಿಸ್ಥಿತಿಯ ದುರ್ಲಾಭ ಪಡೆದು ಅವಳನ್ನು ಲೈಂಗಿಕವಾಗಿ ಬಳಸಿಕೊಳ್ಳಲು ಪ್ರಯತ್ನಿಸುವ ಗಂಡಸರ ಮಧ್ಯೆ ತನ್ನನ್ನು ರಕ್ಷಿಸಿಕೊಂಡು ವ್ಯಕ್ತಿತ್ವ ಉಳಿಸಿಕೊಳ್ಳಲು ಹೆಣ್ಣೊಬ್ಬಳು ಊರಿನ ಸಂಪ್ರದಾಯವನ್ನೇ ಗುರಾಣಿಯಾಗಿ ಬಳಸಿಕೊಂಡ ಕಥಾವಸ್ತುವನ್ನು ಗೀತಾ ನಾಗಭೂಷಣರವರು ಚಿತ್ರಿಸಿದ್ದಾರೆ. ಇದಕ್ಕೆ ವಿರುದ್ಧವಾಗಿ ಹೆಣ್ಣು ತಾನು ಅನಾಥಳಾದರೂ ತನ್ನ ಜೀವನವನ್ನು ಕಟ್ಟಿಕೊಳ್ಳಬಲ್ಲಳು ಮತ್ತು ತನ್ನ ಅಸ್ತಿತ್ವವನ್ನು ತೋರಿಸಬಲ್ಲಳು, ಆದರೆ ಇದನ್ನು ಸಹಿಸದ ಪುರುಷರು ತಮ್ಮ ಸ್ವಾರ್ಥ ಮತ್ತು ಕಾಮುಕ ಸ್ವಭಾವದಿಂದ ಅಂತಹ ಹೆಣ್ಣುಗಳ ಬದುಕನ್ನೇ ಹೊಸಕಿಹಾಕುವ ಕಥಾವಸ್ತುವನ್ನು ಗೀತಾ ನಾಗಭೂಷಣರವರು ಕಟ್ಟಿದ್ದಾರೆ. ಮಹಿಳೆಯರು ಸಾಮಾನ್ಯವಾಗಿ ಪುರುಷರ ಮೇಲೆ ಎಲ್ಲ ರೀತಿಯಲ್ಲೂ ಅವಲಂಬಿತರಾಗಿರುತ್ತಾರೆ, ಈ ಅವಲಂಬನೆಯೇ ಮಹಿಳೆಯ ಶೋಷಣೆ ಮತ್ತು ಅವಳ ಅಸ್ತಿತ್ವವನ್ನು ಅಲುಗಾಡಿಸುವ ಹಂತಕ್ಕೆ ಕೊಂಡೊಯ್ಯುತ್ತದೆ. ಇಂತಹ ಅವಲಂಬನೆಯನ್ನು ತೊಡೆದು ಹೆಣ್ಣು ಸ್ವಾವಲಂಬಿಯಾಗಿ, ತನ್ನ ಜೀವನದ ಕೆಲಸ-ಕಾರ್ಯಗಳನ್ನು ಮಾಡುವ, ನಿರ್ಧಾರಗಳನ್ನು ತೆಗೆದುಕೊಳ್ಳುವ ಮತ್ತು ಪುರುಷನ ಸಹಾಯವಿಲ್ಲದೇ ಸ್ವಂತ ದುಡಿಮೆಯ ಮೇಲೆ ಬದುಕನ್ನು ಸವಿಯುತ್ತಾ ಜೀವಿಸಬೇಕು ಎಂಬ ಕಥಾವಸ್ತುವನ್ನು ನೇಮಿಚಂದ್ರರು ತೋರಿಸಿದ್ದಾರೆ. ಹೆಣ್ಣಿನ ಮೇಲೆ ಲೈಂಗಿಕ ದೌರ್ಜನ್ಯಗಳು ನಿರಂತರವಾಗಿ ನಡೆಯುತ್ತಿರುತ್ತಲೇ ಇರುತ್ತವೆ. ಇಂತಹ ಲೈಂಗಿಕ ದೌರ್ಜನ್ಯಕ್ಕೊಳಗಾದ ಹೆಣ್ಣು ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತಾಳೆ. ಆದರೆ ಇಂತಹ ಪರಿಸ್ಥಿತಿಯನ್ನು ಮೆಟ್ಟಿ ನಿಲ್ಲಬೇಕು, ತನ್ನಿಂದ ಆಗದೆ ಇರುವ ತಪ್ಪಿಗೆ ತಾನೇಕೆ ಶಿಕ್ಷೆ ಅನುಭವಿಸಬೇಕು ಎಂದು ಸಮಾಜದ ಯೋಚನಾಲಹರಿಗೆ ವಿರುದ್ಧವಾಗಿ ಯೋಚಿಸಿ ತನ್ನ ಬಾಳನ್ನು ಕಂಡುಕೊಳ್ಳುವ ಹೆಣ್ಣಿನ ಕಥಾವಸ್ತುವನ್ನು ನೇಮಿಚಂದ್ರ ಅವರು ಕಟ್ಟಿದ್ದಾರೆ. ಆಧುನಿಕ

ಮಹಿಳೆಯರು ತಮ್ಮ ಧೃಢ ಮನೋಭಾವದಿಂದ, ಸ್ವಂತ ವ್ಯಕ್ತಿತ್ವವನ್ನು ಉಳಿಸಿಕೊಳ್ಳಲು ತಮಗೆ ಮೋಸ ಮಾಡಿದ ಪುರುಷನನ್ನೇ ತ್ಯಜಿಸಿ ಜೀವನ ಕಟ್ಟಿಕೊಳ್ಳುವ ಮಹಿಳೆಯ ಕಥಾವಸ್ತುವನ್ನು ವೇದಾ ಅವರು ತೋರಿಸಿದ್ದಾರೆ. ಪುರುಷನು ಹೆಣ್ಣನ್ನು ತನಗೆ ಬೇಕಾದ ಹಾಗೆ ಬಳಸಿಕೊಳ್ಳುವುದರಿಂದ ಅವಳಲ್ಲಿ ಮಾನಸಿಕವಾಗಿ, ದೈಹಿಕವಾಗಿ ಅನೇಕ ತೊಂದರೆಗಳಾಗುತ್ತವೆ. ಈ ತೊಂದರೆಗಳನ್ನು ಅವಳ ಹಣೆಗೇ ಕಟ್ಟಿ ಅನ್ಯಾಯ ಮಾಡುವ ಸಮಾಜದ ರೀತಿಯನ್ನು ಖಂಡಿಸಿ ಅಂತಹ ಗಂಡನಿಂದ ವಿಚ್ಛೇದನ ಪಡೆದು ಸ್ವಂತ ಜೀವನವನ್ನು ಆರ್ಥಿಕ ಸ್ವಾವಲಂಬನೆಯಿಂದ ಕಟ್ಟಲು ಮುಂದಾದ ಹೆಣ್ಣಿನ ಕಥಾವಸ್ತುವನ್ನು ವೇದಾರವರು ತೋರಿಸಿದ್ದಾರೆ. ಮೇಲಿನ ಚರ್ಚೆ ಮಹಿಳಾ ಕಥಾಸಾಹಿತ್ಯದಲ್ಲಿ ಆಗಿರುವ ಕಥಾವಸ್ತುಗಳ ಬದಲಾವಣೆಯನ್ನು ಬಿಂಬಿಸುತ್ತದೆ.

ಈ ಅಧ್ಯಾಯವು ಆಧುನಿಕ ಕನ್ನಡ ಮಹಿಳಾ ಸಾಹಿತ್ಯದಲ್ಲಿ ಅಂದರೆ ತಿರುಮಲಾಂಬಾರಿಂದ ಇತ್ತೀಚಿನ ಲೇಖಕಿಯರವರೆಗೂ ಅಭಿವ್ಯಕ್ತಿಯಾಗಿರುವ ಕಥಾವಸ್ತುಗಳ ಒಲವು-ನಿಲುವುಗಳನ್ನು ವಿಶ್ಲೇಷಿಸುತ್ತಾ ಕಥಾವಸ್ತುಗಳಲ್ಲಿ ಆಗಿರುವ ಬದಲಾವಣೆಯನ್ನು ಗುರುತಿಸಲು ಪ್ರಯತ್ನಿಸಿದೆ. ಒಲವು-ನಿಲುವುಗಳನ್ನು ಸಾಮಾಜಿಕ, ಕೌಟುಂಬಿಕ, ಪೌರಾಣಿಕ ಮತ್ತು ಸ್ತ್ರೀ ಅಸ್ತಿತ್ವದ ತಾತ್ವಿಕ ನೆಲೆಗಟ್ಟುಗಳಲ್ಲಿ ವಿಶ್ಲೇಷಣೆ ಮಾಡಲಾಗಿದೆ. ಸಾಮಾಜಿಕ ನೆಲೆಯ ಕಥಾವಸ್ತುಗಳ ವಿಶ್ಲೇಷಣೆ ಆಧುನಿಕ ಕನ್ನಡ ಸಾಹಿತ್ಯದ ಮೊದಲ ಭಾಗದಲ್ಲಿ ಸಮಾಜದಲ್ಲಿ ಪ್ರಚಲಿತದಲ್ಲಿದ್ದ ಸಾಮಾಜಿಕ ಸಮಸ್ಯೆಗಳಾದ ಮೂಢನಂಬಿಕೆಗಳು, ವರದಕ್ಷಿಣೆ, ಸಂಪ್ರದಾಯ, ಆಚರಣೆಗಳಿಂದ ಸ್ತ್ರೀಯರ ಜೀವನ ಬಂಧಿಯಾಗಿದ್ದುದನ್ನು ಚಿತ್ರಿಸುತ್ತದೆ. ನಂತರ ಬಂದ ಮಹಿಳಾ ಸಾಹಿತ್ಯದಲ್ಲಿ ಆಧುನಿಕತೆಯೊಂದಿಗೆ ಸ್ತ್ರೀಯರನ್ನು ಕುರಿತು ಪುರುಷರ ದೃಷ್ಟಿಕೋನ ಬದಲಾಗುತ್ತಿರುವ, ಕೆಲವೊಮ್ಮೆ ಪುರುಷ ನೀತಿಗಳ ವಿರುದ್ಧ ಹೆಣ್ಣು ತನ್ನದೇ ಮಾರ್ಗದಲ್ಲಿ ಪ್ರತಿರೋಧ ಒಡ್ಡುವ ಕಥಾವಸ್ತುಗಳ ಬಳಕೆ ಕಂಡುಬರುತ್ತದೆ.

ಸಮಾಜದ ಮೂಲವಾದ ಕುಟುಂಬವು ಪುರುಷ ಪ್ರಧಾನವಾಗಿದ್ದು ಮಹಿಳೆಯ ಮೇಲಿನ ದೌರ್ಜನ್ಯ ಮತ್ತು ಶೋಷಣೆಗಳ ಮೂಲವೂ ಆಗಿದೆ. ಕೌಟುಂಬಿಕ ನೆಲೆಗಟ್ಟಿನಲ್ಲಿ ವಿಶ್ಲೇಷಿಸಿದ ಕಥಾವಸ್ತುಗಳು ಈ ಅಂಶವನ್ನು ಪ್ರಸ್ತುತಪಡಿಸುವುದರೊಂದಿಗೆ ಸಮಯ ಬಂದಾಗ ಕುಟುಂಬ ವ್ಯವಸ್ಥೆಯಿಂದ ಹೊರಬಂದು ಒಂಟಿಯಾಗಿ ಜೀವನ ಕಟ್ಟಿಕೊಳ್ಳುವ ವಾಸ್ತವತೆ ಕಾಣುತ್ತದೆ. ಪುರುಷರ ಕ್ರೌರ್ಯದಿಂದ ಪಾರಾಗಲು ಹೆಣ್ಣುಗಳು ತಮ್ಮ ಸುತ್ತಲೂ ಕೋಟೆ ಕಟ್ಟಿಕೊಳ್ಳುವ

ಪರಿಸ್ಥಿತಿ ಕೆಲವು ಕಡೆ ಬಂದರೆ, ಇಡೀ ವ್ಯವಸ್ಥೆಯನ್ನೇ ಧಿಕ್ಕರಿಸಿ ಸ್ವಾತಂತ್ರ್ಯ, ಸಮಾನತೆ ಮತ್ತು ಸ್ವಾವಲಂಬನೆಯನ್ನು ಪಡೆಯಲು ಮುಂದಾಗುವ ಹೆಣ್ಣಿನ ಚಿತ್ರಣವೂ ಕಂಡುಬರುತ್ತದೆ.

ಪುರುಷ ರೂಪಿತ ಸಮಾಜವನ್ನು ಪ್ರತಿನಿಧಿಸುವ ಮತ್ತು ಸ್ಥಿರೀಕರಿಸುವ ಪೌರಾಣಿಕ ಕಥೆಗಳು ಮತ್ತು ಪಾತ್ರಗಳನ್ನು ಸ್ತ್ರೀ ಸಂವೇದನೆ ಮತ್ತು ಅಸ್ತಿತ್ವದ ನೆಲೆಯಲ್ಲಿ ಆಧುನಿಕ ಮಹಿಳಾ ಸಾಹಿತ್ಯ ವಿಶ್ಲೇಷಿಸಿದೆ. ಪುರುಷ ಹಿರಿಮೆಯನ್ನು ಸಾರುವ ಪಾತ್ರಗಳನ್ನು ಧಿಕ್ಕರಿಸಿ ಸ್ತ್ರೀ ಹಿರಿಮೆಯನ್ನು ಎತ್ತಿ ಹಿಡಿದು ಅವಳ ಆತ್ಮಾಭಿಮಾನ, ಗೌರವ, ಆತ್ಮಸ್ಥೈರ್ಯವನ್ನು ತೋರಿಸುವ ಕಥಾವಸ್ತುಗಳ ಬಳಕೆ ಆಧುನಿಕ ಮಹಿಳಾ ಸಾಹಿತ್ಯದಲ್ಲಿ ಕಂಡುಬರುತ್ತದೆ.

ಪುರುಷ ಪ್ರಧಾನ ಸಮಾಜವು ಮಹಿಳೆಯ ಅಸ್ತಿತ್ವವನ್ನೇ ಪರಿಗಣಿಸಿಲ್ಲದಿರುವ ಅಂಶ ಮಹಿಳಾ ಸಾಹಿತ್ಯದಲ್ಲಿ ಕಂಡುಬರುತ್ತದೆ. ಗಂಡನೇ ಪರದೈವ ಎಂದು ನಂಬಿದ್ದ ಹೆಣ್ಣು, ಆ ಗಂಡನಿಂದ ಆದ ಅವಮಾನ, ಅವಲಂಬನೆ, ಅಧೀನ ಪರಿಸ್ಥಿತಿಗಳಿಂದ ಆಚೆ ಬಂದು ಸ್ವಂತ ವ್ಯಕ್ತಿತ್ವ ಸಂಪಾದಿಸಿ, ಸಾಮಾಜಿಕ ಸ್ಥಾನಮಾನ ಹೊಂದಿ ಸ್ವಾವಲಂಬಿ ಜೀವನ ಕಟ್ಟಿಕೊಳ್ಳುವ ಕಥಾವಸ್ತುವನ್ನು ಸ್ತ್ರೀ ಅಸ್ತಿತ್ವವಾದಿ ಕಥಾವಸ್ತುಗಳ ವಿಶ್ಲೇಷಣೆ ತಿಳಿಸುತ್ತದೆ. ಒಟ್ಟಾರೆಯಾಗಿ ಹೇಳುವುದಾದರೆ ಹೆಣ್ಣಿಗೆ ಮನೆ, ಗಂಡನೇ ಸರ್ವಸ್ವ, ಪುರುಷಾಧೀನ, ಪುರುಷಾವಲಂಬಿ ಜೀವನ ಹೆಣ್ಣಿನ ಬಾಳಿಗೆ ಅವಶ್ಯಕ ಎಂಬ ಪುರುಷ ಸಿದ್ಧ ಮಾದರಿಗಳ ಅನ್ಯಾಯವನ್ನು ಅರ್ಥಮಾಡಿಕೊಂಡು ಅವುಗಳನ್ನು ಪ್ರಶ್ನಿಸಿ, ಪ್ರತಿಭಟಿಸಿ ಅವುಗಳಾಚೆ ಬರುವ ಮಾರ್ಗಗಳನ್ನು ಹುಡುಕಿ ತನ್ನ ಅಸ್ತಿತ್ವವನ್ನು ಅರಿತು ಸ್ವಾವಲಂಬಿ ಜೀವನ ನಡೆಸಲು ಸಶಕ್ತಳಾಗುವಂತಹ ಕಥಾವಸ್ತುವಿನ ಬಳಕೆ ಕನ್ನಡ ಮಹಿಳಾ ಸಾಹಿತ್ಯದಲ್ಲಿ ಕಂಡುಬರುತ್ತದೆ. ಆಧುನಿಕ ಹೆಣ್ಣಿಗೆ ದೊರೆತ ಶಿಕ್ಷಣ, ಉದ್ಯೋಗದ ಅವಕಾಶ, ರಾಷ್ಟ್ರೀಯ, ಅಂತರಾಷ್ಟ್ರೀಯ ವಿದ್ಯಮಾನಗಳ ಬೆಳವಣಿಗೆ, ಇವೆಲ್ಲದರ ಪರಿಣಾಮವಾಗಿ ಮಹಿಳೆಯರಲ್ಲಿ ಮೂಡಿದ ತಿಳಿವಳಿಕೆಗಳು ಮಹಿಳಾ ಸಾಹಿತಿಗಳು ಸ್ತ್ರೀಯರ ಜೀವನದ ವಿವಿಧ ರೀತಿಯ ಕಥಾವಸ್ತುವನ್ನು ಪರಿಗಣಿಸುವಲ್ಲಿ ಕಾರಣವಾಗಿರುವುದು ಕಂಡುಬರುತ್ತದೆ.

ಅಧ್ಯಾಯ 5

ಅಧ್ಯಾಯ 5

ಮಹಿಳಾ ಕಥಾ ಸಾಹಿತ್ಯದಲ್ಲಿ ಸಮಾನತೆ–ಅಸಮಾನತೆಯ ಅಭಿವ್ಯಕ್ತಿ

ಮಹಿಳೆಯರ ಮೇಲೆ ಹಲವಾರು ರೀತಿಯ ದೌರ್ಜನ್ಯ, ಶೋಷಣೆ, ಅನ್ಯಾಯಗಳು ನಡೆಯುತ್ತಿರುವುದು ಸರಿಯಷ್ಟೆ. ಈ ದೌರ್ಜನ್ಯ, ಶೋಷಣೆಗಳು ಹೆಣ್ಣನ್ನು ಅಧೀನದಲ್ಲಿಟ್ಟುಕೊಳ್ಳಲು ಪುರುಷನು ನಡೆಸುವ ವಿವಿಧ ರೀತಿಯ ಮಾರ್ಗಗಳು ಎಂದು ತಿಳಿಯಬಹುದು. ಪುರುಷನು ಹೆಣ್ಣನ್ನು ತನ್ನ ಅಧೀನದಲ್ಲಿಟ್ಟುಕೊಳ್ಳುವ ಮುಖ್ಯ ಉದ್ದೇಶವೆಂದರೆ ಅವಳು ಮನೆಯ ಕೆಲಸಕಾರ್ಯಗಳನ್ನು ಮಾಡುತ್ತಾ, ಅವನ ಸೇವೆ ಮಾಡಿಕೊಂಡಿರಬೇಕೆಂಬುದಾಗಿದೆ. ಅಂದರೆ, ಹೆಣ್ಣು ಯಾವಾಗಲೂ ಗಂಡಸಿನ ಸೇವೆ ಮಾಡುತ್ತಾ ಗುಲಾಮಳ ರೀತಿ ಇರಬೇಕಾದ ಪರಿಸ್ಥಿತಿ. ದೌರ್ಜನ್ಯ, ಶೋಷಣೆ, ಗುಲಾಮತನ ಇವುಗಳ ಮೂಲನೆಲೆ ಅಸಮಾನತೆ. ಸ್ತ್ರೀ–ಪುರುಷರ ನಡುವಿನ ಅಸಮಾನತೆಯನ್ನು ಸಹಜವಾದುದೆಂದು ಹೇಳುವ ಪುರುಷ ಸಮಾಜ, ಬಸವರಾಜ ಸಬರದ ಅವರು ಹೇಳುವಂತೆ "ಹೆಣ್ಣು–ಗಂಡಿನ ನಡುವಿರುವ ಅಸಮಾನತೆ ಅದು ಪ್ರಕೃತಿ ಸಹಜವಾದುದೆಂದು ಯಜಮಾನ ಸಂಸ್ಕೃತಿ ಬಿಂಬಿಸುತ್ತಾ ಬಂದಿದೆ. ಇದನ್ನು ಒಪ್ಪಿಕೊಂಡ ಸಮಾಜ ವ್ಯವಸ್ಥೆ ಹೆಣ್ಣನ್ನು ಅಬಲೆ–ದುರ್ಬಲಳು, ಸದಾ ಇನ್ನೊಬ್ಬರ ರಕ್ಷಣೆಯಲ್ಲಿರುವವಳೆಂದು ಹೇಳುತ್ತಾ ಬಂದಿದೆ" (ಶಿವಾನಂದ ಎಸ್. ವಿರಕ್ತಮಠ 2011: ಪುಟ 152). ಪುರುಷ ಮೇಲು, ಸ್ತ್ರೀ ಕೀಳು ಎಂಬ ಪುರುಷ ಸಮಾಜದ ನಿಲುವು ಹೆಣ್ಣನ್ನು ಅಸಮಾನತೆಗೆ ನೂಕಿ, ಅವಳನ್ನು ಎರಡನೇ ಪ್ರಜೆಯಾಗಿ ಮಾಡಿ ಅಸ್ತಿತ್ವವನ್ನೇ ಕಸಿದುಕೊಂಡು ಹೆಣ್ಣನ್ನು ಅವಕಾಶ, ಸ್ಥಾನಮಾನ, ಸ್ವಾತಂತ್ರ್ಯ ಹಕ್ಕುಗಳಿಂದ ವಂಚಿತಳನ್ನಾಗಿ ಮಾಡಿ ಪುರುಷಾವಲಂಬಿಯಾಗಿ ಮಾಡಿದೆ. ಮಹಿಳೆಗೆ ವಿದ್ಯಾಭ್ಯಾಸ ದೊರೆತಂತೆ ಸಮಾಜದ ರೀತಿ–ನೀತಿಗಳ ಅರಿವು ತಿಳಿಯುತ್ತಾ, ಅವಳು ಅಸಮಾನತೆಯಿಂದ ಕೂಡಿದ ಪುರುಷಾವಲಂಬಿ ಜೀವನ ತಿಳಿಯುತ್ತಾ ಬಂದಿದೆ. ತಾವೂ ಕೂಡ ಪ್ರಕೃತಿಯ ಒಂದು ಭಾಗವಾಗಿದ್ದರೂ, ಪುರುಷ ತಮ್ಮನ್ನು ಸಮಾನವಾಗಿ ಪರಿಗಣಿಸದಿರುವುದು ಗಮನಕ್ಕೆ ಬಂದಿದೆ. ದೈನಂದಿನ ಜೀವನದ ಎಲ್ಲ ಕ್ಷೇತ್ರಗಳಲ್ಲೂ ಸ್ತ್ರೀಯನ್ನು ಕಡೆಗಣಿಸಿ ಪುರುಷ ತೀರ್ಮಾನ, ನಿರ್ಧಾರವೇ ಅಂತಿಮ ಎಂಬ ನಿಯಮವನ್ನು ರೂಪಿಸಿ ತಾವು ಸ್ತ್ರೀಯರಿಗಿಂತ ಮೇಲು ಎಂದು ಪ್ರಕಟಿಸಿದ್ದಾನೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಸ್ತ್ರೀ–ಪುರುಷರಿಬ್ಬರೂ ಸಮಾನರು ಜೀವನದಲ್ಲಿ ಸಾಮಾಜಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ ಎಲ್ಲರೂ ಸಮಾನ ಸ್ಥಾನಮಾನವನ್ನು ಹೊಂದಿರಬೇಕು. ಶ್ರೀಮತಿಯವರು ಎಚ್.ಎಸ್. ವ್ಯಕ್ತಪಡಿಸಿದ "ಜಾತಿ, ವರ್ಣ,

ವರ್ಗಗಳೆಂಬ ಭೇದಗಳು ಮಾನವ ನಿರ್ಮಿತ ಸಮಾಜ ರಚನೆಯಲ್ಲಿ ಕೃತಕ ನಿರ್ಮಾಣಗಳು, ಇವುಗಳ ಅಸಮಾನತೆಯಲ್ಲಿ ಅಧಿಕಾರಕ್ಕಾಗಿ ನಡೆಸುವ ಆಕ್ರಮಣವೇ ಬಹು ಮುಖ್ಯ ಅಂಶ. ಆದರೆ ಸ್ತ್ರೀ–ಪುರುಷ ಅಸಮಾನತೆ ಇದಕ್ಕಿಂತ ತೀವ್ರ ಸ್ವರೂಪದ್ದು. ಸ್ತ್ರೀ–ಪುರುಷರು ಭಿನ್ನರಾಗಿರುವುದು ಪ್ರಕೃತಿಯಲ್ಲಿನ ಒಂದು ಉದ್ದೇಶಪೂರ್ವಕ ಕ್ರಿಯೆ. ಈ ಉದ್ದೇಶಪೂರ್ವಕ ಕ್ರಿಯೆಗೆ ಅನುಗುಣವಾಗಿ ಇಬ್ಬರ ದೈಹಿಕ ರಚನೆ, ಸ್ನಾಯುಬಲ, ಕೆಲಮಟ್ಟಿಗೆ ಮನೋಭಾವ ಎಲ್ಲದರಲ್ಲೂ ಅಂತರವಿರುವುದು ನಿಜ. ಆದರೆ ಅರ್ಥ ಮಾಡಿಕೊಳ್ಳಬೇಕಾದ ಸಂಗತಿ ಎಂದರೆ ಈ ಇಬ್ಬರಲ್ಲಿ ಮೇಲು ಕೀಳಿನ ಮಾತು ಇಲ್ಲವೇ ಇಲ್ಲ. ಏಕೆಂದರೆ ಈ ಇಬ್ಬರೂ ಸೇರಿಯೇ ಜೀವನ ಎಂಬುದು ಪರಿಪೂರ್ಣಗೊಳ್ಳುತ್ತದೆ" (ವಿವಿಧ ಲೇಖಕರು, 2006: ಪುಟ 24) ಅಭಿಪ್ರಾಯದಂತೆ ಸ್ತ್ರೀ–ಪುರುಷರಿಬ್ಬರೂ ಪ್ರಕೃತಿ ಸಹಜವಾಗಿ ಸಮಾನರಾಗಿರಬೇಕು, ಆದರೆ ಸಮಾಜ ಸೃಷ್ಟಿಸಿರುವ ಅಸಮಾನತೆ ಮತ್ತು ಪುರುಷರ ಅಧಿಕಾರದಾಹ ಇದಕ್ಕೆ ಅವಕಾಶ ಕೊಡದೆ ಸ್ತ್ರೀಯರನ್ನು ಅಧೀನರಾಗಿ ಮಾಡಿಕೊಂಡು ಅವಳ ಸ್ವಾತಂತ್ರ್ಯವನ್ನು ಕಿತ್ತುಕೊಂಡಿದೆ.

ಸಮಾಜ ಹೆಣ್ಣಿಗೆ ಯಾವ ರೀತಿಯ ಸ್ವಾತಂತ್ರ್ಯವನ್ನು ಕೊಟ್ಟಿಲ್ಲ. ಹೆಣ್ಣಿನ ವ್ಯಕ್ತಿತ್ವ ಬೆಳೆಯಬೇಕಾದರೆ ಅದಕ್ಕೆ ಮೂಲ ಸ್ವಾತಂತ್ರ್ಯ. ಅವಳಿಗೆ ಉದ್ಯೋಗದ ಸ್ವಾತಂತ್ರ್ಯ, ಆರ್ಥಿಕ ಸ್ವಾತಂತ್ರ್ಯ, ಸಾಮಾಜಿಕ ಸ್ವಾತಂತ್ರ್ಯ ಎಲ್ಲವು ಅವಶ್ಯಕವಾಗಿದ್ದು ಅವಳ ವ್ಯಕ್ತಿತ್ವ ಬೆಳೆಯಲು ಪೂರಕವಾಗಿರಬೇಕು. ಈ ಹಿನ್ನೆಲೆಯಲ್ಲಿ ಜೆ.ಎಸ್. ಮಿಲ್ ಸ್ತ್ರೀಯರು ಸ್ವತಂತ್ರ ವ್ಯಕ್ತಿಗಳಾಗಿ ಬೆಳೆಯಲು ಶಿಕ್ಷಣ, ಉದ್ಯೋಗ ಮತ್ತು ಮತದಾನದ ಹಕ್ಕುಗಳು ಬೇಕೆಂದು ಹೇಳಿದ್ದನ್ನು ಗಮನಿಸಬಹುದು. ಸ್ತ್ರೀಗೆ ಬೇಕಾದ ಸ್ವಾತಂತ್ರ್ಯ ಮತ್ತು ವ್ಯಕ್ತಿತ್ವದ ರೂಪವನ್ನು ಮೀರಾ ಎಲ್.ಜಿ. ರವರು ಈ ರೀತಿ ಹೇಳುತ್ತಾರೆ "ಉದ್ಯೋಗವು ಹೆಣ್ಣಿಗೆ ಆರ್ಥಿಕ ಸ್ವಾತಂತ್ರ್ಯವನ್ನು ನೀಡುವ ಸಾಧ್ಯತೆಯನ್ನು ಬಹಳವಾಗಿ ಹೊಂದಿದ್ದರೂ ಎಲ್ಲ ಉದ್ಯೋಗಸ್ಥ ಮಹಿಳೆಯರೂ ಆರ್ಥಿಕವಾಗಿ ಸ್ವತಂತ್ರರು ಎನ್ನಲಾಗದು. ಆರ್ಥಿಕವಾಗಿ ಸ್ವತಂತ್ರರಾಗಬೇಕಾದರೆ ಸ್ವತಂತ್ರ ಮನಸ್ಸನ್ನು ಹೊಂದಿರುವುದು ಉದ್ಯೋಗಕ್ಕೆ ಹೋಗುವಷ್ಟೇ ಅಗತ್ಯ. ಸ್ವತಂತ್ರ ಮನಸ್ಸನ್ನು ಹೊಂದಿರಬೇಕಾದರೆ ಸ್ವಂತ ವ್ಯಕ್ತಿತ್ವ ಎಂಬುದು ಇರಬೇಕು" (2006: ಪುಟ 96). ಅಂದರೆ ಮಹಿಳೆಯ ಜೀವನಕ್ಕೆ ಸ್ವಾತಂತ್ರ್ಯ ಮತ್ತು ವ್ಯಕ್ತಿತ್ವ ಎರಡರ ಅವಶ್ಯಕತೆಯೂ ಇದೆ ಮತ್ತು ಇವೆರಡನ್ನು ಪಡೆಯಲು ಅವರಿಗೆ ಸಮಾಜದಲ್ಲಿ ಸಮಾನತೆಯ ಅವಶ್ಯಕತೆಯಿದೆ. ಏಕೆಂದರೆ ಸಮಾನತೆ ಮತ್ತು ಸ್ವಾತಂತ್ರ್ಯ ಎರಡು ಒಟ್ಟಿಗೆ ಇದ್ದರೆ ವ್ಯಕ್ತಿತ್ವ ವೃದ್ಧಿಗೆ ಅನುಕೂಲವಾಗುತ್ತದೆ ಮತ್ತು ಮಹಿಳಾ ಹಕ್ಕುಗಳನ್ನು ದೊರಕಿಸಿಕೊಡುತ್ತದೆ. ಮೇರಿ ವುಲ್ಫ್ ಸ್ಟೋನ್ ಕ್ರಾಫ್ಟ್ ಮಾನವ ಹಕ್ಕುಗಳ ನೆಲೆಯಲ್ಲಿ

ಮಹಿಳೆಯರ ಹಕ್ಕುಗಳನ್ನು ಗುರುತಿಸಿ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ತತ್ವಗಳನ್ನು ಸ್ತ್ರೀಯರಿಗೂ ಅನ್ವಯಿಸಬೇಕೆಂದು (ಹೇಮಲತಾ ಎಚ್.ಎಂ. 2007: ಪುಟ 30) ಹೇಳಿದ ಮಾತುಗಳನ್ನು ಸ್ವಾತಂತ್ರ್ಯ ಮತ್ತು ಸಮಾನತೆಯ ಅವಶ್ಯಕತೆಯ ನೆಲೆಯಲ್ಲಿ ಗಮನಿಸಬೇಕು. ಮಹಿಳೆಗೆ ವಿದ್ಯಾಭ್ಯಾಸ ದೊರೆತಂತೆ ಸಮಾಜದ ರೀತಿ-ನೀತಿಗಳು ಅವಳ ಅರಿವಿಗೆ ಬರುತ್ತಿದ್ದು, ತನ್ನ ಜೀವನ ಅಸಮಾನತೆಯಿಂದ ಕೂಡಿದ ಪುರುಷಾವಲಂಬಿಯಾಗಿರುವುದು ತಿಳಿಯುತ್ತಿದೆ. ಏಕೆಂದರೆ ಆಧುನಿಕ ಸಮಾಜದಲ್ಲೂ ಸ್ತ್ರೀಗೆ ಸಮಾಜ ಸಮಾನತೆ ಮತ್ತು ಸ್ವಾತಂತ್ರ್ಯವನ್ನು ನೀಡಿಲ್ಲ. ಮಹಿಳೆಗೆ ವಿದ್ಯೆ, ಶಿಕ್ಷಣ, ಉದ್ಯೋಗ ದೊರೆತರೂ ತಾರತಮ್ಯದಲ್ಲಿ ಹೆಚ್ಚಿನ ವ್ಯತ್ಯಾಸವಾಗಿಲ್ಲ ಎಂಬುದನ್ನು ವಿಜಯಲಕ್ಷ್ಮಿ ಕೆ.ಎಂ.ರವರು ಈ ರೀತಿ ಸೂಚಿಸುತ್ತಾರೆ "ಸೂಕ್ಷ್ಮವಾಗಿ ಗಮನಿಸಿದರೆ, ಹಳ್ಳಿಗಳಿಗೆ ಹೋದರೆ, ಬಡ ಕುಟುಂಬಗಳ ಮಧ್ಯೆ ಒಂದೆರಡು ದಿನ ಇದ್ದರೆ, ಮಹಿಳೆಯರ ಹೆಗಲ ಹೊರೆ ಹೆಚ್ಚಾಗುತ್ತಿದೆಯೇ ವಿನಃ ಎಲ್ಲೂ ಏನೂ ಬದಲಾಗಿಲ್ಲ, ಇಬ್ಬರ ಮಧ್ಯೆ ಸಮಾಜದ ವ್ಯವಸ್ಥೆಯಲ್ಲಿನ ತಾರತಮ್ಯದಲ್ಲಿ, ನೀತಿ ನಡೆ ಸಂಪ್ರದಾಯಗಳಲ್ಲಿ ಯಾವ ಬದಲಾವಣೆಯೂ ಆಗಿಲ್ಲ" (2005: ಪುಟ 123). ಅಂದರೆ ಸಮಾಜದಲ್ಲಿ ಅಸಮಾನತೆ ಇನ್ನೂ ಮಾಯವಾಗಿಲ್ಲ ಎಂದು ತಿಳಿಯುತ್ತದೆ. ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಅಸಮಾನತೆಯ ಎಲ್ಲ ಕ್ಷೇತ್ರಗಳಲ್ಲೂ ಮತ್ತು ನಗರ-ಗ್ರಾಮೀಣ ಪ್ರದೇಶಗಳೆರಡರಲ್ಲೂ, ಕುಟುಂಬ-ಗುಂಪುಗಳ ಮಧ್ಯೆಯೂ ಕಂಡುಬರುವುದು.

ಸಮಾಜದಲ್ಲಿರುವ ಅಸಮಾನತೆಯ ಅಂಶಗಳನ್ನು ಗಮನಿಸಿದ ಲೇಖಕಿಯರು ತಮ್ಮ ಕಥೆಗಳಲ್ಲಿ ಸ್ತ್ರೀ-ಪುರುಷರ ಮಧ್ಯೆ ಇರುವ ಅಸಮಾನತೆಯ ಚಿತ್ರಣವನ್ನು ಕೊಟ್ಟಿದ್ದಾರೆ. ಈ ಕಥೆಗಳಲ್ಲಿ ಅಸಮಾನತೆಯ ಸ್ವರೂಪ, ಆಳ, ಮಾರ್ಗಗಳನ್ನು ತೋರಿಸುತ್ತಾ ಸ್ತ್ರೀ-ಪುರುಷರ ನಡುವೆ ಸಮಾನತೆ ಹೇಗಿರಬೇಕಿತ್ತೆಂಬುದನ್ನು ತೋರಿಸುತ್ತಾರೆ. ಮಹಿಳಾ ಸಾಹಿತಿಗಳು ಲಿಂಗತಾರತಮ್ಯವನ್ನು ವಿವಿಧ ನೆಲೆಗಳಲ್ಲಿ ಗುರುತಿಸಿದ್ದಾರೆ. ಸಬಿಹಾ ಭೂಮಿಗೌಡ ಅವರು ಮಹಿಳಾ ಸಾಹಿತ್ಯದಲ್ಲಿರುವ ಲಿಂಗ ತಾರತಮ್ಯವನ್ನು ಸ್ತ್ರೀ-ಪುರುಷರ ಸಂಬಂಧದ ನಡುವೆ, ಕುಟುಂಬದ ಚೌಕಟ್ಟಿನಲ್ಲಿ, ಜಾತಿ-ಧರ್ಮಗಳ ವಲಯದಲ್ಲಿ, ಪುರಾಣ ಜಗತ್ತಿನ ಹಿನ್ನೆಲೆಯಲ್ಲಿ, ಸಮಕಾಲೀನ ಸಂಧರ್ಭದಲ್ಲಿ ಗುರುತಿಸುತ್ತಾರೆ. ಇಂತಹ ಅಸಮಾನತೆಯನ್ನು ತೊಡೆದುಹಾಕಿದರೆ ಸಮಾನತೆ ಏರ್ಪಟ್ಟು ಸ್ತ್ರೀ-ಪುರುಷರು ಸಮಾನವಾಗಿ ಬದುಕಬಹುದು ಎಂಬ ಆಶಯವನ್ನು ಗಮನಿಸಬೇಕು. ಮಹಿಳಾ ಲೇಖಕಿಯರು ಚಿತ್ರಿಸಿರುವ ಸಮಾನತೆ-ಅಸಮಾನತೆ ಚಿತ್ರಣವನ್ನು ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ಪ್ರಸ್ತುತ ಅಧ್ಯಾಯದಲ್ಲಿ ಮಹಿಳಾ ಸಾಹಿತ್ಯದಲ್ಲಿ ವ್ಯಕ್ತವಾಗಿರುವ ಸಮಾನತೆ–ಅಸಮಾನತೆಯ ಚಿತ್ರಣವನ್ನು ಅಧ್ಯಯನದ ಅನುಕೂಲತೆಯ ದೃಷ್ಟಿಯಿಂದ ಮತ್ತು ಮೇಲೆ ಚರ್ಚಿಸಿದ ತಾತ್ವಿಕ ಅಂಶಗಳ ಆಧಾರದ ಹಿನ್ನೆಲೆಯಲ್ಲಿ ಕೆಳಕಂಡ ನೆಲೆಗಳಲ್ಲಿ ವಿಶ್ಲೇಷಿಸಲಾಗಿದೆ. ಅವುಗಳೆಂದರೆ:

1. ಸಾಮಾಜಿಕ ನೆಲೆಯಲ್ಲಿ ಸಮಾನತೆ–ಅಸಮಾನತೆ
2. ಕೌಟುಂಬಿಕ ನೆಲೆಯಲ್ಲಿ ಸಮಾನತೆ–ಅಸಮಾನತೆ
3. ಆರ್ಥಿಕ, ರಾಜಕೀಯ ನೆಲೆಯಲ್ಲಿ ಸಮಾನತೆ–ಅಸಮಾನತೆ

ಈ ಅಧ್ಯಾಯದ ಉದ್ದೇಶಕ್ಕಾಗಿ ಕೆಲವು ಲೇಖಕಿಯರನ್ನು ಪ್ರಾತಿನಿಧಿಕವಾಗಿ ಆಯ್ಕೆ ಮಾಡಿ ಅವರು ಚಿತ್ರಿಸಿರುವ ಸಮಾನತೆ–ಅಸಮಾನತೆಯ ಅಂಶಗಳನ್ನೇ ಆಧಾರವಾಗಿಟ್ಟುಕೊಂಡು ಕಥೆಗಳನ್ನು ಈ ಅಧ್ಯಾಯಕ್ಕೆ ಆಯ್ದುಕೊಂಡು ಮೇಲೆ ತಿಳಿಸಿದ ನೆಲೆಗಳಲ್ಲಿ ವಿಶ್ಲೇಷಿಸಲಾಗಿದೆ.

5.1. ಸಾಮಾಜಿಕ ನೆಲೆಯಲ್ಲಿ ಸಮಾನತೆ–ಅಸಮಾನತೆ

ಮನುಷ್ಯ ಸಮಾಜದಿಂದ ರೂಪಿಸಲ್ಪಡುತ್ತಾನೆ ಮತ್ತು ಈ ರೂಪುಗೊಳ್ಳುವಿಕೆಗೆ ಹಲವಾರು ಸಾಮಾಜಿಕ ಅಂಶಗಳು ಕಾರಣವಾಗುತ್ತವೆ. ಸ್ತ್ರೀ–ಪುರುಷರ ಜೀವನ ರೂಪುಗೊಳ್ಳುವಲ್ಲಿ ಸಮಾಜದಲ್ಲಿ ರುವ ಲಿಂಗತಾರತಮ್ಯತೆ ತನ್ನ ಪ್ರಭಾವವನ್ನು ಬೀರುತ್ತದೆ. ಈ ಹಿನ್ನೆಲೆಯಲ್ಲಿ ಮಹಿಳಾ ಸಾಹಿತ್ಯ ಅಭಿವ್ಯಕ್ತಿಸಿರುವ ಸಮಾನತೆ–ಅಸಮಾನತೆಯ ಚಿತ್ರಣವನ್ನು ಸಾಮಾಜಿಕ ನೆಲೆಯಲ್ಲಿ ವಿಶ್ಲೇಷಿಸಲಾಗಿದೆ. ಇಲ್ಲಿ ಪ್ರಾತಿನಿಧಿಕವಾಗಿ ಎಂ.ಕೆ. ಇಂದಿರಾರವರ 'ಫಣಿಯಮ್ಮ', ಅನುಪಮಾ ನಿರಂಜನರವರ 'ಸಂಕೋಲೆಯೊಳಗಿಂದ', ವೀಣಾ ಶಾಂತೇಶ್ವರರ 'ಗಂಡಸರು', ವೈದೇಹಿಯವರ 'ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು', ಬಿ.ಟಿ. ಲಲಿತಾ ನಾಯಕ್‌ರ 'ಲೂಟಿ', 'ತಾಯಿ ಸಾಕೀಬಾಯಿ', ಗೀತಾ ನಾಗಭೂಷಣರವರ 'ಬೆಳಕಿನೆಡೆಗೆ', ನೇಮಿಚಂದ್ರರ 'ನನ್ನದಲ್ಲದ ಬದುಕಿಗಾಗಿ' ಕಥೆಗಳನ್ನು ಪರಿಗಣಿಸಿ ವಿಶ್ಲೇಷಿಸಲಾಗಿದೆ.

ಕನ್ನಡ ಸಾಹಿತ್ಯದಲ್ಲಿ ಎಂ.ಕೆ. ಇಂದಿರಾರವರ 'ಫಣಿಯಮ್ಮ' ಒಂದು ಮಹತ್ತರ ಕೃತಿಯಾಗಿದೆ. ಈ ಐತಿಹಾಸಿಕ ಕಾದಂಬರಿಯಲ್ಲಿ ಶಾಸ್ತ್ರ–ಸಂಪ್ರದಾಯ, ಮಡಿವಂತಿಕೆ, ಪೌರೋಹಿತ್ಯಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದ ಮತ್ತು ಹೆಣ್ಣಿಗೆ ಮನೆಗೆಲಸ ಬಿಟ್ಟು ಬೇರೆ ಯಾವುದೇ ಸ್ಥಾನಮಾನವಿಲ್ಲದ ಕುಟುಂಬದಲ್ಲಿ ಹುಟ್ಟಿ, ವಿದ್ಯೆಯಿಲ್ಲದಿರುವ ಬಾಲವಿಧವೆಯೊಬ್ಬಳು ಹೇಗೆ ತನ್ನ ಜೀವನದ ಸತ್ಯಾನುಭವಗಳಿಂದ ಎಲ್ಲರೂ ಸಮಾನರು ಮತ್ತು ಮಾನವೀಯತೆ ದೊಡ್ಡದು ಎಂದು ಅರಿಯುವ ಮತ್ತು ವ್ಯಕ್ತಪಡಿಸುವ ರೀತಿಯನ್ನು ಚಿತ್ರಿಸಲಾಗಿದೆ. ಮಲೆನಾಡಿನ

ಕಟ್ಟಾ ಸಂಪ್ರದಾಯಸ್ಥ 'ಅಂಚೆಮನೆ' ಕುಟುಂಬದಲ್ಲಿ ಫಣಿಯಮ್ಮ ಜನಿಸುತ್ತಾಳೆ. 'ಹೆಣ್ಣುಮಕ್ಕಳಿಗೆ ವಿದ್ಯೆಯಿಲ್ಲ' ಎಂಬ ತತ್ವ ಪರಿಪಾಲನೆಯಾಗುತ್ತಿದ್ದರಿಂದ ಫಣಿಯಮ್ಮನಿಗೆ ಅಕ್ಷರಾಭ್ಯಾಸವಾಗುವುದಿಲ್ಲ. ಬಾಲ್ಯದಿಂದಲೇ ಅವಳು ಮನೆಯ ಇತರೆ ಹೆಂಗಸರೊಡನೆ ಸೇರಿಕೊಂಡು ಹಾಡು, ಹಸೆ, ದೇವರ ಪರಿಕರ ತೊಳೆಯುವುದು, ಮಡಿ-ಹುಡಿ, ಎಂಜಲು-ಮುಸುರೆ ಮುಂತಾದ ಮನೆಗೆಲಸದಲ್ಲಿ ತೊಡಗುತ್ತಾಳೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಗಂಡು ಮಕ್ಕಳೆಲ್ಲಾ ಬಾಲ್ಯದಲ್ಲಿ ಅಕ್ಷರಾಭ್ಯಾಸ ಮಾಡಿದರೆ ಹೆಣ್ಣುಮಕ್ಕಳನ್ನು ಮನೆಯ ಕೆಲಸಕ್ಕೆ ಹಚ್ಚುವ ಮತ್ತು ಹೆಣ್ಣನ್ನು ವಿದ್ಯೆಯಿಂದ ವಂಚಿತಳನ್ನಾಗಿ ಮಾಡುವ ಅಸಮಾನತೆಯ ಪರಿಪಾಲನೆ.

ಅಂದಿನ ಪದ್ಧತಿಯ ಪ್ರಕಾರ ಏಳೆಂಟು ವರ್ಷದ ಬಾಲೆ ಫಣಿಯಮ್ಮನಿಗೆ ಹದಿನೈದು ವರ್ಷದ ನಂಜುಂಡನೊಂದಿಗೆ ಮದುವೆಯಾಗುತ್ತದೆ. ಅವಳು ಗಂಡನ ಮನೆಗೆ ಹೋಗುವ ಮೊದಲೇ ನಾಗರಹಾವು ಕಚ್ಚಿ ನಂಜುಂಡನ ಸಾವಾಗುತ್ತದೆ. ಫಣಿಯಮ್ಮ ಕನ್ಯೆಯಾಗುವ ಮೊದಲೇ ಗಂಡನೊಡನೆ ಒಂದು ದಿನ ಬಾಳ್ವೆ ಮಾಡದೇ ಬಾಲವಿಧವೆಯಾಗುತ್ತಾಳೆ. ಫಣಿಯಮ್ಮನ ಕಾಲ್ಗುಣದಿಂದಲೇ ತಮ್ಮ ಮಗನಿಗೆ ಕೆಡುಕಾಯಿತೆಂದು ತಿಳಿದ ನಂಜುಂಡನ ಅಪ್ಪ-ಅಮ್ಮ ಅವಳನ್ನು ಮನೆಗೆ ಕರೆಯುವುದಿಲ್ಲ. ಫಣಿಯಮ್ಮ ತಂದೆಯ ಮನೆಯಲ್ಲೆ ಉಳಿಯುತ್ತಾಳೆ. ಇಲ್ಲಿ ಶಾಸ್ತ್ರೋಕ್ತವಾಗಿ ಫಣಿಯಮ್ಮ ನಂಜುಂಡನ ಹೆಂಡತಿಯಾದರೂ ಅವಳಿಗೆ ಗಂಡನ ಮನೆಯಲ್ಲಿ ಯಾವುದೇ ಆಸ್ತಿ-ಹಕ್ಕುಗಳು ದೊರೆಯುವುದಿಲ್ಲ. ಇದು ಸಮಾಜದಲ್ಲಿ ಗಂಡು-ಹೆಣ್ಣಿನ ನಡುವಿನ ಅಸಮಾನತೆಯನ್ನು ತೋರಿಸುತ್ತದೆ. ಅಪ್ಪನ ಮನೆಯಲ್ಲೇ ಉಳಿದ ವಿಧವೆ ಫಣಿಯಮ್ಮನಿಗೆ ಶೃಂಗೇರಿ ಮಠದ ಆಜ್ಞೆಯ ಪ್ರಕಾರ ಅವಳು ಮೈನೆರೆದ ನಾಲ್ಕನೆಯ ದಿನ ಕೂದಲನ್ನು ತೆಗೆಸಿ ಬಿಳಿ ಸೀರೆ ಉಡಿಸಿದರು. ತನ್ನ ತಲೆಗೂದಲನ್ನು ಕಳೆದುಕೊಂಡು ಬಿಳಿವಸ್ತ್ರಧಾರಿಯಾದ ಹದಿನಾಲ್ಕು ವರ್ಷದ ಫಣಿಯಮ್ಮ ನಾನು ಇನ್ನು ಮುಂದೆ ಇತರೆ ಹೆಣ್ಣುಮಕ್ಕಳಂತೆ ಪೂಜೆ ಪುನಸ್ಕಾರಗಳನ್ನು ಮಾಡುವಂತಿಲ್ಲ, ದಿನಕ್ಕೆ ಒಂದು ಹೊತ್ತು ಮಾತ್ರ ಊಟ ಮತ್ತು ಮನೆಯ ಅಡಿಗೆ ಕೆಲಸ ಮುಂತಾದವು ತನ್ನ ಪಾಲಿಗೆ ಎಂದು ತಿಳಿದರೂ, ಇದು ಪ್ರಪಂಚದ ಪಾಲನೆ ಎಂದುಕೊಂಡು ಅವುಗಳನ್ನು ವಿರೋಧಿಸುವುದಿಲ್ಲ. ಈ ಸಂದರ್ಭದಲ್ಲಿ ಇಂದಿರಾರವರು ಹೆಣ್ಣು ವಿಧವೆಯಾದೊಡನೆ ಪುರುಷ ಸಮಾಜ ಅವಳ ಮೇಲೆ ಶಾಸ್ತ್ರ-ಸಂಪ್ರದಾಯ, ಪದ್ಧತಿಗಳ ಹೆಸರಿನಲ್ಲಿ ನಡೆಸುತ್ತಿದ್ದ ದೌರ್ಜನ್ಯ, ಶೋಷಣೆ, ಗುಲಾಮಗಿರಿತನ, ಅಸಮಾನತೆಗಳನ್ನು ಚಿತ್ರಿಸುತ್ತಾರೆ. ಏಕೆಂದರೆ, ನಂಜುಂಡ ಸತ್ತ ಮೇಲೆ

ನಡೆಯುವ ಎಲ್ಲಾ ಕಾರ್ಯಗಳ ತೀರ್ಮಾನವನ್ನು ಮನೆಯಲ್ಲಿ, ಮಠದಲ್ಲಿ ತೆಗೆದುಕೊಳ್ಳುವವರು ಪುರುಷರೇ ಆಗಿರುತ್ತಾರೆ. ಇದರಿಂದ ಪುರುಷ ಸಮಾಜ ಹೆಣ್ಣಿನ ಮೇಲೆ ಹೇರಿದ್ದ ಕಟ್ಟುಪಾಡುಗಳು ಅವಳನ್ನು ಹೇಗೆ ತನ್ನ ಮನೆಯಲ್ಲಿಯೇ ಗುಲಾಮಳನ್ನಾಗಿ ಮಾಡಿತ್ತು ಎಂದು ತೋರಿಸುತ್ತದೆ.

ಮಡಿ, ಸಂಪ್ರದಾಯ, ಜಪ, ಅಡಿಗೆ ಮನೆ ಕೆಲಸ, ಬಾಣಂತಿಯರ ಆರೈಕೆ ಮುಂತಾದ ಕೆಲಸಗಳಿಗೆ ಸೀಮಿತವಾಗಿದ್ದ ಫಣಿಯಮ್ಮ ತನ್ನ ಜೀವನದಲ್ಲಿ ಕಂಡು ಅನುಭವಿಸಿದ ಘಟನೆಗಳಿಂದ ಅವರ ವೈಚಾರಿಕತೆ, ಮಾನವೀಯತೆ ಮತ್ತು ಗಂಡು ಹೆಣ್ಣಿನ ನಡುವಿನ ಸಮಾನತೆ ಮುಂತಾದ ವಿಷಯಗಳನ್ನು ಕುರಿತು ತನ್ನಲ್ಲೇ ಪ್ರಶ್ನೆ ಹಾಕಿಕೊಂಡು ಚರ್ಚೆ ಮಾಡುತ್ತಿರುತ್ತಾಳೆ. ಆದರೆ ಫಣಿಯಮ್ಮ ಇವುಗಳನ್ನು ಮುಕ್ತವಾಗಿ ವ್ಯಕ್ತಪಡಿಸದೇ ತಮ್ಮ ಜೀವನದಲ್ಲಿ ಕೆಲವನ್ನು ಅಳವಡಿಸಿಕೊಂಡಿರುವುದನ್ನು ಕಾಣಬಹುದು. ಈ ಬದಲಾವಣೆಗೆ ಸಂಬಂಧಿಸಿದಂತೆ ಇಲ್ಲಿ ಕೆಲವು ಘಟನೆಗಳನ್ನು ಗಮನಿಸಬಹುದು. ಫಣಿಯಮ್ಮ ತನ್ನ ಎಂಬತ್ತೆರಡನೇ ವಯಸ್ಸಿನಲ್ಲಿ ಕೋಣಂದೂರಿನ ಸಂಬಂಧಿಕರ ಮನೆಯೊಂದರಲ್ಲಿ ಬಾಣಂತನ ಕಾರ್ಯನಿಮಿತ್ತ ಇರುತ್ತಾರೆ. ಅದೇ ಊರಿನ ಸಿಂಕಿ ಎಂಬ ಹುಡುಗಿಗೆ ಹೆರಿಗೆ ನೋವು ಕಾಣಿಸಿಕೊಂಡು ಮೂರು–ನಾಲ್ಕು ದಿನಗಳಾಗಿದ್ದರೂ ಹೆರಿಗೆಯಾಗದೆ ಸಿಂಕಿ ಬಹಳ ನೋವನ್ನನುಭವಿಸುತ್ತಾಳೆ. ಆಗ ಕೆಲವರು ಫಣಿಯಮ್ಮನ ಕೈ ಸಣ್ಣಗಿರುವುದರಿಂದ ಅವರ ಸಹಾಯದಿಂದ ಹೆರಿಗೆ ಮಾಡಿಸಬಹುದು ಎಂದು ಯೋಚಿಸಿ ಫಣಿಯಮ್ಮನನ್ನು ವಿನಂತಿಸುತ್ತಾರೆ. ಮಡಿ–ಮೈಲಿಗೆ, ಜಪ, ಮುಂತಾದವುಗಳನ್ನು ಪಾಲಿಸುತ್ತಾ ಬಂದಿದ್ದ ಮತ್ತು ಕಾಶಿಯಾತ್ರೆ ಮುಗಿಸಿದ್ದ ಫಣಿಯಮ್ಮ ಬರುವುದಿಲ್ಲ ಎಂದು ಎಲ್ಲರೂ ಭಾವಿಸಿದ್ದಾಗ ಮತ್ತು ಮನೆಯವರು ಅದನ್ನು ವ್ಯಕ್ತಪಡಿಸಿದಾಗ, ಫಣಿಯಮ್ಮ ಅದನ್ನು ಗಮನಿಸದೆ ಸ್ವಲ್ಪ ನೋಡಿಕೊಂಡು ಬರುತ್ತೇನೆ ಎಂದು ಹೇಳಿ ಭೈರನೊಡನೆ ಹೋಗುತ್ತಾಳೆ. ಕೇವಲ ಬಾಣಂತನ ಕೆಲಸವನ್ನಷ್ಟೆ ನೋಡಿಕೊಳ್ಳುತ್ತಿದ್ದ ಫಣಿಯಮ್ಮ ಅಂದು ಮೊದಲ ಬಾರಿಗೆ ಸಿಂಕಿಗೆ ಹೆರಿಗೆ ಮಾಡಿಸುತ್ತಾಳೆ. ಭೈರನ ಮನೆಯವರಿಗೆ ತಾನು ಹೆರಿಗೆ ಮಾಡಿಸಿದ ವಿಷಯವನ್ನು ಯಾರಿಗೂ ಹೇಳಬಾರದೆಂದು ಎಚ್ಚರಿಸಿ ಹಿಂದಿರುಗುವಾಗ ಸ್ನಾನ ಮಾಡಿ ಮನೆ ಸೇರುತ್ತಾರೆ. ಇಲ್ಲಿ ಫಣಿಯಮ್ಮ ತನ್ನ ಆಚರಣೆಗಳನ್ನು ಬದಿಗಿರಿಸಿ ಮಾನವೀಯ ಗುಣದಿಂದ ಸಿಂಕಿಯನ್ನು ನೋವಿನಿಂದ ಪಾರು ಮಾಡುತ್ತಾಳೆ. ಆದರೂ ಅದನ್ನು ಯಾರಿಗೂ ಹೇಳಬಾರದು ಎಂದು ಎಚ್ಚರಿಸುತ್ತಾಳೆ. ಇದಕ್ಕೆ ಕಾರಣವೆಂದರೆ ಅಂದಿನ ಸಮಾಜ ಇನ್ನೂ ಇಂತಹ ಬದಲಾವಣೆಗಳನ್ನು ಒಪ್ಪದೇ ಇರಬಹುದಾದ ಸಾಧ್ಯತೆ. ಘಟನೆಯ ನಂತರ ಫಣಿಯಮ್ಮನಲ್ಲಿ ಹಿರಿಯರು ಮುಖ್ಯವಾಗಿ

ಸ್ತ್ರೀಯರಿಗೆ ಸಂಬಂಧಿಸಿದಂತೆ ಮಾಡಿರುವ ಮಡಿ ಸಂಪ್ರದಾಯಗಳ ಅರ್ಥ, ಅವಶ್ಯಕತೆಗಳ ಬಗ್ಗೆ ಪ್ರಶ್ನೆಗಳು ಏಳುತ್ತವೆ.

ಸೀತೂರಿನಲ್ಲಿ ನಡೆದ ಒಂದು ಘಟನೆ ಸಮಾಜದಲ್ಲಿರುವ ಗಂಡು ಹೆಣ್ಣಿನ ನಡುವಿನ ಅಸಮಾನತೆಯನ್ನು ಕುರಿತು ಫಣಿಯಮ್ಮನಲ್ಲಿ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ. ಸೀತೂರಿನ ಸುಬ್ಬರಾಯ ಒಂದು ಬೆಳಗ್ಗೆ ತನ್ನ ಜನಿವಾರ ಬದಲಾಯಿಸುತ್ತಿರುವುದನ್ನು ನೋಡಿದ ಫಣಿಯಮ್ಮನಿಗೆ ಅವನು ಏಕೆ ಹಾಗೆ ಮಾಡುತ್ತಿದ್ದಾನೆಂದು ತಿಳಿಯುವುದಿಲ್ಲ. ಈ ವಿಷಯವನ್ನು ಕುರಿತು ಸುಬ್ಬರಾಯನ ದೊಡ್ಡಮ್ಮನಲ್ಲಿ ವಿಚಾರಿಸಿದಾಗ ಸುಬ್ಬರಾಯ ಬೇರೆ ಹೆಂಗಸಿನೊಡನೆ ಸಹವಾಸ ಮಾಡಿದಾಗ ಹೀಗೆ ಬೆಳಗಿನ ಜಾವವೇ ಯಾರಿಗೂ ತಿಳಿಯದ ರೀತಿ ಜನಿವಾರ ಬದಲಾಯಿಸುತ್ತಾನೆಂದು ಹೇಳುತ್ತಾರೆ. ಈ ವಿಷಯ ತಿಳಿದ ನಂತರ ಫಣಿಯಮ್ಮ ತನ್ನಲ್ಲೇ ಕೇಳಿಕೊಳ್ಳುವ ಪ್ರಶ್ನೆಗಳು ಅರ್ಥಹೀನ ಸಂಪ್ರದಾಯ ಆಚರಣೆಗಳ ಬಗ್ಗೆ, ಗಂಡು–ಹೆಣ್ಣಿನ ಅಸಮಾನತೆಯ ಕುರಿತು ಅವರಲ್ಲಿ ಆಗುತ್ತಿದ್ದ ಯೋಚನಾ ಲಹರಿಯ ಬದಲಾವಣೆಯನ್ನು ತೋರಿಸುತ್ತದೆ– "ಏನು ವಿಚಿತ್ರ ಸಂಪ್ರದಾಯ ನಮ್ಮದು? ಗಂಡಸು ಹೊಲತಿಯನ್ನು ಮುಟ್ಟಿಬಂದರೂ, ಸ್ನಾನಮಾಡಿ ಜನಿವಾರ ಬದಲಾಯಿಸಿದರೆ ಶುದ್ಧ. ಹೆಂಗಸು ಅಪ್ಪಿತಪ್ಪಿ ಪುರುಷನನ್ನು ನೋಡಿದರೆ ಕುಲಟೆ.. .. ಅಪ್ಪ ನೆಟ್ಟ ಆಲದ ಮರವೆಂದರೆ ಅದಕ್ಕೇ ನೇಣು ಹಾಕಿಕೊಳ್ಳಬೇಕೆ ಹೊರತು ಬದಲಾಯಿಸಬೇಕೆಂಬ ಬುದ್ಧಿ ಇಲ್ಲವಲ್ಲ" (ಇಂದಿರಾ ಎಂ.ಕೆ. 1984: ಪುಟ 76). ಇಂತಹ ಯೋಚನೆಗಳು ಬಂದಾಗ ಫಣಿಯಮ್ಮ ಪುರಾಣ ಕಥೆಗಳಲ್ಲಿ ಬರುವ ಗಂಡು–ಹೆಣ್ಣಿನ ನಡುವಿನ ಅಸಮಾನತೆಯನ್ನು ಪ್ರಶ್ನಿಸುತ್ತಾರೆ. "ರೇಣುಕೆ ನದಿಯ ನೀರಿನಲ್ಲಿ ಎದುರು ಕುಳಿತ ಸನ್ಯಾಸಿಯ ಮುಖ ನೋಡಿದ ಮಾತ್ರದಿಂದ ಅವಳ ಮರಳ ಕುಂಭ ಒಡೆದು ಹೋಯಿತಂತೆ ಅದಕ್ಕೆ ಅವಳ ಶಿರಚ್ಛೇದ. ತನ್ನ ಗಂಡನ ರೂಪದಲ್ಲಿ ಬಂದ ದೇವೇಂದ್ರನನ್ನು ಕೂಡಿದ ಮಾತ್ರದಿಂದ ನಿರಪರಾಧಿಯಾದ ಅವಳು ಎಷ್ಟೋ ವರ್ಷಗಳು ಕಲ್ಲಾಗಿ ಬಿದ್ದಳು. ಗಂಡಸರು ಸಾವಿರ ಹೆಂಗಸರನ್ನು ಕೂಡಿದರೂ ಅವರು ಅಗ್ನಿಯಂತೆ ಶುದ್ಧರಂತೆ" (ಇಂದಿರಾ ಎಂ.ಕೆ. 1984: ಪುಟ 74). ಹೀಗೆ ಸಮಾಜದಲ್ಲಿ ಸ್ತ್ರೀಯ ಮೇಲಿನ ಅಸಮಾನತೆಯನ್ನು ಫಣಿಯಮ್ಮ ಗುರುತಿಸಿರುವುದನ್ನು ಕಾಣಬಹುದು. ಆದರೆ ಅವರು ಬಹಿರಂಗವಾಗಿ ಎಲ್ಲಿಯೂ ಅಥವಾ ಯಾರಲ್ಲಿಯೂ ಈ ವಿಷಯಗಳನ್ನು ಪ್ರಸ್ತಾಪಿಸುವುದಾಗಲೀ ಅಥವಾ ಚರ್ಚಿಸುವುದಾಗಲೀ ಮಾಡುವುದಿಲ್ಲ.

ಇಂದಿರಾರವರು ಅಂದಿನ ಪುರುಷ ಸಮಾಜ ಗಂಡ ಸತ್ತ ಹೆಣ್ಣನ್ನು ಮಡಿ ಸಂಪ್ರದಾಯದ ಹೆಸರಿನಲ್ಲಿ ಯಾವ ರೀತಿ ಶೋಷಿಸಿ, ಗುಲಾಮಳನ್ನಾಗಿ ಮಾಡಿಕೊಂಡು, ಅವಳಿಗೆ ಪರಾವಲಂಬಿ ಜೀವನವನ್ನು ಹೇರುತ್ತಿತ್ತು ಎಂಬುದನ್ನು ಫಣಿಯಮ್ಮನ ಜೀವನದಲ್ಲಿ ನಡೆದ ಒಂದು ಘಟನೆಯ ಮುಖಾಂತರ ತಿಳಿಸುತ್ತಾರೆ. ಫಣಿಯಮ್ಮನ ಸೋದರತ್ತೆಯ ಮಗ ಸೀತಾರಾಮುವಿನ ಮಗಳು ದಾಕ್ಷಾಯಿಣಿಯ ಗಂಡ ಅವರ ಮದುವೆಯಾಗಿ ನಾಲ್ಕು ವರ್ಷದ ನಂತರ ತೀರಿಹೋಗುತ್ತಾನೆ. ಆಗ ದಾಕ್ಷಾಯಿಣಿಗಿನ್ನೂ ಹದಿನಾರು ವರ್ಷ. ಗಂಡನ ಮನೆಯವರು ದಾಕ್ಷಾಯಿಣಿಗೆ ಮಡಿ ಮಾಡಿಸಿ ಮನೆಕೆಲಸಕ್ಕೆ ಹಚ್ಚಬೇಕೆಂದು ತೀರ್ಮಾನಿಸಿ ಈ ವಿಷಯವನ್ನು ಸೀತಾರಾಮುವಿಗೆ ತಿಳಿಸುತ್ತಾರೆ. ಆದರೆ ದಾಕ್ಷಾಯಿಣಿ ತನ್ನ ತಲೆ ಬೋಳಿಸಿಕೊಂಡು, ಒಂದು ಹೊತ್ತು ಊಟ ಮಾಡಿ, ಮಡಿಯಿಂದ ಉಳಿದು ಜೀವನವನ್ನೆಲ್ಲಾ ಮನೆಕೆಲಸ ಮಾಡುತ್ತಾ ಕಳೆಯುವುದು ತನ್ನಿಂದ ಸಾಧ್ಯವಿಲ್ಲ ಎಂದು ಹೇಳುತ್ತಾಳೆ. ಈ ಸಂದರ್ಭದಲ್ಲಿ ಫಣಿಯಮ್ಮನನ್ನು ಸಲಹೆ ಕೇಳಿದಾಗ ಅವರು ಇನ್ನು ನಾಲ್ಕು ವರ್ಷ ಮಡಿ ಮಾಡುವುದು ಬೇಡ, ದಾಕ್ಷಾಯಿಣಿಯೂ ಇಷ್ಟಪಡುತ್ತಿಲ್ಲವಾದ್ದರಿಂದ ಬಲವಂತ ಬೇಡ ಎಂದು ಹೇಳುತ್ತಾರೆ. ಇಲ್ಲಿ ಗಂಡನ ಮನೆಕಡೆಯಿಂದ ಬಂದಿದ್ದ ಭಟ್ಟಯ್ಯನವರಿಗೂ ಮತ್ತು ಫಣಿಯಮ್ಮನಿಗೂ ಮಧ್ಯೆ ಮಾತುಕತೆ ನಡೆಯುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ತನ್ನ ಹದಿನಾಲ್ಕನೇ ವಯಸ್ಸಿನಿಂದ ಮಡಿ ಸಂಪ್ರದಾಯಗಳನ್ನು ಪಾಲಿಸುತ್ತಾ ಬಂದಿದ್ದ ಫಣಿಯಮ್ಮ ಆ ಆಚರಣೆಗಳು ಮತ್ತೊಂದು ಚಿಕ್ಕ ವಯಸ್ಸಿನ ಹೆಣ್ಣಿಗೆ ಬೇಡವೆಂದು ಹೇಳಿದ ಮಾತು. ಅಂದರೆ ಅರ್ಥವಿಲ್ಲದ ಸಂಪ್ರದಾಯ, ಅಂಧಾನುಕರಣೆಗಳನ್ನು ಫಣಿಯಮ್ಮ ಗುರುತಿಸಿ ಅವುಗಳು ಹೇಗೆ ಒಂದು ಹೆಣ್ಣಿನ ಜೀವನವನ್ನು ಕಸಿದುಕೊಂಡಿವೆ ಎಂಬುದನ್ನು ಯೋಚಿಸಿ ಇಂತಹ ಅಂಧಾನುಕರಣೆಗಳು ಬೇಡವೆಂದು ಹೇಳುತ್ತಾರೆ. ಆದರೆ, ಜನಗಳು ಇವರ ಮಾತನ್ನು ಗಮನಿಸದಿದ್ದಾಗ ಅಲ್ಲಿನ ಜನಗಳಿಗೆ ತಮ್ಮ ಅನುಭವದ ಮಾತುಗಳು ರುಚಿಸುವುದಿಲ್ಲವೆಂದು ತಿಳಿದು ತಮ್ಮ ಪಾಡಿಗೆ ಹೋಗುತ್ತಾರೆ.

ಈ ಕಥೆಯಲ್ಲಿ ಇಂದಿರಾರವರು ಅರ್ಥವಿಲ್ಲದ ಸಂಪ್ರದಾಯಗಳನ್ನು ಹೆಣ್ಣಿನ ಜೀವನದ ಮೇಲೆ ಹೇರಿ ಅವಳನ್ನು ಅಸಮಾನತೆಯ ಕೂಪಕ್ಕೆ ತಳ್ಳುವ ರೀತಿಯನ್ನು ಚಿತ್ರಿಸಿದ್ದಾರೆ. ಫಣಿಯಮ್ಮ ವಿಧವೆಯಾಗಿ ತಾನು ಅನುಭವಿಸಿದ ನೋವು, ದೌರ್ಜನ್ಯಗಳು ಮತ್ತೊಂದು ಹೆಣ್ಣು ಅನುಭವಿಸಬಾರದೆಂದು ತಡೆಯುವುದು ಹೆಣ್ಣಿನ ಮೇಲೆ ಹೇರುವ ಅಸಮಾನತೆಯನ್ನು ತಡೆಯುವಲ್ಲಿ ಪ್ರಮುಖ ಹೆಜ್ಜೆಯೆನಿಸುತ್ತದೆ.

ಅನುಪಮಾ ನಿರಂಜನರವರು ಹೆಣ್ಣಿನ ಬಾಳು ಪುರುಷ ನಿರ್ಮಿತ ಸಮಾಜ ಸಂಕೋಲೆಯೊಳಗೆ ಸಿಲುಕಿ ಹಾಕಿಕೊಂಡು ದುರಂತಮಯ ಅಂತ್ಯವನ್ನು ಕಾಣುವ ಚಿತ್ರಣವನ್ನು ಕೊಡುತ್ತಾ, ಅವಳ ಪರಾವಲಂಬಿ ಜೀವನ ಹೇಗೆ ಅಸಮಾನತೆಯನ್ನು ಸೃಷ್ಟಿಸುತ್ತದೆ ಎಂಬುದನ್ನು 'ಸಂಕೋಲೆಯೊಳಗಿಂದ' ಕಥೆಯಲ್ಲಿ ತೋರಿಸಿದ್ದಾರೆ. ಜೊತೆಗೆ ಹೆಣ್ಣಿಗೆ ವಿದ್ಯೆ ಮತ್ತು ಅವಕಾಶಗಳು ದೊರೆತರೆ ಅವಳು ಸಮಾನತೆಯೆಡೆಗೆ ನಡೆಯುವುದು ಸಾಧ್ಯವಾಗುತ್ತದೆ ಎಂಬ ಆಶಯವನ್ನು ಇಲ್ಲಿ ಚಿತ್ರಿಸಿದ್ದಾರೆ. ಕಥೆಯಲ್ಲಿ ವಿಜಯಾಳ ಪಾತ್ರದ ಮುಖಾಂತರ ಹೆಣ್ಣಿನ ಸುತ್ತ ಇರುವ ಸಂಕೋಲೆಗಳು ಮತ್ತು ಅದರ ಪರಿಣಾಮ ಹಾಗೂ ನಂದಾ ಮತ್ತು ನೀಲಾಳ ಪಾತ್ರಗಳ ಮೂಲಕ ಬದಲಾವಣೆಯ ಮಾರ್ಗವನ್ನು ತೋರಿಸಿದ್ದಾರೆ. ತಂದೆತಾಯಿಯರಿಲ್ಲದೆ ವಿಜಯಾ ಚಿಕ್ಕಪ್ಪನ ಮನೆಯಲ್ಲಿ ಬೆಳೆಯುತ್ತಾಳೆ. ಮೊದಲು ಅವಳನ್ನು ಶಾಲೆಗೆ ಕಳುಹಿಸಿದರೂ ಪಕ್ಕದ ಮನೆಯ ಸ್ನೇಹಿತ ಹೇಳಿದ "ಹೆಣ್ಣುಮಕ್ಕಳಿಗೆ .. ಯಾಕೆ ಸ್ವಾಮಿ ಜಾಸ್ತಿ ಓದು?" (ಅನುಪಮಾ ನಿರಂಜನ, 1993: ಪುಟ 12) ಮಾತನ್ನು ಕೇಳಿದ ಚಿಕ್ಕಪ್ಪ ಅವಳನ್ನು ಶಾಲೆಯಿಂದ ಬಿಡಿಸುತ್ತಾರೆ. ಇಲ್ಲಿ ಹೆಣ್ಣಿಗೆ ಹೆಚ್ಚಿನ ವಿದ್ಯೆ ಬೇಡ ಎನ್ನುವುದು ವಿದ್ಯೆ ಕೊಡುವ ವಿಷಯದಲ್ಲಿ ಗಂಡು-ಹೆಣ್ಣಿನ ಮಧ್ಯೆ ತಳೆಯುವ ಅಸಮಾನ ನಿಲುವನ್ನು ವ್ಯಕ್ತಪಡಿಸುತ್ತದೆ. ಮುಂದೆ ವಿಜಯಳಿಗೆ ರಾಮನಾಥನೊಂದಿಗೆ ಮದುವೆಯಾಗುತ್ತದೆ. ಇಲ್ಲೂ ಕೂಡ ವಿಜಯಳ ಅಭಿಪ್ರಾಯವನ್ನು ಕೇಳುವುದಿಲ್ಲ; ಅವಳೂ ಕೂಡ ಚಿಕ್ಕಪ್ಪನ ಸಹಾಯವನ್ನು ಪರಿಗಣಿಸಿ ಅವಳು ಪ್ರೀತಿಸಿದ ಸುಬ್ಬುವಿನ ಬಗ್ಗೆ ಯಾವುದೇ ವಿಷಯವನ್ನು ತಿಳಿಸುವುದಿಲ್ಲ.

ವಿಜಯಳನ್ನು ಮದುವೆಯಾದ ರಾಮನಾಥ ಶ್ರೀಮಂತನಾಗಿರುತ್ತಾನೆ. ಶ್ರೀಮಂತಿಕೆಯೊಂದಿಗೆ ಎಲ್ಲ ರೀತಿಯ ಕೆಟ್ಟಚಟಗಳೂ ಅಂದರೆ ಕುಡಿತ, ಇತರೆ ಹೆಣ್ಣಿನ ಸಹವಾಸ, ಸುಳ್ಳು ಹೇಳುವುದು ಎಲ್ಲವೂ ಇರುತ್ತವೆ. ಜೊತೆಗೆ ಹೆಂಡತಿಯ ಮೇಲೆ ದಬ್ಬಾಳಿಕೆ, ಅವಳ ಅಭಿಪ್ರಾಯ ಪರಿಗಣಿಸದಿರುವುದು, ಅವಳನ್ನು ಕೇವಲ ಲೈಂಗಿಕ ಸುಖಕ್ಕಾಗಿ ಬಳಸುತ್ತಾ ಶೋಷಿಸುವುದನ್ನು ಮಾಡುತ್ತಾನೆ ಮತ್ತು ದುಂದುವೆಚ್ಚ ಮಾಡುವ ಹವ್ಯಾಸವೂ ಇರುತ್ತದೆ. ಗಂಡನ ಚಟಗಳನ್ನು ತಿಳಿದ ವಿಜಯಾ ಅವನ ಮೇಲೆ ಕ್ರೋಧಗೊಳ್ಳುತ್ತಾಳೆ, ಆದರೆ ಆತನ ದಬ್ಬಾಳಿಕೆಯೆದುರು ಏನೂ ಮಾಡಲಾಗದೆ ಸುಮ್ಮನಾಗುತ್ತಾಳೆ. ಈ ಸಂದರ್ಭದಲ್ಲಿ ಗಂಡಿಗೂ ಹೆಣ್ಣಿಗೂ ಇರುವ ಭಿನ್ನ ರೀತಿನೀತಿಗಳನ್ನು ಅನುಪಮಾ ನಿರಂಜನರವರು ವಿಜಯಾಳ ಮುಖಾಂತರ ಹೇಳುತ್ತಾರೆ. ಪುರುಷನಿಗೆ ಎಷ್ಟೇ ಕೆಟ್ಟ ಚಟಗಳಿದ್ದರೂ ಎಷ್ಟೇ ಕೆಟ್ಟತನವಿದ್ದರೂ ಅವನು ಏನು ಬೇಕಾದರೂ ಮಾಡಬಹುದು. ಆದರೆ ಸ್ತ್ರೀಗೆ ಇಂತಹ ಯಾವುದೇ ಒಂದು ಕೆಟ್ಟ

ಹವ್ಯಾಸವಿದ್ದರೂ ಅವಳ ಮದುವೆ ನಡೆಯುವುದಿಲ್ಲ. ಸಮಾಜದಲ್ಲಿ ಅವಳು ನಿಂದಿತಳಾಗುತ್ತಾಳೆ. ಇದಕ್ಕೆಲ್ಲಾ ಕಾರಣ ಹೆಣ್ಣು ಅಬಲೆಯಾಗಿರುವುದು.

ವ್ಯಕ್ತಿಗತ ತೀರ್ಮಾನಗಳನ್ನು ತೆಗೆದುಕೊಳ್ಳುವಲ್ಲಿ ಸ್ತ್ರೀ-ಪುರುಷರ ಮಧ್ಯೆ ಇರುವ ಅಸಮಾನತೆಯನ್ನು ಅನುಪಮಾ ನಿರಂಜನರವರು ತೋರಿಸಿದ್ದಾರೆ. ತಂಗಿಯನ್ನು ನೋಡಲು ಬಂದ ನಾಗರಾಜನೊಂದಿಗೆ ಚಿಕ್ಕಪ್ಪನನ್ನು ನೋಡಲು ತವರು ಮನೆಗೆ ಹೋಗಿಬರುತ್ತೇನೆಂದ ವಿಜಯಾಳಿಗೆ ಹೋಗುವುದಾದರೆ ಹೋಗು ತಿರುಗಿ ಬರಬೇಡ ಎಂದು ರಾಮನಾಥ ಹೇಳುತ್ತಾನೆ. ಇದು ಕುಟುಂಬದಲ್ಲಿ ಹೆಣ್ಣಿಗೆ ಸ್ವಾತಂತ್ರ್ಯವಿಲ್ಲದಿರುವುದನ್ನು, ತನ್ನ ಪ್ರತಿ ತೀರ್ಮಾನ, ಕಾರ್ಯಗಳಿಗೆ ಪುರುಷನ ಅನುಮತಿ ಪಡೆಯಬೇಕಾದ ದುಸ್ಥಿತಿಯನ್ನು ಪ್ರಕಟಿಸುತ್ತದೆ. ಅನುಮತಿ ದೊರೆಯದಿದ್ದಾಗ ತನ್ನ ಆಸೆ-ಆಕಾಂಕ್ಷೆಗಳನ್ನು ಹುದುಗಿಸಿ ಗಂಡನ ಮನೆಯಲ್ಲೇ ಇರಬೇಕಾದ ಸ್ಥಿತಿ ಅವಳನ್ನು ಗುಲಾಮಳು ಮತ್ತು ಪರಾವಲಂಬಿಯಾಗಿಸುತ್ತದೆ. ಇದೂ ಕೂಡ ಗಂಡ-ಹೆಂಡಿರ ಮಧ್ಯೆ ಇರುವ ಅಸಮಾನತೆಯೇ ಎಂಬುದನ್ನು ಲೇಖಕರು ಸೂಚ್ಯವಾಗಿ ತಿಳಿಸಿದ್ದಾರೆ.

ಸ್ತ್ರೀ ಸ್ವಾತಂತ್ರ್ಯವೆಂದರೇನು ಎಂಬುದನ್ನು ಅನುಪಮಾ ನಿರಂಜನರವರು ಶ್ರೀಮಂತ ಮಹಿಳೆಯರ ಮಾತುಕತೆಯ ಸಮಯದಲ್ಲಿ ವಿಜಯಾಳ ಚಿಂತನೆಯ ಮುಖಾಂತರ ಪ್ರಕಟಿಸುತ್ತಾರೆ. ಕ್ಲಬ್ಬಿಗೆ ಬರುವ ಶ್ರೀಮಂತ ಮಹಿಳೆಯರು ಸ್ತ್ರೀ ಸ್ವಾತಂತ್ರ್ಯ ಕೇವಲ ಶ್ರೀಮಂತ ಮಹಿಳೆಗೆ ಇರಬೇಕು, ಬೇಕೆಂದಾಗ ಹೊರಗೆ ಹೋಗಲು, ಕಾರು ಹೊಂದಲು, ಹಣವನ್ನು ಖರ್ಚುಮಾಡಲು ಸ್ವಾತಂತ್ರ್ಯ ಇರಬೇಕು. ಆದರೆ ಬಡಮಹಿಳೆಗೆ ಸ್ವಾತಂತ್ರ್ಯದ ಅವಶ್ಯಕತೆ ಇರುವುದಿಲ್ಲ. ಅವರಿಗೆ ಜೀವನದ ಅವಶ್ಯಕತೆಗಳನ್ನು ಪೂರೈಸುವುದರಲ್ಲೇ ಸಮಯ ಕಳೆಯುತ್ತದೆ. ಸ್ವಾತಂತ್ರ್ಯವನ್ನು ಬಳಸುವ ಅವಕಾಶ ಬರುವುದಿಲ್ಲವಾದ್ದರಿಂದ ಸ್ವಾತಂತ್ರ್ಯ ಅವರಿಗೆ ಬೇಕಿಲ್ಲ ಎಂದು ವಾದಿಸುವುದು, ಸಮಾಜ ಸ್ತ್ರೀ ಸ್ವಾತಂತ್ರ್ಯವನ್ನು ಬಹಳ ಸಂಕುಚಿತ ಅರ್ಥದಲ್ಲಿ ಕಾಣುವುದನ್ನು ತೋರಿಸುತ್ತದೆ. ಇದೇ ಸಂದರ್ಭದಲ್ಲಿ ವಿಜಯಾಳ ಆಲೋಚನೆ "ಮಧ್ಯಮವರ್ಗದ, ಬಡಮಹಿಳೆಯರು ಕೇಳುವ ಸ್ವಾತಂತ್ರ್ಯ ತಮ್ಮನ್ನು ಅಡುಗೆ ಮನೆಯಲ್ಲೇ ಕೊಳೆಯಿಸದೆ ಹೊರ ಪ್ರಪಂಚಕ್ಕೆ ಬಂದು ತಾವು ಮಾನವರ ಹಾಗೆ ಬದುಕಲು ಅವಕಾಶ ಕಲ್ಪಿಸಬೇಕೆಂಬ ಸದಾಶಯ" (ಅನುಪಮಾ ನಿರಂಜನ, 1993: ಪುಟ 41) ಅನುಪಮಾ ನಿರಂಜನರವರು ಸ್ತ್ರೀ ಸ್ವಾತಂತ್ರ್ಯದ ಬಗ್ಗೆ ತಳೆದಿದ್ದ ನಿಲುವನ್ನು ತೋರಿಸುತ್ತದೆ. ಅಂದರೆ ಹೆಣ್ಣು ಮನೆಯೊಳಗಡೆ ಬಂದಿಯಾಗದೆ ಹೊರ ಜಗತ್ತಿಗೆ ಬಂದು ಮಾನವಳಾಗಿ ಜೀವಿಸುವಂತಾಗಬೇಕು.

ಈ ಕಥೆಯಲ್ಲಿ ವಿಜಯಾಳಿಗೆ ಗಂಡನಿಂದ ಆಗುತ್ತಿರುವ ಅನ್ಯಾಯ, ಶೋಷಣೆಗಳೂ ತಿಳಿದರೂ ಪ್ರತಿಭಟಿಸಲಾಗದೇ ಅವುಗಳನ್ನೆಲ್ಲಾ ಅನುಭವಿಸುತ್ತಿರುತ್ತಾಳೆ. ಇದಕ್ಕೆ ಕಾರಣ ಅವಳಿಗೆ ವಿದ್ಯೆ ಇರದೆ, ಗಂಡನನ್ನು ಎದುರಿಸಲಾಗದೆ, ಗಂಡನ ಮೇಲೆಯೇ ಆಧಾರವಾಗಿರುವುದು. ಗಂಡನ ಮನೆಯಿಂದ ಆಚೆಗೆ ಹೋದರೆ ತನ್ನ ಜೀವನಕ್ಕೆ ಬೇರೆ ಆಧಾರವಿಲ್ಲವೆಂಬ ಪರಿಸ್ಥಿತಿ, ಅವಳನ್ನು ಅಬಲೆಯನ್ನಾಗಿ ಮಾಡಿ ಪರಾವಲಂಬಿ ಜೀವಿಯಾಗುವಂತೆ ಮಾಡಿದೆ. ರಾಮನಾಥನ ದುಶ್ಚಟಗಳ ಫಲವಾಗಿ ವಿಜಯಾಳಿಗೆ 'ಸಿಫಿಲಿಸ್' ರೋಗ ಬರುತ್ತದೆ. ದುಂದುವೆಚ್ಚದಿಂದಾಗಿ ರಾಮನಾಥನ ಬಳಿಯಿದ್ದ ಸಂಪತ್ತೆಲ್ಲಾ ಕರಗಿ ಕೊನೆಗೆ ಮಹಡಿಯ ಮನೆಯನ್ನು ಮಾರಿಬಿಡುತ್ತಾನೆ. ಒಂದು ಚಿಕ್ಕ ಗುಡಿಸಲಿನಲ್ಲಿ ವಾಸಮಾಡಲಾರಂಭಿಸುತ್ತಾರೆ. ಬಡತನದ ಕಷ್ಟಗಳನ್ನು ಅನುಭವಿಸಲಾಗದೆ ವಿಜಯಾಳ ಬಳಿಯಿದ್ದ ಚಿನ್ನದ ಹಾರವನ್ನು ತೆಗೆದುಕೊಂಡು ರಾಮನಾಥ ಊರುಬಿಟ್ಟು ಹೋಗುತ್ತಾನೆ. ವಿಜಯ ಜೀವನಕ್ಕೆ ಪರಿತಪಿಸಬೇಕಾಗುತ್ತದೆ ಜೊತೆಗೆ ರೋಗದ ಬಾಧೆಯಿಂದ ನರಳುತ್ತಾಳೆ. ಯಾರದೋ ಸಹಾಯದ ಮೂಲಕ ಆಸ್ಪತ್ರೆ ಸೇರುತ್ತಾಳೆ. ಈ ಸಂದರ್ಭದಲ್ಲಿ ಅವಳ ಸುತ್ತಮುತ್ತಲಿನ ಜನ-ನೆರೆಹೊರೆಯವರು, ಆಸ್ಪತ್ರೆಯ ಸಿಬ್ಬಂದಿ ಅವಳನ್ನು ವೇಶ್ಯೆ ಎಂದು ಕರೆಯುವುದು ಸಮಾಜ ಹೆಣ್ಣನ್ನು ಯಾವಾಗಲೂ ತಪ್ಪು ಮಾಡಿದವಳೆಂದು ಗುರುತಿಸುವ ಪ್ರಕ್ರಿಯೆಯನ್ನು ತೋರಿಸುತ್ತದೆ. ತನ್ನದಲ್ಲದ ತಪ್ಪಿಗೆ ಹೆಣ್ಣು ದೂಷಿತಳಾಗುವ ಪ್ರಸಂಗವನ್ನು ಚಿತ್ರಿಸುತ್ತದೆ. ಇಲ್ಲಿ ಕಂಡುಬರುವುದೇನೆಂದರೆ ಪುರುಷನ ಮೇಲೆ ಅವಲಂಬಿಯಾದ ಹೆಣ್ಣು ತನ್ನ ವ್ಯಕ್ತಿತ್ವವನ್ನು ಕಳೆದುಕೊಂಡು, ಗುಲಾಮಳಾಗಿ, ಗಂಡನ ದುಶ್ಚಟಗಳ ಪರಿಣಾಮಗಳನ್ನು ಅನುಭವಿಸುತ್ತಾ ದಾಸ್ಯದಲ್ಲಿಯೇ ಜೀವಿಸಬೇಕಾದ ಪರಿಸ್ಥಿತಿ ಮತ್ತು ಸ್ತ್ರೀ-ಪುರುಷರ ನಡುವೆ ಇರುವ ಅಸಮಾನತೆ.

ಅನುಪಮಾ ನಿರಂಜನರವರು ಇದೇ ಕಥೆಯ ನಂದಾ ಮತ್ತು ನೀಲಾಳ ಪಾತ್ರಗಳ ಮುಖಾಂತರ ಹೆಣ್ಣಿಗೆ ವಿದ್ಯೆ ಮತ್ತು ಉದ್ಯೋಗದ ಅವಕಾಶ ದೊರೆತರೆ ಅವಳೂ ಕೂಡ ಪುರುಷನಿಗೆ ಸಮವಾಗಿ ಜೀವಿಸಲು ಸಾಧ್ಯವಾಗುತ್ತದೆ ಎಂಬುದನ್ನು ವ್ಯಕ್ತಪಡಿಸುತ್ತಾರೆ. ನಂದಾ – ಅವಳ ತಂದೆಯ ಅನಾರೋಗ್ಯದ ಸಮಯದಲ್ಲಿ ಡಾಕ್ಟರಾಗಬೇಕೆಂಬ ತೀರ್ಮಾನ ತೆಗೆದುಕೊಳ್ಳುತ್ತಾಳೆ. ಅದಕ್ಕೆ ಪೂರಕವಾಗಿ ತಾಯಿ ಅವಳನ್ನು ಡಾಕ್ಟರ್ ಓದಿಸಲು ಕಳುಹಿಸುತ್ತಾರೆ. ಇದು ವಿಜಯಾಳ ಚಿಕ್ಕಪ್ಪ ಮತ್ತು ಅವಳ ಸ್ನೇಹಿತೆಯ ತಂದೆ ತಳೆದ ಹೆಣ್ಣುಮಕ್ಕಳಿಗೇಕೆ ಹೆಚ್ಚಿನ ಓದು ಎಂಬ ನಿಲುವಿನ ವಿರುದ್ಧವಾಗಿರುತ್ತದೆ. ವಿದ್ಯೆ ಕಲಿತ ನಂದಾ ಸಮಾಜವನ್ನು ಮತ್ತು ವ್ಯಕ್ತಿಗಳನ್ನು ನೋಡುವ, ಸ್ವಂತ ಅಭಿಪ್ರಾಯವನ್ನು ವ್ಯಕ್ತಪಡಿಸುವ, ನಿರ್ಧಾರಗಳನ್ನು

ತೆಗೆದುಕೊಳ್ಳುವ ರೀತಿ ಹೆಣ್ಣೂ ಕೂಡ ಸಬಲೆಯಾಗಬಲ್ಲಳು ಎಂದು ಪ್ರಕಟಿಸುತ್ತದೆ. ನೀಲಾ ತನ್ನ ಗಂಡನ ಸಾವಿನ ನಂತರ ನರ್ಸ್ ಕೋರ್ಸ್ ಮುಗಿಸಿ ಆಸ್ಪತ್ರೆಯಲ್ಲಿ ನರ್ಸ್ ಆಗುತ್ತಾಳೆ. ಜೀವನಾಧಾರಕ್ಕೆ ಉದ್ಯೋಗದ ಅವಶ್ಯಕತೆಯಿಲ್ಲದಿದ್ದರೂ, ಗಂಡನ ಆಸೆಯಂತೆ ನೀಲಾ ನರ್ಸಿಂಗ್ ಮುಗಿಸಿ ಕೆಲಸಕ್ಕೆ ಸೇರುವುದು ಹೆಣ್ಣು ಕೂಡ ಪುರುಷರಂತೆ ಮನೆಯ ಹೊರಗೆ ಉದ್ಯೋಗದಲ್ಲಿ ತೊಡಗಬಲ್ಲಳು ಎಂಬುದನ್ನು ತೋರಿಸುತ್ತದೆ.

ವಿಜಯಾ, ನಂದಾ ಮತ್ತು ನೀಲಾಳ ಪಾತ್ರಗಳ ಮುಖಾಂತರ ಸ್ತ್ರೀ–ಪುರುಷರ ಮಧ್ಯೆ ಇರುವ ಅಸಮಾನತೆಯನ್ನು ಮತ್ತು ಆ ಅಸಮಾನತೆಯನ್ನು ನಿವಾರಿಸುವತ್ತ ಹೆಜ್ಜೆ ಹಾಕಲು ಹೆಣ್ಣಿಗೆ ವಿದ್ಯೆ ಮತ್ತು ಉದ್ಯೋಗ ಸಹಕಾರಿಯಾಗಬಲ್ಲವು ಎಂಬುದನ್ನು ಅನುಪಮಾ ನಿರಂಜನರವರು ಚಿತ್ರಿಸಿದ್ದಾರೆ. ಪುರುಷನ ಅಹಂಕಾರ, ದೌರ್ಜನ್ಯ, ಶೋಷಣೆಗಳಿಂದ ಗುಲಾಮಳಾಗಿ ವ್ಯಕ್ತಿತ್ವವನ್ನೇ ಕಳೆದುಕೊಂಡಿರುವ ಮಹಿಳೆ ಸಬಲಳಾಗುವುದು ಸಾಧ್ಯ ಎಂದು ತೋರಿಸಿದ್ದಾರೆ.

ಸಮಾಜದಲ್ಲಿ ಹೆಣ್ಣಿನ ಮೇಲಾಗುತ್ತಿರುವ ಶೋಷಣೆ, ಅನ್ಯಾಯ, ಗುಲಾಮಗಿರಿತನಗಳನ್ನು ನಿರ್ಮೂಲನೆ ಮಾಡಿ, ಸ್ತ್ರೀಗೆ ಸ್ವಾತಂತ್ರ್ಯ, ಸಮಾನತೆಯನ್ನು ದೊರಕಿಸಬೇಕೆಂಬ ಆಶಯವನ್ನಿಟ್ಟುಕೊಂಡು ಹೋರಾಡಲು ಮುಂದಾದ ಹೆಣ್ಣೊಬ್ಬಳು ಹೇಗೆ ಪುರುಷ ನಿರ್ಮಿತ ಸಮಾಜದಲ್ಲಿ ಗಂಡಸರ ಗೋಮುಖ ನೀತಿಗೆ ಬಲಿಯಾಗಿ ಅವಳ ಅಸ್ತಿತ್ವವನ್ನೇ ಹುಡುಕಿಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಗುವುದನ್ನು 'ಗಂಡಸರು' ಕಿರುಕಾದಂಬರಿಯಲ್ಲಿ ವೀಣಾ ಶಾಂತೇಶ್ವರರವರು ಚಿತ್ರಿಸಿದ್ದಾರೆ. ಮಹಿಳೆಗೆ ವ್ಯಕ್ತಿ ಸ್ವಾತಂತ್ರ್ಯ ಬೇಕು, ಪುರುಷರಿಗೆ ಸಮಾನ ಜೀವನವಿರಬೇಕು, ಅವಳು ಗುಲಾಮಳಾಗಿರಬಾರದು ಎಂದು ಮಹಿಳಾ ಹಕ್ಕಿಗಾಗಿ ವಾದಿಸುವ, ಪ್ರಕಟಿಸುವ, ಹೋರಾಡುವ ಗಂಡಸರು ತಮ್ಮ ಜೀವನದಲ್ಲಿ ಹೆಣ್ಣನ್ನು ಶೋಷಿಸುವ, ಅವಳ ಸ್ವಾತಂತ್ರ್ಯವನ್ನು ಕಡಿತಗೊಳಿಸಲು ಪ್ರಯತ್ನಿಸುವ, ಅವಳು ಯಾವಾಗಲೂ ಗಂಡನಿಗೆ ವಿಧೇಯಳಾಗಿರಬೇಕೆಂದು ಬಯಸುವ ಮತ್ತು ಅವಳನ್ನು ಕೇವಲ ಲೈಂಗಿಕ ಸುಖಕ್ಕಾಗಿ ಬಳಸುವ ಗಂಡಸರ ವರ್ತನೆಯನ್ನು ವಿವಿಧ ಪಾತ್ರಗಳ ಮುಖಾಂತರ ತೋರಿಸಿದ್ದಾರೆ. ಕಾದಂಬರಿಯ ನಾಯಕಿ ಶಾಂತಿ ಶಾಲಾ ಕಾಲೇಜು ದಿನಗಳಿಂದಲೂ ಹೆಣ್ಣಿಗೆ ಸ್ವಾತಂತ್ರ್ಯ, ಸಮಾನತೆ ಬೇಕು ಎಂದು ಚರ್ಚಾಕೂಟದಲ್ಲಿ, ಸಭೆ ಸಮಾರಂಭಗಳಲ್ಲಿ ವಾದಿಸುತ್ತಾಳೆ. "ನಮ್ಮ ಹಿಂದೂ ಹೆಂಗಸರು ಈ ಅನ್ಯಾಯ ಅತ್ಯಾಚಾರಗಳನ್ನು ಇನ್ನೂ ಸಹಿಸಬಾರದು. ಅವರಿನ್ನು ಈ ಕಟ್ಟುಪಾಡುಗಳ ವಿರುದ್ಧ ಬಂಡೇಳಬೇಕು. ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಹೋರಾಡಬೇಕು. ಸ್ವಾತಂತ್ರ್ಯ

ಸಿಗುವವರೆಗೂ ಹೋರಾಟ ನಿಲ್ಲಿಸಬಾರದು" (ವೀಣಾ ಶಾಂತೇಶ್ವರ 2006: ಪುಟ 301) ಎಂದು ಬಯಸುತ್ತಾಳೆ.

ಶಾಂತಿಯ ವಿಚಾರ, ವಾದಗಳನ್ನು ತಿಳಿದ ಅವಳ ಗೆಳೆಯ ಶಂಕರನ ಮನೆಯವರು, ಶಾಂತಿಯನ್ನು ತಮ್ಮ ಮನೆಯ ಸೊಸೆಯನ್ನಾಗಿ ಮಾಡಿಕೊಳ್ಳಲು ನಿರಾಕರಿಸುತ್ತಾರೆ. ಇದು ಹೆಣ್ಣು ಸ್ವಾತಂತ್ರ್ಯ, ಸಮಾನತೆ ಮುಂತಾದುವುಗಳ ಬಗ್ಗೆ ಮಾತನಾಡುವುದೇ ತಪ್ಪು ಎಂದು ತಿಳಿದಿರುವ ಪುರುಷ ಸಮುದಾಯದ ಅಭಿಪ್ರಾಯ ಮತ್ತು ವಿರೋಧಿತನವನ್ನು ತೋರಿಸುತ್ತದೆ. ಶಂಕರ ದಿಲ್ಲಿಯ ಪ್ರತಿಷ್ಟಿತ ಸಂಸ್ಥೆಯಲ್ಲಿ ಉನ್ನತ ವ್ಯಾಸಂಗ ಮಾಡಿದ್ದರೂ ಹೆಣ್ಣಿನ ಬಗ್ಗೆ ಅವನ ಅಭಿಪ್ರಾಯ ಬದಲಾಗದಿರುವುದು ಗಂಡಸರ ಸಂಕುಚಿತ ಮನೋಭಾವನೆಯನ್ನು ತೋರಿಸುತ್ತದೆ. ಹೆಣ್ಣು ಮನೆ ಮತ್ತು ಮನೆಕೆಲಸಕ್ಕೆ ಸೀಮಿತವಾಗಿರಬೇಕು, ಹೆಚ್ಚು ವಿದ್ಯಾಭ್ಯಾಸ ಮಾಡಿರಬಾರದು, ವಿಚಾರವಂತಳಾಗಿರಬಾರದು ಎಂಬ ಅಸಮಾನತೆಯ ನಿಲುವನ್ನು ಪ್ರದರ್ಶಿಸುತ್ತಾರೆ.

ಕಾಲೇಜಿನ ಚರ್ಚಾಕೂಟದಲ್ಲಿ ಶಾಂತಿಯ ಭಾಷಣವನ್ನು ಕೇಳಿ ಪ್ರೊ. ಮಠದ್ ಅವಳ ವಿಚಾರ, ನಿಲುವುಗಳನ್ನು ಪ್ರಶಂಸಿಸುತ್ತಾ 'I am a strong supporter of the women's lib'(ವೀಣಾ ಶಾಂತೇಶ್ವರ 2006: ಪುಟ 308) ಎಂದು ಹೇಳುತ್ತಾನೆ. ತನ್ನ ಕಾದಂಬರಿಗಳಲ್ಲಿ ಹೆಣ್ಣಿನ ಸ್ವಾತಂತ್ರ್ಯ ಕುರಿತು ಬರೆಯುತ್ತೇನೆ, ಮಹಿಳೆಯರಿಗೆ ವಿಚಾರ ಸ್ವಾತಂತ್ರ್ಯ, ನೈತಿಕ ಸ್ವಾತಂತ್ರ್ಯ ದೊರೆಯವುದು ಗಂಡಸರಿಗೆ ಇಷ್ಟವಾಗುವುದಿಲ್ಲ, ಇದನ್ನು ಹೆಣ್ಣಿನ ಸ್ವೇಚ್ಛಾಚಾರ ಎಂದು ಕರೆದು ಹೆಣ್ಣಿನ ಮುಗ್ದತನದ, ದೈಹಿಕ ದೌರ್ಬಲ್ಯದ, ಸರಳತನದ ದುರುಪಯೋಗವನ್ನು ಗಂಡಸರು ಮಾಡುತ್ತಿದ್ದಾರೆ, ಗಂಡಸರ ಇಂತಹ ಮೋಸಗಳ ವಿರುದ್ಧ ಹೆಂಗಸರು ಸಿಡಿದೇಳಬೇಕು ಎಂದು ಪ್ರೊ. ಮಠದ್ ತಿಳಿಸುತ್ತಾರೆ. ಈ ಮಾತುಗಳನ್ನು ಕೇಳಿ ಶಾಂತಿ ಮಠದ್‌ನನ್ನು ನಂಬುತ್ತಾಳೆ. ಇದನ್ನು ಅರಿತ ಮಠದ್ ಶಾಂತಿಯನ್ನು ತಾನು ಪ್ರೀತಿಸುತ್ತಿರುವುದಾಗಿ ಹೇಳಿ, ಅವಳೊಡನೆ ಯಾವುದೇ ನಿರ್ಬಂಧಗಳಿಲ್ಲದೆ ಮುಕ್ತ ಜೀವನವನ್ನು ಇಚ್ಚಿಸುತ್ತಿರುವುದಾಗಿ ತಿಳಿಸುತ್ತಾನೆ ಮತ್ತು ಅದಕ್ಕೆ ಪ್ರಯತ್ನಿಸುತ್ತಾನೆ. ಆದರೆ ಮಠದ್ ಇದೇ ರೀತಿ ಶಾಂತಿಯ ಗೆಳತಿ ಜಯಶ್ರೀ ಮತ್ತು ರಮಾ ಪಾಟೀಲರಿಗೆ ನಂಬಿಸಿ ಮೋಸ ಮಾಡಿರುವುದು ತಿಳಿಯುತ್ತದೆ. ಇದರಿಂದ ಎಚ್ಚೆತ್ತ ಶಾಂತಿ ಮಠದ್‌ನಿಂದ ದೂರವಾಗುತ್ತಾಳೆ. ಲೇಖಕಿಯವರು ಇಲ್ಲಿ ಗಂಡು ಹೆಣ್ಣಿನ ಉದ್ಧಾರ, ಸ್ವಾತಂತ್ರ್ಯ, ಸಮಾನತೆಯ ಬಗ್ಗೆ ವಾದ–ಹೋರಾಟ ಮಾಡುತ್ತಾ, ಅವಳನ್ನು ಕೇವಲ ಲೈಂಗಿಕ ದೃಷ್ಟಿಯಿಂದ ನೋಡುತ್ತಾರೆಯೇ ಹೊರತು ಅವಳಿಗೆ ಸ್ವಾತಂತ್ರ್ಯ, ಸಮಾನತೆ ಕೊಡುವ ನಿಜವಾದ ಧ್ಯೇಯ ಇರುವುದಿಲ್ಲ. ಏನಿದ್ದರೂ ಗೋಮುಖ ವ್ಯಕ್ತಿತ್ವ ಗಂಡಸರದು ಎಂದು ಚಿತ್ರಿಸುತ್ತಾರೆ.

ಹೆಣ್ಣಿಗೆ ರಕ್ಷಣೆ ಕೊಡುವುದು, ಅವಳ ಚಾರಿತ್ರ್ಯವನ್ನು ಕಾಪಾಡುವುದು ಮತ್ತು ತಾನು ಪ್ರೀತಿಸಿದ ಹೆಣ್ಣು ತನಗೆ ಮಾತ್ರ ಎನ್ನುವ ನಿಲುವು ಹಲವಾರು ಗಂಡಸರದು. ಈ ನಿಲುವನ್ನು ವೀಣಾ ಶಾಂತೇಶ್ವರರವರು ರಮಾಕಾಂತ ಮತ್ತು ಶಾಂತಿಯ ನಡುವಿನ ಸಂಬಂಧದ ಮೂಲಕ ಚಿತ್ರಿಸಿದ್ದಾರೆ. ಮುಂಬಯಿಯಲ್ಲಿ ಕೆಲಸ ಹಿಡಿದ ಶಾಂತಿಗೆ ಅದೇ ಆಫೀಸಿನ ರಮಾಕಾಂತನೊಂದಿಗೆ ಪರಿಚಯವಾಗಿ, ಸ್ನೇಹವಾಗಿ, ಪರಸ್ಪರ ಜೊತೆಯಲ್ಲಿ ವಾಸಿಸುತ್ತಾರೆ. ರಮಾಕಾಂತನು ಶಾಂತಿಗೆ ಧೈರ್ಯ ತುಂಬುವುದರೊಂದಿಗೆ, ಹೆಣ್ಣು ಮತ್ತು ಗಂಡು ಒಬ್ಬರಿಗೊಬ್ಬರು loyal ಆಗಿರಬೇಕು ಎಂದು ತಿಳಿಸುತ್ತಾನೆ. ಮೊದಲು ಶಾಂತಿಯ ಹಿಂದಿನ ಬದುಕನ್ನು ಕೇಳುವ ಕುತೂಹಲವನ್ನು ಮತ್ತು ತನ್ನ ಹಿಂದಿನ ಬದುಕಿನ ಬಗ್ಗೆ ತಿಳಿಸುವ ಆಸಕ್ತಿಯನ್ನು ರಮಾಕಾಂತ ತೋರಿಸುವುದಿಲ್ಲ. ತನ್ನ ಮತ್ತು ರಮಾಕಾಂತನ ಸಂಬಂಧವನ್ನು ಲಗ್ನವಾಗಿ ಪರಿವರ್ತಿಸುವ ವಿಷಯ ಬಂದಾಗ ರಿಜಿಸ್ಟ್ರೇಷನ್ ಮಾಡಿಸುವುದನ್ನು ರಮಾಕಾಂತ ಬೇಡವೆನ್ನುತ್ತಾನೆ ಮತ್ತು ಯಾವುದಾದರೂ ದೇವಸ್ಥಾನದಲ್ಲಿ ಸರಳವಾಗಿ ವಿವಾಹವಾಗುವುದಾಗಿ ತಿಳಿಸುತ್ತಾನೆ. ಏಕೆಂದರೆ ಅವನಿಗೆ ಆಗಲೇ ಒಂದು ಮದುವೆಯಾಗಿ ಹೆಂಡತಿಯನ್ನು ಬಿಟ್ಟು ಬಂದಿರುತ್ತಾನೆ. ಆ ಮದುವೆ ತನಗೆ ಇಷ್ಟವಿರಲಿಲ್ಲವೆಂದೂ, ಮನೆಯವರ ಬಲವಂತಕ್ಕೆ ಒಪ್ಪಿದ್ದಾಗಿಯೂ ತಿಳಿಸುತ್ತಾನೆ. ಇದಕ್ಕೆ ಕಾರಣ ಕ್ಲಾಸ್‌ಮೇಟ್ ಒಬ್ಬಳನ್ನು ಲವ್ ಮಾಡುತ್ತಿದ್ದು, ಅವಳು ಬೇರೆ ಹುಡುಗನನ್ನು ಮದುವೆಯಾಗಿ ಹೋಗಿದ್ದರಿಂದ ಅಕ್ಕನ ಮಗಳನ್ನು ಮದುವೆಯಾಗಲು ಬಯಸಲಿಲ್ಲ. ಇದರಿಂದ ಬೇಜಾರಾಗಿ ಊರು ಬಿಟ್ಟು ಬಂದೆ ಎಂದು ರಮಾಕಾಂತ ಹೇಳುತ್ತಾನೆ. ಶಾಂತಿಯೊಂದಿಗೆ ಮಾತನಾಡುವಾಗ ಪ್ರೀತಿಯ ನಿಜವಾದ ಮಾನದಂಡ loyalty ಎಂದು ಹೇಳುತ್ತಾನೆ. ಆದರೆ ರಮಾಕಾಂತನೇ ತನ್ನ ಹೆಂಡತಿಗೆ loyal ಆಗಿ ಇರುವುದಿಲ್ಲ. ಮದುವೆ ಮುಗಿದ ತಕ್ಷಣವೇ ತನ್ನ ಜವಾಬ್ದಾರಿ ಮರೆತು ಅವಳನ್ನು ಬಿಟ್ಟು ಬಂದು ಹನ್ನೆರಡು ವರ್ಷವಾದರೂ ತನ್ನ ಊರಿಗೆ ಹೋಗಿರುವುದಿಲ್ಲ. ಇಂತಹ ರಮಾಕಾಂತ ಶಾಂತಿ ಮತ್ತು ಪ್ರೊ. ಮಠದ್ ನಡುವಿನ ಸಂಬಂಧವನ್ನು ಕೇಳಿ ಶಾಂತಿಗೆ ಹೇಳದೆ ಅವಳ ಮನೆ ಬಿಟ್ಟು ಹೋಗುತ್ತಾನೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಹೆಣ್ಣು ತನಗೆ loyal ಆಗಿರಬೇಕು ಎಂದು ಬಯಸುವ ಗಂಡು ತಾನು loyal ಆಗಿಲ್ಲದಿರುವುದನ್ನು ಪರಿಗಣಿಸುವುದಿಲ್ಲ. ಜೊತೆಗೆ ತನ್ನ ಜೊತೆಯಲ್ಲಿರುವ ಹೆಣ್ಣು ಬೇರೆ ಪುರುಷರ ಜೊತೆ ಇರಬಾರದು, ಆದರೆ ತಾನು ಮಾತ್ರ ಹೇಗೆ ಬೇಕಾದರೂ ಇರಬಹುದು ಎಂಬ ಗಂಡಿನ ಭಾವನೆ ತೋರುತ್ತದೆ. ಈ ಪ್ರಸಂಗದಲ್ಲಿಯೂ ಸಹ ಗಂಡಿನ ದ್ವಿಮುಖ ಸ್ವಭಾವವನ್ನು ಲೇಖಕರು ತೋರಿಸಿದ್ದಾರೆ ಮತ್ತು ಹೆಣ್ಣು ಮೋಸಹೋಗುವ ರೀತಿಯನ್ನು ಚಿತ್ರಿಸಿದ್ದಾರೆ.

ವ್ಯಕ್ತಿ ಸ್ವಾತಂತ್ರ್ಯ ಬಹಳ ಮುಖ್ಯ, ಗಂಡಾಗಲೀ ಹೆಣ್ಣಾಗಲೀ ಅವರ ವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆಯಾಗಬಾರದು ಎಂದು ಹೊರಗೆ ಹೇಳುವ ಗಂಡಸರು, ತಮ್ಮ ಮನೆಯಲ್ಲಿನ ಸ್ತ್ರೀಯರ ವ್ಯಕ್ತಿ ಸ್ವಾತಂತ್ರ್ಯವನ್ನು ಹೇಗೆ ಹರಣ ಮಾಡುತ್ತಾ ಮತ್ತು ಮನೆಯಲ್ಲೇ ಬಂಧಿಗಳನ್ನಾಗಿ ಮಾಡುತ್ತಾರೆ ಎನ್ನುವುದನ್ನು ವೀಣಾ ಶಾಂತೇಶ್ವರರವರು ಶಾಂತಿ ಮತ್ತು ಜಾನ್ ಅಶೋಕ್‌ಕುಮಾರ್‌ರ ಸಂಬಂಧದಲ್ಲಿ ಚಿತ್ರಿಸಿದ್ದಾರೆ. ರಮಾಕಾಂತನಿಂದ ಮೋಸಹೋದ ಶಾಂತಿ ಅಲ್ಲಿಯೂ ಕೆಲಸ ಬಿಟ್ಟು ಆರು ತಿಂಗಳ ನಂತರ ಕ್ರಾಂತಿ ಎಂಬ ಪತ್ರಿಕೆಗೆ ಸುದ್ದಿಗಾರಳಾಗಿ ಸೇರುತ್ತಾಳೆ. ಆ ಪತ್ರಿಕೆಯ ಮಾಲೀಕ ಜಾನ್ ಅಶೋಕ್‌ಕುಮಾರ್ ವ್ಯಕ್ತಿ ಸ್ವಾತಂತ್ರ್ಯದ ಪ್ರಚಾರಕನಾಗಿ, ಧಕ್ಕೆ ಬಂದಾಗ ಹೋರಾಟ ಮಾಡುತ್ತಾ ವ್ಯಕ್ತಿ ಸ್ವಾತಂತ್ರ್ಯವನ್ನು ನೆಲೆಯೂರಿಸಲು ಪ್ರಯತ್ನಿಸುತ್ತಿರುತ್ತಾನೆ. ಶಾಂತಿಯೊಂದಿಗೆ ಮಾತನಾಡುವಾಗ ಈ ದೇಶದಲ್ಲಿ ಗಂಡಿಗೊಂದು ಕಾನೂನು ಮತ್ತು ಹೆಣ್ಣಿಗೊಂದು ಕಾನೂನು ಇದೆ. ಗಂಡು ಎಷ್ಟೇ ತಪ್ಪು ಮಾಡಿದರೂ ಅದರ ಪರಿಣಾಮ ಮಾತ್ರ ಹೆಣ್ಣಿಗೆ, ಹೆಂಗಸರಿಗೆ ಜೀವನದಲ್ಲಿ ಮೇಲೆರಲಾಗಲೀ ಅಥವಾ ಕೆಟ್ಟು ಹೋಗುವುದಕ್ಕಾಗಲೀ ಸ್ವಾತಂತ್ರ್ಯವಿಲ್ಲ. ಹೆಣ್ಣು ಯಾವಾಗಲೂ ಗಂಡಸಿಗೆ ಗುಲಾಮಳಾಗಿ ನಾಯಿ ಬಾಳು ಬಾಳಬೇಕು. ಗಂಡಸಿನ ವ್ಯಕ್ತಿ ಸ್ವಾತಂತ್ರ್ಯಕ್ಕೆ ಹಲವು ರಾಜಕೀಯ ಅಡೆತಡೆಗಳಿವೆ, ಆದರೆ ಮಹಿಳೆಯರ ವ್ಯಕ್ತಿ ಸ್ವಾತಂತ್ರ್ಯಕ್ಕೆ ಮುಖ್ಯ ಅಡಚಣೆ ಗಂಡಸು ಎಂದು ತನ್ನ ವಿಚಾರವನ್ನು ತಿಳಿಸುತ್ತಾನೆ.

ಕಾಲೇಜು ದಿನಗಳಿಂದಲೂ ಇದೇ ಧಾಟಿಯಲ್ಲಿ ಯೋಚಿಸುತ್ತಿದ್ದ ಶಾಂತಿಗೆ ಜಾನ್‌ನ ಮಾತುಗಳು ಮತ್ತು ವ್ಯಕ್ತಿತ್ವ ಇಷ್ಟವಾಗುತ್ತದೆ. ಶಾಂತಿ ಮತ್ತು ಜಾನ್ ಹಲವು ದಿನಗಳನ್ನು ಜೊತೆಯಲ್ಲಿ ಕಳೆಯುತ್ತಾರೆ. ಒಮ್ಮೆ ಜಾನ್ ಶಾಂತಿಯನ್ನು ಮದುವೆಯಾಗುವುದಾಗಿ ತಿಳಿಸುತ್ತಾನೆ. ಆದರೆ ಇಲ್ಲಿಂದ ಜಾನ್‌ನ ನಿಜವಾದ ವ್ಯಕ್ತಿತ್ವ ಪ್ರಕಟಗೊಳ್ಳುತ್ತಾ ಹೋಗುತ್ತದೆ. ಒಂದು ಬಾರಿ ಕಾರ್ಯನಿಮಿತ್ತ ಮನೆಗೆ ತಡವಾಗಿ ಬಂದ ಶಾಂತಿಯ ಮೇಲೆ ಕೋಪಗೊಂಡು ಹೀಗೆ ಹೆಂಗಸರು ರಾತ್ರಿ ಒಬ್ಬೊಬ್ಬರೇ ತಿರುಗೋದು ಮತ್ತು ಮನೆಗೆ ತಡವಾಗಿ ಬರುವುದು ನನಗೆ ಇಷ್ಟವಿಲ್ಲ ಎಂದು ತಿಳಿಸುತ್ತಾನೆ. ಮತ್ತೊಂದು ಬಾರಿ ಶಾಂತಿ ಸತೀಶ್ ಬ್ಯಾನರ್ಜಿಯ ಜೊತೆ ಎಲೆಕ್ಷನ್ ಕ್ಯಾನ್‌ವಾಸ್ ಮಾಡಿದ್ದನ್ನು ವಿರೋಧಿಸಿ ಕೋಪೋದ್ರಿಕ್ತನಾಗಿ ಕಚೇರಿಯಲ್ಲಿ ಎಲ್ಲರ ಎದುರು ಶಾಂತಿಯನ್ನು ಅಪಮಾನಿಸುತ್ತಾನೆ. ಮನೆಗೆ ಬಂದ ಮೇಲೆ ನೀನು ಬೇರೆ ಗಂಡಸರ ಜೊತೆ ತಿರುಗಾಡುವುದು ನನಗಿಷ್ಟವಿಲ್ಲ ಎಂದು ಹೇಳುತ್ತಾನೆ. ಬಹಳ ದಿನಗಳ ಹಿಂದೆ ಶಾಂತಿ ಅರ್ಜಿ ಹಾಕಿದ್ದ ಕೆಲಸದ ಆರ್ಡರ್ ಬಂದದ್ದನ್ನು ನೋಡಿದ ಜಾನ್ ಇನ್ನು ಮುಂದೆ ಶಾಂತಿ ಎಲ್ಲಿಯೂ ಕೆಲಸ ಮಾಡುವಂತಿಲ್ಲ, ಮನೆಯನ್ನು ನೋಡಿಕೊಂಡು ಇರಬೇಕು ಎಂದು ತಿಳಿಸುತ್ತಾನೆ. ಮದುವೆ ದಿನ

ಹತ್ತಿರ ಬಂದಂತೆ ಜಾನ್ ಶಾಂತಿಯೊಡನೆ ಮಾತನಾಡುತ್ತಾ ಅವಳು ಕ್ರಿಶ್ಚಿಯನ್‌ಗೆ ಕನ್ವರ್ಟ್ ಆಗಬೇಕು, ಇದರಿಂದ ತಮ್ಮ ಮದುವೆಗಿರುವ ಅಡಚಣೆ ನಿವಾರಣೆಯಾಗುತ್ತದೆ, ಇದಕ್ಕಾಗಿ ತಾನು ಚರ್ಚ್‌ನ ಫಾದರ್‌ರವರೊಂದಿಗೆ ಮಾತನಾಡಿರುವುದಾಗಿ ತಿಳಿಸುತ್ತಾನೆ. ಆದರೆ ಇದಕ್ಕೆ ಶಾಂತಿ ಒಪ್ಪದೆ ಮದುವೆಗೆ ಕನ್‌ವರ್ಶನ್ ಅವಶ್ಯಕತೆಯಿಲ್ಲ ಮತ್ತು ತನಗೆ ಅದರಲ್ಲಿ ನಂಬಿಕೆಯಿಲ್ಲ ಎಂದು ತಿಳಿಸುತ್ತಾಳೆ. ಇದರಿಂದ ಕ್ರೋಧಗೊಂಡ ಜಾನ್ ಭಿಕಾರಿಯಾಗಿದ್ದ ನಿನ್ನನ್ನು ಚೆನ್ನಾಗಿ ನೋಡಿಕೊಂಡೆ, ಮದುವೆಯಾಗುವುದಾಗಿ ಹೇಳಿದೆ, ಆದರೆ ನಿನಗೆ ನನ್ನ ಧರ್ಮದಲ್ಲಿ ನಂಬಿಕೆಯಿಲ್ಲ ಎಂದು ಘರ್ಜಿಸುತ್ತಾನೆ.

ಜಾನ್‌ನ ವರ್ತನೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಗಂಡಸು ಹೆಣ್ಣಿಗೆ ಸಮಾನ ಅವಕಾಶ, ಸ್ವಾತಂತ್ರ್ಯ ಕೊಡಬೇಕೆಂದು ಸಭೆ ಸಮಾರಂಭಗಳಲ್ಲಿ ಹೇಳಿದರೂ ನಿಜ ಜೀವನದಲ್ಲಿ ಸ್ತ್ರೀಯರಿಗೆ, ಅವರ ಮಡದಿಯರಿಗೇ ಸ್ವಾತಂತ್ರ್ಯ ಕೊಡದಿರುವುದು ಕಂಡುಬರುತ್ತದೆ. ಈ ಕಾದಂಬರಿಯಲ್ಲಿ ಬರುವ ವಿವಿಧ ಪಾತ್ರಗಳ ಮುಖಾಂತರ ಪುರುಷರ ದ್ವಿಮುಖ ವರ್ತನೆಯನ್ನು ವೀಣಾ ಶಾಂತೇಶ್ವರರು ಚಿತ್ರಿಸಿದ್ದಾರೆ. ಸ್ವಾತಂತ್ರ್ಯ, ಸಮಾನತೆ ಎಂದು ಹೋರಾಡುವ ಹೆಣ್ಣೊಬ್ಬಳು ಹೇಗೆ ಗಂಡಸರು ನಡೆಸುತ್ತಿರುವ ಸ್ತ್ರೀ ಪರ ಕಪಟ ಹೋರಾಟಗಳ ಆಶ್ರಯದಲ್ಲಿ ಸಿಲುಕಿ, ಮೋಸಹೋಗಿ ತನ್ನ ಜೀವನವನ್ನು ಕಳೆದುಕೊಳ್ಳುತ್ತಾಳೆ ಎಂಬುದನ್ನು ತೋರಿಸುತ್ತಾರೆ. ಹೆಣ್ಣೊಬ್ಬಳು ತನ್ನ ಜೀವನವನ್ನು ರೂಪಿಸಿಕೊಳ್ಳುವ, ಸ್ವತಂತ್ರವಾಗಿ ಜೀವಿಸಲು ನಡೆಸುವ ಪ್ರಯತ್ನಗಳನ್ನು ಈ ಸಮಾಜ ಹೇಗೆ ದೂಷಿಸುತ್ತದೆ ಮತ್ತು ಆ ಎಲ್ಲ ದೋಷಗಳನ್ನು ಹೆಣ್ಣಿನ ಮೇಲೆ ಹೊರಿಸುತ್ತದೆ ಎಂಬುದನ್ನು ಚಿತ್ರಿಸಿದ್ದಾರೆ. ಹೆಣ್ಣು ಗಂಡಿಗೆ ಸಮಾನಳು ಎಂದು ತೋರಿಸುವ ಪ್ರಯತ್ನದಲ್ಲಿ ಹೆಣ್ಣು ಸೋತು ಗಂಡೇ ಮೇಲಾಗಿ ಇವರಿಬ್ಬರ ಮಧ್ಯೆ ಏರ್ಪಡುವ ಅಸಮಾನತೆಯನ್ನು ವೀಣಾ ಶಾಂತೇಶ್ವರರವರು ಗುರುತಿಸಿದ್ದಾರೆ.

ಆಧುನಿಕತೆಯ ಪ್ರವೇಶ ಸಮಾಜದ ಜನಜೀವನದ ಮೇಲೆ, ಮುಖ್ಯವಾಗಿ ಹೆಣ್ಣಿನ ಜೀವನದ ಮೇಲೆ ಬೀರುವ ಪ್ರಭಾವ ಮತ್ತು ಅಲ್ಲಿ ಉಂಟಾಗುವ ಪರಿವರ್ತನೆಗಳನ್ನು ವೈದೇಹಿಯವರು "ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು" ಕಥೆಯಲ್ಲಿ ತೋರಿಸಿದ್ದಾರೆ. ಪುರುಷ ಪ್ರಧಾನವಾದ ಒಂದು ಗ್ರಾಮೀಣ ಸಮಾಜದಲ್ಲಿ ಆಧುನಿಕತೆಯ ಸಂಕೇತವಾದ ಸಿನಿಮಾ ಟಾಕೀಸು ಪ್ರಾರಂಭವಾಗುತ್ತದೆ. ಇದು ಅಲ್ಲಿನ ಸ್ತ್ರೀಯರ ಜೀವನ, ಯೋಚನಾಲಹರಿಯನ್ನು ಬದಲಾಯಿಸಿ, ಅವರು ಅಲ್ಪಮಟ್ಟಿನ ಸ್ವಾತಂತ್ರ್ಯ ಮತ್ತು ಹಣಕಾಸಿನ ವಿಷಯದಲ್ಲಿ ಸ್ವಾವಲಂಬನೆಯನ್ನು ಪಡೆಯುವಷ್ಟು ಪರಿವರ್ತಿಸುವ ಕಾರ್ಯಮಾಡುತ್ತದೆ. ಆದರೆ ಇಲ್ಲಿ

ಗಮನಿಸಬೇಕಾದ ಅಂಶವೆಂದರೆ ಸ್ತ್ರೀಯರು ಸಿನಿಮಾಗಳನ್ನು ನೋಡಿ ಬದಲಾಗುವುದಿಲ್ಲ, ಬದಲಿಗೆ ಸಿನಿಮಾ ನೋಡಲು ಹೊರಡುವ ಮತ್ತು ಬೇಕಾದ ಹಣವನ್ನು ಒದಗಿಸಿಕೊಳ್ಳಲು ನಡೆಸುವ ಪ್ರಯತ್ನಗಳಿಂದ ಮನೆಯಲ್ಲಿ ಅವರ ಸ್ಥಾನಮಾನ, ಅಧಿಕಾರ, ಹಣಕಾಸಿನ ಸ್ಥಿತಿ, ಸ್ವಂತ ತೀರ್ಮಾನ ತೆಗೆದುಕೊಳ್ಳಲು ಇರುವ ಅವಕಾಶಗಳ ಬಗ್ಗೆ ಚಿಂತನೆ ಮೂಡುತ್ತದೆ. ಮೇಲಿನ ಎಲ್ಲ ವಿಷಯಗಳ ಬಗ್ಗೆಯೂ ಸ್ತ್ರೀಯರು ಪುರುಷಾಧೀನವಾಗಿರುವುದು ತಿಳಿಯುತ್ತದೆ. ಇಂತಹ ಅವಲಂಬನಾ ಪರಿಸ್ಥಿತಿಯಿಂದ ಅಲ್ಪಮಟ್ಟಿಗಾದರೂ ಹೊರಬರಲು ಯತ್ನಿಸುವ ವ್ಯಕ್ತಿಗತ ಅಭಿಪ್ರಾಯ, ಸ್ವಾತಂತ್ರ್ಯವನ್ನು ಪ್ರಕಟಿಸುವ ಪ್ರಯತ್ನಗಳನ್ನು ಇಲ್ಲಿನ ಹೆಣ್ಣು ಪಾತ್ರಗಳು ಮಾಡುವುದು ವೈದೇಹಿಯವರು ವ್ಯಕ್ತಿ ಸ್ವಾತಂತ್ರ್ಯ ಮತ್ತು ಸಮಾನ ಅವಕಾಶಗಳಿಗೆ ನೀಡಿರುವುದನ್ನು ಸೂಚಿಸುತ್ತದೆ.

ಈ ಕಥೆಯಲ್ಲಿ ಬರುವ ಲಿಲ್ಲಿಬಾಯಿ ಸಿನಿಮಾ ಟಾಕೀಸಿನ ಹೆಂಗಸರ ಕಡೆಯ ಗೇಟ್ ಕೀಪರ್ ಕೆಲಸಕ್ಕೆ ಸೇರುವುದು, ಆರ್ಥಿಕ ಸ್ವಾವಲಂಬನೆ ಮತ್ತು ಹಣ ಸಂಪಾದಿಸಿ ಅಭಿವೃದ್ಧಿ ಹೊಂದಬೇಕು ಎಂದು ಬಯಸುವ ಹೆಣ್ಣಿನ ಚಿತ್ರಣವನ್ನು ಕೊಡುತ್ತದೆ. ಹೆಣ್ಣು ಮನೆಯಿಂದ ಹೊರಗೆ ಹೋಗಬಾರದು ಎಂಬ ಪುರುಷ ನಿಯಮವನ್ನು ದಾಟಿ ಹೋಗಲು ಇದು ಇತರ ಹೆಣ್ಣುಗಳಿಗೆ ಪ್ರೇರೇಪಣೆ ನೀಡುತ್ತದೆ. ಇದರ ಜೊತೆಯಲ್ಲೇ ಲಿಲ್ಲೀಬಾಯಿ ಗೇಟಿನ ಬಳಿ ಇರುವುದರಿಂದ ಪುರುಷರು ಧೈರ್ಯವಾಗಿ ಹೆಂಗಸರನ್ನು ಟಾಕೀಸಿಗೆ ಕಳುಹಿಸಲು ಮುಂದಾಗುತ್ತಾರೆ. ಹೆಂಗಸರೂ ಕೂಡ ಇದೇ ಕಾರಣದಿಂದ ಟಾಕೀಸಿಗೆ ಹೋಗಲು ಧೈರ್ಯತಾಳುತ್ತಾರೆ. ಇದರ ಪರಿಣಾಮ ಮಹಿಳೆಯರು ತಾವಾಗಿ ಮನೆಯಿಂದ ಹೊರಬರುವ ಧೈರ್ಯ ತಂದುಕೊಂಡದ್ದು ಎಂದು ತೋರಿಸುತ್ತಾ ವೈದೇಹಿಯವರು ಅವಕಾಶ ದೊರೆತರೆ ಹೆಣ್ಣು ಕೂಡ ಧೈರ್ಯವಾಗಿ ಹೊರಗಡೆ ಬರಬಲ್ಲ ಸಂಗತಿಯನ್ನು ಪ್ರಕಟಿಸುತ್ತಾರೆ.

ವೈದೇಹಿಯವರು ಲಿಲ್ಲೀಬಾಯಿ ಮತ್ತು ಮಂಜುನಾಥಯ್ಯನ ಹೆಂಡತಿ ಪಾತ್ರಗಳ ಮೂಲಕ ಮನೆಯಲ್ಲಿ ಎಷ್ಟೇ ಸಿರಿತನವಿದ್ದರೂ ಆರ್ಥಿಕವಾಗಿ ಹೆಣ್ಣು ಪುರುಷಾವಲಂಬಿ ಎಂದು ತೋರಿಸುತ್ತಾರೆ. ಮಂಜುನಾಥಯ್ಯನ ಹೆಂಡತಿ ಮನೆಯ ಹೆಂಗಸರು ಮತ್ತು ಮಕ್ಕಳೊಡನೆ ಸಿನಿಮಾ ನೋಡಲು ಬರುತ್ತಾಳೆ. ಲಿಲ್ಲೀಬಾಯಿ ಹಣದಾಸೆಯಿಂದ ಕಡಿಮೆ ಟಿಕೆಟ್ ತೆಗೆದುಕೊಂಡು ಹೆಚ್ಚು ಜನರನ್ನು ಬಿಡುವ ಪದ್ಧತಿಯನ್ನು ರೂಢಿಮಾಡಿರುತ್ತಾಳೆ. ಆದರೆ ಟಾಕೀಸಿನ ಮೇನೇಜರ್ ಮತ್ತು ಲಿಲ್ಲೀಬಾಯಿಯ ನಡುವಿನ ಜಗಳದಿಂದ ಅವಳು ಟಿಕೆಟ್ ಇಲ್ಲದೆ ಹೆಚ್ಚು ಜನರನ್ನು ಬಿಡುವುದನ್ನು ನಿಲ್ಲಿಸಿರುತ್ತಾಳೆ. ಇದೇ ಸಂದರ್ಭದಲ್ಲಿ ಬಂದ ಮಂಜುನಾಥಯ್ಯನ

ಹೆಂಡತಿಗೆ ಟಿಕೆಟ್ ಪಡೆದು ಬರಬೇಕೆಂದು ತಿಳಿಸುತ್ತಾಳೆ. ಆದರೆ ಮಂಜುನಾಥಯ್ಯನ ಹೆಂಡತಿಯ ಬಳಿ ಹೆಚ್ಚು ಹಣವಿಲ್ಲದಿರುವುದು ಅವಮಾನವಾದಂತಾಗುತ್ತದೆ. ಆಗ ಅವರಲ್ಲಿ ಬರುವ ಯೋಚನೆ "ಎಷ್ಟು ನೂರು ಮುಡಿ ಅಕ್ಕಿ ಹುಟ್ಟುವಳಿ ಇದ್ದರೇನಾಯಿತು? ಮನೆಯಲ್ಲಿ ಬಗ್ಗಿನ ಬೆನ್ನು ಎತ್ತದೇ ಗೇಯ್ದರೇನಾಯಿತು? ಹಾಗಾದರೆ ಒಂದು ದಮ್ಮಡಿಯಾದರೂ ಹೆಚ್ಚಿಗೆ ತನ್ನ ಬಳಿ? ಇರುವಷ್ಟನ್ನಾದರೂ ತಾನು ಬೇಡಿ ಪರದೇಶಿಯಂತೆ ಕೇಳಿ ತೆಗೆದುಕೊಳ್ಳಬೇಕಾಯಿತಲ್ಲವೇ?" (ಸುಬ್ಬಣ್ಣ ಕೆ. ವಿ. ನೆನಪಿನ 'ಮೊದಲ ಓದು' ಪುಸ್ತಕ ಮಾಲೆ 2006: ಪುಟ 69). ಹೆಣ್ಣಿಗೆ ಆರ್ಥಿಕ ಸ್ವಾತಂತ್ರ್ಯ ಇಲ್ಲದಿರುವುದನ್ನು ತಿಳಿಸುತ್ತದೆ. ತಮ್ಮ ಅಧೀನ ಸ್ಥಿತಿಯನ್ನು ನೆನೆದು "ಒಟ್ಟಾರೆ ಅತಂತ್ರರಾದೆವಲ್ಲ; ಕೈತುಂಬಾ ದುಡ್ಡನ್ನು ಗಂಡಸರು ಕೊಟ್ಟಿದ್ದರೆ ಅವರ ಮರ್ಯಾದೆಯೇ ಉಳಿಯುತ್ತಿತ್ತು" (ಸುಬ್ಬಣ್ಣ ಕೆ. ವಿ. ನೆನಪಿನ 'ಮೊದಲ ಓದು' ಪುಸ್ತಕ ಮಾಲೆ 2006: ಪುಟ 70) ಎಂದು ಮಂಜುನಾಥಯ್ಯನ ಹೆಂಡತಿ ಹೇಳಿದಾಗ ವಾರಗಿತ್ತಿಯೊಬ್ಬಳು ಮನೆಯಲ್ಲಿ ತಾವು ಲೆಕ್ಕಕ್ಕಿಲ್ಲದ್ದನ್ನು ಈ ರೀತಿ ಹೇಳುತ್ತಾಳೆ "ಸುಮ್ಮನಿರಿ ಅಕ್ಕ, ಊರವರು ಏನು ಹೇಳುತ್ತಾರೆ? ಮಂಜುನಾಥಯ್ಯನ ಮನೆಯವರು ಎನ್ನುತ್ತಾರೆ. ನಮ್ಮ ಹೆಸರು ಹೇಳುತ್ತಾರೆಯೇ? ಅಂದ ಮೇಲೆ ನಮ್ಮ ಮರ್ಯಾದೆ ಎಲ್ಲಿ ಹೋಯಿತು?" (ಸುಬ್ಬಣ್ಣ ಕೆ. ವಿ. ನೆನಪಿನ 'ಮೊದಲ ಓದು' ಪುಸ್ತಕ ಮಾಲೆ 2006: ಪುಟ 70) ಈ ಮಾತುಗಳು ಹೆಣ್ಣಿನ ಅಸ್ತಿತ್ವ ಪುರುಷನ ಅಸ್ತಿತ್ವದೊಂದಿಗೆ ತಳುಕುಹಾಕಿಕೊಂಡಿರುವುದನ್ನು ಸೂಚಿಸುತ್ತದೆ. ಸಮಾಜ ಯಾವಾಗಲೂ ಹೆಣ್ಣನ್ನು ಪುರುಷನೊಂದಿಗೆ ಗುರುತಿಸುತ್ತಾ ಅವಳ ಅಸ್ತಿತ್ವವನ್ನು ಕಡೆಗಣಿಸಿ ಅಸಮಾನತೆಯನ್ನು ಉಂಟು ಮಾಡಿರುವುದನ್ನು ತೋರಿಸುತ್ತದೆ.

ಆಧುನಿಕತೆಯ ಅಂಶವಾದ ಸಿನಿಮಾ ಟಾಕೀಸೊಂದು ಊರಿನ ಹೆಣ್ಣುಗಳ ಜೀವನದಲ್ಲಿ ಬದಲಾವಣೆ ತಂದು, ಅವರ ಅತಂತ್ರ ಜೀವನವನ್ನು ಅವರಿಗೆ ಅರಿವಾಗುವಂತೆ ಮಾಡಿ, ಧೈರ್ಯ ತಳೆದು ಸ್ವಲ್ಪವಾದರೂ ಆರ್ಥಿಕ ಶಕ್ತಿ ಮತ್ತು ಮನೆಯಿಂದ ಹೊರಬರುವ ಸ್ವಾತಂತ್ರ್ಯವನ್ನು ಪಡೆಯುವ ರೀತಿಯನ್ನು ವೈದೇಹಿಯವರು ಈ ಕಥೆಯಲ್ಲಿ ತೋರಿಸಿದ್ದಾರೆ. ಕಥೆಯ ಕೊನೆಯಲ್ಲಿ ವೈದೇಹಿಯವರು ಹೇಳುವ "ಈಗ ಟಾಕೀಸಿನಲ್ಲಿ ಲಿಲ್ಲೀ ಇಲ್ಲದಿದ್ದರೇನಾಯಿತು? ಊರಿನ ಹೆಂಗಸರಿಗೆ ಮುಂಚಿನಷ್ಟು ಭೀತಿಯೂ ಇಲ್ಲ, ಮುಂಚಿನಷ್ಟು ಖಾಲಿ ಕೈಯೂ ಇಲ್ಲ. ಸಂಜೆ ಸಿನಿಮಾಕ್ಕೆ ಹೋಗುತ್ತೇವೆ ಎಂದು ಧೃಢವಾಗಿ ಹೇಳಿಹೋಗುವಷ್ಟು ಧೈರ್ಯ ಕಲಿತಿದ್ದಾರೆ. ಗಂಡಸರು ಗದರಿಸಿದರೆ "ಅದೇನು ಒಂದು ಸಿನಿಮಾ ನೋಡಲು ನಾಲಾಯಾಕಾದೆವೆ? ಒಳ್ಳೆ ಕತೆ! ನೀವು ಹೇಳಿದ ಹಾಗೆ ಕೇಳುತ್ತಿದ್ದರೆ ಹೇಗೂ ಕುಣಿಸೀರಿ"–ಎಂದು ತುರುಬಿಗೆ ಮುಳ್ಳು ಚುಚ್ಚುತ್ತಾ

ಉತ್ತರ ಕೊಡಲು ತಯಾರಾಗಿದ್ದಾರೆ. ದುಡ್ಡು! ಪೂರಾ ಸತ್ಯಂಭಟ್ಟರಾದರೆ ಸತ್ತು ನಿಗರಿ ಹೋದೇವು ಎನ್ನುತ್ತಾ ಮೂರು ಜನ ಹೊರಟರೆ ನಾಲ್ಕು ಜನ ಹೋಗುತ್ತೇವೆಂದು ಜಾಸ್ತಿ ವಸೂಲಿ ಮಾಡುವುದನ್ನು ಮತ್ತು ಹೆಚ್ಚಾಗಿರುವುದನ್ನು ಕೂಡಿಟ್ಟು ಮತ್ತೆ ಯಾವತ್ತಾದರೂ ಉಪಯೋಗಿಸುವುದನ್ನು ಕಲಿತಿದ್ದಾರೆ" (ಸುಬ್ಬಣ್ಣ ಕೆ. ವಿ. ನೆನಪಿನ 'ಮೊದಲ ಓದು' ಪುಸ್ತಕ ಮಾಲೆ 2006: ಪುಟ 72) ಮಾತುಗಳು ಆಧುನಿಕತೆಯ ಪ್ರಭಾವದಿಂದ ಸ್ತ್ರೀಯರು ತಮ್ಮ ಹಕ್ಕು, ಸ್ವಾತಂತ್ರ್ಯವನ್ನು ಗುರ್ತಿಸಿಕೊಂಡು, ಅವುಗಳನ್ನು ಪಡೆದು (ಮಿತಿಯಲ್ಲಾದರೂ) ತಮ್ಮ ವ್ಯಕ್ತಿತ್ವ ಮತ್ತು ವ್ಯಕ್ತಿ ಸ್ವಾತಂತ್ರ್ಯವನ್ನು ಸ್ಥಾಪಿಸುವುದು, ಸ್ತ್ರೀ–ಪುರುಷರ ನಡುವಿನ ಅಸಮಾನತೆಯನ್ನು ಕೊನೆಗಾಣಿಸಲು ಆಧುನಿಕತೆ ಹೇಗೆ ಸಹಾಯ ಮಾಡುತ್ತದೆ ಎಂದು ತಿಳಿಸುತ್ತದೆ.

ಬಿ.ಟಿ. ಲಲಿತಾನಾಯಕ್‌ರವರು ತಮ್ಮ 'ಲೂಟಿ' ಕಥೆಯಲ್ಲಿ ಲಂಬಾಣಿ ತಾಂಡಾದ ಬಡ ಹೆಣ್ಣೊಬ್ಬಳು ಅಸಹಾಯಕತೆ ಮತ್ತು ದೌರ್ಜನ್ಯಕ್ಕೆ ಸಿಲುಕಿ ಲೂಟಿಯಾಗುವ ಚಿತ್ರಣವನ್ನು ನೀಡಿದ್ದಾರೆ. ಜೊತೆಗೆ ಸೂಕ್ಷ್ಮವಾಗಿ ಅವಲೋಕಿಸಿದಾಗ ಪುರುಷ ಪ್ರಧಾನ ಸಮಾಜ ಮತ್ತು ಶ್ರೀಮಂತರ ರೀತಿನೀತಿಗಳಿಂದ ಹೆಣ್ಣಿಗೆ ಆಗಿರುವ ಅನ್ಯಾಯ, ಅಸಮಾನತೆಯನ್ನು ಸೂಚ್ಯವಾಗಿ ತಿಳಿಸುತ್ತಾರೆ. ಕಥೆಯಲ್ಲಿ ನಾಯಕಿ ರಾಮಿಯ ಗಂಡ ಖೀರು ಸ್ವಂತ ಜಮೀನಿಲ್ಲದಿದ್ದರೂ ಕೂಲಿ ಮಾಡಿ ಹೆಂಡತಿ ಮಕ್ಕಳನ್ನು ಸಾಕುತ್ತಿರುತ್ತಾನೆ. ಗೌಡರ ಹೊಲಕ್ಕೆ ಗೊಬ್ಬರವನ್ನು ಗಾಡಿಯಲ್ಲಿ ಹೇರಿಕೊಂಡು ಸಾಗಿಸುವಾಗ ಹೆದ್ದಾರಿಯಲ್ಲಿ ಹಿಂದಿನಿಂದ ಬಂದ ಲಾರಿಯೊಂದು ಗಾಡಿಯನ್ನು ಗುದ್ದಿ ಅಪಘಾತವಾಗಿ ಖೀರುವಿನ ಪಕ್ಕೆಲುಬು ಮುರಿದು ಹಾಸಿಗೆ ಹಿಡಿಯುತ್ತಾನೆ. ಆದರೆ ಗೌಡರು ಖೀರುವಿಗೆ ದೊಡ್ಡ ದವಾಖಾನೆಗೆ ಸೇರಿಸಲು ಹಣ ಕೊಡದೆ ರಾಮಿಯನ್ನು ಬೈದು ಕಳುಹಿಸುತ್ತಾರೆ. ರಾಮಿಯು ಸೌದೆ ತಂದು ಮಾರಿ ದೊರೆತ ಹಣದಿಂದ ನಿತ್ಯ ಜೀವನ ಸಾಗಿಸೋಣವೆಂದು ಕಾಡಿಗೆ ಹೋಗುತ್ತಾಳೆ. ಕಾಡಿಗೆ ಕರಡಿಗಳು, ತೋಳಗಳು ಬಂದಿವೆ ಮತ್ತು ಮನುಷ್ಯರನ್ನು ಎತ್ತಿಕೊಂಡು ಹೋಗುತ್ತವೆ ಆದ್ದರಿಂದ ಹೋಗಬೇಡವೆಂದು ಹೇಳಿದರೂ ರಾಮಿಯು ಹಣಕ್ಕೆ ಬೇರೆ ದಾರಿಯಿಲ್ಲದೆ ಕಾಡಿಗೆ ಸೌದೆ ತರಲೆಂದು ಹೋಗುತ್ತಾಳೆ. ಈ ಸಂದರ್ಭದಲ್ಲಿ ಲಲಿತಾನಾಯಕ್‌ರವರು ಹೆಣ್ಣು ಜವಾಬ್ದಾರಿಯನ್ನು ತೆಗೆದುಕೊಂಡು ಕಾಡಿನಲ್ಲಿ ಎದುರಾಗಬಹುದಾದ ಅಪಾಯವನ್ನು ಲೆಕ್ಕಿಸದೆ ಗಂಡಿಗೆ ಸಮಾನಳಾಗಿ ನಿಲ್ಲುವ ಚಿತ್ರಣವನ್ನು ತೋರಿಸುತ್ತಾರೆ. ರಾಮಿಯು ಸೌದೆಯನ್ನು ಸಂಗ್ರಹಿಸಿ ಹಿಂತಿರುಗುವಾಗ ಗುತ್ತಿಗೆದಾರರೆಂದು ಹೇಳಿಕೊಂಡ ಇಬ್ಬರು ಅವಳನ್ನು ತಡೆಯುತ್ತಾರೆ. ಅವರ ಅನುಮತಿ ಇಲ್ಲದೆ ಸೌದೆ ಕಡಿದದ್ದು ತಪ್ಪು ಮತ್ತು ಅದಕ್ಕೆ ದಂಡವಾಗಿ ಇಪ್ಪತ್ತು ರೂಪಾಯಿ ಕೊಡಬೇಕೆಂದು ಹೇಳುತ್ತಾರೆ. ಅವಳಲ್ಲಿ

ಹಣವಿಲ್ಲವೆಂದಾಗ ಸೌದೆ ಮತ್ತು ಕೊಡಲಿಯನ್ನು ದಂಡಕ್ಕೆ ಸಮ ಮಾಡಿರುವುದಾಗಿ ಹೇಳುತ್ತಾರೆ. ಕೊಡಲಿಯು ತನಗೆ ಬಲಗೈ ಇದ್ದ ಹಾಗೆ ಅದನ್ನು ಕೊಡಿ ಎಂದು ಅಂಗಲಾಚಿದರೂ ಆ ವ್ಯಕ್ತಿಗಳು ಕರಗುವುದಿಲ್ಲ. ಬದಲಾಗಿ ಅವಳ ಮೇಲೆ ಅತ್ಯಾಚಾರ ಮಾಡಿ ಹೋಗುತ್ತಾರೆ. ಲಲಿತಾನಾಯಕ್‌ರವರು ಇಲ್ಲಿ ಪುರುಷ ಸಮಾಜ ಒಂಟಿ ಹೆಣ್ಣಿನ ಮೇಲೆ ಹೇಗೆ ದೌರ್ಜನ್ಯವೆಸಗುತ್ತದೆ ಎಂದು ತೋರಿಸುತ್ತಾರೆ. ಕಾಡಿನಿಂದ ಸೌದೆ ತಂದು ಮಾರಿ ಜೀವನ ಸಾಗಿಸಲೆಂದು ಹೋದ ರಾಮಿ ಪುರುಷರ ದೌರ್ಜನ್ಯಕ್ಕೆ ಒಳಗಾಗಿ, ಅವಳ ಕೆಲಸಕ್ಕೆ ಅವಶ್ಯಕವಾಗಿದ್ದ ಕೊಡಲಿ ಮತ್ತು ಅವಳ ಮಾನ ಎರಡೂ ಲೂಟಿಯಾಗುತ್ತದೆ. ಈ ಕಥೆಯಲ್ಲಿ ಒಂದು ಹೆಣ್ಣು ತನ್ನ ಬಡತನ, ಅಸಹಾಯಕತೆ ಮತ್ತು ಕೆಲವು ಪುರುಷರ ನಡತೆಯಿಂದ ದೌರ್ಜನ್ಯಕ್ಕೊಳಗಾಗಿ ಅಸಮಾನತೆಯುಂಟಾಗುತ್ತದೆ ಎಂದು ಚಿತ್ರಿಸುತ್ತಾರೆ.

ಲಲಿತಾನಾಯಕ್‌ರವರು 'ತಾಯಿ ಸಾಕೀಬಾಯಿ' ಕಥೆಯಲ್ಲಿ ಚಿಕ್ಕ ವಯಸ್ಸಿಗೆ ಗಂಡನನ್ನು ಕಳೆದುಕೊಂಡ ಒಂದು ಹೆಣ್ಣು ಬೇರೆ ಪುರುಷನನ್ನು ಪ್ರೀತಿಸಬಾರದು ಮತ್ತು ಪ್ರೀತಿಸಿದರೆ ಪುರುಷ ಸಮಾಜ ಜೀವವನ್ನು ತೆಗೆಯುತ್ತದೆ ಎಂದು ತೋರಿಸುತ್ತಾ ಸಹಜವಾಗಿ ಪರಹೆಣ್ಣಿನ ಸಹವಾಸ ಮಾಡಿದ ಗಂಡಿಗೆ ಯಾವ ಶಿಕ್ಷೆಯಿಲ್ಲದಿದ್ದರೂ, ವಯಸ್ಕ ವಿಧವೆಯೊಬ್ಬಳು ಇನ್ನೊಬ್ಬ ಪುರುಷನನ್ನು ಪ್ರೀತಿಸಿದರೆ ಅವಳ ಜೀವಕ್ಕೆ ಕುತ್ತು ಎಂಬ ಪುರುಷ ಪ್ರಧಾನ ಸಮಾಜದ ಅಸಮಾನತೆಯನ್ನು ಪರೋಕ್ಷವಾಗಿ ಚಿತ್ರಿಸುತ್ತಾರೆ. ಕಥೆಯ ಮುಖ್ಯ ಪಾತ್ರ ಸಾಕಿಬಾಯಿಗೆ ಹದಿನಾರು–ಹದಿನೇಳನೇ ವಯಸ್ಸಿಗೆ ನಡುವಯಸ್ಸಿನ ಸೇವ್ಯಾನೊಂದಿಗೆ ಮದುವೆಯಾಗುತ್ತದೆ. ವಯಸ್ಸಾದ ತಂದೆತಾಯಿಗಳನ್ನು, ತನ್ನ ಮಗನನ್ನು ನೋಡಿಕೊಳ್ಳಲು ಒಬ್ಬ ವ್ಯಕ್ತಿ ಬೇಕಾಗಿರುವುದರಿಂದ ಸೇವ್ಯಾ ತನ್ನನ್ನು ಮದುವೆ ಮಾಡಿಕೊಂಡು ಬಂದಿದ್ದಾನೆಂದು ಸಾಕೀಬಾಯಿಗೆ ತಿಳಿಯುತ್ತದೆ. ಆದರೆ ಬೇರೆ ದಾರಿಯಿಲ್ಲದೆ ಅವಳು ಅದನ್ನು ಒಪ್ಪಿಕೊಂಡು ಜೀವನ ಸಾಗಿಸುತ್ತಿರುತ್ತಾಳೆ. ಅವಳಿಗೆ ಒಂದು ಗಂಡು ಮಗುವಾಗುತ್ತದೆ ಮತ್ತು ಅವಳು ಇಪ್ಪತ್ತನೆಯ ವಯಸ್ಸಿನಲ್ಲಿದ್ದಾಗ ಸೇವ್ಯಾ ತೀರಿಕೊಳ್ಳುತ್ತಾನೆ. ಇಲ್ಲಿ ಕಂಡು ಬರುವ ಅಂಶ ಮದುವೆಯ ಸಂದರ್ಭದಲ್ಲಿ ಒಂದು ಹೆಣ್ಣಿನ ಇಷ್ಟ–ಅಭಿಪ್ರಾಯಗಳನ್ನು ಕೇಳದೆ ಅವಳಿಗಿಂತ ಬಹಳ ಹಿರಿಯನಾದವನೊಂದಿಗೆ ಮದುವೆ ಮಾಡುವುದು ಮತ್ತು ಆತ ತನ್ನ ಎರಡನೇ ಹೆಂಡತಿಯನ್ನು ಮನೆಯ ಕೆಲಸ ಮತ್ತು ಅವನ ಕಾಮತೃಷೆಗೆ ಬಳಸಿಕೊಳ್ಳುವುದನ್ನು ಬಿಟ್ಟು ಬೇರೆ ಯಾವ ವಿಷಯದಲ್ಲೂ ಪರಿಗಣನೆಗೆ ತೆಗೆದುಕೊಳ್ಳದಿರುವುದು, ಗಂಡು ಹೆಣ್ಣಿನ ನಡುವಿನ ಅಸಮಾನತೆ ಮತ್ತು ಹೆಣ್ಣನ್ನು ಗುಲಾಮಳಂತೆ ನೋಡುವುದು. ಸೇವ್ಯಾ ತೀರಿದ ಬಳಿಕ

ಸಾಕೀಬಾಯಿ ತನ್ನ ಮಗನೊಂದಿಗೆ ವಾಸವಿರುತ್ತಾಳೆ. ಈ ನಡುವೆ ಅವರ ಮನೆಯ ಬಳಿಯ ಅಂಗಡಿಯ ಮುನಿಯ ಮತ್ತು ಸಾಕೀಬಾಯಿಯ ನಡುವೆ ಪ್ರೀತಿಯುಂಟಾಗುತ್ತದೆ. ಆದರೆ ಅಲ್ಲಿನ ಸಮಾಜ ಇದನ್ನು ಒಪ್ಪುವುದಿಲ್ಲ. ಒಂದು ದಿನ ಮುನಿಯ ಮತ್ತು ಸಾಕೀಬಾಯಿ ಹೊಲದ ಬಳಿ ಜೊತೆಯಲ್ಲಿದ್ದ ವಿಷಯವನ್ನು ತಿಳಿದ ಸಾಕೀಬಾಯಿಯ ಮಗ ದೇವಲ್ಯಾ ಅವಳಿಗೆ ಹಿಗ್ಗಾಮುಗ್ಗ ಥಳಿಸಿ ಎಳೆದಾಡಿ ಮನೆಯಿಂದ ಹೊರಹಾಕುತ್ತಾನೆ. ಈ ವಿಷಯ ತಿಳಿದ ಸಾಕೀಬಾಯಿಯ ಮಲಮಗ ಸಂಕ್ರಾ ಹಳ್ಳಿಗೆ ಹಿಂದಿರುಗಿ ದೇವಲ್ಯಾನೊಂದಿಗೆ ಸೇರಿ, ಸಂಕ್ರಾನ ಹೆಂಡತಿ ಸೀತಾಳ ಸಹಾಯದಿಂದ ಮನೆ ಬಿಟ್ಟು ಹೊರಟಿದ್ದ ಸಾಕೀಬಾಯಿ ಮತ್ತು ಮುನಿಯನನ್ನು ಕೊಲೆ ಮಾಡುತ್ತಾರೆ. ಲಲಿತಾನಾಯಕ್‌ರವರು ಈ ಕಥೆಯ ಮುಖಾಂತರ ಪುರುಷ ಸಮಾಜ ಹೇಗೆ ಒಂದು ಹೆಣ್ಣಿನ ಮೇಲೆ ಬರ್ಬರತೆಯನ್ನು ತೋರಿಸುತ್ತದೆ ಎಂಬುದನ್ನು ಚಿತ್ರಿಸುತ್ತಾರೆ. ಸ್ವಂತ ಗಂಡು ಮಕ್ಕಳೂ ಕೂಡ ಸಾಕೀಬಾಯಿ ತಮ್ಮ ತಾಯಿ ಎಂದೂ ಪರಿಗಣಿಸದೆ ಅವಳನ್ನು ಕೊಲೆ ಮಾಡುವುದು ಹೆಣ್ಣಿನ ವಿರುದ್ಧ ಗಂಡು ಸಮುದಾಯ ತಳೆಯುವ ಅಸಮಾನತೆಯನ್ನು ತೋರಿಸುತ್ತದೆ.

ಸಮಾಜದಲ್ಲಿ ಮೇಲ್ವರ್ಗದ ಪುರುಷರು ಕೆಳವರ್ಗದ ಮತ್ತು ತಮ್ಮ ಅಧೀನ ಹೆಣ್ಣುಮಕ್ಕಳ ಮೇಲೆ ಅನ್ಯಾಯ, ದ್ರೋಹ, ಅತ್ಯಾಚಾರವೆಸಗುವ ಸಂಗತಿಗಳು ಸಾಮಾನ್ಯವಾಗಿರುತ್ತವೆ. ಈ ರೀತಿಯ ಮೋಸ, ಅತ್ಯಾಚಾರಗಳಿಗೆ ಒಳಗಾದ ಹೆಣ್ಣುಗಳು ಸಮಾಜದ ಮುಖ್ಯಪರಿಧಿಯಿಂದ ಹೊರಗೆ ಉಳಿದು ತಮ್ಮ ಜೀವನವನ್ನು ಕತ್ತಲಿನಲ್ಲಿಯೇ ಕಳೆಯಬೇಕಾದ ಪರಿಸ್ಥಿತಿ ಇರುತ್ತದೆ. ಇಂತಹ ಎಷ್ಟೋ ಹೆಣ್ಣುಗಳಿಗೆ ತಮಗಾದ ಮೋಸ ಅನ್ಯಾಯ, ಶೋಷಣೆಗಳು ಅರಿವಿಗೆ ಬರುವುದಿಲ್ಲ. ಗೀತಾ ನಾಗಭೂಷಣರವರು 'ಬೆಳಕಿನೆಡೆಗೆ' ಕಥೆಯಲ್ಲಿ ಮೇಲ್ವರ್ಗದ ಪುರುಷನಿಂದ ಅತ್ಯಾಚಾರಕ್ಕೊಳಗಾಗಿ, ಅತ್ಯಾಚಾರ ಮಾಡಿದವರ 'ಇಟ್ಟುಕೊಂಡ' ಹೆಣ್ಣಾಗಿ ಆ ಪರಿಸ್ಥಿತಿಯ ದುಃಖ ದುಮ್ಮಾನಗಳನ್ನು ಅನುಭವಿಸಿ ತನ್ನ ಮಗಳಿಗೂ ಈ ಪರಿಸ್ಥಿತಿ ಬರಬಾರದೆಂದು ನಿಶ್ಚಯಿಸಿ ತನ್ನ ಕತ್ತಲಿನ ಬಾಳಿನಿಂದ ಬೆಳಕಿನ ಕಡೆಗೆ ನಡೆಯುವ ಚಿತ್ರಣವನ್ನು ಕೊಡುತ್ತಾರೆ. ಜೊತೆಗೆ ಅವಳು ತನ್ನ ಮಗಳಿಗೆ ಪುರುಷನಿಗೆ ಸಮಾನವಾಗಿ ನಿಲ್ಲಲು ಮತ್ತು ಸ್ವತಂತ್ರವಾಗಿ ಬದುಕಲು ಅತ್ಯಾವಶ್ಯಕವಾಗಿ ಬೇಕಾದ ವಿದ್ಯೆಯನ್ನು ಕೊಡಿಸಲು ಊರಿನಿಂದ ಹೊರ ನಡೆಯುವ ಚಿತ್ರಣವನ್ನು ಕೊಡುತ್ತಾ ಗೀತಾ ನಾಗಭೂಷಣರವರು ಹೆಣ್ಣಿಗೆ ಸಮಾನತೆಯಿಂದ ಬಾಳಲು, ಸಮಾಜವನ್ನು ಅರಿಯಲು ವಿದ್ಯೆ ಅನಿವಾರ್ಯ ಎಂಬುದನ್ನು ಚಿತ್ರಿಸಿದ್ದಾರೆ.

ಈ ಕಥೆಯ ಭವಾನಿಯ ತಂದೆ ಕತಾಲಪ್ಪ ಕೆಳಸಮುದಾಯದ ತಳವಾರ ಜಾತಿಗೆ ಸೇರಿದವನಾಗಿದ್ದು ಊರಿನ ಸಾಹುಕಾರನ ಮನೆಯಲ್ಲಿ ಜೀತದಾಳಾಗಿರುತ್ತಾನೆ. ತಾಯಿಯಿಲ್ಲದ ಭವಾನಿಯನ್ನು ಕತಾಲಪ್ಪ ಮತ್ತು ಅವನ ಕೇರಿಯವರು ಪ್ರೀತಿಯಿಂದ ಬೆಳೆಸುತ್ತಾರೆ. ಕೇರಿಯ ಮುಖಂಡನಾದ ಮೈಲಾರಪ್ಪ ಕತಾಲಪ್ಪನೊಂದಿಗೆ ಚರ್ಚಿಸಿ ಅವರ ಸಂಬಂಧದ ಹುಡುಗನಿಗೆ ಮದುವೆ ಮಾಡಲು ನಿಶ್ಚಯಿಸುತ್ತಾರೆ. ಇದೇ ಸಂದರ್ಭದಲ್ಲಿ ಸಾಹುಕಾರನ ಹೆಂಡತಿಗೆ ಆರೋಗ್ಯ ಸರಿಯಿಲ್ಲದಿದ್ದಾಗ ಮನೆ ಕೆಲಸ ಮಾಡಿಕೊಡಲೆಂದು ಬಂದ ಭವಾನಿಯನ್ನು ನೋಡಿದ ಸಾಹುಕಾರನ ಮಗ ಈರಣ್ಣಗೌಡನಿಗೆ ಭವಾನಿಯ ಮೇಲೆ ಮನಸ್ಸಾಗುತ್ತದೆ. ನೋಡಲು ಚೆಲುವಾಗಿದ್ದ ಭವಾನಿಯನ್ನು ಹೇಗಾದರೂ ಪಡೆಯಬೇಕೆಂದು ಬಯಸಿದ ಈರಣ್ಣ ಒಂದು ಸಾಯಂಕಾಲ ಅವರ ತೋಟದ ಮನೆಗೆ ಕೆಲಸ ಮಾಡಲೆಂದು ಕರೆಸಿಕೊಂಡು ಅತ್ಯಾಚಾರವೆಸಗುತ್ತಾನೆ. ಮುಗ್ದೆ ಭವಾನಿಗೆ ಅವಳ ಚೆಲುವೆ ಮುಳುವಾಗಿ ಕಾಮಾಂಧ ಪುರುಷನೋರ್ವನಿಂದ ಅನ್ಯಾಯ ಮತ್ತು ದ್ರೋಹ ಕೃತ್ಯ ನಡೆಯುತ್ತದೆ. ಇದು ಪುರುಷರು ಯಾವಾಗಲೂ ಹೆಣ್ಣನ್ನು ಕೇವಲ ಲೈಂಗಿಕ ನೋಟದಿಂದಲೇ ನೋಡುವುದನ್ನು ತಿಳಿಸುತ್ತದೆ.

ಭವಾನಿಯಿಂದ ವಿಷಯ ತಿಳಿದ ಕತಾಲಪ್ಪ ಕೇರಿಯ ಮುಖಂಡರೊಂದಿಗೆ ಹಿರಿಯಗೌಡ ಚೆಂಬಸಪ್ಪನ ಬಳಿ ನ್ಯಾಯ ಕೇಳಲು ಹೋಗುತ್ತಾರೆ. ತಪ್ಪು ಒಪ್ಪಿಕೊಂಡ ಈರಪ್ಪಗೌಡ ಭವಾನಿಯನ್ನು ಇಟ್ಟುಕೊಳ್ಳುವುದಾಗಿ ತಿಳಿಸುತ್ತಾನೆ. ಅವಳ ಸುಖ ದುಃಖ ನೋಡಿಕೊಂಡು ಆಸ್ತಿಯಲ್ಲಿ ಪಾಲು ಕೊಡುವುದಾಗಿ ತಿಳಿಸುತ್ತಾನೆ. ಇದಕ್ಕೆ ಕೇರಿಯ ಮುಖಂಡ ಮೈಲಾರಪ್ಪ 'ಭವಾನಿ ಈಗ ನಾಯಿ ಮುಟ್ಟಿದ ಮಡಿಕೆ'ಯಾಗಿದ್ದಾಳೆ (ಗೀತಾ ನಾಗಭೂಷಣ 2006: ಪುಟ 485) ಅವಳನ್ನು ಮದುವೆಯಾಗಲು ಯಾರು ಮುಂದೆ ಬರುವುದಿಲ್ಲ ಆದ್ದರಿಂದ ಗೌಡ ಹೇಳಿದಾಗೆ ಒಪ್ಪಿಕೋ ಎಂದು ಹೇಳುತ್ತಾನೆ. ಈ ತೀರ್ಮಾನ ಎಲ್ಲರಿಗೂ ನ್ಯಾಯವಾಗಿದೆ ಅನಿಸುತ್ತದೆ. ಆದರೆ ಭವಾನಿಗೆ ನಿಜವಾಗಿಯೂ ಅನ್ಯಾಯವಾಗಿರುತ್ತದೆ. ಒಬ್ಬ ಹೆಂಡತಿಗೆ ಇರುವ ಯಾವುದೇ ಸ್ಥಾನಮಾನಗಳು 'ಇಟ್ಟುಕೊಂಡವಳಿ'ಗೆ ಇರುವುದಿಲ್ಲ. ಗೀತಾ ನಾಗಭೂಷಣರವರು ತಿಳಿಸಿದಂತೆ "ಒಬ್ಬನ ಹಕ್ಕಿನ ಹೆಂಡತಿಯಾಗಿ, ತಾಳಿ ಕಟ್ಟಿಸಿಕೊಂಡ ಮಡದಿಯಾಗಿ, ಅವನ ವಂಶ ಬೆಳೆಸುವ ಬೆಳಕಾಗಿ, ಅವನ ಗೃಹಲಕ್ಷ್ಮಿಯಾಗಿ ತಲೆಯೆತ್ತಿ ಸ್ವಾಭಿಮಾನದಿಂದ ಬಾಳಬೇಕಾಗಿದ್ದ ಭವಾನಿ ಸಾಹುಕಾರನೊಬ್ಬನ ಬಯಕೆಗೆ ಬಲಿಯಾಗಿ, ಅವನಲ್ಲಿಯ ಸಂಪತ್ತು, ಅಂತಸ್ತು, ಅಧಿಕಾರಗಳಿಗೆ ಮಣಿದು ಅವನ 'ಇಟ್ಟುಕೊಂಡವಳಾದಳು'" (ಗೀತಾ ನಾಗಭೂಷಣ 2006: ಪುಟ 485). ಇದು ಒಂದು ಹೆಣ್ಣಿಗೆ ದ್ರೋಹ ಬಗೆದಂತೆ, ಏಕೆಂದರೆ ಒಬ್ಬನಿಗೆ ಮಡದಿಯಾದರೆ

ಸಮಾಜದಲ್ಲಿ ಎಲ್ಲ ರೀತಿಯ ಹಕ್ಕು ಭಾದ್ಯತೆಗಳು, ಸ್ಥಾನಮಾನಗಳು ದೊರೆಯುತ್ತವೆ. ಆದರೆ 'ಇಟ್ಟುಕೊಂಡವಳಿ'ಗೆ ಇವು ದೊರೆಯುವುದಿಲ್ಲ. ಜೊತೆಗೆ ಸಮಾಜದ ಕೊಂಕುನುಡಿಗಳು, ಕೆಟ್ಟನೋಟಕ್ಕೆ ಆ ಹೆಣ್ಣು ಗುರಿಯಾಗಬೇಕಾಗುತ್ತದೆ. ಇದೆಲ್ಲ ಆ ಹೆಣ್ಣಿಗೆ ಮಾಡಿದ ಅನ್ಯಾಯ ಮತ್ತು ಅಪಮಾನ ಇಂತಹ ಘಟನೆಗಳು ಹೆಣ್ಣನ್ನು ಅಸಮಾನತೆಯ ಕಂದಕದಲ್ಲೇ ಇರಿಸುತ್ತವೆ.

ಕೆಲವು ವರ್ಷಗಳ ನಂತರ ಈರಣ್ಣಗೌಡ ಅವನ ಕಟ್ಟಿಕೊಂಡ ಹೆಂಡತಿಯ ಮಗಳಿಗೆ ನೆರೆಯೂರಿನ ಗೌಡನ ಮಗನೊಂದಿಗೆ ಭರ್ಜರಿಯಾಗಿ ಮದುವೆ ಮಾಡಿಕೊಡುತ್ತಾನೆ. ಇದೇ ಸಮಯದಲ್ಲಿ ಭವಾನಿಯ ಮಗಳಾದ ಗೌರಿಯ ವಿವಾಹದ ಪ್ರಸ್ತಾಪ ಬಂದಾಗ ಈರಣ್ಣ ಅವಳಿಗೆ ಮದುವೆ ಮಾಡಿಕೊಡುವುದು ಕಷ್ಟ ಕಾರಣ ಗೌರಿಯು ಇಟ್ಟುಕೊಂಡವಳ ಮಗಳಾಗಿರುವುದರಿಂದ ಗೌಡನ ಕುಲದವರಾಗಲಿ, ಭವಾನಿಯ ಕುಲದವರಾಗಲಿ ಮದುವೆ ಮಾಡಿಕೊಳ್ಳಲು ಸಿದ್ಧರಿರುವುದಿಲ್ಲ. ಆದ ಕಾರಣ ತಂದೆಯಾದ ಗೌಡ ಗೌರಿಯನ್ನು ಅವನ ಸಂಬಂಧಿಕನೊಬ್ಬನಿಗೆ 'ಇಟ್ಟುಕೊಂಡವಳಾಗಿ' ಮಾಡುವ ವಿಷಯ ಪ್ರಸ್ತಾಪಿಸುತ್ತಾನೆ. ಈ ವಿಷಯವನ್ನು ಕೇಳಿದ ಭವಾನಿ ತಾನು ಅನುಭವಿಸಿದ ನೋವು, ಅವಮಾನ, ಶೋಷಣೆ, ಪರಕೀಯತೆ, ಸಮಾಜದಲ್ಲಿನ ಹೀನಸ್ಥಾನ ಎಲ್ಲವೂ ಅರಿವಿಗೆ ಬಂದು, ಅವಳ ಮಗಳು ಅದೇ ನೋವಿನ ಜೀವನದಲ್ಲಿ ಸಿಲುಕಬಾರದು ಎಂದು ಯೋಚಿಸುತ್ತಾ ಕ್ರೋಧದಿಂದ ಗೌಡನಿಗೆ ಈ ರೀತಿ ಹೇಳುತ್ತಾಳೆ "ಏನಂದಿ? ಏಯ್ ಸಾವ್ಕಾರಾ.. ಮೈ ಮ್ಯಾಲ ಖಬರ್ ಅದಾನೋ ಇಲ್ಲೋ ನಿನಗೆ ಖಬರಗೇಡಿ? ಗೌರಿ ನಿನ್ನ ಖಾಸಾ ಮಗಳು ಹಳಾ, ನಿನ್ ಬೀಜದ ಬೆಳೆ ಅದಾ ಅದು. ಅಕಿಗಿನೂ ನನ್ನ್ಹಂಗೇ ಒಬ್ಬ ಸಾವ್ಕಾರನ 'ರಂಡಿ' ಮಾಡ್ಬೇಕಂತಿಯೇನೋ? ಹೆಂತಾ ಅಪ್ಪನೋ ನೀನು? ಈ 'ರಂಡಿ'ಯಾಗಿ ನಾ ಉಂಡ ದುಕ್ಕ, ಸಂಕಟ, ಚಿಂತಿ, ಅಪಮಾನಗೋಳೇ ಸಾಕು. ನನ್ನ ಮಗಳಿಗಿನೂ ನಾ ನನ್ನ್ಹಂಗ ಮಾಡಂಗಿಲ್ಲಂತ ತಿಳಿ. ನಿನ್ನೆದಿಮ್ಯಾಲ ಬರ್ದು ಇಟಗೊ, ನನ್ನ ಮಗಳು, ಆದರ ಒಂದು ಗಂಡಿನ ತಾಳಿ ಕಟ್ಟಿದ ಹೆಣ್ತಿ ಆಗ್ತಾಳ ಖರೇ. ಇಲ್ಲಂದ್ರ ತನ್ನ ಹೊಟ್ಟೆ ತಾ ತುಂಬಿಸಿಕೊಂಡು, ಯಾವ ಗಂಡಿಸಿನ ಹಂಗಿನ ಅನ್ನಕ್ಕ ಆಸಿ ಬೀಳಲಾರ್ದೆ ಸೊತಂತ್ರ ಆಗಿ ಬಾಳ್ತಾಳ, ತಿಳಿತೇನು? ಆಕಿ ಎಂದಿಗಿನೂ ಒಬ್ಬ ಗಂಡಿನ 'ಇಟಗೊಂಡ' ಹೆಣ್ಣ ಆಗಂಗಿಲ್ಲೋ ಸಾವ್ಕಾರ" (ಗೀತಾ ನಾಗಭೂಷಣ 2006: ಪುಟ 489). ಮೇಲಿನ ಮಾತುಗಳು ಅವಳ ಪ್ರತಿಭಟನೆಯನ್ನು ತೋರಿಸುತ್ತವೆ. ಗೀತಾ ನಾಗಭೂಷಣರವರು ಭವಾನಿಯ ಮೇಲಿನ ಮಾತುಗಳ ಮುಖಾಂತರ ಯಾವುದೇ ಹೆಣ್ಣು ತನಗಾದ ಅನ್ಯಾಯ, ದೌರ್ಜನ್ಯಗಳನ್ನು ವಿರೋಧಿಸಿ, ಗಂಡಸಿನ ಹಂಗಿಲ್ಲದೆ ಸ್ವತಂತ್ರವಾಗಿ ಬದುಕು ನಡೆಸಲು ಸಶಕ್ತಳಾಗಬೇಕು ಎಂದು ತಿಳಿಸುತ್ತಾರೆ.

ಭವಾನಿಯ ಮುಂದುವರೆದ ಮಾತುಗಳು ಈ ರೀತಿ ಇವೆ "ಹೊಯಿಂದೋ ಸಾವ್ಕಾರಾ.. ನೀವು ರೊಕ್ಕಾ ರುಪ್ಯೆ ಇರೋ ಸಾವ್ಕಾರಗೋಳು ನಮ್ಮಂತಾ ಬಡ ಹೆಂಗಸ್ರಿಗೆ ಮಾಡಾ ಅನ್ಯಾಯ, ಅತ್ಯಾಚಾರ ಕಂಡೂ ಕಂಡೂ ಈಸೋರ್ಸ ನಾ ಎದಿಮ್ಯಾಲ ಬಂಡಿ ಹೇರಿಕೊಂಡು ತಾಳಿಕೊಂಡಿದ್ದೆ. ಆದರ ಅದು, ಹೂಂ.. ನೀ ಮಗಳಿಗಿನೂ ಅನ್ಯಾಯ ಮಾಡ್ತಿ ಅಂದಾಗ ನನ್ನಿಂದ ತಾಳ್ಕೊಳ್ಳಕ್ಕಾಗಂಗಿಲ್ಲ ನೋಡು. ನೀ ನನಗಾ ಮಾತು ಕೊಟ್ಹಾಂಗ ನಿನ್ನ ಆಸ್ತಿದಾಗ ಸರಿ ಪಾಲಾ ನನಗ ಕೊಟ್ಟಿಲ್ಲ. ನಾ ಸುಮ್ಮಕ್ಕಿದ್ದ. ನನಗ ನಿನ್ ಸಂಪತ್ ಬ್ಯಾಡೋ, ನೀ ನಿನ್ ಹೆಣ್ತಿಗೆ ಪಿರೀತಿ ಮಾಡ್ದೋಟು ನನಗ ಮಾಡ್ಲಿಲ್ಲ. ಅದಕ್ಕನೂ ನಾ ಸುಮ್ಮಕ್ಕಿದ್ದೆ. ನಿನ್ನ ಸಂಪತ್ತಿಗಿ ಹುಳಾ ಹತ್ತಲಿ. ನಿನ್ನ ಪಿರೀತಿ ಸಾಯ್ಲಿ.. ಆದರ .. ಆದರ.. ನಿನಗ ಹುಟ್ಟಿದ, ಸ್ವಂತ ನಿನ್ ಮಗಳಿಗೇ ಧೋಕಾ ಮಾಡೋ ಖದೀಮ ನೀನು. ನಾ ಹೊಂಟೆ, ನನ್ನ ಮಗಳಿಗೆ ಶಾರಪಟ್ಟಣಕೊಯ್ದು ಸಾಲಿ ಕಲಿಸ್ತೀನಿ, ಕೂಲಿನಾಲಿ ಮಾಡೆರೆ ಆಕಿಗಿ ಭಾಳ ವಿದ್ಯಾ ಕುಡಸ್ತೀನಿ. ಆಕಿ ಓದಬರ್ಾದರಾಗ ಹ್ಯಾಂಗಿದ್ರೂ ಹುಷಾರ ಹಳಾ, ಮುಂದ ಅಕಿ ವಿದ್ಯಾವಂತಳಾದ ಮ್ಯಾಲ ಯಾಂವರೆ, ಖಂಬೀರ ಗಂಡಸು ಬಂದು ಆಕಿಗೆ ಮದವಿ ಆಗ್ತಾನೆ. ಇಲ್ಲಂದ್ರ ಬ್ಯಾಡ. ಅಕಿ ತಾ ಕಲ್ತ ವಿದ್ಯಾಲಿಂದ ಯಾವ ಸಾವ್ಕಾರನ ಹಂಗೂ ಇರಲಾರ್ದೆ, ಯಾವ ಸಾವ್ಕಾರನ 'ರಂಡಿ' ಆಗಲಾರ್ದೆ ತನ್ನ ಹೊಟ್ಟೆ ತಾ ತುಂಬಸ್ಕೋತಾಳ. ತಿಳಿತಿಲ್ಲೋ.. ಹೊಟ್ಟೇಲಿಂದ ಹುಟ್ಟಿದ ಮಗಳಿಗನೂ ಒಬ್ಬ ಸಾವ್ಕಾರನ 'ರಂಡಿ' ಮಾಡ್ಲಿಕ್ಕ ಹೋಂಟವಾ ನೀ ಹೆಂತಾ ತಂದೀನೋ.. ನಡೀ ಏಳಿಲ್ಲಿಂದ ನಿನ್ ತಂದಿತನಕ್ಕ ಬೆಂಕಿ ಹಾಕಾ.. ನನ್ನ ಮುಂದ ಕೂಡಬ್ಯಾಡ.. ಏಳಿಲ್ಲಿಂದ.. ಹೂಂ.. ಹೋಗು.. ನಡಿ" (ಗೀತಾ ನಾಗಭೂಷಣ 2006: ಪುಟ 489) ಈ ಮಾತುಗಳು ಹೆಣ್ಣು ಸ್ವಾವಲಂಬಿಯಾಗಿ, ಸ್ವತಂತ್ರ ಬಾಳು ನಡೆಸಲು ವಿದ್ಯೆಯ ಅವಶ್ಯಕತೆ ಇರುವುದನ್ನು ತಿಳಿಸುತ್ತವೆ. ಭವಾನಿಯ ಈ ಅರಿವು ಅವಳನ್ನು ಇಟ್ಟುಕೊಂಡಿದ್ದ ಸಾಹುಕಾರನನ್ನು ಎದುರಿಸುವ ಧೈರ್ಯವನ್ನು ಕೊಡುತ್ತದೆ. ಜೊತೆಗೆ ತನ್ನ ಮಗಳಿಗಾಗುವ ಅನ್ಯಾಯವನ್ನು ತಡೆದು ಅವಳಿಗೆ ಸ್ವಾವಲಂಬಿ ಬದುಕು ಕಲ್ಪಿಸಲು ಪ್ರೇರೇಪಿಸುತ್ತದೆ. ಇದಕ್ಕಾಗಿ ಅವಳು ಸಾಹುಕಾರ, ಅವನ ಮನೆ, ಆಸ್ತಿ ಮತ್ತು ಊರನ್ನೇ ಬಿಟ್ಟು ನಗರಕ್ಕೆ ಹೊರಡುತ್ತಾಳೆ. ಮಗಳು ಕೇಳಿದ ಪ್ರಶ್ನೆಗೆ 'ಬೆಳಕಿನ ಕಡೀಗೆ ಹೊಂಟೇವಿ ಮಗಾ.. ಈಸ ದಿನಾ ಎಲ್ಲಾ ಕತ್ತಲದಾಗೆ ಕಾಲ ಕಳದೇವಿ ಕೂಸು, ತಿಳೀಲಿಲ್ಲ.. ಈಗ ನನಗ ಅರುವು ಬಂತು ಮಗಾ .. ನಿನಗಾ ಕರ್ಕೊಂಡು ಬೆಳಕಿನ ಕಡೀಗಿ ಹೊಂಟೇನಿ" (ಗೀತಾ ನಾಗಭೂಷಣ 2006: ಪುಟ 490) ಎಂದು ಹೇಳುತ್ತಾಳೆ.

ಇಲ್ಲಿ ಪುರುಷ ನಡೆಸಿದ ಅತ್ಯಾಚಾರ ಮತ್ತು ಪುರುಷರೇ ತೆಗೆದುಕೊಂಡ ತೀರ್ಮಾನಗಳು ಹೆಣ್ಣಿನ ಬಾಳನ್ನು ಕತ್ತಲೆ ಮಾಡುವುದು ಮತ್ತು ಸಂದರ್ಭ ಬಂದಾಗಲೆಲ್ಲಾ ಪುರುಷರು ಹೆಣ್ಣನ್ನು ಶೋಷಣೆ ಅವಮಾನಗಳಿಗೆ ದೂಕಲು ತಯಾರಾಗುವುದು ತಿಳಿಯುತ್ತದೆ. ಆದರೆ ಹೆಣ್ಣು ಅರಿವು ಮೂಡಿಸಿಕೊಂಡು ತಮಗಾದ ಅನ್ಯಾಯವನ್ನು ಎದುರಿಸಿ, ಸ್ವತಂತ್ರ ಸ್ವಾವಲಂಬಿಯಾಗಿ ಬದುಕಲು ಕಲಿತರೆ ಇಂತಹ ದೌರ್ಜನ್ಯ, ಅನ್ಯಾಯಗಳನ್ನು ತಪ್ಪಿಸಬಹುದಾಗಿರುವುದು ಕಂಡುಬರುತ್ತದೆ.

ಸಮಾಜದಲ್ಲಿ ಪ್ರಚಲಿತದಲ್ಲಿರುವ ರೀತಿ–ನೀತಿ ನಿಯಮಗಳು ಹೆಣ್ಣಿಗೂ ಗಂಡಿಗೂ ಬೇರೆ ಬೇರೆಯಾಗಿದ್ದು, ಅವು ಗಂಡು–ಹೆಣ್ಣಿನ ನಡುವೆ ತಾರತಮ್ಯವನ್ನು ಸೃಷ್ಟಿಸಿವೆ ಮತ್ತು ಈ ನಿಯಮಗಳ ಪಾಲನೆಯಲ್ಲಿ ಹೆಣ್ಣು ತನ್ನ ಬದುಕನ್ನು ಕಳೆದುಕೊಳ್ಳುವುದು ವಾಸ್ತವಿಕ ಅಂಶವಾಗಿದೆ. ಸಮಾಜದ ಸಂಪ್ರದಾಯ ಪದ್ಧತಿಗಳನ್ನು ಪಾಲಿಸುವ ಕುಟುಂಬವೊಂದರ ಹೆಣ್ಣು ತನ್ನದಲ್ಲದ ವ್ಯಕ್ತಿತ್ವವನ್ನು ರೂಪಿಸಿಕೊಂಡು, ಬೇರೆಯವರ ನಿರೀಕ್ಷೆಗಳನ್ನು ಪ್ರಶ್ನಿಸದೆ, ವಿದ್ಯಾವಂತೆಯಾಗಿ ಉದ್ಯೋಗದಲ್ಲಿದ್ದರೂ ಸ್ವಂತಕ್ಕೆ ಯಾವುದೇ ನಿರ್ಧಾರಗಳನ್ನು ತೆಗೆದುಕೊಳ್ಳದೆ ಇತರರ ಇಚ್ಛೆಗನುಗುಣವಾಗಿ ನಡೆದುಕೊಂಡು, ಕೊನೆಗೆ ತನ್ನ ಬದುಕನ್ನು ಗುರುತಿಸಿಕೊಳ್ಳುವ ಚಿತ್ರಣವನ್ನು ನೇಮಿಚಂದ್ರರವರು "ನನ್ನದಲ್ಲದ ಬದುಕಿಗಾಗಿ" ಕಥೆಯಲ್ಲಿ ಚಿತ್ರಿಸಿದ್ದಾರೆ. ಈ ಕಥೆಯ ಸರೋಜ ವಿದ್ಯಾವಂತಳಾಗಿ, ಉದ್ಯೋಗದಲ್ಲಿದ್ದರೂ ಜೀವನದಲ್ಲಿ ಬರುವ ಸನ್ನಿವೇಶಗಳಿಗೆ ಧೈರ್ಯದಿಂದ ಸರಿಯಾದ ನಿರ್ಧಾರವನ್ನು ತೆಗೆದುಕೊಳ್ಳುವ ಸ್ವತಂತ್ರ ವ್ಯಕ್ತಿತ್ವವನ್ನು ಬೆಳೆಸಿಕೊಂಡಿರುವುದಿಲ್ಲ. ಇದಕ್ಕೆ ಕಾರಣ ಹೆಣ್ಣಾದವಳು ಹೇಗೆ ನಡೆದುಕೊಳ್ಳಬೇಕು ಎಂಬ ಹದಿಬದೆಯ ಧರ್ಮದ ಉಪದೇಶವನ್ನಿತ್ತು ಬೆಳೆಸಿದ ಕುಟುಂಬ ಮತ್ತು ಸಮಾಜ. ಎಲ್ಲ ತಿಳುವಳಿಕೆಗಳಿದ್ದರೂ ಮಾತನಾಡದ, ಜೀವನವನ್ನೆದುರಿಸಲು ಬೇಕಾದ ನಿರ್ಧಾರಗಳನ್ನು ತೆಗೆದುಕೊಳ್ಳಲು ವಿಫಲಳಾಗುವ ಸರೋಜ, ತನ್ನ ಜೀವ, ದೇಹ, ಮನಸ್ಸು ತನ್ನದಲ್ಲದ ಬದುಕಿಗಾಗಿ ಬದುಕುತ್ತಿದೆ ಎಂದು ಭಾವಿಸುತ್ತಾಳೆ. ಆದರೆ ಇದನ್ನು ವ್ಯಕ್ತಪಡಿಸುವುದಿಲ್ಲ. ಅಪ್ಪ ಅಮ್ಮನ ಸಂತೋಷಕ್ಕಾಗಿ, ತನ್ನ ದೇಹ ಮನಸ್ಸಿನ ಮೇಲೆ ಅಧಿಕಾರ ಸ್ಥಾಪಿಸುವ ಗಂಡನಿಗಾಗಿ (ಪುರುಷನಿಗೆ) ತನ್ನ ಬದುಕನ್ನು ಕಟ್ಟಿಕೊಳ್ಳಲು ಸಿದ್ಧಳಾಗುವ, ಪ್ರಶ್ನೆಗಳನ್ನು ಒಡ್ಡುವ ಅವಕಾಶಗಳಿದ್ದರೂ, ಮೌಲ್ಯಗಳಿಗೆ ಅಂಟಿಕೊಂಡಿರುವ ಹೆಣ್ಣಿನ ಮನಸ್ಸಿನ ಸ್ಥಿತಿಯನ್ನು ಸರೋಜಳ ಪಾತ್ರ ತೆರೆದಿಡುತ್ತದೆ.

ಸರೋಜಳಿಗೆ, ಅವಳ ಅಭಿಪ್ರಾಯ ಕೇಳದೆ, ಅಪ್ಪ ಅಮ್ಮ ಹುಡುಕಿದ ಅಕ್ಷಯನೊಂದಿಗೆ ಮದುವೆಯಾಗುತ್ತದೆ. ಏನೊಂದನ್ನೂ ಪ್ರಶ್ನಿಸದ ಸರೋಜ ಸಂಸಾರ ನಿಭಾಯಿಸಲು ಸಿದ್ಧಳಾಗುತ್ತಾಳೆ. ಮದುವೆಯ ನಂತರ ನಡೆಯಬೇಕಾದ ಇನ್ನೂ ಕೆಲವು ಶಾಸ್ತ್ರಗಳು ಮುಗಿಯುವ

ಮೊದಲೇ ಅಕ್ಷಯ ಸರೋಜಳೊಂದಿಗೆ ದೇಹಸುಖ ಬಯಸುತ್ತಾನೆ. ಸರೋಜ ಒಪ್ಪದಿದ್ದರೂ ಅಕ್ಷಯ ಮುಂದುವರೆದು ದೇಹಸುಖ ಹೊಂದುತ್ತಾನೆ. ಈ ಸಂಧರ್ಭದಲ್ಲಿ ಅಕ್ಷಯ ಹೇಳುವ "ಅರೆ ಹುಚ್ಚಿ, ಈ ಕಾಲದಲ್ಲಿ ಶಾಸ್ತ್ರ, ಪುರಾಣ ಯಾರು ನೋಡುತ್ತಾರೆ? ಮದುವೆ ಆಗಿಲ್ಲವೆ!" (ನೇಮಿಚಂದ್ರ 2012: ಪುಟ 338) ಎನ್ನುವ ಮಾತುಗಳು ಮದುವೆಯಾದ ಮೇಲೆ ಗಂಡಿಗೆ ಹೆಣ್ಣಿನ ಮೇಲೆ ಸಂಪೂರ್ಣ ಅಧಿಕಾರ ಬರುತ್ತದೆ ಎಂದು ತಿಳಿಸುವ ಹಾಗಿದೆ. ನೇಮಿಚಂದ್ರರವರು ಸರೋಜಳ ಮುಖಾಂತರ ನುಡಿಸುವ "ಅವನ ಮದುವೆ ಆಗಿಲ್ಲವೇ?" ಪ್ರಶ್ನೆಯಲ್ಲಿ ಒಂದು ಬಗೆಯ ನನ್ನನ್ನು ಕೊಂಡುಕೊಂಡಂಥ ಅಧಿಕಾರವಿತ್ತು" (ನೇಮಿಚಂದ್ರ 2012: ಪುಟ 381) ಮಾತುಗಳು ಮೇಲಿನ ಅಂಶವನ್ನು ಧೃಢೀಕರಿಸುತ್ತವೆ. ಇದು ತಾನು ಹೇಳಿದ ಹಾಗೆ ಕೇಳಬೇಕೆಂದು ಅಪೇಕ್ಷಿಸುವ ಗಂಡಿನ ಗುಣವನ್ನು ತೋರಿಸುವುದರ ಜೊತೆಗೆ ಗಂಡು-ಹೆಣ್ಣಿನ ನಡುವಿನ ಅಸಮಾನತೆಯನ್ನು ತೋರಿಸುತ್ತದೆ. ಮದುವೆಯಾದ ಎರಡು ತಿಂಗಳಿಗೆ ಅಕ್ಷಯ ತೀರಿಹೋಗುತ್ತಾನೆ. ವಿಧವೆಯಾದ ಸರೋಜ ಇನ್ನೂ ಕನ್ಯೆಯಾಗೇ ಇರುವಳೆಂದು ಕುಟುಂಬದವರು ಮತ್ತು ಇತರರು ಭಾವಿಸುತ್ತಾರೆ. ಸರೋಜ ಇನ್ನೂ ಕನ್ಯೆಯಾಗೇ ಇರುವ ವಿಷಯವೇ ಬಹಳ ಮುಖ್ಯವಾಗಿ ಅವಳಿಗೆ ಮರುಮದುವೆ ಮಾಡುವ ವಿಚಾರ ಬರುತ್ತದೆ. ಇದು ಸಮಾಜದಲ್ಲಿ ಆಗುತ್ತಿರುವ ಬದಲಾವಣೆಯನ್ನು ತೋರಿಸುತ್ತದೆ. ಆದರೆ ಹೆಣ್ಣಿನ ಕನ್ಯತ್ವಕ್ಕೆ ಪ್ರಾಮುಖ್ಯತೆ ಕೊಡುವುದು ಸಮಾಜದ ಮೌಢ್ಯ ಮೌಲ್ಯಗಳನ್ನು ತೋರಿಸುತ್ತದೆ.

ಸರೋಜಳ ಮರುಮದುವೆಯಲ್ಲಿ ಸಮಾಜ ಹೆಣ್ಣಿನಿಂದ ಏನನ್ನು ನಿರೀಕ್ಷಿಸುತ್ತದೆ ಮತ್ತು ಆ ನಿರೀಕ್ಷೆಗಳನ್ನು ಪೂರ್ಣಗೊಳಿಸಲು ಅವಳು ಎಂತಹ ಕಠಿಣ ಕಾರ್ಯಗಳಿಗೆ ಕೈಹಾಕಿ ತನ್ನತನವನ್ನು ಕಳೆದುಕೊಳ್ಳುತ್ತಾಳೆ ಎಂಬುದನ್ನು ನೇಮಿಚಂದ್ರರವರು ತೋರಿಸಿದ್ದಾರೆ. ಸರೋಜಳ ಮರುಮದುವೆಗೆ ಪ್ರಯತ್ನಿಸಿದಾಗ ವಿಧವೆಯೆಂಬ ಕಾರಣಕ್ಕೆ ಯಾವ ಸಂಬಂಧಗಳೂ ಕೂಡಿ ಬರಲಿಲ್ಲ. ಕೊನೆಗೆ ಅವಳು ಇನ್ನೂ 'ಕನ್ಯೆ' ಎಂಬ ಅಂಶಕ್ಕೆ ಒತ್ತು ಕೊಟ್ಟು ವಿದ್ಯೆ, ಉದ್ಯೋಗಗಳನ್ನು ಸೇರಿಸಿ ಪತ್ರಿಕಾ ಜಾಹೀರಾತು ನೀಡಿದಾಗ ರಮೇಶ ಎಂಬ ಇಂಜಿನಿಯರ್ ವರ ಒಪ್ಪಿ ಮದುವೆಯಾಗಲು ಮುಂದೆ ಬಂದ. ಅವನಿಗೂ ಕೂಡ ಇದು ಎರಡನೇ ಮದುವೆ ಮತ್ತು ಅವನ ಮೊದಲ ಹೆಂಡತಿ ಮತ್ತು ಮಗು ತೀರಿ ಹೋಗಿ ಮೂರು ವರ್ಷಗಳಾಗಿವೆ ಎಂಬ ವಿಷಯ ನಂತರ ತಿಳಿಯುತ್ತದೆ. ಇಲ್ಲಿ ನೇಮಿಚಂದ್ರರವರು ಸಮಾಜ ಹೇಗೆ ಗಂಡು ಮತ್ತು ಹೆಣ್ಣಿಗೆ ಬೇರೆ ಬೇರೆ ನಿಯಮಗಳನ್ನು ಹಾಕಿ ಪಾಲಿಸುತ್ತದೆ ಎಂಬುದನ್ನು ಸರೋಜಳ ಮಾತಿನ ಮುಖಾಂತರ ಪ್ರಕಟಿಸುತ್ತಾರೆ. "ಆದರೆ ಗಂಡು ತಾನೆ! ಮದುವೆಯಾಗಿದ್ದರೇನು? ಇಂದು ಮತ್ತೆ

ಆತ 'ಮೋಸ್ಟ್ ಎಲಿಜಬಲ್ ಬ್ಯಾಚುಲರ್'- ಏಕೆಂದರೆ ಮಕ್ಕಳೇನೂ ಇಲ್ಲವಲ್ಲ ಅವನ ಕಳೆದ ಬದುಕಿನ ಹೆಗ್ಗುರುತಾಗಿ. ಇನ್ನು 'ಕನ್ಯತ್ವ' ಅನ್ನೋದು ಹೆಣ್ಣಿಗಾಗಿ ಹೇಳಿ ಮಾಡಿಸಿದ ಪದಪುಂಜ ತಾನೆ! ಆತನ ತೂಕ ಮದುವೆ ಸಂತೆಯಲ್ಲಿ ಒಂದಿಷ್ಟೂ ತಗ್ಗಿರಲಿಲ್ಲ" (ನೇಮಿಚಂದ್ರ 2012: ಪುಟ 380), ಈ ಮಾತುಗಳು ಮದುವೆಯ ಸಂಧರ್ಭದಲ್ಲಿ ಪುರುಷನಿಗೆ ಯಾವ ಕಟ್ಟಳೆಗಳೂ ಇಲ್ಲದೆ ಕೇವಲ ಹೆಣ್ಣಿಗೆ ಎಲ್ಲಾ ರೀತಿಯ ನಿಯಮ ಮತ್ತು ನಿರೀಕ್ಷೆಗಳನ್ನು ಹಾಕುವುದು ಸಮಾಜದ ಅಸಮಾನತೆಯ ನೀತಿ ನಿಯಮಗಳನ್ನು ತೋರಿಸುತ್ತದೆ. ಮದುವೆಯಾಗಿ ಕೇವಲ ಎರಡು ತಿಂಗಳಿಗೆ ಗಂಡ ತೀರಿಕೊಂಡಿರುವುದು ಮತ್ತು ಗಂಡನ ಮನೆಗೆ ಹೋಗಿಲ್ಲದಿರುವುದರಿಂದ ಆಕೆ ಇನ್ನೂ ಕನ್ಯೆಯಾಗಿಯೇ ಉಳಿದಿದ್ದಾಳೆ ಎಂದು ತಿಳಿದು ರಮೇಶ ಮದುವೆಗೆ ಒಪ್ಪಿಗೆ ಕೊಟ್ಟಿರುತ್ತಾನೆ. ಇದೇ ರೀತಿ ಹೆಣ್ಣು ಕೂಡ ತನ್ನನ್ನು ಮದುವೆಯಾಗುವವನು ಬ್ರಹ್ಮಚಾರಿಯಾಗಿರುವನೇ ಎಂದು ಪ್ರಶ್ನೆ ಮಾಡುವಂತಿಲ್ಲ. ಏಕೆಂದರೆ ಅವನು 'ಗಂಡು' ಎಂಬ ತಾರತಮ್ಯವನ್ನು ನೇಮಿಚಂದ್ರರವರು ತೋರಿಸುತ್ತಾರೆ.

ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಸರೋಜ ಇನ್ನೂ ಕನ್ಯೆಯಾಗಿ ಉಳಿದಿಲ್ಲದಿರುವುದು. ಅಕ್ಷಯ ಗಂಡನೆಂಬ ಅಧಿಕಾರ ಬಳಸಿ, ಮದುವೆಯೆಂಬ ಅನುಮತಿಯೊಡನೆ ಅವನ ಕಾಮದಾಹ ತೀರಿಸಿಕೊಂಡಿದ್ದರಿಂದ ಕನ್ಯತ್ವ ಹೋಗಿದೆ ಎಂದು ಸರೋಜ ತಿಳಿಯುತ್ತಾಳೆ. ಹೀಗಿರುವಾಗ ಸುಳ್ಳುಗಳ ಕೋಟೆ ಕಟ್ಟಿ ರಮೇಶನೊಡನೆ ಹೊಸ ಜೀವನ ಪ್ರಾರಂಭಿಸಬೇಕು; ಮತ್ತೆ ತನ್ನ ದೇಹ, ಮನಸ್ಸಿನ ಮೇಲೆ ಹೊಸ ಅಧಿಕಾರ ಸ್ಥಾಪನೆಯಾಗುತ್ತದೆ ಎಂದು ಸರೋಜ ಚಿಂತಿಸುತ್ತಾಳೆ. ಇದು ನೇಮಿಚಂದ್ರ ಅವರು ಹೆಣ್ಣಿನ ಮನಸ್ಸಿನ ತುಮುಲಗಳನ್ನು ಅರಿತಿರುವುದನ್ನು ತೋರಿಸುತ್ತದೆ.

ಪರಿಸ್ಥಿತಿಯ ಒತ್ತಡದಿಂದ ವಾಸ್ತವ ಜಗತ್ತಿಗೆ ತೆರೆದುಕೊಳ್ಳಲಾರದೆ ಮೌಢ್ಯ, ನಿರೀಕ್ಷೆಗಳಿಗೆ ಬಲಿಯಾಗಿ ತನ್ನತನವನ್ನು ಬಿಟ್ಟುಕೊಡುವುದನ್ನು ಸರೋಜಳ ಮಾತುಗಳು – "ಈ ಒಪ್ಪಿಗೆಗೆ ಬಲು ದೊಡ್ಡ ಕಾರಣ, ಅವರೆಲ್ಲ ನಾ ಕನ್ಯೆ ಎಂದು ತಿಳಿದಿರುವುದು ತಾನೆ. ನನ್ನ ಓದು, ಉದ್ಯೋಗ, ಕಸೂತಿ ಬಗ್ಗೆಯೆಲ್ಲ ಉದಾಸೀನವಾಗಿ ಕುಳಿತ ಆತ ಕೂಡ, ನನಗೆ ಶಾಸ್ತ್ರವಾಗಿರಲಿಲ್ಲ ಎಂಬುದನ್ನು ಹಲವು ವಿಧದಲ್ಲಿ ಕೇಳಿ ಗಟ್ಟಿ ಮಾಡಿಕೊಂಡಿದ್ದ. ಎಂಥ ಹುಚ್ಚು ಜನ! ನನ್ನೆಲ್ಲಾ ಹೊರ-ಒಳಗಿನ ಪ್ರತಿಭೆಗಿಂತ ಒಂದು ಯಕಃಶ್ಚಿತ್ ಕನ್ಯತ್ವದ ಇರುವಿಕೆ ದೊಡ್ಡದಾಗಿದೆ. ಛೇ, ತಿರಸ್ಕರಿಸಿ ಬಿಡಲೇ? ಅಷ್ಟು ದಿಟ್ಟತನವಾದರೂ ತನಗೆಲ್ಲಿದೆ? ನಾನಿಷ್ಟೆಲ್ಲ ವೈಚಾರಿಕವಾಗಿ ಯೋಚಿಸಿದರೂ, ಮನದಲ್ಲಿ ನೂರು ಮಥಿಸಿದರೂ, ಮಿದುಳಲ್ಲಿ ಇವೆಲ್ಲ ಅರ್ಥವಿಲ್ಲದ

ಮೌಲ್ಯಗಳನ್ನು ಗುಡಿಸಿ ಹಾಕುವ ವಿಚಾರಗಳು ಭುಗಿಲೆದ್ದರೂ ನಾನೆಂದು ಅವೊಂದನ್ನೂ ವಾಸ್ತವವಾಗಿಸಲಾರಳು. ಒಂದು ಮನೆ, ಗಂಡ, ಒಂದೆರಡು ಮಕ್ಕಳು, ಸುಭದ್ರ ಬದುಕು ಇಷ್ಟಕ್ಕೆ ತೃಪ್ತಳಾಗುವ ನನಗೆ, ಬದುಕು ತೆರೆದಿಟ್ಟ ಈ ಎರಡನೇ ಅವಕಾಶ ತಪ್ಪಿಹೋಗುವ ಭಯ" (ನೇಮಿಚಂದ್ರ 2012: ಪುಟ 383) ತೋರಿಸುತ್ತವೆ. ಹೆಣ್ಣಿನ ಬದುಕಿಗೆ ಮದುವೆ, ಭದ್ರತೆ ಒದಗಿಸುತ್ತದೆ ಮತ್ತು ಈ ಭದ್ರತೆಯನ್ನು ಪಡೆಯಲು ಹೆಣ್ಣು ತನ್ನ ವ್ಯಕ್ತಿತ್ವವನ್ನೇ ತ್ಯಜಿಸಿ ಪುರುಷ ಸಮಾಜದ ನಿರೀಕ್ಷೆಗಳಿಗನುಸಾರವಾಗಿ ಬಾಳಬೇಕಾದ ಮತ್ತು ಅದನ್ನು ಮೀರಲಾರದ ಪರಿಸ್ಥಿತಿಯನ್ನು ತಿಳಿಸುತ್ತದೆ.

ಸಮಾಜದ ಸಂಪ್ರದಾಯಗಳು, ಆದರ್ಶಗಳು ಮತ್ತು ರೀತಿನೀತಿಗಳಿಗೆ ಒಗ್ಗಿದ ಮನಸ್ಸು ಅದರಲ್ಲಿರುವ ತಾರತಮ್ಯತೆಯನ್ನು ಅರಿಯಬೇಕು. ಮೌಲ್ಯಗಳು ವ್ಯವಸ್ಥೆಗಳು ಗಂಡಿಗೊಂದು ರೀತಿ ಹೆಣ್ಣಿಗೊಂದು ರೀತಿ ಇರುವುದನ್ನು ತಿಳಿದು, ಹೆಣ್ಣಿಗೆ ಸಮಾನ ಅವಕಾಶ, ಸ್ಥಾನಗಳು ದೊರೆತಾಗ ಅವಳೂ ಸುಂದರ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಾಗುವುದು. ಆದರೆ ಸಮಾಜ ಹೆಣ್ಣಿಗೆಂದೇ ಸೃಷ್ಟಿಸಿರುವ ಗುಣಗಳು, ಸಂಪ್ರದಾಯಗಳನ್ನು ನೋಡಿದರೆ ಪ್ರಕೃತಿದತ್ತವಾಗಿಯೇ ಬಂದಿವೆ ಎನ್ನುವಷ್ಟರ ಮಟ್ಟಿಗೆ ಮೌಲ್ಯಗಳು ಒಗ್ಗೂಡಿವೆ. ಇಲ್ಲಿ ಗಂಡಿಗೆ ಯಾವ ನಿಬಂಧನೆಗಳೂ ಇಲ್ಲ ಎನ್ನುವುದನ್ನು ಸರೋಜ – "ಗಂಡಿಗೆ ಮಡಿ, ಮೀಸಲು ಅಂತೆಲ್ಲ ಎಲ್ಲುಂಟು, ಅವೆಲ್ಲ ಪ್ರಕೃತಿಯೇ ಹೆಣ್ಣಿನ ಕಾಲಿಗೆ ತೊಡಿಸಿರೋ ತೊಡಕುಗಳಲ್ವೆ" (ನೇಮಿಚಂದ್ರ 2012: ಪುಟ 385) ಎನ್ನುವ ಮಾತುಗಳಲ್ಲಿ ಹೇಳುತ್ತಾಳೆ. ಇದನ್ನು ಕೇಳಿದ ಲಲ್ಲಿ "ಪ್ರಕೃತಿ ತಪ್ಪನ್ನು ಮನುಷ್ಯ ತಿದ್ದೋಕಾಗಲ್ವೇ? ನೀ ಹೇಳಿ ಬಿಡಬೇಕಿತ್ತು. ನಿಂಗೂ ಮದುವೆ ಆಗಿದೆ, ನೀವೂ ಬ್ರಹ್ಮಚಾರಿಯಾಗೇನು ಇಲ್ಲವಲ್ಲ, ಅಂತ" (ನೇಮಿಚಂದ್ರ 2012: ಪುಟ 385) ಎಂದು ಹೇಳುತ್ತಾಳೆ. ಸರೋಜ ಮತ್ತು ಲಲ್ಲಿಯ ಈ ಮಾತುಗಳಲ್ಲಿ ಹೆಣ್ಣಿಗೆ ಇರುವ ಅಸಮಾನತೆ ಕಾಣುತ್ತದೆ.

ಮದುವೆಯ ನಂತರ ರಮೇಶನ ಪ್ರಶ್ನೆಗಳಿಗೆ ಸುಳ್ಳು ಉತ್ತರ ಹೇಳುತ್ತ ಬಾಳುವುದು ಕಷ್ಟವಾಗುತ್ತದೆ ಎಂಬುದನ್ನು ಅರಿತ ಸರೋಜ, ಸ್ನೇಹಿತೆ ಲಲ್ಲಿಯ ಸಲಹೆಯಂತೆ ಬಾಂಬೆಯಲ್ಲಿ Hymenoplasty ಎಂಬ ಕನ್ಯತ್ವ ಪ್ರತಿಷ್ಠಾಪನಾ ಸರ್ಜರಿ ಮಾಡಿಸಿಕೊಳ್ಳಲು ಹೋಗುತ್ತಾಳೆ. ಇವಳ ಪರಿಸ್ಥಿತಿಯನ್ನು ಕೇಳಿದ ಡಾಕ್ಟರ್ ಸರ್ಜರಿ ಮಾಡಲು ಮೊದಲು ಒಪ್ಪದೆ ಹೆಣ್ಣಿಗೊಂದು ಗಂಡಿಗೊಂದು ನೀತಿ ಮಾಡಿರುವ ಈ ದ್ವಂದ್ವ ನ್ಯಾಯವನ್ನು ಧೈರ್ಯವಾಗಿ ಪ್ರಶ್ನಿಸಿ ಬದುಕನ್ನು ಗಟ್ಟಿಗೊಳಿಸಿಕೊಳ್ಳುವಂತೆ ಸಲಹೆ ನೀಡುತ್ತಾರೆ. ನೇಮಿಚಂದ್ರರವರು ಡಾಕ್ಟರ್ ಮೂಲಕ ಕೇಳಿಸುವ "ನನ್ನ ದೃಷ್ಟಿಯಲ್ಲಿ ಈ ಕನ್ಯಾತ್ವಾನ ಮತ್ತೊಮ್ಮೆ ಹೊಲಿದು ಪ್ರತಿಷ್ಠಾಪಿಸೋ ಈ ಆಪರೇಶನ್ ತೀರ

ಅಸಹ್ಯ ಅಷ್ಟೇ ಅಲ್ಲ, ಅನಾವಶ್ಯಕ ಕೂಡ. ಒಂದು ತೆಳು ಪರದೆಯ ಮೇಲೆ ನಮ್ಮ ಇಂದಿನ ವಿವಾಹಗಳು ನಿಂತಿವೆಯಲ್ಲ ನಗು ಬರುತ್ತೆ. ಆಟ ಓಟ ಅಂತ ಲವಲವಿಕೆಯಿಂದಿರೋ ಇಂದಿನ ಜನಾಂಗದಲ್ಲಿ ಕನ್ಯತ್ವ ಯಾವುದೇ ಕಾರಣಕ್ಕೂ ಕಳಚಿ ಹೋಗಬಹುದು. ಇದನ್ನೇ ಮುಖ್ಯ ಮಾಡೋ ನಮ್ಮ ಯೋಚನೆಗಳು ಮೌಲ್ಯಗಳು ಬದಲಾಗಬೇಕಲ್ಲವೇ? ಗಂಡಿಗಿಲ್ಲದ ಈ ಬಗೆಯ ಶೀಲದ ಹೊರೆ ಹೆಣ್ಣಿಗೇಕೆ ಬರಬೇಕು?" (ನೇಮಿಚಂದ್ರ 2012: ಪುಟ 389) ಪ್ರಶ್ನೆಗಳೂ ಕೂಡ ಗಂಡಿಗೂ ಹೆಣ್ಣಿಗೂ ಇರುವ ಅಸಮಾನತೆಯನ್ನು ತಿಳಿಸುತ್ತವೆ.

ಆದರೆ ಡಾಕ್ಟರರ ಸಲಹೆಯನ್ನು ಒಪ್ಪದೆ, ಇದೊಂದು ವಿವಾಹವಾದರೆ ತನ್ನ ಬಾಳಿಗೆ ಭದ್ರತೆಯೊದಗುತ್ತದೆ ಎಂದು ತಿಳಿದ ಸರೋಜ, ಈಗಿರೋ ಮೌಲ್ಯಗಳ ಗುಡಿಸಿ, ಬದುಕಿಗೆ ವಿಚಾರಗಳಿಗೆ ಮರುಮೌಲ್ಯಮಾಪನ ಮಾಡುವ ಎದೆಗಾರಿಕೆ ತನಗಿಲ್ಲ ಎಂದುಕೊಳ್ಳುತ್ತಾಳೆ. ನಾನು ಬೆಳೆದದ್ದೇ ಅಮ್ಮನ 'ಹದಿಬದೆಯ ಧರ್ಮ'ದ ಉಪದೇಶಗಳ ಹೊತ್ತು. ಓದುವುದಕ್ಕಿಂತ ಅಡಿಗೆ, ಕಸೂತಿ, ಮನೆಗೆಲಸ ಹೆಚ್ಚು ಕಲಿತು ಬೆಳೆದೋಳು. ಅದಕ್ಕೆಲ್ಲ ಅಮ್ಮ ಬಹು ದೊಡ್ಡ ಕಾರಣ ನೀಡುತ್ತಿದ್ದಳು "ನಾಳೆ ಅತ್ತೆ ಮನೆಯಲ್ಲಿ ಸೈ ಅನಿಸಿಕೊಳ್ಳಬೇಕು, ನಿನ್ನಮ್ಮ ಒಂದೂ ಹೇಳ್ಕೊಟ್ಟಿಲ್ಲ ಎಂಬ ಮಾತು ಬರಬಾರದು, ಹದಿನೈದಕ್ಕೆ ಸೀರೆ ಉಟ್ಟು, ಎರಡು ಜಡೆ ಹಾಕಬಾರ್ದು, ಸೆರಗು ಹೊದ್ದೇ ನಡೀಬೇಕು, ಗಂಡುಹುಡುಗರೊಡನೆ ಮಾತನಾಡಬಾರದು, ಎಂಬೆಲ್ಲ ಕಟ್ಟುಪಾಡುಗಳಲ್ಲಿ ಬೆಳೆದ ನನಗೆ ಮನಸ್ಸು ಸ್ವತಂತ್ರವಾದರೂ, ದೇಹ ದಾಸ್ಯ ಕಳಚುವ ಚೈತನ್ಯ ಪಡೆದೇ ಇರಲಿಲ್ಲ. ಹೈಸ್ಕೂಲಿನಲ್ಲಿ ಆಟದ ಬಗ್ಗೆ ಎಷ್ಟು ಆಸಕ್ತಿಯಿತ್ತು. ಥ್ರೋಬಾಲ್ ಟೀಮಿಗೆ ಸೇರ್ತೇನೆ ಅಂದಾಗ ಅಮ್ಮ ರೇಗಿದಳು. ಆ ಮೋಟು ಲಂಗ ಹಾಕ್ಕೊಂಡು, ಕುಣಿಯೋದು, ಹೆಣ್ಣುಮಕ್ಕಳ ಲಕ್ಷಣನಾ? ಅಂತ. ಅಷ್ಟೆ ಏನು 'ದನ ನಡೆದ ಹಾಗೆ ನಡೀಬೇಡ, ಹೆಣ್ಮಕ್ಕಳು ಹೆಜ್ಜೆ ಮೇಲೆ ಹೆಜ್ಜೆ ಹಾಕಿ ನಡೀಬೇಕು' ಎಂಥ ಬಿಗಿದಿಟ್ಟ ಬದುಕು! ಓಡುವಂತಿಲ್ಲ, ಕುಣಿದು ಕುಪ್ಪಳಿಸುವಂತಿಲ್ಲ, ಎಂದೋ ಬರುವ ಗಂಡನಿಗಾಗಿ ಇಂದಿನಿಂದಲೇ ಅಖಂಡ ತಯಾರಿ" (ನೇಮಿಚಂದ್ರ 2012: ಪುಟ 391) ಈ ಮಾತುಗಳು ಹೇಗೆ ಹೆಣ್ಣಿಗೆ ಚಿಕ್ಕಂದಿನಿಂದಲೂ ಹಾಕಿರುವ ಕಟ್ಟುಪಾಡುಗಳು, ಅವಳನ್ನು ಕೇವಲ ಗೃಹಬಂಧನದಲ್ಲಿರುವಂತೆ ಮಾಡುವ ನೀತಿ ನಿಯಮಗಳು ಅವಳ ಸ್ವತಂತ್ರ ಬದುಕನ್ನು ಕಸಿದುಕೊಂಡು ಬಿಗಿದಿಟ್ಟ ಬದುಕನ್ನು ಸೃಷ್ಟಿಸಿರುವುದನ್ನು ಕಾಣಿಸುತ್ತವೆ.

ಸರೋಜ ಮತ್ತು ಲಲ್ಲಿ ಸಂಜೆ ಸಮುದ್ರ ತೀರದಲ್ಲಿ ವಿಹರಿಸುತ್ತಿರುವಾಗ, ಸರೋಜಳಿಗೆ ಕಟ್ಟುಪಾಡು, ನೀತಿ ನಿಯಮಗಳ ಬಂಧನದಲ್ಲಿ ತಾನು ತನ್ನದಲ್ಲದ ಬದುಕನ್ನು ದೂಕುತ್ತಿರುವುದು ಮತ್ತು ಇತರರ ಆಸೆ, ನಿರೀಕ್ಷೆಗಳಿಗೆ ತನ್ನತನವನ್ನು ಬಲಿಕೊಟ್ಟು ಬಾಳುತ್ತಿರುವುದು ತಿಳಿಯುತ್ತದೆ.

ಕೂಡಲೇ ತನಗೆ ಯಾವುದೇ ಸರ್ಜರಿ ಬೇಡ ತನ್ನಿಷ್ಟದಂತೆ ತಾನು ಬದುಕಬೇಕು ಎಂಬ ಧೃಢ ನಿರ್ಧಾರ ತೆಗೆದುಕೊಳ್ಳುತ್ತಾಳೆ. ಈ ಕಥೆಯ ಮುಖಾಂತರ ನೇಮಿಚಂದ್ರರವರು ಹೆಣ್ಣಿಗೆ ವಿದ್ಯೆ ದೊರೆತರೆ ಸಾಲದು, ತನ್ನ ಬದುಕನ್ನು ಕಟ್ಟಿಕೊಳ್ಳುವ, ನಿರ್ವಹಿಸುವ, ಸಂಪ್ರದಾಯ ಮೌಲ್ಯಗಳಿಗೆ ಬಲಿಯಾಗದೆ, ವೈಜ್ಞಾನಿಕವಾಗಿ, ವೈಚಾರಿಕವಾಗಿ ಯೋಚಿಸುವ ಕ್ರಮವನ್ನು ತಿಳಿಸಬೇಕು ಎಂದು ಹೇಳುತ್ತಾರೆ. ಅಲ್ಲದೆ ಗೊಡ್ಡು ಮೌಲ್ಯಗಳನ್ನು ಹೆಣ್ಣಿಗೆ ತೊಡಿಸುವುದನ್ನು ಬಿಟ್ಟು ಗಂಡಿಗೆ ಸಮಾನ ಬದುಕನ್ನು ನಡೆಸಲು ಅವಕಾಶ ಆಗಬೇಕು, ಜೊತೆಗೆ ಹೆಣ್ಣು ಕೂಡ ತನ್ನ ವ್ಯಕ್ತಿತ್ವವನ್ನು ಬೆಳೆಸಿಕೊಂಡು ಜೀವನದಲ್ಲಿ ಬಾಳುವಂತಾಗಬೇಕು. ಇಲ್ಲದೆ ಹೋದರೆ ಯಾವುದೇ ಹೆಣ್ಣಾದರೂ ತನ್ನದಲ್ಲದ ಬದುಕಿಗಾಗಿ ಅಸಮಾನತೆ ಮತ್ತು ನೋವುಗಳಲ್ಲಿ ಜೀವಿಸಬೇಕಾಗುತ್ತದೆ ಎಂಬುದನ್ನು ಚಿತ್ರಿಸಿದ್ದಾರೆ.

ಸ್ತ್ರೀ–ಪುರುಷರ ನಡುವಿನ ಅಸಮಾನತೆಗೆ ಸಮಾಜ ವ್ಯವಸ್ಥೆಯೇ ಮುಖ್ಯ ಕಾರಣವಾಗಿದ್ದು ಕನ್ನಡ ಮಹಿಳಾ ಸಾಹಿತ್ಯವು ಕಥಾಸಾಹಿತ್ಯದ ಮೂಲಕ ಈ ಅಂಶವನ್ನು ಅಭಿವ್ಯಕ್ತಿಸಿದೆ. ಸಾಮಾಜಿಕ ನೆಲೆಯಡಿಯಲ್ಲಿ ವಿಶ್ಲೇಷಿಸಿದ ಕಥೆಗಳು ಸಮಾಜದಲ್ಲಿರುವ ಅಸಮಾನತೆಯ ವಿವಿಧತೆಯನ್ನು ತೋರಿಸಿದೆ. ಸಮಾಜವು ಸಂಪ್ರದಾಯ, ನೀತಿ ನಿಯಮಗಳ ಅಡಿಯಲ್ಲಿ ಹೆಣ್ಣನ್ನು ಶೋಷಿಸಿ, ಮನೆಯ ಸೇವಕಿಯಾಗಿ ಪರಿವರ್ತಿಸುವ ರೀತಿಯನ್ನು ತೋರಿಸುತ್ತಾ, ಹೆಣ್ಣು ಈ ಪ್ರಕ್ರಿಯೆಯನ್ನು ಅರ್ಥ ಮಾಡಿಕೊಂಡು ಬಂಧನದಿಂದ ಹೊರಬರಬೇಕು ಎಂದು ಇಂದಿರಾರವರು ತೋರಿಸುತ್ತಾರೆ. ಅನುಪಮಾ ನಿರಂಜನರವರು ಪುರುಷಾವಲಂಬಿಯಾದ ಹೆಣ್ಣು ತನ್ನ ವ್ಯಕ್ತಿತ್ವವನ್ನು ಕಳೆದುಕೊಂಡು, ಗುಲಾಮಳಾಗಿ, ಪುರುಷನ ದುಶ್ಚಟಗಳ ಪರಿಣಾಮಗಳನ್ನು ಅನುಭವಿಸುತ್ತಾ, ಗುಲಾಮಿತನದಲ್ಲಿ ಜೀವಿಸುವಾಗ ಅಸಮಾನತೆಯಲ್ಲಿಯೇ ಬದುಕಬೇಕಾಗುತ್ತದೆ ಎಂಬುದನ್ನು ತೋರಿಸುತ್ತಾ ಹೆಣ್ಣಿಗೆ ವಿದ್ಯೆ ಮತ್ತು ಉದ್ಯೋಗ ದೊರೆತರೆ ಅವಳು ಪುರುಷನಿಗೆ ಸಮನಾಗಿ ಜೀವಿಸಲು ಸಾಧ್ಯವಾಗುತ್ತದೆ ಎಂದು ತೋರಿಸುತ್ತಾರೆ. ಎಲ್ಲ ಗಂಡಸರು ಸಾಮಾನ್ಯವಾಗಿ ಒಂದೇ, ಅವರ ಉದ್ದೇಶ ಹೆಣ್ಣನ್ನು ತಮ್ಮ ಅಧೀನದಲ್ಲಿಟ್ಟುಕೊಳ್ಳುವುದು. ಮಹಿಳೆಯರ ಸ್ವಾತಂತ್ರ್ಯ, ಸಮಾನತೆ, ಅವಕಾಶಗಳ ಬಗ್ಗೆ ಮಾತನಾಡುವ ಗಂಡಸರು ಹೇಗೆ ಎರಡು ಮುಖಗಳನ್ನು ಪ್ರದರ್ಶಿಸುತ್ತಾ ಸ್ತ್ರೀ–ಪುರುಷರ ನಡುವೆ ಅಸಮಾನತೆಯನ್ನು ಸೃಷ್ಟಿಸುತ್ತಾರೆ ಎಂಬುದನ್ನು ವೀಣಾ ಶಾಂತೇಶ್ವರರು ಚಿತ್ರಿಸುತ್ತಾರೆ. ವೈದೇಹಿಯವರು ತಮ್ಮ ಕಥೆಯಲ್ಲಿ ಯಾವುದೇ ರೀತಿಯ ಸ್ವಾತಂತ್ರ್ಯವಿಲ್ಲದೆ ಪುರುಷಾಧೀನವಾಗಿ ಬಾಳುತ್ತಿದ್ದ ಹೆಂಗಸರು ಸಿನಿಮಾ ನೋಡಲು

ಹೋಗಬೇಕಾದ ತಯಾರಿಯಲ್ಲಿ ತಮ್ಮ ಅವಲಂಬನೆಯಿಂದ ಹೊರಬಂದು ಸ್ವಾತಂತ್ರ್ಯವನ್ನು ಪ್ರಕಟಿಸುವ ಮತ್ತು ಪಡೆಯುವ ರೀತಿಯನ್ನು ಪ್ರಕಟಿಸಿದ್ದಾರೆ.

ಹೆಣ್ಣು ಎಂತಹ ಕಠಿಣ ಪರಿಸ್ಥಿತಿಯಲ್ಲೂ ಎದೆಗುಂದದೆ ದುಡಿದು ಜೀವಿಸುವ ಮನೋಭಾವದವಳಾಗಿರುತ್ತಾಳೆ, ಆದರೆ ಪುರುಷರ ದೌರ್ಜನ್ಯ, ಕ್ರೂರತೆ ಅವಳ ಸರ್ವಸ್ವವನ್ನು ಲೂಟಿ ಮಾಡಿ ಬದುಕನ್ನು ಹಾಳು ಮಾಡುವ ಚಿತ್ರಣವನ್ನು ಕೊಡುತ್ತಾ ಇದಕ್ಕೆ ಕಾರಣ ಸಮಾಜದಲ್ಲಿರುವ ಅಸಮಾನತೆ ಎಂದು ಬಿ.ಟಿ. ಲಲಿತಾ ನಾಯಕ್‌ರವರು ತಿಳಿಸುತ್ತಾರೆ. ಗಂಡನನ್ನು ಕಳೆದುಕೊಂಡ ಹೆಣ್ಣು ತನ್ನ ಎಲ್ಲಾ ಬಯಕೆ ಪ್ರೀತಿಗಳನ್ನು ಮರೆತು ಸಮಾಜ ಹಾಕಿದ ಕಟ್ಟುಪಾಡುಗಳಿಗೆ ಬದ್ಧಳಾಗಿರಬೇಕು, ಇಲ್ಲದಿದ್ದರೆ ಅವಳಿಗೆ ದಾರುಣ ಅಂತ್ಯವೇ ಗತಿ, ಅದು ತಾಯಿಯಾದರೂ ಈ ಪುರುಷ ಸಮಾಜಕ್ಕೆ ಸೈ ಎಂದು ಹೇಳುತ್ತಾ ಸ್ತ್ರೀ-ಪುರುಷರ ನಡುವಿನ ಸಾಮಾಜಿಕ ಅಸಮಾನತೆಯನ್ನು ಬಿ.ಟಿ. ಲಲಿತಾ ನಾಯಕ್‌ರವರು ಕಟ್ಟಿದ್ದಾರೆ. ಸಮಾಜದ ಮೋಸಕ್ಕೆ ಬಲಿಯಾಗಿ ಅತ್ಯಾಚಾರಕ್ಕೊಳಗಾದ ಹೆಣ್ಣೊಬ್ಬಳು ಇಟ್ಟುಕೊಂಡವಳಾಗಿ ಕತ್ತಲಿನ ಜೀವನ ಸವೆಸುವಾಗ ತನ್ನ ಮಗಳಿಗೂ ಅದೇ ಪರಿಸ್ಥಿತಿ ಬರುವ ಸೂಚನೆಯನ್ನು ತಿಳಿದು ಆ ಇಡೀ ಸಮಾಜವನ್ನು ತೊರೆದು ಜೀವನಕ್ಕೆ ಬೇಕಾದ ವಿದ್ಯೆ ಕೊಡಿಸಿ ತನ್ನ ಮಗಳನ್ನು ಬೆಳಕಿನ ಕಡೆಗೆ ಕರೆದುಕೊಂಡು ಹೋಗುವ ಚಿತ್ರಣ ಗೀತಾ ನಾಗಭೂಷಣರವರ ಕಥೆಯಲ್ಲಿ ತಿಳಿದುಬರುತ್ತದೆ. ನೇಮಿಚಂದ್ರ ಅವರು ಹೆಣ್ಣು ವಿದ್ಯೆ, ಉದ್ಯೋಗ ಪಡೆದರೆ ಸಾಲದು, ಬದುಕನ್ನು ಕಟ್ಟಿ ನಿರ್ವಹಿಸಿಕೊಳ್ಳುವ, ಸಂಪ್ರದಾಯಗಳಿಗೆ ಬಲಿಯಾಗದೆ ವೈಚಾರಿಕತೆ ಬೆಳೆಸಿಕೊಂಡು ಗಂಡಿಗೆ ಸಮಾನ ಬದುಕನ್ನು ರೂಪಿಸಿಕೊಳ್ಳಬೇಕು ಎಂದು ತಿಳಿಸುತ್ತಾರೆ.

5.2. ಕೌಟುಂಬಿಕ ನೆಲೆಯಲ್ಲಿ ಸಮಾನತೆ-ಅಸಮಾನತೆ

ಕುಟುಂಬ ಸಮಾಜದ ಅಡಿಗಲ್ಲು, ಆದರೆ ಈ ಕುಟುಂಬ ವ್ಯವಸ್ಥೆಯಲ್ಲಿ ಸ್ತ್ರೀ-ಪುರುಷರ ನಡುವೆ ಅಗಾಧವಾದ ತಾರತಮ್ಯತೆ ಬೆಳೆದಿದ್ದು, ಅದು ಹೆಣ್ಣನ್ನು ಅಧೀನ ಸ್ಥಿತಿಯಲ್ಲಿಡಲು ಸಹಕಾರಿಯಾಗಿದೆ. ಈ ಹಿನ್ನೆಲೆಯಲ್ಲಿ ಮಹಿಳಾ ಸಾಹಿತ್ಯದಲ್ಲಿ ಕೌಟುಂಬಿಕ ನೆಲೆಯಲ್ಲಿ ವ್ಯಕ್ತವಾಗಿರುವ ಸಮಾನತೆ-ಅಸಮಾನತೆಯ ಚಿತ್ರಣವನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಪ್ರಾತಿನಿಧಿಕವಾಗಿ ಎಚ್.ವಿ. ಸಾವಿತ್ರಮ್ಮನವರ 'ಅನಾಥೆ', ವೀಣಾ ಶಾಂತೇಶ್ವರರ 'ತಿರುಗಿ ಹೋದಳು', 'ಬಿಡುಗಡೆ', ವೈದೇಹಿಯವರ 'ಅಸ್ಪೃಶ್ಯರು', ಎಂ.ಎಸ್. ವೇದಾರ 'ಬಿಳಿಯೆಣ್ಣು ಮತ್ತು ದುಂಡವ್ವನ ದೆವ್ವ' ಕಥೆಗಳನ್ನು ವಿಶ್ಲೇಷಣೆಗೆ ಪರಿಗಣಿಸಲಾಗಿದೆ.

ಪುರುಷನ ಸ್ವಾರ್ಥ, ಆಸೆ ಆಕಾಂಕ್ಷೆಗಳಿಂದ ರೂಪುಗೊಂಡ ಅವನ ಸ್ವಭಾವ, ನಡವಳಿಕೆ ಮತ್ತು ಮನೆಯ ವಾತಾವರಣ ಹೇಗೆ ಹೆಣ್ಣಿನ ಬಾಳನ್ನು ನರಕಮಯವಾಗಿಸಿ, ಅನಾಥಳನ್ನಾಗಿ ಮಾಡಿ ಒಂದೇ ಕುಟುಂಬದಲ್ಲಿದ್ದರೂ ಹೆಣ್ಣು ಯಾವ ರೀತಿ ಅಸಮಾನತೆಯಿಂದ ನರಳುತ್ತಾಳೆ ಎಂಬುದನ್ನು ಎಚ್.ವಿ. ಸಾವಿತ್ರಮ್ಮ ಅವರು 'ಅನಾಥೆ' ಕಥೆಯಲ್ಲಿ ಚಿತ್ರಿಸಿದ್ದಾರೆ. ಈ ಕಥೆಯಲ್ಲಿ ಬರುವ ಸುಬ್ಬಮ್ಮ ಬಾಲ್ಯದಲ್ಲಿಯೇ ತಾಯಿಯನ್ನು ಕಳೆದುಕೊಂಡು ತಂದೆಯ ಆರೈಕೆಯಲ್ಲಿ ಬೆಳೆಯುತ್ತಾಳೆ. ಒಳ್ಳೆಯ ಸಂಬಂಧ ಬಂದಿತೆಂದು ಚಿಕ್ಕವಯಸ್ಸಿಗೇ ರಾಮಯ್ಯನೊಂದಿಗೆ ಮದುವೆಯಾಗುತ್ತದೆ. ವಿದ್ಯಾಭ್ಯಾಸದಲ್ಲಿ ಮುಂದಿದ್ದ ರಾಮಯ್ಯ ಹೆಂಡತಿಯ ಮನೆಯ ಸಹಾಯದಿಂದ ಹೆಚ್ಚಿನ ವಿದ್ಯಾಭ್ಯಾಸ ಮಾಡಿ ಉನ್ನತ ಹುದ್ದೆಗೆ ಹೋಗಬೇಕೆಂದು ಬಯಸಿದ್ದವನು. ಆದರೆ ಸುಬ್ಬಮ್ಮನ ತಂದೆಗೆ ಆ ಶಕ್ತಿಯಿರಲಿಲ್ಲವಾದ್ದರಿಂದ ಶಾಲಾ ಮಾಸ್ತರನ ನೌಕರಿಯಲ್ಲಿ ಮುಂದುವರೆಯುತ್ತಾನೆ. ಆದರೆ ಇದು ಸಾಮರ್ಥ್ಯಕ್ಕೆ ಸಮನಾದುದಲ್ಲ ಎಂದು ತಲೆಗೆ ಅಂಟಿಸಿಕೊಂಡ ರಾಮಯ್ಯ ಸುಬ್ಬಮ್ಮನ ಮೇಲೆ ಪ್ರತಿಯೊಂದಕ್ಕೂ ಹರಿಹಾಯ್ದು ಅವಳನ್ನು ಮನೆಯಲ್ಲಿ ಕೇವಲ ಕೆಲಸ ಮಾಡುವ ಆಳಿನ ಸ್ಥಾನಕ್ಕೆ ದೂಡುತ್ತಾನೆ. ಇಲ್ಲಿ ಗಮನಿಸಬೇಕಾದುದೆಂದರೆ ಪುರುಷ ತನ್ನ ಸ್ವಾರ್ಥ ಕೈಗೂಡದಿದ್ದಾಗ ಅದನ್ನು ಹೆಣ್ಣಿನ ಮೇಲೆ ಹಾಕಿ ಅವಳ ಬಾಳನ್ನು ಕಸಿದುಕೊಳ್ಳುವುದು. ರಾಮಯ್ಯ ಸುಬ್ಬಮ್ಮನ ಯಾವ ಮಾತಿಗೂ ಬೆಲೆ ಕೊಡುವುದಿಲ್ಲ ಮತ್ತು ಅಭಿಪ್ರಾಯ ಸ್ವಾತಂತ್ರ್ಯ ಕಿತ್ತುಕೊಂಡು ಅವಳನ್ನು ಯಾವಾಗಲೂ ಭಯದಲ್ಲಿ ಇಟ್ಟಿರುತ್ತಾನೆ. ಇದು ಹೆಣ್ಣನ್ನು ಕೇವಲ ಮನೆಯಲ್ಲಿ ದುಡಿಯುವುದಕ್ಕೆ ಸೀಮಿತಗೊಳಿಸಿರುವುದನ್ನು ತೋರಿಸುತ್ತದೆ. ಇದೇ ಅಸಮಾನತೆ ಅವಳ ದುಡಿತವನ್ನು ಕುಟುಂಬದ ಸದಸ್ಯರು ಪರಿಗಣಿಸುವ ರೀತಿಯಲ್ಲೂ ವ್ಯಕ್ತವಾಗುತ್ತದೆ. ಒಂದು ಬಾರಿ ಅನ್ನಕ್ಕೆ ನೀರು ಹೆಚ್ಚಾಯಿತೆಂದು ರಾಮಯ್ಯ ಊಟ ಮಾಡದೆ ಹೋಗುತ್ತಾನೆ. ಅಲ್ಲಿಯೇ ಇದ್ದ ಅವನ ತಾಯಿ ಶಾರದಮ್ಮ ಸುಬ್ಬಮ್ಮನನ್ನು ಬೈದು, ಹೊರಗೆ ಕೆಲಸಕ್ಕೆ ಹೋಗುವ ಗಂಡನಿಗೆ ಹೊಟ್ಟೆತುಂಬ ಊಟ ಇಲ್ಲ ಎನ್ನುತ್ತಾಳೆ. ಆದರೆ ಸುಬ್ಬಮ್ಮ ಊಟ ಮಾಡಿದಳೇ ಇಲ್ಲವೇ ಎಂದು ಯಾರೂ ಕೇಳುವುದಿಲ್ಲ. ಬೆಳಗಿನಿಂದ ರಾತ್ರಿಯವರೆಗೂ ವಿಶ್ರಾಂತಿಯಿಲ್ಲದೆ ಮನೆಗೆಲಸ ಮಾಡುವ ಸುಬ್ಬಮ್ಮನನ್ನು ಗಮನಿಸದೆ ಶಾರದಮ್ಮ ಕೇವಲ ಮಗನ ದುಡಿತವನ್ನಷ್ಟೆ ಪರಿಗಣಿಸುವುದು ಅಸಮಾನತೆಯನ್ನು ತೋರಿಸುತ್ತದೆ. ಮತ್ತೊಂದು ಅಂಶವೆಂದರೆ ಶಾರದಮ್ಮನೂ ಒಬ್ಬ ಹೆಣ್ಣಾಗಿ ಮತ್ತೊಂದು ಹೆಣ್ಣಿನ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳದೆ ಪುರುಷ ಪ್ರಧಾನ ಸಮಾಜದ ರೀತಿನೀತಿಗಳಿಗೆ ಒಗ್ಗಿ ಹೋಗಿ ಪಾಲಿಸುತ್ತಿರುವುದು. ಇದನ್ನೆಲ್ಲಾ ಗಮನಿಸಿದರೆ ಗಂಡನ ಮನೆಯಲ್ಲಿ ಸುಬ್ಬಮ್ಮ ಅನಾಥವಾಗಿರುವುದು ತಿಳಿಯುತ್ತದೆ. ಎಚ್.ವಿ. ಸಾವಿತ್ರಮ್ಮನವರು ಹೆಣ್ಣು ಹೇಗೆ ತನ್ನ

ಸ್ವಾತಂತ್ರ್ಯ, ಅಭಿಪ್ರಾಯಗಳನ್ನು ಕಳೆದುಕೊಂಡು, ಗಂಡನ ದಬ್ಬಾಳಿಕೆ, ಶೋಷಣೆಗಳಿಗೆ ಒಳಗಾಗಿ ಅನಾಥಳಾಗುತ್ತಾಳೆ ಎಂದು ತೋರಿಸುವುದರ ಜೊತೆಗೆ ಕುಟುಂಬದಲ್ಲಿರುವ ಅಸಮಾನತೆಯ ಚಿತ್ರಣವನ್ನು ಕೊಡುತ್ತಾರೆ.

ಮನೆಯ ವಾತಾವರಣ ಮಕ್ಕಳನ್ನು ಹೇಗೆ ಬೆಳೆಸುತ್ತದೆ ಮತ್ತು ಮಕ್ಕಳೂ ಯಾವ ರೀತಿ ಪುರುಷ ಪ್ರಧಾನ ಸಮಾಜದ ರೀತಿಗಳನ್ನು ತಿಳಿದು ಪಾಲಿಸುತ್ತಾರೆ ಎಂಬುದನ್ನು ಸುಬ್ಬಮ್ಮನ ಮಗನ ಪಾತ್ರದ ಮುಖಾಂತರ ಲೇಖಕರು ತೋರಿಸಿದ್ದಾರೆ. ಮಗ ಹುಟ್ಟಿದ ಮೇಲೆ ತನ್ನ ಪರಿಸ್ಥಿತಿ ಸುಧಾರಿಸಬಹುದು ಎಂದು ಸುಬ್ಬಮ್ಮ ಭಾವಿಸುತ್ತಾಳೆ. ಆದರೆ ಮಗ ಅವನ ತಂದೆ ಮತ್ತು ಅಜ್ಜಿಯ ವರ್ತನೆ ಮತ್ತು ನಡವಳಿಕೆಗಳನ್ನು ಗಮನಿಸುತ್ತಾ ಬೆಳೆದಂತೆ, ಸುಬ್ಬಮ್ಮನ ಸ್ಥಾನ ಮನೆಯಲ್ಲಿ ಕೇವಲ ಕೆಲಸಮಾಡುವುದಕ್ಕೋಸ್ಕರ ಮತ್ತು ತಮ್ಮನ್ನು ನೋಡಿಕೊಳ್ಳುವುದಕ್ಕೆ ಮಾತ್ರ ಎಂದು ತಿಳಿದು ಅದರಂತೆ ನಡೆಯುತ್ತಾನೆ. ತಾಯಿಯನ್ನು ತಿರಸ್ಕಾರದಿಂದ ನೋಡುತ್ತಾ ಅವಳ ಇರುವನ್ನೇ ಪರಿಗಣಿಸುವುದಿಲ್ಲ. ಅವನು ದೊಡ್ಡವನಾಗಿ ಮದುವೆಯಾದ ನಂತರವೂ ತಾಯಿಗೆ ಯಾವುದೇ ಸ್ಥಾನ ನೀಡುವುದಿಲ್ಲ. ರಾಮಯ್ಯ ತೀರಿದ ನಂತರ ಸುಬ್ಬಮ್ಮ ಮಗನ ಜೊತೆ ಅವನ ಮಾವನ ಮನೆಯಲ್ಲೇ ಇರಬೇಕಾಗುತ್ತದೆ. ಇಲ್ಲೂ ಕೂಡ ಮಗ, ಸೊಸೆ ಮತ್ತು ಇತರರ ತಿರಸ್ಕಾರದಲ್ಲೇ ಜೀವಿಸಬೇಕಾಗುತ್ತದೆ. ಅಂದರೆ ಇಲ್ಲೂ ಸುಬ್ಬಮ್ಮ ಅನಾಥಳಾಗುತ್ತಾಳೆ. ಕಥೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಅಸಮಾನತೆಯಿಂದ ಕೂಡಿದ ಈ ಸಮಾಜದಲ್ಲಿ ಹೆಣ್ಣು ತನ್ನ ಅಭಿಪ್ರಾಯ, ಆಯ್ಕೆ, ಜೀವನ ಎಲ್ಲ ಮರೆತು ಗಂಡಿನ ಆಳಾಗಿ, ಜೀವನದ ಪ್ರತಿ ಹಂತದಲ್ಲೂ ಅವಲಂಬಿತವಾಗಿರುವ ಚಿತ್ರಣ ಕಾಣುತ್ತದೆ ಮತ್ತು ಇದೇ ಪರಿಸ್ಥಿತಿ ಕಾರಣಗಳು ಅವಳನ್ನು ಅಸಮಾನತೆಗೆ ನೂಕುತ್ತವೆ.

ವೀಣಾಶಾಂತೇಶ್ವರರವರು ತಮ್ಮ 'ತಿರುಗಿ ಹೋದಳು' ಕಥೆಯಲ್ಲಿ ಎರಡು ವರ್ಗಗಳ ಅಂದರೆ ಬಡವ ಮತ್ತು ಶ್ರೀಮಂತರ ಸ್ತ್ರೀಯರು ಅನುಭವಿಸುವ ಅಸಹಾಯಕತೆ, ಅಸಮಾನತೆ, ದೌರ್ಜನ್ಯ ಮತ್ತು ಅವರು ವ್ಯವಸ್ಥೆಯ ಬಲಿಪಶುವಾಗುವ ಪರಿಸ್ಥಿತಿಯನ್ನು ವಿವರಿಸಿದ್ದಾರೆ. ಕಥೆಯಲ್ಲಿ ಬರುವ ಇಮಾಮ್‌ಬೀ ಮತ್ತು ಹಮೀದಾಬಾನು ಬಡ ಮುಸ್ಲಿಂ ಕುಟುಂಬಕ್ಕೆ ಸೇರಿದ್ದು ಅವರ ಮೇಲಿನ ದೌರ್ಜನ್ಯವನ್ನು ಲೇಖಕಿ ತಿಳಿಸುತ್ತಾರೆ. ಇವರಿಬ್ಬರೂ ಅವಿದ್ಯಾವಂತರೂ, ಆರ್ಥಿಕ ಸ್ವಾವಲಂಬನೆ ಇಲ್ಲದವರೂ ಆಗಿದ್ದು ಬಡವರಾಗಿರುತ್ತಾರೆ. ತಂದೆ ತಾಯಿ ಇಲ್ಲದೆ ಹಮೀದಾ ಬಾನುವನ್ನು ಅಜ್ಜಿಯಾದ ಇಮಾಮ್‌ಬೀ ಸಾಕುತ್ತಿರುತ್ತಾಳೆ. ಇಮಾಮ್‌ಬೀಯ ತಮ್ಮನ ಮನೆಗೆ ಮದುವೆಗೆಂದು ಹೋದ ಹದಿನೆಂಟು ದಾಟಿರದ ಹಮೀದಾಬಾನು ಪುರುಷರ ದೌರ್ಜನ್ಯಕ್ಕೆ

ಒಳಗಾಗುತ್ತಾಳೆ. ಮದುವೆಗೆಂದು ಬಂದಿದ್ದ ಗೌಸನೆಂಬ ಐವತ್ತರ ವಯಸ್ಸಿನ ವ್ಯಕ್ತಿ ಹಮೀದಾಬಾನುವನ್ನು ಮದುವೆಯಾಗುತ್ತಾನೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಹಮೀದಾಬಾನುವನ್ನು ನೋಡಿಕೊಳ್ಳುತ್ತಿದ್ದ ಅಜ್ಜಿ ಇಮಾಮ್‌ಬೀಯ ಮತ್ತು ಹಮೀದಾ ಬಾನುವಿನ ಅಭಿಪ್ರಾಯವನ್ನು ಕೇಳದೆ ಪುರುಷ ಸಮಾಜ ಚಿಕ್ಕವಯಸ್ಸಿನ ಹಮೀದಾಬಾನುವನ್ನು ವಯಸ್ಸಾದ ವ್ಯಕ್ತಿಗೆ ಮದುವೆ ಮಾಡಿಸುತ್ತದೆ.

ಕಥಾ ಲೇಖಕಿ ಇಲ್ಲಿ ಸ್ತ್ರೀ-ಪುರುಷರ ನಡುವಿನ ಅಸಮಾನತೆಯನ್ನು ಮತ್ತು ಸ್ತ್ರೀಯ ವ್ಯಕ್ತಿ ಸ್ವಾತಂತ್ರ್ಯಹರಣ ಮತ್ತು ಅವಳ ಮೇಲೆ ಪುರುಷರು ನಡೆಸುವ ದೌರ್ಜನ್ಯವನ್ನು ಚಿತ್ರಿಸುತ್ತಾರೆ. ಹಮೀದಾಬಾನುವನ್ನು ಗೌಸನು ಮದುವೆಯಾಗಿದ್ದು ಕೇವಲ ಲೈಂಗಿಕ ಆಸೆಯಿಂದಲೇ ಹೊರತು ಬೇರೆ ಯಾವ ಕಾರಣದಿಂದಲೂ ಅಲ್ಲ. ವರ್ಷಕ್ಕೆ ಒಂದು ಮಗುವನ್ನು ಕರುಣಿಸುವುದೇ ಇವನ ಕೆಲಸವಾಗಿ ಹಮೀದಾ ಬಾನುವಿಗೆ ಹತ್ತು ಮಕ್ಕಳಾಗುತ್ತವೆ. ಆದರೆ ಅವನು ಆ ಮಕ್ಕಳನ್ನು ಸಾಕಿ ಬೆಳೆಸುವ ಮತ್ತು ಸಂಸಾರವನ್ನು ನಡೆಸುವ ಯಾವ ಜವಾಬ್ದಾರಿಯನ್ನು ತೆಗೆದುಕೊಳ್ಳದೆ, ಆ ಕಾರ್ಯಗಳು ಮುದುಕಿಯಾದ ಇಮಾಮ್‌ಬೀ ಮತ್ತು ಹಮೀದಾ ಬಾನುವಿನ ಮೇಲೆ ಬೀಳುತ್ತವೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಈಗಾಗಲೇ ಮದುವೆಯಾಗಿ 9 ಮಕ್ಕಳು ಇರುವ ಗೌಸನು ಹಮೀದಾಬಾನುವನ್ನು ಮದುವೆಯಾಗಿ ಅವಳಿಗೆ ದ್ರೋಹವೆಸಗುವುದು ಮತ್ತು ಮದುವೆಯಾದ ಮೇಲೆ ತನ್ನ ಕರ್ತವ್ಯವನ್ನು ನಿರ್ವಹಿಸದೆ ಹೋಗುವುದು. ಒಬ್ಬ ಬಡ ಹೆಣ್ಣು ದೌರ್ಜನ್ಯಕ್ಕೆ ಒಳಗಾಗುವ ರೀತಿಯನ್ನು ಲೇಖಕಿ ಇಲ್ಲಿ ತೋರಿಸಿದ್ದಾರೆ. ಕಥೆಯ ಇನ್ನೊಂದು ಪಾತ್ರವಾದ ಲಕ್ಷ್ಮಿಯ ಮೂಲಕ ಶ್ರೀಮಂತರ ಕುಟುಂಬದಲ್ಲಿ ಜನಿಸಿ, ವಿದ್ಯಾವಂತೆಯಾಗಿ, ಸ್ವಾವಲಂಬಿಯಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯವಿರುವ ಹೆಣ್ಣು ಕೂಡ ಯಾವ ರೀತಿ ದೌರ್ಜನ್ಯಕ್ಕೆ ಒಳಗಾಗಿ ಅಸಮಾನತೆಯನ್ನು, ಅಸಹಾಯಕತೆಯನ್ನು ಅನುಭವಿಸುತ್ತಾಳೆ ಎಂಬುದನ್ನು ವೀಣಾ ಶಾಂತೇಶ್ವರರವರು ಚಿತ್ರಿಸುತ್ತಾರೆ. ಲಕ್ಷ್ಮಿಯು ಎಂ.ಕಾಂ. ಪದವೀಧರೆಯಾಗಿದ್ದು, ಶಾಲಾ ಕಾಲೇಜು ದಿನಗಳಲ್ಲಿ ಸ್ತ್ರೀ-ಸ್ವಾತಂತ್ರ್ಯ, ಸಮಾನತೆ ಮುಂತಾದ ವಿಷಯಗಳ ಬಗ್ಗೆ ಚರ್ಚೆ ಮಾಡುತ್ತಿರುತ್ತಾಳೆ. ಹಮೀದಾಬಾನು ಗೌಸನಿಂದ ಶೋಷಣೆಗೆ ಒಳಗಾಗುವುದನ್ನು ಕಂಡು ಅವಳಿಗೆ ಗೌಸನನ್ನು ತಿರಸ್ಕರಿಸಿ ಬಿಡು ಎಂದು ಸಲಹೆ ನೀಡುತ್ತಿರುತ್ತಾಳೆ. ಆದರೆ ತಾನು ಪ್ರೀತಿಸಿ ಮದುವೆಯಾದ ಗಂಡ ಸುರೇಶ ಕುಲಕರ್ಣಿ ತನ್ನನ್ನು ನಿರ್ಲಕ್ಷಿಸಿ ಸಂಸಾರದ ಜವಾಬ್ದಾರಿ ಹೊರದೆ ಅವನ ಅಕ್ಕನ ಮನೆಯ ಸಮಸ್ಯೆಗಳಿಗೆ ಸ್ಪಂದಿಸುತ್ತಿರುತ್ತಾನೆ. ಲಕ್ಷ್ಮಿಯ ತಮ್ಮನ ಮದುವೆಗೆ ಹಣದ ಅಡಚಣೆಯ ಕಾರಣ ನೀಡಿ ಬರಿಗೈಲಿ ಬಂದಿದ್ದ ತನ್ನ ಗಂಡ, ಅಕ್ಕನ ಮಗನಿಗೆ ಬಹಳ ಬೆಲೆಯ ಮೋಟಾರ್

ಸೈಕಲ್ಲನ್ನು ಕೊಡಿಸಿರುವುದನ್ನು ಕಂಡು ಅವಳು ಕುಪಿತಳಾಗುತ್ತಾಳೆ. ತನಗೆ ಮಗುವಾದಾಗಲೂ ಸಹ ತಂದೆಯಾಗಿ ಮಗುವನ್ನು ನೋಡಲು ಗಂಡ ಬರದಿದ್ದದ್ದು ಅವಳಿಗೆ ಸಾಕಷ್ಟು ನೋವುಂಟುಮಾಡುತ್ತದೆ. ಸುರೇಶ್ ತನ್ನ ಅಕ್ಕನ ಮಕ್ಕಳ ಅಗತ್ಯಗಳನ್ನು ಪೂರೈಸಿ ತನ್ನನ್ನು ನಿರ್ಲಕ್ಷಿಸುತ್ತಿರುವುದು ನನ್ನನ್ನು ಲಗ್ನವಾಗುವ ಬದಲು ರೇಖಾಳನ್ನೇ ಮದುವೆಯಾಗಬೇಕಿತ್ತು ಎಂದು ಲಕ್ಷ್ಮೀ ಹೇಳಿದಾಗ ಅವಳ ಮೇಲೆ ದೌರ್ಜನ್ಯ ನಡೆಸಿ ಮತ್ತು ಕಾಲೇಜು ಕಲಿತ ಹುಡುಗಿಯಾದ್ದರಿಂದ ನಿನ್ನ ನಡತೆ ಸರಿಯಿರುವುದಿಲ್ಲ ಎಂದು ಹೇಳಿದಾಗ ಗಂಡನ ಮನೆ ಬಿಟ್ಟು ಮಗುವಿನೊಡನೆ ತವರು ಮನೆಗೆ ಬರುತ್ತಾಳೆ. "ಆದರೆ ಮುಂದೇನು? ಆ ಗಂಡನೊಡನೆ ಅದೇ ಮನೆಯಲ್ಲಿ ಬಾಳುವುದಾದರೂ ಹೇಗೆ? ನೌಕರಿಯನ್ನು ಬಿಟ್ಟರೆ ಮುಂದಿನ ಬದುಕಿಗೆ ದಾರಿಯೇನು? ವಿಷಯ ತಿಳಿದರೆ ತಂದೆ ತಾಯಿಯರ ಪರಿಸ್ಥಿತಿ ಏನು? ಮಗನಿಗೆ ಅಪ್ಪ ಬೇಡವೇ? ತನಗೆ ಗಂಡ ಬೇಡವೇ? ಮುಂತಾದ ಪ್ರಶ್ನೆಗಳು ಏಳುತ್ತಿರುತ್ತವೆ" (ವೀಣಾ ಶಾಂತೇಶ್ವರ 2006: ಪುಟ 210). ಈ ಎಲ್ಲ ಪ್ರಶ್ನೆಗಳಿಗೆ ಉತ್ತರವಾಗಿ ತಾನು ಗಂಡನ ಮನೆಗೆ ಹೋಗಲು ನಿರ್ಧರಿಸುತ್ತಾಳೆ. ನೋಡಲು ಬಂದ ಹಮೀದಾಳನ್ನು ನೀನ್ಯಾಕೆ ಗಂಡನನ್ನು ಒದ್ದು ಓಡಿಸುವುದಿಲ್ಲ ಎಂದು ಕೇಳುವುದಿಲ್ಲ. ಕಥಾನಾಯಕಿ ಲಕ್ಷ್ಮಿ ಸ್ತ್ರೀ–ಸಮಾನತೆ, ಪುರುಷನ ದೌರ್ಜನ್ಯ, ಶೋಷಣೆ, ಹಿಂಸೆ ಮುಂತಾದವುಗಳನ್ನು ವಿರೋಧಿಸುತ್ತಿದ್ದವಳು, ಈ ಸಾಮಾಜಿಕ ವ್ಯವಸ್ಥೆಯಲ್ಲಿ ವಿದ್ಯಾವಂತೆಯಾಗಿ ಆರ್ಥಿಕ ಸ್ವಾವಲಂಬಿಯಾಗಿದ್ದರೂ ಹೆಣ್ಣು ಒಂಟಿಯಾಗಿ ಬಾಳಲು ಸಾಧ್ಯವಿಲ್ಲ ಎಂದು ಚಿಂತಿಸಿ ಗಂಡನ ಮನೆಗೆ ತಿರುಗಿ ಹೋಗುತ್ತಾಳೆ. ವೀಣಾ ಶಾಂತೇಶ್ವರರವರು ಈ ಕಥೆಯ ಮೂಲಕ ನಮ್ಮ ಸಮಾಜದಲ್ಲಿ ಹೆಣ್ಣು ಯಾವ ರೀತಿ ವ್ಯವಸ್ಥೆಯ ಬಲಿಪಶುವಾಗುತ್ತಾಳೆ ಮತ್ತು ಅಸಮಾನತೆ ಬೆಳೆಯುತ್ತದೆ ಎಂದು ಚಿತ್ರಿಸುತ್ತಾರೆ.

ಕುಟುಂಬದಲ್ಲಿ ಸ್ತ್ರೀ–ಪುರುಷ ಅಥವಾ ಗಂಡ–ಹೆಂಡಿರ ಮಧ್ಯೆ ಇರುವ ಸಮಾನತೆ ಮತ್ತು ಅಸಮಾನತೆಯ ಚಿತ್ರಣವನ್ನು ವೀಣಾ ಶಾಂತೇಶ್ವರರವರು ತಮ್ಮ 'ಬಿಡುಗಡೆ' ಕಥೆಯಲ್ಲಿ ಚಿತ್ರಿಸಿದ್ದಾರೆ. ಕಥೆಯ ಮೊದಲಾರ್ಧದಲ್ಲಿ ಮನೆಯ ಒಳಗಡೆ ಹೆಣ್ಣಿಗೆ ಗೌರವ, ಸಮಾನತೆ, ಅವಳ ಅಭಿಪ್ರಾಯಗಳಿಗೆ ಮನ್ನಣೆ, ಕೆಲಸ ಕಾರ್ಯಗಳಲ್ಲಿ ಸಹಭಾಗಿತನ ಮುಂತಾದುವುಗಳನ್ನು ಚಿತ್ರಿಸಿ ಹೆಂಡತಿಯೆಂದರೆ ಸಮಾನಳು ಎಂದು ಕಥಾನಾಯಕಿಯು (ಸರೋಜ) ಕನಸಿನಲ್ಲಿ ಕಾಣುವಂತೆ ತೋರಿಸುತ್ತಾರೆ. ಆದರೆ ವಾಸ್ತವದಲ್ಲಿ ಅವಳ ಗಂಡ ತೀರಾ ವಿಭಿನ್ನವಾಗಿರುತ್ತಾನೆ. ತಾನು ಗಂಡು ತನ್ನ ವ್ಯವಹಾರದಲ್ಲಿ ಹೆಂಡತಿ ಕೈಹಾಕಬಾರದು, ಅವಳು ತನ್ನ ಕೆಲಸಗಳನ್ನು ಮಾಡುವ ದಾಸಿಯಾಗಿರಬೇಕು ಎಂದು ನಡೆಯುತ್ತಾನೆ. ಸರೋಜಳು ಕೇವಲ ಮನೆ ಮತ್ತು ಆಫೀಸಿನಲ್ಲಿ

ಕೆಲಸ ಮಾಡಿಕೊಂಡು ಅವಳ ಸಂಬಳವನ್ನು ಅವನಿಗೆ ಕೊಡುವುದಷ್ಟೆ ಎಂದು ಹೇಳುತ್ತಾನೆ. ಹೆಣ್ಣು ಹೆಚ್ಚಿಗೆ ವಿದ್ಯಾಭ್ಯಾಸ ಮಾಡಬಾರದು, ಬೇರೆ ಪುರುಷರ ಜೊತೆ ಮಾತನಾಡಬಾರದು, ಹೋಟೆಲಿನಲ್ಲಿ ತಿಂಡಿ-ಊಟ ಮಾಡಬಾರದು, ಅವಳು ಮನೆಗಷ್ಟೆ ಸೀಮಿತ ಎಂದು ಭಾವಿಸಿ ಅದರಂತೆ ನಡೆಯುತ್ತಾನೆ. ಆದರೆ ತಾನು ಅದಕ್ಕೆ ತದ್ವಿರುದ್ಧವಾಗಿ ನಡೆಯುತ್ತಾನೆ. ತನ್ನ ಕುಡಿತ, ಇತರೆ ಹೆಣ್ಣುಗಳೊಡನೆ ಸಹವಾಸ, ಕ್ಲಬ್, ಸ್ನೇಹಿತರೊಡನೆ ಪಾರ್ಟಿ ಮುಂತಾದುವುಗಳನ್ನು ಹೆಂಡತಿ ಕೇಳಬಾರದು ಎಂದು ಹೇಳುತ್ತಾನೆ. ತಾನು ಗಂಡಸು, ಇಡೀ ದಿನ ಹೊರಗೆ ದುಡಿದು ಬರುವವನು ತನ್ನ ರಿಕ್ರಿಯೇಷನ್‌ಗೋಸ್ಕರ ಏನು ಬೇಕಾದರೂ ಮಾಡುತ್ತೇನೆ ಎಂದು ವಾದಿಸುತ್ತಾನೆ. ಸರೋಜಳಿಗೆ, ಮಕ್ಕಳಿಗೆ ಜ್ವರ ಬಂದರೂ ವೈದ್ಯರಿಗೆ ತೋರಿಸುವುದು ಬೇಡ ದುಡ್ಡು ಖರ್ಚಾಗುತ್ತದೆ ಎಂದು ಹೇಳುತ್ತಾನೆ.

ವೀಣಾ ಶಾಂತೇಶ್ವರರವರು ಸರೋಜಳ ಗಂಡನ ಮುಖಾಂತರ ಕುಟುಂಬದಲ್ಲಿ ಹೆಣ್ಣಿನ ಮೇಲಾಗುತ್ತಿರುವ ದಬ್ಬಾಳಿಕೆ, ಅನ್ಯಾಯ, ಅಸಮಾನತೆ ಮುಂತಾದವುಗಳನ್ನು ಚಿತ್ರಿಸುತ್ತಾ, ಹೆಣ್ಣು ಹೇಗೆ ಇವುಗಳನ್ನು ವಿರೋಧಿಸಲಾಗದೇ ನೋಯುತ್ತಿರುತ್ತಾಳೆ ಎಂದು ತೋರಿಸುತ್ತಾರೆ. ಸರೋಜಳ ಅಭಿಪ್ರಾಯಗಳಿಗೆ ಕಿಂಚಿಷ್ಟೂ ಬೆಲೆ ಕೊಡದೆ ಅವಳ ಸಂಬಳವನ್ನೆಲ್ಲಾ ತೆಗೆದುಕೊಂಡು, ಅವಳ ಬೇಕು ಬೇಡಗಳನ್ನು ಈಡೇರಿಸದೆ ಕೇವಲ ಗುಲಾಮಳಾಗಿರುವಂತೆ ಮಾಡಿದ ಗಂಡನನ್ನು ದ್ವೇಷಿಸುತ್ತಿರುತ್ತಾಳೆ. ಸರೋಜಳು ತಾನು ಕನಸಿನಲ್ಲಿ ಕಾಣುವ ಆದರ್ಶ ಗಂಡನಿಗೂ ತನ್ನ ವಾಸ್ತವ ಗಂಡನಿಗೂ ಇರುವ ವ್ಯತ್ಯಾಸವನ್ನು ತಿಳಿಯುತ್ತಾ, ಅವಳ ಗಂಡನ ಸಾವಿನಿಂದ ಅವನ ದಬ್ಬಾಳಿಕೆ, ದೌರ್ಜನ್ಯ, ಶೋಷಣೆ, ಗುಲಾಮಗಿರಿತನಗಳಿಂದ ಬಿಡುಗಡೆ ದೊರೆಯಿತೆಂದು ಸಂತೋಷಗೊಂಡು ಹಾಲು ಕುಡಿಯುತ್ತಾಳೆ. ಈ ಕಥೆಯ ಮೂಲಕ ಹೆಣ್ಣಿನ ಮೇಲೆ ನಡೆಯುವ ದಬ್ಬಾಳಿಕೆ, ದೌರ್ಜನ್ಯ, ಶೋಷಣೆ, ಗುಲಾಮಗಿರಿತನ ನಡೆಸುತ್ತಿರುವ ಪುರುಷ ಪ್ರಧಾನ ಸಮಾಜದ ಸಾವಿನಿಂದ ಮಾತ್ರ ಸ್ತ್ರೀ ಬಿಡುಗಡೆ ಹೊಂದುತ್ತಾಳೆ ಎಂದು ವೀಣಾ ಶಾಂತೇಶ್ವರರವರು ಮಾರ್ಮಿಕವಾಗಿ ತಿಳಿಸುತ್ತಾರೆ.

ಅಸ್ಪೃಶ್ಯತೆ ಅಸಮಾನತೆಯ ಪ್ರತಿರೂಪವಿದ್ದಂತೆ. ಸಮಾಜದಲ್ಲಿ ಜಾತಿಗಳ ಮಧ್ಯೆ ದೊಡ್ಡ ಕಂದಕವನ್ನುಂಟು ಮಾಡಿ, ಕೆಳಜಾತಿಗಳ ಮನುಷ್ಯರನ್ನು ಕನಿಷ್ಟ ಮಾಡಿರುವ ಅಸ್ಪೃಶ್ಯತೆಯನ್ನು ಗಂಡು-ಹೆಣ್ಣಿನ ನಡುವೆ ಇರುವ ಅಸಮಾನತೆಗೆ ಹೋಲಿಸಿ, ಯಾವುದೇ ಜಾತಿಯಲ್ಲಾದರು ಕೂಡ ಹೆಣ್ಣು ಅಸ್ಪೃಶ್ಯತೆಗೆ ಒಳಗಾಗಿದ್ದಾಳೆ ಎಂಬುದನ್ನು ವೈದೇಹಿಯವರು ತಮ್ಮ "ಅಸ್ಪೃಶ್ಯರು" ಕಾದಂಬರಿಯಲ್ಲಿ ವ್ಯಕ್ತಪಡಿಸಿದ್ದಾರೆ. ಈ ಕಥೆಯಲ್ಲಿ ಹೆಣ್ಣಾದವಳು ಸಹನೆಯಿಂದ ಗಂಡನನ್ನು

ಅನುಸರಿಸಬೇಕು ಎನ್ನುವ ಸಿದ್ಧ ನೀತಿಯನ್ನು ಒಪ್ಪಿ ನಡೆಯುವ ಹೆಣ್ಣು ಪಾತ್ರಗಳು ಒಂದು ಕಡೆ ಇದ್ದರೆ ಇದಕ್ಕೆ ವಿರುದ್ಧವಾಗಿ ಗಂಡಿನಂತೆ ನಾವೂ ಮನುಷ್ಯರಲ್ಲವೆ ಎಂದು ಪ್ರತಿಪಾದಿಸುವ ಹಾಗೂ ಗಂಡು ಹೆಣ್ಣನ್ನು ಅಸ್ಪೃಶ್ಯರನ್ನಾಗಿ ಮಾಡಬಾರದು ಎಂದು ಬಯಸುವ ಮತ್ತೊಂದು ಹೆಣ್ಣಿನ ಪಾತ್ರ ಇದೆ. ಈ ಕಾದಂಬರಿಯ ವಾಸುದೇವರಾಯರ ಕುಟುಂಬದಲ್ಲಿ ನಡೆಯುವ ಮಾತುಕತೆಗಳ ಮುಖಾಂತರ ಸಮಾಜದಲ್ಲಿ ಆಚರಣೆಯಲ್ಲಿರುವ ಮೇಲುಕೀಳು ವಿಷಯಗಳ ಜೊತೆಗೆ ವಾಸುದೇವರಾಯರ ಮಕ್ಕಳಾದ ರತ್ನ ಮತ್ತು ಸರೋಜಳ ಪಾತ್ರಗಳ ಮೂಲಕ ಕುಟುಂಬದಲ್ಲಿ ಹೆಣ್ಣಿಗೆ ಆಗುತ್ತಿರುವ ಅನ್ಯಾಯ, ಕಟ್ಟುಪಾಡುಗಳು, ಬಂಧನಗಳು, ಅಭಿಪ್ರಾಯ ವ್ಯಕ್ತಪಡಿಸಲು ಇರುವ ಹಿಂಜರಿಕೆ, ರೀತಿ ರಿವಾಜುಗಳ ವೈರುಧ್ಯಗಳನ್ನು ವೈದೇಹಿಯವರು ಚಿತ್ರಿಸಿದ್ದಾರೆ.

ಬ್ರಾಹ್ಮಣ ಕುಟುಂಬವೊಂದರಲ್ಲಿ ಮಡಿಮೈಲಿಗೆಯಿಂದ ಬದುಕುವ ಗಂಡನಿಗೆ ಎದುರು ಮಾತಾಡದೆ ಬಾಳುವ ರತ್ನನದು ಹೊಂದಾಣಿಕೆಯ ಜೀವನ. ಆದರೆ ಗಂಡನ ದಬ್ಬಾಳಿಕೆಯನ್ನು ಸಹಿಸದೆ, ಹೆಣ್ಣು ನಾಲ್ಕು ಗೋಡೆಗಳಿಗೆ ಸೀಮಿತವಾಗಿರಬಾರದು, ಅಂತಹ ಸಂಧರ್ಭದಲ್ಲಿ ಮದುವೆಯಾಗದೆ ಒಂಟಿಯಾಗಿರುವುದೇ ವಾಸಿ; ಅಥವಾ ಮಾನವೀಯತೆಯಿಂದ ಪ್ರೀತಿಸುವ ಯಾವುದೇ ಜಾತಿಯ ಗಂಡಾದರೂ ಮದುವೆಯಾಗಬಹುದು ಎಂದು ಆಲೋಚಿಸುವ ರತ್ನಳ ತಂಗಿ ಸರೋಜಳ ಜೀವನ. ಇಲ್ಲಿ ಸರೋಜಳ ಪಾತ್ರದ ಮುಖಾಂತರ ಹೆಣ್ಣನ್ನು ಪ್ರೀತಿಸುವ, ಅವಳನ್ನು ಮನುಷ್ಯಳನ್ನಾಗಿ ಕಾಣುವ ಗಂಡುಜೀವಿ ಅವಶ್ಯಕ ಎಂದು ವೈದೇಹಿಯವರು ತಿಳಿಸುತ್ತಾರೆ. ಮನುಷ್ಯರಿಗೆ ವಿದ್ಯೆ, ಅವಕಾಶಗಳು ದೊರೆತರೆ ಎಲ್ಲರೂ ವಿನಯವಂತರಾಗುತ್ತಾರೆ ಎಂದು ನೌಕರಿಯಲ್ಲಿದ್ದ ಕೂಸ ವಾಸುದೇವರಾಯರ ಮನೆಗೆ ಬಂದ ಸಂಧರ್ಭದಲ್ಲಿ ವೈದೇಹಿಯವರು ತಿಳಿಸುವಲ್ಲಿ ಹೆಣ್ಣೂ ಕೂಡ ವಿದ್ಯೆ, ಅವಕಾಶಗಳು ದೊರೆತಾಗ ಪುರುಷನಿಗೆ ಸಮನಾಗಿ ನಿಲ್ಲುತ್ತಾರೆ ಎನ್ನುವ ಆಶಾಭಾವನೆಯನ್ನು ಹೊಂದಿದ್ದಾರೆ ಎಂದು ತಿಳಿಯಬಹುದು. ಜಾತಿಗಳಲ್ಲಿನ ಮೇಲುಕೀಳು ವಿಷಯದ ಚರ್ಚೆಯ ಜೊತೆಗೆ ಕುಟುಂಬದಲ್ಲಿ ಹೆಣ್ಣಿಗೆ ಯಾವ ರೀತಿ ಕಟ್ಟುಕಟ್ಟಳೆಗಳನ್ನು ಹಾಕಿ ನಾಲ್ಕು ಗೋಡೆಗಳ ಒಳಗಡೆ ನಿಲ್ಲಿಸಿದ್ದಾರೆ ಎಂಬುದನ್ನು ಹೆಣ್ಣಿನ ಪಾತ್ರಗಳ ಮುಖಾಂತರವೆ ಸೂಕ್ಷ್ಮವಾಗಿ ವೈದೇಹಿಯವರು ತಿಳಿಸುತ್ತಾರೆ. ಇಂತಹ ಹೆಣ್ಣಿಗೆ ವಿದ್ಯೆ ಮತ್ತು ಸಮಾನ ಅವಕಾಶಗಳು ದೊರೆಯಬೇಕು ಮತ್ತು ಹೆಣ್ಣು ಆ ಕಟ್ಟಳೆಗಳನ್ನು ಮೀರಿ ತನ್ನ ಜೀವನವನ್ನು ರೂಪಿಸಿಕೊಳ್ಳಬೇಕು ಎಂದು ಬಯಸುತ್ತಾರೆ.

ಪಾರ್ತಕ್ಕನ ಪಾತ್ರದ ಮುಖಾಂತರ ಹೆಣ್ಣು ಗಂಡಿನ ಅಧೀನದಲ್ಲಿರಬೇಕು ಎಂದು ತಿಳಿಸುತ್ತಾರೆ. "ಹೇಗೆ ಹೆಂಡತಿಯನ್ನು ಮುಷ್ಠಿಯೊಳಗೆ ಇರಿಸಿಕೊಂಡಿದ್ದಾನೆ! ಹೆಣ್ಣು ಮಕ್ಕಳು ಹಾಗೆ ಗಂಡನ ಮುಷ್ಠಿಗೊಳಗೆ ಇದ್ದರೇನೇ ಒಂದು ಮನೆ ಅಲ್ಲವಾದರೆ ಅದು ಮನೆಯ?" (ವೈದೇಹಿ 2010: ಪುಟ 46) ಎನ್ನುವ ಪಾರ್ತಕ್ಕನ ಮಾತುಗಳು ಹೆಣ್ಣು ಪುರುಷನ ಹಿಡಿತದಲ್ಲಿಯೇ ಇರಬೇಕು ಎಂಬ ಸ್ಥಾಪಿತ ನಿಯಮವನ್ನು ತೋರಿಸುತ್ತವೆ. ಇದು ಹೆಣ್ಣು ಗಂಡಿನ ನಡುವಿನ ಅಸಮಾನತೆಯನ್ನು ಚಿತ್ರಿಸುತ್ತದೆ. ಏಕೆಂದರೆ ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಯ ಅಧೀನದಲ್ಲಿರಬೇಕು ಎಂದು ಹೇಳುವುದು ಅವರಿಬ್ಬರ ನಡುವೆ ಸಮಾನತೆಯಿಲ್ಲ ಎಂದು ತೋರಿಸುತ್ತದೆ. "ಶಿಸ್ತಾಗಿ ಮನೆ ಇಟ್ಟುಕೊಂಡು ಬೇಕಾದ್ದು ಮಾತ್ರ ತಂದು ಹಾಕಿ ಹೆಂಡತಿ ಮಕ್ಕಳನ್ನು ಹದ್ದುಬಸ್ತಿನಲ್ಲಿ ಇಟ್ಟುಕೊಂಡಿರುವ ರತ್ನಳ ಗಂಡ ಸಾವಿರ ಪಾಲಿಗೆ ಬೇಕು" (ವೈದೇಹಿ 2010: ಪುಟ 48) ಎಂದುಕೊಳ್ಳುವ ಗೌರಮ್ಮನ ಪಾತ್ರದ ಮುಖಾಂತರ ಗಂಡ ಹೊಡೆಯಲಿ, ಶೋಷಿಸಲಿ, ಊಟ ತಿಂಡಿಗೆ ಕಡಿಮೆ ಮಾಡಲಿಲ್ಲವೆಂದರೆ ಹೆಣ್ಣಾದವಳು ಅವನಿಗೆ ಹೊಂದಿ ನಡೆಯಬೇಕು, ಸಂಸಾರದ ಗುಟ್ಟು ಬಿಟ್ಟು ಕೊಡಬಾರದು, ಅವನಿಚ್ಛೆಗೆ ಬಾಳಬೇಕು ಎಂಬ ಸಿದ್ಧಸೂತ್ರದ, ಪುರುಷಾಧೀನ ಹೆಣ್ಣಿನ ಜೀವನವನ್ನು ಚಿತ್ರಿಸುತ್ತಾರೆ. ಸ್ವತಂತ್ರ ಆಲೋಚನೆಯಿಲ್ಲದೆ, ಗಂಡನ ಮೇಲೆ ಅವಲಂಬಿಯಾಗಿರುವ ರತ್ನ ಒಂದು ದಿನ ಚಪಾತಿಗೆ ಪಲ್ಯ ಮಾಡಲಿಲ್ಲವೆಂದು ಗಂಡ ತಟ್ಟೆಯನ್ನು ರತ್ನಳ ತಲೆಗೆ ಎಸೆದರೂ ಅವಳು ಕೋಪ ಮಾಡಿಕೊಳ್ಳುವುದಿಲ್ಲ ಮತ್ತು ಗಂಡನನ್ನು ಕೇಳುವುದಿಲ್ಲ. ಈ ಸಂದರ್ಭದಲ್ಲಿ ತಂಗಿ ಸರೋಜಳಿಗೆ ಅವಳು ಹೇಳುವ ಮಾತುಗಳು.– "ಗಂಡನೆಂದರೆ ಏನಂತ ಮಾಡಿದೆ? ಬೇರೆ ದೈವ–ದೇವರು ಬೇಕ? ನಾಳೆ ನಮ್ಮ ಕಷ್ಟಸುಖಕ್ಕೆ ಆಗುವವ ಗಂಡನೇ ಹೊರತು ಬೇರೆ ಯಾರಲ್ಲ. ಹೊರಗೆ ದುಡಿಯುವವರು ಅವರು, ನಾವು ಸಮಾಧಾನದಿಂದಿರಬೇಕು" (ವೈದೇಹಿ 2010: ಪುಟ 48) ಮಾತುಗಳು ಪುರುಷಾವಲಂಬಿ ಹೆಣ್ಣು ಹೇಗೆ ಸಮಾಜದಲ್ಲಿ ತನ್ನನ್ನು ತಾನು ಪುರುಷನ ಅಧೀನತೆಗೆ ಒಳಪಡಿಸಿಕೊಳ್ಳುತ್ತಾಳೆ ಎಂಬುದನ್ನು ವ್ಯಕ್ತಪಡಿಸುತ್ತದೆ. ರತ್ನಳ ಅಭಿಪ್ರಾಯವನ್ನು ಒಪ್ಪದ ಸರೋಜ ಗಂಡನ ವರ್ತನೆಯನ್ನು ಪ್ರತಿಭಟಿಸಬೇಕೆನ್ನುತ್ತಾಳೆ. "ಅವ ಹೊರಗಡೆ ದುಡಿದರೆ ನೀ ಒಳಗಡೆ ದುಡಿಯುವುದಿಲ್ಲವ" (ವೈದೇಹಿ 2010: ಪುಟ 48) ಎಂದು ಹೇಳುತ್ತಾ "ನಾನಾಗಿದ್ದರೆ ಅದೇ ಪ್ಲೇಟನ್ನು ಎತ್ತಿ ಅವರ ಮೇಲೆ ಬೀಸಿಬಿಡುತ್ತಿದ್ದೆ" (ವೈದೇಹಿ 2010: ಪುಟ 50) ಎಂಬ ಪ್ರತಿಭಟನೆಯ ಮಾತನ್ನಾಡುತ್ತಾಳೆ. ಗಂಡಸರು ಏನೇ ಮಾಡಿದರೂ ಅನುಸರಿಸಬೇಕು ಎನ್ನುವ ಮನೋಭಾವವನ್ನು ಕಿತ್ತೊಗೆದು ಗಂಡನ ಅಧೀನತೆಗೆ ಒಳಪಡದೆ ಮಾನವ ಜೀವನವನ್ನು

ಪ್ರೀತಿಸುವ ವ್ಯಕ್ತಿಗಳಾಗಬೇಕು ಎಂಬ ಬಯಕೆಯನ್ನು ಲೇಖಕರು ಸರೋಜಳ ಮುಖಾಂತರ ವ್ಯಕ್ತಪಡಿಸುತ್ತಾರೆ.

ಹೆಣ್ಣಿನ ಶೋಷಣೆ, ಅವಳ ಅಧೀನತೆ, ಪರಾವಲಂಬಿ ಜೀವನವನ್ನು ಅರಿತ ಸರೋಜ "ತಾನೆಣಿಸಿದವ ಸಿಕ್ಕಿದರೆ ಅವ ಯಾವ ಜಾತಿಯವನೇ ಆಗಿರಲಿ. ತಾನು ಆಗುವವಳೇ.. ಅವ ಲಕ್ಷಣವಾಗಿರಬೇಕು, ಅವನಿಗೆ ಬುದ್ಧಿಶಕ್ತಿಯಿರಬೇಕು, ಹೃದಯವೂ, ದೇವರು-ದಿಂಡಿರು ಇತ್ಯಾದಿಗಳನ್ನು ಹಿಡಿಯಲೂ ಆಗದ ಬಿಡಲೂ ಆಗದ ತನ್ನನ್ನು ಅದೆಲ್ಲದರಿಂದ ದೂರ ಕರೆದುಕೊಂಡು ಹೋಗಿ, ಒಟ್ಟು ಬದುಕೇ ಎಷ್ಟು ಚಂದ ಎಂದು ಬದುಕುವುದನ್ನೇ ಪ್ರೀತಿಸುತ್ತಾ, ಗೌರವಿಸುತ್ತಾ ಇರುವಾತನನ್ನು ತಾನು ಮದುವೆಯಾಗಬೇಕು" (ವೈದೇಹಿ 2010: ಪುಟ 50) ಎಂದು ಬಯಸುತ್ತಾಳೆ. ಆದರೆ ಕಟ್ಟುಪಾಡುಗಳನ್ನು ಬಿಡಲಾಗದ ಸರೋಜ "ಯಾವ ಜಾತಿಯವನೆ ಇರಲಿ, ಮದುವೆಯಾಗುವವಳೇ ತಾನು ಅಂತೆಲ್ಲ ಎಣಿಸುತ್ತಿದ್ದೆನಲ್ಲ, ಸಂಧರ್ಭ ಹಾಗೆ ಬಂದರೆ ಅದನ್ನು ಕೃತಿಯಲ್ಲಿ ಇಳಿಸುವ ಧೈರ್ಯ ತನಗುಂಟೇ?' (ವೈದೇಹಿ 2010: ಪುಟ 51) ಎಂದು ತನ್ನನ್ನು ತಾನು ಪ್ರಶ್ನಿಸುವ ದನಿಯಲ್ಲಿ ಮನಸ್ಸಿನಲ್ಲಿ ಪ್ರಶ್ನೆ ಹಾಕಿ ಪ್ರತಿರೋಧ ವ್ಯಕ್ತಪಡಿಸಿದರೂ ಅದನ್ನು ಕಾರ್ಯರೂಪಕ್ಕೆ ತರುವುದು ಕಷ್ಟಸಾಧ್ಯ. ಸಂಪ್ರದಾಯಬದ್ಧ ಸಮಾಜ ಹೆಣ್ಣಿಗೆ ಮುಕ್ತವಾಗಿ ಅಭಿವ್ಯಕ್ತಿಸುವ ಧೈರ್ಯ ಮತ್ತು ಸ್ವಾತಂತ್ರ್ಯವನ್ನು ನೀಡದೆ, ಅವಳ ಊಟಬಟ್ಟೆಯನ್ನು ದೊರಕಿಸುವ ಪುರುಷನನ್ನು ಹುಡುಕಿ ಜೊತೆ ಮಾಡುತ್ತದೆಯೇ ವಿನಃ ಅವಳು ಮನುಷ್ಯಳಾಗಿ ಜೀವಿಸುತ್ತಿದ್ದಾಳೆಯೇ ಇಲ್ಲವೇ ಎಂಬುದನ್ನು ಪರಿಗಣಿಸುವುದಿಲ್ಲ ಎಂದು ತಿಳಿಯುತ್ತದೆ. ಇಂತಹ ಕಟ್ಟುಪಾಡು, ಸಂಪ್ರದಾಯ, ಪುರುಷ ನೀತಿಯ ಸಮಾಜದಲ್ಲಿ ತಾನು ಮದುವೆಯಾಗುವ ಗಂಡು ತನ್ನನ್ನು ಅಸ್ಪೃಶ್ಯಳನ್ನಾಗಿ ಮಾಡಬಾರದು ಎಂದು ಭಾವಿಸುವ ಸರೋಜ "ಆ ಆತ ರತ್ನಕ್ಕನ ಗಂಡನಂತೆ ಯಾವ ಭಾವನೆಗಳಿಗೂ ಸ್ಪಂದಿಸದೆ, ಸ್ಪರ್ಶಿಸದೆ ತನ್ನನ್ನು ಅಸ್ಪೃಶ್ಯಳನ್ನಾಗಿಯೇ ಇರಿಸಿ ತನ್ನ ಯಾವ ಭಾವನೆಗಳಿಗೂ ಅಸ್ಪೃಶ್ಯನಾಗಿಯೇ ಉಳಿದು ತಮ್ಮ ಮಕ್ಕಳೂ ಯಾವ ಉತ್ತಮ ಭಾವನೆಗಳಿಗೂ ಸ್ಪಂದಿಸದೆ ಅಸ್ಪೃಶ್ಯ ಮನದವರಾಗಿಯೇ ಉಳಿಯುವಂತಹ ಸಂಸಾರ ತನ್ನದಾಗಲಿಕ್ಕಿಲ್ಲವಷ್ಟೆ" (ವೈದೇಹಿ 2010: ಪುಟ 51) ಎಂದು ಯೋಚಿಸುತ್ತಾಳೆ. ಈ ಮಾತನ್ನು ಸೂಕ್ಷ್ಮವಾಗಿ ಗಮನಿಸಿದರೆ ವೈದೇಹಿಯವರು ಪುರುಷ ಸಮಾಜ ಹೆಣ್ಣನ್ನು ಅಸ್ಪೃಶ್ಯಳನ್ನಾಗಿ ಮಾಡಿದೆ. ಇಂತಹ ಅಸ್ಪೃಶ್ಯತೆಯಿಂದ ಹೆಣ್ಣನ್ನು ಮುಕ್ತಿಗೊಳಿಸಿ ಮಾನವಳನ್ನಾಗಿ ಪರಿಗಣಿಸಿ ಸಮಾನ ಅವಕಾಶ, ಸಮಾನ ಬಾಳನ್ನು ನೀಡಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ಎಂ.ಎಸ್. ವೇದಾರವರು 'ಬಿಳಿಯೆಣ್ಣು ಮತ್ತು ದುಂಡವ್ವನ ದೆವ್ವ' ಕಥೆಯಲ್ಲಿ ದೌರ್ಜನ್ಯಕ್ಕೊಳಗಾದ ಹೆಣ್ಣೊಬ್ಬಳು ಆ ದೌರ್ಜನ್ಯದಿಂದ ತಪ್ಪಿಸಿಕೊಳ್ಳಲು ತನ್ನ ವರ್ತನೆ, ಮಾನಸಿಕ ಸ್ಥಿತಿಯನ್ನು ಬದಲಾಯಿಸಿಕೊಳ್ಳುವ ಮತ್ತು ಗ್ರಾಮೀಣ ಮಹಿಳೆಯು ಅನ್ಯಾಯವನ್ನು ಪ್ರತಿಭಟಿಸಿ ತಮ್ಮ ಹಕ್ಕುಗಳನ್ನು ಸ್ಥಾಪಿಸಲು ಪ್ರಯತ್ನಿಸುವ ಚಿತ್ರಣವನ್ನು ಕೊಟ್ಟಿದ್ದಾರೆ. ಈ ಕಥೆಯಲ್ಲಿ ಕೃಷ್ಣೇಗೌಡ ಸ್ವೇಚ್ಛಾಚಾರಿಯಾಗಿ ಬೇಜವಾಬ್ದಾರಿಯಿಂದ ಜೀವಿಸುತ್ತಿರುತ್ತಾನೆ. ಇಂತಹ ವ್ಯಕ್ತಿಗೆ ಮಂಜುಳಾ ಎಂಬ ಸುಂದರ ಕನ್ಯೆಯೊಡನೆ ವಿವಾಹವಾಗುತ್ತದೆ. ಬಿಳಿಯಾಗಿದ್ದ ಮಂಜುಳಾಳನ್ನು ನೋಡಿದ ಕೃಷ್ಣೇಗೌಡನ ಊರಿನ ಜನ 'ಬಿಳಿಯೆಣ್ಣು' ಎಂದು ಕರೆಯುತ್ತಾರೆ. ಮದುವೆಯಾದ ಮೇಲೆ ಕೃಷ್ಣೇಗೌಡ ಬದಲಾಗದೆ ತನ್ನ ಹಳೇ ಸ್ವೇಚ್ಛಾಜೀವನವನ್ನು ಮುಂದುವರೆಸುತ್ತಾನೆ. ಜೊತೆಗೆ ಬಿಳಿಯೆಣ್ಣಿನ ಮೇಲೆ ತನ್ನ ಪುರುಷತ್ವವನ್ನು ಸ್ಥಾಪಿಸುವಲ್ಲಿ ಎಲ್ಲಾ ರೀತಿಯ ದೌರ್ಜನ್ಯ ಮತ್ತು ಅನ್ಯಾಯಗಳನ್ನು ಮಾಡುತ್ತಿರುತ್ತಾನೆ. ಇವನ ಅನ್ಯಾಯ ದ್ರೋಹಗಳನ್ನು ಕಂಡ ಮಂಜುಳಾ ತತ್ತರಿಸಿ ಹೋಗುತ್ತಾಳೆ. ಅವಳ ಸಹಾಯಕ್ಕೆ ನಿಲ್ಲುವುದು ಅವಳ ಅತ್ತೆ ಮತ್ತು ಅತ್ತಿಗೆ ಶಿವಕ್ಕ. ಗಂಡನ ಆಟಾಟೋಪಕ್ಕೆ ಹೆದರಿದ ಬಿಳಿಯೆಣ್ಣು ಕಾಯಿಲೆಗೊಳಗಾಗುತ್ತಾ ಬಿಳಿಚಿಕೊಳ್ಳುತ್ತಿದ್ದಳು. ಇದು ಹೆಣ್ಣು ಗಂಡಿನ ದೌರ್ಜನ್ಯಕ್ಕೆ ಒಳಗಾದಾಗ ಅವಳ ಆರೋಗ್ಯದ ಮೇಲೆ ಆಗುವ ದುಷ್ಪರಿಣಾಮಗಳನ್ನು ತೋರಿಸುತ್ತದೆ. ಇಂತಹ ಸಂದರ್ಭದಲ್ಲಿ ಕೃಷ್ಣೇಗೌಡನ ಅಕ್ಕ ಶಿವಕ್ಕ ಊರಿಗೆ ಬರುತ್ತಾಳೆ. ಬಿಳಿಯೆಣ್ಣಿನ ಪರಿಸ್ಥಿತಿ ಕಂಡು ತಮ್ಮ ಮತ್ತು ತಾಯಿ ಇಬ್ಬರಿಗೂ ಛೀಮಾರಿ ಹಾಕುತ್ತಾಳೆ. ಇದನ್ನು ಸಹಿಸದ ಕೃಷ್ಣೇಗೌಡ "ನಿಂಗ್ಯಾಕೆ ಇಲ್ಲದ್ ವುಸಾಬರಿ, ನಮ್ಮಟ್ಟಿ ಹೆಣ್ಣಾ ಯೆಂಗಾರಾ ಮಾಡ್ತೀವಿ, ನಿನ್ನ ವಗ್ತನ ಮಾಡ್ಕ ಹ್ವಾಗ್" (ವೇದಾ ಎಂ.ಎಸ್. 2010: ಪುಟ 404) ಎಂದು ಹೇಳುತ್ತಾನೆ. ಆಗ ಶಿವಕ್ಕ ಹೇಳುವ "..ಇದು ನಮ್ಮಪ್ಪನ ಹಟ್ಟಿ ಕಲಾ, ಹ್ವಾಗು ಅನ್ನಾಕೆ ನಿಂಗೆ ಅಕ್ಕಿಲ್ಲ. ಇವತ್‌ಗೂ ನಾ ಯಾನಾರ ಪಾಲು ಪರೀಕತ್ತು ಅಂತ ಹೊಂಟ್ರೆ, ಇಲ್ಲೆಯಾ ಅಡ್ಡಗ್ವಾಡೆ ಆಕ್ಕಂಡು ಕುಂತ್‌ಬುಡಾ ಅಕ್ಕು ನಂಗದೆ" (ವೇದಾ ಎಂ.ಎಸ್. 2010: ಪುಟ 404) ಮಾತುಗಳು ಹಳ್ಳಿಯ ಹೆಣ್ಣುಗಳು ತಮ್ಮ ಹಕ್ಕು ಅಧಿಕಾರಗಳ ಬಗ್ಗೆ ಅರಿವು ಬೆಳೆಸಿಕೊಳ್ಳುತ್ತಿರುವುದನ್ನು ತಿಳಿಸುತ್ತದೆ. ಜೊತೆಗೆ ಸಮಾಜದ ಮಾತಾದ 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗು' ಎಂಬುದನ್ನು ಧಿಕ್ಕರಿಸಿ ತಂದೆತಾಯಿಯ ಮನೆಯಲ್ಲೂ ತನಗೆ ಅಧಿಕಾರವಿದೆ ಮತ್ತು ತನ್ನ ಪಾಲಿನ ಆಸ್ತಿಯನ್ನು ಕೇಳಬಹುದು ಎಂದು ಚಿಂತಿಸುವ ಮತ್ತು ತನ್ನ ಯೋಚನೆಯನ್ನು ವ್ಯಕ್ತಪಡಿಸುವ ಧೈರ್ಯ ತೋರುವ ಪಾತ್ರಗಳು ಲೇಖಕರು ಬದಲಾಗುತ್ತಿರುವ ಮಹಿಳಾ ಮನೋಸ್ಥೈರ್ಯವನ್ನು ಗ್ರಹಿಸಿರುವುದನ್ನು ತೋರಿಸುತ್ತದೆ.

ಕೃಷ್ಣೇಗೌಡನನ್ನು ಬಾಯ್ಮುಚ್ಚಿಸಿದ ಶಿವಕ್ಕ ತಾಯಿಯನ್ನು ಕುರಿತು ಹೇಳುವ ಬುದ್ಧಿವಾದ "ನೀ ತಾನಾ ಯಾನವ್ವ, ಈಗ್ಲಾರಾ ವಸಿ ನಿನ್ನ ಸೊಸಿ ಬೆನ್ ಕಟ್‌ಬ್ಯಾಕ್ ಕವ್ವಾ ಯೆದ್ರುಕಂಡ್ ಕುಂತ್ರ ಹೆಂಗ ಅಂತೀನಿ. ನೀವಿಬ್ರೂ ವಂದಾದ್ರೆ ಅಂವಾ ಏನ್ ತರ್ಕಳ್ಳಕ್ಕಾದು ಅಂತೀನಿ" (ವೇದಾ ಎಂ.ಎಸ್. 2010: ಪುಟ 405) ಅವಳ ತಾಯಿಗೆ ಮಗನನ್ನು ಎದುರಿಸಲು ಧೈರ್ಯ ತಂದುಕೊಡುತ್ತದೆ. ಅಂದಿನಿಂದ ಅವಳು ಮಗನನ್ನು ಎದುರಿಸುತ್ತಾ ಸೊಸೆಗೆ ಧೈರ್ಯ ತುಂಬಲು ಪ್ರಯತ್ನಿಸುತ್ತಾಳೆ. ಬಿಳಿಯೆಣ್ಣನ್ನು ಸಭೆ ಸಮಾರಂಭಗಳಿಗೆ ಕರೆದುಕೊಂಡು ಹೋಗಿ ಜನಗಳ ಮಧ್ಯೆ ಬೆರೆಯುವಂತೆ ಮಾಡುತ್ತಾಳೆ. ಇದು ಒಂದು ಹೆಣ್ಣು ಮತ್ತೊಂದು ಹೆಣ್ಣನ್ನು ಶೋಷಣೆಯಿಂದ ಮುಕ್ತಗೊಳಿಸಲು ನಡೆಸುವ ಹೋರಾಟದ ಸಂಕೇತವೆನ್ನಬಹುದು. ವೇದಾರವರು ಹಳ್ಳಿಯ ಮಹಿಳೆಯರ ಪಾತ್ರದ ಮುಖಾಂತರ ಬದಲಾವಣೆಯ ಗಾಳಿಯನ್ನು ತೋರಿಸಿದ್ದಾರೆ. ಈ ಸಮಾಜದಲ್ಲಿ ಹೆಣ್ಣಿಗೆ ಯಾವಾಗಲೂ ನೆಮ್ಮದಿಯಿಲ್ಲ, ಏನಿದ್ದರೂ ಅವಳು ಶೋಷಣೆಗೆ ಒಳಗಾಗುತ್ತಲೇ ಇದ್ದಾಳೆ ಎಂಬುದನ್ನು ಲೇಖಕಿ ಮಹಾಭಾರತದ ದ್ರೌಪದಿಯ ವಸ್ತ್ರಾಪಹರಣ ಕಥಾ ಪ್ರಸಂಗವನ್ನು ತೆಗೆದುಕೊಂಡು ಬಿಳಿಯೆಣ್ಣಿನ ಅತ್ತೆಯ ಮೂಲಕ ಈ ರೀತಿ ತಿಳಿಸುತ್ತಾರೆ– "ಅಲ್ಲಾ, ಈ ಗಂಡಸ್ರು, ಯಾವ ಕಾಲದಾಗೆ, ಯಾವ ಯೆಣ್ಣ, ನೆಮ್ದಿಯಾಗಿ ಬಾಳ್ಸೋರೆ ನೋಡಾ ತಾಯಿ? ಪಾಂಡೋರಂತ ಗಂಡುಸ್ರೆ ಹೆಡ್ತಿಯ ಜೂಜಾಟಕ್ಕೆ ಬಾಜಿ ಕಟ್‌ಬಿಟ್ರು, ತಮ್ ಯೆದುರ್ಗೆಯಾ ತಮ್ಮ ಹೆಡ್ತಿಯ ಸೀರ್‍ಯ ಸೆಳೀತಾ ಇದ್ರ ಧರ್ಮಕರ್ಮಾಂತ ಮೂಗ್ ಮುಚ್ಕಂಡ್ ಕುಂತ್‌ಗಂಡ್ರು" (ವೇದಾ ಎಂ.ಎಸ್. 2010: ಪುಟ 409). ಇದು ಎಲ್ಲ ಕಾಲದಲ್ಲೂ ಪುರುಷರು ಹೆಣ್ಣನ್ನು ತಮ್ಮ ಸ್ವಾರ್ಥಕ್ಕೆ ಮತ್ತು ಅನುಕೂಲತೆಗೆ ತಕ್ಕಂತೆ ಬಳಸಿಕೊಂಡಿದ್ದಾರೆ ಎಂಬುದನ್ನು ಸೂಚಿಸುವುದರ ಜೊತೆಗೆ ಹೆಣ್ಣನ್ನು ಗುಲಾಮಳಾಗಿ ನಡೆಸಿಕೊಂಡಿರುವುದರ ಉದಾಹರಣೆಯಾಗುತ್ತದೆ. ಈ ಘಟನೆಗೆ ಸಂಬಂಧಿಸಿದಂತೆ ಬಿಳಿಯೆಣ್ಣಿನ ಅತ್ತೆ ತನ್ನ ಊರಿನಲ್ಲಿ ನಡೆದ ಮತ್ತೊಂದು ಘಟನೆಯನ್ನು ನಿದರ್ಶನವಾಗಿ ಕೊಡುತ್ತಾಳೆ. ಆ ಊರಿನ ವ್ಯಕ್ತಿಯೊಬ್ಬ ಉಗಾದಿ ಹಬ್ಬದ ಮಾರನೇ ದಿನ ಜೂಜಾಡುವಾಗ ತನ್ನ ಬಳಿಯಿದ್ದ ಹಣ ಒಡವೆಗಳನ್ನೆಲ್ಲಾ ಕಳೆದುಕೊಳ್ಳುತ್ತಾನೆ. ಜೂಜು ಆಡಲು ಬೇರೆಯವರಿಂದ ಸಾಲ ಕೇಳಿದಾಗ ಯಾರೋ ಒಬ್ಬ ನಿನ್ನ ಹೆಂಡತಿಯನ್ನು ಹರಾಜು ಹಾಕಿ ಬಂದ ಹಣದಿಂದ ಜೂಜಾಡು ಎನ್ನುತ್ತಾನೆ. ಈ ಘಟನೆ ಪುರುಷನು ತನ್ನ ಹೆಂಡತಿಯನ್ನು ಒಬ್ಬ ವ್ಯಕ್ತಿಯನ್ನಾಗಿ ಪರಿಗಣಿಸದೆ ಹಿಂದಿನ ಕಾಲದಲ್ಲಿ ಗುಲಾಮರನ್ನು ಹರಾಜು ಹಾಕಿದ ರೀತಿ ಹರಾಜು ಹಾಕಲು ಮುಂದಾಗುವ ಪುರುಷ ಸ್ವಭಾವವನ್ನು ತೋರಿಸುತ್ತದೆ. ಇದು ಗಂಡು–ಹೆಣ್ಣಿನ ಮಧ್ಯೆ ಇರುವ ಅಪಾರ ಅಂತರವನ್ನು ತೋರಿಸುತ್ತದೆ. ಗಂಡು ತನ್ನ ದಬ್ಬಾಳಿಕೆಯಿಂದ ಹೆಣ್ಣನ್ನು ಶೋಷಿಸುವುದು, ಅವಳನ್ನು

ಮನುಷ್ಯಳಾಗಿ ಕಾಣದೆ, ಅವಳ ಭಾವನೆ ಅಭಿಪ್ರಾಯಗಳನ್ನು ಕೇಳದೆ, ಒಂದು ಪ್ರಾಣಿಯನ್ನು ಮಾರುವ ರೀತಿ ಹೆಂಡತಿಯನ್ನು ಮಾರುವುದು ಅಸಮಾನತೆಯ ಪ್ರತೀಕವಾಗುವುದನ್ನು ವೇದಾರವರು ಚಿತ್ರಿಸಿದ್ದಾರೆ. ಗಂಡನ ದಬ್ಬಾಳಿಕೆಯ ಚಿತ್ರಣದೊಂದಿಗೆ ಮತ್ತೊಬ್ಬ ಪುರುಷ ಹರಾಜು ಹಾಕಲು ತಂದ ಹೆಣ್ಣಿನ ಬಗ್ಗೆ ತೋರುವ ಕಾಳಜಿ, ಸಹಾಯ ಪುರುಷಕುಲವೆಲ್ಲಾ ಒಂದೇ ರೀತಿ ಇಲ್ಲ ಎಂಬುದನ್ನು ತೋರಿಸುತ್ತದೆ. ಇದು ವೇದಾರವರ ಕಥಾಸಾಹಿತ್ಯದ ವಿಶೇಷವಾಗುತ್ತದೆ. ಏಕೆಂದರೆ ಎಲ್ಲ ಪುರುಷರು ಒಂದೇ ರೀತಿ ಎಂದು ಹೇಳುವ ಪ್ರತೀತಿಯನ್ನು ಬಿಟ್ಟು ಪುರುಷರಲ್ಲಿಯೂ ಹೆಣ್ಣಿನ ಬಗ್ಗೆ ಮಾನವೀಯ ಕಾಳಜಿ ಹೊಂದಿರುವ, ಸಮಾನವಾಗಿ ಸ್ವೀಕರಿಸುವ ಜನರಿದ್ದಾರೆ ಎಂಬುದನ್ನು ದೌರ್ಜನ್ಯಕ್ಕೊಳಗಾದ ದುಂಡವ್ವನ ಸಹಾಯಕ್ಕೆ ಬಂದ ಪೂಜಾರಯ್ಯನ ಪಾತ್ರದ ಮೂಲಕ ತೋರಿಸಿದ್ದಾರೆ. ಆದರೆ ಗಮನಿಸಬೇಕಾದ ವಿಷಯವೆಂದರೆ ಪೂಜಾರಯ್ಯನ ರೀತಿಯ ಪುರುಷ ಸಂಖ್ಯೆ ಸಮಾಜದಲ್ಲಿ ಹೆಚ್ಚಾಗಬೇಕು ಎಂಬ ಆಶಯ. ಇಂತಹ ವ್ಯಕ್ತಿಗಳಿಂದ ಹೆಣ್ಣಿನ ಮೇಲಿನ ಶೋಷಣೆ, ಅಸಮಾನತೆ ಕಡಿಮೆಯಾಗಬಹುದು ಎಂದು ತಿಳಿಯುತ್ತದೆ.

ಈ ಮಧ್ಯೆ ಕೃಷ್ಣೇಗೌಡ ಊರಿಗೆ ನಾಟಕವಾಡಲು ಬಂದಿದ್ದ ಹೆಣ್ಣೊಬ್ಬಳನ್ನು ಅವಳ ತಾಯಿಯೊಂದಿಗೆ ಮನೆಗೆ ಕರೆದುಕೊಂಡು ಬರುವುದು ಕೃಷ್ಣೇಗೌಡನ ಬೇಜವಾಬ್ದಾರಿ ಮತ್ತು ಸ್ವೇಚ್ಛಾಚಾರಿ ಜೀವನಕ್ರಮವನ್ನು ತೋರಿಸುತ್ತದೆ. ಕೃಷ್ಣೇಗೌಡನನ್ನು ಅರಿತ ಅವನ ತಾಯಿ ನಾಟಕದ ಹೆಣ್ಣನ್ನು ತೋಟದ ಮನೆಗೆ ಸಾಗಹಾಕುತ್ತಾಳೆ. ಆದರೆ ಅವಳ ತಾಯಿ ಮನೆಯ ಎಲ್ಲಾ ವ್ಯವಹಾರಗಳಲ್ಲೂ ತಲೆಹಾಕುತ್ತಾ ಜವಾಬ್ದಾರಿಯನ್ನು ತೆಗೆದುಕೊಳ್ಳಲು ಪ್ರಯತ್ನಿಸುತ್ತಾಳೆ. ಇದನ್ನೆಲ್ಲಾ ಗಮನಿಸಿದ ಬಿಳಿಯೆಣ್ಣು ಮಾನಸಿಕವಾಗಿ ದುರ್ಬಲಳಾಗಿ ದುಂಡವ್ವನ ದೆವ್ವ ಮೈಮೇಲೆ ಬಂದ ರೀತಿ ವರ್ತಿಸುತ್ತಾಳೆ. ಸಮಸ್ಯೆಯ ತೀವ್ರತೆಯನ್ನು ಅರಿತ ಕೃಷ್ಣೇಗೌಡನ ತಾಯಿ, ಮಗಳು ಶಿವಕ್ಕನ ಬಳಿ ಹೋಗುತ್ತಾಳೆ. ತವರೂರಿಗೆ ಬಂದ ಶಿವಕ್ಕ ಎರಡೂ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕಲು ಪ್ರಾರಂಭಿಸಿದ್ದಳು. ಮೊದಲನೆಯದಾಗಿ, ಕೃಷ್ಣೇಗೌಡನಿಗೆ ಬುದ್ಧಿಕಲಿಸಬೇಕೆಂದು ನ್ಯಾಯಾಲಯಕ್ಕೆ ಹೋಗಿ ಆಸ್ತಿಯಲ್ಲಿ ಪಾಲು ಬೇಕೆಂದು ನೋಟಿಸ್ ಕೊಡಿಸಿದ್ದಳು. ನೋಟಿಸನ್ನು ತೆಗೆದುಕೊಂಡು ಕೃಷ್ಣೇಗೌಡ ರೇಗಿದಾಗ ಶಿವಕ್ಕ ಹೇಳುವ ಮಾತುಗಳು–"ತಿಕಾ ಹರ್ಕಾಬ್ಯಾಡ ಕಪ್ಪಾ ಕೃಷ್ಣಯ್ಯ, ಬೀದೀಲಿ ಹಾದೀಲಿ ವಾಗೋರೆಲ್ಲಾ ಬಂದು ನಮ್ಮ ಹಟ್ಟೀಲಿ ತಮ್ಮ ದರ್‌ಬಾರ್ ಮಾಡ್‌ಬೋದು, ಅಂದ್ರೆ ಮನೆಮಗಳಾಗಿ ನಂಗೆ ಯಿನ್ನೆಸ್ಟ್ ಅಕ್ ಇದ್ದದ್ದು ನೀನಾ ಲೆಕ್ಕ ಹಾಕ್ಕ. ಮೊದ್ಲೆ ವಂದ್ಸಲ ಯೆಚ್ಚರಿಸಿದ್ದಿ ನಾನು. ನಾಯಿ ಬಾಲಕ್ಕೆ ದೆಬ್ಬೆ ಕಟ್ಟುದ್ರೆ ನ್ಯಾರಾಯ್ತದ್ಯೆ ಅನ್ನಂಗೆ

ನೀನು ನಾಯಿಬಾಲವೇ ಆಗೋದಿ. ಸನಿ ಯಾರ್ ಹೆಗ್ಲ ಯಾರ್ಕರ್ಂಡದೇತ ಆ ಸಿವ ಹೇಳ್ತಾನೆ ಹ್ವಾಗು ಕಂದಾ. ಕೋಲ್ಟ್‌ಗೆ ಹಾಕ್ಸಿವ್ನಿ. ಹೆಲ್ಲದ್ರಾಗೂ – ತ್ವಾಟ, ಗದ್ದೆ, ಹಟ್ಟಿ ವಂದೂ ಬುಡದೆ ಇರಂಗೆ ಅರ್ಧರ್ಧ ಪಾಲ ಯೆತ್ ನನ್ನ ಕಡ ಕೊಟ್ಟ್ ಬಿಡ್ತಾಯಿರಬೇಕು. ನಾನು ಯಾನಾ ನಮ್ ತವರ ಕುಡಿ ವಂದೆ ಅದೆ. ಯೆಲ್ಲಾ ಅವುಂಗೇ ಇರ್‍ಲಿ, ಬಾಲ್ಲಿ ಬದುಕ್ಲಿ ಅಂತಾ ಯೆಲ್ಲಾ ಬುಟ್ಟು ಇಷ್ಟ್ ದಿನಿನ್ ತಂಕಾ ಯಿದ್ದಿ. ಯೋಳೋರ್ ಕ್ಯಾಳೋರ್ ಯಾರೂ ಇಲ್ವಾ ನಿಂಗೆ. ಮರ್ವಾದಿ ಮಾನಕ್ಕಾಗಿ ರವಷ್ಟೂ ಅಂಜಬ್ಯಾಡವಾ? ಕಟ್ಕಂಡ್ ಹೆಣ್ಣಾ ಮೂಳಚಕ್ಕ ಮಾಡಿ ಹಟ್ಟಿಯಾಗೆ ಅವ್ವನ್ನ, ತ್ವಾಟದ್ ಮನೆಯಾಗೆ ಮಗಳನ್ನು ಇಟ್ಕಂಡು ನಿನ್ನ ಆಟ ತೋರಿಸ್ತಿದ್ದೀಯಾ. ಇನ್ ನನ್ನಾಟನೂ ನೋಡಬೈದು. ಒಬ್ಬರಾಟವೇ ನೋಡಾಕೆ ಏನ್ ಚಂದ" (ವೇದಾ ಎಂ.ಎಸ್. 2010: ಪುಟ 409) ಗ್ರಾಮೀಣ ಮಹಿಳೆಯಲ್ಲಾಗುತ್ತಿರುವ ತಿಳುವಳಿಕೆಯ ಬದಲಾವಣೆ, ತಮ್ಮ ಹಕ್ಕುಗಳನ್ನು ಪಡೆದುಕೊಳ್ಳಲು ಅವರ ಕಾನೂನಿನ ಹೋರಾಟ ಮತ್ತು ಪುರುಷರ ದಬ್ಬಾಳಿಕೆಯನ್ನು ನಿಯಂತ್ರಿಸಲು ಕೈಗೊಳ್ಳುವ ಮಾರ್ಗಗಳನ್ನು ಸೂಚಿಸುತ್ತದೆ.

ಶಿವಕ್ಕ ಮತ್ತು ಅವಳ ಅಮ್ಮ ಸಾಧ್ಯವಾದಷ್ಟೂ ಮಟ್ಟಿಗೆ ಬಿಳಿಯೆಣ್ಣಿಗೆ ಕೃಷ್ಣೇಗೌಡನಿಂದ ನ್ಯಾಯದೊರಕಿಸಲು ಪ್ರಯತ್ನಿಸುತ್ತಾರೆ. ಕೃಷ್ಣೇಗೌಡನ ದೌರ್ಜನ್ಯವನ್ನು ಪ್ರತಿಭಟಿಸಿ ಆಸ್ತಿಯಲ್ಲಿ ಸಮಪಾಲು ಸಿಗುವಂತೆ ನೋಡಿಕೊಳ್ಳುವ ಶಿವಕ್ಕ ಮತ್ತು ಅವಳ ತಾಯಿಯ ಪ್ರಯತ್ನಗಳು ಸ್ತ್ರೀಗೆ ಸಮಾನತೆಯನ್ನು ತಂದುಕೊಡುವ ಪ್ರಯತ್ನಗಳ ನಾಂದಿಯಾಗಬಹುದು ಎಂಬುದನ್ನು ಲೇಖಕರು ಸೂಚ್ಯವಾಗಿ ತಿಳಿಸುತ್ತಾರೆ.

ಎರಡನೇ ಸಮಸ್ಯೆಯಾದ ಬಿಳಿಯೆಣ್ಣು ದೆವ್ವ ಹಿಡಿದ ರೀತಿ ವರ್ತಿಸುವುದನ್ನು ಬಿಡಿಸಲು ಮಾರಿಗುಡಿ ಪೂಜಾರಯ್ಯನನ್ನು ಕಾಣುತ್ತಾಳೆ. ಪೂಜಾರಯ್ಯನೊಂದಿಗೆ ಮಾತನಾಡುವಾಗ ಬಿಳಿಯೆಣ್ಣು ಹೇಳುವ "ನಾನೂ ದುಂಡವ್ವನ ಹಂಗೇ ಆಗ್ಬೇಕು. ನನ್ನೂ ನಮ್ ಯಜಮಾನ್ರು ಹರಾಜ್ ಹಾಕ್ ಬುಡಬೈಕು. ನಿನ್ನಂಥ ವೊಬ್ ವಳ್ಳೆ ಮನ್‌ಷಾ ನನ್ ಕೊಂಡ್ಕಬೈಕು. ಅವುರ ಕುಟ್ಟಾ ನನ್ನ ಮದ್ವಿ ಆಗ್ಬೇಕು, ಹಂಗಾರೂ ನಂಗೆ ನೆಮ್ದಿ ಸಿಗ್ಬೇಕು. ಅವ್ರು ಕೊಡಾ ಕ್ವಾಟ್ಲೆಗೆ ಯಿರೋಧವಾಡಾಕೆ ನಂಗ್ಯಾನೂ ಗೊತ್ತಿಲ್ಲ, ಅದ್ಕಾ ದೆಯ್ಯ ಬಂದೋಳಂಗೆ ಆಡ್ತಿವ್ನಿ ಕ ಅಯ್ಯ" (ವೇದಾ ಎಂ.ಎಸ್. 2010: ಪುಟ 410) ಮಾತುಗಳು ದೌರ್ಜನ್ಯ, ಶೋಷಣೆ ಮತ್ತು ಅನ್ಯಾಯಕ್ಕೆ ಒಳಗಾದ ಮಹಿಳೆ ಹೇಗೆ ಮಾನಸಿಕವಾಗಿ ಕುಗ್ಗಿಹೋಗಿ ತನ್ನನ್ನು ತಾನು ಉಳಿಸಿಕೊಳ್ಳಲು ಅನ್ಯಮಾರ್ಗಗಳನ್ನು ಹಿಡಿಯುತ್ತಾಳೆ ಎಂಬುದನ್ನು ಚಿತ್ರಿಸುತ್ತದೆ. ಬಿಳಿಯೆಣ್ಣಿನ ಈ ಮಾತನ್ನು ಕೇಳಿದ ಪೂಜಾರಯ್ಯ ಅವಳಿಗೆ ಹೇಳುವ ತಿಳುವಳಿಕೆಯಲ್ಲಿ ಸಮಯ ಬಂದಾಗ, ತನ್ನ ಹಕ್ಕು

ಸಮಾನತೆಯನ್ನು ಪಡೆದು ದೌರ್ಜನ್ಯಗಳನ್ನು ಎದುರಿಸಬೇಕಾದಾಗ ಹೆಣ್ಣು ಹೇಗಿರಬೇಕು ಎಂದು ತಿಳಿಯುತ್ತದೆ. "... ನಾವ ನಾವ್ ಯಾನೇನು ತಂದಿದ್ದೇವೋ ಬುತ್ತಿಯಾ, ಅದ್ನೆ ಬಿಚ್ಕಂಡ್ ತಿನ್ನಬೇಕು ನ್ವಾಡು. ಹಂಗಂತ ಕೈಕಟ್ಕಂಡು ಕುಂತ್ಕು ಅನ್ನಾಕಿಲ್ಲ ನಾನು. ಸಿವಕ್ಕ, ಅವ್ವ ಯಿಬ್ರೂ ನಿನ್ನ ಕಡ್ಗೆ ಅವ್ರೆ. ನಿನ್ನ ಗಂಡ್ನ ಯೆಂಗೆ ಯಿರೋಧ ಮಾಡ್‌ಬೋದು, ನೀ ಯೆಂಗ ಮರ್ವಾದಿ ನೆಮ್ದಿಯಾಗಿ ಬಾಳಾಟ ಮಾಡ್‌ಬೋದೋ ಅದಕ್ ತಕ್ಕಂತೆ ನಡ್ಕಾ. ಅಲ್ದೆವಾದ್ರೆ ಅವ್ವನೂ ಆಲ್ ಕೊಡಾಕಿಲ್ವಂತೆ. ತಮ್ಮ ತಮ್ಮ ಬದ್ಕಾ ವುಳಿಸ್ಕಳಕ್ಕೆ, ರವಷ್ಟಾದರೂ ಯೆಣ್ ಮಕ್ಳಾ ಬಾಯಿ ಕತ್ತಿ ಕಟ್ಬೇಕು. ಯಿರೋಧ ಮಾಡಾದ ಕಲ್ತಕಬೈಕು ಹಂಗಾರ ಉಲ್ಲಾಗ್ಲ. ಯಿಲ್ಲಾಂದ್ರೆ ಸುಟ್ಬ್ಟುಟ್ಟು ಪೊಟ್ಟಣ ಕಟ್‌ಬುಡ್ತಾರೆ ಕಣವ್ವಾ" (ವೇದಾ ಎಂ.ಎಸ್. 2010: ಪುಟ 410) ನುಡಿಗಳು ಹೆಣ್ಣು ತನಗೆ ಅನ್ಯಾಯವಾಗುವಾಗ ಅದನ್ನು ವಿರೋಧಿಸಬೇಕು, ಪ್ರತಿಭಟಿಸಬೇಕು ಮತ್ತು ತಮಗೆ ಬರಬೇಕಾದುದನ್ನು ಪಡೆದುಕೊಳ್ಳಬೇಕು ಎಂಬುದನ್ನು ತಿಳಿಸುತ್ತದೆ. ಈ ಕಥೆಯಲ್ಲಿ ವೇದಾರವರು ಮಹಿಳೆಯರಲ್ಲಿ ಆಗುತ್ತಿರುವ ಬದಲಾವಣೆಯನ್ನು ಗುರ್ತಿಸಿದ್ದಾರೆ ಮತ್ತು ಪುರುಷ–ಸ್ತ್ರೀಯರ ಮಧ್ಯೆ ಸಮಾನತೆಯನ್ನುಂಟು ಮಾಡಲು ಹೆಣ್ಣು ಅನುಸರಿಸಬಹುದಾದಂತಹ ಮಾರ್ಗಗಳನ್ನು ಸೂಚಿಸಿದ್ದಾರೆ. ಈ ಕಥೆಯ ಮತ್ತೊಂದು ವಿಶೇಷವೆಂದರೆ ಸ್ತ್ರೀ–ಪುರುಷರ ಸಮಾನತೆ ತರುವುದು ಕೇವಲ ಮಹಿಳೆಯರಿಂದಷ್ಟೇ ಅಲ್ಲ ಅದಕ್ಕೆ ಪುರುಷ ಪ್ರಯತ್ನಗಳೂ ಬಹಳ ಮುಖ್ಯ ಎಂದು ತಿಳಿಸಿರುವುದು.

ಮಹಿಳಾ ಸಾಹಿತಿಗಳು ಕೌಟುಂಬಿಕ ನೆಲೆಯಲ್ಲಿ ಚಿತ್ರಿಸಿರುವ ಸಮಾನತೆ–ಅಸಮಾನತೆಯ ಮುಖ್ಯಾಂಶಗಳನ್ನು ಈ ಕೆಳಕಂಡಂತೆ ತಿಳಿಯಬಹುದು. ಹೆಣ್ಣು ಸರ್ವ ವಿಧದಲ್ಲೂ ಅನಾಥೆ, ಗಂಡನಿಂದ ಶೋಷಣೆ, ತಿರಸ್ಕಾರ, ಸ್ವಾರ್ಥಗಳಿಗೆ ಬಲಿಯಾದ ಅವಳು ಅನಾಥಳಾಗುತ್ತಾಳೆ. ಪುರುಷ ಪ್ರಧಾನ ನೀತಿಯಡಿಯಲ್ಲಿ ಬೆಳೆದ ಮಕ್ಕಳು ತನ್ನ ತಾಯಿಯನ್ನು ಲೆಕ್ಕಿಸದೆ ಅನಾಥಳನ್ನಾಗಿ ಮಾಡುತ್ತಾರೆ ಎಂದು ಚಿತ್ರಿಸಿ ಕುಟುಂಬದಲ್ಲಿ ಹೆಣ್ಣಿಗೆ ಸಮಾನ ನೆಲೆಯಿಲ್ಲದಿರುವುದನ್ನು ಸಾವಿತ್ರಮ್ಮನವರು ತೋರಿಸಿದ್ದಾರೆ. ಬಡ ಕುಟುಂಬವಿರಲಿ, ಶ್ರೀಮಂತರ ಕುಟುಂಬವಿರಲಿ ಹೆಣ್ಣಿಗೆ ಅಸಹಾಯಕತೆ, ಅಸಮಾನತೆ ಇದ್ದೇ ಇರುತ್ತದೆ. ಹೆಣ್ಣು ವಿದ್ಯಾವಂತೆಯಾದರೂ, ತಿಳುವಳಿಕೆಯುಳ್ಳವಳಾದರೂ ಅವಳ ಮೇಲೆ ನಡೆಯುವ ದೌರ್ಜನ್ಯ ನಿಲ್ಲುವುದಿಲ್ಲ. ಇಂತಹ ಅಸಮಾನತೆ, ದೌರ್ಜನ್ಯಗಳನ್ನು ಅರಿತರೂ ಸಮಾಜದ ರೀತಿ ನೀತಿಗಳಿಗೆ ಹೆದರಿ ಅದರಿಂದ ಹೊರಹೋಗಲಾಗದೆ ದೌರ್ಜನ್ಯಯುಕ್ತ ಕುಟುಂಬಕ್ಕೇ ಹೋಗುವ ಹೆಣ್ಣಿನ ಕಥಾವಸ್ತುವನ್ನು ವೀಣಾ ಶಾಂತೇಶ್ವರರು ತೋರಿಸಿದ್ದಾರೆ. ಕುಟುಂಬದಲ್ಲಿ ಹೆಣ್ಣಿನ ಸ್ಥಾನ

ಸೇವಕಿಯಾಗೇ ಇರಬೇಕು ಅವಳ ದುಡಿತವೆಲ್ಲ ಗಂಡಿನ ಜೀವನಕ್ಕೆ ಎಂದು ತನ್ನ ಹೆಂಡತಿಯನ್ನು ಗುಲಾಮಳನ್ನಾಗಿ ಮಾಡಿಕೊಂಡಿದ್ದ ಗಂಡ ತೀರಿಹೋದಾಗ ತನಗೆ ಬಿಡುಗಡೆ ದೊರೆಯಿತೆಂದು ಹೆಂಡತಿ ಹಾಲು ಕುಡಿಯುವಂತಹ ವಿಶಿಷ್ಟ ಚಿತ್ರಣವನ್ನು ಕೊಡುತ್ತಾ, ಸ್ತ್ರೀ–ಪುರುಷರ ನಡುವಿನ ಅಸಮಾನತೆ ಹೆಣ್ಣಿನ ಮನಸ್ಸನ್ನು ಕಠಿಣಗೊಳಿಸುವುದನ್ನು ವೀಣಾ ಶಾಂತೇಶ್ವರರು ಚಿತ್ರಿಸಿದ್ದಾರೆ. ಸಾಮಾಜಿಕ ಸಮಸ್ಯೆಯಾದ ಅಸ್ಪೃಶ್ಯತೆ, ಸ್ತ್ರೀ–ಪುರುಷರ ನಡುವಿನ ಅಸಮಾನತೆಯ ಮೂಲಕ ಕುಟುಂಬದೊಳಗೂ ವ್ಯಾಪಿಸಿದೆ. ಪುರುಷರು ಸ್ತ್ರೀಯರನ್ನು ಕೀಳಾಗಿ ನೋಡುತ್ತಾ ಅಸ್ಪೃಶ್ಯರನ್ನಾಗಿ ಮಾಡಿದ್ದಾರೆ. ಇಂತಹ ಅಸ್ಪೃಶ್ಯತೆಯಿಂದ ಹೆಣ್ಣಿಗೆ ಮುಕ್ತಿ ದೊರೆಯಬೇಕು ಎಂದು ವೈದೇಹಿಯವರು ತಿಳಿಸಿದ್ದಾರೆ. ಎಂ.ಎಸ್. ವೇದಾ ಗ್ರಾಮೀಣ ಪ್ರದೇಶದಲ್ಲಿ ಪುರುಷರ ದೌರ್ಜನ್ಯ ಮತ್ತು ಸ್ವೇಚ್ಚಾಚಾರಕ್ಕೆ ಬಲಿಯಾಗಿ ಮಾನಸಿಕವಾಗಿ, ದೈಹಿಕವಾಗಿ ಅಸ್ವಸ್ಥರಾಗುವುದನ್ನು ಮತ್ತು ಅದೇ ಗ್ರಾಮೀಣ ಹೆಣ್ಣುಗಳು ಪುರುಷರ ವಿರುದ್ಧ ಕಾನೂನಿನ ಸಹಾಯ ಪಡೆದು ದೌರ್ಜನ್ಯವನ್ನು ತಡೆಯುವ ಮತ್ತು ಸಮಾನ ನೆಲೆಯನ್ನು ಕಂಡುಕೊಳ್ಳುವ ಚಿತ್ರಣವನ್ನು ಚಿತ್ರಿಸಿದ್ದಾರೆ.

5.3. ಆರ್ಥಿಕ, ರಾಜಕೀಯ ನೆಲೆಯಲ್ಲಿ ಸಮಾನತೆ–ಅಸಮಾನತೆ

ಸ್ತ್ರೀ–ಪುರುಷರ ನಡುವಿನ ಅಸಮಾನತೆಯು ಆರ್ಥಿಕ ನೆಲೆಯ ಮೇಲೂ ನಿಂತಿರುತ್ತದೆ. ಮಹಿಳೆಗೆ ಎಲ್ಲ ರೀತಿಯ ಆರ್ಥಿಕ ಸ್ವಾತಂತ್ರ್ಯ ಅಂದರೆ ದುಡಿಯುವ ಅವಕಾಶ, ಹಣಕಾಸಿನ ವ್ಯವಹಾರಗಳಲ್ಲಿ ಸ್ವಾತಂತ್ರ್ಯ ಮತ್ತು ಸಮಾನತೆ ಇರಬೇಕು. ಇದಕ್ಕೆ ಸಮಾಜ ಮತ್ತು ಕುಟುಂಬ ಪೂರಕ ವಾತಾವರಣವನ್ನು ಒದಗಿಸಬೇಕು. ಆದರೆ ಯಾವುದೇ ಒಂದು ಹೆಣ್ಣು ಆರ್ಥಿಕವಾಗಿ ಸ್ವಾವಲಂಬಿಯಾಗಿ ಬದುಕು ಕಟ್ಟುಕೊಳ್ಳುವ ಪ್ರಯತ್ನಗಳನ್ನು ಸಮಾಜ ಹಾಳುಮಾಡುತ್ತದೆ. ಇಂತಹ ಅಸಮಾನತೆಯ ಚಿತ್ರಣವನ್ನು ಮಹಿಳಾ ಸಾಹಿತಿಗಳು ಚಿತ್ರಿಸಿರುವುದನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಇಲ್ಲಿ ಪ್ರಾತಿನಿಧಿಕವಾಗಿ ಗೀತಾ ನಾಗಭೂಷಣರವರ 'ಕಪ್ಪು', ಮತ್ತು 'ಚಿತ್ತಿ ಮತ್ತು ರಿಕ್ಷಾ' ಹಾಗೂ ದಾಳ ಕಥೆಗಳನ್ನು ಪರಿಗಣಿಸಲಾಗಿದೆ.

ಸಾಮಾಜಿಕ ಸಮಸ್ಯೆಗಳಾದ ಬಡತನ, ನಿರುದ್ಯೋಗ, ಹಸಿವು ಹಾಗೂ ಕೈಗಾರಿಕಾ ಕ್ಷೇತ್ರದ ಸಮಸ್ಯೆಗಳಾದ ಕಾರ್ಮಿಕ–ಮಾಲೀಕರ ನಡುವಿನ ಜಗಳ, ಫ್ಯಾಕ್ಟರಿ ಬಂದ್ ಆಗುವುದು ಮುಂತಾದವು ಸಮಾಜದಲ್ಲಿ ಕಂದಕಗಳನ್ನು ಸೃಷ್ಟಿಸುತ್ತವೆ. ಇಂತಹ ಕಂದಕಗಳಲ್ಲಿ ಸಿಲುಕುವ ಬಡವರು ಮುಖ್ಯವಾಗಿ ಮಹಿಳೆಯರು ಅನ್ಯಾಯ, ಅಸಮಾನತೆ, ಶೋಷಣೆಗಳಿಗೆ ಒಳಗಾಗಿ ಅವರ ಜೀವನವನ್ನೇ ಬಲಿಕೊಡಬೇಕಾದ ಪರಿಸ್ಥಿತಿ ತಲೆದೋರುತ್ತದೆ ಎಂಬುದನ್ನು ಗೀತಾ ನಾಗಭೂಷಣ ಅವರು "ಕಪ್ಪು" ಕಥೆಯಲ್ಲಿ ಚಿತ್ರಿಸಿದ್ದಾರೆ. ಕಪ್ಪು ಎಂದರೆ ಕರಿಯ ಬಣ್ಣ, ಕಂದಕ,

ಖೆಡ್ಡಾ ಎಂದು ಅರ್ಥ. ಈ ಹಿನ್ನೆಲೆಯಲ್ಲಿ ಸಾಮಾಜಿಕ ಕಂದಕಗಳು ಸ್ತ್ರೀಯರ ಬದುಕನ್ನು ಕಸಿಯುತ್ತವೆ ಎಂದು ತಿಳಿಯಬಹುದು, ಜೊತೆಗೆ ಪುರುಷಸಮಾಜ ತೋಡುವ ಖೆಡ್ಡಾದಲ್ಲಿ ಹೆಣ್ಣಿನ ಬಾಳು ಬಲಿಯಾಗುತ್ತಿರುವುದನ್ನು ನೋಡಬಹುದು. ಈ ಕಥೆಯ ಮಾಳವ್ವಾಯಿಯ ಗಂಡ ತೀರಿಹೋದಾಗ ಅವರ ಜಮೀನನ್ನು ಊರಿನ ಸಾಹುಕಾರ ಸಾಲಕ್ಕೆ ಸಮಾ ಮಾಡಿಕೊಳ್ಳುತ್ತಾನೆ. ಜೀವನಕ್ಕೆ ಯಾವುದೇ ಆಧಾರವಿಲ್ಲದೆ ಮಗ ತಿಪ್ಪಣ್ಣನೊಂದಿಗೆ ಅವಳು ಪಟ್ಟಣ ಸೇರುತ್ತಾಳೆ. ಪಟ್ಟಣದ ಬಟ್ಟೆ ಗಿರಣಿಯ ಬಳಿ ಬಯಲಿನಲ್ಲಿ ಝೋಪಡಿ ಹಾಕಿಕೊಂಡು ಯಾರದೋ ಸಹಾಯದಿಂದ ಬಟ್ಟೆ ಗಿರಣಿಯಲ್ಲಿ ತಿಪ್ಪಣ್ಣ ಕೆಲಸ ಗಿಟ್ಟಿಸಿಕೊಳ್ಳುತ್ತಾನೆ. ಗಿರಣಿಯಿಂದ ಬರುವ ಪಗಾರದ ಆಧಾರದ ಮೇಲೆ ಅವನ ಹೆಂಡತಿ ಮಕ್ಕಳನ್ನು ಊರಿನಿಂದ ಕರೆದುಕೊಂಡು ಬಂದು ತಾಯಿಯೊಂದಿಗೆ ಜೀವನ ನಡೆಸುತ್ತಿರುತ್ತಾನೆ. ಹೀಗೆ ಹತ್ತು ವರ್ಷಗಳು ಕಳೆಯುವ ವೇಳೆಗೆ ಗಿರಣಿಯಲ್ಲಿ ಕಾರ್ಮಿಕರು ಮತ್ತು ಮಾಲೀಕರ ನಡುವೆ ಜಗಳ ಶುರುವಾಗುತ್ತದೆ. ಕಾರ್ಮಿಕರು ಸಂಪು ಹೂಡಿದ್ದರಿಂದ ಮಾಲೀಕರಿಗೆ ನಷ್ಟವಾಗಿ ಅವರು ಗಿರಣಿಯನ್ನು ಬಂದ್ ಮಾಡುತ್ತಾರೆ. ವರ್ಷವಾದರೂ ಗಿರಣಿ ಪುನರಾರಂಭವಾಗುವುದಿಲ್ಲ, ಆಗ ಕಾರ್ಮಿಕರು ಮುಖ್ಯವಾಗಿ ದಿನಗೂಲಿ ಮಾಡುತ್ತಿದ್ದವರು ಜೀವನ ನಿರ್ವಹಣೆಗೆ ತುಂಬಾ ಕಷ್ಟ ಅನುಭವಿಸಬೇಕಾಗುತ್ತದೆ. ಗೀತಾ ನಾಗಭೂಷಣರವರು ವಿವರಿಸುವಂತೆ “ಎಲ್ಲ ಕಾರ್ಮಿಕರ ಗುಡಿಸಲುಗಳಲ್ಲಿ ಹಸಿವು ವಿಕಾರವಾಗಿ ಕುಣಿಯಲಾರಂಭಿಸಿತು. ಬರೀ ತುತ್ತಿನ ಚೀಲ ಭರ್ತಿ ಮಾಡುವುದಕ್ಕಾಗಿ ಹಲವರು ನಿರ್ಭೀಡೆ, ನಿರ್ಲಜ್ಜೆಗಳಿಂದ ಹಲ್ಕಟ್ ದಂಧೆಗಿಳಿದರು. ಆ ದಾರಿ ತುಳಿಯದ ಮತ್ತೆ ಕೆಲವರು ಕೈಗಾಡಿಗಳಲ್ಲಿ ಕಾಯಿ ಪಲ್ಲೆ, ಹಣ್ಣು ಹಂಪಲುಗಳನ್ನು ತುಂಬಿಕೊಂಡು ಬಿಸಿಲು ಮಳೆ ಗಾಳಿಯೆನ್ನದೆ ನಗರದ ರಸ್ತೆ ಅಲೆಯುತ್ತಾ ಗಂಟಲು ಹರಿಸಿಕೊಂಡರು, ಇನ್ನುಳಿದ ಕಾರ್ಮಿಕರು ಮಂಡಿ, ರೈಲ್ವೆ ಸ್ಟೇಷನ್‌ಗಳಲ್ಲಿ ಹಮಾಲರಾಗಿ ತೊಡಗಿ ಬೆನ್ನ ಚರ್ಮ ಹರಿಸಿಕೊಂಡರು. ಹಲವರು ರಿಕ್ಷಾ ಟಾಂಗಾ ಎಳೆಯುತ್ತ ವಾಹನಗಳು ತುಂಬಿದ ರಸ್ತೆಗಳಲ್ಲಿ ಟ್ರಾಫಿಕ್ ಎದುರಿಸಲಾರದೆ ತತ್ತರಿಸಿ ಅಪಘಾತಕ್ಕೀಡಾದರು. ಕಳವು ಮಾಡಿ ಸಿಕ್ಕಿ ಬಿದ್ದು ಪೋಲಿಸ್ ಲಾಕಪ್ಪಿನಲ್ಲಿ ರಾತ್ರಿಯೆಲ್ಲ ಪೆಟ್ಟು ತಿಂದು ಜೈಲು ಸೇರಿದರು. ಹಸಿವೆ ತಾಳದೆ ಹಾದರಕ್ಕಿಳಿದ ಹೆಂಗಸರಲ್ಲಿ ಎಳೆಯರೆಯದ ಹಲವರು ಅನಾಮತ್ತಾಗಿ, ಸುಳಿವು ಸೂಚನೆಗಳಿಲ್ಲದೆ ಆಸುಪಾಸಿನ ಬೊಂಬಾಯಿ, ಹೈದ್ರಾಬಾದ್‌ಗಳಲ್ಲಿಯ ಚಿಲ್ಲರೆ ಸೂಳೆಯರ ವೇಶ್ಯಾಗೃಹ ಸೇರಿದರು” (ಗೀತಾ ನಾಗಭೂಷಣ 2006: ಪುಟ 380). ಮೇಲಿನ ವಿವರಣೆ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಬಡ ಕೂಲಿಕಾರ್ಮಿಕರ ಬದುಕು ಕಾರ್ಖಾನೆ ಮುಚ್ಚಿದಾಗ ದುಸ್ತರವಾಗುವುದನ್ನು ತೋರಿಸುತ್ತದೆ. ಮುಖ್ಯವಾಗಿ ಹೆಂಗಸರು ಸಂಸಾರ

ನಿಭಾಯಿಸುವುದಕ್ಕೋಸ್ಕರ ವೇಶ್ಯಾವೃತ್ತಿಗೆ ಇಳಿಯುವುದು, ಅವರಲ್ಲಿ ಕೆಲವರು ವೇಶ್ಯಾಗೃಹಗಳಿಗೆ ಸೇರಿ ಜೀವನವನ್ನೇ ದುರಂತ ಮಾಡಿಕೊಂಡ ನಿದರ್ಶನ ಕಂಡುಬರುತ್ತದೆ.

ಗಿರಣಿ ಮುಚ್ಚಿದ್ದರಿಂದ ತೊಂದರೆಗೊಳಗಾದ ಕುಟುಂಬಗಳಲ್ಲಿ ತಿಪ್ಪಣ್ಣನ ಕುಟುಂಬವೂ ಸೇರಿತ್ತು. ದುಡಿಯುವ ಮಾರ್ಗಕ್ಕೆ ರಿಕ್ಷಾ ಎಳೆಯುವ ಕೆಲಸವನ್ನು ಮಾಡಿದ, ಆದರೆ ಅಪಘಾತದಲ್ಲಿ ಕಾಲು ಮುರಿದುಕೊಂಡು ಆಸ್ಪತ್ರೆಗೆ ಸೇರಿದ. ಈಗ ಅವರ ಜೀವನ ತುಂಬಾ ಸಂಕಷ್ಟಗಳಿಗೆ ಒಳಗಾಯಿತು. ತಿಪ್ಪಣ್ಣನ ಆಸ್ಪತ್ರೆಯ ಖರ್ಚು, ಮನೆಯ ವೆಚ್ಚಗಳಿಗೆ ಹಣವಿಲ್ಲದಂತಾಗಿ ಊಟಕ್ಕೂ ತೊಂದರೆಯಾಯಿತು. ತಿಪ್ಪಣ್ಣನ ಹೆಂಡತಿ ಸಾಬವ್ವ ಕೆಲವರ ಮನೆಯಲ್ಲಿ ಮನೆಕೆಲಸ ಮಾಡಿದರೂ ಬರುವ ಹಣ ಏನೂ ಸಾಲದಂತಾಯಿತು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಸಾಬವ್ವ ಮೊದಲಿನಿಂದಲೂ ಯಾವುದಾದರೂ ಕೆಲಸಕ್ಕೆ ಹೋಗುತ್ತಿದ್ದರೆ ಆ ಕುಟುಂಬಕ್ಕೆ ಸಮಸ್ಯೆಯ ಪರಿಣಾಮ ಬಹುಶಃ ಕಡಿಮೆ ಇರುತ್ತಿತ್ತು. ಆದರೆ, ಹೆಣ್ಣು ಮನೆಯ ಹೊರಗಡೆ ದುಡಿಯಬಾರದು ಎಂಬ ಅಲಿಖಿತ ನಿಯಮದ ಪ್ರಕಾರ ಸಾಮಾನ್ಯವಾಗಿ ಮಹಿಳೆ ಕೆಲಸಕ್ಕೆ ಹೋಗುವುದಿಲ್ಲ. ಕೇವಲ ಒಬ್ಬ ವ್ಯಕ್ತಿಯ ಆದಾಯದ ಮೇಲೆ ನಿಂತ ಸಂಸಾರ ದುಡಿಯುವ ವ್ಯಕ್ತಿಗೆ ತೊಂದರೆಯಾದಾಗ ತೀರಾ ಸಂಕಷ್ಟಕ್ಕೆ ಒಳಗಾಗುತ್ತದೆ. ಇಂತಹ ಪರಿಸ್ಥಿತಿಯನ್ನು ನಿಭಾಯಿಸಲು ಹೆಣ್ಣಿಗೆ ಮನೆಯ ಹೊರಗೆ ಕೆಲಸ ಮಾಡುವ ಅವಕಾಶ ಬೇಕಾಗುತ್ತದೆ. ಅಂದರೆ ಮಹಿಳೆಗೂ ಸಮಾನ ಅವಕಾಶ ದೊರೆಯಬೇಕು ಎಂದು ಯೋಚಿಸಬಹುದು.

ಸಾಬವ್ವನ ದುಡಿಮೆಯಿಂದ ಬರುವ ಆದಾಯ ಅವರ ಕನಿಷ್ಟ ಅವಶ್ಯಕತೆಗೂ ಸಾಲದಾದಾಗ ಅವರ ಮಗಳು ದ್ಯಾವಿ ಕೆಲಸಕ್ಕೆ ಹೋಗುತ್ತಾಳೆ. ಲಾರಿ ಡ್ರೈವರು, ಕ್ಲೀನರುಗಳ ಹಾಸಿಗೆ ಜೋಡಿಸಿಕೊಡುವುದು ಅವರಿಗೆ ತಿಂಡಿ ತಂದುಕೊಡುವುದು, ಲಾರಿ ಸ್ವಚ್ಛಗೊಳಿಸುವುದು ಮುಂತಾದ ಕೆಲಸಗಳನ್ನು ಅವಳ ಸ್ನೇಹಿತೆಯೊಂದಿಗೆ ಮಾಡುತ್ತಾಳೆ. ನೋಡಲು ಸುಂದರಳಾಗಿದ್ದ ದ್ಯಾವಿಯನ್ನು ಅಲ್ಲಿದ್ದ ಹಲವಾರು ಪುರುಷರು ಅವಳನ್ನು ಆಸೆ ಕಾಮದ ದೃಷ್ಟಿಯಿಂದ ನೋಡುತ್ತಾರೆ. ದಿನ ಕಳೆದಂತೆ ಡ್ರೈವರುಗಳ ಚೇಷ್ಟೆಗಳಿಗೆ, ಆಟಗಳಿಗೆ ಒಳಗಾದ ದ್ಯಾವಿ ಅವರೊಡನೆ ಹಣಕ್ಕಾಗಿ ಬೆರೆಯುತ್ತಾಳೆ. ಇದರಿಂದ ಅವಳ ಆದಾಯ ಹೆಚ್ಚಾಗಿ ಮನೆಗೆ ಬೇಕಾದ ಖರ್ಚುಗಳಿಗೆಲ್ಲಾ ಅವಳು ದುಡ್ಡುಕೊಡುತ್ತಾಳೆ. ಮೊದಲಲ್ಲಿ ಅವಳು ಹೆಚ್ಚು ಹಣ ಸಂಪಾದಿಸುವುದು ಎಲ್ಲರಿಗೂ ಇಷ್ಟವಾಗುತ್ತದೆ. ಆದರೆ ಡ್ರೈವರುಗಳ ಲಾಲಸೆಗೆ ಬಲಿಯಾದ ದ್ಯಾವಿ ಗರ್ಭಿಣಿಯಾಗುತ್ತಾಳೆ. ವಿಷಯ ತಿಳಿದ ಮನೆಯವರು ಎದೆಗುಂದುತ್ತಾರೆ. ಕೇರಿಯ

ಅಜ್ಜಿಯೊಬ್ಬಳು ಏನಾದರೂ ಮಾಡೋಣವೆಂದು ಹೇಳಿದರೂ ಕೇಳದ ಸಾಬವ್ವ ಬಾವಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ತನ್ನ ಗರ್ಭಕ್ಕೆ ಕಾರಣವಾದ ಡ್ರೈವರನ್ನು ಹುಡುಕಿಕೊಂಡು ಹೋದ ದ್ಯಾವಿಯನ್ನು ಗೂಂಡಾಗಳು ಎತ್ತಿಹಾಕಿಕೊಂಡು ಬೊಂಬಾಯಿ ಕಡೆಗೆ ಹೋಗುತ್ತಾರೆ. ಈ ಘಟನೆಗಳು ನಮ್ಮ ಸಮಾಜದಲ್ಲಿ ಹೆಣ್ಣು ದುಡಿಯಲು ಹೋದರೂ ಪುರುಷರು ಅವಳನ್ನು ಬಿಡುವುದಿಲ್ಲ ತಮ್ಮ ಸ್ವಾರ್ಥಕ್ಕೆ, ಆಸೆಗೆ ಹೆಣ್ಣಿನ ಬದುಕನ್ನು ಬಲಿಕೊಡುತ್ತಾರೆ. ಪುರುಷರು ತಮ್ಮ ಸ್ವಾರ್ಥಕ್ಕೆ ದ್ಯಾವಿಯನ್ನು ಬಳಸಿಕೊಳ್ಳದಿದ್ದರೆ ಅವಳ ಜೀವ, ಬದುಕು ಉಳಿಯುತ್ತಿತ್ತು, ಆದರೆ ಪುರುಷರು ನಡೆಸಿದ ದೌರ್ಜನ್ಯ, ದುರುಪಯೋಗ ದ್ಯಾವಿ ಮತ್ತು ಅವಳ ಕುಟುಂಬವನ್ನು ಬಲಿ ತೆಗೆದುಕೊಂಡಿತು. ಪುರುಷ ಸಮಾಜ ಹೆಣ್ಣಿಗೂ ಕೆಲಸ ಮಾಡಲು ಸಮಾನ ಅವಕಾಶಗಳನ್ನು ನೀಡಿ, ಅವಳನ್ನು ಒಬ್ಬ ವ್ಯಕ್ತಿಯಾಗಿ ನೋಡಿ, ಪುರುಷಸ್ವಾರ್ಥಗಳ ಪರಿಧಿಯಿಂದ ಅವಳನ್ನು ಹೊರಗಿಟ್ಟು ಬದುಕಲು ಅವಕಾಶಗಳನ್ನು ಕೊಡಬೇಕು. ಪುರುಷ ಸಮಾಜ ಹೆಣ್ಣಿಗಾಗಿ ರೂಪಿಸಿರುವ ನಿಯಮಗಳು, ಅವಳನ್ನು ಕೇವಲ ಕಾಮಭೋಗದ ವಸ್ತುವಾಗಿ ಕಾಣುವ ರೀತಿ ಹೆಣ್ಣಿಗೆ ದೊಡ್ಡ ಕಂದಕಗಳನ್ನು ನಿರ್ಮಿಸಿ ಅವಳ ಜೀವನವನ್ನು ದುರಂತಮಯವಾಗಿಸಿದೆ. ಇಂತಹ ಕಂದಕಗಳಿಂದ ಅವಳನ್ನು ಪಾರುಮಾಡಿ ಪುರುಷನಿಗೆ ಸಮಾನವಾಗಿ ಬದುಕುವ ಅವಕಾಶ ದೊರೆಯಬೇಕು ಎಂಬ ಆಶಯ ಈ ಕಥೆಯಲ್ಲಿ ವ್ಯಕ್ತವಾಗಿದೆ.

ಗೀತಾ ನಾಗಭೂಷಣರವರು ತಮ್ಮ ಕಥೆ 'ಚಿತ್ತಿ ಮತ್ತು ರಿಕ್ಷಾ'ದಲ್ಲಿ ಒಂದು ಹೆಣ್ಣು ಜೀವನೋಪಾಯಕ್ಕಾಗಿ ರಿಕ್ಷಾ ಕೆಲಸವನ್ನು ಆಯ್ದುಕೊಂಡು ಅದರಲ್ಲಿ ಎದುರಾಗುವ ತೊಡಕುಗಳನ್ನು ನಿವಾರಿಸಿಕೊಂಡು ಗಂಡಿಗೆ ಸಮಾನಳಾಗಿ ಬದುಕುವ ಚಿತ್ರಣವನ್ನು ಕೊಡುತ್ತಾರೆ. ಚಿತ್ತಿಯು ತಂದೆ–ತಾಯಿ ಇಲ್ಲದ ಅನಾಥ ಹುಡುಗಿ. ಮಲತಾಯಿಯ ದೌರ್ಜನ್ಯ, ಹಿಂಸೆ, ಒತ್ತಡಗಳಿಗೆ ಒಳಗಾಗಿ ಕಳ್ಳತನ ಕಲಿಯುತ್ತಾಳೆ. ಆರು ವರ್ಷದ ಚಿತ್ತಿ ಮಾರುಕಟ್ಟೆಯಲ್ಲಿ ಒಮ್ಮೆ ಕಳ್ಳತನ ಮಾಡುವಾಗ ಸಿಕ್ಕಿಬಿದ್ದು ಹಮಾಲನೊಬ್ಬನಿಂದ ಹಿಗ್ಗಾಮುಗ್ಗಾ ಹೊಡೆಸಿಕೊಳ್ಳುತ್ತಾಳೆ. ಅವರೆಲ್ಲ ನಡುರಸ್ತೆಯಲ್ಲಿ ಚಿತ್ತಿಯನ್ನು ಬಿಟ್ಟುಹೋದಾಗ ರಿಕ್ಷಾ ಚಾಲಕ ಫಕೀರಪ್ಪ ಅವಳ ಬಳಿಬಂದು ಸಮಾಧಾನ ಮಾಡಿ ತನ್ನ ಮನೆಗೆ ಕರೆದುಕೊಂಡು ಹೋಗುತ್ತಾನೆ. ಚಿತ್ತಿ ಮಲತಾಯಿಯ ಮನೆಗೆ ಹೋಗದೆ ಫಕೀರಪ್ಪನ ಮನೆಯಲ್ಲೇ ಮಗಳಾಗಿ ಉಳಿಯುತ್ತಾಳೆ. ವಯಸ್ಸಾದ ಫಕೀರಪ್ಪ ಕಾಲವಾದ ಮೇಲೆ ಚಿತ್ತಿಯು ಒಂಟಿಯಾಗುತ್ತಾಳೆ ಮತ್ತು ಜೀವನ ನಿರ್ವಹಣೆಯ ಚಿಂತೆಯಾಗುತ್ತದೆ. ಸ್ವಾಭಿಮಾನಿಯಾದ ಚಿತ್ತಿ ತನ್ನ ಸಾಕು ತಂದೆ ಫಕೀರಪ್ಪನ ವೃತ್ತಿಯಾದ ರಿಕ್ಷಾ ಎಳೆಯುವ ಕೆಲಸವನ್ನು ಆಯ್ದುಕೊಳ್ಳುತ್ತಾಳೆ. ಇದನ್ನು ನೋಡಿದ ಸುತ್ತಮುತ್ತಲ

ಕೆಲವು ಹೆಂಗಸರು ರಿಕ್ಷಾ ಎಳೆಯುವ ಕೆಲಸ ಹೆಂಗಸರದ್ದಲ್ಲ, ಅದನ್ನು ಮಾಡಿದರೆ ಹೆಣ್ಣು ಜಾತಿಗೇ ಅವಮಾನ, ಅದರ ಬದಲು ಕೆಲವು ಮನೆಗಳನ್ನು ಮನೆಗಲಸ ಮಾಡಿಕೊಂಡು ಜೀವನ ಮಾಡು ಎಂದು ತಿಳಿಸುತ್ತಾರೆ. ಆದರೆ ಚಿತ್ತಿಗೆ ನೆರವು ಮತ್ತು ಸಲಹೆಗಳನ್ನು ನೀಡುತ್ತಿದ್ದ ಅಜ್ಜಿ ದುಗ್ಗವ್ವಾಯಿ ಹೆಂಗಸರನ್ನು ಸುಮ್ಮನಿರಿಸಿ ಚಿತ್ತಿಗೆ ಧೈರ್ಯ ತುಂಬಿ ರಿಕ್ಷಾ ಎಳೆಯುವ ಕೆಲಸಕ್ಕೆ ಹೋಗು ಎನ್ನುತ್ತಾಳೆ. ಈ ಸಂದರ್ಭದಲ್ಲಿ ಕಥಾಲೇಖಕಿ ಹೆಂಗಸರೂ ಕೂಡ ಗಂಡಸರು ಮಾಡುವ ವೃತ್ತಿಯನ್ನು ಮಾಡಬಹುದು ಎಂದು ತಿಳಿಸುತ್ತಾರೆ. ಲೇಖಕಿ ದುಗ್ಗವ್ವಾಯಿಯ ಮೂಲಕ ಹೇಳಿಸುವ ಮಾತು 'ರಿಕ್ಷಾ ಹೊಡ್ಯಾದು ಶೂರಕೆಲಸ.. ಗಂಡು ಕೆಲಸ ಅದೂ.. ಅಂಜಬುರಕರ ಕೈಯಿಂದ ಈ ಕೆಲಸ ಆಗಾಕಿಲ್ಲವ್ವ.. ಹೋಗು.. ನಿನಗ ನೋಡಿ ಬ್ಯಾರೆ ಹೆಂಗಸರೂ ಈ ದಂಧಾಕ್ಕೆ ಬರ್ತಾರೆ' (ಗೀತಾ ನಾಗಭೂಷಣ 2006: ಪುಟ 612), ಹೆಣ್ಣು ಕೂಡ ಗಂಡಿಗೆ ಸಮಾನವಾಗಿ ಕಷ್ಟದ ಕೆಲಸಗಳನ್ನು ಮಾಡಬಹುದು ಮತ್ತು ಕೆಲಸಗಳು ಗಂಡಿಗಾಗಿ ಅಥವಾ ಹೆಣ್ಣಿಗಾಗಿ ಸೀಮಿತವಾಗಿರುವುದಿಲ್ಲ ಎಂದು ತಿಳಿಸುತ್ತಾರೆ.

ಆರ್ಥಿಕ ನೆಲೆಯಲ್ಲಿ ವಿಶ್ಲೇಷಿಸಿದ ಕಥೆಗಳು ಆರ್ಥಿಕ ಕಾರಣಗಳು ಹಾಗೂ ಬಡತನ ಕಟುಂಬಗಳ ಪರಿಸ್ಥಿತಿಯನ್ನು ಬಿಗಡಾಯಿಸುವುದರೊಂದಿಗೆ ಹೆಣ್ಣಿನ ಪರಿಸ್ಥಿತಿಯನ್ನು ಹಾಳು ಮಾಡುತ್ತವೆ ಎಂದು ತಿಳಿಸುವುದನ್ನು ಕಾಣಬಹುದು. ಗೀತಾ ನಾಗಭೂಷಣರವರು ಕಾರ್ಖಾನೆ ಮುಚ್ಚಿದಾಗ ಅಲ್ಲಿ ಕೆಲಸ ಮಾಡುತ್ತಿದ್ದ ಬಡ ಕುಟುಂಬಗಳು ಬೀದಿ ಪಾಲಾಗಿ ಅನುಭವಿಸುವ ಕಷ್ಟಗಳನ್ನು ಚಿತ್ರಿಸುತ್ತಾ ಅಂತಹ ಕಠಿಣ ಪರಿಸ್ಥಿತಿಯಲ್ಲಿ ದುಡಿದು ಜೀವನ ಕಟ್ಟಲು ಪ್ರಯತ್ನಿಸುವ ಹೆಣ್ಣನ್ನು ಸಮಾಜ ಹಾಳು ಮಾಡುವ ಚಿತ್ರಣವನ್ನು ಕೊಡುತ್ತಾರೆ. ಅನಾಥ ಹೆಣ್ಣೊಬ್ಬಳು, ಸಾಮಾನ್ಯವಾಗಿ ಮಹಿಳೆಯರು ತೊಡಗಿಸಿಕೊಳ್ಳದೇ ಇರುವಂತಹ ರಿಕ್ಷಾ ಎಳೆಯುವ ಕೆಲಸದಲ್ಲಿ ತೊಡಗಿಕೊಂಡು ತನ್ನ ಬದುಕನ್ನು ರೂಢಿಸಿಕೊಳ್ಳುವ ಚಿತ್ರಣವನ್ನು ಗೀತಾ ನಾಗಭೂಷಣರವರು ಕೊಟ್ಟಿದ್ದಾರೆ. ಪುರುಷ ಸಮಾಜ ಹೆಣ್ಣನ್ನು ರಾಜಕೀಯವಾಗಿ ಸಮಾನ ನೆಲೆಯಲ್ಲಿ ನೋಡಲು ಬಯಸದೆ ಅವಳ ಜೀವವನ್ನೇ ಬಲಿತೆಗೆದುಕೊಳ್ಳುವುದು ಇಲ್ಲಿ ಕಂಡುಬರುತ್ತದೆ.

ಯಾವುದೇ ವ್ಯಕ್ತಿಯ ವ್ಯಕ್ತಿತ್ವ ರೂಪುಗೊಳ್ಳಲು ಸಮಾಜ, ಕುಟುಂಬದ ವ್ಯವಸ್ಥೆಯಲ್ಲಿ ಸಮಾನತೆ ಮತ್ತು ಸ್ವಾತಂತ್ರ್ಯ ಅತ್ಯಾವಶ್ಯಕ. ಪುರುಷ ಪ್ರಧಾನ ಸಮಾಜ ಹೆಣ್ಣನ್ನು ಅಸಮಾನತೆಯ ಸ್ಥಿತಿಗೆ ನೂಕಿ ಪುರುಷಾಧೀನವಾಗಿ ಮಾಡಿದೆ. ಸ್ತ್ರೀ–ಪುರುಷರಿಬ್ಬರೂ ಸಾಮಾಜಿಕ, ರಾಜಕೀಯ, ಆರ್ಥಿಕ ನೆಲೆಗಳಲ್ಲಿ ಸಮಾನವಾಗಿರದೆ ಸ್ತ್ರೀ–ಪುರುಷರ ಮಧ್ಯೆ ಅಸಮಾನತೆಯ ಕಂದಕವೇ ಏರ್ಪಟ್ಟಿದೆ. ಸ್ತ್ರೀ–ಪುರುಷರ ನಡುವಿನ ಅಸಮಾನತೆಯನ್ನು ಮಹಿಳಾ ಸಾಹಿತ್ಯ ಗುರುತಿಸಿ

ಅಭಿವ್ಯಕ್ತಿಸಿದೆ. ಲಿಂಗತಾರತಮ್ಯತೆಯ ಸ್ವರೂಪ, ಆಳ, ಮಾರ್ಗಗಳನ್ನು ಲೇಖಕಿಯರು ಭಿನ್ನ ನೆಲೆಗಳಲ್ಲಿ ತೋರಿಸುತ್ತಾರೆ. ಈ ಅಧ್ಯಾಯದಲ್ಲಿ ಕನ್ನಡ ನವ್ಯೋತ್ತರ ಮಹಿಳಾ ಸಾಹಿತ್ಯ ಅಭಿವ್ಯಕ್ತಿಸಿರುವ ಸ್ತ್ರೀ–ಪುರುಷರ ನಡುವಿನ ಸಮಾನತೆ–ಅಸಮಾನತೆಯನ್ನು ಸಾಮಾಜಿಕ ನೆಲೆ, ಕೌಟುಂಬಿಕ ನೆಲೆ, ಆರ್ಥಿಕ ಮತ್ತು ರಾಜಕೀಯ ನೆಲೆಗಳಲ್ಲಿ ವಿಶ್ಲೇಷಿಸಲಾಗಿದೆ. ಪುರುಷ ಪ್ರಧಾನ ಸಮಾಜವು ಹೆಣ್ಣನ್ನು ಶೋಷಿಸಲು ರೀತಿ–ನೀತಿಗಳನ್ನು ರೂಪಿಸಿ ಅವಳನ್ನು ಅಧೀನಳನ್ನಾಗಿ ಮಾಡಿಕೊಂಡು ಅಸಮಾನತೆಯನ್ನು ಸೃಷ್ಟಿಸಿರುವುದು ಸಾಮಾಜಿಕ ನೆಲೆಯ ವಿಶ್ಲೇಷಣೆಯಲ್ಲಿ ಕಂಡುಬರುತ್ತದೆ. ಮಹಿಳೆಯರ ಸ್ವಾತಂತ್ರ್ಯ, ಸಮಾನತೆಗಳ ಅವಕಾಶಗಳನ್ನು ಮುಚ್ಚಿರುವ ಪುರುಷ ಸಮಾಜ ಅವಳ ಉದ್ಧಾರದ ಮಾತುಗಳನ್ನೂ ಆಡುತ್ತಾ ತನ್ನ ದ್ವಂದ್ವ ನಿಲುವನ್ನು ಪ್ರಕಟಿಸುತ್ತದೆ. ಹೆಣ್ಣು ತನ್ನ ಜೀವನ ರೂಪಿಸಿಕೊಳ್ಳಲು ಪ್ರಯತ್ನಿಸಿದರೆ ಸಮಾಜ ಅವಕಾಶ ಕೊಡದೆ ಹೆಣ್ಣಿನ ಬಾಳನ್ನೇ ಬಲಿ ತೆಗೆದುಕೊಳ್ಳುವ ಕೂರತೆ ಕಾಣುತ್ತದೆ. ಆದರೆ ಆಧುನಿಕತೆಯ ಪ್ರವೇಶ ಮಹಿಳೆಯರ ಬಾಳಿಗೆ ಸ್ವಾತಂತ್ರ್ಯ ಕೊಡುವ ಮತ್ತು ಆ ಮೂಲಕ ಅವರ ಹಕ್ಕು, ಸ್ಥಾನಮಾನಗಳನ್ನು ಮಹಿಳೆ ಕೇಳುವ ಪ್ರಕ್ರಿಯೆ ಕಂಡುಬರುತ್ತದೆ. ಇಂತಹ ಬೆಳವಣಿಗೆಗಳು ಮಹಿಳೆಯರಿಗೆ ಸಮಾನತೆ, ಸ್ವತಂತ್ರ ತಂದುಕೊಡುತ್ತವೆ ಎಂದು ಕಂಡುಬರುತ್ತದೆ.

ಆಧುನಿಕತೆಯೊಂದಿಗೆ ವಿದ್ಯೆ, ಉದ್ಯೋಗಗಳ ಅವಕಾಶ ಪಡೆದ ಹೆಣ್ಣು ಸ್ವಂತ ಜೀವನ ಕಟ್ಟಿ ಪುರುಷನಿಗೆ ಸಮನಾದ ಬಾಳನ್ನು ರೂಪಿಸಕೊಳ್ಳಬೇಕು ಎಂದು ತಿಳಿಯುತ್ತದೆ. ಕೌಟುಂಬಿಕ ನೆಲೆಯಲ್ಲಿ ಹೆಣ್ಣಿನ ಮೇಲೆ ನಡೆಯುವ ಅಸಮಾನತೆಯು ಅವಳನ್ನು ಅನಾಥಳನ್ನಾಗಿ ಮಾಡುವ ಪುರುಷ ಪ್ರಧಾನ ಸಮಾಜದ ರೀತಿಗಳು ಮಹಿಳಾ ಸಾಹಿತ್ಯದಲ್ಲಿ ಕಂಡುಬರುತ್ತದೆ. ಪುರುಷ ಸಮಾಜದ ರೀತಿಗೆ ವಿರುದ್ಧವಾದರೆ ಆ ಸಮಾಜ ತಾಯಿಯನ್ನೂ ಬಿಡುವುದಿಲ್ಲ ಎಂಬ ಕಠೋರ ಸತ್ಯ ಸಾಹಿತ್ಯದಲ್ಲಿ ಕಾಣುತ್ತದೆ. ಈ ಸಮಾಜ ಹೆಣ್ಣನ್ನು ಗುಲಾಮಳನ್ನಾಗಿ ಮಾಡಿಕೊಂಡು ಅವಳನ್ನು ಅಸ್ಪೃಶ್ಯಳಂತೆ ಕಾಣುವುದು ಮಹಿಳಾ ಸಾಹಿತ್ಯದಲ್ಲಿ ಕಂಡುಬರುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ಮಹಿಳೆಯರಲ್ಲೂ ತಿಳುವಳಿಕೆ, ಅರಿವು ಮೂಡಿ ಸಮಾಜ ಮತ್ತು ಕಾನೂನಿನ ಸಹಾಯದಿಂದಲೇ ಪುರುಷರ ದೌರ್ಜನ್ಯವನ್ನು ತಡೆದು ತಮ್ಮ ಹಕ್ಕು, ಸ್ವಾತಂತ್ರ್ಯಗಳನ್ನು ಪ್ರತಿಪಾದಿಸಿ ಸಮಾನತೆಯ ಕಡೆ ಹೆಜ್ಜೆ ಹಾಕುವ ಚಿತ್ರಣವೂ ಮಹಿಳಾ ಸಾಹಿತ್ಯದಲ್ಲಿ ಕಂಡುಬರುತ್ತದೆ. ಸ್ತ್ರೀ–ಪುರುಷರ ನಡುವಿನ ಅಸಮಾನತೆಗೆ ಆರ್ಥಿಕ ಅಂಶಗಳೂ ಕಾರಣ. ಮಹಿಳೆಗೆ ಆರ್ಥಿಕ ಸ್ವಾತಂತ್ರ್ಯವಿಲ್ಲದೆ ದುಡಿಯುವ ಅವಕಾಶ, ಹಣಕಾಸಿನ ವ್ಯವಹಾರಗಳಲ್ಲಿ ಅಸಮಾನತೆ ಇರುವುದು ಕಾಣುತ್ತದೆ. ಆರ್ಥಿಕ ನೆಲೆಯಲ್ಲಿ ವಿಶ್ಲೇಷಿಸಿದ ಕಥೆಗಳು ಮೇಲಿನ

ಅಂಶವನ್ನು ಚಿತ್ರಿಸಿ, ಬಡತನ, ನಿರುದ್ಯೋಗ ಮುಂತಾದವುಗಳು ಆರ್ಥಿಕ ಅಸಮಾನತೆಯನ್ನು ಹೆಚ್ಚಿಸುತ್ತವೆ ಮತ್ತು ಇವುಗಳ ಗಂಭೀರ ಪರಿಣಾಮ ಮಹಿಳೆಯ ಮೇಲೆ ಹೆಚ್ಚು ಎಂಬುದನ್ನು ಮಹಿಳಾ ಕಥಾಸಾಹಿತ್ಯ ಪ್ರಕಟಿಸುತ್ತದೆ.

ಅಧ್ಯಾಯ 6

ಅಧ್ಯಾಯ 6

ಮುಸ್ಲಿಂ ಲೇಖಕಿಯರ ಕಥೆಗಳಲ್ಲಿ ಸಮಾನತೆ–ಅಸಮಾನತೆಯ ಚಿತ್ರಣ

ಅಸಮಾನತೆಯ ಜೀವನ, ದೌರ್ಜನ್ಯ, ಶೋಷಣೆ ಅನ್ಯಾಯಗಳಿಂದ ಕೂಡಿದ ಬದುಕು ಎಲ್ಲ ಸಮಾಜಗಳ, ಧರ್ಮಗಳ ಮಹಿಳೆಯರು ಅನುಭವಿಸುತ್ತಿರುವ ಪರಿಸ್ಥಿತಿಯಾಗಿದೆ. ಹೆಣ್ಣು ಕೆಡುಕನ್ನುಂಟು ಮಾಡುವವಳು, ಪುರುಷನಿಗಿಂತ ಕೆಳದರ್ಜೆಯವಳು ಎಂದು ಎಲ್ಲ ಧರ್ಮಗಳಲ್ಲೂ ಬಿಂಬಿಸಿರುವುದನ್ನು ಮೂರನೇ ಅಧ್ಯಾಯದಲ್ಲಿ ಗಮನಿಸಲಾಯಿತು. ಮಹಿಳೆಯ ಮೇಲೆ ಹೇರಿರುವ ಹಲವಾರು ಅಪವಾದಗಳು ಮತ್ತು ಅಧೀನ ಸ್ಥಾನ, ಪುರುಷ ಸಮಾಜ ಅವಳನ್ನು ಶೋಷಿಸಲು ಮತ್ತು ಅಸಮಾನತೆಯ ಕೂಪದಲ್ಲಿ ಹಾಕಿ ಗುಲಾಮಳನ್ನಾಗಿ ಮಾಡಲು ಬಳಸಿದ ಮಾರ್ಗೋಪಾಯಗಳು ಎಂದು ತಿಳಿಯಬಹುದು. ಆದ್ದರಿಂದ ವಿವಿಧ ಧಾರ್ಮಿಕ ಸಾಮಾಜಿಕ ವ್ಯವಸ್ಥೆಗಳಲ್ಲಿ ಇರುವ ಸ್ತ್ರೀ–ಪುರುಷರ ನಡುವಿನ ಸಮಾನತೆ–ಅಸಮಾನತೆಯ ಅಂಶಗಳನ್ನು ಅಧ್ಯಯನ ಮಾಡುವುದು ಅವಶ್ಯಕವಾಗುತ್ತದೆ. ಈ ಹಿನ್ನೆಲೆಯಲ್ಲಿ ಮುಸ್ಲಿಂ ಸಮಾಜದಲ್ಲಿ ಹೆಣ್ಣಿಗಿರುವ ಸ್ಥಾನಮಾನ, ಅಸಮಾನತೆಯ ಪರಿಸ್ಥಿತಿಗಳನ್ನು ಮುಸ್ಲಿಂ ಮಹಿಳಾ ಸಾಹಿತ್ಯ ಚಿತ್ರಿಸಿರುವುದನ್ನು ಅಧ್ಯಯನ ಮಾಡುವುದು ಅವಶ್ಯವೆನಿಸುತ್ತದೆ. ಸಾಹಿತ್ಯವು ಸಮಾಜವನ್ನು ಪ್ರತಿಬಿಂಬಿಸುವುದರಿಂದ ಮುಸ್ಲಿಂ ಮಹಿಳಾ ಸಾಹಿತಿಗಳು ರಚಿಸಿರುವ ಕೃತಿಗಳನ್ನು ವಿಶ್ಲೇಷಣೆ ಮಾಡುವುದರಿಂದ ಮುಸ್ಲಿಂ ಸಮಾಜದಲ್ಲಿ ಮಹಿಳೆಯರು ಅನುಭವಿಸುತ್ತಿರುವ ಜೀವನ, ಅವರ ಸ್ಥಾನಮಾನ, ಹಕ್ಕು ಭಾಧ್ಯತೆ, ಸಮಾನತೆ–ಅಸಮಾನತೆಗಳನ್ನು ತಿಳಿಯಲು ಸಾಧ್ಯವಾಗುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಮುಸ್ಲಿಂ ಸಮಾಜದ ಚಿತ್ರಣ ಕೇವಲ ಚಿಕ್ಕ ಪಾತ್ರ, ಘಟನೆಗಳ ಮೂಲಕ ಕನ್ನಡ ಸಾಹಿತ್ಯದಲ್ಲಿ ವ್ಯಕ್ತವಾಗುತ್ತಿತ್ತು. ಇಲ್ಲಿ ಮುಸ್ಲೀಂ ಸಂವೇದನೆಗಳು ಇಡಿಯಾಗಿ ಹೊರಹೊಮ್ಮುತ್ತಿರಲಿಲ್ಲ. ಇಂತಹ ಸಂದರ್ಭದಲ್ಲಿ ಬಂದ ಫಕೀರ್ ಮಹಮ್ಮದ್ ಕಟ್ಪಾಡಿ, ಬೋಳುವಾರು ಮಹಮ್ಮದ್ ಕುಂಇ, ಸಾರಾ ಅಬೂಬಕ್ಕರ್, ಬಾನು ಮುಷ್ತಾಕ್, ಅಬ್ದುಲ್ ರಷೀದ್ ಮೊದಲಾದವರ ಕೃತಿಗಳಲ್ಲಿ ಮುಸ್ಲಿಂ ಸಂವೇದನೆ ಕಂಡುಬಂದಿತು. ಮುಸ್ಲಿಂ ಮಹಿಳೆಯರ ಜೀವನ, ನೋವು, ಸಾಮಾಜಿಕ, ಧಾರ್ಮಿಕ ಕಟ್ಟುಪಾಡುಗಳು ಅವರನ್ನು ಬಂಧಿಸಿರುವುದನ್ನು ಸಾರಾ ಅಬೂಬಕ್ಕರ್ ಮತ್ತು ಬಾನು ಮುಷ್ತಾಕ್‌ರವರ ಕಥೆಗಳು ಚಿತ್ರಿಸುತ್ತವೆ. ಷರೀಫಾ ಕೆ. ಅವರು ಹೇಳುವ "ಮುಸ್ಲಿಂ ಜಗತ್ತಿನ ಕಾದಂಬರಿ ಕಥೆಗಳಲ್ಲಿ ಮಹಿಳಾ ಸಂವೇದನೆಗಳಿವೆ. ಕಥೆಗಳ ಮಹಿಳಾ ಪಾತ್ರಗಳು ಅವಳ ಹಕ್ಕನ್ನು ಕೇಳುತ್ತವೆಯಾದರೂ ಧರ್ಮದ

ಚೌಕಟ್ಟನ್ನು ದಾಟುವುದಿಲ್ಲ" (2011: ಪುಟ 19) ಈ ಹೇಳಿಕೆ ಮುಸ್ಲಿಂ ಸಾಹಿತ್ಯವು ಮಹಿಳೆಯರ ಸ್ಥಿತಿಗತಿಗಳನ್ನು ತೋರಿಸುತ್ತದೆ, ಆದರೆ ಆ ಪಾತ್ರಗಳು ಧರ್ಮದ ಚೌಕಟ್ಟಿನೊಳಗೆ ಇರುತ್ತವೆ ಎನ್ನುವುದು ಮಹಿಳೆಯರ ಜೀವನದಲ್ಲಿ ಸಮಾಜ, ಧರ್ಮದ ಪಾತ್ರವನ್ನು ತೋರಿಸುತ್ತದೆ. ಇಂತಹ ಸಾಮಾಜಿಕ, ಧಾರ್ಮಿಕ ಪರಿಸ್ಥಿತಿಯಲ್ಲಿ ಮುಸ್ಲಿಂ ಲೇಖಕಿಯರು ಕೌಟುಂಬಿಕ ಚೌಕಟ್ಟು, ತಲಾಖ್, ಪುರುಷಾಧಿಪತ್ಯ, ಹೆಣ್ಣಿನ ಚಲನವಲನದ ಮೇಲೆ ನಿಯಂತ್ರಣ ಹೀಗೆ ಹಲವು ವಿಷಯಗಳನ್ನು ಕುರಿತು ಸಾಹಿತ್ಯವನ್ನು ರಚಿಸಿದ್ದಾರೆ. ಈ ಮೇಲಿನ ಅಂಶಗಳ ಆಧಾರದ ಮೇಲೆ ಮುಸ್ಲಿಂ ಲೇಖಕಿಯರ ಕೃತಿಗಳಲ್ಲಿ ವ್ಯಕ್ತವಾಗಿರುವ ಸ್ತ್ರೀ–ಪುರುಷರ ನಡುವಿನ ಸಮಾನತೆ–ಅಸಮಾನತೆಯನ್ನು ಕುರಿತು ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ. ಮಹಿಳೆಯರ ಸ್ಥಾನಮಾನಗಳನ್ನು ನಿರ್ಧರಿಸುವುದು ಸಾಮಾಜಿಕ, ಕೌಟುಂಬಿಕ, ಧಾರ್ಮಿಕ ಅಂಶಗಳಾಗಿರುವುದರಿಂದ ಈ ಅಧ್ಯಾಯದಲ್ಲಿ ಸ್ತ್ರೀ–ಪುರುಷರ ನಡುವಿನ ಸಮಾನತೆ–ಅಸಮಾನತೆಯನ್ನು ಕೆಳಗಿನ ನೆಲೆಗಳಲ್ಲಿ ವಿಶ್ಲೇಷಿಸಲಾಗಿದೆ; ಅವುಗಳೆಂದರೆ:–

1. ಧಾರ್ಮಿಕ ನೆಲೆಯಲ್ಲಿ ಸಮಾನತೆ–ಅಸಮಾನತೆ
2. ಸಾಮಾಜಿಕ ನೆಲೆಯಲ್ಲಿ ಸಮಾನತೆ–ಅಸಮಾನತೆ
3. ಕೌಟುಂಬಿಕ ನೆಲೆಯಲ್ಲಿ ಸಮಾನತೆ–ಅಸಮಾನತೆ

ಈ ಉದ್ದೇಶಕ್ಕಾಗಿ ಮುಸ್ಲಿಂ ಲೇಖಕಿಯರಲ್ಲಿ ಕೆಲವು ಲೇಖಕಿಯರನ್ನು ಪರಿಗಣಿಸಿ ಅವರ ಕೆಲವು ಕಥೆಗಳನ್ನು ವಿಶ್ಲೇಷಣೆಗೆ ಆಯ್ದುಕೊಳ್ಳಲಾಗಿದೆ. ಈ ಆಯ್ಕೆಯ ಮುಖ್ಯ ಆಧಾರ ಅವರ ಕಥೆಗಳಲ್ಲಿ ವ್ಯಕ್ತವಾಗಿರುವ ಸ್ತ್ರೀ–ಪುರುಷರ ನಡುವಿನ ಸಮಾನತೆ–ಅಸಮಾನತೆಯ ಚಿತ್ರಣ. ಈ ಅಂಶಗಳ ಆಧಾರದ ಮೇಲೆ ಸಾರಾ ಅಬೂಬಕ್ಕರ್ ಮತ್ತು ಬಾನು ಮುಷ್ತಾಕ್‌ರವರ ಕಥೆಗಳನ್ನು ಪರಿಗಣಿಸಲಾಗಿದೆ.

6.1. ಧಾರ್ಮಿಕ ನೆಲೆಯಲ್ಲಿ ಸಮಾನತೆ–ಅಸಮಾನತೆ

ಧರ್ಮವು ಸಮಾಜದಲ್ಲಿ ಜನಜೀವನವನ್ನು ನಿಯಂತ್ರಿಸುತ್ತದೆ. ಈ ನಿಯಂತ್ರಣ ಪುರುಷರಿಗೂ ಮತ್ತು ಸ್ತ್ರೀಯರಿಗೂ ಬೇರೆ ಬೇರೆಯಾದಾಗ ಅಸಮಾನತೆ ಬೆಳೆದು ತೀವ್ರ ನಿಯಂತ್ರಣಕ್ಕೊಳಗಾದವರು ಅಧೀನ ಸ್ಥಿತಿ ತಲುಪುತ್ತಾರೆ. ಈ ಹಿನ್ನೆಲೆಯಲ್ಲಿ ಧರ್ಮದ ಆಧಾರದ ಮೇಲೆ ಸ್ತ್ರೀ–ಪುರುಷರ ನಡುವೆ ಇರುವ ಸಮಾನತೆ–ಅಸಮಾನತೆಯನ್ನು ಮುಸ್ಲಿಂ ಮಹಿಳಾ ಲೇಖಕಿಯರು ಚಿತ್ರಿಸಿರುವುದನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಈ ವಿಶ್ಲೇಷಣೆಗೆ ಸಾರಾ

ಅಬೂಬಕ್ಕರ್‌ರವರ 'ಚಂದ್ರಗಿರಿಯ ತೀರದಲ್ಲಿ' (ಕಾದಂಬರಿ), 'ಧರ್ಮ ಬಲೆ ಬೀಸಿದಾಗ' ಕೃತಿಗಳನ್ನು ಪರಿಗಣಿಸಲಾಗಿದೆ.

ಸಾರಾ ಅಬೂಬಕ್ಕರ್‌ರವರ ತಮ್ಮ "ಚಂದ್ರಗಿರಿ ತೀರದಲ್ಲಿ" ಕಾದಂಬರಿಯಲ್ಲಿ ಮುಸ್ಲಿಂ ಕುಟುಂಬದಲ್ಲಿ ಪುರುಷನಿಂದ ಹಾಗೂ ಧರ್ಮದ ರೀತಿ-ನೀತಿಗಳಿಂದ ಹೆಣ್ಣಿನ ಮೇಲೆ ನಡೆಯುತ್ತಿದ್ದ ದೌರ್ಜನ್ಯ, ಶೋಷಣೆ, ಅಸಮಾನತೆ ಮತ್ತು ಅವಳ ಅಸಹಾಯಕತೆ ಮುಂತಾದ ವಿಷಯಗಳನ್ನು ಕಥಾವಸ್ತುವಾಗಿ ತೆಗೆದುಕೊಂಡು ಮುಸ್ಲಿಂ ಸಮಾಜದಲ್ಲಿ ಗಂಡು ಮತ್ತು ಹೆಣ್ಣಿನ ನಡುವೆ ಇರುವ ಅಸಮಾನತೆಯನ್ನು ಚಿತ್ರಿಸಿದ್ದಾರೆ. ಈ ಕಾದಂಬರಿಯ ಪಾತ್ರಗಳಾದ ನಾದಿರಾ ಮತ್ತು ಅವಳ ತಾಯಿ ಫಾತಿಮಾ ತಮ್ಮ ಜೀವನದುದ್ದಕ್ಕೂ ಪುರುಷರ ನಿರ್ಣಯ ಹಾಗೂ ಧರ್ಮದ ಚೌಕಟ್ಟಿನಲ್ಲಿ ಸಿಲುಕಿ ಶೋಷಣೆ, ಅಸಹಾಯಕತೆ ಮತ್ತು ಅಸಮಾನತೆಯನ್ನು ಅನುಭವಿಸುವ ಚಿತ್ರಣವನ್ನು ನೀಡಿದ್ದಾರೆ. ಫಾತಿಮಾಳಿಗೆ 28 ವರ್ಷದ ಮೊಹಮ್ಮದ್ ಖಾನ್‌ನೊಡನೆ ವಿವಾಹವಾದಾಗ ಕೇವಲ 11 ವರ್ಷ ವಯಸ್ಸಾಗಿರುತ್ತದೆ. ಮದುವೆಯ ಸಂದರ್ಭದಲ್ಲಿ ಹೆಣ್ಣಿನ ಅಭಿಪ್ರಾಯ ಕೇಳುವ, ಅವಳಿಗೆ ಆಯ್ಕೆಯ ಸ್ವಾತಂತ್ರ್ಯ ಕೊಡುವ ಪದ್ಧತಿ ಇಲ್ಲದ ಕಾಲದಲ್ಲಿ ಹಿರಿಯರು ಹೇಳುವ ಮಾತುಗಳು-"ಅವಳೇನು ಯಾವಾಗಲೂ ಚಿಕ್ಕವಳಾಗಿಯೇ ಇರುತ್ತಾಳೆಯೇ? ಒಂದೆರಡು ವರ್ಷಗಳಲ್ಲಿ ದೊಡ್ಡವಳಾಗುವುದಿಲ್ಲವೇ? ಮದುವೆಯಾಗಲು ಚಿಕ್ಕ ಹುಡುಗಿಯೇ ಚೆನ್ನ. ಗಂಡ ಮುದುಕನಾಗಿ ಹಾಸಿಗೆ ಹಿಡಿದಾಗ ಹೆಂಡತಿ ಇನ್ನೂ ಗಟ್ಟಿಮುಟ್ಟಾಗಿ ಆತನ ಚಾಕರಿ ಮಾಡಲು ಶಕ್ತಳಾಗಿರುತ್ತಾಳೆ!" (ಸಾರಾ ಅಬೂಬಕ್ಕರ್ 1984: ಪುಟ 4) ಹೆಣ್ಣನ್ನು ಸೇವೆ ಮಾಡುವ ಗುಲಾಮಳ ಸ್ಥಾನಕ್ಕೆ ನಿಲ್ಲಿಸುವ ರೀತಿಯನ್ನು ತೋರಿಸುತ್ತದೆ. ಇಲ್ಲಿ ಸಾರಾರವರು ವ್ಯಕ್ತಪಡಿಸುವ "ಹೆಣ್ಣು ಸೃಷ್ಟಿಸಲ್ಪಟ್ಟಿರುವುದೇ ಗಂಡಿನ ಸೇವೆಗಳಿಗಲ್ಲವೇ" (ಸಾರಾ ಅಬೂಬಕ್ಕರ್ 1984: ಪುಟ 4) ಎಂಬ ಅಭಿಪ್ರಾಯ ಅವರು ಸಮಾಜದಲ್ಲಿ ಹೆಣ್ಣಿನ ಗುಲಾಮಗಿರಿಯನ್ನು ಗ್ರಹಿಸಿರುವುದನ್ನು ತೋರಿಸುತ್ತದೆ.

ಗಂಡ ಹೇಳಿದ್ದನ್ನು ಹೆಣ್ಣು ಕೇಳದಿದ್ದಾಗ ಅವಳ ಮೇಲೆ ದೌರ್ಜನ್ಯ, ಹಿಂಸೆ ನಡೆಯುತ್ತದೆ ಎಂಬುದು ಫಾತಿಮಾಳ ವಿವಾಹವಾದ ಮೊದಲ ದಿನಗಳಲ್ಲಿಯೇ ತಿಳಿಯುತ್ತದೆ. ಒಂದು ಬಾರಿ ಫಾತಿಮಾ ತನ್ನ ಅಕ್ಕನ ಮಗಳ ಮದುವೆಗೆಂದು ಹೋದಾಗ ಅಕ್ಕನ ಒತ್ತಾಯಕ್ಕೆ ಮಣಿದು ಮನೆಗೆ ಹಿಂದಿರುಗುವಾಗ ರಾತ್ರಿ ಬಹಳ ಹೊತ್ತಾಗಿರುತ್ತದೆ. ತಡರಾತ್ರಿಯಲ್ಲಿ ಬಂದ ಫಾತಿಮಾಳನ್ನು ಮೊಹಮ್ಮದ್‌ಖಾನ್ ಬೆತ್ತದ ಕೋಲಿನಿಂದ ಹೊಡೆಯುತ್ತಾನೆ. ಇಲ್ಲಿ ಪುರುಷ ಸ್ತ್ರೀಯನ್ನು ತನ್ನ

ಅಧೀನದಲ್ಲಿಟ್ಟುಕೊಳ್ಳಲು ಸಂದರ್ಭ ದೊರೆತಾಗಲೆಲ್ಲ ಹೇಗೆ ಬಲಪ್ರಯೋಗಿಸುತ್ತಾನೆ ಎಂಬುದನ್ನು ತಿಳಿಸಿದ್ದಾರೆ.

ಸಾರಾರವರು ಮುಸ್ಲಿಂ ಸಮಾಜದ ರೀತಿ ನೀತಿಗಳು, ಧರ್ಮದ ಕಟ್ಟುಪಾಡುಗಳು ಹೇಗೆ ಹೆಣ್ಣನ್ನು ಪುರುಷನ ಅಧೀನಳನ್ನಾಗಿ ಮಾಡಿ, ಅವಳಿಗೆ ಯಾವುದೇ ಸ್ವಾತಂತ್ರ್ಯ, ಸಮಾನತೆಯನ್ನು ನೀಡದೆ, ಹೆಣ್ಣಿನ ಜೀವನ ಗಂಡಿನ ನಿರ್ಧಾರಗಳಲ್ಲಿ ಅಡಗಿರುವ ರೀತಿಯನ್ನು ನಾದಿರಾಳ ಪಾತ್ರದ ಮೂಲಕ ತೆರೆದಿಟ್ಟಿದ್ದಾರೆ. ಮೊಹಮ್ಮದ್‌ಖಾನ್ ತನ್ನ ಹಿರಿಯ ಮಗಳಾದ ನಾದಿರಾಳನ್ನು ರಶೀದ್‌ಗೆ ಮದುವೆ ಮಾಡುತ್ತಾನೆ. ವಿದ್ಯೆಯಿಲ್ಲದ ಪರ ಊರನ್ನು ನೋಡಿರದ ನಾದಿರಾಳನ್ನು ಆಧುನಿಕತೆ ಮತ್ತು ಸಮಾನತೆಯ ಮನೋಭಾವವುಳ್ಳ ರಶೀದ್ ಪ್ರೀತಿಯಿಂದ ನೋಡಿಕೊಳ್ಳುತ್ತಿರುತ್ತಾನೆ. ಹಾಗೂ ಅವರ ದಾಂಪತ್ಯ ಜೀವನ ಅನ್ಯೋನ್ಯವಾಗಿ ಸಾಗುತ್ತಿರುತ್ತದೆ. ಒಂದು ಬಾರಿ ರಶೀದ್‌ನು ಸಿನಿಮಾ ನೋಡಲಿಕ್ಕೆ ಹೊರಟಾಗ, ನಾದಿರಾ ತಾನೂ ಸಿನಿಮಾ ನೋಡಬೇಕೆಂಬ ಅಪೇಕ್ಷೆಯನ್ನು ವ್ಯಕ್ತಪಡಿಸುತ್ತಾಳೆ. ರಶೀದ್‌ಗೂ ನಾದಿರಾಳಿಗೆ ಸಿನಿಮಾಕ್ಕೆ ಕರೆದುಕೊಂಡು ಹೋಗುವ ಮನಸ್ಸಿರುತ್ತದೆ. ಆದರೆ ಮಸೀದಿಯಲ್ಲಿ ಮೌಲ್ವಿಗಳು ಹೇಳಿದ ಮಾತುಗಳು "ನಿಮ್ಮ ಹೆಂಗಸರನ್ನು ಮನೆಯಿಂದ ಹೊರಗೆ ಕಳುಹಿಸಬೇಡಿ; ಹೆಂಗಸರಿಗೆ ಹೆಚ್ಚು ಸ್ವಾತಂತ್ರ್ಯ ಕೊಡಬೇಡಿ" (ಸಾರಾ ಅಬೂಬಕ್ಕರ್ 1984: ಪುಟ 13) ಜ್ಞಾಪಕಕ್ಕೆ ಬರುತ್ತದೆ. ಈ ಸಂದರ್ಭದಲ್ಲಿ ರಶೀದ್ "ಗಂಡಸರು ಏನೆಲ್ಲಾ ಅನಾಚಾರ ಮಾಡಿದರೂ ಬಾಯಿಮುಚ್ಚಿಕೊಂಡಿರುವ ಸಮಾಜ ಹೆಂಗಸೊಬ್ಬಳು ಸಿನಿಮಾ ನೋಡಲು ಹೊರಟೊಡನೆ ಕಲ್ಲು ಬೀರಲು ಪ್ರಾರಂಭಿಸುತ್ತದಲ್ಲ" (ಸಾರಾ ಅಬೂಬಕ್ಕರ್ 1984: ಪುಟ 13) ಎಂದು ಹೇಳುತ್ತಾನೆ ಈ ಮಾತುಗಳ ಮುಖಾಂತರ ಲೇಖಕಿ ಮುಸ್ಲಿಂ ಸಮಾಜದಲ್ಲಿ ಪುರುಷ ಮತ್ತು ಸ್ತ್ರೀಯರ ವ್ಯಕ್ತಿ ಸ್ವಾತಂತ್ರ್ಯದ ನಡುವಿನ ಅಂತರ ಮತ್ತು ಸ್ತ್ರೀಯರಿಗೆ ವೈಯಕ್ತಿಕ ತೀರ್ಮಾನ ತೆಗೆದುಕೊಳ್ಳುವ ಸ್ವಾತಂತ್ರ್ಯವಿಲ್ಲದಿರುವುದನ್ನು ತೋರಿಸುತ್ತಾರೆ.

ಸಾರಾ ಅಬೂಬಕ್ಕರ್‌ರವರು ಪುರುಷನ ಅಹಂ, ಮುಂಗೋಪ, ದಡ್ಡತನ ಮತ್ತು ಸಮಾಜದ ಕಟ್ಟುಪಾಡುಗಳಿಂದ ಒಂದು ಮುಗ್ಧ ಹೆಣ್ಣು ಜೀವ ತನ್ನ ಜೀವನವನ್ನು ಕಳೆದುಕೊಂಡು ಪುರುಷನ ನಿರ್ಧಾರಗಳ ಕೈಗೊಂಬೆಯಾಗಿ ದಾರುಣ ಅಂತ್ಯವನ್ನು ಕಾಣುವ ಚಿತ್ರಣವನ್ನು ನೀಡಿದ್ದಾರೆ. ಮೊಹಮ್ಮದ್‌ಖಾನ್ ತನ್ನ ಕಿರಿಯ ಮಗಳು ಜಮೀಲಾಳ ಮದುವೆಗೆ ಹಣ ಸಾಲದಿದ್ದಾಗ ಅಳಿಯ ರಶೀದ್‌ನನ್ನು ಕೇಳುತ್ತಾನೆ. ಆದರೆ ರಶೀದ್ ಅವನಲ್ಲಿದ್ದ ಹಣವನ್ನು ವ್ಯಾಪಾರ ವೃದ್ಧಿಗೆ ಹಾಕಿರುವುದರಿಂದ ಈಗ ತನ್ನಲ್ಲಿ ಹಣವಿಲ್ಲವೆಂದು ಹೇಳುತ್ತಾನೆ. ಮಾತಿಗೆ

ಮಾತು ಬೆಳೆದು, ಅವರಿಬ್ಬರು ಜಗಳವಾಡುತ್ತಾರೆ. ಕೋಪಗೊಂಡ ಮೊಹಮ್ಮದ್‌ಖಾನ್ ರಶೀದ್‌ನ ಮನೆಗೆ ಹೋಗಿ ನಯವಾಗಿ ನಾದಿರಾ ಹಾಗೂ ಮೊಮ್ಮಗನನ್ನು ಮನೆಗೆ ಕರೆದುಕೊಂಡು ಹೋಗುತ್ತಾನೆ. ಆ ದಿನ ರಾತ್ರಿ ತಾಯಿ ಮಗಳು ಮಾತನಾಡುವಾಗ ಒಂದೆರಡು ದಿನಗಳು ಇದ್ದು ನಂತರ ವಾಪಸ್ ಗಂಡನ ಮನೆಗೆ ಹೋಗುತ್ತೇನೆ ಎಂದು ನಾದಿರಾ ಹೇಳುತ್ತಾಳೆ. ಇದನ್ನು ಕೇಳಿದ ಮೊಹಮ್ಮದ್‌ಖಾನ್ ಪುನಃ ನಾದಿರಾಳನ್ನು ರಶೀದ್‌ನ ಮನೆಗೆ ಕಳುಹಿಸುವುದಿಲ್ಲವೆಂದು ಹೇಳಿ ಕೋಪದಿಂದ ತನ್ನ ಮತ್ತು ಅಳಿಯನ ನಡುವೆ ನಡೆದ ಘಟನೆಯನ್ನು ವಿವರಿಸುತ್ತಾನೆ. ನಾದಿರಾ ತಾನು ತಂದೆಯ ನಯವಾದ ಮೋಸಕ್ಕೆ ಒಳಗಾಗಿ ಗಂಡನ ಮನೆಯನ್ನು ಬಿಟ್ಟು ಬಂದಿದ್ದು ತಪ್ಪಾಯಿತು ಎಂದು ಯೋಚಿಸುತ್ತಾಳೆ.

ನಾದಿರಾ ಗಂಡ ರಶೀದ್ ಬಂದು ತನ್ನನ್ನು ಕರೆದುಕೊಂಡು ಹೋಗುತ್ತಾನೆ ಎಂಬ ನಿರೀಕ್ಷೆಯಲ್ಲಿ ದಿನಗಳನ್ನು ಕಳೆಯುತ್ತಿರುತ್ತಾಳೆ ಮತ್ತು ರಶೀದ್ ನಾದಿರಾ ವಾಪಸ್ ತನ್ನ ಮನೆಗೆ ಬರುತ್ತಾಳೆ ಎಂದು ಯೋಚಿಸುತ್ತಾನೆ. ಆದರೆ ಹಲವಾರು ತಿಂಗಳು ಕಳೆದರೂ ರಶೀದ್ ಬರದೇ ಇದ್ದಾಗ ನಾದಿರಾಳ ಚಿಂತೆ ಹೆಚ್ಚಾಗುತ್ತದೆ. ನಾದಿರಾ ತನ್ನ ತಾಯಿಯ ಬಳಿ ಹೇಗಾದರೂ ಮಾಡಿ ತನ್ನನ್ನು ಗಂಡನ ಮನೆಗೆ ಕಳುಹಿಸಿಕೊಡಿ ಎಂದು ಕೇಳುತ್ತಾಳೆ. ಇದೇ ಸಮಯದಲ್ಲಿ ರಶೀದ್ ತನ್ನ ಊರಿನಲ್ಲಿ ಮೀನು ಮಾರುವ ಪಾರುವಿನ ಮುಖಾಂತರ ನಾದಿರಾಳಿಗೆ ಒಂದು ಪತ್ರವನ್ನು ಕಳುಹಿಸುತ್ತಾನೆ. ಆ ಪತ್ರದಲ್ಲಿ ನಾನು ಇಷ್ಟು ದಿನವೂ ನೀನು ಬರುವೆ ಎಂದು ಕಾದು ನೋಡಿದೆ. ನಿನ್ನ ತಂದೆಯ ಮೂರ್ಖತನಕ್ಕೆ ನಿನ್ನ ಬಾಳು ಬಲಿಯಾಗುತ್ತಿದೆ. ನಾಳೆ ಸಂಜೆ ಚಂದ್ರಗಿರಿಯ ತೀರದಲ್ಲಿ ಟ್ಯಾಕ್ಸಿಯೊಂದಿಗೆ ನಿಂತಿರುತ್ತೇನೆ, ನೀನು ಮನೆಯಲ್ಲಿ ಯಾರಿಗೂ ತಿಳಿಸದೆ ಬಂದುಬಿಡು ಎಂದು ಬರೆದಿರುತ್ತಾನೆ.

ರಶೀದ್‌ನ ಸಹಾಯದಿಂದ ಅಲ್ಪಸ್ವಲ್ಪ ಓದಲು ಕಲಿತಿದ್ದ ನಾದಿರಾ ಕಷ್ಟಪಟ್ಟು ಓದಿ ಅವನ ಪತ್ರದ ಸಾರಾಂಶವನ್ನು ತಿಳಿದುಕೊಳ್ಳುತ್ತಾಳೆ. ಈ ಸಂದರ್ಭದಲ್ಲಿ ತಾನು ವಿದ್ಯೆ ಕಲಿಯದಿರುವುದರ ಬಗ್ಗೆ ಮತ್ತು ರಶೀದ್‌ನೊಂದಿಗೆ ಕಲಿಯುವ ಅವಕಾಶ ದೊರೆತಾಗಲೂ ಅದನ್ನು ಸದುಪಯೋಗ ಮಾಡಿಕೊಳ್ಳದೆ ಇದ್ದುದಕ್ಕೆ ನೊಂದುಕೊಂಡು ರಶೀದ್‌ನಿಗೆ ಪತ್ರ ಬರೆಯಲಾಗದೆ ತನ್ನ ಮನದಾಳದ ಯೋಚನೆಗಳನ್ನು ಹೊರಹಾಕಲು ವಿದ್ಯೆಯ ಅಗತ್ಯದ ಮಹತ್ವವನ್ನು ಅರಿಯುತ್ತಾಳೆ. ಅಂದು ಸಂಜೆ ಪಾರು ಮನೆಗೆ ಬಂದಾಗ ತನ್ನ ತಂದೆಗೆ ತಿಳಿಸದೆ ತಾನು ಬರುವುದು ಸಾಧ್ಯವಿಲ್ಲ ರಶೀದ್‌ನೆ ಬಂದು ನನ್ನ ತಂದೆಯೊಡನೆ ಮಾತನಾಡಿ ಕರೆದುಕೊಂಡು ಹೋಗುವಂತೆ ಹೇಳು ಎಂದು ತಿಳಿಸುತ್ತಾಳೆ. ಇಲ್ಲಿ ತಂದೆಯ ಹಿಡಿತದಲ್ಲಿ ಮತ್ತು ಸಮಾಜದ ಕಟ್ಟುಪಾಡುಗಳಲ್ಲಿಯೇ

ಬೆಳೆದ ಹೆಣ್ಣೊಬ್ಬಳು ತನ್ನ ದಾಂಪತ್ಯ ಜೀವನ ಹಾಳಾಗುತ್ತಿದ್ದರೂ ಸಹ ಕಟ್ಟುಪಾಡುಗಳನ್ನು ಧಿಕ್ಕರಿಸಿ ಸ್ವತಃ ನಿರ್ಧಾರ ತೆಗೆದುಕೊಂಡು ತನ್ನ ಜೀವನವನ್ನು ಸರಿ ಮಾಡಿಕೊಳ್ಳಲು ಆಗದಿರುವಂತಹ ಅಸಹಾಯಕ ಪರಿಸ್ಥಿತಿಯನ್ನು ಚಿತ್ರಿಸುತ್ತಾ ಕುಟುಂಬ ಮತ್ತು ಸಮಾಜದ ರೀತಿನೀತಿಗಳು ಸೃಷ್ಟಿಸುವ ಅಸಮಾನತೆಯನ್ನು ಲೇಖಕಿಯವರು ತೋರಿಸುತ್ತಾರೆ.

ಪತ್ರದ ಮುಖಾಂತರ ನಾದಿರಾಳನ್ನು ಕರೆಸಿಕೊಳ್ಳಲು ನಡೆಸಿದ ಪ್ರಯತ್ನ ಸಫಲವಾಗದೆ ಇದ್ದಾಗ ರಶೀದ್‌ನು ಮತ್ತೊಂದು ಪ್ರಯತ್ನ ಮಾಡುತ್ತಾನೆ. ತನ್ನ ಮಗನನ್ನು ಕರೆಸಿಕೊಂಡರೆ ಅಗಲಿಕೆಯನ್ನು ತಾಳಲಾರದೆ ನಾದಿರಾ ಮನೆಗೆ ಬರುವಳೆಂದು ಯೋಚಿಸಿದ ರಶೀದ್ ತಾಯಿಯನ್ನು ಮೊಹಮ್ಮದ್‌ಖಾನ್‌ನ ಮನೆಗೆ ಕಳುಹಿಸಿ ಯಾರಿಗೂ ತಿಳಿಸದಂತೆ ಮಗುವನ್ನು ಕರೆಸಿಕೊಳ್ಳುತ್ತಾನೆ. ಅತ್ತೆಯು ತನ್ನನ್ನು ಕರೆದುಕೊಂಡು ಹೋಗಬಹುದೆಂಬ ನಿರೀಕ್ಷೆಯಲ್ಲಿದ್ದ ನಾದಿರಾಳಿಗೆ ತನ್ನ ಅತ್ತೆ ಯಾರಿಗೂ ಹೇಳದೆ ಮಗುವನ್ನು ಕರೆದುಕೊಂಡು ಹೋಗಿದ್ದು ಮತ್ತು ತನ್ನನ್ನು ಕರೆಯದಿದ್ದುದು ದೊಡ್ಡ ಆಘಾತವನ್ನು ನೀಡುತ್ತದೆ. ಈ ಸಂದರ್ಭದಲ್ಲಿ ಲೇಖಕಿ ಮಕ್ಕಳ ಮೇಲೆ ತಂದೆಗೆ ಅಂದರೆ ಗಂಡಿಗೆ ಸಂಪೂರ್ಣ ಅಧಿಕಾರವಿರುತ್ತದೆ, ಆದರೆ ಆ ಮಗುವನ್ನು ಹೆತ್ತ ತಾಯಿಗೆ ಯಾವ ಅಧಿಕಾರವೂ ಇರುವುದಿಲ್ಲ ಎಂಬ ಮುಸ್ಲಿಂ ಸಮಾಜದ ಅಸಮಾನ ನಿಲುವನ್ನು ತೋರಿಸುತ್ತಾರೆ. ಇಲ್ಲಿ ರಶೀದನು ತನ್ನ ಹೆಂಡತಿಯನ್ನು ಕರೆಸಿಕೊಳ್ಳಲು ಮಾಡುವ ಪ್ರಯತ್ನ ಒಪ್ಪಬಹುದಾದರೂ, ಕರೆಸುವ ಮಾರ್ಗ ಒಪ್ಪಲು ಸಾಧ್ಯವಿಲ್ಲ. ಏಕೆಂದರೆ, ತಾನು ಹೆತ್ತ ಮಗನನ್ನು ತನಗೆ ಹೇಳದೆ ಕರೆದೊಯ್ದಾಗ ಆ ಹೆಣ್ಣು ಅನುಭವಿಸುವ ನೋವು ಮತ್ತು ತನ್ನ ಮಗುವಿನ ಮೇಲೆ ತನಗೆ ಯಾವುದೇ ಅಧಿಕಾರವಿಲ್ಲದಿರುವ ಅಂಶಗಳನ್ನು ಯಾರೂ ಗಮನಿಸುವುದಿಲ್ಲ.

ಮಗುವನ್ನು ಕರೆದುಕೊಂಡು ಬಂದರೆ ನಾದಿರಾ ಮಗುವನ್ನು ಅಗಲಿರಲಾರದೆ ಬರುತ್ತಾಳೆ ಎಂಬ ರಶೀದ್ ಮತ್ತು ಅವನ ತಾಯಿಯ ನಿರೀಕ್ಷೆ ಈಡೇರಲಿಲ್ಲ. ಆದರೆ ನಾದಿರಾ ತನ್ನ ತಂದೆಗೆ ಹೇಳದೆ ಗಂಡನ ಮನೆಗೆ ಹೋಗುವುದು ಸರಿಯಲ್ಲ ಎಂದು ಯೋಚಿಸಿ ರಶೀದ್‌ನೇ ಬಂದು ಕರೆದುಕೊಂಡು ಹೋಗುವುದು ಸರಿ ಎಂದು ಕಾಯುತ್ತಿರುತ್ತಾಳೆ. ಕೆಲವು ತಿಂಗಳುಗಳು ಕಳೆಯುತ್ತವೆ. ನಾದಿರಾ ತಂದೆಯ ಮನೆಯಲ್ಲಿ ಬೀಡಿ ಸುತ್ತುವ ಕಾರ್ಯದಲ್ಲಿ ಅನ್ಯಮನಸ್ಕಳಾಗಿಯೇ ನಿರತಳಾಗಿರುತ್ತಾಳೆ. ಹೀಗಿರುವಾಗ ಅದೇ ಊರಿನ ಜಬ್ಬಾರ್ ಮೊಹಮ್ಮದ್‌ಖಾನ್‌ನೊಂದಿಗೆ ಮಾತನಾಡುವಾಗ ಸಲೀಂ ಎಂಬ ವಯಸ್ಸಾದ ಶ್ರೀಮಂತ ನಾದಿರಾಳನ್ನು ಮದುವೆಯಾಗುವ ಇಂಗಿತವನ್ನು ವ್ಯಕ್ತಪಡಿಸುತ್ತಾನೆ. ಇಲ್ಲಿ ಖಾನರ ಸ್ವಾರ್ಥ, ದುರಾಸೆ ಮತ್ತು ಅಳಿಯನ ಮೇಲಿನ ಸೇಡು ಮಗಳನ್ನು ಸಲೀಂ ಜೊತೆ ಮದುವೆ ಮಾಡಲು

ಮುಂದಾಗುವಂತೆ ಮಾಡುತ್ತದೆ. ಇದಕ್ಕಾಗಿ ರಶೀದ್‌ನಿಂದ ನಾದಿರಾಳಿಗೆ ತಲಾಖ್ ಪಡೆಯುವುದು ಅವಶ್ಯಕವಾಗಿದ್ದು, ಮನೆಯಲ್ಲಿ ಯಾರಿಗೂ ತಿಳಿಸದೆ ಮಣಿಪುರಕ್ಕೆ ಹೋಗಿ ರಶೀದ್‌ನೊಂದಿಗೆ ಜಗಳವಾಡಿ ತಲಾಖ್ ಪಡೆದು ಬರುತ್ತಾನೆ. ಇಲ್ಲಿ ಗಮನಿಸಬೇಕಾದ ಅಂಶಗಳೆಂದರೆ ದಾಂಪತ್ಯದ ಎರಡು ಜೀವಗಳಾದ ಗಂಡು ಮತ್ತು ಹೆಣ್ಣಿಗೆ ಯಾವ ವಿಷಯವನ್ನೂ ತಿಳಿಸದೆ, ಅವಳ ಅಭಿಪ್ರಾಯ, ತೀರ್ಮಾನಗಳನ್ನು ಕೇಳದೆ ಇಬ್ಬರು ಗಂಡಸರು (ತಂದೆ ಮತ್ತು ಗಂಡ) ದಾಂಪತ್ಯವನ್ನು ಮುರಿದು ತಲಾಖ್ ಪಡೆಯುವುದು. ಇದು ಹೆಣ್ಣಿನ ಮೇಲೆ ನಡೆಯುವ ಘೋರ ಅನ್ಯಾಯ.

ಈ ಸಂದರ್ಭದಲ್ಲಿ ಅಬೂಬಕ್ಕರ್‌ರವರು ನಾದಿರಾಳ ಪಾತ್ರದ ಮುಖಾಂತರ "ಈ ನಿಯಮವಾದರೂ ಎಂತಹದು? ಜೊತೆಯಲ್ಲಿ ಕೆಲವು ಕಾಲ ಬಾಳಿದ ಈ ಗಂಡನೆನ್ನಿಸಿಕೊಂಡವರು, ಯಾರದೋ ಮಾತು ಕೇಳಿಕೊಂಡು ಎಲ್ಲಿಂದಲೋ ಮೂರು ಬಾರಿ ತಲಾಖ್ ಎಂದುಬಿಟ್ಟರೆ ಎಂದೆಂದಿಗೂ ಆಗಿ ಮುರಿದು ಬೀಳುವ ಈ ನಿಯಮವಾದರೂ ಎಂತಹುದು?" (ಸಾರಾ ಅಬೂಬಕ್ಕರ್ 1984: ಪುಟ 51) ಎಂದು ಮುಸ್ಲಿಂ ಸಮಾಜದ ದಾಂಪತ್ಯ ನಿಯಮಗಳನ್ನು ಪ್ರಶ್ನಿಸುತ್ತಾರೆ. ಆದರೆ ಮರುಕ್ಷಣವೇ ಇದನ್ನೆಲ್ಲಾ ಪ್ರಶ್ನಿಸಲು ನಾನ್ಯಾರು ಎಂದು ಹೇಳಿಸುತ್ತಾರೆ. ಈ ಮಾತುಗಳು ಹೆಣ್ಣು ನಿಯಮಗಳನ್ನು ಪ್ರಶ್ನಿಸುವಂತಿಲ್ಲ ಎಂಬುದನ್ನು ತೋರಿಸುತ್ತದೆ.

ತಲಾಖ್ ಪಡೆದ ಮೇಲೆ ಖಾನರು ನಾದಿರಾಳಿಗೆ ಸಲೀಂನೊಡನೆ ಮದುವೆ ಮಾಡಲು ಪ್ರಯತ್ನಿಸುತ್ತಾರೆ. ಮನೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದಾಗ ನಾದಿರಾ ಮೊದಲ ಬಾರಿಗೆ ತನ್ನ ತಂದೆಯನ್ನು ಪ್ರತಿಭಟಿಸಿ ತಾನು ಎರಡನೇ ಮದುವೆಯಾಗುವುದಿಲ್ಲವೆಂದು ಮತ್ತು ಒತ್ತಾಯಿಸಿದರೆ ಪ್ರಾಣ ಕಳೆದುಕೊಳ್ಳುವುದಾಗಿ ಹೆದರಿಸುತ್ತಾಳೆ. ಖಾನರು ತಮ್ಮ ಯೋಜನೆ ನೆರವೇರದಿದ್ದಕ್ಕೆ ಬೇಜಾರು ಮಾಡಿಕೊಳ್ಳುತ್ತಾರೆ. ಆದರೆ ತನ್ನ ಮಗಳ ಬದುಕಿಗೆ ಮಾಡಿದ ಮೋಸ, ಅನ್ಯಾಯವನ್ನು ಅವರು ಪರಿಗಣಿಸುವುದಿಲ್ಲ. ಈ ಎಲ್ಲ ಬೆಳವಣಿಗೆಗಳನ್ನು ಗಮನಿಸಿದ ನಾದಿರಾಳಿಗೆ ತನ್ನ ತಂದೆಯೇ ರಶೀದ್‌ನೊಂದಿಗೆ ಸುಳ್ಳು ಹೇಳಿ ತಲಾಖ್ ಪಡೆದಿರಬಹುದೆಂಬ ಅನುಮಾನ ಮೂಡುತ್ತದೆ. ಮೀನು ಮಾರುವ ಪಾರು ವಿಷಯ ತಿಳಿಸಿದ ಮೇಲೆ ಅವಳ ಅನುಮಾನ ನಿಜವಾಗುತ್ತದೆ. ತನ್ನ ತಂದೆ ಮಾಡಿದ ಮೋಸ ಮತ್ತು ಅವಳ ಬಾಳನ್ನು ಹಾಳು ಮಾಡಿದ್ದು ಗೊತ್ತಾಗುತ್ತದೆ.

ನಾದಿರಾಳ ಬಾಳು ಹಾಳಾಗುತ್ತಿರುವುದನ್ನು ಗಮನಿಸಿದ ಖಾನರಿಗೆ ಮಗಳ ಭವಿಷ್ಯದ ಕುರಿತು ಚಿಂತೆ ಹೆಚ್ಚಾಗುತ್ತದೆ ಮತ್ತು ಅವರಿಗೆ ತಾನು ದುಡುಕಿ ಮಾಡಿದ ತಪ್ಪು ಗೊತ್ತಾಗಲಾರಂಭಿಸುತ್ತದೆ. ಮಗಳ ಬಾಳನ್ನು ಸರಿಮಾಡುವ ಉದ್ದೇಶದಿಂದ ಜಬ್ಬಾರ್‌ನನ್ನು ರಶೀದ್‌ನ ಬಳಿ ಕಳುಹಿಸಿ ಅವನು ಮತ್ತೆ ನಾದಿರಾಳನ್ನು ಮದುವೆಯಾಗುತ್ತಾನಾ ಎಂದು ತಿಳಿದು ಬರಲು ಕಳುಹಿಸುತ್ತಾರೆ. ವಾಪಸ್ ಬಂದ ಜಬ್ಬಾರ್ ರಶೀದ್‌ನು ಮದುವೆಯಾಗಲು ಸಿದ್ಧನಾಗಿರುವುದಾಗಿ ತಿಳಿಸುತ್ತಾನೆ. ವಿಷಯವನ್ನು ತಿಳಿದು ಎಲ್ಲರೂ ಸಂತೋಷಪಡುತ್ತಾರೆ, ಆದರೆ ಎರಡನೇ ಮದುವೆ ಮಾಡಿಕೊಳ್ಳಲು ಇರುವ ಅಡ್ಡಿಗಳನ್ನು ನೆನೆದು ಚಿಂತಿತರಾಗುತ್ತಾರೆ. ಖಾನರು ಮೌಲ್ವಿಗಳೊಡನೆ ಚರ್ಚಿಸಿ ಮುಂದಿನ ಕಾರ್ಯ ಕೈಗೊಳ್ಳುವುದಾಗಿ ತಿಳಿಸುತ್ತಾರೆ. ಮರುದಿನ ಮೌಲವಿಗಳನ್ನು ಭೇಟಿ ಮಾಡಿದ ಖಾನರು ನಿಯಮವನ್ನು ವಿವರಿಸುತ್ತಾರೆ "ನೋಡಮ್ಮಾ, ಖುರಾನಿನಲ್ಲಿ ಏನಿದೆಯೆಂದರೆ ಒಮ್ಮೆ ಒಬ್ಬನು ತನ್ನ ಹೆಂಡತಿಯ ತಲಾಖನ್ನು ಮೂರು ಸಲ ಹೇಳಿದರೆ ಅಲ್ಲಿ ಆ ಗಂಡ, ಹೆಂಡತಿಯ ಸಂಬಂಧ ಸಂಪೂರ್ಣ ಕೊನೆಗೊಂಡಿತು. ಪುನಃ ಅವರು ಒಂದಾಗಬೇಕಾದರೆ ಆಕೆ ಬೇರೊಬ್ಬನನ್ನು ಮದುವೆಯಾಗಿ ಅವನಿಂದಲೂ ತಲಾಖ್ ಪಡೆದಿರಬೇಕು. ಹಾಗೆ ಅವಳು ಬೇರೊಬ್ಬನನ್ನು ಮದುವೆಯಾಗಿಲ್ಲದಿದ್ದರೆ ಒಂದು ದಿನಕ್ಕಾದರೂ ಒಬ್ಬನನ್ನು ಮದುವೆಯಾಗಬೇಕು. ಒಂದು ರಾತ್ರಿಯಲ್ಲಿ ಅವನ ಜೊತೆ ಕಳೆಯಬೇಕು. ಮರುದಿನ ಅವನಿಂದ ತಲಾಖ್ ಹೇಳಿಸಿಕೊಂಡು ಮೂರು ತಿಂಗಳು ಕಾಯಬೇಕು. ಅವನಿಂದ ಅವಳು ಗರ್ಭಿಣಿಯಲ್ಲ ಎಂದು ನಿಶ್ಚಯವಾದ ಮೇಲೆ ಆ ಮೊದಲ ಗಂಡನು ಅವಳನ್ನು ಮದುವೆಯಾಗಬಹುದು. ಇದು ನಮ್ಮ ಸಮಾಜ ರೂಪಿಸಿದ ನಿಯಮ, ಇದನ್ನು ಮೀರುವಂತೆಯೇ ಇಲ್ಲ ಮಗೂ" (ಸಾರಾ ಅಬೂಬಕ್ಕರ್ 1984: ಪುಟ 66).

ಮೇಲಿನ ವಾಕ್ಯಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಹೆಣ್ಣಿನ ಅಭಿಪ್ರಾಯ, ಭಾವನೆಗಳಿಗೆ ಯಾವುದೇ ಬೆಲೆಯಿಲ್ಲದಿರುವುದು ಮತ್ತು ಅವಳನ್ನು ಗಂಡಸರ ತೀರ್ಮಾನಗಳಿಗೆ ಬದ್ಧವಾಗಿರುವಂತೆ ಮಾಡುವುದು ಕಂಡುಬರುತ್ತದೆ. ಇಲ್ಲಿ ನಾದಿರಾ ಕೇಳುವ ಪ್ರಶ್ನೆಗಳು "ಒಂದು ರಾತ್ರಿಗೆ ಒಬ್ಬನನ್ನು ಮದುವೆಯಾಗಿ, ಅವನೊಡನೆ ಒಂದು ರಾತ್ರಿಯನ್ನು ಕಳೆದು ಪುನಃ ಈ ಗಂಡನನ್ನು ಪಡೆಯಬೇಕು. ಇಷ್ಟಕ್ಕೂ ಇಲ್ಲಿ ನಾನೇನು ತಪ್ಪು ಮಾಡಿದೆ? ಹಾಲು ಕುಡಿಯುವ ಮಗುವನ್ನೆತ್ತಿಕೊಂಡು ಹೋಗಿ ತಲಾಖ್ ಕೊಟ್ಟು ತನ್ನನ್ನು ಹಿಂಸಿಸಿದರು, ನೋಯಿಸಿದವರು ಇತರರು. ಈಗಲೂ, ಇನ್ನೂ ಶಿಕ್ಷೆಯನ್ನನುಭವಿಸಬೇಕಾದವಳು ನಾನು. ಇದು ಯಾವ ನ್ಯಾಯ? ಗಂಡಸು ಏನು ತಪ್ಪು ಮಾಡಿದರೂ ಅದರ ಶಿಕ್ಷೆ ಹೆಂಗಸಿಗೆ. ಒಂದು ರಾತ್ರಿಗೆ ತನ್ನ ಗಂಡನೇ

ಬೇರೊಬ್ಬಳ ಜೊತೆಗೆ ಕಳೆಯಬೇಕೆಂದರೆ ಹೇಗಿರುತ್ತದೆ? ಹುಂ ಗಂಡಸಿಗೇನು? ಸಂತೋಷವಾಗಿ ಒಪ್ಪಿಕೊಳ್ಳುವನೇನೊ.. ಅವರಿಗೆ ಅದರಿಂದ ಯಾವ ಕೊಳೆಯೂ ಅಂಟುವುದಿಲ್ಲ. ಆದರೆ ಹೆಣ್ಣಿಗೆ ಹಾಗಾಗಲು ಸಾಧ್ಯವೇ? ಒಂದು ವೇಳೆ ತಾನೇನಾದರೂ ಇದಕ್ಕೆ ಸಮ್ಮತಿಸಿದರೂ ತನ್ನ ಗಂಡನಿಗೆ ತನ್ನಲ್ಲಿ ಜಿಗುಪ್ಸೆ ಹುಟ್ಟಲಾರದೆಂಬ ನಂಬಿಕೆಯೇನು? ಒಂದು ರಾತ್ರಿಯನ್ನು ಇನ್ನೊಬ್ಬನ ಸಂಗಡ ಕಳೆದವಳೆಂದು ಅವನು ನನ್ನನ್ನು ಅಸಹ್ಯಿಸಿಕೊಳ್ಳಲಾರನೇ? ಮೊದಲಿನಂತಹ ಪರಿಶುದ್ಧ ಭಾವನೆ, ಪವಿತ್ರಪ್ರೇಮ ಮುಂದುವರೆಯುವುದು ಸಾಧ್ಯವೇ?... ಅಲ್ಲ, ಈ ಗಂಡಸರು ಮೌಲಿಯಾರೆಲ್ಲಾ ಹೇಳಿದಂತೆ ಒಂದು ರಾತ್ರಿ ಒಬ್ಬನ ಜೊತೆ ಕಳೆಯಲು, ಒಂದು ಹೊತ್ತು ತನ್ನ ದೇಹವನ್ನು ಇನ್ನೊಬ್ಬನಿಗೆ ಒಪ್ಪಿಸಲು ತಾನೇನು ದನವೇ? ಹೃದಯ ಭಾವನೆಗಳೊಂದು ಇಲ್ಲದ ಮೃಗ ಎನ್ನುವಂತೆ ಇವರು ವರ್ತಿಸುತ್ತಾರಲ್ಲಾ? ಏನೇ ಆದರೂ ಯಾರೋ ಒಬ್ಬನ ಜೊತೆಯಲ್ಲಿ ಒಂದು ರಾತ್ರಿ ಕಳೆಯಲು, ಅವನು ವಿಧಿಪೂರ್ವಕವಾಗಿ ತನ್ನನ್ನು ನಿಕಾಹ್ ಮಾಡಿಕೊಂಡವನಾದರೂ ತನ್ನಿಂದ ಸಾಧ್ಯವೇ ಇಲ್ಲ, ಸಾಧ್ಯವೇ ಇಲ್ಲ?" (ಸಾರಾ ಅಬೂಬಕ್ಕರ್ 1984: ಪುಟ 66) ಮೇಲಿನ ಅಭಿಪ್ರಾಯವನ್ನು ಪುಷ್ಟೀಕರಿಸುತ್ತವೆ.

ತಾನು ಎರಡನೇ ಮದುವೆಯಾಗುವುದು ಸಾಧ್ಯವಿಲ್ಲ, ತನ್ನ ವ್ಯಕ್ತಿತ್ವವನ್ನು ಹೀಗೆ ಹಾಳು ಮಾಡಿಕೊಳ್ಳುವುದು ಆಗದು ಎಂದು ತಿಳಿದ ನಾದಿರಾ ಮಸೀದಿಯ ಬಾವಿಯಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಸಾರಾ ಅವರು ಧರ್ಮದ ದುರ್ಬಳಕೆಯಲ್ಲಿ ನಲುಗಿದ ಜೀವವೊಂದು ಮಸೀದಿಯ ಬಾವಿಯಲ್ಲೆ ಆತ್ಮಹತ್ಯೆ ಮಾಡಿಕೊಳ್ಳುವುದನ್ನು ಸಾಂಕೇತಿಕವಾಗಿ ಬಳಸಿರುವಂತಿದೆ. ಅಂದರೆ ಹೆಣ್ಣಿನ ಜೀವನಕ್ಕೆ ಎರವಾದ ಧಾರ್ಮಿಕ ರೀತಿನೀತಿಗಳು ಅವಳನ್ನು ಶೋಷಣೆ, ಅಸಮಾನತೆಗೆ ನೂಕಿ ಅವಳಿಗೆ ಆತ್ಮಹತ್ಯೆಯೇ ಅಂತಿಮ ಮತ್ತು ಬದುಕಲು ಅವಕಾಶವಿಲ್ಲ ಎಂಬುದನ್ನು ತೋರಿಸಿದ್ದಾರೆ.

ಸಾರಾ ಅಬೂಬಕ್ಕರ್‌ರವರು 'ಧರ್ಮ ಬಲೆ ಬೀಸಿದಾಗ' ಕಥೆಯಲ್ಲಿ ಪುರುಷ ತನ್ನ ಸ್ವಾರ್ಥ ಪೂರೈಸಿಕೊಳ್ಳಲು ಮತ್ತು ಹೆಣ್ಣನ್ನು ಅಧೀನಳನ್ನಾಗಿ ಮಾಡಿಕೊಳ್ಳುವುದಕೋಸ್ಕರ ಧರ್ಮ, ನೀತಿ ನಿಯಮಗಳ ಬಲೆಯನ್ನು ಬೀಸಿದರೂ ಕೂಡ ಆ ಹೆಣ್ಣು ಅಧೀನಳಾಗದೆ ಧೈರ್ಯವಾಗಿ ಆ ಧರ್ಮದ ಬಲೆಯನ್ನು ಬಿಡಿಸಿ ಮುಕ್ತಳಾಗಿ ನ್ಯಾಯದೊರಕಿಸಿಕೊಳ್ಳುತ್ತಾಳೆ ಎಂಬುದನ್ನು ತಿಳಿಸಿದ್ದಾರೆ. ಜೊತೆಗೆ ದಿಟ್ಟೆ ಮತ್ತು ಸ್ವತಂತ್ರ ಆಲೋಚನೆಯುಳ್ಳ ಮಹಿಳೆಯೊಬ್ಬಳು ನೀತಿ ನಿಯಮಗಳನ್ನು ಧಿಕ್ಕರಿಸಿ ದೌರ್ಜನ್ಯದಿಂದ ಪಾರಾಗುವ ರೀತಿಯನ್ನು ತೋರಿಸಿದ್ದಾರೆ. ಈ ಕಥೆಯಲ್ಲಿ ಖತೀಜಾಬಿ ತನ್ನ 7 ಮಕ್ಕಳೊಂದಿಗೆ ವಾಸವಿರುತ್ತಾಳೆ. ಅವಳ ಗಂಡ ಕರೀಂಸಾಬಿ

ಮತ್ತು ಹಿರಿಯ ಮಗ ಬೊಂಬಾಯಿಯಲ್ಲಿ ವ್ಯಾಪಾರ ವೃತ್ತಿ ಮಾಡುತ್ತಿರುತ್ತಾರೆ. ಅದೇ ಊರಿನ ಜಮಾಹತ್ ಅಧ್ಯಕ್ಷನಾದ ಇಬ್ರಾಹಿಂಹಾಜಿ ಮೊದಲಿನಿಂದಲೂ ಖತೀಜಾಬಿಯನ್ನು ಇಷ್ಟಪಟ್ಟಿರುತ್ತಾನೆ. ಆದರೆ ಬೇರೆಯವನ ಪತ್ನಿಯನ್ನು ಕೆಣಕುವ ಸಾಹಸ ಮಾಡದೆ ಸುಮ್ಮನಿರುತ್ತಾನೆ. ಒಂದು ಬಾರಿ ಮನೆಯ ಮುಂದೆ ತರಕಾರಿ ವ್ಯಾಪಾರ ಮಾಡುತ್ತಾ ನಿಂತಿದ್ದ ನಫೀಸಾಳನ್ನು ನೋಡಿದ ಇಬ್ರಾಹಿಂಹಾಜಿ ಅವಳನ್ನು ಮದುವೆಯಾಗಲು ಬಯಸುತ್ತಾನೆ. ತನ್ನ ಮನದ ಬಯಕೆಯನ್ನು ಪ್ರಸ್ತಾಪಿಸಿ ನಫೀಸಾಳನ್ನು ತನಗೆ ಮದುವೆ ಮಾಡಿಕೊಡಲು ಖತೀಜಾಬಿಯನ್ನು ಒಪ್ಪಿಸುವಂತೆ ಇಬ್ರಾಹಿಂಹಾಜಿ ತನ್ನ ಸ್ನೇಹಿತ ಕಾದರ್‌ನನ್ನು ಖತೀಜಾಬಿಯ ಮನೆಗೆ ಕಳುಹಿಸುತ್ತಾನೆ. ಈ ವಿಷಯವನ್ನು ಕಾದರ್ ಪ್ರಸ್ತಾಪಿಸಿದಾಗ, ಖತೀಜಾಬಿ ಮನದಲ್ಲೆ ಕ್ರೋಧಗೊಂಡು "..ಹೆಚ್ಚು ಕಮ್ಮಿ ನನ್ನ ಗಂಡನ ಪ್ರಾಯದ ಆತ ಇನ್ನೂ 16 ವರ್ಷವನ್ನು ದಾಟದ ನನ್ನ ಮಗಳನ್ನು ವರಿಸಲು ಮುಂದಾಗಿದ್ದಾನಲ್ಲ? ಇಂತಹವರ ತಲೆ ಬೋಳಿಸಿ, ಮುಖಕ್ಕೆ ಮಸಿ ಹಚ್ಚಿ, ಕತ್ತೆಯ ಮೇಲೆ ಕುಳ್ಳಿರಿಸಿ ಊರಲ್ಲಿ ಮೆರವಣಿಗೆ ಮಾಡಿಸಬೇಕು!" (ಸಾರಾ ಅಬೂಬಕ್ಕರ್ 2010: ಪುಟ 75) ಎಂದುಕೊಳ್ಳುತ್ತಾಳೆ. ಆದರೆ ಸಂಯಮದಿಂದ ನಾನು ಈ ಮದುವೆಗೆ ಒಪ್ಪುವುದಿಲ್ಲವೆಂದು ಇಬ್ರಾಹಿಂಹಾಜಿಗೆ ತಿಳಿಸುವಂತೆ ಹೇಳುತ್ತಾಳೆ. ಇದೇ ವಿಷಯದೊಂದಿಗೆ ಎರಡನೇ ಬಾರಿಗೆ ಬಂದ ಕಾದರನಿಗೆ ಖತೀಜಾಬಿ ".. ಆತ ಊರಿನ ಐಶ್ವರ್ಯವಂತನಾಗಿರಬಹುದು, ಆದರೆ ಊರು ಆತನದಲ್ಲ, ಈ ಊರಿನಲ್ಲಿರುವವರೆಲ್ಲರೂ ಪ್ರಾಣಿಗಳಲ್ಲ, ಮನುಷ್ಯರೂ ಇದ್ದಾರೆ. ಒಂದು ಸರಕಾರವೂ ಇದೆ. ಹಣದಿಂದ ಎಲ್ಲವನ್ನು ಕೊಂಡುಕೊಳ್ಳಬಹುದೆಂಬ ಕಲ್ಪನೆಯನ್ನು ಬಿಟ್ಟುಬಿಡಲು ಆತನಿಗೆ ತಿಳಿಸಿ" (ಸಾರಾ ಅಬೂಬಕ್ಕರ್ 2010: ಪುಟ 77) ಎಂದು ಹೇಳುತ್ತಾಳೆ. ಆದರೆ ಪಟ್ಟು ಬಿಡದ ಇಬ್ರಾಹಿಂಹಾಜಿ ಮತ್ತೆ ಸ್ವತಃ ತಾನೆ ಖತೀಜಾಬಿಯ ಮನೆಗೆ ಬಂದು ನಫೀಸಾಳನ್ನು ನಿಕಾಹ್ ಮಾಡಿಕೊಡುವಂತೆ ಒತ್ತಾಯಿಸುತ್ತಾನೆ. ಇದಕ್ಕೆ ಒಪ್ಪದ ಖತೀಜಾಬಿಯನ್ನು ಕುರಿತು "ಇಬ್ರಾಹಿಂಹಾಜಿಯನ್ನು ಅವಮಾನಿಸಿದ ನೀನು ಯಾವ ಬೆಲೆ ತೆರಬೇಕಾದೀತು ಎಂಬುದನ್ನು ಸದ್ಯದಲ್ಲಿಯೇ ಕಾಣಲಿರುವೆ" (ಸಾರಾ ಅಬೂಬಕ್ಕರ್ 2010: ಪುಟ 77) ಎಂದು ಹೇಳಿ ಹೋಗುತ್ತಾನೆ. ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ ಸಾರಾರವರು ಖತೀಜಾಬಿಯ ಪಾತ್ರದ ಮುಖಾಂತರ ಅಧಿಕಾರ ಮತ್ತು ಹಣದ ಬಲವಿರುವ ಪುರುಷನೋರ್ವ ತನಗಿಂತ ಬಹಳ ಕಿರಿಯಳಾದ ಹೆಣ್ಣನ್ನು ತನಗೆ ಮದುವೆ ಮಾಡಿಕೊಡುವಂತೆ ಒತ್ತಾಯಿಸುವ ಸಂದರ್ಭದಲ್ಲಿ ಇನ್ನೊಂದು ಹೆಣ್ಣು ಅಲ್ಲಿ ಆಗಬಹುದಾಗಿದ್ದ ಅನ್ಯಾಯವನ್ನು ದಿಟ್ಟವಾಗಿ ಧಿಕ್ಕರಿಸಿ ಆ ವಿವಾಹವನ್ನು ತಪ್ಪಿಸುವ ಚಿತ್ರಣ. ಮುಂದುವರೆದು ಈ ಸಮಾಜದಲ್ಲಿ ಮನುಷ್ಯರೂ ಇದ್ದಾರೆ ಮತ್ತು ಒಂದು ಸರಕಾರವೂ ಇದೆ

ಹಾಗೂ ಹಣ, ಅಧಿಕಾರದ ಬಲದಿಂದ ಹೆಣ್ಣು ಮತ್ತು ಅವಳ ಮನಸ್ಸನ್ನು ಕೊಂಡುಕೊಳ್ಳಲಾಗುವುದಿಲ್ಲ ಎಂಬ ಪ್ರಜ್ಞಾವಂತಿಕೆಯ ಮಾತುಗಳನ್ನು ತಿಳಿಸುತ್ತಾರೆ.

ಇದಕ್ಕೆ ಪ್ರತೀಕಾರವಾಗಿ ಇಬ್ರಾಹಿಂಹಾಜಿ ತನ್ನವರ ಕಡೆಯಿಂದ ಖತೀಜಾಬಿಯ ಮನೆಯ ಹಿತ್ತಲಿನ ಮೂಲೆಯಲ್ಲಿ ಮದ್ಯದ ಬಾಟಲಿಗಳನ್ನು ಹಾಕಿಸುತ್ತಾನೆ. ಖಾದರ್ ಕಾಕಾನ ಜೊತೆಯಲ್ಲಿ ಇನ್ನಿತರ ಕೆಲವು ಪುರುಷರನ್ನು ಒಂದೆರಡು ಬಾರಿ ಮುಸ್ಸಂಜೆ ವೇಳೆ ಖತೀಜಾಬಿಯ ಮನೆಗೆ ಕಳುಹಿಸುತ್ತಾನೆ. ಈ ರೀತಿ ನಾಲ್ಕೈದು ಬಾರಿ ಆದ ಮೇಲೆ ಮಸೀದಿಯಲ್ಲಿ ಒಂದು ಮುಖ್ಯ ನಿರ್ಧಾರ ಕೈಗೊಳ್ಳಬೇಕಾಗಿದೆ ಎಂದು ಸಭೆ ಕರೆಯುತ್ತಾನೆ. ಸಭೆಯಲ್ಲಿ ಯಾರೋ ಒಬ್ಬರು ಊರಿನ ಹೆಣ್ಣುಮಕ್ಕಳು ನೀತಿಗೆಟ್ಟಿದ್ದಾರೆ ಈ ರೀತಿ ಆದರೆ ಧರ್ಮಕ್ಕೆ ತೊಂದರೆಯಾಗುತ್ತದೆ ಇದಕ್ಕೆ ಸಮನಾದ ಶಿಕ್ಷೆಯಾಗಬೇಕು ಎಂದು ಹೇಳಿದರು. ಆಗ ಜಮಾಹತ್ ಸಮಿತಿಯ ಅಧ್ಯಕ್ಷ ಇಬ್ರಾಹಿಂಹಾಜಿ ಎದ್ದು ನಿಂತು "ಕರೀಂಸಾಬರ ಹೆಂಡತಿ ಖತೀಜಾಬಿ ನಾವೆಲ್ಲ ಅವಮಾನದಿಂದ ನಾಚಿ ತಲೆತಗ್ಗಿಸುವ ರೀತಿಯಲ್ಲಿ ವರ್ತಿಸಿದ್ದಾಳೆ, ಹೆಂಡವನ್ನು ಕುಡಿದಿದ್ದಾಳೆ, ವ್ಯಭಿಚಾರವನ್ನು ಮಾಡಿದ್ದಾಳೆ. ಇದಕ್ಕೆಲ್ಲ ಸಾಕ್ಷಿಗಳಿವೆ, ಹೆಂಡದ ಬಾಟ್ಲಿಗಳು ಆಕೆಯ ಹಿತ್ತಲಿನ ಮೂಲೆಯಲ್ಲಿ ಬಿದ್ದಿವೆ. ರಾತ್ರಿಯ ವೇಳೆಯಲ್ಲಿ ಅನ್ಯ ಪುರುಷರು ಆಕೆಯ ಮನೆಯಲ್ಲಿದ್ದುದನ್ನು ನೋಡಿದವರು ಎಷ್ಟೋ ಜನರಿದ್ದಾರೆ. ಆದ್ದರಿಂದ ಆಕೆಗೆ ಶಿಕ್ಷೆಯಾಗಲೇಬೇಕಾಗಿದೆ, ಧರ್ಮಗ್ರಂಥಗಳಲ್ಲಿ ಇವುಗಳಿಗೆಲ್ಲ ಯಾವ ಶಿಕ್ಷೆ ವಿಧಿಸಲಾಗುತ್ತದೆಯೊ ಅದೇ ಶಿಕ್ಷೆಯನ್ನು ಆಕೆಗೆ ವಿಧಿಸಬೇಕು. ಈಗಾಗಲೇ ಒಂದಿಬ್ಬರಿಗೆ ಇಂತಹ ಶಿಕ್ಷೆಯನ್ನು ನಾವು ವಿಧಿಸಿದ್ದೇವೆ, ವ್ಯಭಿಚಾರ ಮಾಡಿದಾಕೆಗೆ ನೂರ ಒಂದು ಛಡಿ ಏಟು ಕೊಡಬೇಕು. ಹೆಂಡ ಕುಡಿದುದಕ್ಕಾಗಿ ಐವತ್ತು ರೂಪಾಯಿಗಳ ದಂಡವನ್ನು ವಿಧಿಸಬೇಕು" (ಸಾರಾ ಅಬೂಬಕ್ಕರ್ 2010: ಪುಟ 78) ಎಂದು ಸಭೆಗೆ ತಿಳಿಸಿದರು. ಸಭೆಯಲ್ಲಿದ್ದ ಕೆಲವರು ಧರ್ಮದಲ್ಲಿ ವಿಧಿಸಿದ ಶಿಕ್ಷೆಯನ್ನು ಆಕೆಗೆ ನೀಡಬೇಕು ಎಂದು ಹೇಳಿದಾಗ ಎಲ್ಲರೂ ಹೌದು ಎಂದು ಒಪ್ಪಿದರು. ಈ ಸಂದರ್ಭದಲ್ಲಿ ಸಾರಾ ಅಬೂಬಕ್ಕರ್‌ರವರು ವ್ಯಕ್ತಪಡಿಸುವ "ವ್ಯಭಿಚಾರ ಮಾಡಿದ ಗಂಡಸು ಯಾರು ಎಂದಾಗಲಿ, ಆತನಿಗೆ ಏಕೆ ಶಿಕ್ಷೆ ವಿಧಿಸಲಿಲ್ಲ ಎಂದಾಗಲಿ ಯಾರೂ ಕೇಳಲಿಲ್ಲ!" (ಸಾರಾ ಅಬೂಬಕ್ಕರ್ 2010: ಪುಟ 79) ಎಂಬ ಅಭಿಪ್ರಾಯ ಸಭೆಯಲ್ಲಿದ್ದ ಪುರುಷರು ಯಾವ ರೀತಿ ಅಸಮಾನ ನೀತಿಯನ್ನು ಅನುಸರಿಸುತ್ತಿದ್ದರು ಎಂಬುದನ್ನು ತೋರಿಸುತ್ತದೆ.

ಸಭೆಯ ತೀರ್ಮಾನವನ್ನು ಕೇಳಿದ ಖತೀಜಾಬಿ ಮನಸ್ಸನ್ನು ಕಠಿಣ ಮಾಡಿಕೊಂಡು "ತನ್ನ ಮೇಲೆ ಸುಳ್ಳು ಆಪಾದನೆಯನ್ನು ಹೊರಿಸಿ, ತನ್ನನ್ನು ಮಸೀದಿಗೆ ಕರೆಸಿ ಛಡಿ ಏಟು

ಕೊಡಬೇಕಾದರೆ ತಾನು ಕೊಲ್ಲಿ ರಾಷ್ಟ್ರಗಳಲ್ಲಿದ್ದೇನೆಯೇ? ವ್ಯಭಿಚಾರ ಮಾಡಬೇಕಾದರೆ ಸ್ತ್ರೀ-ಪುರುಷರಿಬ್ಬರು ಇರಬೇಡವೆ, ಇಲ್ಲಿ ಶಿಕ್ಷೆ ನನಗೊಬ್ಬಳಿಗೆ ನೀಡಿದ್ದಾರೆ! ಈ ಜನರ ಭಂಡತನವನ್ನು ಬಯಲಿಗೆಳೆಯದಿದ್ದರೆ ನನ್ನ ಹೆಸರು ಖತೀಜಾಬಿ ಎಂದಲ್ಲ!" (ಸಾರಾ ಅಬೂಬಕ್ಕರ್ 2010: ಪುಟ 79) ಎಂದು ದಿಟ್ಟತನದಿಂದ ನಿರ್ಧಾರ ಕೈಗೊಳ್ಳುತ್ತಾಳೆ. ಮಸೀದಿಯ ನಿರ್ಧಾರದಿಂದ ಎರಡು ಮೂರು ಬಾರಿ ಕರೆ ಬಂದಾಗಲೂ ಹೋಗದೆ ಮಸೀದಿಯ ನಿರ್ಧಾರವನ್ನು ಧಿಕ್ಕರಿಸಿದಾಗ ಜಮಾಹತ್‌ನವರು ಖತೀಜಾಬಿಯ ಮನೆಯವರಿಗೆ ಬಹಿಷ್ಕಾರ ಹಾಕುತ್ತಾರೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಪುರುಷರಿಂದಲೇ ಕೂಡಿದ್ದ ಜಮಾಹತ್ ಸಮಿತಿ ಒಂದು ಹೆಣ್ಣಿನ ಮುಂದೆ ಸೋಲು ಒಪ್ಪಿಕೊಳ್ಳಲು ಸಿದ್ಧರಿಲ್ಲದೆ ಹೇಗಾದರೂ ಅವಳಿಗೆ ಶಿಕ್ಷೆ ವಿಧಿಸಬೇಕೆಂದು ನಡೆದುಕೊಂಡ ರೀತಿ ಮತ್ತು ಇಬ್ರಾಹಿಂ ಹಾಜಿ ತನ್ನ ಸ್ವಾರ್ಥ ಕೈಗೂಡದೆ ಇದ್ದಾಗ ಒಂದು ಹೆಣ್ಣಿನ ಮೇಲೆ ನಡೆಸುವ ಅಪಪ್ರಚಾರ ಮತ್ತು ಅವಮಾನಗಳು ಪುರುಷ ಕೇಂದ್ರೀಕೃತ ಸಮಾಜದಲ್ಲಿ ಹೆಣ್ಣಿನ ಮೇಲೆ ನಡೆಯುವ ದೌರ್ಜನ್ಯ ಮತ್ತು ಅಸಮಾನತೆಯನ್ನು ಉಂಟುಮಾಡುತ್ತದೆ ಎಂಬುದನ್ನು ತೋರಿಸುತ್ತದೆ.

ಊರಿನಲ್ಲಿ ನಡೆದ ಘಟನೆಗಳೆಲ್ಲವನ್ನು ಖತೀಜಾಬಿ ಬರೆದ ಪತ್ರದ ಮೂಲಕ ತಿಳಿದ ಕರೀಂಸಾಬರು ಊರಿಗೆ ಬರುತ್ತಾನೆ. ವಿಷಯವೆಲ್ಲವನ್ನು ತಿಳಿದ ಕರೀಂಸಾಬಿ ತನ್ನ ಪತ್ನಿಯಲ್ಲಿ ಯಾವುದೇ ತಪ್ಪಿಲ್ಲವೆಂದು ಅರಿಯುತ್ತಾನೆ. ಆದರೆ ಜಮಾಹತ್‌ನವರನ್ನು ಎದುರುಹಾಕಿಕೊಂಡು ಊರಿನಲ್ಲಿ ಬಾಳುವುದು ಕಷ್ಟವಾಗುತ್ತದೆಂದು ಹೇಳಿ ವಿಧಿಸಿರುವ ಶಿಕ್ಷೆಯನ್ನು ಅನುಭವಿಸುವಂತೆ ತಿಳಿಸುತ್ತಾನೆ. ಕರೀಂಸಾಬಿಯ ಅಭಿಪ್ರಾಯವನ್ನು ಕೇಳಿದ ಖತೀಜಾಬಿ ಗಂಡನ ಮೇಲೆ ಕ್ರೋಧಗೊಂಡು ಯಾವ ತಪ್ಪನ್ನು ಮಾಡದ ನಾನೇಕೆ ಶಿಕ್ಷೆ ಅನುಭವಿಸಬೇಕು ಎಂದು ಕೇಳುತ್ತಾಳೆ. ಜೊತೆಗೆ ತಾನು ಪೋಲಿಸ್ ಸ್ಟೇಷನ್ನಿಗೆ ಹೋಗಿ ದೂರು ಕೊಟ್ಟು ಬರುತ್ತೇನೆ ಎಂದು ತಿಳಿಸುತ್ತಾಳೆ, ಮುಂದುವರೆದು "ನೀವೂ ಇಷ್ಟು ಸಣ್ಣವರಾಗುತ್ತೀರಿ ಎಂದು ನಾನು ಭಾವಿಸಿರಲಿಲ್ಲ, ನೀವು ಈ ನಾಯಿಗಳಿಂದ ರಕ್ಷಿಸುತ್ತೀರಿ ಎಂದುಕೊಂಡಿದ್ದೆ. ಎಷ್ಟಾದರೂ ನೀವು ಕೂಡ ಅದೇ ಗಂಡು ಜಾತಿ ತಾನೆ? ಹೆಣ್ಣನ್ನು ತುಳಿಯಲು ಅವಕಾಶ ಎಲ್ಲಿ ಸಿಗುತ್ತದೆ ಎಂದು ಕಾದು ಕುಳಿತುಕೊಳ್ಳುವವರಲ್ಲವೇ? ನಿಮ್ಮಿಂದ ರಕ್ಷಣೆ ಬಯಸಿದ ನಾನೇ ಮೂರ್ಖಳು" (ಸಾರಾ ಅಬೂಬಕ್ಕರ್ 2010: ಪುಟ 80) ಎಂದು ಹೇಳುತ್ತಾಳೆ.

ಖತೀಜಾಬಿ ಹೇಳುತ್ತಿರುವುದು ಸರಿ ಎಂದು ತಿಳಿದ ಕರೀಂಸಾಬರು ಪರಿಚಯದ ವಕೀಲರೊಬ್ಬರ ಸಲಹೆಯಂತೆ ಪೋಲಿಸ್ ಠಾಣೆಗೆ ಹೋಗಿ "ನನ್ನ ಪತ್ನಿ ಮಾಡದ ತಪ್ಪಿಗಾಗಿ

ಜಮಾಹತ್ ಸಮಿತಿಯವರು ಆಕೆಯ ಮೇಲೆ ಶಿಕ್ಷೆ ವಿಧಿಸಿದ್ದಾರೆ. ಆಕೆ ಸಿದ್ಧಳಾಗದ ಕಾರಣ ಬಹಿರಂಗವಾಗಿ ಧ್ವನಿವರ್ಧಕದ ಮೂಲಕ ನಮ್ಮ ಇಡೀ ಕುಟುಂಬವನ್ನು ಬಹಿಷ್ಕರಿಸಲಾಗಿದೆ. ಭಾರತೀಯ ಸಂವಿಧಾನಕ್ಕೆ ವಿರೋಧವಾಗಿ ಈ ರೀತಿ ಧಾರ್ಮಿಕ ಸಂಸ್ಥೆಗಳು ವ್ಯಕ್ತಿಯೋರ್ವನಿಗೆ ಶಿಕ್ಷೆ ನೀಡುವುದು ಅಪರಾಧವಾಗಿದೆ. ಪೋಲಿಸರು ವಿಚಾರಣೆ ನಡೆಸಿ ಸಂಬಂಧಪಟ್ಟವರ ಮೇಲೆ ಕ್ರಮ ಕೈಗೊಳ್ಳಬೇಕು" (ಸಾರಾ ಅಬೂಬಕ್ಕರ್ 2010: ಪುಟ 81) ಎಂದು ದೂರು ನೀಡಿದ. ಇದನ್ನು ತಿಳಿದ ಜಮಾಹತ್ ಸಮಿತಿಯವರು ಹೆದರಿ ಮತ್ತೊಂದು ಸಭೆಯನ್ನು ಕರೆದರು, ಮತ್ತು ಖತೀಜಾಬಿ ಅಪರಾಧವನ್ನು ಮತ್ತೊಮ್ಮೆ ತನಿಖೆ ಮಾಡಿ ಆಕೆ ಅಪರಾಧಿಯಲ್ಲವೆಂದು ಘೋಷಿಸಿದರು.

"ಧರ್ಮ ಬಲೆ ಬೀಸಿದಾಗ" ಕಥೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಪುರುಷರು ಧರ್ಮದ ಹೆಸರಿನಲ್ಲಿ ನೀತಿನಿಯಮಗಳನ್ನು ರೂಪಿಸಿ ಹೆಣ್ಣನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳಲು ನಡೆಸುವ ಪ್ರಯತ್ನಗಳು ತಿಳಿಯುತ್ತವೆ. ಅಂದರೆ ಹೆಣ್ಣನ್ನು ತಮ್ಮ ಗುಲಾಮಳನ್ನಾಗಿ ಮಾಡಿಕೊಳ್ಳಲು ಪುರುಷ ಹೇಗೆ ಧರ್ಮವನ್ನು ದುರುಪಯೋಗ ಮಾಡಿಕೊಳ್ಳುತ್ತಾನೆ ಮತ್ತು ಸಮಾಜ ಅದನ್ನು ಪ್ರಶ್ನಿಸದೆ ಒಪ್ಪಿಕೊಳ್ಳುತ್ತದೆ ಎಂಬುದು ತಿಳಿಯುತ್ತದೆ. ಯಜಮಾನ-ಗುಲಾಮ ಪದ್ಧತಿ ಎಲ್ಲಿರುತ್ತದೆಯೋ ಅಲ್ಲಿ ಸಮಾನತೆ ಇರುವುದಿಲ್ಲ ಎಂಬುದು ಎಲ್ಲರೂ ತಿಳಿದಿರುವ ವಿಷಯ. ಆದರೆ ಇಲ್ಲಿ ಸಾರಾರವರು ಪುರುಷ ಸಮಾಜದ ರೀತಿ-ನೀತಿಗಳನ್ನು ಧಿಕ್ಕರಿಸಿ, ಪ್ರತಿಭಟಿಸಿ ನಿಂತು, ಕಾನೂನಿನ ಸಹಾಯದಿಂದ ಎದುರಿಸಿದಾಗ ಹೆಣ್ಣು ಪುರುಷರಿಂದ ತನ್ನ ಮೇಲೆ ನಡೆಯುವ ದೌರ್ಜನ್ಯಗಳನ್ನು ತಡೆಯಬಹುದು ಮತ್ತು ಅದರ ಮುಖಾಂತರ ಸಮಾನತೆಯನ್ನು ಕಾಣಬಹುದು ಎಂಬ ಪ್ರಮುಖ ಅಂಶವನ್ನು ತೆರೆದಿಡುತ್ತಾರೆ.

ಸಾರಾ ಅಬೂಬಕ್ಕರ್ ಅವರು ಧಾರ್ಮಿಕ ಚೌಕಟ್ಟಿನಲ್ಲಿ ಪುರುಷರು ಮಹಿಳೆಯನ್ನು ಶೋಷಿಸುವ ಮತ್ತು ಅವಳನ್ನು ತಮ್ಮ ಅಧೀನಳನ್ನಾಗಿ ಮಾಡಿಕೊಂಡು ಅವಳ ಜೀವನದ ಜೊತೆ ಆಟವಾಡಿ ದಾರುಣ ಅಂತ್ಯಕ್ಕೆ ನೂಕುವ ಪುರುಷರ ದೌರ್ಜನ್ಯಯುಕ್ತ ವರ್ತನೆಯನ್ನು ತೋರಿಸುತ್ತಾ ಮುಸ್ಲಿಂ ಸಮಾಜದಲ್ಲಿ ಸ್ತ್ರೀ-ಪುರುಷರ ನಡುವೆ ಇರುವ ಅಸಮಾನತೆಯನ್ನು ತೋರಿಸುತ್ತಾರೆ. ಹೆಣ್ಣು ಹುಟ್ಟಿರುವುದೇ ಗಂಡಿನ ಸೇವೆ ಮಾಡಲು ಎಂದು ನಂಬಿರುವ ಸಮಾಜ ಅವಕಾಶ ಸಿಕ್ಕಾಗಲೆಲ್ಲಾ ಹೆಣ್ಣಿನ ಮೇಲೆ ಎಲ್ಲ ರೀತಿಯ ಬಲಪ್ರಯೋಗ, ವಂಚನೆ, ಮೋಸ, ಸುಳ್ಳುಗಳನ್ನು ಧರ್ಮದ ಆಧಾರದ ಮೇಲೆ ಬಳಸಿ ಧಾರ್ಮಿಕ ಕಾನೂನುಗಳ ಅಡಿಯಲ್ಲಿಯೇ ಹೆಣ್ಣನ್ನು ಶೋಷಿಸುವ ಚಿತ್ರಣ ಕಂಡುಬರುತ್ತದೆ. ಇಲ್ಲಿ ಸಬಿಹಾ ಭೂಮಿಗೌಡ ಅವರ "ಸಾರಾ

ಅವರು ತಮ್ಮ ಸಾಹಿತ್ಯದ ಮೂಲಕ ಮುಸ್ಲಿಂ ಸಮುದಾಯದ ಪಿತೃ ಪ್ರಧಾನ ಜಗತ್ತನ್ನು ಅನಾವರಣ ಮಾಡುತ್ತಿದ್ದಾರೆ. ಆ ಧರ್ಮದ ಧಾರ್ಮಿಕ ಗ್ರಂಥಗಳು ಈ ವಿಚಾರವನ್ನು ಹೆಚ್ಚು ಸ್ಫುಟಗೊಳಿಸುತ್ತವೆ. ಲಿಂಗಾಧಾರಿತ ಅಸಮಾನತೆಯನ್ನು ಆಸ್ತಿಯ ಹಂಚಿಕೆಯಲ್ಲಿ, ವಿವಾಹದ ಅವಕಾಶಗಳಲ್ಲಿ, ವಿವಾಹ ವಿಚ್ಛೇದನದ ಸಾಧ್ಯತೆಯಲ್ಲಿ, ಮಕ್ಕಳ ಮೇಲಿನ ಹೆತ್ತವರ ಹಕ್ಕುಗಳಲ್ಲಿ ಶಿಕ್ಷಣದ ಮತ್ತು ಹೊರದುಡಿಮೆಗಳ ಅವಕಾಶಗಳಲ್ಲಿ ಹೀಗೆ ಹಲವು ನೆಲೆಗಳಲ್ಲಿ ಗುರುತಿಸಬಹುದಾಗಿದೆ. ತಮ್ಮ ಕಥನ ಸಾಹಿತ್ಯದಲ್ಲಿ ಸಾರಾ ಅಬೂಬಕ್ಕರ್‌ರವರು ಈ ಲಿಂಗತಾರತಮ್ಯವನ್ನು ಪ್ರಶ್ನಿಸಲು ತೊಡಗಿದ್ದಾರೆ. ಧಾರ್ಮಿಕ ಗ್ರಂಥಗಳ ಮೂಲ ವಿಚಾರಗಳನ್ನು ಪುರುಷರು ತಮ್ಮ ಮೂಗಿನ ನೇರಕ್ಕೆ ಪೂರಕವಾಗುವಂತೆ ಅರ್ಥೈಸುತ್ತಿದ್ದಾರೆ" (2011: ಪುಟ 193) ಅಭಿಪ್ರಾಯವನ್ನು ಗಮನಿಸಬಹುದು.

ಧಾರ್ಮಿಕ ಕಾನೂನನ್ನು ದುರ್ಬಳಕೆ ಮಾಡಿಕೊಂಡು ಒಂದು ಹೆಣ್ಣನ್ನು ವಶಪಡಿಸಿಕೊಂಡು ತನ್ನ ಸ್ವಾರ್ಥ ಸಾಧಿಸಲು ಹೊರಟ ಧಾರ್ಮಿಕ ನಾಯಕ ಅದು ಸಾಧ್ಯವಾಗದೇ ಹೋದಾಗ ಹೆಣ್ಣಿನ ಗೌರವವನ್ನು ಕಳೆಯಲು ಪ್ರಯತ್ನಿಸುವುದು ಪುರುಷರು ಹೆಣ್ಣನ್ನು ತಮ್ಮ ಅಧೀನದಲ್ಲಿಟ್ಟುಕೊಳ್ಳಲು ಬಳಸುವ ಮಾರ್ಗಗಳನ್ನು ತೋರಿಸುತ್ತದೆ ಎಂದು ಸಾರಾ ಅವರು ಹೇಳುತ್ತಾರೆ. ಆದರೆ ಆ ಹೆಣ್ಣು ದಿಟ್ಟವಾಗಿ ಸಮಾಜದಲ್ಲಿರುವ ಸರಕಾರದ ಸಹಾಯದಿಂದ ತನ್ನನ್ನು ತಾನು ರಕ್ಷಿಸಿಕೊಳ್ಳುವುದನ್ನೂ ತೋರಿಸುತ್ತಾರೆ. ಧಾರ್ಮಿಕ ನಾಯಕ ಹೆಣ್ಣು ವ್ಯಭಿಚಾರ ಮಾಡುತ್ತಿದ್ದುದ್ದಕ್ಕಾಗಿ ಅವಳಿಗೆ ಶಿಕ್ಷೆಯಾಗಬೇಕು ಎಂದು ಹೇಳಿ, ವ್ಯಭಿಚಾರದಲ್ಲಿ ಭಾಗಿಯಾದ ಪುರುಷ ಯಾರು ಎಂದು ತಿಳಿಯುವುದಾಗಲೀ, ಅವನಿಗೆ ಶಿಕ್ಷೆ ವಿಧಿಸುವುದಾಗಲೀ ಇಲ್ಲ ಎಂದು ಹೇಳಿ ಸಾರಾರವರು ಸಮಾಜದ ಅಸಮಾನ ನಿಲುವನ್ನು ತೋರಿಸುತ್ತಾರೆ. ಯಜಮಾನ–ಗುಲಾಮಿ ಪದ್ಧತಿಯನ್ನು ಧಿಕ್ಕರಿಸಿ ಹೆಣ್ಣು ಕಾನೂನು ಮತ್ತು ಸರಕಾರದ ಸಹಾಯದಿಂದ ಪುರುಷರು ಧರ್ಮದ ಆಧಾರದ ಮೇಲೆ ನಡೆಸುವ ದೌರ್ಜನ್ಯಗಳನ್ನು ತಡೆದು ಸಮಾನತೆ ಸಾಧಿಸಬಹುದು ಎಂದು ತಿಳಿಸುತ್ತಾರೆ.

6.2. ಸಾಮಾಜಿಕ ನೆಲೆಯಲ್ಲಿ ಸಮಾನತೆ–ಅಸಮಾನತೆ

ಸ್ತ್ರೀಯಾಗಲಿ, ಪುರುಷನಾಗಲೀ ಬಾಳಬೇಕಾದುದು ಸಮಾಜದಲ್ಲಿ ಆದರೆ ಸಮಾಜದ ರೀತಿನೀತಿಗಳು ಅಸಮಾನತೆಯಿಂದ ಕೂಡಿದ್ದರೆ, ಅಧೀನರಾದವರು ವ್ಯಕ್ತಿತ್ವ ಕಳೆದುಕೊಂಡು ಸೇವಕರಾಗಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಮುಸ್ಲಿಂ ಸಮಾಜದ ಕಟ್ಟುಪಾಡುಗಳು ಹೇಗೆ ಸ್ತ್ರೀ–ಪುರುಷರ ನಡುವೆ ಅಸಮಾನತೆಯನ್ನು ಸೃಷ್ಟಿಸಿವೆ ಮತ್ತು ಹೆಣ್ಣಿನ ಮೇಲೆ ಈ

ಅಸಮಾನತೆಯ ಪರಿಣಾಮ ಏನು ಎಂಬುದನ್ನು ಮುಸ್ಲಿಂ ಮಹಿಳಾ ಸಾಹಿತ್ಯ ಚಿತ್ರಿಸಿರುವ ರೀತಿಯನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಈ ಭಾಗದಲ್ಲಿ ಪ್ರಾತಿನಿಧಿಕವಾಗಿ ಬಾನು ಮುಷ್ತಾಕ್ ರವರ 'ಒಮ್ಮೆ ಹೆಣ್ಣಾಗು ಪ್ರಭುವೇ', 'ಕರಿನಾಗರಗಳು' ಕಥೆಗಳನ್ನು ವಿಶ್ಲೇಷಿಸಲಾಗಿದೆ.

ಪುರುಷ ಶ್ರೇಷ್ಠನೆಂಬ ಸಂಸ್ಕೃತಿಯ ರೀತಿನೀತಿಗಳಿಂದ ರೂಪಿತವಾದ ಸಮಾಜದಲ್ಲಿ ಹೆಣ್ಣಿಗೆ ಅಸ್ತಿತ್ವವೇ ಇಲ್ಲದೆ ಅವಳ ಜೀವನ ಗಂಡಿನ ಜೀವನದ ಆಟಿಕೆಯಾಗಿದೆ. ಇಂತಹ ಸಮಾಜದಲ್ಲಿ ಹೆಣ್ಣಾಗಿ ಅವಳ ಪರಿಸ್ಥಿತಿಯನ್ನು ತಿಳಿದುಕೋ ಎಂದು ಸೃಷ್ಟಿಕರ್ತ ದೇವರನ್ನು ಕೇಳುವ ಚಿತ್ರಣವನ್ನು ಬಾನು ಮುಷ್ತಾಕ್‌ರವರು 'ಒಮ್ಮೆ ಹೆಣ್ಣಾಗು ಪ್ರಭುವೇ!' ಕಥೆಯಲ್ಲಿ ನೀಡಿದ್ದಾರೆ. ಸಮಾಜದ ರೀತಿನೀತಿಗಳು ಗಂಡು ಹೆಣ್ಣಿನ ನಡುವೆ ಹೇಗೆ ಅಸಮಾನತೆಯನ್ನು ಸೃಷ್ಟಿಸಿವೆ ಎಂಬುದನ್ನು ತೋರಿಸಿದ್ದಾರೆ. ನಿಸರ್ಗದಲ್ಲಿ ದೊರೆಯುವ ಪ್ರತಿ ವಸ್ತುವೂ ಪುರುಷನಿಗಾಗಿಯೇ ಇದೆ, ಆ ವಸ್ತುಗಳನ್ನು ಮುಟ್ಟುವ, ನೋಡುವ, ಅನುಭವಿಸುವ ಅವಕಾಶ ಸ್ವಾತಂತ್ರ್ಯ ಹೆಣ್ಣಿಗಿಲ್ಲ ಎಂದು ತೋರಿಸಿದ್ದಾರೆ. ಗಂಡ ಪರದೈವ ಆದ್ದರಿಂದ ಗಂಡನ ಮಾತನ್ನು ಮೀರಬಾರದು ಎಂದು ಹಿರಿಯರು ಹೇಳುವ ಮಾತನ್ನು ಪ್ರಶ್ನಿಸುತ್ತಾರೆ. ಮದುವೆಯ ನಂತರ ಹೆಣ್ಣಿನ ಸ್ವಂತ ಅಸ್ತಿತ್ವವೇ ಇಲ್ಲವಾಗಿ 'ಅವನ ಹೆಂಡತಿ' (ಬಾನು ಮುಷ್ತಾಕ್ 2013: ಪುಟ 291) ನಾಮಧೇಯ ಬರುತ್ತದೆ. ಇದೂ ಕೂಡ ಹೆಣ್ಣಿನ ಮೇಲಿನ ಅಸಮಾನತೆಯನ್ನು ತೋರಿಸುತ್ತದೆ.

ವರದಕ್ಷಿಣೆ ತರುವಂತೆ ಹೆಂಡತಿಯನ್ನು ತವರಿಗೆ ಕಳುಹಿಸಿ, ಬರಿಗೈಲಿ ಬಂದ ಅವಳನ್ನು ಮುಂದಿನ ಜೀವನ ಪೂರ್ತಿ ಅಪ್ಪ ಅಮ್ಮನ ಮನೆಗೆ ಹೋಗಕೂಡದು ಮತ್ತು ತಂದೆ ತಾಯಿಯರೂ ಯಾರೂ ಬರಬಾರದು ಎಂದು ಆಜ್ಞಾಪಿಸುವ ಗಂಡನ ಚಿತ್ರಣ ಪುರುಷ ಹೇಗೆ ಹೆಣ್ಣನ್ನು ನಿಯಂತ್ರಿಸುತ್ತಾನೆ, ಅವಳ ಸ್ವಾತಂತ್ರ್ಯಹರಣ ಮಾಡಿ ಹೆತ್ತವರನ್ನೂ ಕೂಡ ದೂರ ಮಾಡುವ ಕ್ರೌರ್ಯ ತೋರಿಸುತ್ತಾನೆ ಎಂಬುದನ್ನು ಚಿತ್ರಿಸುತ್ತಾ ಹೆಣ್ಣು ತನ್ನವರನ್ನು ತೊರೆದು ಪುರುಷನ ಇಚ್ಛೆಗೆ ಅನುಗುಣವಾಗಿ ತನ್ನ ಆಸೆ–ಆಕಾಂಕ್ಷೆಗಳನ್ನೆಲ್ಲಾ ಬದಿಗೊತ್ತಿ ಜೀವಿಸಬೇಕಾಗುತ್ತದೆ ಎಂಬುದನ್ನು ತೋರಿಸುತ್ತಾರೆ.

ಹೆಣ್ಣು ಇರುವುದೇ ಮಕ್ಕಳನ್ನು ಹಡೆಯುವುದಕ್ಕೆ, ಸಾಕಲು ಗಂಡಸು ಇರುವಾಗ ಮಕ್ಕಳನ್ನು ಹೆರುವುದಕ್ಕೆ ಹೆಂಗಸಿಗೇನು ಕಷ್ಟ ಎಂದು ಕೇಳುವ ಗಂಡನ ಮಾತಿನಲ್ಲಿ ಹೆಣ್ಣಿನ ಪಾತ್ರವನ್ನು ನಗಣ್ಯವಾಗಿಸಿ, ಪುರುಷನ ಪಾತ್ರವನ್ನು ಮಹತ್ವೀಕರಿಸಿರುವ ಸಾಮಾಜಿಕ ಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ. ಮಕ್ಕಳನ್ನು ಹೆರುವುದು ಎಷ್ಟು ಕಷ್ಟದ ಕೆಲಸ ಎಂಬುದನ್ನು ಗಂಡಸರೂ ತಿಳಿಯಬೇಕು ಎಂದು ಹೇಳುವ ಅವಕಾಶ ಇಲ್ಲದಿರುವುದು ಹೆಣ್ಣಿನ ವಾಕ್ ಸ್ವಾತಂತ್ರ್ಯದ

ನಿರ್ಬಂಧನೆಯನ್ನು ತಿಳಿಸುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಗಂಡು ಹುಟ್ಟಿದಾಗ ಸಂತೋಷ ಪಡದೆ ಪುರುಷ ಪಕ್ಷಪಾತಿ, ಸ್ತ್ರೀ-ಶೋಷಣಾಮಯ ಮತ್ತು ಅಸಮಾನತೆಯಿಂದ ಕೂಡಿದ ಈ ಸಮಾಜದಲ್ಲಿ ಶೋಷಣೆ, ದೌರ್ಜನ್ಯವನ್ನು ಅನುಭವಿಸಬೇಕಾದ ಜೀವಿ ಹೆಣ್ಣು ಹುಟ್ಟಲಿಲ್ಲವಲ್ಲ ಎಂದು ತಾಯಿ ಸಮಾಧಾನ ಪಟ್ಟುಕೊಳ್ಳುತ್ತಾಳೆ. ಇದನ್ನು ಗಮನಿಸಿದರೆ, ಭೂಮಿಯ ಮೇಲೆ ಹೆಣ್ಣೆ ಹುಟ್ಟಬಾರದು ಎಂಬ ನೊಂದ ಹೆಣ್ಣುಗಳ ಮನಸ್ಥಿತಿಯನ್ನು ತೋರಿಸುತ್ತದೆ.

ಬಾನು ಮುಷ್ತಾಕ್‌ರವರ ಪ್ರಕಾರ ಕುಟುಂಬದಲ್ಲಿ ಹೆಣ್ಣಿನ ಪರಿಸ್ಥಿತಿ ಗಂಡ ಮತ್ತು ಮಕ್ಕಳನ್ನು ಪೋಷಿಸುತ್ತಾ ಅವರ ಸೇವಕಿಯಾಗಿ ಜೀವನ ಕಳೆಯುವ ಗುಲಾಮಳ ಸ್ಥಿತಿಯಾಗಿದೆ. "ಬದುಕಿಗೆ ಯಾವುದೇ ಮಾರ್ಗವಿಲ್ಲದೆ, ಜಗತ್ತಿಗೆ ಯಾವ ಕಾಣಿಕೆಯನ್ನೂ ನೀಡದೆ, ಜಗತ್ತಿನಿಂದ ಏನನ್ನೂ ಪಡೆಯದೆ ಸಾಮಾಜಿಕ ಸಂಬಂಧದ ಅರಿವೇ ಇಲ್ಲದೆ, ಹೆಸರಿಲ್ಲದೆ, ವ್ಯಕ್ತಿಯೂ ಅಲ್ಲದೆ ಕೇವಲ ಒಬ್ಬ ಪುರುಷನ ಹೆಂಡತಿಯಾಗಿ ಅಥವಾ ಪ್ರತಿಫಲವಿಲ್ಲದ ಸೇವಕಿಯಾಗಿ" (ಬಾನು ಮುಷ್ತಾಕ್ 2013: ಪುಟ 295) ಜೀವಿಸುವ ನಿಷ್ಪ್ರಯೋಜಕ ಬದುಕಾಗಿದೆ. ಈ ಸಮಾಜದಲ್ಲಿ ಹೆಣ್ಣಿನ ಅಸ್ತಿತ್ವವಿರುವುದೇ ಪುರುಷನಿಂದ, ಹೆಣ್ಣು ಅವನ ನೆರಳೇ ಹೊರತು ಸ್ವಂತ ವ್ಯಕ್ತಿತ್ವವಿಲ್ಲ. ಆತನನ್ನು ಬಿಟ್ಟರೆ ಅವಳಿಗೆ ನೆಲೆ, ಅನ್ನ ಯಾವುದೂ ದೊರೆಯುವುದಿಲ್ಲ. ತನ್ನ ಅಸ್ತಿತ್ವವನ್ನು ಬಿಟ್ಟುಕೊಟ್ಟು ಪುರುಷನ ಸೇವಕಿಯಾಗಿ ಕೇವಲ ನೆಲೆ ಮತ್ತು ಅನ್ನಕ್ಕಾಗಿ ಪುರುಷನ ಅಧೀನದಲ್ಲಿ ಬದುಕುವುದು ಹೆಣ್ಣಿನ ಮೇಲೆ ಹೇರಿರುವ ಅಸಮಾನತೆಯ ಪ್ರತೀಕ ಎಂದು ತಿಳಿಯುತ್ತದೆ.

ಗಂಡು ಹೆಣ್ಣನ್ನು ಬಯಸುವುದು ಕೇವಲ ಕಾಮತೃಷೆ ಪೂರೈಕೆ ಮತ್ತು ಮನೆಕೆಲಸ ಮಾಡುವುದಕ್ಕೋಸ್ಕರ. ಕಾರಣಾಂತರಗಳಿಂದ ಉದಾ: ಅನಾರೋಗ್ಯ ನಿಮಿತ್ತ, ಈ ಕ್ರಿಯೆಗಳು ಆಗದಿದ್ದರೆ ಮತ್ತೊಂದು ಹೆಣ್ಣನ್ನು ತರುವುದು ಪುರುಷರ ರೀತಿಯಾಗಿದೆ. ಇದು ಹೆಣ್ಣನ್ನು ಹೆಂಡತಿ ಅಂದರೆ ಅರ್ಧಾಂಗಿಯ ರೂಪದಲ್ಲಿ ನೋಡದೆ ಕೇವಲ ಪರಿಚಾರಿಕೆಯಾಗಿ ಪರಿಗಣಿಸುವುದನ್ನು ತೋರಿಸುತ್ತದೆ. ಎರಡನೇ ಹೆಂಡತಿಯನ್ನು ತರುವಾಗ ಮತ್ತು ತಂದ ಮೇಲೆ ಮೊದಲನೇ ಹೆಂಡತಿಯ ಜೀವನಕ್ಕೆ ನೆಲೆ ಮತ್ತು ಹಣದ ಮಾರ್ಗವನ್ನು ಒದಗಿಸಬೇಕಾದ್ದು ಗಂಡನ ಕರ್ತವ್ಯ. ಆದರೆ ಇದಾವುದನ್ನೂ ಮಾಡದೆ ಅವಳನ್ನು ಮನೆಯಿಂದ ಹೊರಗೆ ಹಾಕಿ, ಬದುಕಿನ ನೆಲೆ ಮತ್ತು ಜೀವನದ ಮಾರ್ಗ ಕೊಡದೆ ಇರುವುದು ಅವಳನ್ನು ಕಸಕ್ಕಿಂತ ಕೀಳಾಗಿ ಕಾಣುವುದು ಕಂಡುಬರುತ್ತದೆ.

ಇಂತಹ ಅನಾಗರೀಕ ಸ್ತ್ರೀ–ಶೋಷಣಾಮಯ, ದೌರ್ಜನ್ಯಯುಕ್ತ, ಅಮಾನವೀಯ ಮತ್ತು ಅಸಮಾನತೆಯಿಂದ ಕೂಡಿದ ಸಮಾಜದಲ್ಲಿ ಹೆಣ್ಣು ಜೀವಿಸುವ ಪರಿಸ್ಥಿತಿ ಹೇಗಿದೆ ಎಂದು ತಿಳಿದು ಭೂಮಿಯ ಮೇಲೆ ಹೆಣ್ಣನ್ನು ಸೃಷ್ಟಿಸು ಇಲ್ಲದಿದ್ದರೆ, ನಿನ್ನ ಕೆಲಸ ಅನುಭವವಿಲ್ಲದ ಕುಂಬಾರನ ರೀತಿಯಾಗುತ್ತದೆ. ಇದು ನಿನಗೆ ತಿಳಿದರೆ ಈ ಪ್ರಪಂಚದಲ್ಲಿ ಹೆಣ್ಣಿನ ಮೇಲೆ ನಡೆಯುತ್ತಿರುವ ಅನ್ಯಾಯ, ಶೋಷಣೆ, ಅಸಮಾನತೆ ಕೊನೆಗೊಂಡು ಹೊಸ ಪ್ರಪಂಚದಲ್ಲಿ ಗಂಡು–ಹೆಣ್ಣು ಇಬ್ಬರೂ ಸಮಾನವಾಗಿ ಬಾಳಬಹುದಾಗುತ್ತದೆ. ಇದನ್ನು ಅರಿಯಲು ಹೆಣ್ಣಿನ ಪರಿಸ್ಥಿತಿಯನ್ನು ನೀನೂ ಅನುಭವಿಸಬೇಕು. ಅದಕ್ಕಾಗಿ ಸೃಷ್ಟಿಕರ್ತನಾದ ನೀನು ಒಮ್ಮೆ ಹೆಣ್ಣಾಗಿ ಹುಟ್ಟಿ ಈ ಪ್ರಪಂಚದಲ್ಲಿ ಹೆಣ್ಣಿಗಿರುವ ಪರಿಸ್ಥಿತಿಯನ್ನು ಅನುಭವಿಸಿ ಸಮಾನತೆಯ ಹೊಸ ಪ್ರಪಂಚವನ್ನು ಸೃಷ್ಟಿಸು ಎಂದು ಬಾನು ಮುಷ್ತಾಕ್‌ರವರು ದೇವರಲ್ಲಿ ಕೇಳುತ್ತಾರೆ.

ಪ್ರಾಕೃತಿಕವಾಗಿ ಕರಿನಾಗರ ಹಾವುಗಳು ಅತ್ಯಂತ ವಿಷಯುಕ್ತ ಮತ್ತು ಯಾರಿಗಾದರೂ ಕಚ್ಚಿದರೆ ಆ ವ್ಯಕ್ತಿ ಬದುಕುಳಿಯುವ ಸಂಭವ ತುಂಬಾ ಕಡಿಮೆ. ಈ ಪ್ರಾಕೃತಿಕ ಸತ್ಯವನ್ನು ಬಾನು ಮುಷ್ತಾಕ್‌ರವರು ಪುರುಷರ ವರ್ತನೆಗೆ ಸಮೀಕರಿಸಿ, ಈ ವರ್ತನೆಯಿಂದ ಸ್ತ್ರೀಯರು ಮುಸ್ಲಿಂ ಸಮಾಜದಲ್ಲಿ ಅನ್ಯಾಯ, ಅಸಮಾನತೆಗೆ ಒಳಗಾಗಿರುವುದನ್ನು 'ಕರಿನಾಗರಗಳು' ಕಥೆಯಲ್ಲಿ ತೋರಿಸಿದ್ದಾರೆ. ಸಮಾಜದಲ್ಲಿ ಧರ್ಮ, ನ್ಯಾಯ, ನೀತಿ, ಸಮಾನತೆಗಳು ನೆಲೆಸುವಂತೆ ಮಾಡಬೇಕಾದ ಮುತವಲ್ಲಿಗಳೇ ಇತರ ಪುರುಷರ ಜೊತೆಗೂಡಿ ಹೆಣ್ಣಿನ ಮೇಲೆ ಅನ್ಯಾಯ, ಶೋಷಣೆ, ತಿರಸ್ಕಾರ, ಅಸಮಾನತೆಗಳನ್ನು ಹೇರುವ ಪರಿಯನ್ನು ಕಥೆಯಲ್ಲಿ ಬರುವ ಆಶ್ರಫ್‌ಳ ದಾರುಣ ಬದುಕಿನ ಚಿತ್ರಣದಲ್ಲಿ ಸೆರೆಹಿಡಿದಿದ್ದಾರೆ. ಆಶ್ರಫ್‌ಳಿಗೆ ಗಂಡುಮಗುವಾಗಲಿಲ್ಲ ಎಂಬ ಕಾರಣದಿಂದ ಅವಳ ಗಂಡ ಯಾಕೂಬ್, ಆಶ್ರಫ್ ಮತ್ತು ಮೂರು ಹೆಣ್ಣುಮಕ್ಕಳನ್ನು ಬಿಟ್ಟು ತಾಯಿಯ ಮನೆ ಸೇರಿಕೊಳ್ಳುತ್ತಾನೆ. ಇದು ಗಂಡು ಮತ್ತು ಹೆಣ್ಣು ಮಕ್ಕಳನ್ನು ಪಡೆಯುವುದರಲ್ಲಿ ಸಮಾಜದ ಅಸಮಾನ ನಿಲುವನ್ನು ತೋರಿಸುತ್ತದೆ. ಹೆಣ್ಣು ಮಕ್ಕಳು ವಾರಸುದಾರರಾಗುವುದಿಲ್ಲ ಆದ್ದರಿಂದ ಗಂಡುಮಕ್ಕಳು ಬೇಕು ಎಂದು ಪುರುಷ ಹೆಣ್ಣಿನ ಅಸ್ತಿತ್ವವನ್ನೆ ಕಸಿಯುವ ರೀತಿಯನ್ನು ತೋರಿಸುತ್ತದೆ. ಇದಕ್ಕೆ ಕಾರಣ ಮುಸ್ಲಿಂ ಸಮಾಜ ಹೆಣ್ಣು ಮಕ್ಕಳಿಗೆ ಆಸ್ತಿಯ ಹಕ್ಕನ್ನು ನೀಡದಿರುವುದು ಮತ್ತು ಅವಳಿಗೆ ಆಸ್ತಿಯಲ್ಲಿ ಪಾಲನ್ನು ಕೊಡದಿರುವುದು. ಆಸ್ತಿ ದೊರಕಿದಾಗ ಹೆಣ್ಣುಮಕ್ಕಳೂ ಕೂಡ ವಾರಸುದಾರರಾಗುತ್ತಾರೆ ಎಂಬುದನ್ನು ತಿಳಿಯದಿರುವುದು. ಈ ಅಂಶವನ್ನು ಜುಲೇಖ ಬೇಗಮ್ ಎಂಬ ವಿದ್ಯಾವಂತ ಮಹಿಳೆಯ ಮೂಲಕ ಬಾನು ಮುಷ್ತಾಕ್‌ರವರು ತಿಳಿಸುತ್ತಾರೆ. ಕುರಾನಿನಲ್ಲಿರುವ ನಿಯಮಗಳಾದ ಹೆಣ್ಣುಮಕ್ಕಳಿಗೆ ಆಸ್ತಿ, ಗಂಡು

ಯಾವಾಗ ಎರಡನೇ ಮದುವೆಯಾಗಬಹುದು, ಇಬ್ಬರು ಹೆಂಡಿರನ್ನು ಯಾವ ರೀತಿ ನೋಡಿಕೊಳ್ಳಬೇಕು ಮುಂತಾದವುಗಳನ್ನು ಜುಲೇಖ ಬೇಗಮ್ ತಮ್ಮ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಆಶ್ರಫ್‌ಳಿಗೆ ತಿಳಿಸುತ್ತಾಳೆ. ಇಲ್ಲಿ ಗಮನಿಸಬೇಕಾದುದೆಂದರೆ ಸ್ತ್ರೀಯರಿಗೂ ಸಮಾನ ಅವಕಾಶಗಳನ್ನು ಕುರಾನ್ ಕಲ್ಪಿಸಿದ್ದರೂ ಪುರುಷ ಸಮಾಜ ಹೆಣ್ಣಿಗೆ ಅವುಗಳನ್ನು ತಿಳಿಸದೆ, ಅವಕಾಶಗಳನ್ನು ನೀಡದೆ ನಿಯಮಗಳನ್ನು ತಮ್ಮ ಅನುಕೂಲಕ್ಕೆ ಮಾರ್ಪಡಿಸಿ ಹೆಣ್ಣನ್ನು ಧರ್ಮದ ಬಲೆಯಲ್ಲಿ ಸಿಲುಕಿಸಿ ಶೋಷಿಸುತ್ತಿರುವುದು.

ಗಂಡುಮಗುವಿಗೆ ಜನ್ಮ ನೀಡಲಿಲ್ಲವೆಂಬ ಕಾರಣದಿಂದ ಆಶ್ರಫ್ ಮತ್ತು ತನ್ನ ಮೂರು ಹೆಣ್ಣುಮಕ್ಕಳನ್ನು ಬಿಟ್ಟ ಯಾಕೂಬ್ ಅವರ ಜೀವನ ನಿರ್ವಹಣೆಗೆ ಯಾವ ಆಧಾರ ಅಥವಾ ಸಹಾಯವನ್ನು ಮಾಡುವುದಿಲ್ಲ. ತನ್ನಲ್ಲಿ ಹಣವಿಲ್ಲದೆ ಮತ್ತು ಮನೆಯಲ್ಲಿ ಅಡಿಗೆ ಮಾಡಲು ಏನೂ ಇಲ್ಲದೆ ಆಶ್ರಫ್ ಮತ್ತು ಮೂರು ಹೆಣ್ಣುಮಕ್ಕಳು ಹಸಿವಿನಿಂದ ಪರಿತಪಿಸಬೇಕಾಗುತ್ತದೆ. ಜೊತೆಗೆ ಮೂರನೇ ಮಗಳಾದ ಮುನ್ನಿ ಅನಾರೋಗ್ಯದಿಂದ ಬಳಲುತ್ತಿದ್ದು ಅವಳ ಔಷಧೋಪಚಾರಕ್ಕೆ ಹಣದ ಅವಶ್ಯಕತೆಯಿರುತ್ತದೆ. ಇದನ್ನೆಲ್ಲಾ ತಿಳಿಸಿ ಬೇಡಿದ ಆಶ್ರಫ್‌ಳ ಮಾತಿಗೆ ಯಾಕೂಬ್ ಮನ್ನಣೆ ನೀಡದೆ ಮನೆಗೆ ಬರುವುದಿಲ್ಲ. ಸ್ವಲ್ಪವಾದರೂ ಹಣ ಸಂಪಾದಿಸಲು ಆಶ್ರಫ್ ಜುಲೇಖ ಬೇಗಮ್‌ಳ ಮನೆಯಲ್ಲಿ ಕೆಲಸಕ್ಕೆ ಸೇರುತ್ತಾಳೆ. ಇಲ್ಲಿ ಕಂಡುಬರುವುದೇನೆಂದರೆ ಹೆಣ್ಣುಮಕ್ಕಳು ಹುಟ್ಟಿದ್ದು ಕೇವಲ ಹೆಣ್ಣಿನಿಂದ ಅದರಲ್ಲಿ ತನ್ನ ಪಾಲು ಏನೂ ಇಲ್ಲ ಎಂದು ತಿಳಿದಿರುವ ಗಂಡಸರ ಮನೋಧರ್ಮ ಮತ್ತು ಒಬ್ಬ ತಂದೆಯ ಜವಾಬ್ದಾರಿಗಳನ್ನು ನಿರ್ವಹಿಸಲಾರದೆ, ಹೆಂಡತಿ ಮತ್ತು ಮಕ್ಕಳನ್ನು ಬಿಟ್ಟುಹೋಗುವ ಪಲಾಯನವಾದಿ ಮನೋಭಾವ. ಆದರೆ ಹೆಣ್ಣು ತಾನು ಜನ್ಮ ನೀಡಿದ ಮಕ್ಕಳಿಗೆ ಹೇಗಾದರೂ ಮಾಡಿ ಚೆನ್ನಾಗಿ ನೋಡಿಕೊಳ್ಳಬೇಕು ಎಂದು ಅನುಭವಿಸುವ ಕಷ್ಟ, ಅವಮಾನ, ಶೋಷಣೆ. ಇಲ್ಲೂ ಕೂಡ ಗಂಡು ತನ್ನ ಸ್ವಾರ್ಥ ಜೀವನಕ್ಕೆ ಹೆಣ್ಣಿನ ಬಲಿಕೊಟ್ಟು ಅಸಮಾನತೆಯನ್ನು ಮೆರೆಯುತ್ತಾನೆ.

ಆಶ್ರಫ್‌ಳ ಬದುಕಿನ ಕಥೆಯನ್ನು ಕೇಳಿದ ಜುಲೇಖಾ ಬೇಗಮ್ ಗಂಡನಿಂದ ನ್ಯಾಯ ದೊರಕಿಸಿಕೊಡಬೇಕೆಂದು ಮಸೀದಿಯಲ್ಲಿ ಅರ್ಜಿ ಹಾಕುವಂತೆ ಸಲಹೆ ನೀಡಿ, ಅರ್ಜಿಯನ್ನು ಬರೆದುಕೊಡುತ್ತಾಳೆ. ಅರ್ಜಿಯನ್ನು ಸಲ್ಲಿಸಲು ಹೋದ ಆಶ್ರಫ್ ಮುತವಲ್ಲಿಯ ತಿರಸ್ಕಾರಕ್ಕೆ ಒಳಗಾಗುತ್ತಾಳೆ. ಹೆಂಗಸರು ಗಂಡಸರ ಆಜ್ಞಾನುಸಾರ ನಡೆಯಬೇಕು, ಮನೆಯಿಂದ ಹೊರಗೆ ಬರಬಾರದು, ಗಂಡಸರು ಏನು ಮಾಡಿದರೂ ಕೇಳಬಾರದು, ಪ್ರಶ್ನಿಸಬಾರದು ಎನ್ನುವ ಅಭಿಪ್ರಾಯ ಮತ್ತು ನಡೆಯನ್ನು ಹೊಂದಿದ್ದ ಮುತವಲ್ಲಿ ಸಹಜವಾಗಿ ಆಶ್ರಫ್‌ಳ ಅರ್ಜಿಯನ್ನು

ಪರಿಗಣಿಸುವುದಿಲ್ಲ. ಕೆಲವು ದಿನಗಳ ಬಳಿಕ ಬಂದ ಆಶ್ರಫ್‌ಳಿಗೆ ಮತ್ತೊಂದು ಅರ್ಜಿಯನ್ನು ಕೊಡುವಂತೆ ತಿಳಿಸುತ್ತಾನೆ. ಇದು ಸ್ತ್ರೀಯರನ್ನು ಕೀಳಾಗಿ ನೋಡುತ್ತಿದ್ದ ಮುತವಲ್ಲಿಯ ವರ್ತನೆಯನ್ನು ತೋರಿಸುತ್ತದೆ. ಹೇಗಾದರೂ ಗಂಡನಿಂದ ಹಣದ ನೆರವನ್ನು ಪಡೆದು ಮಗಳು ಮುನ್ನಿಯ ಆರೋಗ್ಯ ಕಾಪಾಡಬೇಕೆಂದು ಬಯಸಿದ ಆಶ್ರಫ್, ಯಾಕೂಬ್‌ನಿಂದ ನ್ಯಾಯ ಕೊಡಿಸುವಂತೆ ಮುತವಲ್ಲಿಯಲ್ಲಿ ಪಟ್ಟು ಹಿಡಿದು ಗೋಗರೆಯುತ್ತಾಳೆ. ಆದರೆ ಮುತವಲ್ಲಿ ಯಾಕೂಬ್‌ನಿಂದ ಲಂಚ ಪಡೆದು ಆಶ್ರಫ್‌ಳದೇ ತಪ್ಪು ಎಂದು ಹೀಗಳೆಯುತ್ತಾನೆ. ಮುತವಲ್ಲಿ ಆಡುವ "ಮಾಡಬಾರದ ಯಾವ ಕೆಲಸಾನ ಅವನು ಮಾಡ್ತಿದ್ದಾನೆ? ಇನ್ನೊಂದು ನಿಕಾಹ್ ತಾನೆ ಅವ್ನು ಮಾಡಿಕೊಳ್ತಿರೋದು.. ಯಾರನ್ನು ಓಡಿಸಿಕೊಂಡು ಹೋಗ್ತಾ ಇಲ್ವಲ್ಲಾ? ಮಾಡ್ಲಿಬಿಡು. ನಾಲ್ಕುಜನ ಹೆಂಗಸ್ರನ್ನು ಮದ್ವೆಯಾಗ್ ಬಹುದೂಂತ ಶರೀಯತ್ ಕಾನೂನು ಐತೆ ಗೊತ್ತಾ? ಅದ್ಕೆ ನಿಂಗೆ ಯಾಕೆ ಹೊಟ್ಟೆ ಉರಿ? ಹೆಂಗಸ್ರೇ ಹಿಂಗೆ.. ಬರೀ ಹೊಟ್ಟೆಕಿಚ್ ಪಡೋರು.." (ಬಾನು ಮುಷ್ತಾಕ್ 2013: ಪುಟ 125) ಎಂಬ ಮಾತುಗಳು ಗಂಡಸರು ಮಾಡಿದ್ದೆಲ್ಲಾ ಸರಿ, ಹೆಂಗಸರು ಪ್ರಶ್ನಿಸಬಾರದು, ಅಡ್ಡಿಪಡಿಸಬಾರದು ಎಂಬ ಅವರ ಮನೋಭಾವವನ್ನು ತೋರಿಸುತ್ತದೆ. ಜೊತೆಗೆ ಗಂಡು-ಹೆಣ್ಣು ಇಬ್ಬರನ್ನು ಸಮಾನವಾಗಿ ನೋಡಿ, ಸಮಾನತೆಯನ್ನು ಕಾಪಾಡಬೇಕಾದ ಮುತವಲ್ಲಿಯೇ ಗಂಡಸರು ಮೇಲು, ಹೆಂಗಸರು ಕೀಳು ಎಂಬ ಅಸಮಾನ ನಿಲುವನ್ನು ತೋರಿಸುವುದು, ಇತರ ಗಂಡಸರೂ ಕೂಡ ಹೆಣ್ಣಿನ ಮೇಲೆ ಶೋಷಣೆ ಮಾಡಿ ಅವಳನ್ನು ಗುಲಾಮಳನ್ನಾಗಿ ಮಾಡಿಕೊಳ್ಳಲು ಅನುವು ಮಾಡಿಕೊಡುತ್ತದೆ ಎಂದು ತಿಳಿಯಬಹುದು.

ಮುತವಲ್ಲಿ ಎಷ್ಟೇ ನಿಧಾನಿಸಿದರೂ, ಯಾಕೂಬ್ ತಿರಸ್ಕರಿಸಿದರೂ ಆಶ್ರಫ್ ನ್ಯಾಯಕ್ಕಾಗಿ ಮಸೀದಿಗೆ ಹೋಗುವುದನ್ನು ನಿಲ್ಲಿಸುವುದಿಲ್ಲ. ಒಂದು ಬಾರಿ ಕಾದು ಕೂತಿದ್ದ ಆಶ್ರಫ್‌ಳನ್ನು ನೋಡಿದ ಯಾಕೂಬ್ ಕೋಪಗೊಂಡು ಜಗಳವಾಡಿದ. ಅದೇ ಕೋಪದಲ್ಲಿ ಅವನು ಆಶ್ರಫ್‌ಳನ್ನು ಒದ್ದಾಗ ಅವಳು ಪ್ರಜ್ಞೆ ತಪ್ಪಿದಳು ಮತ್ತು ಅವಳ ಕಂಕುಳಲ್ಲಿದ್ದ ಮುನ್ನಿ ಕೆಳಗೆ ಬಿದ್ದು ತೀವ್ರವಾಗಿ ಗಾಯಗೊಂಡು ಮೃತಪಟ್ಟಳು. ಇಲ್ಲಿ ಕಂಡುಬರುವುದೇನೆಂದರೆ, ಗಂಡಸರು, ಮುತವಲ್ಲಿ ಮತ್ತು ಯಾಕೂಬ್‌ನಂತವರು ತಮ್ಮ ಅಹಂ ಬಿಟ್ಟು ಹೆಣ್ಣು ಕೂಡ ಮನುಷ್ಯಳೇ ಅವಳಿಗೂ ನ್ಯಾಯವಾಗಿ ದೊರೆಯಬೇಕಾದುದನ್ನು ಕೊಡಬೇಕು ಮತ್ತು ತಮ್ಮ ತಮ್ಮ ಜವಾಬ್ದಾರಿಗಳನ್ನು ಅರಿತು ನಿರ್ವಹಿಸಬೇಕು ಎಂದು ಚಿಂತಿಸದೆ ತಾವು ಪುರುಷರು ಮಾಡಿದ್ದೇ ಸರಿ, ಹೆಣ್ಣು ನಮ್ಮ ಗುಲಾಮಳು, ತಾವು ಹೇಳಿದ ಹಾಗೆ ಕೇಳಿಕೊಂಡು ಇರಬೇಕು ಎಂದು ಭಾವಿಸಿ ಅದೇ ರೀತಿ

ನಡೆಯುತ್ತಿರುವುದು. ಇದರಿಂದ ಹೆಣ್ಣಿನ ಜೀವನ ಹಾಳಾಗಿ ದುರಂತಮಯ ಕೊನೆಯನ್ನು ಕಾಣುವುದು ಎಂದು ಆಶ್ರಫ್ ಮತ್ತು ಮುನ್ನಿಯರ ಬದುಕನ್ನು ಗಮನಿಸಿದಾಗ ತಿಳಿಯುತ್ತದೆ.

ಈ ಕಥೆಯಲ್ಲಿ ಕಂಡುಬರುವ ಮತ್ತೊಂದು ಅಂಶವೆಂದರೆ ಮುನ್ನಿಯ ಸಾವಿನ ನಂತರ ಸಮಾಜದ ಇತರ ಸ್ತ್ರೀಯರು ಮುತವಲ್ಲಿಯ ವಿರುದ್ಧ ತಮ್ಮ ಅಸಮಾಧಾನ, ಕೋಪ ಮತ್ತು ಅವನ ನಡತೆಯನ್ನು ತಮ್ಮದೇ ಆದ ರೀತಿ ಪ್ರತಿಭಟಿಸುವುದು. ಬೀದಿಯ ಕಸ ಗುಡಿಸುತ್ತಿದ್ದ ಹನೀಫ ಮುತವಲ್ಲಿಯನ್ನು ಸೈತಾನನಿಗೆ ಹೋಲಿಸಿ ಅಲ್ಲಾಹನ ಶಾಪ ತಾಗಲಿ ಎಂದು ಹೇಳುತ್ತಾಳೆ; ನಸೀಮ ಕೋಳಿಹುಂಜವನ್ನು ಕುರಿತು ದರಿದ್ರ ಹುಂಜಗಳ ವಂಶ ನಾಶವಾಗಲಿ ಎಂದು ಮುತವಲ್ಲಿಯನ್ನೂ ಮತ್ತು ಮುಖ್ಯವಾಗಿ ಗಂಡಸರ ಸಂತತಿಯೇ ಹಾಳಾಗಲಿ ಎಂದು ಬಯ್ಯುತ್ತಾಳೆ. ಬಾನು ಮುಷ್ತಾಕ್‌ರವರ ಈ ಚಿತ್ರಣವು ಪುರುಷರಿಂದ ಹೆಣ್ಣು ಯಾವ ಮಟ್ಟಕ್ಕೆ ದೌರ್ಜನ್ಯಕ್ಕೆ ಒಳಗಾಗಿದ್ದಾಳೆ ಮತ್ತು ಅದರಿಂದ ಅವಳಲ್ಲಿ ಮಡುಗಟ್ಟಿರುವ ಅವಮಾನ, ಹತಾಶೆ, ಕೋಪಗಳನ್ನು ತೋರಿಸುತ್ತದೆ. ಎಂತಹ ಪರಿಸ್ಥಿತಿಯೇ ಬಂದರೂ ಹೆಣ್ಣಿಗೆ ಆಸ್ತಿ, ಹಣ ಯಾವುದೂ ದೊರಕಬಾರದು ಎಂಬ ಪುರುಷ ಸಮಾಜದ ನಿಲುವು ಮತ್ತು ಇದರಿಂದ ಮಹಿಳೆ ಅನುಭವಿಸುತ್ತಿರುವ ಪರಾವಲಂಬಿ, ದುರಂತಮಯ ಬದುಕು ತಿಳಿಯುತ್ತದೆ. ಸ್ತ್ರೀಯರಿಗೆ ಸ್ವಾವಲಂಬಿಯಾಗಲು ಬೇಕಾದ ಹಕ್ಕು, ಅವಕಾಶಗಳು ಕುರಾನಿನಲ್ಲಿ ಇವೆ, ಆದರೆ ಇವು ಯಾವುದನ್ನೂ ಮುಸ್ಲಿಂ ವಿದ್ವಾಂಸರು ತಿಳಿಸದೆ, ಹೆಣ್ಣಿಗೆ ವಿದ್ಯೆ ಕೊಡಿಸದೆ, ಉದ್ಯೋಗಕ್ಕೆ ಕಳುಹಿಸದೆ, ಆಯ್ಕೆಯ ಹಕ್ಕನ್ನು ನೀಡದೆ, ತವರಿನ ಮನೆಯಲ್ಲಿ ಆಸ್ತಿಯ ಹಕ್ಕನ್ನು ನೀಡದೆ ಮಹಿಳೆಯನ್ನು ಶೋಷಿಸಲಾಗುತ್ತಿದೆ. ಹೆಣ್ಣಿಗೆ ಎಲ್ಲ ಹಕ್ಕು ಅವಕಾಶಗಳನ್ನು ನೀಡಬೇಕು ಮತ್ತು ಇದಕ್ಕೆ ಎಲ್ಲಾ ಒಕ್ಕೊರಲಿನಿಂದ ತಿಳಿಸಬೇಕು ಎಂದು ಜುಲೇಖ ಬೇಗಮ್‌ಳ ಮುಖಾಂತರ ಬಾನು ಮುಷ್ತಾಕ್ ಹೇಳುತ್ತಾರೆ.

ಸಮಾಜದ ಎಲ್ಲ ನೀತಿನಿಯಮಗಳು ಪುರುಷ ಪರವಾಗಿದ್ದು ಹೆಣ್ಣು ಅವನ ಕೈಯಲ್ಲಿ ಆಟಿಕೆಯಾಗಿ ಅಧೀನ ಜೀವನ ನಡೆಸುತ್ತಿದ್ದು ಅವಳ ಅಸಮಾನತೆಯ, ಶೋಷಣಾಮಯ ಬದುಕನ್ನು ಅರಿಯಲು ದೇವರೇ ಹೆಣ್ಣಾಗಿ ಹುಟ್ಟಿ ಬರಬೇಕು ಎಂದು ಬಾನು ಮುಷ್ತಾಕ್‌ರವರು ತಮ್ಮ ಕಥೆಯಲ್ಲಿ ಚಿತ್ರಿಸಿದ್ದಾರೆ. ಪ್ರಕೃತಿಯಲ್ಲಿ ದೊರೆಯುವ ಪ್ರತಿ ವಸ್ತುವೂ ಪುರುಷನಿಗಾಗಿದ್ದು ಆ ವಸ್ತುಗಳನ್ನು ನೋಡುವ, ಅನುಭವಿಸುವ ಸ್ವಾತಂತ್ರ್ಯ ಹೆಣ್ಣಿಗಿಲ್ಲ; ಸಾಂಸಾರಿಕ ಜೀವನದಲ್ಲಿ ಹೆಣ್ಣಿನ ಪಾತ್ರವನ್ನು ಶೂನ್ಯವಾಗಿಸಿ ಪುರುಷನೇ ಎಲ್ಲ ಎಂದು ತಿಳಿದುಬರುತ್ತದೆ. ಸೃಷ್ಟಿಕರ್ತನಾದ ದೇವರು

ಒಮ್ಮೆ ಹೆಣ್ಣಾಗಿ ಹುಟ್ಟಿ ಈ ಪ್ರಪಂಚದಲ್ಲಿ ಹೆಣ್ಣಿಗಿರುವ ಪರಿಸ್ಥಿತಿಯನ್ನು ತಿಳಿದುಕೊಂಡು ಸಮಾನತೆಯ ಹೊಸ ಪ್ರಪಂಚವನ್ನು ಸೃಷ್ಟಿಸಬೇಕು ಎಂದು ಬಾನು ಮುಷ್ತಾಕ್ ಬಯಸುತ್ತಾರೆ.

ಪುರುಷ ಪ್ರಧಾನ ಸಮಾಜ ಅತ್ಯಂತ ವಿಷಕಾರಿಯಾಗಿದ್ದು, ಹೆಣ್ಣಿನ ಬಾಳನ್ನು ದೌರ್ಜನ್ಯ, ಅನ್ಯಾಯ, ಅಸಮಾನತೆಗಳಿಂದ ತುಂಬಿಸಿದ್ದಾರೆ. ಇಂತಹ ವಿಷಯುಕ್ತ ಪುರುಷರು ಹೆಣ್ಣಿನ ಜೀವವನ್ನು ತೆಗೆಯುತ್ತಾರೆ ಎಂದು ಬಾನು ಮುಷ್ತಾಕ್‌ರವರು ತೋರಿಸಿದ್ದಾರೆ. ಪುರುಷ ಪ್ರಧಾನ ಸಮಾಜ ಪುರುಷ ಸಂತಾನವನ್ನೇ ಬಯಸುತ್ತದೆ. ಅದು ಆಗದೆ ಇದ್ದಾಗ ಹೆಣ್ಣಿನ ಅಸ್ತಿತ್ವ ಮತ್ತು ಬಾಳು ಎರಡನ್ನೂ ಹಾಳು ಮಾಡುತ್ತದೆ. ಇದಕ್ಕಾಗಿ ಸಮಾಜದ ಎಲ್ಲ ಅಂಗಗಳು ಅಂದರೆ ಕುಟುಂಬ, ಧರ್ಮ ಎಲ್ಲರೂ ಸಹಾಯ ಮಾಡುತ್ತಾರೆ ಎಂದು ತೋರಿಸುತ್ತಾರೆ. ಹೆಣ್ಣಿನ ಬಾಳಿಗೆ ಎರವಾದ ಈ ಅಂಗಗಳನ್ನು ಸ್ತ್ರೀ-ಸಮಾಜ ತನ್ನದೇ ರೀತಿಯಲ್ಲಿ ಪ್ರತಿರೋಧಿಸುವುದನ್ನು ಬಾನು ಮುಷ್ತಾಕ್‌ರವರು ಚಿತ್ರಿಸಿದ್ದಾರೆ. ಆದರೆ ಈ ಪ್ರತಿರೋಧ ಸ್ತ್ರೀಯ ಬಾಳನ್ನು ಅಸಮಾನತೆಯ ಕಪಿಮುಷ್ಟಿಯಿಂದ ಬಿಡಿಸುವ ರೀತಿ ಇರದೇ ಇರುವುದು ಇನ್ನೂ ಸಮಾಜದಲ್ಲಿ ಬದಲಾವಣೆ ಬರಬೇಕಾಗಿರುವ ಅವಶ್ಯಕತೆಯನ್ನು ತೋರಿಸುತ್ತದೆ.

6.3. ಕೌಟುಂಬಿಕ ನೆಲೆಯಲ್ಲಿ ಸಮಾನತೆ-ಅಸಮಾನತೆ

ಹೆಣ್ಣಿನ ಮೇಲಿನ ದಬ್ಬಾಳಿಕೆ, ದೌರ್ಜನ್ಯ, ಅಸಮಾನತೆ ಪ್ರಾರಂಭವಾಗುವುದೇ ಕುಟುಂಬದಲ್ಲಿ. ಸಮಾಜದಲ್ಲಿ ಕುಟುಂಬದ ವ್ಯವಸ್ಥೆಯೇ ಪುರುಷ ಪರವಾಗಿದ್ದು ಹೆಣ್ಣನ್ನು ಕೇವಲ ಕುಟುಂಬದ ಸೇವಕಿಯಾಗಿ, ಸಂಪ್ರದಾಯಗಳ ಒಳಗಡೆ ಬದುಕಬೇಕಾದ ಸ್ವಂತ ಅಸ್ತಿತ್ವವಿಲ್ಲದ ಜೀವಿಯಾಗಿ ಪರಿಗಣಿಸಿರುವುದನ್ನು ಮುಸ್ಲಿಂ ಮಹಿಳಾ ಸಾಹಿತಿಗಳು ತಮ್ಮ ಕಥೆಗಳಲ್ಲಿ ಚಿತ್ರಿಸಿರುವುದನ್ನು ತಿಳಿಯಲು ಪ್ರಯತ್ನಿಸಲಾಗಿದೆ. ಪ್ರಾತಿನಿಧಿಕವಾಗಿ ಸಾರಾ ಅವರ 'ಜನನ', 'ಬಂದಣಿಗೆ', 'ಚಪ್ಪಲಿಗಳು' ಬಾನು ಮುಷ್ತಾಕ್‌ರವರ 'ಬೊಗಸೆಯ ನೀರು', 'ನಿರ್ಲಿಪ್ತ ನೆರಳು'. 'ನಮ್ಮೊಳಗಿನ ಜರೀನಾ' ಕಥೆಗಳನ್ನು ಪರಿಗಣಿಸಿ ವಿಶ್ಲೇಷಿಸಲಾಗಿದೆ.

ಜನನ ಕಥೆಯಲ್ಲಿ ಸಾರಾ ಅಬೂಬ್‌ಕ್ಕರ್‌ರವರು ಒಂದು ಮುಸ್ಲಿಂ ಕುಟುಂಬದೊಳಗೆ ಗಂಡು-ಹೆಣ್ಣಿನ ನಡುವೆ ಇರುವ ಅಸಮಾನತೆಯನ್ನು ಚಿತ್ರಿಸಿದ್ದಾರೆ. ಗಂಡು ಪ್ರಧಾನ ಹೆಣ್ಣು ಅಧೀನ ಮತ್ತು ಹೆಣ್ಣಿನ ಜೀವನ ಮನೆಯ ಕೆಲಸ ಕಾರ್ಯಗಳಿಗೆ ಮತ್ತು ಮಕ್ಕಳಿಗೆ ಜನ್ಮಕೊಟ್ಟು ಅವರ ಲಾಲನೆ ಪಾಲನೆ ಮಾಡುವುದಕಷ್ಟೇ ಸೀಮಿತ. ಕೆಲವು ಮುಸ್ಲಿಂ ಕುಟುಂಬಗಳ ಅಭಿಪ್ರಾಯಗಳಾದ ಮಹಿಳೆಗೆ ಊಟ ಬಟ್ಟೆಗೆ ದಾರಿಯಾದರೆ ಸಾಕು, ಅವಳಿಗೆ ವಿದ್ಯೆ ಅಥವಾ

ಇನ್ನಾವುದೆ ಬೇಡಿಕೆಗಳ ಅವಶ್ಯಕತೆ ಇರುವುದಿಲ್ಲ ಎಂಬ ಧೋರಣೆಯನ್ನು ಲೇಖಕಿಯವರು ಈ ಕಥೆಯಲ್ಲಿ ಖಂಡಿಸಿ ಕದೀಜಾಳ ಪಾತ್ರದ ಮುಖಾಂತರ ತೋರಿಸಿದ್ದಾರೆ. ಕಥಾನಾಯಕಿ ಕದೀಜಾ ತನ್ನ 11ನೇ ವರ್ಷಕ್ಕೆ ಬಂದಾಗ ಅವಳ ವಿದ್ಯಾಭ್ಯಾಸ ನಿಲ್ಲಿಸಿ ಅವಳ ಮದುವೆ ಮಾಡಲು ಮನೆಯವರು ತಯಾರಿ ನಡೆಸುತ್ತಾರೆ. ಕಲಿಕೆಯಲ್ಲಿ ಮುಂದಿದ್ದ ಕದೀಜಾಳನ್ನು ಶಾಲೆಗೆ ಕಳುಹಿಸುವಂತೆ ಹೇಳಲು ಉಪಾಧ್ಯಾಯಿನಿ ಮನೆಗೆ ಬಂದಾಗ ಕದೀಜಾಳ ಅಮ್ಮ ಹೇಳುವ ಮಾತುಗಳು ಹೆಣ್ಣಿಗೆ ವಿದ್ಯೆಯ ಅವಶ್ಯಕತೆ ಇಲ್ಲ ಅವಳನ್ನು ನೌಕರಿಗೆ ಕಳುಹಿಸುವುದಿಲ್ಲ ಅವಳಿಗೆ ಮನೆಯ ಕೆಲಸವೇ ಬಹಳ ಮುಖ್ಯ ಎಂದು ಹೇಳುತ್ತಾಳೆ. ಈ ಮಾತುಗಳಲ್ಲಿ ಕೇವಲ ಗಂಡಸರು ಮಾತ್ರ ನೌಕರಿಗೆ ಹೋಗಬೇಕಿದ್ದು ಅವನಿಗೆ ವಿದ್ಯೆಯ ಅವಶ್ಯಕತೆ ಇರುತ್ತದೆ ಹೆಣ್ಣಿಗಲ್ಲ ಎಂಬ ತಾರತಮ್ಯ ನೀತಿಯನ್ನು ಅಥವಾ ಅಸಮಾನತೆಯನ್ನು ಸಾರಾರವರು ತಿಳಿಸಿದ್ದಾರೆ.

ಕದೀಜಾಳ ಮದುವೆಯಾಗಿ 3 ವರ್ಷಗಳಾದರೂ ಮಕ್ಕಳಾಗದಿದ್ದಾಗ ಅವಳ ಗಂಡ ಮತ್ತೊಂದು ವಿವಾಹವಾಗಿ ಆ ಹೆಣ್ಣನ್ನು ಮನೆಗೆ ಕರೆದುಕೊಂಡು ಬರುತ್ತಾನೆ. ಆದರೆ ಅದನ್ನು ಪ್ರಶ್ನಿಸುವ ಮತ್ತು ಯಾರಿವಳು ಎಂದು ಕೇಳುವ ಹಕ್ಕು ಮತ್ತು ಸ್ವಾತಂತ್ರ್ಯ ತನಗಿಲ್ಲವಲ್ಲ ಎಂದು ತನ್ನಲ್ಲೆ ಕದೀಜಾ ಪ್ರಶ್ನಿಸಿಕೊಳ್ಳುತ್ತಾಳೆ. ಕದೀಜಾಳ ಗಂಡ ಅವಳ ಬಳಿ ಇದ್ದ ಕಾಸಿನ ಸರವನ್ನು ತನ್ನ ಎರಡನೇ ಹೆಂಡತಿಗೆ ಕೊಡು ಎಂದು ಕೇಳಿದಾಗ "ಅದು ನನಗೆ ಬೇಕು" ಎಂದು ಕದೀಜಾ ಹೇಳುತ್ತಾಳೆ. ತನ್ನ ಮಾತನ್ನು ಪ್ರಥಮ ಬಾರಿಗೆ ಧಿಕ್ಕರಿಸಿದ ಹೆಂಡತಿಯನ್ನು ಗಂಡ ಹೊಡೆಯುತ್ತಾನೆ. ಇದರಿಂದ ತಿಳಿಯುವುದೇನೆಂದರೆ ಹೆಣ್ಣು ತನಗೆ ಅಧೀನಳು ನಾನು ಹೇಳಿದಂತೆ ಕೇಳಬೇಕು ಮತ್ತು ನನ್ನ ನಿರ್ಣಯವೇ ಅಂತಿಮ ಎಂಬ ಪುರುಷ ಮನೋಭಾವ, ಈ ನಿಲುವುಗಳೇ ಹೆಣ್ಣು-ಗಂಡಿನ ನಡುವಿನ ಅಸಮಾನತೆಗೆ ಕಾರಣಗಳಾಗುತ್ತವೆ.

ಕದೀಜಾ ತನ್ನ ನಾಲ್ಕನೆಯ ಮಗುವಿನ ಹೆರಿಗೆಯ ಸಂದರ್ಭದಲ್ಲಿ ನಾನು ಬದುಕುವುದಿಲ್ಲವೆಂದು ತಿಳಿದು ಮಗಳಾದ ಸುಮಯ್ಯಳಿಗೆ ಈ ರೀತಿ ಹೇಳುತ್ತಾಳೆ "..ನಿರಂತರವಾಗಿ ಸಹಿಸಲಸಾಧ್ಯವಾದ ನೋವನ್ನನುಭವಿಸುವುದು ಮಾತ್ರ ನನ್ನ ಹಣೆಬರಹವಾಯ್ತು.. ನಾಳೆ ನನ್ನ ಹೆಣ ನೋಡಲು ನನ್ನ ತಾಯಿ.. ಅಂದರೆ ನಿನ್ನ ಅಜ್ಜಿ ಮತ್ತು ಮಾವ ಬಂದೇ ಬರುತ್ತಾರೆ. ರಕ್ತವನ್ನು ಕತ್ತರಿಸಲು ಯಾರಿಂದಲೂ ಸಾಧ್ಯವಾಗದು. ಅವರೊಡನೆ ನೀನು ಹೊರಟುಹೋಗು.. ನಿನ್ನನ್ನು ತಡೆಯುವ.. ಯಾವ ಶಕ್ತಿಯೂ ಈಗ ಇಲ್ಲಿಲ್ಲ. ತುಂಬಾ ಓದಿ ವಿದ್ಯಾವಂತಳಾಗು, ಬುದ್ಧಿವಂತಳಾಗು. ನಿನ್ನ ಅನ್ನವನ್ನು ನೀನೇ ಸಂಪಾದಿಸು. ನನ್ನಲ್ಲಿ ಹುಟ್ಟಿದ್ದು ನಿನ್ನಲ್ಲಿ ಹುಟ್ಟಲಿ.." (ಸಾರಾ ಅಬೂಬಕ್ಕರ್ 2010: ಪುಟ 57) ಜೀವನದುದ್ದಕ್ಕೂ

ನೋವು, ಅಸಮಾನತೆ, ಅಸಹಾಯಕತೆ, ದೌರ್ಜನ್ಯಗಳಿಂದ ನಲುಗಿಹೋಗಿದ್ದ ಕದೀಜಾಳ ಈ ಮಾತುಗಳನ್ನು ಗಮನಿಸಿದಾಗ ಒಂದು ಹೆಣ್ಣಿನ ಜೀವನಕ್ಕೆ ಅಗತ್ಯವಾಗಿ ಬೇಕಾಗುವ ಅಂಶಗಳು ಶಿಕ್ಷಣ, ಸ್ವಾವಲಂಬನೆ, ಧೈರ್ಯ ಮತ್ತು ಗಂಡು ಹೆಣ್ಣಿನ ನಡುವಿನ ಸಮಾನತೆ ಎಂದು ತಿಳಿದುಬರುತ್ತದೆ.

ಸಾರಾ ಅಬೂಬ್‌ಕ್ಕರ್‌ರವರು ತಮ್ಮ 'ಬಂದಣಿಗೆ' ಎನ್ನುವ ಕಥೆಯಲ್ಲಿ ಮುಸ್ಲಿಂ ಕುಟುಂಬದಲ್ಲಿ ಹೆಣ್ಣು ಅಸಮಾನತೆಯ ಗೋಡೆಯೊಳಗೆ ಸಿಲುಕಿರುವ ರೀತಿಯನ್ನು ಚಿತ್ರಿಸಿದ್ದಾರೆ. 'ಬಂದಣಿಗೆ' ಎಂಬ ಪದದ ಅರ್ಥ ಪರಾವಲಂಬಿ ಎಂದು ಆಗುತ್ತದೆ. ಈ ಕಥೆಯ ಮುಖ್ಯ ಪಾತ್ರಧಾರಿಯಾದ ಅಬ್ದುಲ್ ಖಾದರ್ ವಿದ್ಯಾರ್ಥಿ ಜೀವನದಿಂದಲೂ ನಾನು ಹುಟ್ಟಿರುವುದೇ ಜೀವನದಲ್ಲಿ ಮೋಜು ಮಾಡಲು ಎಂದು ತಿಳಿದು ಎಲ್ಲ ರೀತಿಯ ಕೆಟ್ಟ ಚಟಗಳನ್ನು ಕಲಿತು ತನ್ನ ತಂದೆ ಮತ್ತು ಅಣ್ಣ ಕೊಡುವ ಹಣದ ಮೇಲೆ ಅವಲಂಬಿತನಾಗಿರುತ್ತಾನೆ. ಖಾದರ್‌ನನ್ನು ಸರಿದಾರಿಗೆ ತರಲು ಯೋಚಿಸಿ ಅಸ್ಮಾ ಎಂಬ ಹುಡುಗಿಯೊಂದಿಗೆ ಮದುವೆ ಮಾಡುತ್ತಾರೆ. ಆದರೆ ಎಲ್ಲ ರೀತಿಯ ಕೆಟ್ಟ ಚಟಗಳನ್ನು ಕಲಿತಿದ್ದ ಖಾದರ್ ಒಂದು ಬಾರಿ ಜನಗಳ ಕೈಗೆ ಸಿಲುಕಿ ವಿಪರೀತ ಏಟು ತಿಂದು ಕಾಲು ಮುರಿದು ಜೀವನ ಪರ್ಯಂತ ಹಾಸಿಗೆ ಹಿಡಿಯುತ್ತಾನೆ. ಈ ರೀತಿ ಹಾಸಿಗೆ ಹಿಡಿದ ಖಾದರ್ ತನ್ನ ಮುಂದಿನ ಜೀವನದ ಎಲ್ಲ ಬೇಕು-ಬೇಡ ಮತ್ತು ಎಲ್ಲ ಕಾರ್ಯಗಳಿಗೂ ಹೆಂಡತಿ ಅಸ್ಮಾಳ ಮೇಲೆ ಅವಲಂಬಿಯಾಗುತ್ತಾನೆ. ಜೀವನದುದ್ದಕ್ಕೂ ಪರಾವಲಂಬಿಯಾದ ಖಾದರ್‌ನ ಮುಖಾಂತರ ಒಬ್ಬ ಪುರುಷ ಹೆಣ್ಣನ್ನು ಶೋಷಿಸಿ ಅವಳ ಮೇಲೆ ದಬ್ಬಾಳಿಕೆ ನಡೆಸಿ ತಾನು ಮೇಲು ಹೆಣ್ಣು ಕೀಳು ಎಂದು ತಿಳಿದು ಸ್ತ್ರೀ-ಪುರುಷರ ಮಧ್ಯೆ ಉಂಟಾಗುವ ಅಸಮಾನತೆಯನ್ನು ಚಿತ್ರಿಸಿದ್ದಾರೆ. ಹಾಸಿಗೆ ಹಿಡಿದಿದ್ದ ಖಾದರ್‌ನನ್ನು ನೋಡಲು ಬಂದ ಸ್ನೇಹಿತ ಜಮಾಲುದ್ದೀನ್‌ನ ಎದುರು ಖಾದರ್ ಹೆಂಡತಿಯೊಡನೆ ನಡೆದುಕೊಳ್ಳುವ ರೀತಿ ಅವನು ಹೇಳುವ ಮಾತುಗಳು ಒಂದು ಮುಸ್ಲಿಂ ಕುಟುಂಬದಲ್ಲಿ ಕಂಡುಬರುವ ಸ್ತ್ರೀ-ಪುರುಷರ ನಡುವಿನ ಅಸಮಾನತೆ ಮತ್ತು ಸ್ತ್ರೀಯನ್ನು ಗುಲಾಮಳಂತೆ ನಡೆಸಿಕೊಳ್ಳುವುದನ್ನು ತೋರಿಸುತ್ತದೆ. ಉದಾಹರಣೆಗೆ ಕಾಲಿನ ಸ್ವಾಧೀನ ಕಳೆದುಕೊಂಡು ಚೈತನ್ಯವಿಲ್ಲದೆ ಹಾಸಿಗೆ ಹಿಡಿದಿದ್ದ ಖಾದರನ ಎಲ್ಲ ಕೆಲಸಗಳನ್ನು ತನ್ನ ಹೆಂಡತಿಯೇ ಮಾಡುತ್ತಿದ್ದಾಳೆ ಎಂದು ತಿಳಿಸುವ ಸಂದರ್ಭದಲ್ಲಿ ಖಾದರನು ಈ ರೀತಿ ಹೇಳುತ್ತಾನೆ ".. ಅವಳಲ್ಲದೆ ಇನ್ಯಾರು ಮಾಡಬೇಕು ನಾನು ಅವಳ ಗಂಡನಲ್ಲವೇ?" (ಸಾರಾ ಅಬೂಬಕ್ಕರ್ 2010: ಪುಟ 47) ಈ ಮಾತಿನ ಹಿಂದೆ ತಾನು ಗಂಡು ಅವಳನ್ನು ನಾನು ಮದುವೆಯಾಗಿರುವುದು ನನ್ನ ಸೇವೆ ಮಾಡಲು ಎನ್ನುವ ಪುರುಷ ಪ್ರಧಾನ

ಭಾವನೆ ಕಾಣುತ್ತದೆ. ಮುಂದುವರೆದು ಖಾದರ್‌ನು ಪಾನಕ ತರುವಂತೆ ತನ್ನ ಹೆಂಡತಿಗೆ ಹೇಳಿದಾಗ ಜಮಾಲುದ್ದೀನ್ ಈಗ ಊಟದ ಸಮಯ ಅವರಿಗೆ ಬೇರೆ ಕೆಲಸವಿರುತ್ತದೆ ಆದ್ದರಿಂದ ಪಾನಕ ಬೇಡ ಎಂದು ಹೇಳುತ್ತಾನೆ. ಆದರೆ ಖಾದರ್ "ಮಾಡ್ತಾಳೆ ಬಿಡು, ಬೇರೇನು ಕೆಲ್ಸವಿದೆ ಅವಳಿಗೆ, ಮೂರು ಹೊತ್ತು ತಿನ್ನುವುದು ಬಿಟ್ಟು?" (ಸಾರಾ ಅಬೂಬಕ್ಕರ್ 2010: ಪುಟ 47) ಎಂದು ಹೇಳುತ್ತಾನೆ. ಇಲ್ಲಿ ಖಾದರನ ಪ್ರಕಾರ ಹೆಣ್ಣು ಮನೆಯಲ್ಲಿ ಮಾಡುವ ಕೆಲಸಗಳು ಪರಿಗಣನೆಗೆ ಬರುವುದಿಲ್ಲ ಮತ್ತು ಆ ಕೆಲಸಗಳಿಗೆ ಯಾವುದೇ ಆರ್ಥಿಕ ಮೌಲ್ಯವಿರುವುದಿಲ್ಲ. ಹೆಣ್ಣು ಗಂಡನ ಮನೆಗೆ ಬಂದ ದಿನದಿಂದ ಇದು ತನ್ನ ಮನೆ ತನ್ನವರು ಎಂದು ಭಾವಿಸಿ ಪ್ರೀತಿಯಿಂದ ಎಲ್ಲ ಕೆಲಸಗಳನ್ನು ಮಾಡಿದರೂ ಕೂಡ ಅವಳ ಆ ಭಾವನೆಗೆ ಯಾವುದೇ ರೀತಿಯ ಬೆಲೆ ಇಲ್ಲದಿರುವುದನ್ನು ಖಾದರನ ಮಾತಿನಲ್ಲಿ ತಿಳಿಯಬಹುದು. ಅಂದರೆ ಹೆಣ್ಣು ಮನೆಯಲ್ಲಿ ಮಾಡುವ ಕೆಲಸಗಳಿಗೆ ಯಾವುದೇ ಬೆಲೆ ಇಲ್ಲ ಎಂದಾಗುತ್ತದೆ. ಇದು ಕೂಡ ಗಂಡು–ಹೆಣ್ಣಿನ ಕೆಲಸಗಳ ನಡುವೆ ಇರುವ ಅಸಮಾನತೆಯನ್ನು ತೋರಿಸುತ್ತದೆ.

ಪುರುಷ ಪ್ರಧಾನ ಕುಟುಂಬ ವ್ಯವಸ್ಥೆ ಹೆಣ್ಣನ್ನು ಒಬ್ಬ ವ್ಯಕ್ತಿಯಾಗಿ ಪರಿಗಣಿಸದೆ ಅವಳ ಸ್ವಾತಂತ್ರ್ಯ, ಬೇಕು–ಬೇಡಗಳನ್ನೆಲ್ಲಾ ನಿರಾಕರಿಸಿ ಅಸಮಾನತೆಯ ನೆಲೆಯಲ್ಲಿ ಶೋಷಿಸುವ ಮತ್ತು ಪುರುಷರು ಹೆಣ್ಣನ್ನು ತೀರಾ ನಿಕೃಷ್ಟವಾಗಿ ಕಾಣುವ ರೀತಿಯನ್ನು ಸಾರಾ ಅಬೂಬಕ್ಕರ್‌ರವರ 'ಚಪ್ಪಲಿಗಳು' ಕಥೆ ತೋರಿಸುತ್ತದೆ. ಈ ಕಥೆಯಲ್ಲಿ ಸಾರಾ ಅಬೂಬಕ್ಕರ್ ಸಂಪ್ರದಾಯಸ್ಥ ಮತ್ತು ಆಧುನಿಕ ಮನೋಭಾವದ ಪುರುಷರ ಎರಡು ಚಿತ್ರಣಗಳನ್ನು ಮುಖಾಮುಖಿಯಾಗಿಸುತ್ತಾ ಹೆಣ್ಣಿನ ಜೀವನಕ್ಕೂ ಪುರುಷ ಜೀವನದ ರೀತಿ ಬೇಕು ಬೇಡಗಳಿರುತ್ತವೆ, ಇಂತಹ ಕನಿಷ್ಟ ಅವಶ್ಯಕತೆಗಳನ್ನು ನಿರಾಕರಿಸುವ ಪುರುಷ ಸಮಾಜ ಹೆಣ್ಣನ್ನು ಕೇವಲ ಮನೆ ಕೆಲಸ ಮಾಡಲು ಮತ್ತು ಮಕ್ಕಳನ್ನು ಹೆರುವುದಕ್ಕಷ್ಟೇ ಸೀಮಿತಗೊಳಿಸಿ ಗುಲಾಮಳನ್ನಾಗಿ ಮಾಡಿಕೊಂಡಿದೆ ಎಂದು ತಿಳಿಸುತ್ತಾರೆ. ಈ ಕಥೆಯಲ್ಲಿ ಸಂಪ್ರದಾಯವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಹೇಳುವ ಹುಸೈನಿ ಹೆಣ್ಣಿಗೆ ಯಾವ ಸ್ವಾತಂತ್ರ್ಯವನ್ನೂ ಕೊಡದೆ ಆಧುನಿಕ ಜೀವನದ ರೀತಿ–ನೀತಿಗಳನ್ನು ತೋರಿಸದೆ ಸಾಂಪ್ರದಾಯಿಕ ಕುಟುಂಬ ವ್ಯವಸ್ಥೆಯೊಳಗಡೆ ಇರಿಸಬೇಕೆಂದು ಹೇಳುವುದು ಹೆಣ್ಣನ್ನು ಬಂಧನದಲ್ಲಿಡುವುದನ್ನು ತೋರಿಸುತ್ತದೆ. ಹುಸೈನನು ಹೇಳುವ "ಶಬೀರ್ ನೀನು ಗಂಡಸು; ಏನು ಮಾಡಿದರೂ ನಡೆಯುತ್ತದೆ. ಆದರೆ ಸಮೀರಾ ಹೆಣ್ಣು. ಆಕೆಗೆ ಇಂತಹದೆಲ್ಲಾ ರುಚಿ ಹತ್ತಿಸಿದರೆ ಅವಳ ಬುದ್ಧಿ ಹಾಳಾಗುತ್ತದೆ. ನಾಳೆ ತಾನೊಬ್ಬಳೇ ಸಿನಿಮಾಕ್ಕೆ ಹೋಗುತ್ತೇನೆಂದು ಹೊರಟರೆ ಏನು ಮಾಡುವುದು? ಹೆಂಗಸರನ್ನು ಕಾಲಿನ ಚಪ್ಪಲಿಯಂತೆ ಬಳಸಿಕೊಳ್ಳಬೇಕು, ಬೇಕೆಂದಾಗ

ಉಪಯೋಗಿಸಿ ಬೇಡವಾದಾಗ ಮೂಲೆಯಲ್ಲಿ ಬಿಟ್ಟುಬಿಡಬೇಕು. ಅದು ಬಿಟ್ಟು ತಲೆಯ ಮೇಲಿಟ್ಟುಕೊಂಡರೆ ಹೇಗೆ? ಚಪ್ಪಲಿಯನ್ನು ಎಲ್ಲಿ ಬೇಕೋ ಅಲ್ಲಿ ಬಿಡಬೇಕು" (ಸಾರಾ ಅಬೂಬಕ್ಕರ್, 2010: ಪುಟ 10) ಮಾತುಗಳು ಪುರುಷರಿಗೆ ಮಹಿಳೆಯರ ಮೇಲಿರುವ ಅಭಿಪ್ರಾಯ ಮತ್ತು ಅವಳನ್ನು ನಡೆಸಿಕೊಳ್ಳಲು ಬಯಸುವ ಸಂಪ್ರದಾಯ ಮನೋಭಾವವನ್ನು ತಿಳಿಸುತ್ತವೆ. ಹೆಣ್ಣನ್ನು ಚಪ್ಪಲಿಯ ಹಾಗೆ ಬಳಸಿಕೊಳ್ಳಬೇಕು ಎಂದು ಹೇಳುವುದು ಮುಸ್ಲಿಂ ಸಮಾಜ ಹೆಂಗಸರಿಗೆ ನೀಡಿರುವ ಸ್ಥಾನವನ್ನು ವ್ಯಕ್ತಪಡಿಸುತ್ತದೆ. ಇಂತಹ ಗುಲಾಮಿ ಸ್ಥಿತಿಯ ಕಟ್ಟುಪಾಡುಗಳ ಬಂಧನದಲ್ಲಿ ಸಿಲುಕಿದ ಸಮೀರಾ ಮನೋರೋಗಿಯಾಗುತ್ತಾಳೆ. ಸಾರಾ ಅಬೂಬಕ್ಕರ್‌ರವರು ಈ ಮೂಲಕ ಹೆಣ್ಣಿನ ಮೇಲೆ ಆಗುವ ಮಾನಸಿಕ ಆಘಾತವನ್ನು ತೋರಿಸುತ್ತಾರೆ.

ಆಧುನಿಕತೆ ಮುಸ್ಲಿಂ ಪುರುಷರಿಗೆ ಹೆಣ್ಣಿನ ಮೇಲಿರುವ ಅಭಿಪ್ರಾಯವನ್ನು ಸ್ವಲ್ಪಮಟ್ಟಿಗಾದರೂ ಬದಲಾಯಿಸುತ್ತಿರುವ ಮತ್ತು ಹೆಣ್ಣನ್ನೂ ಒಬ್ಬ ವ್ಯಕ್ತಿಯಾಗಿ ನೋಡಲು ಬಯಸುವ ಮನೋಭಾವವನ್ನು ಬೆಳೆಸುವ ನಿಟ್ಟಿನಲ್ಲಿ ಕೆಲಸ ಮಾಡಿರುವುದು ಕಾಣುತ್ತದೆ. ಸಮೀರಳ ಗಂಡ ಶಬೀರ್ ವಿದೇಶದಲ್ಲಿ ಕೆಲಸ ಮಾಡಿ ಆಧುನಿಕ ಮನೋಭಾವವನ್ನು ಬೆಳೆಸಿಕೊಂಡು ಮಹಿಳೆಗೂ ಅವಳ ಬಯಕೆಗಳನ್ನು ತೀರಿಸಿಕೊಳ್ಳುವ ಅವಕಾಶ ಮತ್ತು ಸ್ವಾತಂತ್ರ್ಯ ಕೊಡಬೇಕೆಂದು ತಿಳಿದು ಸಮೀರಳನ್ನು ಆಧುನಿಕತೆಯ ಕುರುಹಾದ ನಗರಕ್ಕೆ ಕರೆದೊಯ್ಯುವುದು ಹೆಣ್ಣನ್ನು ಸಮಭಾವದಿಂದ ನೋಡುವುದನ್ನು ತಿಳಿಸುತ್ತದೆ.

ಪುರುಷನಿಂದ ಹೆಣ್ಣಿನ ಮೇಲೆ ನಡೆಯುವ ದೌರ್ಜನ್ಯಗಳು ಅವಳನ್ನು ಅಪಮಾನ, ಅಸಮಾನತೆಯ ಸುಳಿಗೆ ಸಿಲುಕಿಸುತ್ತವೆ. ಈ ಅಸಮಾನತೆಯ ಕೂಪದಿಂದ ಹೊರಬರಲು ಹೆಣ್ಣು ಧೈರ್ಯದಿಂದ ತನ್ನ ಬಾಳನ್ನು ಅನುಭವಿಸಬೇಕು. ಸಮಾಜದ ಕಟ್ಟುಪಾಡುಗಳು ಬಹುಪಾಲು ಪುರುಷ ನಿರ್ಮಿತವಾಗಿದ್ದು ಹೆಣ್ಣು ಆ ಕಟ್ಟುಪಾಡುಗಳನ್ನು ಮೀರಿ ತನ್ನ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕೆಂಬ ಅಂಶವನ್ನು ಬಾನು ಮುಷ್ತಾಕ್‌ರವರು 'ಬೊಗಸೆಯ ನೀರು' ಕಥೆಯಲ್ಲಿ ಚಿತ್ರಿಸಿದ್ದಾರೆ. ಈ ಕಥೆಯಲ್ಲಿ ಲೇಖಕಿಯೊಬ್ಬಳು ಹೆಣ್ಣು ಅನುಭವಿಸುವ ಅವಮಾನ, ನಿಂದನೆ ನೋವು ಮತ್ತು ಅದರ ವಿರುದ್ಧ ಧೈರ್ಯದಿಂದ ನಿಂತು ಏಕಾಂಗಿಯಾಗಿ ಜೀವನದ ಕರ್ತವ್ಯಗಳನ್ನು ನಿರ್ವಹಿಸಿ ಅವಳ ಕಳೆದುಹೋದ ಬದುಕನ್ನು ಅನುಭವಿಸಲು, ಸಾಂಪ್ರದಾಯಿಕ ಕಟ್ಟುಪಾಡುಗಳನ್ನು ಮೀರಲು ಸಿದ್ಧವಾಗಿರುವ ಪಾತ್ರವನ್ನು ತನ್ನ ಕಥೆಯಲ್ಲಿ ಸೃಷ್ಟಿಸುತ್ತಾಳೆ. ಪ್ರತಿಮಾ ಗರ್ಭಿಣಿಯಾಗಿದ್ದಾಗ ಅವಳ ಶೀಲದ ಮೇಲೆ ಗಂಡನಿಗೆ ಅನುಮಾನ ಬರುತ್ತದೆ.

ಅನುಮಾನವನ್ನು ಬಗೆಹರಿಸಿಕೊಳ್ಳುವ ನೆಪದಲ್ಲಿ ಗರ್ಭಿಣಿಯಾದ ಅವಳ ಮೇಲೆ ಶೀಲತ್ವವನ್ನು ಸಾಬೀತುಪಡಿಸಲು ಹಲವಾರು ಪ್ರಯತ್ನಗಳನ್ನು ಮಾಡುತ್ತಾನೆ. ಹಲವಾರು ದೇವಸ್ಥಾನಗಳಿಗೆ ಕರೆದುಕೊಂಡು ಹೋಗಿ, ಹಲವು ರೀತಿಯಲ್ಲಿ ಅವಳನ್ನು ಪರೀಕ್ಷಿಸುತ್ತಾನೆ. ಎಷ್ಟೇ ಪರೀಕ್ಷೆಗಳಿಗೆ ಒಳಗಾದರೂ ಅವನು ನಂಬದೆ ಪುನಃ ಪರೀಕ್ಷೆಗಳಿಗೆ ಒಳಪಡಿಸುತ್ತಾನೆ. ಗರ್ಭಿಣಿಯಾದ ಅವಳು ಶೀಲತ್ವದ ಪರೀಕ್ಷೆಗಳಿಂದ ಆದ ಅವಮಾನದಿಂದ ಕ್ರೋಧಗೊಂಡು "ನಿಮ್ಮ ಹುಟ್ಟಿಗೆ ಕಾರಣವಾದ ನಿಮ್ಮ ತಂದೆ ಯಾರು ಅಂತ ನಿಮಗೆ ಗೊತ್ತಾ? ನಿಮ್ಮ ತಾಯಿಯನ್ನಾದರೂ ನಂಬಿದಿರೇನ್ರಿ ನೀವು?" (ಬಾನು ಮುಷ್ತಾಕ್ 2013: ಪುಟ 325) ಎಂದು ಪ್ರಶ್ನಿಸುತ್ತಾಳೆ. ಅನಿರೀಕ್ಷಿತವಾಗಿ ಮೂಡಿದ ಪ್ರಶ್ನೆಗಳಿಗೆ ಅವನು ಅವಳಿಗೆ ಹೊಡೆಯುತ್ತಾನೆ ಮತ್ತು ಮಗು ಯಾರದೆಂದು ಹೇಳುವಂತೆ ಒತ್ತಾಯಿಸುತ್ತಾನೆ.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಮಗುವಿಗೆ ಕಾರಣವಾದ ಅವನು ಅವಳ ಶೀಲವನ್ನೇ ಶಂಕಿಸಿ ಅದನ್ನು ರುಜುವಾತುಪಡಿಸಲು ಬಳಸುವ ಹಿಂಸಾಮಾರ್ಗ, ಅವಳ ಮೇಲಿನ ದೌರ್ಜನ್ಯ ಮುಖ್ಯವಾಗಿ ಅವಳ ವ್ಯಕ್ತಿತ್ವಕ್ಕೆ ಮಾಡುವ ಅವಮಾನ ಮತ್ತು ಆತ್ಮವನ್ನು ಘಾಸಿಗೊಳಿಸುವ ಕೃತ್ಯಗಳು. ಇಂತಹ ಅಮಾನವೀಯ ಕೃತ್ಯಗಳನ್ನು ಎಸಗಲು ಸಾಧ್ಯವಾಗುವುದು ಅಸಮಾನತೆಯಿದ್ದಾಗ ಮಾತ್ರ. ಇಲ್ಲಿ ಹೆಣ್ಣು ಪುರುಷನಿಗೆ ಸಮಾನವಾಗಿಲ್ಲದಿರುವುದು ಕಂಡುಬರುತ್ತದೆ. ಕಥೆಯ ಲೇಖಕಿ ವ್ಯಕ್ತಿಪಡಿಸುವಂತೆ ಅವನು ಅವಳನ್ನು ಸಾಯಿಸಿ ಬಿಡುಗಡೆ ಪಡೆಯಲೆಂದು ಬಯಸಿದ್ದ, ಆದರೆ ಅವನ ಆಸೆ ಈಡೇರದಿದ್ದಕ್ಕೆ ಪುರುಷನ ಅಹಂಗೆ ಪೆಟ್ಟು ಬಿದ್ದಿತ್ತು. ಅಂದರೆ ಹೆಂಡತಿಯಾಗಿ ಅವಳನ್ನು ಸಮಾನ ದೃಷ್ಟಿಯಲ್ಲಿ ನೋಡದೆ, ಪುರುಷನೆಂಬ ಅಹಂ ಮತ್ತು ಅನುಮಾನಗಳಿಂದಲೇ ನೋಡಿದ.

ಕ್ರೌರ್ಯ, ಹಿಂಸೆ, ಅವಮಾನಗಳನ್ನು ಸಹಿಸಿಕೊಂಡು ಬಂದಿದ್ದ ಅವಳು ಗಂಡನ ವಿರುದ್ಧ ಸಿಡಿದೆದ್ದು "ಈ ಮಗು .. ನಿಮ್ಮದಲ್ಲಾರೀ.." "ಇಲ್ಲ .. ನಿಮಗೆ ಗೊತ್ತಿಲ್ಲ.. ಏನೇನೂ ಗೊತ್ತಿಲ್ಲ.. ಈ ಮಗು ನಿಮ್ಮದಲ್ಲ.. ತನ್ನ ಪುರುಷತ್ವದ ಬಗ್ಗೆ ತನಗೇ ನಂಬಿಕೆ ಇಲ್ಲದ ಷಂಡನದಂತೂ ಖಂಡಿತ ಅಲ್ಲ.." "ಈ ಮಗು ನನ್ನದು! ಕೇವಲ ನನ್ನದು" (ಬಾನು ಮುಷ್ತಾಕ್ 2013: ಪುಟ 326) ಎಂದು ಹೇಳಿ ಹೊರಟುಹೋಗುತ್ತಾಳೆ. ಪುರುಷನ ದಬ್ಬಾಳಿಕೆ, ಅಪಮಾನ ಅವಳಲ್ಲಿ ಜಾಗೃತಿಯನ್ನುಂಟು ಮಾಡಿ ಧೈರ್ಯವನ್ನು ತಂದಿದ್ದವು. ಇದೇ ಧೈರ್ಯದಿಂದ ಅವಳು ಗಂಡನನ್ನು ಬಿಟ್ಟು ಸ್ವತಂತ್ರವಾಗಿ, ಗುಲಾಮತನವಿಲ್ಲದೆ, ಅಪಮಾನ ಹಿಂಸೆಗಳಿಲ್ಲದ ಬದುಕನ್ನು ರೂಪಿಸಿಕೊಳ್ಳಲು ಮುಂದಾಗುತ್ತಾಳೆ. ಈ ನಡೆ, ಹೆಣ್ಣು ಧೈರ್ಯದಿಂದ ತನ್ನ ಮೇಲಿನ

ದಬ್ಬಾಳಿಕೆಯನ್ನು ಎದುರಿಸಿ ಅಂತಹ ಪುರುಷನ ಹಿಡಿತದಿಂದ ಪಾರಾಗಿ ಅವನಿಗೆ ಸಮಾನವಾಗಿ ನಿಂತು ಸ್ವತಂತ್ರ ಬದುಕು ರೂಪಿಸಿಕೊಳ್ಳಬೇಕೆಂಬ ಆಶಯ ತೋರಿಸುತ್ತದೆ.

ಒಂಟಿ ಜೀವನ ಆರಂಭಿಸಿದ ಅವಳು ತನ್ನ ಮಗನನ್ನು ಬೆಳೆಸುತ್ತಾಳೆ. ಜೀವನಕ್ಕೆ ಆಧಾರವಾಗಿ ಕೆಲಸಕ್ಕೆ ಸೇರಿ ದುಡಿಯುತ್ತಾಳೆ. ಸ್ವಂತ ಮನೆ, ಜೀವನಕ್ಕೆ ಬೇಕಾದ ಹಣಕಾಸಿನ ಭದ್ರತೆಗಳನ್ನು ಮಾಡಿಕೊಳ್ಳುತ್ತಾಳೆ. ಈ ಬೆಳವಣಿಗೆ ಗಂಡನ ಸಹಾಯವಿಲ್ಲದೇ ಮಗನನ್ನು ಬೆಳೆಸಿ ಬದುಕು ಕಟ್ಟಿಕೊಳ್ಳುವ ಹೆಣ್ಣಿನ ಚಿತ್ರಣವನ್ನು ಕೊಡುತ್ತದೆ. ಹಿಂದಿನ ಹಿಂಸೆ-ಅವಮಾನದ ಜೀವನದಲ್ಲಿ ಏಕಾಂಗಿ ಇಂದಿನ ಜೀವನದಲ್ಲಿ ಅಪೂರ್ಣಗೊಂಡಿದ್ದ ಅಥವಾ ನಿರಾಕರಣೆಯಾಗಿದ್ದ ತನ್ನ ಸ್ವಂತ ಜೀವನವನ್ನು ಬದುಕಲು ಅವಳು ಬಯಸುತ್ತಾಳೆ. ಮಗ ಬೆಳೆದು ದೊಡ್ಡವನಾಗಿ ಅವನ ತೀರ್ಮಾನಗಳನ್ನು ತೆಗೆದುಕೊಳ್ಳುವ ಮಟ್ಟಿಗೆ, ಅವನ ಜೀವನವನ್ನು ರೂಪಿಸಿಕೊಳ್ಳುವ ದಾರಿಗಳನ್ನು ಹುಡುಕಿಕೊಳ್ಳುವ ರೀತಿ ಬೆಳೆದಾಗ ಅವಳ ಒಂಟಿ ಜೀವನವನ್ನು ನಿಲ್ಲಿಸಿ ತನ್ನ ಬಾಳಿನ ಅಪರಿಪೂರ್ಣತೆಯನ್ನು ಕೊಂಚ ಮಟ್ಟಿಗಾದರೂ ತುಂಬಿಕೊಳ್ಳಬೇಕು ಎಂದು ಚಿಂತಿಸುತ್ತಾಳೆ. ಇದು ಮಾನವ ಜೀವಿಯ ಸಹಜ ಚಿಂತನೆಯಾಗಿದೆ.

ಜವಾಬ್ದಾರಿಗಳನ್ನು ನಿರ್ವಹಿಸಿ ತನ್ನ ಜೀವನದ ಕಡೆಗೆ ಗಮನ ಹರಿಸಿ ಅವಳು ದಿನಪತ್ರಿಕೆಯ ಮಾಟ್ರಿಮೊನಿಯಲ್ ಕಾಲಮ್‌ನಲ್ಲಿ ದೊರೆತ ಮಾಹಿತಿಯ ಮೇರೆಗೆ ಡೈವೋರ್ಸ್ ಮತ್ತು ವಿವಾಹಾಸಕ್ತ ಪುರುಷನೋರ್ವನನ್ನು ಗುರುತು ಹಾಕಿ ಅವಳ ವಿವರಗಳನ್ನು ಅವನಿಗೆ ಕಳುಹಿಸುತ್ತಾಳೆ. ವಿವರಗಳನ್ನು ಪಡೆದ ಅವನು ಅವಳ ಮನೆಯನ್ನು ಹುಡುಕಿಕೊಂಡು ಬರುತ್ತಾನೆ. ಮನೆಯವರೆಗೂ ಬಂದ ಅವನು ಅವಳಿಗೆ ಬೊಗಸೆಯೊಳಗಿನ ನೀರು ಇದ್ದ ಹಾಗೆ, ತನ್ನ ಬೊಗಸೆಯೊಳಗಿನ ನೀರನ್ನು ಕುಡಿಯುವುದೋ ಬಿಡುವುದೋ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಈ ಬೆಳವಣಿಗೆ ಒಂಟಿ ಹೆಣ್ಣೊಬ್ಬಳು ಜವಾಬ್ದಾರಿಗಳನ್ನು ನಿರ್ವಹಿಸಿದ ಮೇಲೆ ತನ್ನ ಜೀವನದ ಬೇಕು ಬೇಡಗಳಿಗೂ ಗಮನ ಕೊಡಬೇಕು ಎಂಬುದನ್ನು ತೋರಿಸುತ್ತದೆ. ಜೊತೆಗೆ ಸಾಮಾಜಿಕ ಕಟ್ಟುಪಾಡುಗಳನ್ನು ತೊರೆದು ಮರುವಿವಾಹವಾಗುವ ಅಥವಾ ಸಂಗಾತಿಯನ್ನು ಬಯಸುವ ನಿರ್ಧಾರ ತೆಗೆದುಕೊಳ್ಳುವ ಬದಲಾವಣೆಯನ್ನು ಸೂಚಿಸುತ್ತದೆ.

ಆದರೆ ಇಂತಹ ಬೆಳವಣಿಗೆಯನ್ನು ಪುರುಷ ಪ್ರಧಾನ ಸಮಾಜ ಒಪ್ಪುವುದಿಲ್ಲ ಎಂಬುದು ಗೋಚರವಾಗುತ್ತದೆ. ಕಥೆಗಾರ್ತಿ ಬರೆಯುತ್ತಿದ್ದ ಕಥೆಯನ್ನು ಗಮನಿಸುತಿದ್ದ ಅವಳ ಗಂಡ ಒಪ್ಪದೆ ಅನೀತಿಯ, ಅಸಭ್ಯ ರೀತಿಯ ಕಥೆಯನ್ನು ವೈಭವೀಕರಿಸದೆ ಮುಗಿಸುವಂತೆ ಹೇಳುತ್ತಾನೆ. ಆಗ ಕಥೆಗಾರ್ತಿ "ಹೌದಾ ಅವಳ ಇಡೀ ಬದುಕಿನ ನಿರಾಕರಣೆಗಳು ನಿಮಗೆ ಏನೂ ಅಲ್ಲವೇ? ದೀಪದ

ಉರಿಯಲ್ಲಿ ಬೆಂದು ಹೋಗಬೇಕಾದ ಅನಿವಾರ್ಯ ಪತಂಗವಾಗಬೇಕೇ ಅವಳು? ಅವಳ ಬದುಕು. ಆಯ್ಕೆ ಅವಳದ್ದು" (ಬಾನು ಮುಷ್ತಾಕ್ 2013: ಪುಟ 332) ಎಂದು ಹೇಳುತ್ತಾಳೆ. ಇಲ್ಲಿ ಕಂಡುಬರುವುದೇನೆಂದರೆ ಹೆಣ್ಣು ಅನುಭವಿಸಿದ ಹಿಂಸೆ, ನೋವು ನಿರಾಕರಣೆಗಳಿಗೆ ಪುರುಷ ಯಾವುದೇ ಬೆಲೆ ಕೊಡದೇ ಇರುವುದು ಮತ್ತು ಕಥೆಯಲ್ಲಿಯೂ ಕೂಡ ಹೆಣ್ಣು ತನ್ನ ಜೀವನದ ನಿರ್ಧಾರಗಳನ್ನು ತೆಗೆದುಕೊಳ್ಳುವ, ಸಾಂಪ್ರದಾಯಿಕ ಚೌಕಟ್ಟುಗಳನ್ನು ದಾಟಿ ಜೀವನವನ್ನು ಅನುಭವಿಸಲು ಮುಂದಾಗುವುದನ್ನು ಪುರುಷರು ಸಹಿಸದೇ ಇರುವುದು. ಅಂದರೆ ಸ್ತ್ರೀಯರಿಗೆ ಎಲ್ಲಿಯೂ ಕೂಡ ಆಯ್ಕೆ ಮಾಡುವ, ನಿರ್ಧಾರಗಳನ್ನು ತೆಗೆದುಕೊಳ್ಳುವ ಸ್ವಾತಂತ್ರ್ಯವನ್ನು ಪುರುಷರು ನೀಡದಿರುವುದು. ಇದೇ ಅಸಮಾನತೆಯ ನಿದರ್ಶನ. ಮೇಲಿನ ಅಭಿಪ್ರಾಯವನ್ನು ಕಥೆಗಾರ್ತಿಯ ಗಂಡ ಹೇಳುವ ಈ ಮಾತುಗಳು "ಅದು ಕೇವಲ ಒಂದು ಪಾತ್ರವಲ್ಲ. ಅದಕ್ಕೆ ನಿನ್ನ ಜೀವ.. ನಿನ್ನ ಉಸಿರನ್ನು, ನಿನ್ನ ಮನಸ್ಸನ್ನು ಕೊಟ್ಟಿದ್ದೀಯಾ, ಸಮಾಜದ ಕಟ್ಟುಪಾಡನ್ನು ಉಲ್ಲಂಘಿಸುವ ಅನೈತಿಕ ಧೈರ್ಯ ನಿನ್ನ ಸೃಷ್ಟಿಗೆ ಇದೆ. ನಿನ್ನ ಸೃಷ್ಟಿ ಬೇರೆಯಲ್ಲ ನೀನು ಬೇರೆಯಲ್ಲ. ಆದರೆ ನಿನ್ನ ಮನಸ್ಸನ್ನು ಸಾರ್ವಜನಿಕವಾಗಿ ಈ ರೀತಿ ಅನಾವರಣಗೊಳಿಸುವುದು. ನಮ್ಮ ಕುಟುಂಬದ ಮೇಲೆ ಏನು ಪರಿಣಾಮ ಬೀರುತ್ತದೆ ಆಲೋಚನೆ ಮಾಡಿದ್ದೀಯಾ?" (ಬಾನು ಮುಷ್ತಾಕ್ 2013: ಪುಟ 333) ಎನ್ನುವುದನ್ನು ವ್ಯಕ್ತಪಡಿಸುತ್ತವೆ. ಕಥೆಗಾರ್ತಿ ಅವಳು ಸೃಷ್ಟಿಸಿದ ಪಾತ್ರಗಳನ್ನು ಸಮರ್ಥಿಸುತ್ತಾ "ನನ್ನ ಪಾತ್ರಗಳು ಕೂಡ ಅತ್ಯಂತ ಮಡಿವಂತಿಕೆಯಿಂದ ಕೂಡಿದ್ದು, ಶೀಲದ ಸಾಂಪ್ರದಾಯಿಕ ಕಟ್ಟುಪಾಡುಗಳೊಳಗೆ ತಮ್ಮ ಅಂತ್ಯ ಕಾಣುವ ಕ್ರಿಮಿಗಳಲ್ಲ, ನಿಮ್ಮ ಅಸಮಾನತೆಯ ಮೌಲ್ಯಗಳನ್ನಾದರೂ ಪ್ರಶ್ನಿಸುವವರು. ನಾನಾದರೂ ಹೇಡಿ, ಕೊನೆಗೆ ನನ್ನ ಪಾತ್ರವನ್ನಾದರೂ ಧೈರ್ಯವಾಗಿ ಬದುಕಲು ಬಿಡಿ" (ಬಾನು ಮುಷ್ತಾಕ್ 2013: ಪುಟ 333) ಎಂದು ಹೇಳುವುದರಲ್ಲಿ ಸ್ತ್ರೀ–ಪುರುಷರ ನಡುವಿನ ಅಸಮಾನತೆ ವ್ಯಕ್ತವಾಗುತ್ತದೆ. ಜೊತೆಗೆ ಕಥೆಯಲ್ಲಾದರೂ ಹೆಣ್ಣು ತನ್ನ ಬದುಕನ್ನು ಅನುಭವಿಸಲು ಅವಕಾಶ ದೊರೆಯಲೆಂದು ಕೇಳುವುದು ಪ್ರಸ್ತುತ ಪುರುಷ ಸಮಾಜ ಹೆಣ್ಣಿಗೆ ಸ್ಥಾನಮಾನ ನಿರಾಕರಿಸುವ ಸ್ಥಿತಿಯನ್ನು ತೋರಿಸುತ್ತದೆ. ಅವಳ ವಾದದಿಂದ ಕೋಪಗೊಂಡ ಅವನು "ಹಾಗಿದ್ದರೆ ಅವಳು ಬೊಗಸೆಯೊಳಗಿನ ನೀರನ್ನು ಕುಡಿಯುತ್ತಾಳೋ ಇಲ್ಲವೋ" (ಬಾನು ಮುಷ್ತಾಕ್ 2013: ಪುಟ 333) ಎಂದು ಪ್ರಶ್ನಿಸುತ್ತಾನೆ. ಇದಕ್ಕೆ ಕಥೆಗಾರ್ತಿ "ಅದು ಅವಳ ಇಷ್ಟ, ಅವಳ ಆಯ್ಕೆ, ಅವಳ ಸ್ವಾತಂತ್ರ್ಯ, ಅವಳ ಬಗ್ಗೆ ನೀವು ಅಭಿಪ್ರಾಯಕ್ಕೆ ಬರಬೇಕಾದಲ್ಲಿ ನೀನು ನಿಮ್ಮ ತಕ್ಕಡಿಯ ಎರಡೂ ತಟ್ಟೆಗಳನ್ನು ಕೂಡ ಸಮಾನವಾಗಿ ಇರಿಸಬೇಕಾಗುತ್ತದೆ. ಇದುವರೆಗೆ ನಿಮ್ಮ ಅಸಮಾನ ತಕ್ಕಡಿಯಿಂದ ತೂಗಿದ್ದು ಸಾಕು" (ಬಾನು ಮುಷ್ತಾಕ್ 2013: ಪುಟ 333) ಎಂದು ಹೇಳುತ್ತಾಳೆ.

ಇಲ್ಲಿ ಹೆಣ್ಣಿಗೆ ಅವಳ ಇಷ್ಟ, ಆಯ್ಕೆ, ಸ್ವಾತಂತ್ರ್ಯಗಳು ಬೇಕು. ಪುರುಷ ಮತ್ತು ಸ್ತ್ರೀ ಇಬ್ಬರೂ ತಕ್ಕಡಿಯ ಎರಡು ತಟ್ಟೆಗಳಿದ್ದ ಹಾಗೆ ಆದರೆ ಆ ತಟ್ಟೆಗಳೂ ಎಂದೂ ಸಮನಾಗಿಲ್ಲ, ಯಾವಾಗಲೂ ಅಸಮಾನವಾಗಿಯೇ ಇವೆ ಎಂದು ತಿಳಿಯುತ್ತದೆ. ಈ ಮಾತುಗಳನ್ನು ಕೇಳಿದ ಗಂಡ ಕಥೆಯನ್ನು ಪ್ರಕಟಣೆಗೆ ಕಳುಹಿಸಿದೆ ಹರಿದುಹಾಕುವಂತೆ ಸೂಚಿಸುತ್ತಾನೆ. ಆದರೆ ಇದನ್ನು ಹರಿದು ಹಾಕುವ ಶಕ್ತಿ ಮತ್ತು ಹಕ್ಕು ಯಾರಿಗೂ ಇಲ್ಲ, ಇದನ್ನು ಪ್ರಕಟಣೆಗೆ ಕಳುಹಿಸುತ್ತೇನೆ ಎಂದು ಹೇಳಿ ತನ್ನ ಗಂಡನ ವಿರುದ್ಧ ಧೈರ್ಯದಿಂದ ನಿಲ್ಲುತ್ತಾಳೆ.

ಈ ಕಥೆಯಲ್ಲಿ ಬಾನು ಮುಷ್ತಾಕ್‌ರವರು ಪುರುಷ ಸಮಾಜ ಹೆಣ್ಣಿಗೆ ಆಯ್ಕೆ, ಸ್ವಾತಂತ್ರ್ಯ, ಅವಳ ಬದುಕನ್ನು ಕಥೆಯಲ್ಲಿಯೂ ಕೊಡುವುದಿಲ್ಲ. ಸ್ತ್ರೀಯ ಮೇಲಿನ ಅಸಮಾನತೆ ಕಥೆಯಲ್ಲಿಯೂ ಮುಂದುವರೆಯಬೇಕೆಂದು ಬಯಸುವ ಮನೋಭಾವದವರಾಗಿರುತ್ತಾರೆ ಎಂಬುದನ್ನು ತೋರಿಸುತ್ತಾರೆ. ಇಲ್ಲಿ ಆಶಾದೇವಿ ಎಂ. ಎಸ್ ರವರು ಹೇಳುವ "ಬಾನು ಮುಷ್ತಾಕ್‌ರವರ ಕಥೆಗಳು ಹೆಣ್ಣು ಪುರುಷ ಪ್ರಧಾನ ಸಮಾಜ ತೋರಿಸಿದ ದಾರಿಯಲ್ಲಿ ಹೋಗದೆ ತನಗೆ ಸರಿ ಎನಿಸಿದ ದಾರಿಯಲ್ಲಿ ಹೋಗಲು ಪ್ರಯತ್ನಿಸಿದಾಗಲೆಲ್ಲಾ ಆಕೆಯನ್ನು ಸಮಾಜ ಸಾಮ, ದಾನ, ಭೇದ, ದಂಡಗಳಲ್ಲಿ ಹೇಗೆ ತನ್ನ ದಾರಿಗೆ ತಂದುಕೊಳ್ಳುತ್ತದೆ ಎನ್ನುವುದನ್ನು ಪರಿಣಾಮಕಾರಿಯಾಗಿ ಹೇಳುತ್ತವೆ" (2006: ಪುಟ 95) ಅಭಿಪ್ರಾಯವನ್ನು ಗಮನಿಸಬಹುದು. ತಕ್ಕಡಿಯ ತಟ್ಟೆಗಳಂತೆ ಸ್ತ್ರೀ–ಪುರುಷರಿಬ್ಬರೂ ಸಮಾನವಾಗಿ ನಿಂತರೆ ಮಾತ್ರ ಮಹಿಳೆಗೆ ಸಮಾನ ಜೀವನ ದೊರೆಯುತ್ತದೆ. ಇಲ್ಲದಿದ್ದರೆ ಅವಳ ಬಾಳು ಯಾವಾಗಲೂ ಪುರುಷನ ಅಧೀನ, ಅವನ ಸ್ವಾಮಿತ್ವದ ಅಂಕೆಯಲ್ಲಿಯೇ ಇರಬೇಕಾಗುತ್ತದೆ. ಆಗ ಹೆಣ್ಣಿಗೆ ಸಮಾನತೆ ಎಂಬುದು ದೊರಕದೇ ಹೋಗಬಹುದು. ಪುರುಷರಿಂದ ನಡೆಯುವ ದೌರ್ಜನ್ಯ, ಹಿಂಸೆ, ಅಪಮಾನಗಳಿಂದ ಮುಕ್ತಳಾಗಿ ತನ್ನ ಆಯ್ಕೆಯ ಬದುಕನ್ನು ಕಟ್ಟಿಕೊಳ್ಳುವ ಸ್ವಾತಂತ್ರ್ಯ, ಅವಕಾಶಗಳು ದೊರೆತಾಗ ಸಮಾನತೆ ಮೂಡುತ್ತದೆ ಎಂಬ ಆಶಯವನ್ನು ಈ ಕಥೆ ವ್ಯಕ್ತಪಡಿಸುತ್ತದೆ.

ಮುಸ್ಲಿಂ ಸಮಾಜದಲ್ಲಿರುವ ಕಟ್ಟುಪಾಡುಗಳು ಹೆಣ್ಣನ್ನು ಅಸಹಾಯಕತೆಗೆ ಸಿಲುಕಿಸುತ್ತವೆ. ಇಂತಹ ಅಸಹಾಯಕ ಪರಿಸ್ಥಿತಿಯಲ್ಲಿ ಜೀವಿಸುವ ಹೆಣ್ಣು ಅನ್ಯಾಯ, ಅಸಮಾನತೆಗೆ ಒಳಗಾಗಿ ನಿರ್ಲಿಪ್ತ ಜೀವನವನ್ನು ಅನುಭವಿಸಬೇಕಾಗುತ್ತದೆ. ಈ ಅಸಹಾಯಕತೆಯ ನೆರಳು ಮತ್ತು ಛಾಯೆ ಆ ಹೆಣ್ಣನ್ನು ಗುಲಾಮಳಾಗಿ ಅಥವಾ ಅಧೀನಳಾಗಿ ಸ್ವಂತ ವ್ಯಕ್ತಿತ್ವವಿಲ್ಲದೆ ಬದುಕುವ ಒಂದು ಜೀವಿಯನ್ನಾಗಿಸುತ್ತದೆ ಎಂಬ ಅಸಮಾನತೆಯ ಚಿತ್ರಣವನ್ನು ಬಾನು ಮುಷ್ತಾಕ್‌ರವರು "ನಿರ್ಲಿಪ್ತ ನೆರಳು" ಕಥೆಯಲ್ಲಿ ಚಿತ್ರಿಸಿದ್ದಾರೆ. ಈ ಕಥೆಯಲ್ಲಿ ಬರುವ ರೋಶನ್‌ಬೀ ಮತ್ತು ಅವಳ ಗಂಡನ

ಪಾತ್ರಗಳ ಮುಖಾಂತರ ಸ್ತ್ರೀ–ಪುರುಷರ ನಡುವೆ ಇರುವ ಅಸಮಾನತೆಯನ್ನು ತೋರಿಸುತ್ತಾರೆ. ರೋಶನ್‌ಬೀ ಮತ್ತು ಷೇಕ್ ಅಹಮದ್ ಮದುವೆಯಾದ ಹೊಸದರಲ್ಲಿ ಚೆನ್ನಾಗಿರುತ್ತಾರೆ. ಆದರೆ ಮೊದಲು ಹುಟ್ಟಿದ ಮಕ್ಕಳೆಲ್ಲವೂ ಸಾವೀಗೀಡಾಗಿ ನಾಲ್ಕನೆಯ ಮಗುವಿನ ಹೆರಿಗೆಯ ಸಂದರ್ಭದಲ್ಲಿ ಅವಳು ತೀರಾ ಅಸ್ವಸ್ಥಳಾಗುತ್ತಾಳೆ. ಮಗು ಮತ್ತು ರೋಷನ್‌ಬೀಯ ಆರೈಕೆ ಮಾಡಲೆಂದು ಕೆಲಸದಾಳಾಗಿ ಬಂದ ಶಕೀಲಾ ಬೇಗಮ್ ಷೇಕ್ ಅಹಮದ್‌ನ ಸೇವೆ ಮಾಡುತ್ತಾ ಮನೆಯೊಡತಿಯಾಗುತ್ತಾಳೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಮನೆಯವರಿಗೆ ರೋಷನ್‌ಬೀಗೆ ಗಂಡು ಮಗುವಾಗಲಿಲ್ಲ ಎಂಬ ಚಿಂತೆ ಆದರೆ ಇರುವ ಹೆಣ್ಣು ಮಗುವಿನ ಬಗ್ಗೆ ಯಾವ ಕಾಳಜಿಯೂ ಇಲ್ಲದಿರುವುದು. ಅನಾರೋಗ್ಯ ಪೀಡಿತ ಮತ್ತು ಹೆಣ್ಣು ಹೆತ್ತಿರುವ ರೋಶನ್‌ಬೀ ಮನೆಯಲ್ಲಿ ಯಾವ ಲೆಕ್ಕಕ್ಕೂ ಇಲ್ಲದವಳಾಗಿದ್ದಾಳೆ. ಷೇಕ್ ಅಹಮದ್ ಮೊದಲ ಹೆಂಡತಿಯನ್ನು ಯಾವ ವಿಷಯಕ್ಕೂ ವಿಚಾರಿಸುವುದಿಲ್ಲ, ಮಗಳನ್ನು ಒಂದು ದಿನವೂ ಎತ್ತಿ ಆಡಿಸುವುದಿಲ್ಲ, ತಾನು ಇನ್ನೊಂದು ಮದುವೆಯಾಗುವಾಗ ಮೊದಲ ಹೆಂಡತಿಯ ಅಭಿಪ್ರಾಯ, ಸಮ್ಮತಿಯನ್ನು ಕೇಳುವುದಿಲ್ಲ. ಅವಳನ್ನು ಕಸಕ್ಕಿಂತ ಕಡೆ ಮಾಡಿ ಮೂಲೆಗುಂಪಾಗಿಸುತ್ತಾರೆ. ಇಷ್ಟಾದರೂ ಅವಳು ಗಂಡನನ್ನು ಶಪಿಸುವುದಿಲ್ಲ. ಷೇಕ್ ಅಹಮದ್‌ನ ನಡವಳಿಕೆಯನ್ನು ಎಲ್ಲರೂ ಸಮ್ಮತಿಸಿದರೇ ಹೊರತು ರೋಶನ್‌ಬೀಯ ಪರಿಸ್ಥಿತಿಯನ್ನು ಯಾರೂ ಲೆಕ್ಕಿಸುವುದಿಲ್ಲ.

ಈ ಚಿತ್ರಣದ ಮೂಲಕ ಬಾನುಮುಷ್ತಾಕ್‌ರವರು ಪುರುಷ ಹೆಣ್ಣನ್ನು ಹೇಗೆ ಕಡೆಗಣಿಸಿ ಅಸಮಾನತೆಗೆ ದೂಕುತ್ತಾನೆ ಎಂಬುದನ್ನು ತೋರಿಸುತ್ತಾರೆ. ಮನೆಯಲ್ಲಿ ಕಸ ಹಾಕಲು ಒಂದು ನಿರ್ದಿಷ್ಟ ಜಾಗ ಮತ್ತು ಸಮಯ ಇದೆ ಆದರೆ ಹೆಣ್ಣಿನ ಸ್ಥಾನ ಕಸಕ್ಕಿಂತಲೂ ಕಡೆಯಾಗಿದೆ ಎಂದು ತಿಳಿಸುತ್ತಾರೆ. ಮೊದಲ ಹೆಂಡತಿ ಹಾಸಿಗೆ ಹಿಡಿದ ಕೂಡಲೇ ಎರಡನೇ ಮದುವೆಯಾಗುವುದು ಹೆಣ್ಣಿಗೆ ಮಾಡುವ ಅನ್ಯಾಯವಾಗುತ್ತದೆ. ಸ್ತ್ರೀಯನ್ನು ಪುರುಷರ ಸೇವೆ ಮಾಡುತ್ತಾ ಕೇವಲ ಮಕ್ಕಳನ್ನು ಅದರಲ್ಲೂ ಗಂಡು ಮಕ್ಕಳನ್ನು ಹೆರುವ ಕಾರ್ಯಕ್ಕೆ ಸೀಮಿತಗೊಳಿಸಿರುವುದು ಇಲ್ಲದಿದ್ದರೆ ಅವಳ ಜಾಗಕ್ಕೆ ಮತ್ತೊಬ್ಬಳನ್ನು ತರುವುದು ಹೆಣ್ಣಿನ ಮೇಲೆ ನಡೆಸುವ ದೌರ್ಜನ್ಯವಾಗುತ್ತದೆ. ಅಂದರೆ ಸ್ತ್ರೀ ಬೇಗ ಬದಲಿಸಬಹುದಾದ ಗುಲಾಮಳಾಗುತ್ತಾಳೆ. ಅವಳ ಕೆಲಸ ಕಾರ್ಯಗಳು, ಸ್ಥಾನಕ್ಕೆ ಯಾವುದೇ ಬೆಲೆಯಿರುವುದಿಲ್ಲ. ಇದು ಸ್ತ್ರೀ–ಪುರುಷರ ನಡುವೆ ಇರುವ ಅಸಮಾನತೆಯನ್ನು ತೋರಿಸುತ್ತದೆ.

ಮೋಸಕ್ಕೊಳಗಾದ ರೋಶನ್‌ಬೀ ಚಿಂತಿತಳಾದರೂ ಆಘಾತಕ್ಕೊಳಗಾಗದೆ ತನ್ನ ಮತ್ತು ತನ್ನ ಮಗುವಿನ ಸುತ್ತ ಒಂದು ಕೋಟೆ ಕಟ್ಟಿ ತನ್ನ ದುಃಖ ನೋವುಗಳು ಹೊರಹೋಗದಂತೆ,

ಹೊರಗಿನ ವಿಚಾರಗಳು ತಮಗೆ ತಾಕದಂತೆ ತನ್ನ ಮಟ್ಟಿಗೆ ತಾನಿರುತ್ತಾಳೆಯೇ ಹೊರತು ತನಗಾದ ಅನ್ಯಾಯವನ್ನು ಪ್ರತಿಭಟಿಸುವುದಿಲ್ಲ. ಇದಕ್ಕೆ ಕಾರಣ ಬುರ್ಖಾದ ಒಳಗಡೆ ಬಂದಿಯಾಗಿ ಮನೆಯ ಆಚರಣೆಗಳಿಗೆ, ರೀತಿ–ನೀತಿಗಳಿಗೆ ಬದ್ಧಳಾಗಿ ಬೆಳೆದ ರೋಶನ್‌ಬೀಗೆ ಹೊರಗಿನ ನಡೆ–ನುಡಿ ವಿಚಾರಗಳು ತಿಳಿಯುವುದಿಲ್ಲ. ಒಂಟಿಯಾಗಿ ಮನೆಯ ಹೊರಗಡೆಯ ವಿಷಯಗಳಿಗೆ ಓಡಾಡಿ, ಕೆಲಸ ಕಾರ್ಯಗಳನ್ನು ಮಾಡಿ ಬೆಳೆದವಳಲ್ಲ. ಜೊತೆಗೆ ವಿದ್ಯೆಯಿಲ್ಲ, ತನ್ನ ಬದುಕನ್ನು ನಿರ್ವಹಿಸುವಂತಹ ಧೈರ್ಯ ಮತ್ತು ಶಕ್ತಿ ಅವಳಲ್ಲಿ ಬೆಳೆದಿರುವುದಿಲ್ಲ. ಇಂತಹ ಅಸಹಾಯಕತೆ ಹೆಣ್ಣನ್ನು ಪುರುಷಾಧೀನಕ್ಕೆ ಒಳಗಾಗುವಂತೆ ಮಾಡುತ್ತದೆ ಎಂಬುದನ್ನು ಬಾನು ಮುಷ್ತಾಕ್‌ರವರು ಚಿತ್ರಿಸಿದ್ದಾರೆ.

ಒಂದು ದಿನ ರೋಶನ್‌ಬೀಯ ಮಗುವಿಗೆ ಜ್ವರ ಬಂದು ತುಂಬಾ ಅಸ್ವಸ್ಥವಾಗುತ್ತದೆ. ಗಂಡನ ಕೋಣೆಯ ಬಾಗಿಲನ್ನು ಜೋರಾಗಿ ಬಡಿದರೂ ಅವನು ಮತ್ತು ಶಕೀಲ ಬೇಗಮ್ ಕೋಣೆಯಿಂದ ಈಚೆಗೆ ಬರುವುದಿಲ್ಲ. ತನ್ನ ಮನೆಯಲ್ಲಿಯೇ ಪರಕೀಯಳಾಗಿ, ಕೇಳುವವರಿಲ್ಲವಾಗಿ, ಅಪಮಾನವನ್ನು ಅನುಭವಿಸಬೇಕಾದ ಶೋಚನೀಯ ಪರಿಸ್ಥಿತಿಗೆ ಹೆಣ್ಣು ದೂಡಲ್ಪಡುತ್ತಾಳೆ. ಇದು ಅವಳ ಆತ್ಮಗೌರವವನ್ನು ಕೊಲ್ಲುವಂತಹ ಪರಿಸ್ಥಿತಿಯಾಗುತ್ತದೆ. ಅವಳ ಸ್ವಾಭಿಮಾನ ನಾಶವಾಗಿ ವ್ಯಕ್ತಿತ್ವ ಕಳೆದುಹೋಗುತ್ತದೆ. ಇದೆಲ್ಲವೂ ಹೆಣ್ಣು ಅಸಮಾನತೆಗೆ ಈಡಾಗಿರುವುದನ್ನು ತೋರಿಸುತ್ತದೆ. ಗಂಡನ ಬೇಜವಾಬ್ದಾರಿ ಮತ್ತು ಮೋಸಕ್ಕೆ ತನ್ನ ಮಗು ಬಲಿಯಾಗಿದ್ದನ್ನು ಕಂಡ ರೋಶನ್‌ಬೀ ಷೇಕ್ ಅಹಮದ್‌ನ ಕೃತಕ ದುಃಖವನ್ನು ನೋಡಿ ವ್ಯಂಗ್ಯಭರಿತವಾಗಿ ನಗುತ್ತಾಳೆ. ಆದರೆ ಮಗುವಿನ ಮರಣದ ನಂತರ ಅಂತರ್ಮುಖಿಯಾಗುತ್ತಾಳೆ, ನಿಯಮಿತ ಊಟ ಬಿಡುತ್ತಾಳೆ, ಎಲ್ಲರಿಂದ ದೂರ ಉಳಿದು ಮಾತು ಬಿಟ್ಟ ಅವಳಿಗೆ ನಿರಾಸಕ್ತಿ ಬೆಳೆಯುತ್ತದೆ. ಈ ಬೆಳವಣಿಗೆ ಅನ್ಯಾಯ, ಮೋಸ, ಅಸಮಾನತೆ ವ್ಯಕ್ತಿಯನ್ನು ಹೇಗೆ ಸಮಾಜದಿಂದ ವಿಮುಖನಾಗಿ ಮಾಡಿ ನಿರ್ಲಿಪ್ತತೆಯನ್ನು ಬೆಳೆಸುತ್ತದೆ ಎಂಬುದನ್ನು ವ್ಯಕ್ತಪಡಿಸುತ್ತದೆ.

ಷೇಕ್ ಅಹಮ್ಮದ್ ಮತ್ತು ಶಕೀಲಾ ಬೇಗಮ್‌ಳ ಮಗ ನದೀಮ್‌ನನ್ನು ಕಂಡರೆ ರೋಶನ್‌ಬೀಗೆ ಪ್ರೀತಿ ಆದರೆ ಅವನ ನಡೆಯಲ್ಲೂ ಅವಳಿಗೆ ಅನುಮಾನ ಕಾಡುತ್ತದೆ. ನದೀಮ್ ಪ್ರೀತಿಸಿ ಮದುವೆಯಾದ ರೂಹಿ ರೋಶನ್‌ಬೀಯನ್ನು ಪ್ರೀತಿ ಮತ್ತು ಕಾಳಜಿಯಿಂದ ಆರೈಕೆ ಮಾಡುತ್ತಾಳೆ. ರೋಶನ್‌ಬೀ ತನ್ನ ಮಗಳನ್ನು ರೂಹಿಯಲ್ಲಿ ಕಾಣುತ್ತಾಳೆ. ಆದರೆ ಶಕೀಲಾ ಬೇಗಮ್‌ಳಿಗೆ ತನ್ನಣ್ಣನ ಮಗಳನ್ನು ನದೀಮ್‌ನಿಗೆ ಮದುವೆ ಮಾಡಬೇಕೆಂಬ ಆಸೆಯಿರುತ್ತದೆ.

ಅವಳು ಅವಕಾಶಕ್ಕಾಗಿ ಕಾಯುತ್ತಾಳೆ. ಈ ಸಂದರ್ಭದಲ್ಲಿ ರೂಹಿ ಅಣ್ಣನ ಮದುವೆಗೆಂದು 15 ದಿನ ಮೊದಲು ತವರಿಗೆ ಹೋದ ಅವಕಾಶ ಬಳಸಿಕೊಂಡ ಶಕೀಲಾ ಅವಳಣ್ಣನ ಮಗಳನ್ನು ಕರೆಸಿ ನದೀಮ್‌ನಿಗೆ ಹತ್ತಿರವಾಗುವಂತೆ ಮಾಡುತ್ತಾಳೆ, ಜೊತೆಗೆ ನಿಕಾಹ್‌ಗೆ ತಯಾರಿ ಮಾಡುತ್ತಾಳೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ನದೀಮ್ ಮತ್ತೊಂದು ಹೆಣ್ಣಿಗೆ ಆಸೆಪಟ್ಟು ಮದುವೆಗೆ ತಯಾರಾಗಿದ್ದು ಪುರುಷನ ದುರ್ಬಲ ವ್ಯಕ್ತಿತ್ವ ಮತ್ತು ಅನ್ಯಾಯ ಮಾಡುವ ಸ್ವಭಾವವನ್ನು ಚಿತ್ರಿಸಿರುವುದು. ನದೀಮ್‌ನ ಎರಡನೇ ಮದುವೆ ಸಿದ್ಧತೆ ರೋಶನ್‌ಬೀಯ ಅನುಮಾನವನ್ನು ನಿಜಗೊಳಿಸುತ್ತದೆ. ಮಗನೂ ಕೂಡ ಅಪ್ಪನ ರೀತಿ ಮೋಸ ಮಾಡುತ್ತಿದ್ದಾನೆ ಎಂದು ತಿಳಿಯುತ್ತಾಳೆ. ಎಲ್ಲರೊಡನೆ ಮಾತುಕತೆ ಬಿಟ್ಟಿದ್ದ ರೋಶನ್‌ಬೀ ರೂಹಿ ಮಾಡಿದ ಫೋನ್ ಕರೆಯನ್ನು ಸ್ವೀಕರಿಸಿ "ರೂಹಿ.. ನೀನು ಬಂದು ಬಿಡಮ್ಮ.. ನದೀಮ್.. ಅವರಪ್ಪ.. ಅವರಪ್ಪನಂತೆ.. ನಿನಗೆ ಮೋಸ.. ಮೋಸ.." (ಬಾನು ಮುಷ್ತಾಕ್ 2013: ಪುಟ 380) ಎಂಬ ಕೆಲವೇ ಪದಗಳನ್ನು ಉಚ್ಚರಿಸಿ ಕೆಳಗೆ ಬೀಳುತ್ತಾಳೆ.

ರೋಶನ್‌ಬೀಯ ಈ ಮಾತುಗಳು ಅವಳ ಗಂಡ ಎಸಗಿದ ದೌರ್ಜನ್ಯ ಮೋಸಗಳು ಅವಳನ್ನು ಅಸಹಾಯಕಳನ್ನಾಗಿ ಮಾಡಿ, ಅವನ ಸಂತೋಷ ಅವಳ ಇಡೀ ಜೀವನ ಮತ್ತು ಅಸ್ತಿತ್ವವನ್ನು ಕಸಿದುಕೊಂಡು ಅವಳನ್ನು ಜೀವಚ್ಛವವಾಗಿ ಮಾಡಿರುವುದರ ಅರಿವು ಅವಳಿಗೆ ಇರುವುದನ್ನು ತಿಳಿಸುತ್ತವೆ. ಆದರೂ ಕೂಡ ರೋಶನ್‌ಬೀ ಪ್ರತಿಭಟಿಸುವುದಿಲ್ಲ. ಆದರೆ ಇದೇ ರೀತಿಯ ಮೋಸ, ಅನ್ಯಾಯ ಮತ್ತೊಂದು ಹೆಣ್ಣಿನ ಮೇಲೆ ನಡೆಯುವಾಗ ಅದನ್ನು ತಡೆಯಲು ಪ್ರಯತ್ನಿಸುತ್ತಾಳೆ. ಇದು ಬದಲಾವಣೆಯ ಸಂಕೇತವಾದರೂ ಒಂದು ಹೆಣ್ಣಿನ ಜೀವನ ಹಾಳಾಗುವುದು ಪುರುಷ-ಸ್ತ್ರೀ ಅಸಮಾನತೆಯ ಪರಿಣಾಮವಾಗಿರುವುದು ಗೋಚರಿಸುತ್ತದೆ. ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ರೋಶನ್‌ಬೀ ಮತ್ತು ರೂಹಿಯ ಪಾತ್ರಗಳಲ್ಲಿರುವ ವ್ಯತ್ಯಾಸವನ್ನು ರೋಶನ್‌ಬೀ ಕಟ್ಟುಪಾಡುಗಳಿಗೆ ಬದ್ಧಳಾಗಿ ಬೆಳೆದು ಅಸಹಾಯಕತೆಯಿಂದ ಮೋಸಕ್ಕೊಳಗಾದ ಹೆಣ್ಣು, ಆದರೆ ರೂಹಿ ನಗರ ಪ್ರದೇಶದಲ್ಲಿ ಬೆಳದ ತಿಳುವಳಿಕೆಯುಳ್ಳ ಹೆಣ್ಣು. ರೂಹಿ ಶಕೀಲಾಳೊಂದಿಗೆ ವಾದಿಸುವಾಗ ಅವಳ ಹಕ್ಕುಗಳನ್ನು ಪ್ರತಿಪಾದಿಸುವುದು ತಿಳಿಯುತ್ತದೆ. ಈ ರೀತಿಯ ಹಕ್ಕು ಪ್ರತಿಪಾದನೆ ಎಲ್ಲ ಹೆಣ್ಣುಗಳಿಂದ ಬಂದರೆ ಅವರ ಮೇಲಿನ ದೌರ್ಜನ್ಯ, ಅಸಮಾನತೆ ಕಡಿಮೆಯಾಗಬಹುದು ಎಂಬುದನ್ನು ಬಾನು ಮುಷ್ತಾಕ್‌ರವರು ಸೂಚ್ಯವಾಗಿ ತಿಳಿಸಿರುವಂತಿದೆ. ಇಲ್ಲದೆ ಹೋದರೆ ಅನ್ಯಾಯ, ಅಸಮಾನತೆಗೆ ತುತ್ತಾದ ಹೆಣ್ಣು ಅಸಹಾಯಕತೆ,

ನಿರ್ಲಿಪ್ತ ಜೀವನಕ್ಕೆ ಒಳಗಾಗಿ, ಆ ನಿರ್ಲಿಪ್ತತೆಯ ನೆರಳಲ್ಲೇ ಕಳೆದು ಹೋಗುವ ದಾರುಣ ಚಿತ್ರಣವನ್ನು ಕೊಡುತ್ತಾರೆ.

ಹೆಣ್ಣು ಪುರುಷನಿಗೆ ಸಮನಾಗಿ ಉದ್ಯೋಗ ಮಾಡಲು ತೊಡಗಿದರೆ, ಸಾಮಾಜಿಕ ಸ್ಥಾನಮಾನ ಪಡೆದರೆ ಅದನ್ನು ಸಹಿಸಲು ಪುರುಷನಿಂದ ಆಗುವುದಿಲ್ಲ. ಅವಳನ್ನು ಹೇಗಾದರೂ ಮಾಡಿ ತನ್ನ ಅಧೀನಕ್ಕೆ ತೆಗೆದುಕೊಂಡು ಅವಮಾನ, ನಿಂದನೆಗಳ ಚೌಕಟ್ಟಿನೊಳಗೆ ಬಂಧಿಸಿ ತನ್ನ ಗುಲಾಮಳನ್ನಾಗಿಯೇ ಇಟ್ಟುಕೊಳ್ಳಲು ಮತ್ತು ತಾನು ಮೇಲು ಹೆಣ್ಣು ಕೀಳು ಎಂಬ ನಿಲುವನ್ನು ಸ್ಥಾಪಿಸಿ ತನ್ನ ಅಹಂ ಮೆರೆಯಲು ಯಾವಾಗಲೂ ಪ್ರಯತ್ನಿಸುತ್ತಾನೆ ಎಂದು ಬಾನು ಮುಷ್ತಾಕ್‌ರವರು 'ನಮ್ಮೊಳಗಿನ ಜರೀನ' ಕಥೆಯಲ್ಲಿ ಚಿತ್ರಿಸಿದ್ದಾರೆ. ಈ ಕಥೆಯಲ್ಲಿ ಜರೀನ ಎಂಬ ಮುಸ್ಲಿಂ ಹೆಣ್ಣು ಮತ್ತು ಸುಮತಿ ಎಂಬ ಹಿಂದೂ ಹೆಣ್ಣುಗಳು ಧಾರ್ಮಿಕವಾಗಿ ಬೇರೆಬೇರೆಯಾಗಿದ್ದರೂ, ಅವರಿಬ್ಬರೂ ತಮ್ಮ ಗಂಡಂದಿರಿಂದ ಅನುಭವಿಸಿದ ನೋವು, ಅವಮಾನ ಮತ್ತು ಗುಲಾಮಗಿರಿತನ ಒಂದೇ ತೆರನಾದವು ಎಂದು ತೋರಿಸುತ್ತಾರೆ.

ಜರೀನ ಬಡ ಕುಟುಂಬದ ಹೆಣ್ಣು. ಅವಳ ಗಂಡ ದುಡಿತವನ್ನೆಲ್ಲಾ ಕುಡಿತಕ್ಕೆ ವ್ಯಯಿಸಿ ಮನೆಗೆ ಒಂದು ಪೈಸೆ ಹಣವನ್ನು ಕೊಡುವುದಿಲ್ಲ. ಆಗ ಜರೀನ ಗಾರ್ಮೆಂಟ್ಸ್ ಫ್ಯಾಕ್ಟರಿಯಲ್ಲಿ ಕೆಲಸಕ್ಕೆ ಸೇರಿ ದುಡಿದು ಮನೆಯ ಖರ್ಚನ್ನು ನಿಭಾಯಿಸುತ್ತಾಳೆ. ಮನೆಗೆ ಬೇಕಾದ ವಸ್ತುವನ್ನು ಖರೀದಿಸುತ್ತಾಳೆ. ಆದರೆ ಅವಳು ಉದ್ಯೋಗ ಮಾಡುವುದು, ಹಣ ಗಳಿಸುವುದನ್ನು ಸಹಿಸಲಾಗದೆ, ಅವಳ ಗಂಡ ಅವಳ ಶೀಲದ ಮೇಲೆ ಸಂಶಯ ವ್ಯಕ್ತಪಡಿಸುತ್ತಾ ಅವಮಾನಿಸುತ್ತಾನೆ. ಈ ಅವಮಾನವನ್ನು ಸಹಿಸಲಾಗದೆ ಜರೀನಾ ಗಂಡನಿಂದ ವಿಚ್ಛೇದನ ಪಡೆಯಲು ವಕೀಲೆಯಾದ ಸುಮತಿಯ ಬಳಿ ಬರುತ್ತಾಳೆ. ಸುಮತಿಯ ಆಫೀಸಿನಲ್ಲಿ ಜರೀನ ಮತ್ತು ಅವಳ ಗಂಡ ಜಗಳವಾಡುವಾಗ, ಅವನು ಎಲ್ಲ ವಿಷಯಗಳನ್ನು ಜರೀನಾಳಿಂದಲೇ ಹೇಳಿಸಿ ಅವಳು ಮಾಡಿದ್ದು ತಪ್ಪು ಎಂಬ ಭಾವನೆ ಜನರಲ್ಲಿ ಬರುವ ಹಾಗೆ ಮಾಡುತ್ತಿದ್ದ ರೀತಿಯನ್ನು ಗಮನಿಸುತ್ತಾಳೆ. ಇಲ್ಲಿ ಬಾನು ಮುಷ್ತಾಕ್‌ರವರು ಪುರುಷರು ಯಾವಾಗಲೂ ಹೆಣ್ಣು ಮಾಡಿದ್ದೇ ತಪ್ಪು ಎಂದು ತೋರಿಸಿ ಅವಳನ್ನು ಅಧೀನದಲ್ಲಿಟ್ಟುಕೊಳ್ಳಲು ನಡೆಸುವ ಪ್ರಕ್ರಿಯೆಯನ್ನು ತೋರಿಸುತ್ತಾರೆ.

ಈ ಪ್ರಕರಣವನ್ನು ನೋಡಿದ ಸುಮತಿಗೆ ತನ್ನ ಗಂಡ ಮತ್ತು ಜರೀನಾಳ ಗಂಡನ ವರ್ತನೆ, ನಡವಳಿಕೆ ಒಂದೇ ರೀತಿ ಇರುವುದು ತಿಳಿಯುತ್ತದೆ. ಜರೀನ ತನ್ನಿಂದ ಯಾವುದೇ ತಪ್ಪಾಗಿಲ್ಲ ಎಂದು ನಿರೂಪಿಸಲು ಮಾಡುತ್ತಿದ್ದ ಪ್ರಯತ್ನಗಳನ್ನು ಗಮನಿಸಿದ ಸುಮತಿ ಹೆಣ್ಣು

ಗಂಡಿನ ತಾಳಕ್ಕೆ ಕುಣಿಯುವ ರೀತಿಯನ್ನು ಈ ಮೂಲಕ ಹೇಳುತ್ತಾಳೆ – " ಜರೀನಾ ಯಾಕೆ ಹೀಗೆ ಕುಣಿಯುತ್ತಿದ್ದಾಳೆ..? ತನ್ನ ಬದುಕಿನ ಖಾಸಗಿತನವನ್ನೆಲ್ಲಾ ಯಾಕೆ ಹರಾಜಿಗಿಟ್ಟಿದ್ದಾಳೆ? ತಾನು ವಿಚ್ಛೇದನ ಪಡೆಯುತ್ತಿರುವ ಗಂಡನಿಂದ ಅವಳಿಗೆ ಬೇಕಾದುದಾದರೂ ಏನು? ಆಕೆಯೊಬ್ಬಳೇ ಏನು? ಎಲ್ಲಾ ಹೆಂಗಸರೂ ಹೀಗೆಯೇ ಅಲ್ಲವೇ? ಅವನು ನಿರ್ಧರಿಸಿದ ಪರಿಧಿಯೊಳಗೆ, ಅವನ ತಾಳಕ್ಕೆ ಅವನ ಆದೇಶದ ಮೇರೆಗೆ ಕುಣಿಯುವುದು .. ಇಡೀ ಬದುಕಿನುದ್ದಕ್ಕೂ .. ಹಾಗೆ ಕುಣಿಯುತ್ತಲೇ ಅವನಿಂದ ಬರುವ ಒಂದು ಹೊಗಳಿಕೆಗೆ .. ಒಂದು ಪ್ರಶಂಸೆಗೆ .. ರಕ್ತ ಬಸಿಯುವವರೆಗೂ ಕುಣಿಯುವಾಸೆ! ಮಲಗುವ ಮನೆಯಲ್ಲಿ ಬೆತ್ತಲೆ ಕುಣಿತ .. ವಿಶ್ವಸುಂದರಿಯಾಗಿ ಉದ್ದ ಕಾಲಿನ ಕುಣಿತ.. ಈ ರಂಗ ಮಂಚದ ಮೇಲೆ ಕಾಣದ ಕೈಗಳ .. ಕಾಣುವ ಕೈಗಳ .. ಸೂತ್ರದ ಗೊಂಬೆಯಾಗಿ ಹೆಣ್ಣುಗಳ ಕುಣಿತ" (ಬಾನು ಮುಷ್ತಾಕ್ 2013: ಪುಟ 281). ಈ ಮಾತುಗಳಲ್ಲಿ ಬಾನು ಮುಷ್ತಾಕ್‌ರವರು ಪುರುಷ ಹೆಣ್ಣನ್ನು ತನ್ನಿಷ್ಟ ಬಂದ ಹಾಗೆ ನಡೆಸುವುದನ್ನು ಮತ್ತು ಹೆಂಗಸರೂ ಕೂಡ ಗಂಡಿನ ಅಭಿರುಚಿಗೆ ತಕ್ಕಂತೆ ನಡೆಯುವುದನ್ನು ರೂಢಿಸಿಕೊಂಡಿರುವುದನ್ನು ವ್ಯಕ್ತಪಡಿಸಿದ್ದಾರೆ. ಇದು ಹೆಣ್ಣಿನ ವೈಯಕ್ತಿಕ ಅಭಿರುಚಿ, ಅಭಿಪ್ರಾಯಗಳನ್ನು ಕಳಚಿ ಪುರುಷನ ಅಭಿರುಚಿ, ಅಭಿಪ್ರಾಯಗಳನ್ನು ಹೇರಿ ಅವಳನ್ನು ಗಂಡಿನ ಅಧೀನದಲ್ಲಿಟ್ಟುಕೊಂಡಿರುವುದನ್ನು ಮತ್ತು ಗಂಡು ಹೆಣ್ಣಿನ ನಡುವೆ ಇರುವ ಅಸಮಾನತೆಯನ್ನು ತೋರಿಸುತ್ತದೆ.

ಬಾನು ಮುಷ್ತಾಕ್‌ರವರು ಜರೀನಾಳ ವಾದದಲ್ಲಿ ಪುರುಷರ ಅಸಹನೆಯನ್ನು ಕೆಳಕಂಡಂತೆ ಅನಾವರಣಗೊಳಿಸುತ್ತಾರೆ – "ನೀವು ನನ್ನನ್ನು ಬಿಟ್ಟುಬಿಡಿ. ನಾನು ಯಾಕೆ ಅಂತ ಕೇಳೋದಿಲ್ಲಾ. ಆದ್ರೆ ನಿಜ ಹೇಳಿ. ನೀವು ದುಡಿದದ್ದೆಲ್ಲಾ ಕುಡಿತಕ್ಕೆ ಸುರಿದ್ರಿ ಅಂತ.. ನಾನು ದುಡಿದದ್ದು ನಿಮ್ಗೆ ಸಹನೆ ಇಲ್ಲಾ ಅಂತ್ಹೇಳಿ. ನಾನು ಉಪವಾಸದಿಂದ ಸತ್ತಿದ್ರೆ ನೀವು ಕಣ್ಣೀರು ಹಾಕಿ ನನ್ನನ್ನು ಪತಿವ್ರತೆ ಅಂತಿದ್ರಿ. ನಾಕು ಜನರ ಮುಸುರೆ ತೊಳೆದಿದ್ರೆ ... ಆವಾಗ ನಿಮಗೆ ಸಂತೋಷ ಆಗ್ತಿದ್ದು. ಆದ್ರೆ.. ನಾನು ದುಡಿದೆ. ಗಂಡಸಿನ್ಹಂಗೆ ದುಡಿದೆ. ಮನೆ ನಡೆಸಿದೆ. ಹೋದ ತಿಂಗಳು ತಾನೆ ಇದ್ದ ಒಡವೆಯನ್ನೆಲ್ಲಾ ಮಾರಿ ಏಳು ಸಾವಿರಾನ ಆಸ್ಪತ್ರೆಗೆ ಕಟ್ಟಿ ನಿಮ್ಮ ಆಪರೇಷನ್ ಮಾಡಿಸ್ದೆ..... ನಿಮ್ಗೆ ಹೊಟ್ಟೆಯುರಿಯಾಯಿತು ನನ್ಮೇಲೆ .. ಅದ್ಕೇ ಸುಳ್ ಹೇಳ್ತಿದೀರಾ.." (ಬಾನು ಮುಷ್ತಾಕ್ 2013: ಪುಟ 282). ಈ ಮಾತುಗಳಲ್ಲಿ ವ್ಯಕ್ತವಾಗುವುದೆಂದರೆ ಹೆಣ್ಣು ದುಡಿಯುವುದು, ಹಣ ಸಂಪಾದಿಸುವುದು ಪುರುಷನಿಗೆ ಸಹನೆಯಿಲ್ಲ, ಬದಲಿಗೆ ಬಡತನವಿದ್ದರೂ, ಊಟವಿಲ್ಲದಿದ್ದರೂ ಅವಳು ದುಡಿಯದೆ ಮನೆಯಲ್ಲಿ ಗುಲಾಮಳ ರೀತಿ ಬದುಕಬೇಕು. ಆದರೆ ಜರೀನಾ ಒಂದು

ಕಾರ್ಖಾನೆಯಲ್ಲಿ ಕೆಲಸ ಮಾಡಿ ಮನೆಯನ್ನು ನಡೆಸುತ್ತಾಳೆ. ಇದು ಅವಳ ಗಂಡನ ಅಹಂಗೆ ಏಟು ಕೊಟ್ಟು ಅವಳ ಮೇಲೆ ಸಲ್ಲದ ಆಪಾದನೆಯನ್ನು ಹೊರಿಸುತ್ತಾನೆ. ಈ ಸಮಾಜ ಒಂದು ಹೆಣ್ಣು ಉಪವಾಸದಿಂದ ಸತ್ತರೆ ಅವಳಿಗೆ ಪತಿವ್ರತೆ ಎಂಬ ಬಿರುದು ನೀಡುತ್ತದೆ. ಆದರೆ ಅವಳು ಜೀವಂತವಿದ್ದಾಗ ಬದುಕಲು ಬಿಡುವುದಿಲ್ಲ. ಅಂದರೆ ಪುರುಷನಿಗೆ ಸಮನಾಗಿ ಹೆಣ್ಣು ಬಾಳುವಂತಿಲ್ಲ ಯಾವಾಗಲೂ ಅಸಮಾನತೆಯಲ್ಲೇ ಬದುಕಬೇಕು.

ಇದೇ ರೀತಿಯ ವರ್ತನೆ, ಅಭಿಪ್ರಾಯ, ಧೋರಣೆ, ಹೆಣ್ಣೆಂದರೆ ಅಧೀನಳು ಎಂಬ ಮನೋಭಾವ ಸುಮತಿಯ ಗಂಡ ಮನೋಹರನಲ್ಲಿಯೂ ಇರುತ್ತದೆ. ಸುಮತಿಯು ಲಾಯರ್ ಕೆಲಸದ ಒತ್ತಡದಿಂದ, ಅವನಿಗೆ ಸಂಜೆ ವೇಳೆ ಮಕ್ಕಳ ಹೋಮ್‌ವರ್ಕ್ ಮಾಡಿಸಿ ಎಂದು ಹೇಳಿದ ಮಾತುಗಳು ಅವನ ಅಹಂಗೆ ಪೆಟ್ಟು ಕೊಟ್ಟು, ಅವಳ ಮೇಲೆ ಸೇಡು ತೀರಿಸಿಕೊಳ್ಳಲಾರಂಭಿಸುತ್ತಾನೆ. ಕಥೆಗಾರ್ತಿ ಹೇಳುವ "ಕ್ಷಣಕ್ಷಣಕ್ಕೂ ಅವಳ ಆತ್ಮವಿಶ್ವಾಸವನ್ನು ಕುಗ್ಗಿಸಿ ಅವಳೇ ಸ್ವತಃ ತನ್ನ ವೃತ್ತವನ್ನು ಕಿರಿದುಗೊಳಿಸಿಕೊಳ್ಳುವಂತೆ ಮಾಡುವುದರಲ್ಲಿ ಆತ ಸಫಲನಾಗಿದ್ದ. ಅವಳ ಎಲ್ಲಾ ನಯ, ಅನುನಯ, ವಾದ–ವಿವಾದ, ಹೋರಾಟ ಎಲ್ಲವೂ ವ್ಯರ್ಥವಾಗಿತ್ತು. ಕೊನೆಗೂ ಅವನ ಹಟವೇ ಗೆದ್ದಿತು. ಆ ಪುಟ್ಟ ಕುಡಿಗಳನ್ನು ಅವಳಿಗೆ ಗೊತ್ತಿಲ್ಲದಂತೆ ಬೇಕೂಂತಲೇ ಅವಳ ಅರಿವಿಗೆ ತಾರದೆ ಮಹಾರಾಷ್ಟ್ರದ ಹಳ್ಳಿಯೊಂದರಲ್ಲಿ ಬೋರ್ಡಿಂಗ್ ಶಾಲೆಗೆ ಸೇರಿಸಿ ಬಂದಿದ್ದ. ಆತ ಸೇಡು ತೀರಿಸಿಕೊಂಡಿದ್ದ; ಆಕೆ ಲಾಯರ್ ಆದದ್ದಕ್ಕೆ, ಕೋಟು ತೊಟ್ಟಿದ್ದಕ್ಕೆ.. ಸ್ವಂತ ಆಫೀಸ್ ನಡೆಸಿದ್ದಕ್ಕೆ.. ನಿರರ್ಗಳವಾಗಿ ಇಂಗ್ಲೀಷ್ ಮಾತಾಡಿದ್ದಕ್ಕೆ.. ಕ್ಷೇತ್ರವನ್ನು ಅತಿಕ್ರಮಣ ಮಾಡಿಕೊಂಡಿದ್ದಕ್ಕೆ" (ಬಾನು ಮುಷ್ತಾಕ್ 2013: ಪುಟ 283) ಈ ಮಾತುಗಳು ಗಂಡು ಹೇಗೆ ಹೆಣ್ಣನ್ನು ತನ್ನ ಅಧೀನಕ್ಕೆ ತೆಗೆದುಕೊಳ್ಳುತ್ತಾನೆ ಎಂಬುದನ್ನು ಕಾಣಿಸುತ್ತವೆ. ಜೊತೆಗೆ ಹೆಣ್ಣು ಪರಿಧಿಯನ್ನು ದಾಟಿ ಪುರುಷನಿಗೆ ಸಮಾನವಾಗಿ ನಿಂತರೆ ಅವಳ ಮೇಲೆ ಪ್ರತೀಕಾರ ತೆಗೆದುಕೊಳ್ಳುವ, ಅವಳ ವ್ಯಕ್ತಿತ್ವ, ಸಂತೋಷ, ಬಾಳು ಎಲ್ಲ ಕಸಿದುಕೊಂಡು ಪುನಃ ತನ್ನ ಪರಿಧಿಯೊಳಗೆ ತರುವ ಹುನ್ನಾರ ಕೂಡ ವ್ಯಕ್ತವಾಗುತ್ತದೆ.

ಜರೀನಾಳ ಗಂಡ ಮತ್ತು ತನ್ನ ಗಂಡನನ್ನು ಹೋಲಿಸಿದ ಸುಮತಿಗೆ ಎಲ್ಲ ಗಂಡಸರಲ್ಲೂ ಹೆಣ್ಣಿನ ವಿರುದ್ಧದ ಕುಯುಕ್ತಿ ಸಮಾನವಾಗಿ ಹಂಚಿಹೋಗಿರುವುದನ್ನು ತಿಳಿದು ಆಶ್ಚರ್ಯವಾಗುತ್ತದೆ. ಇಲ್ಲಿ ಗಂಡನ ವಿರುದ್ಧದ ಜರೀನಾಳ ಹೋರಾಟ ಕೇವಲ ಅವಳ ಬದುಕಿಗಾಗಿ ಸೀಮಿತವಾಗಿಲ್ಲದೆ, ಹೆಣ್ಣಿನ ಸ್ವಾಭಿಮಾನಕ್ಕಾಗಿ, ಸತ್ಯಕ್ಕಾಗಿ ನಡೆಸುತ್ತಿರುವ ಹೋರಾಟವಾಗಿದೆ. ಪ್ರಪಂಚದ ಎಲ್ಲ ದೇಶ, ಜಾತಿ, ಬಣ್ಣ, ಅಂತಸ್ತುಗಳಿಗೆ ಸೇರಿದಂತೆ ಹೆಣ್ಣಿನ

ಹೋರಾಟ ಇದೇ ಆಗಿದೆ" (ಬಾನು ಮುಷ್ತಾಕ್ 2013: ಪುಟ 284) ಎಂದು ಬಾನು ಮುಷ್ತಾಕ್‌ರವರು ತಿಳಿಸುತ್ತಾರೆ.

ವಿಚ್ಛೇದನದ ಸಮಯದಲ್ಲಿ ಜರೀನ ಹೇಳುವ "ಈಗಲೂ ಇನ್ನೊಂದು ಗಳಿಗೆಗೂ ನಾನು ಒಳ್ಳೆಯವಳೇ ಅಂತ ಅವನು ನನ್ನೆದುರಿಗೆ ಅಂತಾನೆ. ಆದ್ರೆ ನಾಕ್ಜನದೆದುರು ಒಪ್ಕೊಳೊಲ್ಲ. ಅಲ್ಲಿಗೆ ಅವ್ನ ಅಹಂಕಾರಕ್ಕೆ ಗಂಡ್ಸು ಅನ್ನೋ ಅವನ ಮಾತಿಗೆ ಏಟಾಗುತ್ತೆ .. ಅದ್ಕೆ ಅವನಂಗಾಡೋದು.." ಮತ್ತು ಜರೀನಾಳ ಗಂಡ ಹೇಳುವ "ಇದರಾಗೆ.. ಅವಳ್ದೇನೂ ತಪ್ಪು ಇಲ್ಲ.. ತಪ್ಪು ಇಬ್ರಲ್ಲೂ ಐತೆ.. ಅವ್ಳೂ ಸ್ಟ್ರಾಂಗ್.. ನಾನೂ ಸ್ಟ್ರಾಂಗ್.. ಹಿಂಗಾಗಿ ಸಂಸಾರ ನಡೆಯಾಕಿಲ್ಲ.. ಅವ್ಳು ಬಾಯ್ಮುಚ್ಕೊಂಡ್ ತೆಪ್ಪಗಿದ್ರೆ.. ಇದೆಲ್ಲಾ ಆಗ್ತಿರ್ಲಿಲ್ಲ" (ಬಾನು ಮುಷ್ತಾಕ್ 2013: ಪುಟ 286) ಎನ್ನುವ ಮಾತುಗಳು ತನ್ನ ಅಹಂಕಾರಕ್ಕೆ ಮತ್ತು ತಾನು ಮೇಲು ಹಾಗೂ ಹೆಣ್ಣು ಅಧೀನ ಎಂಬ ನಿಲುವಿಗೆ ಹೊಡೆತ ಬಿದ್ದಾಗ ಪುರುಷ ಅದನ್ನು ಒಪ್ಪದೆ ಅವಳಿಗೆ ಎಲ್ಲಾ ರೀತಿಯ ದೌರ್ಜನ್ಯ, ಅನ್ಯಾಯಗಳನ್ನು ಮಾಡುತ್ತಾನೆ ಎಂಬುದನ್ನು ತಿಳಿಸುತ್ತದೆ. ಮಹಿಳೆ ಪುರುಷನಿಗೆ ಸಮಾನವಾಗಿ ನಿಂತರೆ ಅದನ್ನು ಅವನಿಂದ ಸಹಿಸಲಾಗುವುದಿಲ್ಲ. ಅಂದರೆ ಪುರುಷ–ಸ್ತ್ರೀಯನ್ನು ಸಮಾನ ನೆಲೆಯಲ್ಲಿ ನೋಡುವುದೇ ಕಷ್ಟ ಎಂಬ ಅಭಿಪ್ರಾಯವನ್ನು ಬಾನು ಮುಷ್ತಾಕ್‌ರವರು ಈ ಕಥೆಯಲ್ಲಿ ಚಿತ್ರಿಸಿದ್ದಾರೆ.

ಸಾರಾ ಅವರು ಮುಸ್ಲಿಂ ಕುಟುಂಬದಲ್ಲಿ ಪುರುಷ ಪ್ರಧಾನ ಹೆಣ್ಣು ಅಧೀನ ಎಂದು ಪಾಲಿಸುವ ರೀತಿಯನ್ನು ಚಿತ್ರಿಸಿ ಅದು ಹೆಣ್ಣಿನ ಮೇಲೆ ಎಂತಹ ಘೋರ ಪರಿಣಾಮವನ್ನು ಬೀರುತ್ತದೆ ಎಂದು ತೋರಿಸುತ್ತಾರೆ. ಹೆಣ್ಣಿಗೆ ಗಂಡನ ಮನೆ, ಮನೆಯ ಕೆಲಸ ಕಾರ್ಯಗಳೇ ಅಂತಿಮ ಎಂದು ಸಾರುವ ಕುಟುಂಬದ ನೀತಿ ಹೆಣ್ಣನ್ನು ಅಸಮಾನತೆಗೆ ಹಾಕುತ್ತದೆ, ಅವಳನ್ನು ವಿದ್ಯೆ, ಸ್ವಾತಂತ್ರ್ಯಗಳಿಂದ ವಂಚಿಸುತ್ತದೆ. ಆದರೆ ಸಾರಾ ಅವರು ಹೆಣ್ಣಿಗೆ ವಿದ್ಯೆ, ಧೈರ್ಯ ಬಹಳ ಅವಶ್ಯಕ ಎಂದು ತೋರಿಸಿಕೊಟ್ಟಿದ್ದಾರೆ. ಪುರುಷ ತಾನು ಮೇಲು ಹೆಣ್ಣು ಕೀಳು ಎಂದು ಬಲವಾಗಿ ನಂಬಿ ಅದನ್ನೇ ಪಾಲಿಸುತ್ತಿರುವುದನ್ನು ಮುಖ್ಯವಾಗಿ ಗಂಡು ತನ್ನ ಎಲ್ಲ ಕಾರ್ಯಗಳಿಗೂ ಸ್ತ್ರೀಯನ್ನೇ ಅವಲಂಬಿಸಿ ಕಡೆಗೆ ಅವಳನ್ನೇ ಗುಲಾಮಳ ರೀತಿ ಯಾವುದೇ ಬೆಲೆಯಿಲ್ಲದವಳನ್ನಾಗಿ ನೋಡುವ ಪುರುಷ ಸಮಾಜದ ರೀತಿಯನ್ನು ಸಾರಾ ಅವರು ತೋರಿಸಿದ್ದಾರೆ.

ಬಾನು ಮುಷ್ತಾಕ್‌ರವರು ಸಮಾಜ ಮತ್ತು ಕುಟುಂಬದ ಕಟ್ಟುಪಾಡುಗಳು ಪುರುಷ ನಿರ್ಮಿತವಾಗಿವೆ ಮತ್ತು ಪುರುಷಪರವಾಗಿದ್ದು ಮಹಿಳೆಯನ್ನು ಅಸಮಾನತೆಯ ಸುಳಿಗೆ

ಸಿಲುಕಿಸುವ ರೀತಿಯನ್ನು ತೋರಿಸುತ್ತಾ, ಹೆಣ್ಣು ಆ ಕಟ್ಟುಪಾಡುಗಳನ್ನು ಮೀರಿ, ಸ್ವಾವಲಂಬಿ ಜೀವನ ಕಟ್ಟಿಕೊಳ್ಳಬೇಕು ಎಂದು ತಿಳಿಸುತ್ತಾರೆ. ಸಮಾಜ ಮತ್ತು ಕುಟುಂಬದ ರೀತಿನೀತಿಗಳು ಹೆಣ್ಣನ್ನು ಅಸಮಾನತೆಗೀಡುಮಾಡಿ ಅವಳಿಗೆ ನಿರ್ಲಿಪ್ತ ಜೀವನವನ್ನು ಕೊಡುತ್ತವೆ ಎಂದು ಬಾನು ಮುಷ್ತಾಕ್‌ರವರು ತೋರಿಸುತ್ತಾರೆ. ಕುಟುಂಬದ ಗುಲಾಮಿ ಸ್ಥಿತಿಯಲ್ಲಿ ಸ್ವಂತ ವ್ಯಕ್ತಿತ್ವ ಕಳೆದುಕೊಂಡ ಹೆಣ್ಣು ಅಸಹಾಯಕತೆಯ ನೆರಳಲ್ಲಿ ಜೀವಿಸಬೇಕಾಗುವ ಪರಿಸ್ಥಿತಿಯನ್ನು ಚಿತ್ರಿಸುತ್ತಾರೆ. ಮಹಿಳೆ ಪುರುಷನಿಗೆ ಸಮನಾಗಿ ಬದುಕಲು ಪ್ರಾರಂಭಿಸಿದರೆ, ಉದ್ಯೋಗ ಹಿಡಿದು ಸಾಮಾಜಿಕ ಸ್ಥಾನಮಾನ ಪಡೆದರೆ ಅದನ್ನು ಸಹಿಸಲು ಪುರುಷ ಸಮಾಜಕ್ಕೆ ಸಾಧ್ಯವಾಗುವುದಿಲ್ಲ. ಹೇಗಾದರೂ ಮಾಡಿ ಅವಳನ್ನು ತನ್ನ ಅಧೀನಕ್ಕೆ ತೆಗೆದುಕೊಳ್ಳಲು ಪ್ರಯತ್ನಿಸುತ್ತಾರೆ ಎಂಬುದನ್ನು ಬಾನು ಮುಷ್ತಾಕ್‌ರವರು ಚಿತ್ರಿಸಿದ್ದಾರೆ.

ಎಲ್ಲಾ ಧರ್ಮಗಳಲ್ಲೂ ಮಹಿಳೆಯರು ಅಸಮಾನತೆಯ ಜೀವನವನ್ನು ಅನುಭವಿಸುತ್ತಿದ್ದಾರೆ. ಮುಸ್ಲಿಂ ಸಮಾಜದಲ್ಲಿ ಧರ್ಮದ ಆಧಾರದ ಮೇಲೆ ಮಹಿಳೆಯರನ್ನು ಶೋಷಿಸುವ, ಪುರುಷರ ಅಧೀನ ಮತ್ತು ಗುಲಾಮರನ್ನಾಗಿ ಮಾಡಿಕೊಂಡಿರುವ ಚಿತ್ರಣವನ್ನು ಮುಸ್ಲಿಂ ಮಹಿಳಾ ಸಾಹಿತ್ಯ ತೋರಿಸುತ್ತದೆ. ಸ್ತ್ರೀಯರು ಅನುಭವಿಸುತ್ತಿರುವ ಅಸಮಾನತೆ, ದೌರ್ಜನ್ಯಗಳನ್ನು ಧಾರ್ಮಿಕ, ಸಾಮಾಜಿಕ ಮತ್ತು ಕೌಟುಂಬಿಕ ನೆಲೆಗಳಲ್ಲಿ ಗುರುತಿಸಲಾಗಿದೆ. ಜನಜೀವನ ನಿಯಂತ್ರಿಸುವ ಧರ್ಮ ಸ್ತ್ರೀ–ಪುರುಷರಿಗೆ ಬೇರೆಬೇರೆಯಾದಾಗ ಅಸಮಾನತೆಯನ್ನು ಸೃಷ್ಟಿಸಿ ಮಹಿಳೆಯ ಬಾಳನ್ನು ಹಾಳು ಮಾಡುವ ಚಿತ್ರಣ ಕಂಡುಬರುತ್ತದೆ. ಧರ್ಮದ ಕಾನೂನುಗಳನ್ನು ಯಾವ ಪುರುಷ ಬೇಕಾದರೂ ತಮ್ಮ ಸ್ವಾರ್ಥ ಮತ್ತು ಅಹಂಕಾರ ಮೆರೆಯಲು ಮಹಿಳೆಯರ ವಿರುದ್ಧ ಬಳಸಬಹುದೆಂಬ ಸತ್ಯ ಮುಸ್ಲಿಂ ಮಹಿಳಾ ಸಾಹಿತ್ಯದಲ್ಲಿ ಕಾಣುತ್ತದೆ. ಆದರೆ ಧೈರ್ಯವಂತ ಮಹಿಳೆ ಪುರುಷರ ಕಾನೂನನ್ನೇ ಪ್ರಶ್ನಿಸಿ ಸರಕಾರದ ಕಾನೂನಿನ ಸಹಾಯದಿಂದ ತಮ್ಮ ಮೇಲೆ ನಡೆಯುವ ದೌರ್ಜನ್ಯಗಳನ್ನು ತಡೆದು ಸಮಾನತೆ ಸಾಧಿಸಬಹುದು ಎಂದೂ ತಿಳಿದುಬರುತ್ತದೆ. ಸಾಮಾಜಿಕ ನೆಲೆಯಲ್ಲಿ ವಿಶ್ಲೇಷಿಸಿದ ಕಥಾಸಾಹಿತ್ಯ ಮುಸ್ಲಿಂ ಸಮಾಜದಲ್ಲಿ ಕಟ್ಟುಪಾಡುಗಳು ಪುರುಷ ಪರವಾಗಿದ್ದು ಹೆಣ್ಣನ್ನು ಪುರುಷನ ಸೇವಕಿಯಾಗಿ ರೂಪಿಸಿವೆ ಎಂದು ತೋರಿಸುತ್ತದೆ. ಮಹಿಳೆ ಪುರುಷನಿಗೆ ಕೇವಲ ಆಟಿಕೆಯಾಗಿದ್ದು ನಿಸರ್ಗದಲ್ಲಿ ದೊರೆಯುವ ಪ್ರತಿ ವಸ್ತುವೂ ಅವನಿಗೆ ಆಗಿದೆ. ಇಂತಹ ಸಾಮಾಜಿಕ ಸ್ಥಿತಿಯಲ್ಲಿ ಹೆಣ್ಣಿನ ಪರಿಸ್ಥಿತಿಯನ್ನು ಕೇವಲ ಹೆಣ್ಣು ಮಾತ್ರ ಅರ್ಥಮಾಡಿಕೊಳ್ಳಬಹುದು ಎಂದು ಕಂಡುಬರುತ್ತದೆ. ಪುರುಷ ಸಂತಾನ ಸಮಾಜದ ಒಲವಾಗಿದೆ; ಗಂಡುಮಕ್ಕಳು ಹುಟ್ಟದೇ ಇದ್ದರೆ ಅದಕ್ಕೆ ಹೆಣ್ಣನ್ನೇ ಕಾರಣ ಮಾಡಿ ಅಸಮಾನತೆಯನ್ನು ಮೆರೆಯುವ ಸಮಾಜ ಕಂಡುಬರುತ್ತದೆ. ಮುಸ್ಲಿಂ ಕುಟುಂಬ

ವ್ಯವಸ್ಥೆಯೂ ಕೂಡ ಪುರುಷ ಪರವಾಗಿದ್ದು ಸ್ತ್ರೀ ಶೋಷಣೆ, ಅಸಮಾನತೆ ಕುಟುಂಬದಲ್ಲೇ ಪ್ರಾರಂಭವಾಗುವುದನ್ನು ಮುಸ್ಲಿಂ ಮಹಿಳಾ ಸಾಹಿತ್ಯ ಚಿತ್ರಿಸುತ್ತದೆ. ಕುಟುಂಬದಲ್ಲಿ ಹೆಣ್ಣು ಪುರುಷಾಧೀನವಾಗಿದ್ದು ಘೋರ ಪರಿಣಾಮಗಳನ್ನು ಎದುರಿಸುವುದು ಈ ಅಧ್ಯಾಯದಲ್ಲಿ ಕಂಡುಬರುತ್ತದೆ. ಒಟ್ಟಾರೆಯಾಗಿ ಹೇಳುವುದಾದರೆ ಮುಸ್ಲಿಂ ಸಮಾಜದಲ್ಲಿ ಧಾರ್ಮಿಕ, ಸಾಮಾಜಿಕ, ಕೌಟುಂಬಿಕ ಪರಿಸರಗಳಲ್ಲೆಲ್ಲಾ ಹೆಣ್ಣು ಪುರುಷನ ಅಧೀನವಾಗಿದ್ದು, ಸ್ತ್ರೀ–ಪುರುಷರ ನಡುವಿನ ಅಸಮಾನತೆಯನ್ನು ಮುಸ್ಲಿಂ ಮಹಿಳಾ ಸಾಹಿತ್ಯ ಪ್ರಕಟಿಸುತ್ತದೆ.

ಅಧ್ಯಾಯ 7

ಅಧ್ಯಾಯ 7

ಅಧ್ಯಯನದ ಫಲಿತಗಳು

ಪ್ರಾಕೃತಿಕವಾಗಿ ಸ್ತ್ರೀ–ಪುರುಷರಿಬ್ಬರೂ ಸಮಾನರಾದರೂ, ಸಮಾಜದಲ್ಲಿ ಇವರಿಬ್ಬರ ನಡುವೆ ತೀವ್ರವಾದ ಅಸಮಾನತೆಯಿದೆ. ಪುರುಷರು ಸಮಾಜದ ಎಲ್ಲ ಕ್ಷೇತ್ರಗಳಲ್ಲು ಮೇಲುಗೈ ಪಡೆದು, ಕುಟುಂಬದಿಂದ ಹಿಡಿದು ಸಮಾಜದ ಎಲ್ಲ ಸ್ತರಗಳಲ್ಲೂ ಮಹಿಳೆಯನ್ನು ಅಧೀನಳನ್ನಾಗಿ ಮಾಡಿಕೊಂಡಿರುವುದು ವಾಸ್ತವ. ಮಹಿಳೆಯರು ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ ಪುರುಷನಿಂದ ತುಳಿತಕ್ಕೊಳಗಾಗಿರುವುದು ಕಾಣುತ್ತದೆ. ಸ್ತ್ರೀ–ಪುರುಷರ ನಡುವಿನ ಈ ಅಸಮಾನತೆಯನ್ನು ಮಹಿಳಾ ಸಾಹಿತ್ಯವು ಚಿತ್ರಿಸಿರುವುದನ್ನು ಈ ಅಧ್ಯಯನದಲ್ಲಿ ಮುಖ್ಯ ಧ್ಯೇಯವಾಗಿಟ್ಟುಕೊಂಡು ಚರ್ಚಿಸಲಾಗಿದೆ. ಸಾಹಿತ್ಯವು ಸಮಾಜದ ಪ್ರತಿಬಿಂಬವಾಗಿರುವುದರಿಂದ ಮತ್ತು ಕಥಾಸಾಹಿತ್ಯದ ಹುಟ್ಟು ಬೆಳವಣಿಗೆಗೆ ಮಹಿಳೆಯೇ ಕಾರಣಳಾಗಿರುವುದರಿಂದ ಮಹಿಳಾ ಸಾಹಿತ್ಯ ಸಮಾಜದಲ್ಲಿರುವ ಸ್ತ್ರೀ–ಪುರುಷರ ನಡುವಿನ ಅಸಮಾನತೆಯನ್ನು ಅಭಿವ್ಯಕ್ತಿಸಿರುವುದನ್ನು ಅಧ್ಯಯನ ಮಾಡಲಾಗಿದೆ. ಈ ಅಧ್ಯಯನದಲ್ಲಿ ಸಮಾನತೆಯ ಪರಿಕಲ್ಪನೆಯ ಅರ್ಥ, ಅಸಮಾನತೆಯ ಹುಟ್ಟು, ಕಾರಣ, ಸ್ವರೂಪಗಳನ್ನು ಚರ್ಚಿಸಲಾಗಿದೆ. ಮಹಿಳಾ ಸಾಹಿತ್ಯದ ಕಥಾವಸ್ತು ಬದಲಾದ ರೀತಿ, ಸ್ತ್ರೀ–ಪುರುಷರ ನಡುವಿನ ಅಸಮಾನತೆಯನ್ನು ವಿಶ್ಲೇಷಣಾತ್ಮಕ ವಿಧಾನದಲ್ಲಿ ಚರ್ಚಿಸಲಾಗಿದೆ. ಈ ಅಧ್ಯಯನಕ್ಕೆ ಮುಖ್ಯವಾಗಿ ನವ್ಯೋತ್ತರ ಮಹಿಳಾ ಕಥಾಸಾಹಿತ್ಯವನ್ನು ಪರಿಗಣಿಸಿದ್ದರೂ, ಈ ಹಿಂದಿನ ಕಾಲಘಟ್ಟದ ಕೆಲವು ಲೇಖಕಿಯರ ಕೃತಿಗಳನ್ನು ಅಧ್ಯಯನದ ಅವಶ್ಯಕತೆಯ ದೃಷ್ಟಿಯಿಂದ ವ್ಯಾಪ್ತಿಯಲ್ಲಿ ತರಲಾಗಿದೆ. ನವ್ಯೋತ್ತರ ಕನ್ನಡ ಮಹಿಳಾ ಸಾಹಿತ್ಯವು ಹಲವಾರು ವಿಚಾರಧಾರೆಗಳು, ಮಹಿಳಾ ಹೋರಾಟ ಚಳುವಳಿಗಳು, ಸಾಮಾಜಿಕ, ರಾಜಕೀಯ ಬೆಳವಣಿಗೆಗಳ ಪ್ರೇರಣೆ ಮತ್ತು ಪ್ರಭಾವಕ್ಕೊಳಪಟ್ಟಿರುವುದು ಕಂಡುಬರುತ್ತದೆ. ಮಹಿಳಾ ಸಾಹಿತ್ಯವು ಅಭಿವ್ಯಕ್ತಿಸಿರುವ ಸ್ತ್ರೀ–ಪುರುಷರ ಅಸಮಾನತೆಯನ್ನು ವಿವಿಧ ತಾತ್ವಿಕ ನೆಲೆಗಳಲ್ಲಿ ವಿಶ್ಲೇಷಿಸಲಾಗಿದೆ. ಈ ಅಧ್ಯಯನಕ್ಕೆ ಬೇಕಾದ ಮೂಲ ಸಾಮಗ್ರಿಗಳಿಗೆ ಕಥಾಸಾಹಿತ್ಯದಲ್ಲಿ ಬರುವ ಪಾತ್ರ, ಸನ್ನಿವೇಶ, ಘಟನೆಗಳು ಆಧಾರವಾಗಿವೆ. ಅಸಮಾನತೆಯು ಒಂದು ಸಾಮಾಜಿಕ ರೋಗ, ಇಂತಹ ರೋಗ ನಿವಾರಣೆಗೆ ಸಮಾನತೆಯ ಪರಿಕಲ್ಪನೆಯನ್ನು ಅರ್ಥೈಸಿಕೊಂಡು, ಅಸಮಾನತೆಯ ಸ್ವರೂಪ ಕಾರಣಗಳನ್ನು ತಿಳಿದು ಸ್ತ್ರೀ–ಪುರುಷರ ನಡುವೆ ಸಮಾನತೆಯನ್ನು ಸಾಧಿಸುವ ದೃಷ್ಟಿಯಿಂದ ಈ ಅಧ್ಯಯನ ಮಹತ್ವ ಪಡೆದುಕೊಳ್ಳುತ್ತದೆ. ಈ ಅಧ್ಯಯನದಲ್ಲಿ ಕಂಡುಬಂದ ಪ್ರಮುಖ ಅಂಶಗಳನ್ನು

ಇಲ್ಲಿ ನೀಡಲಾಗಿದೆ. 'ಸಮಾನತೆ' ಮಹತ್ವದ ಪರಿಕಲ್ಪನೆಯಾಗಿದ್ದು ಎಲ್ಲರೂ, ಅಂದರೆ ಸಕಲ ಮಾನವರೂ ಸಮಾನರು ಎಂದು ಅರ್ಥೈಸುತ್ತದೆ. ಪ್ರಕೃತಿಯಲ್ಲಿ ಸಹಜವಾಗಿ ಸಮಾನವಾಗಿ ಹುಟ್ಟಿದರೂ ಸಮಾಜದಲ್ಲಿ ಸ್ತ್ರೀ–ಪುರುಷರ ನಡುವೆ ಮೇಲು–ಕೀಳು, ಪ್ರಧಾನ–ಅಧೀನ ಎಂಬ ಅಸಮಾನತೆಯ ಗೋಡೆ ಬೃಹದಾಕಾರವಾಗಿ ಎದ್ದಿದೆ.

ಸ್ತ್ರೀ–ಪುರುಷರ ನಡುವಿನ ಸಮಾನತೆ ಅವರ ನಡುವಿನ ಸ್ಥಾನಮಾನ, ಅಧಿಕಾರ ಹಕ್ಕು, ಕರ್ತವ್ಯಗಳನ್ನು ಸೂಚಿಸುತ್ತದೆ. ಈ ಅಂಶಗಳನ್ನು ಒಂದೇ ನೆಲೆಯಲ್ಲಿ, ಒಂದೇ ತೆರನಾದ ಅಧಿಕಾರ, ಹಕ್ಕುಗಳನ್ನು ಅನುಭವಿಸಿದಾಗ ಸಮಾನತೆಯನ್ನು ನೋಡಬಹುದು. ಆದರೆ ವಾಸ್ತವತೆ ಹಾಗಿರದೆ ಸ್ತ್ರೀ–ಪುರುಷರ ಮಧ್ಯೆ ಕೌಟುಂಬಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಯಾವುದೇ ನೆಲೆಯಲ್ಲೂ ಸಮಾನತೆ ಇಲ್ಲದಿರುವುದು ಕಂಡುಬರುತ್ತದೆ. ಸ್ತ್ರೀ–ಪುರುಷರ ಸಮಾನತೆ ಎಂದರೆ ಇಬ್ಬರೂ ದೈನಂದಿನ ಮತ್ತು ವ್ಯಾವಹಾರಿಕ ನಿರ್ಣಯಗಳನ್ನು ಕೈಗೊಳ್ಳುವಾಗ, ಸಂಪತ್ತಿನ ವಿಷಯದಲ್ಲಿ ಸಮಾನ ಅವಕಾಶ ಪಡೆದವರು ಎಂದು ತಿಳಿದುಬರುತ್ತದೆ. ಈ ಅರ್ಥದಲ್ಲಿ ಸಮಾನತೆ ಎಂದರೆ ಲಿಂಗತಾರತಮ್ಯತೆ ಇಲ್ಲದೆ ಮಹಿಳೆಯ ಅಧೀನ ಸ್ಥಿತಿಯನ್ನು ಕಿತ್ತುಹಾಕುವುದು ಎಂದಾಗುತ್ತದೆ.

- ವ್ಯವಸಾಯ, ಪಶುಸಂಗೋಪನೆಯೊಂದಿಗೆ ವಾಸ್ತವ್ಯ ಹೂಡಿ ಕುಟುಂಬ ಪದ್ಧತಿ ಶುರುವಾದಂತೆ ಸ್ತ್ರೀ–ಪುರುಷರ ನಡುವೆ ಕೆಲಸ ಕಾರ್ಯಗಳು ಹಂಚಿಕೆಯಾಗಿ, ದುಡಿಯುವ ಮತ್ತು ಗಳಿಸುವ ಪರಿಕಲ್ಪನೆಯೊಂದಿಗೆ ಗಂಡು ಹೆಣ್ಣಿನ ನಡುವೆ ಭಿನ್ನತೆ ಹೆಚ್ಚಾಗಿದ್ದು ಅಸಮಾನತೆಗೆ ನಾಂದಿಯಾಗಿದೆ ಎಂದು ತಿಳಿದುಬರುತ್ತದೆ.

- ಪ್ರಕೃತಿಯ ಮೇಲೆ ನಿಯಂತ್ರಣ ಸಾಧಿಸಿದ ಮಾನವ ಹೆಣ್ಣಿನ ಮೇಲೂ ನಿಯಂತ್ರಣ ಸಾಧಿಸಿ ಅವಳನ್ನು ಒಂದು ಆಸ್ತಿ ಅಥವಾ ವಸ್ತು ಎಂದು ಪರಿಗಣಿಸಿದ್ದು ಅಧೀನತೆಗೆ ಮತ್ತು ಅಸಮಾನತೆಗೆ ಕಾರಣವಾಗಿದೆ. ಸ್ತ್ರೀಯನ್ನು ಅಧೀನದಲ್ಲಿಡಲು ಸಮಾಜ ಸ್ತ್ರೀಯರಿಗೆ ನಿರ್ದಿಷ್ಟ ಗುಣಮಾದರಿಗಳನ್ನು ರಚಿಸಿ ಅವಳನ್ನು ಪುರುಷಾನುಯಾಯಿಯನ್ನಾಗಿ ಮಾಡಿ, ಸ್ವತಂತ್ರ, ವ್ಯಕ್ತಿತ್ವ, ವೈಚಾರಿಕತೆಯಿಲ್ಲದ ಗುಲಾಮ ಜೀವನಕ್ಕೆ ಈಡುಮಾಡುವುದು ತಿಳಿದುಬರುತ್ತದೆ. ಇಂತಹ ಬೆಳವಣಿಗೆಗಳು ಲಿಂಗ ತಾರತಮ್ಯವನ್ನು ಗಟ್ಟಿಗೊಳಿಸಿ ಪುರುಷಾಧೀನಳನ್ನಾಗಿ ಮಾಡಿರುವುದು ಕಂಡುಬರುತ್ತದೆ.

- ಸಮಾಜದಲ್ಲಿ ಧರ್ಮಗಳು ಸಾರ್ವತ್ರಿಕ ಮನುಷ್ಯನ ಕಲ್ಪನೆ ಹೊಂದಿಲ್ಲದೆ ಪುರುಷ ಪ್ರಧಾನ ಧಾರೆಗೆ ಸೀಮಿತವಾಗಿದ್ದು ಸ್ತ್ರೀಯರನ್ನು ಎರಡನೇ ದರ್ಜೆಯ ವ್ಯಕ್ತಿಯಾಗಿ ಪರಿವರ್ತಿಸಿರುವುದು ಕಾಣುತ್ತದೆ.

- ಕುಟುಂಬದಲ್ಲಿ, ಸಮಾಜದಲ್ಲಿ ವಿವಿಧ ಪಾತ್ರಗಳನ್ನು ಕೆಲಸ ಕಾರ್ಯಗಳನ್ನು ನಿಭಾಯಿಸುವ ಹೆಣ್ಣಿನ ಕೊಡುಗೆ ಪುರುಷ ಪ್ರಧಾನ ಸಮಾಜದಲ್ಲಿ ಪರಿಗಣಿನೆಗೆ ಬರದೆ ಇರುವುದು ಕಂಡುಬರುತ್ತದೆ. ಅವಳು ಮಾಡುವ ಕೆಲಸಗಳು ವ್ಯಕ್ತಿತ್ವ ಮತ್ತು ಅವಳ ಸ್ಥಾನಮಾನವನ್ನು ಎತ್ತಿಹಿಡಿಯದೆ ಕೇವಲ ಸೇವೆಯ ರೂಪದಲ್ಲಿ ಕಾಣುವುದು ಅಸಮಾನತೆ ಎಂದು ತಿಳಿಯುತ್ತದೆ.

- ಪುರುಷ ಸಮಾಜ ಮಹಿಳೆಯ ಅಸ್ತಿತ್ವವನ್ನು ಕಳೆದು ಅವಳ ವ್ಯಕ್ತಿತ್ವ ಮತ್ತು ಸ್ವಾತಂತ್ರ್ಯವನ್ನು ನಾಶ ಮಾಡಿ, ತನ್ನ ಕೈಗೊಂಬೆ ಮಾಡಿಕೊಂಡಿರುವುದು ತಿಳಿದುಬರುತ್ತದೆ. ಲಿಂಗತಾರತಮ್ಯ ಹೆಣ್ಣಿನ ಆರ್ಥಿಕ ಶಕ್ತಿಯನ್ನು ಕಿತ್ತುಕೊಂಡು ಆರ್ಥಿಕವಾಗಿ ಪುರುಷಾವಲಂಬಿಯಾಗುವಂತೆ ಮಾಡಿರುವುದು ಕಂಡುಬರುತ್ತದೆ.

- ಸಮಾಜದಲ್ಲಿ ಸ್ತ್ರೀ–ಪುರುಷರಿಬ್ಬರಿಗೂ ಸಮಾನತೆ ದೊರೆಯಬೇಕು ಎಂದು ಸಮಾಜ ಚಿಂತಕರು ಪ್ರತಿಪಾದಿಸಿರುವುದು ತಿಳಿದುಬರುತ್ತದೆ. ಏಂಗೆಲ್ಸ್ ಪುರುಷ ಪ್ರಧಾನ ಸಮಾಜ ಹೆಣ್ಣಿನ ಬಾಳನ್ನು ದುರಂತಕ್ಕೀಡು ಮಾಡಿದೆ ಎಂದು ಹೇಳಿ ಸಮಾನತೆ ಬೇಕೆಂದು ಹೇಳುತ್ತಾನೆ. ಜೆ.ಎಸ್. ಮಿಲ್ ಮಾನವನಿಗೆ ಸಮಾಜದಲ್ಲಿ ವ್ಯಕ್ತಿ ಸ್ವಾತಂತ್ರ್ಯ ಬಹಳ ಮುಖ್ಯ ಎಂದು ಹೇಳಿ ಪ್ರತಿ ಮನುಷ್ಯನೂ ತನ್ನ ಸ್ವಾತಂತ್ರ್ಯ ಬಿಟ್ಟುಕೊಡಬಾರದೆಂದು ತಿಳಿಸಿರುವುದು ತಿಳಿಯುತ್ತದೆ. ಅಂಬೇಡ್ಕರ್‌ರವರು ಹುಟ್ಟುತ್ತಲೇ ಯಾರೂ ಅಧೀನರಾಗಿ ಹುಟ್ಟುವುದಿಲ್ಲ ಸಮಾಜ ಅಧೀನರನ್ನು ಸೃಷ್ಟಿಸುತ್ತದೆ ಮತ್ತು ಕಾನೂನಾತ್ಮಕವಾಗಿ ಎಲ್ಲರೂ ಸಮಾನರು ಎಂದು ಹೇಳಿ ಸ್ತ್ರೀ–ಪುರುಷರಿಬ್ಬರೂ ಸಮಾನರು ಎಂದು ಹೇಳಿದ್ದಾರೆ. ಗಾಂಧೀಜಿ ಮಹಿಳೆಗೆ ರಾಜಕೀಯ ಆರ್ಥಿಕ ಮತ್ತು ಸಾಮಾಜಿಕ ಹಕ್ಕುಗಳಿರಬೇಕೆಂದು ಪ್ರತಿಪಾದಿಸಿದ್ದಾರೆ. ಲೋಹಿಯಾ ಸ್ತ್ರೀ–ಪುರುಷ ಅಸಮಾನತೆ ನೈಸರ್ಗಿಕವಲ್ಲ, ಮನುಷ್ಯ ನಿರ್ಮಿತ ಎಂದು ತಿಳಿಸಿ ಸ್ತ್ರೀಯರಿಗೆ ಹಕ್ಕುಗಳು ದೊರೆಯಬೇಕು ಆಗ ಸಮಾನತೆ ದೊರೆಯುತ್ತದೆ ಎಂದು ತಿಳಿಸಿರುವುದು ಕಂಡುಬರುತ್ತದೆ.

- ಮಹಿಳೆಯ ಮೇಲಿನ ಶೋಷಣೆ ಮತ್ತು ಅನ್ಯಾಯಗಳನ್ನು ತಡೆದು ಅವಳ ಸ್ಥಾನಮಾನಗಳನ್ನು ಹೆಚ್ಚಿಸುವ ಪ್ರಯತ್ನಗಳು ಇತ್ತೀಚೆಗೆ ಬೆಳೆಯುತ್ತಿವೆ. ಈ ಪ್ರಯತ್ನಗಳನ್ನು ಸ್ತ್ರೀವಾದ ಎಂದು ಗುರುತಿಸಲಾಗಿದೆ. ಸ್ತ್ರೀವಾದವು ಮಹಿಳೆಯನ್ನು ಸ್ವಂತ ವ್ಯಕ್ತಿತ್ವವುಳ್ಳವಳೆಂದು ಗುರುತಿಸಿ ಅಸಮಾನತೆಯನ್ನು ತೊಡೆದುಹಾಕಲು ಪ್ರಯತ್ನಿಸುತ್ತದೆ; ಲಿಂಗತಾರತಮ್ಯ ಇರುವವರೆಗೂ ಅಸಮಾನತೆ ಇರುತ್ತದೆ ಎಂದು ಹೇಳಿ ಲಿಂಗತಾರತಮ್ಯ ನಿವಾರಣೆಗೆ ಸ್ತ್ರೀವಾದ ಆಗ್ರಹಿಸುತ್ತದೆ. ಲಿಂಗತಾರತಮ್ಯತೆಯಿಂದ ಮನುಷ್ಯರ ನಡುವಿನ ಸಂಬಂಧ ಹಾಳಾಗಿದೆ, ಆದ್ದರಿಂದ ಪುರುಷ ಸಮಾಜ ಸ್ತ್ರೀ ಮೇಲೆ ಹೇರಿರುವ ಮೌಢ್ಯಗಳನ್ನು ಹೋಗಲಾಡಿಸಿ ಮಹಿಳೆಯನ್ನು ಪುರುಷನ ಸಮಾನ ನೆಲೆಗೆ ತರುವುದು ಅವಶ್ಯ ಎಂದು ತಿಳಿಯುತ್ತದೆ.

- ಸಾಹಿತ್ಯವು ಸಮಾಜ ಮತ್ತು ಜನಜೀವನದ ಪ್ರತಿಬಿಂಬ. ಸಮಾಜದಲ್ಲಿರುವ ಪರಿಸ್ಥಿತಿ, ವ್ಯಕ್ತಿಗಳೇ ಸಾಹಿತ್ಯದ ಕಥಾವಸ್ತುವಾಗುತ್ತದೆ. ಮಹಿಳೆಯರ ಸಾಹಿತ್ಯ ರಚನೆಗಳಲ್ಲಿ ಸ್ತ್ರೀಯರ ಜೀವನ ಪರಿಸ್ಥಿತಿ, ಶೋಷಣೆ, ಅಸಮಾನತೆಗಳು ಅಭಿವ್ಯಕ್ತಿಯಾಗಿರುವುದು ತಿಳಿಯುತ್ತದೆ.

- ಸ್ತ್ರೀಯರ ವಿದ್ಯಾಭ್ಯಾಸಕ್ಕೆ ಅವಕಾಶಗಳೇ ಇಲ್ಲದಿದ್ದ ಕಾಲದಲ್ಲಿ ಸ್ತ್ರೀಯರಿಗೆ ವಿದ್ಯೆಯ ಅವಶ್ಯಕತೆ ಮತ್ತು ವಿದ್ಯಾಭ್ಯಾಸದಿಂದ ಮಹಿಳೆಯರಿಗೆ ಮತ್ತು ಸಮಾಜಕ್ಕೆ ಆಗುವ ಅನುಕೂಲಗಳ ಕುರಿತ ಕಥಾವಸ್ತುಗಳನ್ನು ಮಹಿಳಾ ಸಾಹಿತ್ಯ ಗುರುತಿಸಿರುವುದು ಕಂಡುಬರುತ್ತದೆ. ಪುರುಷನ ಲೈಂಗಿಕ ದೌರ್ಜನ್ಯವನ್ನು ಎದುರಿಸಲು ಬೇಕಾದ ಆತ್ಮವಿಶ್ವಾಸವನ್ನು ಶಿಕ್ಷಣವು ಕೊಡುತ್ತದೆ ಎಂದು ತಿಳಿದುಬರುತ್ತದೆ. ವಿದ್ಯೆಯು ಹೆಣ್ಣಿಗೆ ಕರ್ತವ್ಯ ಮತ್ತು ಸ್ವಾತಂತ್ರ್ಯದ ಅರಿವನ್ನು ಮೂಡಿಸುವ ಅಂಶ ಕಂಡುಬರುತ್ತದೆ.

- ಬಾಲ್ಯವಿವಾಹ, ವರದಕ್ಷಿಣೆಗಳು ಹೆಣ್ಣಿನ ಬಾಳಿಗೆ ಅನ್ಯಾಯ, ಮೋಸ ಮಾಡಿ ದುರಂತಕ್ಕೀಡು ಮಾಡುತ್ತಿದ್ದ ಮತ್ತು ವಿವಾಹವಾಗದ ಬಾಲಕಿಯನ್ನು ನಿಂದಿಸುತ್ತಿದ್ದ ಸಾಮಾಜಿಕ ಪರಿಸ್ಥಿತಿ ಮಹಿಳಾ ಕಥಾಸಾಹಿತ್ಯದಲ್ಲಿ ಬಳಕೆಯಾಗಿರುವುದು ಕಂಡುಬರುತ್ತದೆ. ಸಮಾಜ ಹೆಣ್ಣುಮಕ್ಕಳ ಜವಾಬ್ದಾರಿ ಹೊರಲು ತಯಾರಿಲ್ಲದ ಅಂಶ ಸಮಾಜದಲ್ಲಿ ಹೆಣ್ಣಿಗೆ ಸ್ಥಾನವಿಲ್ಲ ಎಂಬುದನ್ನು ತೋರಿಸುತ್ತದೆ. ಸಮಾಜದ ರೀತಿನೀತಿಗಳು ಹೆಣ್ಣನ್ನು ಕೊಲೆ ಮಾಡುತ್ತವೆ ಎಂದು ತಿಳಿದುಬರುತ್ತದೆ.

- ಹೆಣ್ಣಿನ ಶೋಷಣೆಯನ್ನು ಕುಟುಂಬ, ಆಶ್ರಮ, ಸಮಾಜ ಎಲ್ಲವೂ ಅವ್ಯಾಹತವಾಗಿ ಮಾಡುತ್ತವೆ. ಮುಖ್ಯವಾಗಿ ಮಹಿಳಾ ಉದ್ಧಾರವನ್ನೇ ಧ್ಯೇಯ ಮಾಡಿಕೊಂಡಿರುವ

ಅಬಲಾಶ್ರಮ ಅಥವಾ ವಿಧವಾಶ್ರಮಗಳೇ ಅವಳನ್ನು ಮೋಸಕ್ಕೀಡು ಮಾಡುವುದು ಕಥಾವಸ್ತುವಿನಲ್ಲಿ ಕಂಡುಬರುತ್ತದೆ.

- ಇತ್ತೀಚಿನ ದಿನಗಳಲ್ಲಿ ಪುರುಷ ಪ್ರಧಾನ ಧೋರಣೆಗಳು ಬದಲಾಗಿ ಪುರುಷನ ವರ್ತನೆಯಲ್ಲಿ ಮತ್ತು ಸ್ತ್ರೀಯರ ಮನೋಭಾವನೆಗಳಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಕಥಾವಸ್ತುವಾಗಿ ಪರಿಗಣಿಸಿರುವುದು ಕಂಡುಬರುತ್ತದೆ. ಹೆಂಡತಿ ಯಾವಾಗಲೂ ಗಂಡನ ಜೊತೆಯಲ್ಲೇ ಇರಬೇಕು, ವಿದ್ಯಾಭ್ಯಾಸ ನಿಲ್ಲಿಸಿ ಮನೆಗಷ್ಟೇ ಸೀಮಿತವಾದ ಜೀವನ ನಡೆಸಬೇಕು ಎಂಬ ನಿಲುವು ಬದಲಾಗುತ್ತಿರುವುದನ್ನು ಮಹಿಳಾ ಸಾಹಿತ್ಯ ಗುರುತಿಸಿರುವುದು ತಿಳಿಯುತ್ತದೆ. ಪುರುಷರು ತಮ್ಮ ಯೋಚನಾ ಲಹರಿಗಳನ್ನು, ಸ್ತ್ರೀ ದೃಷ್ಟಿಕೋನವನ್ನು ಬದಲಾಯಿಸಿಕೊಂಡು, ಹೆಣ್ಣಿನ ವ್ಯಕ್ತಿತ್ವಕ್ಕೆ ಬೆಲೆಕೊಟ್ಟು, ಇಬ್ಬರೂ ಅರಿತು ಬಾಳಿದರೆ ಬಾಳು ಸಮಾನತೆಯಿಂದ ಕೂಡಿರುತ್ತದೆ ಎಂಬ ಅಂಶ ಕಂಡುಬರುತ್ತದೆ.

- ಮೂಢನಂಬಿಕೆಗಳು, ಕಂದಾಚಾರಗಳು ಹೆಣ್ಣಿನ ಬದುಕು ಕಟ್ಟುವ ಮುಂಚೆಯೇ ಸಂಕುಚಿತವಾಗುವ, ಪರಿಣಾಮವಾಗಿ ಸ್ವಂತ ಜೀವನ ತ್ಯಜಿಸಿ ಬಾಳಬೇಕಾದ ಪರಿಸ್ಥಿತಿಯಲ್ಲಿ ಹೆಣ್ಣು ಇರುವ ಕಥಾವಸ್ತುವನ್ನು ಬಳಸಿರುವುದು ತಿಳಿಯುತ್ತದೆ. ಇದರ ಜೊತೆಯಲ್ಲಿಯೇ ಮೂಢನಂಬಿಕೆಗಳನ್ನು ಬಿಟ್ಟು ಹೊಸ ಜೀವನ ಕಟ್ಟಿಕೊಳ್ಳುವ ಹೆಣ್ಣಿನ ಜೀವನದ ಕಥಾವಸ್ತು ಕೂಡ ಕಂಡುಬರುತ್ತದೆ. ಈ ಬದಲಾವಣೆಯಲ್ಲಿ ವಿದ್ಯೆಯ ಮಹತ್ವ ತಿಳಿದುಬರುತ್ತದೆ, ಜೊತೆಗೆ ವಿಧಿ, ಹಣೆಬರಹ, ನಂಬಿಕೆಗಳು ಹೆಣ್ಣಿನ ಬಾಳಿನ ಸಂತೋಷವನ್ನು ಕಸಿದುಕೊಂಡಿರುವುದು ಕಂಡುಬರುತ್ತದೆ. ವಿಧವೆಯಾದ ಹೆಣ್ಣು ಗಂಡ ಕಟ್ಟಿದ ಮೂರು ಗಂಟುಗಳಿಗೆ ತನ್ನ ಜೀವನವನ್ನೆಲ್ಲಾ ಬಲಿ ಕೊಡಬೇಕಾಗಿಲ್ಲ ಎಂದು ಹೇಳುವುದು ವ್ಯಕ್ತಿತ್ವದ ಬೆಳವಣಿಗೆಯ ದೃಷ್ಟಿಯಿಂದ ಗಮನಿಸಬೇಕಾದ ಅಂಶ.

- ಸಮಾಜದಲ್ಲಿ ಹೆಣ್ಣಿನ ಶೋಷಣೆ ಪುರುಷರಿಂದಷ್ಟೇ ಅಲ್ಲದೆ ಇತರರಿಂದಲೂ ನಡೆಯುವುದು ತಿಳಿದುಬರುತ್ತದೆ. ಸ್ವಾರ್ಥ ಸಾಧನೆಗೆ ತಂದೆತಾಯಂದಿರೇ ಮಗಳ ಬಾಳನ್ನು ಹಾಳು ಮಾಡುವುದು ಸಮಾಜದಲ್ಲಿ ಹೆಣ್ಣಿನ ಜೀವ ಮತ್ತು ಜೀವನಕ್ಕೆ ಯಾವುದೇ ಬೆಲೆಯಿಲ್ಲದಿರುವುದನ್ನು ತೋರಿಸುತ್ತದೆ.

- ಸಮಾಜದ ಪದ್ಧತಿಗಳು, ಮೂಢನಂಬಿಕೆಗಳು ಹೆಣ್ಣಿನ ಬಾಳಿನ ನೆಮ್ಮದಿಯನ್ನು ಹಾಳುಮಾಡಿ, ನಿರಾಶಾ ಬದುಕನ್ನು ಸೃಷ್ಟಿಸುವ ರೀತಿಯನ್ನು ಕಥಾವಸ್ತುವಾಗಿ ತೆಗೆದುಕೊಂಡು ಹೆಣ್ಣಿನ ಬಾಳು

ಹಾಳಾಗುವ ಸನ್ನಿವೇಶ ಕಂಡುಬರುತ್ತದೆ. ಗಂಡುಮಗುವಿಗೆ ಬಾಳು ರೂಪಿಸಲು ಹೆಣ್ಣನ್ನು ಮದುವೆ ಮಾಡಿಕೊಡಲು ಪ್ರಯತ್ನಿಸುವುದು ನಿಜವಾದ ಅರ್ಥದಲ್ಲಿ ಹೆಣ್ಣು ಮಾರಾಟವಾಗುತ್ತಿದ್ದಾಳೆ ಎಂಬ ಸಂದೇಶವನ್ನು ತಿಳಿಸುತ್ತದೆ.

- ಪುರುಷ ಸಂತಾನವೇ ಬಹಳ ಮುಖ್ಯ ಎಂದು ಹುಟ್ಟಿದ ಹೆಣ್ಣು ಮಗುವನ್ನು ಕಡೆಗಾಣಿಸುವ, ಗಂಡು ಸಂತಾನಕ್ಕಾಗಿ ಮರುಮದುವೆ ಮಾಡಲು ಪ್ರಯತ್ನಿಸುವ ಸಮಾಜದ ರೀತಿಗಳು ಕಂಡುಬಂದಿವೆ. ಇಂತಹ ಸಂದರ್ಭದಲ್ಲಿ ಹೆಣ್ಣಿನ ಮನಸ್ಸಿನ ಭಾವನೆಗಳಿಗೆ ಯಾವುದೇ ಬೆಲೆ ಕೊಡದ ಸಮಾಜದ ನಿಲುವು ಕಂಡುಬರುತ್ತದೆ. ಆದರೆ ಎರಡನೇ ಹೆಂಡತಿಯಾಗಿ ಬರಲು ಒಪ್ಪದ ಹೆಣ್ಣು ತಾನು ಪ್ರೀತಿಸಿದ ಹುಡುಗನ ಜೊತೆ ಹೋಗುವುದು ಹೆಣ್ಣಿನ ಬದಲಾದ ಮನಸ್ಥಿತಿಯನ್ನು ತೋರಿಸುತ್ತದೆ.

- ಜಾತಿಗಳ ನಡುವಿನ ಅಸಮಾನತೆ, ಮಾನವೀಯತೆಯನ್ನು ಮರೆಸಿ ಅದರ ಪರಿಣಾಮ ಹೆಣ್ಣಿನ ಮೇಲೆ ಘೋರವಾಗಿರುವ ಅಂಶ ತಿಳಿದುಬರುತ್ತದೆ. ಮೇಲ್ಜಾತಿಯ ಮುದುಕನಿಗೆ ಕುಡಿಯಲು ನೀರು ಕೊಟ್ಟಿದ್ದು ತಪ್ಪಾಯಿತೆಂದು ಹೆಣ್ಣಿನ ಮೇಲೆ ಅತ್ಯಾಚಾರ ಮಾಡಿ, ಗಂಡನನ್ನು ಹಿಂಸಿಸಿ ದುರಂತಕ್ಕೀಡು ಮಾಡುವ ಸಮಾಜದ ಕ್ರೌರ್ಯ ತಿಳಿದುಬರುತ್ತದೆ.

- ಸಂಪ್ರದಾಯಗಳಿಗೆ ಬದ್ಧವಾದ ಹಿರಿಯ ತಲೆಮಾರು ಹೆಣ್ಣನ್ನು ಅಧೀನದಲ್ಲಿಡಬೇಕು ಎಂದು ಯೋಚಿಸಿದರೆ, ಇತ್ತೀಚಿನ ಪೀಳಿಗೆ ಹೆಣ್ಣು ಸಮಾನಳು, ಅವಳಿಗೂ ಅವಳಿಷ್ಟದಂತೆ ಬದುಕಲು ಅವಕಾಶ ಮಾಡಿಕೊಡಬೇಕು ಎಂದು ಯೋಚಿಸುವ ಎರಡು ಭಿನ್ನನೆಲೆಗಳ ಮನಸ್ಸುಗಳಲ್ಲಿ ಹೆಣ್ಣಿನ ಸ್ಥಾನವನ್ನು ಚರ್ಚಿಸಿರುವುದು ತಿಳಿಯುತ್ತದೆ. ಕಟ್ಟುಕಟ್ಟಳೆಗಳು ಮಾನವನ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಮೊಟಕು ಮಾಡಿ ವ್ಯಕ್ತಿತ್ವ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತವೆ, ಹಾಗಾಗದೆ ಬೇರುಗಳ ರೀತಿ ಆಹಾರ ದೊರಕಿಸಿಕೊಟ್ಟು, ಸೂಕ್ತ ಮಾರ್ಗದರ್ಶನದಿಂದ ಚಿಗುರು ಸ್ವಾಭಾವಿಕವಾಗಿ ಬೆಳೆಯಲು ಬಿಡಬೇಕು ಎಂಬ ಅಂಶ ತಿಳಿದುಬರುತ್ತದೆ.

- ಧರ್ಮದ ದುರ್ಬಳಕೆಯಿಂದ ಶೋಷಣೆಗೀಡಾದ ಹೆಣ್ಣು ಧರ್ಮ ಎಂದರೇನು ಎಂಬ ಪ್ರಶ್ನೆ ಕೇಳುವುದು ಮಹಿಳೆಯರ ಚಿಂತನೆಯಲ್ಲಿ ಆಗುತ್ತಿರುವ ಬದಲಾವಣೆಯನ್ನು ತೋರಿಸುತ್ತದೆ. ಪುರುಷನಿಗೊಂದು, ಸ್ತ್ರೀಯರಿಗೊಂದು ಧರ್ಮ ಇರುತ್ತದೆಯೇ, ಮಕ್ಕಳನ್ನು ಹೆತ್ತು ಹೊತ್ತು ಸಾಕಿದ ತಾಯಿಗೇ ಮಕ್ಕಳ ಮೇಲೆ ಅಧಿಕಾರವಿಲ್ಲ ಎಂದರೆ ಏನೂ ಮಾಡದ ಪುರುಷನಿಗೆ

ಹೇಗೆ ಅಧಿಕಾರ ಬರುತ್ತದೆ ಎಂದು ಕೇಳುವುದು ಸ್ತ್ರೀ ಜಾಗೃತಳಾಗುತ್ತಿರುವ ಸೂಚನೆಯನ್ನು ಕೊಡುತ್ತದೆ.

- ಸಾಮಾಜಿಕ ನೆಲೆಯ ಕಥೆಗಳು ವಿವಿಧ ಸಾಮಾಜಿಕ ವಿಷಯ, ಸನ್ನಿವೇಶಗಳನ್ನು ಕಥಾವಸ್ತುವಾಗಿ ಬಳಸಿ ಸ್ತ್ರೀಯರ ಸಾಮಾಜಿಕ ಜೀವನದಲ್ಲಿನ ಶೋಷಣೆ, ಅನ್ಯಾಯಗಳನ್ನು ಚಿತ್ರಿಸಿರುವುದು ಕಂಡುಬರುತ್ತದೆ.

- ಪುರುಷಾಧಿಪತ್ಯದ ಕುಟುಂಬದಲ್ಲಿ ಹೆಣ್ಣು ಅನುಭವಿಸುವ ನೋವು, ಲಿಂಗತಾರತಮ್ಯದ ಪರಿಣಾಮ, ಹೆಣ್ಣಿನ ಅಸಹಾಯಕತೆ ಮುಂತಾದ ವಸ್ತುಗಳು ಕಥಾವಸ್ತುಗಳಾಗಿ ಬಳಕೆಯಾಗಿರುವುದು ಕಂಡುಬರುತ್ತದೆ.

- ಹೆಣ್ಣು ಹಿಂಸೆ, ಅನ್ಯಾಯ, ದೌರ್ಜನ್ಯಗಳಿಂದ ಪಾರಾಗಲು ಧೈರ್ಯದಿಂದ ಕುಟುಂಬವನ್ನು ತೊರೆದಾದರೂ ತನ್ನ ಜೀವನ ಸರಿಪಡಿಸಿಕೊಳ್ಳಬೇಕು ಎಂದು ಮಹಿಳಾ ಸಾಹಿತಿಗಳು ತಿಳಿಸಿರುವುದು ಕಂಡುಬರುತ್ತದೆ.

- ಬಡವ, ಮಧ್ಯಮ ಮತ್ತು ಶ್ರೀಮಂತ ಕುಟುಂಬ ಯಾವುದೇ ಆದರೂ ಮಹಿಳೆಯರ ಮೇಲಿನ ಅನ್ಯಾಯ, ದೌರ್ಜನ್ಯ ಒಂದೇ ತೆರನಾಗಿರುವುದು ತಿಳಿದುಬರುತ್ತದೆ.

- ಮದುವೆಯ ನಂತರ ಹೆಣ್ಣು ಕುಟುಂಬದೊಳಗೆ ಬಂಧಿಯಾಗಿ ತನ್ನ ಕ್ರಿಯಾಶಕ್ತಿಯನ್ನು ಕಳೆದುಕೊಳ್ಳುವ ಬದಲು ತನ್ನತನವನ್ನು ಉಳಿಸಿಕೊಳ್ಳಬೇಕೆಂದು ತಿಳಿಯುತ್ತದೆ.

- ಬದುಕಿನ ಆಧಾರವಿಲ್ಲದೆ, ಗಂಡನಿಂದ ತಿರಸ್ಕರಿಸಲ್ಪಟ್ಟು ತಂದೆಯ ಮನೆಯಲ್ಲೇ ಉಳಿದ ಹೆಣ್ಣು ಕುಟುಂಬದ ತಾತ್ಸಾರಕ್ಕೆ ಒಳಗಾಗಿ ತನ್ನ ಅಸಹಾಯಕತೆ ಮತ್ತು ದುಃಖವನ್ನು ಮರೆಯಲು ಮನೋಸ್ಥಿತಿಯನ್ನೇ ಬದಲಾಯಿಸಿಕೊಳ್ಳುವ ಚಿತ್ರಣ ಕಂಡುಬರುತ್ತದೆ.

- ಪುರುಷನಿಂದ ಹೆಣ್ಣಿಗೆ ಆಗುವ ಮೋಸ, ಅವಮಾನಗಳು ಮಿತಿಮೀರಿದಾಗ ಹೆಣ್ಣು ಅದರ ವಿರುದ್ಧ ಹೋರಾಡಬೇಕು ಮತ್ತು ಸ್ವಾಭಿಮಾನಕ್ಕೆ ಧಕ್ಕೆಯಾದಾಗ ಅದನ್ನು ಪ್ರತಿಭಟಿಸಿ ಸಿಡಿದೇಳಲು ಹೆಣ್ಣು ತಯಾರಾಗಬೇಕು ಎಂಬ ಅಂಶ ತಿಳಿದುಬರುತ್ತದೆ.

- ಹೆಣ್ಣಿಗೆ ಆಗುವ ಅನ್ಯಾಯಕ್ಕೆ, ಮೋಸಕ್ಕೆ ಗಂಡಸರಷ್ಟೇ ಮಹಿಳೆಯರೂ ಕಾರಣರಾಗುತ್ತಾರೆ, ಗಂಡಿನ ಸ್ವಾರ್ಥದಂತೆ ಹೆಣ್ಣಿನ ಸ್ವಾರ್ಥವೂ ಹೆಣ್ಣಿನ ಶೋಷಣೆ, ಮೋಸಕ್ಕೆ ಕಾರಣವಾಗುತ್ತದೆ ಎಂದು ಕಂಡುಬರುತ್ತದೆ.

- ಪುರುಷಾಧೀನದಲ್ಲಿಯೇ ಇರುವ ಹೆಣ್ಣು ಅವನಿಂದ ಎಷ್ಟೇ ವಂಚನೆ, ಮೋಸ ಆದರೂ ಗುಲಾಮಳ ರೀತಿ ಜೀವಿಸದೆ ಬೇರೆ ದಾರಿಯಿಲ್ಲದಾಗ ಸಾವೇ ಅಂತಿಮ ಎಂದು ನಿರ್ಧರಿಸುವ ಹಂತಕ್ಕೆ ಬಂದು ಹೆಣ್ಣು ಪುರುಷನಿಲ್ಲದೆಯೂ ಬಾಳಬಲ್ಲೆ ಎಂದು ತೀರ್ಮಾನಿಸುವುದು ಕಾಣುತ್ತದೆ.

- ಅರ್ಥವಿಲ್ಲದ ಸಂಪ್ರದಾಯಗಳ ಆಚರಣೆ, ಹೆಣ್ಣಿನ ಬಾಳಿನಲ್ಲಿ ಬಿರುಗಾಳಿಯನ್ನೆಬ್ಬಿಸಿ ಜೀವನವನ್ನು ಹಾಳುಮಾಡುತ್ತದೆ. ಆದರೆ ಗಂಡಸರು ಬದಲಾಗಿ, ಸ್ತ್ರೀಯರು ಕನಿಷ್ಟ ತಮ್ಮ ಗಂಡಂದಿರೊಡನಾದರೂ ತಮ್ಮ ಸ್ವಾತಂತ್ರ್ಯವನ್ನು ಅನುಭವಿಸಿದರೆ ಸಮಾನತೆಯ ಬಾಳು ಸಿಗುತ್ತದೆ ಎಂಬ ಅಂಶ ಕಂಡುಬರುತ್ತದೆ.

- ಸಮಾಜ ಮತ್ತು ಕುಟುಂಬದಲ್ಲಿ ಹೆಣ್ಣಿನ ಅಸ್ತಿತ್ವವನ್ನು, ವ್ಯಕ್ತಿತ್ವವನ್ನು ಕಿರಿದು ಮಾಡಿ ಅವಳ ಸ್ವಾಭಿಮಾನವನ್ನೇ ಅಲ್ಲಾಡಿಸುವ ಪರಿಸ್ಥಿತಿಗಳನ್ನು ಕಥಾವಸ್ತುವಾಗಿ ಬಳಸಿರುವುದು ತಿಳಿದುಬರುತ್ತದೆ.

- ಸ್ವಾಭಿಮಾನಿಯಾದ ಹೆಣ್ಣೊಬ್ಬಳು ಗಂಡನ ಅಧಿಕಾರವನ್ನು ಧಿಕ್ಕರಿಸಿ, ಸ್ವಾವಲಂಬಿಯಾಗಿ, ಪುರುಷನಿಗೆ ಸಮನಾಗಿ ಬದುಕುವ ನಿರ್ಧಾರವನ್ನು ತೆಗೆದುಕೊಳ್ಳುವ ಹೆಣ್ಣಿನ ಚಿತ್ರಣ ಕಂಡುಬರುತ್ತದೆ.

- ಸ್ತ್ರೀಯರನ್ನು ಕುರಿತ ಪುರುಷರ ನೋಟ ಪರಿಭಾವನೆಗಳು ಮುಳ್ಳುಗಳ ರೀತಿ ಹೆಣ್ಣನ್ನು ಚುಚ್ಚುತ್ತವೆ. ಪುರುಷರ ಈ ಸ್ವಭಾವ ಬದಲಾಗಿ ಹೆಣ್ಣನ್ನು ಸಮಾನವಾಗಿ, ಸಹಜೀವಿಯಾಗಿ ಕಾಣಬೇಕೆಂಬ ಅಂಶ ತಿಳಿದುಬರುತ್ತದೆ.

- ಹೆಣ್ಣು ಸಮಾಜದಲ್ಲಿರುವ ಆಚರಣೆಗಳನ್ನೇ ಗುರಾಣಿಯಾಗಿ ಬಳಸಿ ತನ್ನ ವ್ಯಕ್ತಿತ್ವವನ್ನು ಉಳಿಸಿಕೊಳ್ಳಬಹುದು ಎಂದು ತಿಳಿದುಬರುತ್ತದೆ.

- ಹೆಣ್ಣೊಬ್ಬಳು ತನ್ನ ಬದುಕನ್ನು ಕಟ್ಟಿಕೊಳ್ಳುವ ಪ್ರಯತ್ನದಲ್ಲಿ ಯಶಸ್ವಿಯಾಗುತ್ತಿರುವಾಗ ಅದನ್ನು ಸಹಿಸದ ಪುರುಷ ಸಮಾಜ ಅವಳ ಬದುಕನ್ನೇ ನುಂಗಿ ಹಾಕಿದ ಚಿತ್ರಣ ಕಂಡುಬರುತ್ತದೆ.

- ಪುರುಷನಿಗೆ ಬೇಕಾದಂತೆ ಹೆಣ್ಣನ್ನು ರೂಪಿಸಲು ಪುರುಷ ಪ್ರಧಾನ ಸಮಾಜ ಪುರಾಣ ಪಾತ್ರಗಳನ್ನು ಬಳಸಿಕೊಂಡಿರುವುದು ಮತ್ತು ಅಲ್ಲಿಯೂ ಸ್ತ್ರೀ–ಪುರುಷರ ನಡುವೆ ಅಸಮಾನತೆ ಮೆರೆದಿರುವುದು ಕಂಡುಬರುತ್ತದೆ. ಪುರುಷನಿಗೆ ಅಧೀನವಾಗಿರುವ ಪುರಾಣದ ಸ್ತ್ರೀಯರನ್ನು

ಭಿನ್ನ ನೆಲೆಯಲ್ಲಿ ತೋರಿಸಿ ಅವಳನ್ನು ಒಂದು ಸ್ವತಂತ್ರ ವ್ಯಕ್ತಿಯಾಗಿ ಚಿತ್ರಿಸಿರುವುದು ಕಾಣುತ್ತದೆ. ಹೆಣ್ಣು ಪರಿಸ್ಥಿತಿಗಳಿಗೆ ಹೆದರದೆ ಒಬ್ಬಳೇ ಪೋಷಕಗಳಾಗಿ ಮಗುವನ್ನು ಬೆಳೆಸಿದ ಚಿತ್ರಣವು ಆಧುನಿಕ ಮನೋಭಾವದ ಹೆಣ್ಣಿನ ಚಿತ್ರಣವನ್ನು ಕೊಡುತ್ತದೆ. ಪುರಾಣ ಸಾಹಿತ್ಯ ಪುರುಷ ಹಿರಿಮೆಯನ್ನು ಎತ್ತಿ ಹಿಡಿದು ಸ್ತ್ರೀವಿರೋಧಿತನವನ್ನು ಪ್ರದರ್ಶಿಸಿರುವ ರೀತಿ ಕಾಣುತ್ತದೆ. ಪುರಾಣಗಳಲ್ಲಿ ಸ್ತ್ರೀ-ಪುರುಷರ ನಡುವಿನ ತಾರತಮ್ಯ ಗುರ್ತಿಸಿದ ಮಹಿಳಾ ಸಾಹಿತ್ಯ, ಸಾಹಿತ್ಯದ ಮೂಲಕವೇ ಹೆಣ್ಣು ಸ್ವಾಭಿಮಾನಿ ಧೈರ್ಯದಿಂದ ಜಗತ್ತನ್ನು ಎದುರಿಸಬಲ್ಲಳು ಎಂದು ತೋರಿಸುತ್ತದೆ. ಪುರುಷನ ತಪ್ಪುಗಳನ್ನು ಪ್ರಶ್ನಿಸದೆ, ಅವನನ್ನು ಅವಮಾನಿಸದೆ ಹೆಣ್ಣು ತನ್ನ ವ್ಯಕ್ತಿತ್ವವನ್ನು ಗಟ್ಟಿಗೊಳಿಸಿಕೊಂಡು ಪುರುಷನಿಗೆ ಸಮಾನ ನೆಲೆಯಲ್ಲಿ ನಿಲ್ಲುವುದು ಕಾಣುತ್ತದೆ. ಪುರಾಣದ ಸ್ತ್ರೀ-ಪಾತ್ರಗಳು ಅಧೀನವೂ, ಪರಾವಲಂಬಿಯೂ ಆದರೆ ಅದೇ ಸ್ತ್ರೀ-ಪಾತ್ರಗಳು ಮಹಿಳಾ ಸಾಹಿತ್ಯದಲ್ಲಿ ಪುರುಷನಿಗೆ ಸಮನಾಗಿ ನಿಂತು ಧೈರ್ಯದಿಂದ ಸ್ವಾಭಿಮಾನದಿಂದ ತಮ್ಮ ಅಸ್ತಿತ್ವವನ್ನು ಪ್ರಕಟಿಸುವುದು ಕಂಡುಬರುತ್ತದೆ.

- ಮಹಿಳೆ ತನ್ನ ಅವಲಂಬನೆ, ಅಸಹಾಯಕತೆಗಳಿಂದ ಹೊರಬಂದು ಪುರುಷನ ಅವಲಂಬನೆಯಿಲ್ಲದೆ ಸ್ವಾವಲಂಬಿಯಾಗಿ ಬಾಳುವುದನ್ನು ಕಲಿಯಬೇಕು ಎಂದು ತಿಳಿದುಬರುತ್ತದೆ.

- ಪುರುಷರಿಂದ ಲೈಂಗಿಕ ದೌರ್ಜನ್ಯಕ್ಕೊಳಗಾದ ಹೆಣ್ಣು ಸಮಾಜದ ನಿಂದನೆ, ಅಪಮಾನಗಳಿಗೆ ಬಲಿಯಾಗುವ ಸಾಧ್ಯತೆಯೇ ಹೆಚ್ಚು, ಆದರೆ ಇಂತಹ ಪರಿಸ್ಥಿತಿಯನ್ನು ಎದುರಿಸಿ ತನ್ನ ಬದುಕನ್ನು, ವ್ಯಕ್ತಿತ್ವವನ್ನು ಕಟ್ಟಿಕೊಳ್ಳಬೇಕು ಎಂಬ ಕಥಾಚಿತ್ರಣ ಕಂಡುಬರುತ್ತದೆ.

- ಆಧುನಿಕ ಹೆಣ್ಣು ತನ್ನತನವನ್ನು ಉಳಿಸಿಕೊಳ್ಳಲು, ತನಗಾದ ದ್ರೋಹವನ್ನು ಸರಿಪಡಿಸಿಕೊಂಡು ಸ್ವಗೌರವವನ್ನು ಕಾಪಾಡಿಕೊಳ್ಳಲು ತನ್ನ ಗಂಡನನ್ನೇ ತ್ಯಜಿಸುವ ಚಿತ್ರಣ ಅವಳ ಬದಲಾದ ಮನೋಸ್ಥೈರ್ಯ, ಚಿಂತನೆ, ಧೈರ್ಯವನ್ನು ತಿಳಿಸುತ್ತವೆ.

- ಪುರುಷನ ಅನ್ಯಾಯ, ಅಕ್ರಮಗಳಿಂದ ಮಾನಸಿಕವಾಗಿ, ದೈಹಿಕವಾಗಿ ಶೋಷಣೆಗೊಳಗಾದ ಹೆಣ್ಣು, ವಿದ್ಯೆ ಮತ್ತು ದುಡಿಯುವ ಅವಕಾಶಗಳಿಂದ ಪುರುಷನ ಅಧೀನತೆಯಿಂದ ಹೊರಬಂದು ಸ್ವಾವಲಂಬಿಯಾಗಿ ಜೀವಿಸಬಹುದು ಎಂಬ ಚಿತ್ರಣ ಕಂಡುಬರುತ್ತದೆ.

- ದೌರ್ಜನ್ಯ, ಶೋಷಣೆಗಳು ಹೆಣ್ಣನ್ನು ಅಧೀನದಲ್ಲಿಟ್ಟುಕೊಳ್ಳಲು ಪುರುಷನು ಬಳಸುವ ವಿವಿಧ ಮಾರ್ಗಗಳು; ಈ ಮಾರ್ಗಗಳ ಮೂಲನೆಲೆ ಸ್ತ್ರೀ-ಪುರುಷರ ನಡುವಿನ ಅಸಮಾನತೆ ಎಂದು

ತಿಳಿದುಬರುತ್ತದೆ. ಸ್ತ್ರೀ-ಪುರುಷರಿಬ್ಬರೂ ಪ್ರಾಕೃತಿಕವಾಗಿ ಸಮಾನರು, ಆದರೆ ಸಮಾಜ ಸೃಷ್ಟಿಸಿರುವ ಅಸಮಾನತೆ ಮತ್ತು ಪುರುಷರ ಅಧಿಕಾರದಾಹ ಸ್ತ್ರೀಯರನ್ನು ಅಧೀನರನ್ನಾಗಿ ಮಾಡಿಕೊಂಡು ಅವಳ ಸ್ವಾತಂತ್ರ್ಯವನ್ನು ಇಲ್ಲವಾಗಿಸಿ ಅಸಮಾನತೆಯನ್ನುಂಟು ಮಾಡಿರುವುದು ತಿಳಿಯುತ್ತದೆ.

- ಮಹಿಳೆಯ ಜೀವನಕ್ಕೆ ಸ್ವಾತಂತ್ರ್ಯ ಮತ್ತು ವ್ಯಕ್ತಿತ್ವ ಎರಡೂ ಅವಶ್ಯಕ, ಇವೆರಡನ್ನೂ ಪಡೆಯಲು ಸಮಾನತೆ ಅವಶ್ಯಕ. ಸಮಾನತೆ ಮತ್ತು ಸ್ವಾತಂತ್ರ್ಯ ಒಟ್ಟಿಗೆ ಇದ್ದರೆ ವ್ಯಕ್ತಿತ್ವವೃದ್ಧಿಗೆ ಸಹಾಯಕವಾಗಿ ಹಕ್ಕುಗಳನ್ನು ದೊರಕಿಸಿಕೊಡುತ್ತವೆ ಎಂದು ತಿಳಿಯುತ್ತದೆ.

- ಆಧುನಿಕ ಸಮಾಜವೂ ಸ್ತ್ರೀಗೆ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ನೀಡಿಲ್ಲ. ಮಹಿಳೆಗೆ ವಿದ್ಯೆ, ಶಿಕ್ಷಣ, ಉದ್ಯೋಗ ದೊರೆತರೂ ಲಿಂಗತಾರತಮ್ಯವೇನೂ ಕೊನೆಯಾಗಿಲ್ಲ ಎಂದು ಕಂಡುಬರುತ್ತದೆ.

- ಸಮಾಜದಲ್ಲಿ ಮನುಷ್ಯ ರೂಪುಗೊಳ್ಳಲು ಸಾಮಾಜಿಕ ಅಂಶಗಳು ಕಾರಣವಾಗುತ್ತವೆ. ಈ ಹಿನ್ನೆಲೆಯಲ್ಲಿ ಸ್ತ್ರೀ-ಪುರುಷರ ಜೀವನ ರೂಪುಗೊಳ್ಳುವಲ್ಲಿ ಸಮಾಜದಲ್ಲಿರುವ ಲಿಂಗತಾರತಮ್ಯತೆ ತನ್ನ ಪ್ರಭಾವ ಬೀರಿರುವುದು ತಿಳಿದುಬರುತ್ತದೆ.

- ಪುರುಷಾವಲಂಬಿ ಜೀವನ ಹೆಣ್ಣನ್ನು ಸಂಕೋಲೆಯೊಳಗೆ ಸಿಲುಕಿಸುತ್ತದೆ. ಇಂತಹ ಸಂಕೋಲೆಯಿಂದ ಹೊರಬರಲು ಹೆಣ್ಣಿಗೆ ವಿದ್ಯೆ, ಉದ್ಯೋಗಾವಕಾಶಗಳು ಅವಶ್ಯಕ ಎಂದು ತಿಳಿದುಬರುತ್ತದೆ.

- ಹೆಣ್ಣಿನ ಶೋಷಣೆ, ಗುಲಾಮಿತನವನ್ನು ನಿರ್ಮೂಲನೆ ಮಾಡಿ ಅವಳಿಗೆ ಸ್ವಾತಂತ್ರ್ಯ, ಸಮಾನತೆಯನ್ನು ದೊರಕಿಸಬೇಕೆಂದು ಹೊರಟ ಹೆಣ್ಣು ಪುರುಷರ ಗೋಮುಖ ನೀತಿಗೆ ಬಲಿಯಾಗುವುದು ಕಂಡುಬರುತ್ತದೆ. ಮಹಿಳೆಯರ ಉದ್ಧಾರವೇ ತಮ್ಮ ಆದ್ಯತೆ ಎಂದು ಹೇಳುವ ಪುರುಷರು ಅವಳನ್ನು ಅಧೀನದಲ್ಲಿ ಇಡಲು ಪ್ರಯತ್ನಿಸುವ ನಡೆಗಳು ತಿಳಿಯುತ್ತವೆ.

- ಪುರುಷರು ಹೆಣ್ಣಿನ ಉದ್ಧಾರ, ಸ್ವಾತಂತ್ರ್ಯ, ಸಮಾನತೆಯ ಬಗ್ಗೆ ವಾದ-ಹೋರಾಟ ಮಾಡುತ್ತಾ, ಅವಳನ್ನು ಲೈಂಗಿಕ ದೃಷ್ಟಿಯಿಂದ ನೋಡುತ್ತಾರೆಯೇ ಹೊರತು ಅವಳಿಗೆ ಸ್ವಾತಂತ್ರ್ಯ, ಸಮಾನತೆ ಕೊಡುವ ನಿಜವಾದ ಧ್ಯೇಯ ಇರುವುದಿಲ್ಲ ಎಂಬುದು ತಿಳಿಯುತ್ತದೆ. ವ್ಯಕ್ತಿ ಸ್ವಾತಂತ್ರ್ಯ ಬಹಳ ಮುಖ್ಯ ಎಂದು ಹೇಳುವ ಗಂಡಸರು ತಮ್ಮ ಮನೆಯ ಸ್ತ್ರೀಯರ ವ್ಯಕ್ತಿ ಸ್ವಾತಂತ್ರ್ಯವನ್ನು ಹರಣ ಮಾಡಿ ಗೃಹಬಂಧನದಲ್ಲಿಡುವುದು ಕಂಡುಬರುತ್ತದೆ.

– ಗ್ರಾಮೀಣ ಪ್ರದೇಶದಲ್ಲಿ ಆಧುನಿಕತೆಯ ಸಂಕೇತವಾಗಿ ಬಂದ ಸಿನಿಮಾ ಟಾಕೀಸು ಅಲ್ಲಿನ ಸ್ತ್ರೀಯರ ಜೀವನಕ್ರಮ, ಯೋಚನಾ ಲಹರಿಯನ್ನು ಬದಲಾಯಿಸುವ ಮತ್ತು ಅವರು ಅಲ್ಪ ಪ್ರಮಾಣದ ಆರ್ಥಿಕ ಸ್ವಾತಂತ್ರ್ಯವನ್ನು ಪಡೆಯುವ ಚಿತ್ರಣ ಕಂಡುಬರುತ್ತದೆ. ಸಿನಿಮಾ ನೋಡಲು ಹೊರಡುವ ಪ್ರಯತ್ನಗಳೇ ಮಹಿಳೆಯರಿಗೆ ಅವರ ಸ್ಥಾನಮಾನ, ಅಧಿಕಾರ, ಹಣಕಾಸಿನ ಪರಿಸ್ಥಿತಿ, ಸ್ವಂತ ತೀರ್ಮಾನ ತೆಗೆದುಕೊಳ್ಳಲು ಅವಕಾಶಗಳನ್ನು ಕಲ್ಪಿಸುವ ಪ್ರಕ್ರಿಯೆ ಹೆಣ್ಣು ಸ್ವಾತಂತ್ರ್ಯ ಗಳಿಸಲು ಸಹಾಯವಾಗುವ ಅಂಶ ತಿಳಿದುಬರುತ್ತದೆ. ಸಮಾಜ ಹೆಣ್ಣಿನ ಅಸ್ತಿತ್ವವನ್ನು ಪುರುಷನೊಂದಿಗೆ ಗುರುತಿಸುವುದು ಸ್ತ್ರೀ-ಪುರುಷರ ನಡುವಿನ ಅಸಮಾನತೆಯನ್ನು ತೋರಿಸುತ್ತದೆ.

– ಪುರುಷ ಸಮಾಜ ಜೀವನ ಸಾಗಿಸಲು ಪ್ರಯತ್ನಿಸುತ್ತಿರುವ ಹೆಣ್ಣನ್ನು ಲೂಟಿ ಮಾಡಿ ಅಸಮಾನತೆಯನ್ನು ಸೃಷ್ಟಿಸುವುದು ಕಂಡುಬರುತ್ತದೆ.

– ಗಂಡನನ್ನು ಕಳೆದುಕೊಂಡ ಹೆಣ್ಣು ಬೇರೆ ಪುರುಷರನ್ನು ಪ್ರೀತಿಸಬಾರದು, ಪ್ರೀತಿಸಿದರೆ ಪುರುಷ ಸಮಾಜ ಆ ಹೆಣ್ಣಿನ ಜೀವವನ್ನು ತೆಗೆಯುತ್ತದೆ ಎಂದು ತೋರಿಸುತ್ತಾ, ಸಹಜವಾಗಿ ಪರಹೆಣ್ಣಿನ ಸಹವಾಸ ಮಾಡಿದ ಗಂಡಿಗೆ ಯಾವ ಶಿಕ್ಷೆಯಿಲ್ಲದಿದ್ದರೂ ವಯಸ್ಕ ವಿಧವೆ ಇನ್ನೊಬ್ಬ ಪುರುಷನನ್ನು ಪ್ರೀತಿಸಿದರೆ ಅವಳ ಜೀವವನ್ನೇ ತೆಗೆಯುವ ಪುರುಷ ಪ್ರಧಾನ ಸಮಾಜದ ಅಸಮಾನತೆಯ ನಿಲುವು ತಿಳಿದುಬರುತ್ತದೆ. ಈ ನಿಲುವಿಗೆ ಸ್ವಂತ ಮಕ್ಕಳೂ ಹೊರತಲ್ಲ, ಇಡೀ ಗಂಡು ಸಮುದಾಯವೇ ಅಸಮಾನತೆಯನ್ನು ಪೋಷಿಸುತ್ತದೆ ಎಂದು ತಿಳಿಯುತ್ತದೆ.

– ಮೇಲ್ವರ್ಗದ ಪುರುಷರು ಕೆಳವರ್ಗದ ಹೆಣ್ಣುಗಳ ಮೇಲೆ ನಡೆಸುವ ದೌರ್ಜನ್ಯ, ಅತ್ಯಾಚಾರಗಳು ಅವರನ್ನು ಸಮಾಜದ ಮುಖ್ಯವಾಹಿನಿಯಿಂದ ಹೊರಹಾಕುತ್ತವೆ. ಇಂತಹ ಹೆಣ್ಣುಗಳು 'ಇಟ್ಟುಕೊಂಡ' ಹೆಣ್ಣುಗಳಾಗಿ ತಮ್ಮ ಜೀವನವನ್ನು ಕತ್ತಲಿನಲ್ಲಿಯೇ ಕಳೆಯಬೇಕಾದ ಪರಿಸ್ಥಿತಿ ಸಮಾಜದಲ್ಲಿರುವುದು ತಿಳಿಯುತ್ತದೆ. ತಾನು ಅನುಭವಿಸಿದ ಕತ್ತಲಿನ ಬಾಳಿನಿಂದ ಹೊರನಡೆದು, ಮಗಳಿಗೆ ವಿದ್ಯಾಭ್ಯಾಸ ಕೊಡಿಸಿ ಅವಳ ಜೀವನವನ್ನು ಸುಧಾರಿಸಲು ಹೊರಟ ಹೆಣ್ಣಿನ ಚಿತ್ರಣ, ಹೆಣ್ಣು ಪುರುಷನಿಗೆ ಸಮನಾಗಿ ನಿಲ್ಲಲು ಮತ್ತು ಸ್ವತಂತ್ರವಾಗಿ ಬದುಕಲು ವಿದ್ಯೆ ಅತ್ಯವಶ್ಯಕ ಎಂಬುದನ್ನು ತೋರಿಸುತ್ತದೆ. ಕತ್ತಲೆಯಲ್ಲಿರುವ ಹೆಣ್ಣು ತನಗಾದ ಅನ್ಯಾಯವನ್ನು ಎದುರಿಸಿ, ಸ್ವತಂತ್ರವಾಗಿ ಸ್ವಾವಲಂಬಿಯಾಗಿ ಬದುಕಲು ಕಲಿತರೆ ಪುರುಷರ ದೌರ್ಜನ್ಯ, ಅಸಮಾನತೆಯನ್ನು ತೊಲಗಿಸಬಹುದು ಎಂದು ತಿಳಿಯುತ್ತದೆ.

- ಸಮಾಜದ ರೀತಿನೀತಿಗಳು ಸ್ತ್ರೀ–ಪುರುಷರಿಬ್ಬರಿಗೂ ಬೇರೆ ಬೇರೆಯಾಗಿದ್ದು, ಗಂಡುಹೆಣ್ಣಿನ ನಡುವೆ ತಾರತಮ್ಯವನ್ನು ಸೃಷ್ಟಿಸಿವೆ ಮತ್ತು ಈ ನಿಯಮಗಳ ಪಾಲನೆಯಲ್ಲಿ ಹೆಣ್ಣು ತನ್ನ ಬದುಕನ್ನು ಕಳೆದುಕೊಳ್ಳುತ್ತಿರುವ ಅಂಶ ತಿಳಿದು ಬರುತ್ತದೆ. ಎಲ್ಲ ತಿಳುವಳಿಕೆ, ವಿದ್ಯೆ, ಉದ್ಯೋಗ ಇದ್ದರೂ ಸಾಮಾಜಿಕ ನಿಯಮಗಳಿಗೆ ಒಳಗಾದ ಹೆಣ್ಣು ಜೀವನವನ್ನು ಎದುರಿಸಲು ಬೇಕಾದ ನಿರ್ಧಾರಗಳನ್ನು ತೆಗೆದುಕೊಳ್ಳಲು ವಿಫಲಳಾಗಿ ತನ್ನ ಜೀವ, ದೇಹ ಮತ್ತು ಮನಸ್ಸನ್ನು ತನ್ನದಲ್ಲದ ಬದುಕಿಗಾಗಿ ಇಡಬೇಕಾಗುತ್ತದೆ ಎಂದು ತಿಳಿದುಬರುತ್ತದೆ. ಹೆಣ್ಣಿಗೆ ವಿದ್ಯೆ ದೊರೆತರೆ ಸಾಲದು ತನ್ನ ಬದುಕನ್ನು ಕಟ್ಟಿಕೊಳ್ಳುವ, ನಿರ್ವಹಿಸುವ, ಸಂಪ್ರದಾಯಗಳಿಗೆ ಬಲಿಯಾಗದೆ, ಸ್ವಂತ ನಿರ್ಧಾರ, ಸ್ವಾವಲಂಬಿತನ, ವ್ಯಕ್ತಿತ್ವ ಬೆಳೆಸಿಕೊಂಡಾಗ ಅಸಮಾನತೆ ಹೋಗಿ ಸಮಾನತೆ ಬರುತ್ತದೆ ಎಂದು ಕಂಡುಬರುತ್ತದೆ.

- ಕುಟುಂಬ ವ್ಯವಸ್ಥೆಯಲ್ಲಿ ಸ್ತ್ರೀ–ಪುರುಷರ ಮಧ್ಯೆ ಅಗಾಧ ತಾರತಮ್ಯತೆ ಬೆಳೆದಿದ್ದು, ಹೆಣ್ಣನ್ನು ಪುರುಷಾಧೀನ ಮಾಡಲು ಸಹಕಾರಿಯಾಗಿರುವ ಅಂಶ ಮಹಿಳಾ ಸಾಹಿತ್ಯದಲ್ಲಿ ತಿಳಿದುಬರುತ್ತದೆ.

- ಕುಟುಂಬದಲ್ಲಿ ಪುರುಷನ ಸ್ವಾರ್ಥ, ದುರಾಸೆಗಳಿಗೆ ಬಲಿಯಾದ ಹೆಣ್ಣು ಅನಾಥಳಾಗುತ್ತಾಳೆಂದು ತಿಳಿಯುತ್ತದೆ. ಇದು ಸ್ತ್ರೀ–ಪುರುಷರ ನಡುವಿನ ಅಸಮಾನತೆಯಿಂದಾದ ಪರಿಣಾಮ. ಮನೆಯ ವಾತಾವರಣವೂ ಕೂಡ ಮಕ್ಕಳನ್ನು ಬೆಳೆಸುವುದರ ಮೇಲೆ ಪ್ರಭಾವ ಬೀರಿ ಸ್ತ್ರೀ–ಪುರುಷರ ನಡುವಿನ ಅಸಮಾನತೆಯನ್ನೇ ಕಲಿಸುತ್ತದೆ. ಅಸಮಾನತೆಯಿಂದ ಕೂಡಿದ ಸಮಾಜ ಹೆಣ್ಣಿನ ಆಯ್ಕೆ, ಅಭಿಪ್ರಾಯ, ಜೀವನ ಎಲ್ಲವನ್ನು ನಿರ್ಲಕ್ಷಿಸಿ, ಅವಳು ಗಂಡಿನ ಆಳಾಗಿ, ಜೀವನದ ಪ್ರತಿಹಂತದಲ್ಲೂ ಅವಲಂಬಿಯಾಗಿ ಅನಾಥಳಾಗಿರುವ ಮತ್ತು ಇದೇ ಕಾರಣಗಳಿಂದ ಅಸಮಾನತೆಗೆ ಬಿದ್ದಿರುವ ಅಂಶ ತಿಳಿಯುತ್ತದೆ.

- ಮಹಿಳೆ ಯಾವ ಆರ್ಥಿಕ ವರ್ಗಕ್ಕೆ ಸೇರಿದರೂ ಅವರು ಅನುಭವಿಸುವ ಅಸಹಾಯಕತೆ, ಅಸಮಾನತೆ, ವ್ಯವಸ್ಥೆಯ ಬಲಿಪಶುವಾಗುವ ರೀತಿ ಒಂದೇ ಆಗಿರುವುದು ತಿಳಿಯುತ್ತದೆ. ವಿದ್ಯಾವಂತ ಹೆಣ್ಣು, ಪುರುಷನ ದೌರ್ಜನ್ಯ, ಶೋಷಣೆ, ಹಿಂಸೆಗಳನ್ನು ವಿರೋಧಿಸುತ್ತಾ, ಸ್ತ್ರೀ–ಸಮಾನತೆಯನ್ನು ಕೇಳುತ್ತಿದ್ದ ಹೆಣ್ಣು, ಆರ್ಥಿಕವಾಗಿ ಸ್ವಾವಲಂಬಿಯಾದರೂ ಈ ಸಮಾಜದಲ್ಲಿ ಒಂಟಿಯಾಗಿ ಬಾಳಲು ಸಾಧ್ಯವಿಲ್ಲ ಎಂದು ಮರಳಿ ಪುರುಷಾಧೀನತೆಗೆ ಹೋಗುವ ಅಸಮಾನತೆಯ ಸಮಾಜ ಕಂಡುಬರುತ್ತದೆ.

– ಕುಟುಂಬದಲ್ಲಿನ ಅಸಮಾನತೆ ಸ್ತ್ರೀಯರ ಮೇಲೆ ಪುರುಷರ ದಬ್ಬಾಳಿಕೆಯನ್ನು ಹೇರುತ್ತದೆ. ಆದರೆ ಹೆಣ್ಣು ಇಂತಹ ದಬ್ಬಾಳಿಕೆ, ದೌರ್ಜನ್ಯಗಳನ್ನು ಪ್ರತಿಭಟಿಸಲಾಗದೆ ನೋಯುತ್ತಿರುತ್ತಾಳೆ. ಇಂತಹ ಹೆಣ್ಣು ತನ್ನ ಮೇಲೆ ದೌರ್ಜನ್ಯ ನಡೆಸಿದ ಪತಿಯಿಂದ ಬಿಡುಗಡೆ ಪುರುಷ ಪ್ರಧಾನ ಸಮಾಜದ ಅಂತ್ಯದಿಂದ ಮಾತ್ರ ಎಂದು ತಿಳಿದುಬರುತ್ತದೆ.

– ಸಮಾಜದಲ್ಲಿ ಜಾತಿಗಳ ಮಧ್ಯೆ ಇರುವ ಅಸ್ಪೃಶ್ಯತೆಯನ್ನು ಸ್ತ್ರೀ–ಪುರುಷರ ನಡುವಿನ ಅಸಮಾನತೆಗೆ ಹೋಲಿಕೆ ಮಾಡಿ ಹೆಣ್ಣನ್ನು ಅಸ್ಪೃಶ್ಯಳನ್ನಾಗಿ ಮಾಡಿರುವ ಅಂಶ ತಿಳಿದುಬರುತ್ತದೆ. ಹೆಣ್ಣಾದವಳು ಗಂಡನನ್ನೇ ಅನುಸರಿಸಬೇಕು ಎಂಬ ನೀತಿಯನ್ನು ಒಪ್ಪದೆ ಮನುಷ್ಯರಾಗಿ ಬಾಳಬೇಕು ಎಂಬ ಅಂಶ ಕಂಡುಬರುತ್ತದೆ. ಪುರುಷಪ್ರಧಾನ ಸಮಾಜ ಹೆಣ್ಣನ್ನು ಅಸ್ಪೃಶ್ಯಳನ್ನಾಗಿ ಮಾಡಿದ್ದು, ಇಂತಹ ಅಸ್ಪೃಶ್ಯತೆಯಿಂದ ಹೆಣ್ಣು ಬಿಡುಗಡೆಯಾಗಿ ಮಾನವಳಾಗಿ ಸಮಾನ ಅವಕಾಶ, ಸಮಾನ ಬಾಳನ್ನು ಹೊಂದಬೇಕು ಎಂದು ಕಂಡುಬರುತ್ತದೆ.

– ಹೆಣ್ಣು ದೌರ್ಜನ್ಯಕ್ಕೊಳಗಾದಾಗ ಅವಳ ದೇಹ ಮತ್ತು ಮಾನಸಿಕ ವರ್ತನೆಯಲ್ಲಿ ಬದಲಾವಣೆ ಕಾಣುತ್ತದೆ. ಇದು ತನ್ನ ಮೇಲಿನ ದೌರ್ಜನ್ಯವನ್ನು ತಡೆಯುವುದಕ್ಕಾಗಿರುತ್ತದೆ ಎಂದು ತಿಳಿಯುತ್ತದೆ. ಗ್ರಾಮೀಣ ಮಹಿಳೆಯರು ಪುರುಷರಿಂದ ತಮಗಾಗುತ್ತಿರುವ ಅನ್ಯಾಯವನ್ನು ಪ್ರತಿಭಟಿಸಿ, ಕಾನೂನಾತ್ಮಕವಾಗಿ ತಮ್ಮ ಆಸ್ತಿ ಹಕ್ಕುಗಳನ್ನು ಪಡೆಯುವ ಚಿತ್ರಣ ಕಂಡುಬರುತ್ತದೆ. ಹೆಣ್ಣು ತಂದೆ ತಾಯಿಯ ಮನೆಯಲ್ಲೂ ತನ್ನ ಅಧಿಕಾರ ಮತ್ತು ಆಸ್ತಿಯಲ್ಲಿ ಪಾಲನ್ನು ಕೇಳುವ ಧೈರ್ಯ ಬದಲಾಗುತ್ತಿರುವ ಮಹಿಳೆಯರ ಮನೋಸ್ಥೈರ್ಯವನ್ನು ಪ್ರಕಟಿಸುತ್ತದೆ. ಪುರುಷ ಪ್ರಧಾನ ಸಮಾಜದಲ್ಲಿ ಗಂಡಸರು ತಮ್ಮ ಹೆಂಡತಿಯನ್ನು ಹಣಕ್ಕಾಗಿ ಹರಾಜು ಹಾಕುವಂತಹ ಚಿತ್ರಣಗಳು ಪುರುಷನು ಹೆಣ್ಣನ್ನು ಗುಲಾಮಳು ಮತ್ತು ವರ್ಗಾಯಿಸಬಹುದಾದ ಆಸ್ತಿ ಎಂದು ತಿಳಿದಿರುವ ಅಂಶವನ್ನು ತೋರಿಸುತ್ತದೆ. ಹೆಣ್ಣನ್ನು ಒಂದು ಪ್ರಾಣಿಯ ರೀತಿ ಹರಾಜು ಹಾಕುವುದು ಸ್ತ್ರೀ–ಪುರುಷರ ನಡುವಿನ ಅಸಮಾನತೆಯನ್ನು ತೋರಿಸುತ್ತದೆ. ಆದರೆ ಮಹಿಳೆಯರು ತಮ್ಮ ಹಕ್ಕುಗಳನ್ನು ಪಡೆದುಕೊಳ್ಳಲು ಕಾನೂನಿನ ಸಹಾಯ ಪಡೆಯುವುದು ಸಮಾನತೆ ಸಾಧಿಸಲು ಅಸ್ತ್ರವಾಗಬಹುದು ಎಂದು ತಿಳಿಯುತ್ತದೆ.

– ಆರ್ಥಿಕ ಮತ್ತು ರಾಜಕೀಯ ಅಸಮಾನತೆಗಳು ಹೆಣ್ಣಿನ ಜೀವನದ ಮೇಲೆ ಹೆಚ್ಚು ಮತ್ತು ದುರಂತಮಯ ಪ್ರಭಾವ ಬೀರುವುದನ್ನು ತೋರಿಸುತ್ತವೆ. ನಿರುದ್ಯೋಗ, ಕಾರ್ಮಿಕ–ಮಾಲೀಕರ ಜಗಳ, ಫ್ಯಾಕ್ಟರಿ ಬಂದ್ ಮುಂತಾದವುಗಳಿಂದ ಬಡವರು ಮುಖ್ಯವಾಗಿ ಮಹಿಳೆಯರು ಅನ್ಯಾಯ, ಲೈಂಗಿಕ ಶೋಷಣೆ, ಅಸಮಾನತೆಗಳಿಗೆ ಒಳಗಾಗಿ ಅವರ ಜೀವನವನ್ನೇ

ಬಲಿಕೊಡಬೇಕಾದ ಪ್ರಸಂಗಗಳು ಕಂಡುಬರುತ್ತವೆ. ಪುರುಷ ಸಮಾಜ ಹೆಣ್ಣಿಗೂ ಕೆಲಸ ಮಾಡಲು ಸಮಾನ ಅವಕಾಶಗಳನ್ನು ನೀಡಿ, ಅವಳನ್ನು ಒಬ್ಬ ವ್ಯಕ್ತಿಯಾಗಿ ಪುರುಷ ಸ್ವಾರ್ಥಗಳ ಪರಿಧಿಯಾಚೆ ನೋಡಿದಾಗ ಅವಳಿಗೆ ಬದುಕಲು ಸಮಾನ ಅವಕಾಶ ಕೊಡಲಾಗುತ್ತದೆ ಎಂದು ತಿಳಿದು ಬರುತ್ತದೆ.

- ಜೀವನ ಕಟ್ಟಿಕೊಳ್ಳಬೇಕಾದಾಗ ಮಹಿಳೆಯರು ಪುರುಷರು ಮಾಡುವ ಕೆಲಸ ಕಾರ್ಯಗಳನ್ನು ಮಾಡಿ ಅವರಿಗೆ ಸಮನಾಗಿ ನಿಲ್ಲಬೇಕು. ಜೀವನದಲ್ಲಿ ಧೈರ್ಯದಿಂದ ಕೆಲಸ ಮಾಡಿದಾಗ ಹೆಣ್ಣಿಗೂ ಸಮಾನತೆ ದೊರೆಯುತ್ತದೆ ಎಂಬ ಅಂಶ ಕಂಡುಬರುತ್ತದೆ.

- ಮುಸ್ಲಿಂ ಸಮಾಜದಲ್ಲಿ ಮಹಿಳೆಯರ ಜೀವನ, ಅವರ ಸ್ಥಾನಮಾನ, ಹಕ್ಕು-ಭಾದ್ಯತೆಗಳು ಮತ್ತು ಸಮಾನತೆ-ಅಸಮಾನತೆಯ ಚಿತ್ರಣಗಳನ್ನು ಮಹಿಳಾ ಸಾಹಿತ್ಯವು ಪರಿಗಣಿಸಿರುವುದು ಕಂಡುಬರುತ್ತದೆ.

- ಸಮಾಜದಲ್ಲಿ ಜೀವನ ಧರ್ಮಾಧಾರಿತವಾಗಿರುತ್ತದೆ. ಎಲ್ಲರಿಗೂ ಸಮವಾಗಿ ಅನ್ವಯಿಸಬೇಕಾದ ಧರ್ಮದ ರೀತಿನೀತಿಗಳು ಪುರುಷ ಪರವಾಗಿದ್ದು, ಸ್ತ್ರೀಯನ್ನು ಅಸಮಾನತೆಗೆ ನೂಕಿರುವುದು ತಿಳಿಯುತ್ತದೆ. ಮುಸ್ಲಿಂ ಸಮಾಜದಲ್ಲಿ ಹೆಣ್ಣು ಹುಟ್ಟಿರುವುದೇ ಗಂಡಿನ ಸೇವೆ ಮಾಡಲು ಎಂಬ ಅಭಿಪ್ರಾಯ ಹೆಣ್ಣನ್ನು ಸೇವಕಿಯ ಸ್ಥಾನದಲ್ಲಿ ನಿಲ್ಲಿಸುವುದು ಕಂಡುಬರುತ್ತದೆ. ಗಂಡ ಹೇಳಿದ ಮಾತನ್ನು ಕೇಳದ ಹೆಣ್ಣು ದೈಹಿಕ ದೌರ್ಜನ್ಯಕ್ಕೀಡಾಗಬೇಕಾಗುತ್ತದೆ ಎಂದು ತಿಳಿಯುತ್ತದೆ.

- ಧರ್ಮದ ಕಟ್ಟುಪಾಡುಗಳು ಹೆಣ್ಣನ್ನು ಅಧೀನಳನ್ನಾಗಿ ಮಾಡಿ, ಯಾವುದೇ ಸ್ವಾತಂತ್ರ್ಯ ಸಮಾನತೆಯನ್ನು ನೀಡದೆ, ಹೆಣ್ಣಿನ ಜೀವನ ಗಂಡಿನ ನಿರ್ಧಾರಗಳಲ್ಲಿ ಅಡಗಿರುವುದು ತಿಳಿದುಬರುತ್ತದೆ. ಸ್ತ್ರೀ-ಪುರುಷರ ವ್ಯಕ್ತಿ ಸ್ವಾತಂತ್ರ್ಯದ ನಡುವೆ ಅಗಾಧ ಅಂತರವಿರುವುದು ತಿಳಿಯುತ್ತದೆ. ಪುರುಷನ ಅಹಂ, ದಡ್ಡತನ, ಧರ್ಮದ ಕಟ್ಟುಪಾಡುಗಳೊಂದಿಗೆ ಸೇರಿ ಹೆಣ್ಣಿನ ಜೀವವನ್ನು ಬಲಿ ತೆಗೆದುಕೊಳ್ಳುವುದು ಕಂಡುಬರುತ್ತದೆ. ಸಮಾನತೆಯನ್ನು ಹರಡಬೇಕಾದ ಧಾರ್ಮಿಕ ಮುಖಂಡರು ಸ್ತ್ರೀಯನ್ನು ಗುಲಾಮಳ ರೀತಿ ನಡೆಸಿಕೊಂಡು ಯಾವುದೇ ಸ್ವಾತಂತ್ರ್ಯ ಕೊಡಬೇಡಿ ಎಂದು ಹೇಳುವುದು ಸ್ತ್ರೀ-ಪುರುಷರ ನಡುವೆ ಅಸಮಾನತೆಯನ್ನು ಸೃಷ್ಟಿಸುತ್ತದೆ ಎಂದು ತಿಳಿಯುತ್ತದೆ. ತಂದೆಯ ಹಿಡಿತ ಮತ್ತು ಧಾರ್ಮಿಕ ಕಟ್ಟುಪಾಡುಗಳಲ್ಲಿ ಬೆಳೆದ ಹೆಣ್ಣು ಸಂದಿಗ್ಧ ಸಮಯದಲ್ಲೂ ತನ್ನ ಜೀವನ ರೂಪಿಸಿಕೊಳ್ಳಲು ಕಟ್ಟುಪಾಡುಗಳನ್ನು ಧಿಕ್ಕರಿಸಿ ಹೋಗಲಾರದ ಪರಿಸ್ಥಿತಿಯಲ್ಲಿ ಸಿಲುಕುವುದು ತಿಳಿದುಬರುತ್ತದೆ. ಮಗುವನ್ನು ಹೆತ್ತ

ತಾಯಿಗೆ ಮಗುವಿನ ಮೇಲೆ ಯಾವುದೇ ಅಧಿಕಾರವಿಲ್ಲದಿರುವುದು ಕಾಣುತ್ತದೆ. ತಲಾಖ್ ಎಂಬ ಧಾರ್ಮಿಕ ಕಾನೂನನ್ನು ಪುರುಷರು ತಮ್ಮ ಸ್ವಾರ್ಥ ಮತ್ತು ಅಹಂಗೆ ಉಪಯೋಗಿಸಿ ಹೆಣ್ಣಿನ ಜೀವನವನ್ನು ಹಾಳುಮಾಡುವುದು ತಿಳಿದುಬರುತ್ತದೆ. ಈ ಸಂದರ್ಭದಲ್ಲಿ ಹೆಣ್ಣಿನ ಅಭಿಪ್ರಾಯ, ಭಾವನೆಗಳಿಗೆ ಬೆಲೆ ಇಲ್ಲದೆ ಅವಳು ಪುರುಷ ತೀರ್ಮಾನಗಳಿಗೆ ಬದ್ಧವಾಗಿರಬೇಕಾದ ಪರಿಸ್ಥಿತಿ ಕಂಡುಬರುತ್ತದೆ. ಧಾರ್ಮಿಕ ಕಾನೂನುಗಳು ಪುರುಷ ಪರವಾಗಿದ್ದು ಮಹಿಳೆಯನ್ನು ಆತ್ಮಹತ್ಯೆ ಮಾಡಿಕೊಳ್ಳುವ ಹಂತಕ್ಕೆ ಕೊಂಡೊಯ್ಯುವ ಅಂಶ ತಿಳಿದುಬರುತ್ತದೆ.

- ಧರ್ಮವನ್ನು ದುರ್ಬಳಕೆ ಮಾಡಿಕೊಂಡು ಹೆಣ್ಣನ್ನು ವಶಪಡಿಸಿಕೊಳ್ಳಲು ಪುರುಷ ಸಮಾಜ ಪ್ರಯತ್ನಿಸುವುದು ಕಂಡುಬರುತ್ತದೆ. ಆದರೆ ಇಂತಹ ಪರಿಸ್ಥಿತಿಯನ್ನು ಧೈರ್ಯ ಮತ್ತು ಕಾನೂನಿನ ಸಹಾಯದಿಂದ ಎದುರಿಸಿ ತನ್ನ ವ್ಯಕ್ತಿತ್ವವನ್ನು ಕಾಪಾಡಿಕೊಳ್ಳುವ ರೀತಿಯೂ ಕಂಡುಬರುತ್ತದೆ. ಹೆಣ್ಣು ತನ್ನ ಸುತ್ತಮುತ್ತ ಮನುಷ್ಯರು ಇದ್ದಾರೆ ಮತ್ತು ಸರಕಾರವಿದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಮತ್ತು ಅದನ್ನು ಬಳಸಿಕೊಂಡು ತನ್ನ ಮೇಲೆ ನಡೆಯುವ ದೌರ್ಜನ್ಯವನ್ನು, ಅಸಮಾನತೆಯನ್ನು ತಡೆಯಬಹುದು ಎಂದು ತಿಳಿದುಬರುತ್ತದೆ. ಹಣ ಮತ್ತು ಅಧಿಕಾರಿಗಳು ಹೆಣ್ಣನ್ನು ವಶಮಾಡಿಕೊಳ್ಳಲಾಗುವುದಿಲ್ಲ ಎಂಬ ಅಂಶ ತಿಳಿಯುತ್ತದೆ. ಪುರುಷರಿಂದಲೇ ಕೂಡಿದ ಧಾರ್ಮಿಕ ಸಮಿತಿಗಳು ಪುರುಷರ ಅಹಂ ಉಳಿಸಿಕೊಳ್ಳಲು ಹೆಣ್ಣಿನ ಚಾರಿತ್ರ್ಯವಧೆಗೂ ಮುಂದಾಗುವ ಅಂಶ ಕಂಡುಬರುತ್ತದೆ. ಧಾರ್ಮಿಕ ಪದ್ಧತಿಗಳು ಸ್ತ್ರೀ-ಪುರುಷರ ನಡುವೆ ಗುಲಾಮ-ಯಜಮಾನ ಸಂಸ್ಕೃತಿಯನ್ನು ಬೆಳೆಸಿರುವುದು ಮತ್ತು ಇದು ಅಸಮಾನತೆಯನ್ನು ಹುಟ್ಟುಹಾಕಿರುವುದು ತಿಳಿಯುತ್ತದೆ. ಪುರುಷ ಸಮಾಜದ ನೀತಿಗಳನ್ನು ಧಿಕ್ಕರಿಸಿ, ಪ್ರತಿಭಟಿಸಿ ನಿಂತು, ಕಾನೂನಿನ ಸಹಾಯದಿಂದ ಎದುರಿಸಿದಾಗ ತನ್ನ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ತಡೆದು ಸಮಾನತೆಯನ್ನು ಕಾಣಬಹುದು ಎಂದು ತಿಳಿಯುತ್ತದೆ.

- ಸಾಮಾಜಿಕ ರೀತಿ ನೀತಿಗಳು ಅಸಮಾನತೆಯಿಂದ ಕೂಡಿದ್ದರೆ ಅಧೀನರಾದವರು ವ್ಯಕ್ತಿತ್ವ ಕಳೆದುಕೊಂಡು ಸೇವಕರಾಗಬೇಕಾಗುತ್ತದೆ ಎಂದು ತಿಳಿದುಬರುತ್ತದೆ.

- ಪುರುಷ ಉತ್ತಮನೆಂಬ ಕಟ್ಟುಪಾಡುಗಳು ಹೆಣ್ಣಿನ ಅಸ್ತಿತ್ವವನ್ನು ಇಲ್ಲವಾಗಿಸಿ ಅವಳ ಜೀವನ ಗಂಡಿನ ಕೈಗೊಂಬೆಯಾಗಿದೆ ಎಂದು ತಿಳಿದುಬರುತ್ತದೆ. ಮನುಷ್ಯನನ್ನು ಸೃಷ್ಟಿಸಿದ ದೇವರು ಹೆಣ್ಣಿನ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಹೆಣ್ಣಾಗಿ ಹುಟ್ಟಿಬರಬೇಕು ಎಂದು ತಿಳಿಯುತ್ತದೆ.

ಸಮಾಜದಲ್ಲಿರುವ ಪ್ರತಿ ವಸ್ತುವೂ ಪುರುಷನಿಗೆ ಸೇರಿದೆ ಹೆಣ್ಣಿಗಾಗಿ ಯಾವುದೂ ಇಲ್ಲ, ಕೊನೆಗೆ ಹೆಣ್ಣಿನ ಅಸ್ತಿತ್ವವೂ ಇಲ್ಲವಾಗಿ ಅವಳು ಪುರುಷನೊಂದಿಗೇ ಗುರುತಿಸಲ್ಪಡುವ ಅಂಶ ಕಂಡುಬರುತ್ತದೆ. ಪುರುಷನ ಸ್ವಾರ್ಥ, ಆಸೆಗಳು ಈಡೇರದಾಗ ಅವಳ ಸಂಬಂಧವನ್ನು ಮೂಲದಿಂದಲೇ ಕಡಿದುಹಾಕುವ ಪುರುಷ ನೀತಿ ಕಾಣುತ್ತದೆ. ಹೆಣ್ಣು ಇರುವುದೇ ಮಕ್ಕಳನ್ನು ಹೆರುವುದಕ್ಕೋಸ್ಕರ, ಅದರಲ್ಲೂ ಗಂಡು ಮಕ್ಕಳನ್ನೇ ಹೆರಬೇಕು ಎಂಬ ಪುರುಷ ಪಕ್ಷಪಾತಿ ಸಮಾಜದಲ್ಲಿ ಹೆಣ್ಣು ಹುಟ್ಟಲಿಲ್ಲವಲ್ಲ ಎಂದು ತಾಯಂದಿರು ಸಮಾಧಾನ ಪಟ್ಟುಕೊಳ್ಳುವ ಅಂಶ ಅಸಮಾನತೆಯನ್ನು ತೋರಿಸುತ್ತದೆ. ಹೆಣ್ಣು ತನ್ನ ಜೀವಕ್ಕೆ ಬೇಕಾದ ಅನ್ನ ಮತ್ತು ಸ್ಥಳಕ್ಕಾಗಿ ಪುರುಷನ ಸೇವಕಿಯಾಗಿ ತನ್ನ ವ್ಯಕ್ತಿತ್ವ ಮತ್ತು ಸಾಮರ್ಥ್ಯಗಳನ್ನು ಕಳೆದುಕೊಳ್ಳುವಂತೆ ಮಾಡಿರುವ ಪುರುಷ ನೀತಿ ತಿಳಿಯುತ್ತದೆ. ಪುರುಷನು ಹೆಣ್ಣನ್ನು ಬಯಸುವದೇ ಲೈಂಗಿಕ ಸುಖಕ್ಕೋಸ್ಕರ, ಅದು ಒಂದು ಹೆಣ್ಣಿನಿಂದ, ಯಾವುದೇ ಕಾರಣಗಳಿಂದಲಾದರೂ ದೊರಕದೇ ಹೋದಾಗ ಅವಳನ್ನೇ ಕಡೆಗಣಿಸಿ ಅವಳ ಜಾಗಕ್ಕೆ ಮತ್ತೊಂದು ಹೆಣ್ಣನ್ನು ತರುವ ಪುರುಷ ಅನ್ಯಾಯಗಳು ಕಂಡುಬರುತ್ತವೆ. ಇಂತಹ ಅನ್ಯಾಯ, ದೌರ್ಜನ್ಯ, ಅಸಮಾನತೆಗಳಲ್ಲಿ ಜೀವಿಸುತ್ತಿರುವ ಹೆಣ್ಣಿನ ಪರಿಸ್ಥಿತಿಯನ್ನು ತಿಳಿಯಲು ದೇವರು ಹೆಣ್ಣಾಗಿ ಹುಟ್ಟಿದರೆ ಮಾತ್ರ ಸಾಧ್ಯ ಎಂದು ತಿಳಿಯುತ್ತದೆ.

– ಪುರುಷ ಪ್ರಧಾನ ನೀತಿಗಳಡಿಯಲ್ಲಿ ಬೆಳೆದ ಗಂಡಸರು ಹೆಣ್ಣಿಗೆ ಮಾಡುವ ಅನ್ಯಾಯ, ಅಸಮಾನತೆಯ ವರ್ತನೆಗಳು ಹೆಣ್ಣಿನ ಜೀವನವನ್ನೇ ಕಸಿದುಕೊಳ್ಳುವ ಅಂಶ ತಿಳಿದುಬರುತ್ತದೆ. ಖುರಾನ್ ಸ್ತ್ರೀ–ಪುರುಷರಿಬ್ಬರಿಗೂ ಸಮಾನ ಅವಕಾಶಗಳನ್ನು ನೀಡಿದ್ದರೂ ಪುರುಷ ಸಮಾಜ ಹೆಣ್ಣಿಗೆ ಅವುಗಳನ್ನು ತಿಳಿಸದೆ ಹೆಣ್ಣಿನ ಶೋಷಣೆಯನ್ನು ಮಾಡಿರುವುದು ಕಂಡುಬರುತ್ತದೆ. ಧಾರ್ಮಿಕ ನೀತಿಗಳನ್ನು ಎತ್ತಿ ಹಿಡಿಯಬೇಕಾದ ಮುತವಲ್ಲಿಗಳು ಸ್ವಾರ್ಥಕ್ಕೋಸ್ಕರ ಪುರುಷರ ಪರವಾಗಿ ನಿಂತು ಹೆಣ್ಣನ್ನು ಕೀಳು ಎಂಬ ಅಸಮಾನ ನಿಲುವಿನಲ್ಲಿ ನೋಡುವುದು ಕಾಣುತ್ತದೆ. ಹೆಣ್ಣು ನಮ್ಮ ಗುಲಾಮಳು, ನಾವು ಹೇಳಿದ ಹಾಗೆ ಕೇಳಬೇಕು ಎಂಬ ಪುರುಷನ ನಿಲುವು ಹೆಣ್ಣಿನ ಜೀವನವನ್ನು ಬಲಿ ತೆಗೆದುಕೊಳ್ಳುವ ಅಂಶ ಕಂಡುಬರುತ್ತದೆ. ಹೆಣ್ಣಿಗೆ ಆಸ್ತಿ, ಹಣ ಯಾವುದೂ ದೊರಕಬಾರದು, ಅವಳು ಯಾವಾಗಲೂ ಪುರುಷಾಧೀನವಾಗಿರಬೇಕು ಎಂದು ಪುರುಷ ಸಮಾಜ ಬಯಸುವುದು ತಿಳಿಯುತ್ತದೆ. ಸ್ತ್ರೀಯರು ಸ್ವಾವಲಂಬಿಯಾಗಲು ಇರುವ ಅವಕಾಶಗಳನ್ನು ತಿಳಿಸದೆ, ಅವಳ ಹಕ್ಕು ಸ್ವಾತಂತ್ರ್ಯಗಳನ್ನು ಇಲ್ಲವಾಗಿಸಿ ಅಸಮಾನತೆಯ ಜೀವನ ಸೃಷ್ಟಿಸಿರುವ ಪುರುಷ ಸಮಾಜದ ನಿಲುವುಗಳು ಕಂಡುಬರುತ್ತವೆ.

– ಹೆಣ್ಣಿನ ಮೇಲಿನ ದಬ್ಬಾಳಿಕೆಗೆ, ಅಸಮಾನತೆಗೆ ಕುಟುಂಬವೂ ಮೂಲವಾಗಿರುವುದು ತಿಳಿಯುತ್ತದೆ. ಕುಟುಂಬದಲ್ಲಿ ಪುರುಷ ಮೇಲೆ–ಹೆಣ್ಣು ಕೀಳು, ಹೆಣ್ಣಿನ ಜೀವನ ಮನೆಯ ಕೆಲಸಕ್ಕಷ್ಟೇ ಸೀಮಿತ ಎಂಬ ನಿಲುವು ತಿಳಿಯುತ್ತದೆ. ಹೆಣ್ಣಿನ ಜೀವನಕ್ಕೆ ವಿದ್ಯೆ ಮುಂತಾದ ಯಾವುದೇ ಬೇಡಿಕೆಗಳಿರಬಾರದು ಎಂದು ಸಮಾಜ ರೂಪಿಸಿರುವ ನೀತಿಗಳು ತಿಳಿದುಬರುತ್ತವೆ.

– ಉದ್ಯೋಗ ಮಾಡಬೇಕಾದವರು ಪುರುಷರು ಮಾತ್ರ, ಅದರಿಂದ ಹೆಣ್ಣಿಗೆ ವಿದ್ಯೆಯ ಅವಶ್ಯಕತೆಯಿಲ್ಲ ಎಂದು ತಿಳಿಸುವ ಕುಟುಂಬಗಳ ರೀತಿ–ನೀತಿ ತಿಳಿದುಬರುತ್ತದೆ. ನೋವು, ಅಸಮಾನತೆಗಳಿಂದ ನಲುಗಿದ ಹೆಣ್ಣು ಜೀವನಕ್ಕೆ ಶಿಕ್ಷಣ, ಸ್ವಾವಲಂಬನೆ, ಧೈರ್ಯ ಮತ್ತು ಗಂಡುಹೆಣ್ಣಿನ ನಡುವೆ ಸಮಾನತೆ ಮುಖ್ಯವೆಂದು ತಿಳಿದು ತನ್ನ ಮಗಳನ್ನು ಆ ದಿಕ್ಕಿನಲ್ಲಿ ಕಳುಹಿಸುವ ಅಂಶ ಸ್ತ್ರೀಯರಲ್ಲಾಗುತ್ತಿರುವ ಬದಲಾವಣೆಯನ್ನು ತೋರಿಸುತ್ತದೆ.

– ಕುಟುಂಬದ ಎಲ್ಲ ಜವಾಬ್ದಾರಿಯನ್ನು ಹೊತ್ತು ವಿಕಲಾಂಗನಾದ ಗಂಡನ ಎಲ್ಲ ಪೂರೈಕೆಗಳನ್ನು ಈಡೇರಿಸುತ್ತಿದ್ದರೂ ಹೆಣ್ಣು ತನ್ನ ಗುಲಾಮಳು ಎಂದು ಭಾವಿಸಿ ಅದರಂತೆ ಶೋಷಿಸುವ ಪುರುಷರ ಶೋಷಣಾ ಮತ್ತು ಅಸಮಾನತೆಯ ನಿಲುವುಗಳು ಕಂಡುಬರುತ್ತವೆ. ಇಂತಹ ಪರಿಸ್ಥಿತಿಯಲ್ಲಿ ಹೆಣ್ಣಿನ ಯಾವುದೇ ಕೆಲಸ ಕಾರ್ಯಗಳಿಗೂ ಬೆಲೆ ಇಲ್ಲದಿರುವುದನ್ನು ಮಹಿಳಾ ಸಾಹಿತ್ಯ ಗಮನಿಸಿರುವುದು ತಿಳಿಯುತ್ತದೆ.

– ಪುರುಷ ಪ್ರಧಾನ ಸಮಾಜ ಹೆಣ್ಣಿಗೆ ಅವಳ ಬಾಳಿನ ಆಯ್ಕೆ, ಸ್ವಾತಂತ್ರ್ಯಗಳನ್ನು ಕಥೆಗಳಲ್ಲಿಯೂ ಕೊಡಲು ಬಯಸುವುದಿಲ್ಲ. ನೈತಿಕತೆ, ಧರ್ಮಗಳ ಹೆಸರಿನಲ್ಲಿ ಅವಳ ಸ್ವಾತಂತ್ರ್ಯ, ಸಮಾನತೆಯನ್ನು ಕಿತ್ತುಹಾಕುವುದು ಕಂಡುಬರುತ್ತದೆ.

– ಕುಟುಂಬ, ಸಮಾಜದ ಕಟ್ಟಳೆಗಳಿಗೆ ಒಳಗಾದ ಹೆಣ್ಣು ಅಸಹಾಯಕತೆಯಿಂದ ಮೋಸಕ್ಕೊಳಗಾದರೆ, ವಿದ್ಯೆ ಕಲಿತು ತಿಳುವಳಿಕೆ ಬೆಳೆಸಿಕೊಂಡು ತನ್ನ ಹಕ್ಕುಗಳನ್ನು ಪ್ರತಿಪಾದಿಸಿ ದೌರ್ಜನ್ಯ, ಅಸಮಾನತೆಗಳನ್ನು ತಡೆಯಲು ಮುಂದಾಗುವ ಚಿತ್ರಣ ಕಂಡುಬರುತ್ತದೆ.

– ಹೆಣ್ಣು ಆರ್ಥಿಕ, ಸಾಮಾಜಿಕ ಸ್ಥಾನಮಾನ ಗಳಿಸುವುದು ಪುರುಷರಿಗೆ ಸಹಿಸಲಾಗುವುದಿಲ್ಲ, ಹೇಗಾದರೂ ಮಾಡಿ ಅವಳನ್ನು ತನ್ನ ಅಧೀನಕ್ಕೆ ತೆಗೆದುಕೊಂಡು ಅವಮಾನ, ನಿಂದನೆಗಳ ಬಂಧನದಲ್ಲಿ ಗುಲಾಮಳನ್ನಾಗಿ ಮಾಡಿಕೊಳ್ಳಬೇಕೆಂಬ ಪುರುಷರ ನೀತಿ ತಿಳಿದುಬರುತ್ತದೆ. ಇದು ಎಲ್ಲ ಧರ್ಮದ ಪುರುಷರ ವರ್ತನೆಯಲ್ಲೂ ಕಂಡುಬಂದು ಹೆಣ್ಣು ಯಾವ ಧರ್ಮಕ್ಕೆ ಸೇರಿದ್ದರೂ ಅಸಮಾನತೆ, ಶೋಷಣೆ ತಪ್ಪಿಲ್ಲ ಎಂದು ಮಹಿಳಾ ಸಾಹಿತ್ಯ ತೋರಿಸಿರುವುದು ಕಂಡುಬರುತ್ತದೆ.

ಪ್ರಾಥಮಿಕ ಆಕರಗಳು

1. ಅನುಪಮಾ ನಿರಂಜನ (1993) ಸಂಕೋಲೆಯೊಳಗಿಂದ
ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು.

2. ------"------- (1998) ಕಣ್ಮಣಿ
ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು.

3. ಆಮೂರ ಜಿ.ಎಸ್. (ಸಂ.) (1999) ಅವಳ ಕತೆಗಳು
ಪ್ರಿಸಂ ಬುಕ್ಸ್, ಪ್ರೈ. ಲಿ. ಬೆಂಗಳೂರು.

4. ಇಂದಿರಾ ಎಂ.ಕೆ. (1984) ಫಣಿಯಮ್ಮ
ಹೇಮಂತ ಸಾಹಿತ್ಯ ಪ್ರಕಾಶನ, ಬೆಂಗಳೂರು.

5. ಗೀತಾ ನಾಗಭೂಷಣ (2006) ಕ್ಯಾದಿಗಿ ಬನದಾಗ ಕತೆಯಾಗಿ ನಿಂತವರು, ಸಿವಿಜಿ ಪಬ್ಲಿಕೇಷನ್, ಬೆಂಗಳೂರು.

6. ತಿರುಮಲಾಂಬ (1929) ಸುಶೀಲೆ
ಸತಿಹಿತೈಷಿಣಿ, ಮಾತೃಮಂದಿರಮ್, ನಂಜನಗೂಡು.

7. ತ್ರಿವೇಣಿ (1988) ಸಮಸ್ಯೆಯ ಮಗು
ತ್ರಿವೇಣಿ ಪಬ್ಲಿಕೇಷನ್ಸ್, ಮೈಸೂರು.

8. --"-- (1993) ಕೀಲುಗೊಂಬೆ
ತ್ರಿವೇಣಿ ಎಂಟರ್‌ಪ್ರೈಸಸ್, ಮೈಸೂರು.

9. ನೇಮಿಚಂದ್ರ (2012) ಇಲ್ಲಿಯವರೆಗಿನ ನೇಮಿಚಂದ್ರರ ಕಥೆಗಳು, ಅಂಕಿತ ಪ್ರಕಾಶನ, ಬೆಂಗಳೂರು.

10. ಬಾನು ಮುಷ್ತಾಕ್ (1990) ಹೆಜ್ಜೆ ಮೂಡಿದ ಹಾದಿ
ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ, ಚಿತ್ರದುರ್ಗ.

11. ------"----- (2013) ಹಸೀನಾ ಮತ್ತು ಇತರ ಕಥೆಗಳು
ಅಭಿರುಚಿ ಪ್ರಕಾಶನ, ಮೈಸೂರು.

12. ರವಿಕುಮಾರ್, ನ.
ಎಲ್.ಜಿ. ಮೀರಾ (ಸಂ.) (2012) ಎಚ್.ವಿ. ಸಾವಿತ್ರಮ್ಮ ಸಮಸ್ತ ಕಥೆಗಳು
ಅಭಿನವ ಪ್ರಕಾಶಕರು, ಬೆಂಗಳೂರು.

13.	ಲಲಿತಾ ನಾಯಕ್ ಬಿ.ಟಿ. (1998)	ಹಬ್ಬ ಮತ್ತು ಬಲಿ ಅಂಕಿತ ಪ್ರಕಾಶನ, ಬೆಂಗಳೂರು.
14.	ವಿಜಯಾ ದಬ್ಬೆ (ಸಂ.) (1989)	ಶ್ಯಾಮಲಾ ಸಂಚಯ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
15.	ವೀಣಾ ಶಾಂತೇಶ್ವರ (2006)	ನಡೆದದ್ದೇ ದಾರಿ ಸುಂದರ ಪುಸ್ತಕ ಪ್ರಕಾಶನ, ಧಾರವಾಡ.
16.	ವೇದಾ ಎಂ.ಎಸ್. (2010)	ಎಂ.ಎಸ್. ವೇದಾರ ಸಣ್ಣ ಕಥೆಗಳು ಈತನಕ ಸಂವಹನ ಪ್ರಕಾಶಕರು, ಮೈಸೂರು.
17.	ವೈದೇಹಿ (2010)	ಅಸ್ಪೃಶ್ಯರು ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.
18.	ಸಬೀಹಾ ಭೂಮಿಗೌಡ (2012)	ಗೆರೆಗಳು ಸಿರಿವರ ಪ್ರಕಾಶನ, ಬೆಂಗಳೂರು.
19.	ಸರಸ್ವತಿಬಾಯಿ ರಾಜವಾಡೆ (2014)	ಆಹುತಿ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
20.	ಸಾರಾ ಅಬೂಬಕ್ಕರ್ (1984)	ಚಂದ್ರಗಿರಿ ತೀರದಲ್ಲಿ ಚಂದ್ರಗಿರಿ ಪ್ರಕಾಶನ, ಮಂಗಳೂರು.
21.	------"-------- (2010)	ಚಪ್ಪಲಿಗಳು ಚಂದ್ರಗಿರಿ ಪ್ರಕಾಶನ, ಬೆಂಗಳೂರು.
22.	ಸುಬ್ಬಣ್ಣ ಕೆ.ವಿ. ನೆನಪಿನ 'ಮೊದಲ ಓದು' ಪುಸ್ತಕ ಮಾಲೆ (ಸಂ.) (2006)	ವೈದೇಹಿಯವರ ಆಯ್ದ ಕಥೆಗಳು ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.

ಪರಾಮರ್ಶನ ಗ್ರಂಥಗಳು

1. ಅಮರೇಶ ನುಗಡೋಣಿ (2008) ಕನ್ನಡ ಸಂಶೋಧನೆಯ ವೈಧಾನಿಕತೆಗಳು
ಕನ್ನಡ ವಿಶ್ವವಿದ್ಯಾಲಯ, ಹಂಪಿ.
2. ಆಮೂರ ಜಿ. ಎಸ್. (2012) ಕನ್ನಡ ಕಥನ ಸಾಹಿತ್ಯ : ಸಣ್ಣಕತೆ
ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.
3. ಆಶಾದೇವಿ ಎಂ.ಎಸ್. (2006) ಸ್ತ್ರೀಮತವನುತ್ತರಿಸಲಾಗದೆ?
ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ,
4. ------"------ (2011) ನಡುವೆ ಸುಳಿವ ಆತ್ಮ
ಅಹರ್ನಿಶಿ ಪ್ರಕಾಶನ, ಶಿವಮೊಗ್ಗ.
5. ಇಂದಿರಾ ಜೈಪ್ರಕಾಶ್ (2009) ಸ್ತ್ರೀವಾದಿ ಮನೋವಿಜ್ಞಾನ
ಮಹಿಳಾ ಅಧ್ಯಯನ ಕೇಂದ್ರ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.
6. ಉಷಾ ಎಂ. (2005) ಮಹಿಳೆ ಮತ್ತು ಜಾತಿ
ಕನ್ನಡ ವಿಶ್ವವಿದ್ಯಾಲಯ, ಹಂಪಿ.
7. ----"---- (2007) ಆಧುನಿಕ ಮಹಿಳಾ ಸಾಹಿತ್ಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.
8. ಕಮಲಾ ಹಂಪನಾ (2003) ಬೊಗಸೆ
ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು.
9. ಕರೀಗೌಡ ಬೀಚನಹಳ್ಳಿ (1991) ವೃಷ್ಟಿ ಸಮಷ್ಟಿ ಕನ್ನಡ ನವ್ಯಕಥೆಗಳು ಅಧ್ಯಯನ, ಅಜಂತ ಪ್ರಕಾಶನ, ಬೆಂಗಳೂರು.
10. ಕಲಬುರ್ಗಿ ಎಂ.ಎಂ. (2007) ಪರಿಕಲ್ಪನೆ
ಕನ್ನಡ ವಿಶ್ವವಿದ್ಯಾಲಯ, ಹಂಪಿ.
11. ಗಾಯತ್ರಿ ಎನ್. (1997) ಆಧುನಿಕ ಕನ್ನಡ ಸಾಹಿತ್ಯದ ಮೂರು ಪ್ರಮುಖ ಚಳುವಳಿಗಳಲ್ಲಿ ಸ್ತ್ರೀವಸ್ತು ನಿರ್ವಹಣೆ
ಪಿಎಚ್.ಡಿ. ಪ್ರಬಂಧ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು (ಅಪ್ರಕಟಿತ ಕೃತಿ).
12. ಗಾಯತ್ರಿ ನಾವಡ (1999) ಮಹಿಳಾ ಸಂಕಥನ
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

13.	ಗೀತಾ ಪ್ರಸಾದ್ (2009)	ಆಧುನಿಕ ಮಹಿಳಾ ಅಭಿವ್ಯಕ್ತಿ ಧಾತ್ರಿ ಪುಸ್ತಕ, ಬೆಂಗಳೂರು.
14.	ಜವರಯ್ಯ ಮ.ನ. (2009)	ಅಂಬೇಡ್ಕರ್ ಶೂದ್ರರು ಮತ್ತು ಮಹಿಳೆಯರು ಬಹುಜನ ಮಾಧ್ಯಮ ಕೇಂದ್ರ (ರಿ.), ಮೈಸೂರು.
15.	----"------ (2009)	ದಲಿತ ಬಂಡಾಯ ಸಾಹಿತ್ಯ ಸಿದ್ಧಾಂತದ ನೆಲೆಗಳು ಬಹುಜನ ಮಾಧ್ಯಮ ಕೇಂದ್ರ (ರಿ.), ಮೈಸೂರು.
16.	ಜ್ಯೋತಿ ಶಶಿಕುಮಾರ್ (2007)	ಮಹಿಳಾ ಸಾಮಾಜಿಕತೆ ಕನ್ನಡ ವಿಶ್ವವಿದ್ಯಾಲಯ, ಹಂಪಿ.
17.	ತೇಜಸ್ವಿನಿ ನಿರಂಜನ, ಸೀಮಂತಿನಿ ನಿರಂಜನ (1994)	ಸ್ತ್ರೀವಾದಿ ಸಾಹಿತ್ಯ ವಿಮರ್ಶೆ ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು.
18.	ದಿವಾಕರ್ ಎಸ್. (ಸಂ.) (1997)	ಶತಮಾನದ ಸಣ್ಣ ಕತೆಗಳು ಪ್ರಿಸಂ ಬುಕ್ಸ್, ಪ್ರೈ.ಲಿ. ಬೆಂಗಳೂರು.
19.	ನಾಗರಾಜ್ ಡಿ.ಆರ್. (1996)	ಸಾಹಿತ್ಯ ಕಥನ ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ.
20.	ನೇಮಿಚಂದ್ರ (2001)	ಮಹಿಳಾ ಅಧ್ಯಯನ ಅಂಕಿತ ಪುಸ್ತಕ, ಬೆಂಗಳೂರು.
21.	----"---- (2010)	ಹೋರಾಟದ ಹಾದಿಯಲ್ಲಿ ಧೀಮಂತ ಮಹಿಳೆಯರು ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು.
22.	ಬೈರಮಂಗಲ ರಾಮೇಗೌಡ, ಕಂನಾಡಿಗಾ ನಾರಾಯಣ (ಸಂ.) (2011)	ವರ್ತಮಾನದ ಕಥೆಗಳು ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
23.	ಬೋರಲಿಂಗಯ್ಯ ಹಿ.ಚಿ. (2010)	ಕುವೆಂಪು: ಮಹಿಳಾ ಮಂಥನ ಕನ್ನಡ ವಿಶ್ವವಿದ್ಯಾಲಯ, ಹಂಪಿ.
24.	ಮಂಗಳಾ ಪ್ರಿಯದರ್ಶಿನಿ ಡಿ. (2007)	ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನ ಒಂದು ಪ್ರವೇಶಿಕೆ ಕನ್ನಡ ವಿಶ್ವವಿದ್ಯಾಲಯ, ಹಂಪಿ.

25.	ಮಲ್ಲಿಕಾ ಘಂಟಿ (2008)	ನಮ್ಮ ಕಣ್ಣಲ್ಲಿ ನೀವು ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
26.	---"----(2008)	ದಲಿತ ಸಾಹಿತ್ಯ ಚಳುವಳಿ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
27.	ಮೋಹನ್ ಕುಂಟಾರ್ (1992)	ಕನ್ನಡ ಸಣ್ಣಕತೆಗಳ ಅಧ್ಯಯನ ಮದುರೈ ಕಾಮರಾಜ ವಿಶ್ವವಿದ್ಯಾಲಯ (ಅಪ್ರಕಟಿತ ಕೃತಿ).
28.	----"------ (2011)	ಪರಿಗ್ರಹ ಸಿವಿಜಿ ಇಂಡಿಯಾ, ಬೆಂಗಳೂರು.
29.	ರಹಮತ್ ತರೀಕೆರೆ (2007)	ಕನ್ನಡ ಸಂಶೋಧನೆ ತಾತ್ವಿಕ ವಿಚಾರ ಕನ್ನಡ ವಿಶ್ವವಿದ್ಯಾಲಯ, ಹಂಪಿ.
30.	ರೂಪಾ ಹಾಸನ (2014)	"ಮಹಿಳೆಯ ದುಡಿಮೆ ಮತ್ತವಳ ಹಕ್ಕುಗಳು" ಕೆಂಬಾವುಟ, ವಿಶೇಷ ಸಂಚಿಕೆ, ಸಂಪುಟ 41, ಸಂಚಿಕೆ 1 – 3.
31.	ವತ್ಸಲ. ಎನ್. (2010)	ಮಹಿಳಾ ಸಾಹಿತ್ಯದ ಹಿನ್ನೆಲೆಯಲ್ಲಿ ಸೃಜನಶೀಲತೆಯ ಪ್ರಶ್ನೆಗಳು ಪಿಎಚ್.ಡಿ. ಪ್ರಬಂಧ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು (ಅಪ್ರಕಟಿತ ಕೃತಿ).
32.	ವಿಜಯಲಕ್ಷ್ಮಿ ಕೆ.ಎಂ. (2005)	ಸ್ತ್ರೀವಾದ – ಸಾಹಿತ್ಯದ ಒಂದು ಚಳುವಳಿ ಮತ್ತು ಇತರ ಲೇಖನಗಳು ಗೀತಾಂಜಲಿ ಪಬ್ಲಿಕೇಷನ್ಸ್, ಬೆಂಗಳೂರು.
33.	ವಿಜಯಶ್ರೀ ಸಬರದ (2002)	ಸಾಹಿತ್ಯ ಸಂವಹನ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
34.	ವಿವಿಧ ಲೇಖಕರು (2006ಅ)	ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
35.	-----"---- (2006)	ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

36.	ವೀಣಾ ಶಾಂತೇಶ್ವರ (2009)	ಇಲ್ಲಿಂದ ಮುಂದೆಲ್ಲಿಗೆ? ಮಹಿಳಾ ಸಾಹಿತ್ಯಕ್ಕೆ ಸಂಬಂಧಿಸಿದ ಲೇಖನಗಳು ಕನ್ನಡ ವಿಶ್ವವಿದ್ಯಾಲಯ, ಹಂಪಿ.
37.	ಶಶಿಕಲಾ ವೀರಯ್ಯಸ್ವಾಮಿ (ಸಂ.) (1995)	ಸಂವೇದನೆ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
38.	ಶಿವಾನಂದ ಎಸ್. ವಿರಕ್ತಮಠ (2006)	ಮಹಿಳಾ ಅಧ್ಯಯನ ಕನ್ನಡ ವಿಶ್ವವಿದ್ಯಾಲಯ, ಹಂಪಿ.
39.	------"---------- (2010)	ಮಹಿಳೆ ಮತ್ತು ಧರ್ಮ ಕನ್ನಡ ವಿಶ್ವವಿದ್ಯಾಲಯ, ಹಂಪಿ.
40.	------"---------- (2011)	ಮಹಿಳಾ ಅಧ್ಯಯನ ಸಂಯುಕ್ತ ಸಂಚಿಕೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
41.	ಶೇಷಗಿರಿರಾವ್ ಎಲ್. ಎಸ್. (1987)	ಶ್ರೀಮತಿ ನಂಜನಗೂಡು ತಿರುಮಲಾಂಬಾ ಜೀವನ ಮತ್ತು ಸಾಹಿತ್ಯ ಐಬಿಎಚ್ ಪ್ರಕಾಶನ, ಬೆಂಗಳೂರು.
42.	ಶೈಲಜ ಹಿರೇಮಠ (2009)	ಮಹಿಳಾ ಅಧ್ಯಯನ ಕನ್ನಡ ವಿಶ್ವವಿದ್ಯಾಲಯ, ಹಂಪಿ.
43.	ಶೈಲಾ ಯು. (2012)	'ಮಹಿಳಾ ಕಥೆಗಳಲ್ಲಿ ಪ್ರತಿರೋಧದ ನೆಲೆಗಳು' ಸಬಿಹಾ ಭೂಮಿಗೌಡ (ಸಂ.) ದಶಕದ ಮಹಿಳಾ ಸಾಹಿತ್ಯದಲ್ಲಿ ಪ್ರತಿರೋಧದ ನೆಲೆಗಳು, ಚಿಂತನ ಪುಸ್ತಕ, ಬೆಂಗಳೂರು.
44.	ಶ್ರೀಮತಿ ಎಚ್.ಎಸ್. ಶಿವಾನಂದ ಎಸ್. ವಿರಕ್ತಮಠ, ಜೆ.ಕೃಷ್ಣ (2007)	ಹೆಣ್ಣು ಮತ್ತು ಭಾಷೆ ಕನ್ನಡ ವಿಶ್ವವಿದ್ಯಾಲಯ, ಹಂಪಿ.
45.	ಶ್ರೀಮತಿ ಎಚ್.ಎಸ್. (2003ಅ)	ಸ್ತ್ರೀವಾದ ಕನ್ನಡ ವಿಶ್ವವಿದ್ಯಾಲಯ, ಹಂಪಿ.
46.	------"----- (2003)	ಮಹಿಳಾ ಅಧ್ಯಯನ ಕನ್ನಡ ವಿಶ್ವವಿದ್ಯಾಲಯ, ಹಂಪಿ.
47.	------"----- (2006)	ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ ಕನ್ನಡ ವಿಶ್ವವಿದ್ಯಾಲಯ, ಹಂಪಿ.

48.	------"----- (2007)	ಸಿಮೋನ್ ದ ಬೋವಾ, ದಿ ಸೆಕೆಂಡ್ ಸೆಕ್ಸ್, ಒಂದು ಕನ್ನಡ ಓದು ಅಧ್ಯಯನ ಮಂಡಲ, ಬೆಂಗಳೂರು.
49.	------"----- (2009)	ಸ್ತ್ರೀವಾದಿ ಭಾಷಾಶಾಸ್ತ್ರ ಪ್ರವೇಶಿಕೆ ಕನ್ನಡ ವಿಶ್ವವಿದ್ಯಾಲಯ, ಹಂಪಿ.
50.	ಶ್ರೀಮತಿ ಎಚ್.ಎಸ್. (ಕನ್ನಡಕ್ಕೆ) (2001), ಮೂಲ: ಜೆರಾಲ್ಡಿನ್ ಪೋರ್ಬ್ಸ್	ಆಧುನಿಕ ಭಾರತದಲ್ಲಿ ಮಹಿಳೆ ಪ್ರಗತಿ ಗ್ರಾಫಿಕ್ಸ್, ಬೆಂಗಳೂರು.
51.	ಷರೀಫಾ ಕೆ. (2011)	ಮುಸ್ಲಿಂ ಮಹಿಳಾ ಸಂವೇದನೆ ಅಂಕಿತ ಪುಸ್ತಕ, ಬೆಂಗಳೂರು.
52.	ಸಬಿಹಾ ಭೂಮಿಗೌಡ (2008)	ಮಹಿಳೆ ಸಂಘಟನೆ ಹೋರಾಟ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
53.	------"----- (2011)	ಸಾಹಿತ್ಯದ ಸಂಘರ್ಷದ ನೆಲೆಗಳು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.
54.	------"-----, ಮಲ್ಲಿಕಾ ಘಂಟಿ (2006)	ಕನ್ನಡ ಸಾಹಿತ್ಯ ಮತ್ತು ಮಹಿಳೆ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
55.	------"----- (ಸಂ.) (2012)	ದಶಕದ ಮಹಿಳಾ ಸಾಹಿತ್ಯದಲ್ಲಿ ಪ್ರತಿರೋಧದ ನೆಲೆಗಳು ಚಿಂತನ ಪುಸ್ತಕ, ಬೆಂಗಳೂರು.
56.	ಸಾರಾ ಅಬೂಬಕ್ಕರ್ (2007)	ಸಾಹಿತ್ಯ, ಸಂಸ್ಕೃತಿ ಮತ್ತು ಮಹಿಳೆ ಕನ್ನಡ ವಿಶ್ವವಿದ್ಯಾಲಯ, ಹಂಪಿ.
57.	------"----- (2012)	ಸಾಹಿತ್ಯಕ್ಕೊಂದು ದಾರಿದೀಪ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
58.	ಸಾವಿತ್ರಮ್ಮ (2010)	ಇತ್ತೀಚಿನ ಕನ್ನಡದ ಕಥೆಗಾರ್ತಿಯರು– ಒಂದು ಅಧ್ಯಯನ ಪಿಎಚ್.ಡಿ. ಪ್ರಬಂಧ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು (ಅಪ್ರಕಟಿತ ಕೃತಿ).

59.	ಸುಜಾತ ಟಿ.ಎಂ. (2010)	ವೈದೇಹಿಯವರ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು ಪಿಎಚ್.ಡಿ. ಪ್ರಬಂಧ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು (ಅಪ್ರಕಟಿತ ಕೃತಿ).
60.	ಸುಮಿತ್ರಾಬಾಯಿ ಬಿ.ಎನ್. (1999)	ಸ್ತ್ರೀವಾದ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
61.	------"----- (2009)	ಸರಹದ್ದುಗಳ ಆಚೆ-ಈಚೆ ಇಳಾ ಪ್ರಕಾಶನ, ಬೆಂಗಳೂರು.
62.	ಹಾಲತಿ ಸೋಮಶೇಖರ್ (2007)	ಮಹಿಳಾ ಚಳುವಳಿ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ ವಿಸ್ಮಯ ಪ್ರಕಾಶನ, ಮೈಸೂರು.
63.	ಹೇಮಲತಾ ಎಚ್.ಎಂ. (2003)	ಮಹಿಳಾ ಸಶಕ್ತೀಕರಣ ಅಭಿರುಚಿ ಪ್ರಕಾಶನ, ಮೈಸೂರು.
64.	------"----- (2007)	ಮಹಿಳಾ ಅಧ್ಯಯನ ಡಿ.ವಿ.ಕೆ. ಮೂರ್ತಿ ಪ್ರಕಾಶಕರು, ಮೈಸೂರು.